ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಕಟಣೆ - ೩೭

ಸಾಹಿತ್ಯಮಾಲೆ - ೩೬

ಪ್ರಧಾನ ಸಂಪಾದಕರು

ಡಾ. ಪ್ರಧಾನ್ ಗುರುದತ್ತ

# ಎರಡು ಧ್ರುವ

# ಎರಡು ಧ್ರುವ

ಮರಾಠಿ ಮೂಲ

**ವಿಷ್ಣು ಸಖಾರಾಮ ಖಾಂಡೇಕರ**

ಕನ್ನಡ ಅನುವಾದ

**ವಿ. ಎಂ. ಇನಾಂದಾರ್,** ಎಂ.ಎ.

**ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು

**ERAḌU DHRUVA :** Kannada Translation of V.S. Khandekar's `Don Dhruv' by **V.M. Inamdar** ; Editor-in-Chief : **Dr. Pradhan Gurudatta**; Published by **Registrar, Karnataka Anuvada Sahitya Academy**; Kannada Bhavana, J.C. Road, Bangalore - 560 002, 2007; Pp. xv+259, Price : Rs. 80/-

ಈ ಆವೃತ್ತಿಯ ಹಕ್ಕುಗಳು : ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಮೊದಲನೆಯ ಆವೃತ್ತಿ : ೧೯೩೭ ; ಆನಂದ್ ಬ್ರದರ್ಸ್, ಬೆಂಗಳೂರು
ಎರಡನೆಯ ಆವೃತ್ತಿ : ೧೯೪೯ ; ಶ್ರೀ ಡಿ.ವಿ.ಕೆ. ಮೂರ್ತಿ, ಮೈಸೂರು
ಮೂರನೆಯ ಆವೃತ್ತಿ : ೧೯೬೩ ; ಶಾರದಾ ಪ್ರಕಟನಾಲಯ, ಬೆಂಗಳೂರು

ಮುದ್ರಣ : ೨೦೦೭
ಪುಟಗಳು : xv + ೨೫೯
ಬೆಲೆ : ರೂ. ೮೦/-
ಪ್ರತಿಗಳು : ೩.೨೦೦

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು
ದೂ : ೨೨೧೦೭೭೮೦

ಸಹಕಾರ :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಬೆಂಗಳೂರು

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀಪಾದ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪



**ಹೆಚ್.ಡಿ. ಕುಮಾರಸ್ವಾಮಿ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ದಿನಾಂಕ : ೧೫.೦೩.೨೦೦೭

## ಮುನ್ನುಡಿ

ಕರ್ನಾಟಕ ರಾಜ್ಯ ಪುನರ್ ಘಟನೆಯ ಐವತ್ತು ವರ್ಷಗಳ ನೆನಪಿಗಾಗಿ ಕರ್ನಾಟಕ ಸರ್ಕಾರ 'ಸುವರ್ಣ ಕರ್ನಾಟಕ'ದ ಸಂಭ್ರಮಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿತು. ಈ ಹೊತ್ತಿಗೆ ಸರಿಯಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯ ಮೂಲಕ ಕರ್ನಾಟಕ ಸರ್ಕಾರ ಇನ್ನೊಂದು ಹೊಸ ಹೆಜ್ಜೆಯನ್ನೂ ಇಟ್ಟಿತ್ತು. ಭಾರತೀಯ ಭಾಷೆಗಳ ನಡುವಣ ಪಾರಸ್ಪರಿಕ ಅರಿವನ್ನು ಹೆಚ್ಚಿಸುವುದರ ಜೊತೆಗೆ, ನಮ್ಮ ನಾಡು–ನುಡಿಗಳ ಹಿರಿಮೆಯನ್ನು ಇತರ ಭಾಷಾ–ಬಾಂಧವರಿಗೆ ಹಾಗೂ ಜಾಗತಿಕ ನೆಲೆಯಲ್ಲಿ ಪರಿಚಯಿಸಿ ಕೊಡುವುದು ಮತ್ತು ಜಗತ್ತಿನ ಇತರ ಭಾಷೆಗಳ ಶ್ರೇಷ್ಠ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುವುದು ಇದರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಅನುವಾದ ಸಾಹಿತ್ಯ ಈ ಹೊತ್ತು ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲದಿರುವುದರಿಂದ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ಕ್ಷೇತ್ರಗಳನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದೂ ಇದರಲ್ಲಿ ಸೇರಿದೆ. ಇದರಿಂದ ಐತಿಹಾಸಿಕ ಹಿರಿಮೆಯ ಜೊತೆಗೆ, ಕನ್ನಡದ ಸಾಮರ್ಥ್ಯ, ವೈಶಿಷ್ಟ್ಯ, ಹಿರಿಮೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಕಂಗೊಳಿಸುವಂತಾಗುತ್ತದೆ.

'ಸುವರ್ಣ ಕರ್ನಾಟಕ' ಸಂಭ್ರಮದ ಸಂದರ್ಭದಲ್ಲಿ, ಈ ಹಿಂದೆ ನಾಡು ನುಡಿಗೆ ಸೇವೆಯನ್ನು ಸಲ್ಲಿಸಿರುವ ಹಿರಿಯ ಚೇತನಗಳು ಸ್ವಪ್ರೇರಣೆಯಿಂದ ಕನ್ನಡಕ್ಕೆ ತಂದುಕೊಟ್ಟಿರುವ ಶ್ರೇಷ್ಠ ಕೃತಿಗಳಲ್ಲಿ ಆಯ್ದ ಗ್ರಂಥಗಳನ್ನು 'ಸುವರ್ಣ ಅನುವಾದ ಮಾಲೆಯ' ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹಾಗೂ ವಿಶ್ವದಲ್ಲಿನ ಶ್ರೇಷ್ಠ ಕೃತಿಗಳನ್ನೂ ಪರಿಚಯಿಸಿ ಕೊಡಲಾಗುತ್ತಿದೆ. ಇವು ಕನ್ನಡಿಗರಿಗೆ ಪ್ರಿಯವಾಗುತ್ತವೆಂದು ನಂಬಿದ್ದೇನೆ. ಈ ಕೃತಿಗಳನ್ನು ಸಹೃದಯತೆಯಿಂದ ಸ್ವಾಗತಿಸುವ ಮೂಲಕ, ಅನುವಾದ ಸಾಹಿತ್ಯ ಅಕಾಡೆಮಿಯ ಇಂಥ ಕೆಲಸಗಳಿಗೆ ಕನ್ನಡ ನಾಡಿನ ಜನತೆ ಪ್ರೋತ್ಸಾಹ ನೀಡುತ್ತದೆ ಎಂದು ಭಾವಿಸಿದ್ದೇನೆ.

**(ಹೆಚ್.ಡಿ. ಕುಮಾರಸ್ವಾಮಿ)**

ಕರ್ನಾಟಕ ಸರ್ಕಾರ

**ಹೆಚ್.ಎಸ್. ಮಹದೇವ ಪ್ರಸಾದ್**
ಕನ್ನಡ ಮತ್ತು ಸಂಸ್ಕೃತಿ ಸಚಿವರು

ನಂ. ೩೩೦, ೩ನೇ ಮಹಡಿ,
ವಿಧಾನಸೌಧ,
ಬೆಂಗಳೂರು – ೫೬೦ ೦೦೧

ದಿನಾಂಕ : ೦೮–೦೨–೨೦೦೭

## ಶುಭಾಕಾಂಕ್ಷೆ

ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದಿರುವ ಅನುವಾದ ಸಾಹಿತ್ಯ ಅಕಾಡೆಮಿ, ರಾಷ್ಟ್ರದಲ್ಲಿಯೇ ಇಂಥ ಆದ್ಯ ಸಂಸ್ಥೆಯಾಗಿದ್ದು ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡು, ಕನ್ನಡ ಸಾಹಿತ್ಯ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಕ್ಕೆ ಅರ್ಥಪೂರ್ಣವಾದ ಕೊಡುಗೆಗಳನ್ನು ನೀಡುವ ಹಂಬಲವನ್ನು ಹೊಂದಿದೆ. ಇದರ ಸ್ಥಾಪನೆಯ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಸುವರ್ಣ ಸಂಭ್ರಮದ ಉತ್ಸವವೂ ಕೂಡಿಬಂದಿರುವ ಕಾರಣದಿಂದಾಗಿ, ಅನುವಾದ ಸಾಹಿತ್ಯ ಅಕಾಡೆಮಿ ಗಾಂಧೀಜಿ, ನೆಹರೂ ಇಂಥ ಶ್ರೇಷ್ಠ ವ್ಯಕ್ತಿಗಳನ್ನು ಕುರಿತ ಮಹತ್ವದ ಕೃತಿಗಳನ್ನೇ ಅಲ್ಲದೆ, ವಿವಿಧ ಭಾಷೆಗಳಲ್ಲಿನ ಅತ್ಯುತ್ತಮ ಸಾಹಿತ್ಯ ಗ್ರಂಥಗಳನ್ನು ಮತ್ತು ಇತರ ಕೃತಿಗಳನ್ನು ಕನ್ನಡಿಗರಿಗೆ ಒದಗಿಸುವ ಕಾರ್ಯವನ್ನು ಹಮ್ಮಿಕೊಂಡಿರುವುದು ನನಗೆ ತುಂಬಾ ಸಂತೋಷವನ್ನು ಉಂಟುಮಾಡಿದೆ. ಇದರಲ್ಲಿ ದೇಶ–ವಿದೇಶಗಳ ಕಥೆ–ಕಾದಂಬರಿಗಳೂ, ನಾಟಕಗಳೂ, ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳ ಕೃತಿಗಳೂ ಸೇರಿದ್ದು, ಕನ್ನಡಿಗರಿಗೆ ವೈವಿಧ್ಯಮಯ ಅನುಭವವನ್ನು ತಂದುಕೊಡುವಲ್ಲಿ ನೆರವಾಗುತ್ತವೆ ಎಂದು ನಂಬಿದ್ದೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ನನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿದೆ. ಇದೇ ರೀತಿ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಹಾಗೂ ವಿದೇಶೀ ಭಾಷೆಗಳಿಗೆ ಅನುವಾದಿಸಿ ಕೊಡುವ ಕಾರ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ನಡೆದು ಕನ್ನಡಿಗರ ಸಾಧನೆ ಜಗತ್ತಿಗೆ ಚೆನ್ನಾಗಿ ತಿಳಿದು ಬರುವಂಥ ಸಾರ್ಥಕ ಪ್ರಯತ್ನಗಳು ನಡೆಯಲಿ ಎಂದು ಹಾರೈಸುತ್ತೇನೆ.

ಈಗ ಹೊರಬರುತ್ತಿರುವ ಕೃತಿಗಳಿಗೆ ಕನ್ನಡ ವಾಚಕಲೋಕದ ಸಹೃದಯಪೂರ್ಣ ಸ್ವಾಗತ ದೊರೆಯುತ್ತದೆಂದು ನಂಬಿದ್ದೇನೆ. ಇಂಥ ಸ್ವಾಗತ ಮತ್ತು ಪ್ರೋತ್ಸಾಹಗಳು ಅಕಾಡೆಮಿಯ ಮುಂದಿನ ಕಾರ್ಯಚಟುವಟಿಕೆಗಳಿಗೆ ಪ್ರೇರಣೆಯನ್ನೊದಗಿಸಲಿ ಎಂದು ಹಾರೈಸುತ್ತೇನೆ.

**(ಹೆಚ್.ಎಸ್. ಮಹದೇವ ಪ್ರಸಾದ್)**



ಕರ್ನಾಟಕ ಸರ್ಕಾರ

ಕಛೇರಿ : ೨೨೨೫೪೮೨
೨೨೦೩೪೦೦೭

**ಐ.ಎಂ. ವಿಠ್ಠಲಮೂರ್ತಿ**, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ
ಹಾಗೂ ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊ.ನಂ.೫, ನೆಲಮಹಡಿ, ವಿಕಾಸಸೌಧ,
ಬೆಂಗಳೂರು–೫೬೦ ೦೦೧

## ಹೊಸ ಹೆಜ್ಜೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿಸಲಾಗುತ್ತಿರುವ 'ಶ್ರೀ ಕುವೆಂಪು ಭಾಷಾಭಾರತೀ' ಎಂಬ ರಾಷ್ಟ್ರೀಯ ಸಂಸ್ಥೆಯ ಒಂದು ಸ್ವತಂತ್ರ ವಿಭಾಗವಾಗಿ ಕರ್ನಾಟಕ ಸರ್ಕಾರ 'ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ'ಯನ್ನು ಈಗಾಗಲೇ (೨೦೦೬ರಲ್ಲಿ) ಅಸ್ತಿತ್ವಕ್ಕೆ ತಂದಿದೆ. ಇಂಥ ಉಪಕ್ರಮವನ್ನು ಮೆರೆಯುವಲ್ಲಿ ಕರ್ನಾಟಕವೇ ಮೊದಲನೆಯ ರಾಜ್ಯವಾಗಿದೆ ಎಂಬುದು ಹೆಮ್ಮೆಯ ಸಂಗತಿಯೇ ಆಗಿದೆ. ಈ ಅನುವಾದ ಅಕಾಡೆಮಿ, ಪ್ರಾರಂಭಗೊಂಡ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಪುನರ್–ರಚನೆಯ ಸುವರ್ಣ ಮಹೋತ್ಸವದ ಸಂದರ್ಭ ಕೂಡಿ ಬಂದದ್ದು ಒಂದು ವಿಶಿಷ್ಟ ಯೋಗಾಯೋಗವೇ ಆಗಿದೆ. ಈ ಸುವರ್ಣ ಮಹೋತ್ಸವದ ಸಂದರ್ಭದ ಆಚರಣೆಯ ಅಂಗವಾಗಿ ಅನುವಾದ ಅಕಾಡೆಮಿ ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡಿದೆ. ಈ ಮೊದಲೇ ವಿಭಿನ್ನ ಭಾಷೆಗಳಲ್ಲಿನ ಹಲವು ಶ್ರೇಷ್ಠ ಲೇಖಕರ ಹಲವಾರು ಶ್ರೇಷ್ಠ ಕೃತಿಗಳು ನಮ್ಮ ಸಾಹಿತಿಗಳ ಗಮನವನ್ನು ಸೆಳೆದಿದ್ದು, ಅವುಗಳ ಯಥಾವತ್ತಾದ, ಸಂಗ್ರಹರೂಪವಾದ, ಅಳವಡಿಕೆಯಂತಿರುವ ಅನುವಾದಗಳನ್ನು ಅವರು ನಮಗೆ ಕೊಡಮಾಡಿದ್ದಾರೆ. 'ಒಬ್ಬನೇ ಉಂಡ ಊಟ ಹಬ್ಬವಲ್ಲ; ಒಬ್ಬನೇ ಸವಿದ ರುಚಿ ರುಚಿಯಲ್ಲ' ಎಂಬ ಗಾದೆ ಮಾತನ್ನು ಸಾರ್ಥಕಗೊಳಿಸುವಂತೆ, ಅವರು ಈ ಕೆಲಸವನ್ನು ಮಾಡಿದ್ದಾರೆ. ಇಂಥ ಪ್ರಸಿದ್ಧ, ಜನಪ್ರಿಯ, ಅಲಭ್ಯ ಕೃತಿಗಳನ್ನು 'ಸುವರ್ಣ ಕರ್ನಾಟಕ' ಯೋಜನೆಯ ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹೊಸ ಶ್ರೇಷ್ಠ ಗ್ರಂಥಗಳನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಹೀಗೆ, ದೇಶ–ವಿದೇಶಗಳ ಉತ್ಕೃಷ್ಟ ಕೃತಿಗಳಿಂದ ಕನ್ನಡ ಭಾಷೆ–ಸಾಹಿತ್ಯಗಳನ್ನು ಸಮೃದ್ಧಗೊಳಿಸುವ ದಿಕ್ಕಿನಲ್ಲಿ ಅನುವಾದ ಅಕಾಡೆಮಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಬೇಕಾಗಿದೆ.

ಅನುವಾದ ಇಂದು ತನ್ನ ಆಯಾಮವನ್ನು ಬಹುವಾಗಿ ವಿಸ್ತರಿಸಿಕೊಂಡು ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ಒಳಪಡಿಸಿಕೊಂಡಿದೆ. ಹೀಗಾಗಿ, ಈ ದಿಕ್ಕಿನಲ್ಲಿಯೂ ಕನ್ನಡವನ್ನು ಸಮೃದ್ಧಗೊಳಿಸುವತ್ತ ನಮ್ಮ ಗಮನ ಹರಿಯಬೇಕಾಗಿದೆ. ಅಕಾಡೆಮಿ ಈ ದಿಕ್ಕಿನಲ್ಲಿಯೂ ಕಾರ್ಯೋನ್ಮುಖವಾಗಿರುವುದು ಸಂತೋಷದ ವಿಚಾರವೇ ಆಗಿದೆ. ಈ ಬಗೆಯ ಬಹುಮುಖೀ

ಕಾರ್ಯಚಟುವಟಿಕೆಗಳಿಂದ ಭಾರತೀಯ ಭಾಷೆಗಳಲ್ಲಿ ಈಗಾಗಲೇ ತನ್ನದೇ ಆದ ಹಿರಿಮೆಯನ್ನು ಮೆರೆದಿರುವ, ಮೆರೆಯುತ್ತಿರುವ  ಕನ್ನಡ ಭಾಷೆ–ಸಾಹಿತ್ಯ ಮತ್ತಷ್ಟು ಕಂಗೊಳಿಸುವಂತಾಗುತ್ತದೆ. ಅನೇಕ ಮಹತ್ವದ ಗ್ರಂಥಗಳು ದೊರೆಯುವಂತಾಗುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷವನ್ನು ಉಂಟುಮಾಡುತ್ತಿದೆ. ಇಂಥ ಕಾರ್ಯಗಳಿಗೆ ಸರ್ಕಾರದ ಬೆಂಬಲದ ಜೊತೆಗೆ, ಜನತೆಯ ಹೃತ್ಪೂರ್ವಕ ಪ್ರೋತ್ಸಾಹವೂ ಅಗತ್ಯವಾಗುತ್ತದೆ. ವಿವೇಚನಾಶೀಲರೂ, ಸಹೃದಯರೂ ಆದ ಕನ್ನಡಿಗರು ಇಂಥ ಪ್ರೋತ್ಸಾಹ ನೀಡುವಲ್ಲಿ ಮುಂದಾಗುತ್ತಾರೆ ಎಂದು ನಂಬಿದ್ದೇನೆ. ಅಕಾಡೆಮಿಯ ಕಾರ್ಯಚಟುವಟಿಕೆಗಳು ಇತೋಪ್ಯತಿಶಯವಾಗಿ ಮುಂದುವರಿಯಲಿ ; ಕರ್ನಾಟಕದ ಜನತೆಗೆ ಹೊಸ ಅನುಭವಗಳ ಲೋಕವನ್ನು ತೆರೆದು ತೋರುವ ಕಾರ್ಯಗಳು ಅವಿಚ್ಛಿನ್ನವಾಗಿ ನಡೆಯಲಿ ಎಂದು ಈ ಸಂದರ್ಭದಲ್ಲಿ ಹಾರೈಸಬಯಸುತ್ತೇನೆ.

**(ಐ.ಎಂ. ವಿಠ್ಠಲಮೂರ್ತಿ)**



## ಪ್ರಸ್ತಾವನೆ

ಭಾರತದಲ್ಲಿ ಯಾವುದೇ ರಾಜ್ಯವೊಂದರಲ್ಲಿ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಮೊಟ್ಟಮೊದಲ ಬಾರಿಗೆ ಸ್ಥಾಪಿಸಿದ ಹಿರಿಮೆ ಕರ್ನಾಟಕ ಸರ್ಕಾರದ್ದಾಗಿದೆ. ಜನವರಿ ೬, ೨೦೦೬ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರು ವಿಧ್ಯುಕ್ತವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ ಹಾಗೂ ಭಾಷಾಂತರವನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಶಿಕ್ಷಣ ವಿಷಯವಾಗಿ ಅಳವಡಿಸಿದ ಭಾಷಾಂತರ ಕ್ಷೇತ್ರದ ಭೀಷ್ಮಾಚಾರ್ಯರೂ ಆದ ಪ್ರೊ॥ ದೇ. ಜವರೇಗೌಡ ಅವರೂ, ಹಿರಿಯ ವಿದ್ವಾಂಸರಾದ ಪ್ರೊ॥ ಎಲ್.ಎಸ್. ಶೇಷಗಿರಿ ರಾವ್ ಅವರೂ ಅಕಾಡೆಮಿಯ ಕಾರ್ಯಚಟುವಟಿಕೆಗಳ ದಿಕ್ಕು–ದೆಸೆಗಳನ್ನು ನಿರ್ದೇಶಿಸಿದರು.

ನಮ್ಮ ನಾಡಿನಲ್ಲಿರುವ ವಿಚಿತ್ರ ಪರಿಸ್ಥಿತಿ ಎಂದರೆ ವಿದೇಶೀಯ ಭಾಷಾಸಾಹಿತ್ಯಗಳ ಅಷ್ಟಿಷ್ಟು ಪರಿಚಯವಾದರೂ ಇರುವ ನಮಗೆ ನಮ್ಮ ನಾಡಿನ ನೆರೆಹೊರೆಯ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯದ, ಶ್ರೇಷ್ಠ ಸಾಹಿತಿಗಳ ಪರಿಚಯ ಬಹುಮಂದಿಗೆ ಇಲ್ಲವೇ ಇಲ್ಲದಂತಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಇತರ ಕೆಲವು ರಾಷ್ಟ್ರೀಯ ಸಂಸ್ಥೆಗಳು ತಮ್ಮ ಕಾರ್ಯಚಟುವಟಿಕೆಗಳಲ್ಲಿ ಅನುವಾದಗಳನ್ನು ಹೊರತರುವ ಕೆಲವು ಯೋಜನೆಗಳನ್ನು ಕೈಗೊಳ್ಳುತ್ತಿರುವುದುಂಟು. ಆದರೆ, ಈ ಕಾರ್ಯಗಳು ಅಪೇಕ್ಷಣೀಯ ಪ್ರಮಾಣದಲ್ಲಿ ಹಾಗೂ ಪರಸ್ಪರ ಪೂರಕವಾಗುವ ರೀತಿಯಲ್ಲಿ ಆಗುತ್ತಿಲ್ಲ. ಮೇಲಾಗಿ ಈ ಕಾರ್ಯಕ್ರಮಗಳು ಬಹುಮಟ್ಟಿಗೆ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರವೇ ಸೀಮಿತವಾಗಿವೆ. ಹೀಗಾಗಿ, ಪರಸ್ಪರ ಕೊಳು–ಕೊಡೆಯ ಕಾರ್ಯಕ್ರಮಗಳು ಹೆಚ್ಚು–ಹೆಚ್ಚಾಗಿ ಹಾಗೂ ವೈವಿಧ್ಯಮಯವಾಗಿ ಆಗಬೇಕಾದ ಅಗತ್ಯವೂ ಇದೆ.

ಭಾರತೀಯ ಭಾಷಾಸಾಹಿತ್ಯಗಳು ಸಮೃದ್ಧವಾಗಿ ಬೆಳೆಯಬೇಕಾದರೆ, ಎರಡು ಮುಖಗಳಲ್ಲಿ ಕಾರ್ಯಗಳು ಆಗಬೇಕಾಗಿದೆ: (೧) ರಾಷ್ಟ್ರೀಯ ಮಟ್ಟದಲ್ಲಿ; (೨) ಅಂತಾರಾಷ್ಟ್ರೀಯ ಮಟ್ಟದಲ್ಲಿ. ರಾಷ್ಟ್ರೀಯ ಸ್ತರದಲ್ಲಿ ನಮ್ಮ ಭಾಷಾ ಸಾಹಿತ್ಯವನ್ನು ಬಿಂಬಿಸುವ ಕೆಲಸ ಎಷ್ಟು ಮುಖ್ಯವೋ, ಇತರ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಅಷ್ಟೇ ಮುಖ್ಯ.  ರಾಷ್ಟ್ರೀಯ ಅಂತಾರಾಷ್ಟ್ರೀಯ ಮಹತ್ವದ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಹಾಗೂ ಕನ್ನಡ ಸಾಹಿತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಿಂಬಿಸುವುದೂ ಅಷ್ಟೇ ಮುಖ್ಯ. ಈ ದೃಷ್ಟಿಯಿಂದ ನೊಬೆಲ್ ಪ್ರಶಸ್ತಿ, ಬೂಕರ್ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮೊದಲಾದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿರುವ ಲೇಖಕರ ಮಹತ್ವದ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುವ ಯೋಜನೆಗಳನ್ನು ಅನುವಾದ ಸಾಹಿತ್ಯ ಅಕಾಡೆಮಿ

ತಮ್ಮ ಮುಂದಿರಿಸಿಕೊಂಡಿದೆ. ಅಷ್ಟೇ ಅಲ್ಲದೆ, ವಿಜ್ಞಾನ–ತಂತ್ರಜ್ಞಾನ, ವೈದ್ಯಕೀಯ, ಮಾನವಿಕ ಮೊದಲಾದ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡದಲ್ಲಿ ತರುವ ಯೋಜನೆಗಳೂ ಅಕಾಡೆಮಿಯ ಮುಂದಿವೆ. ಇತರ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ, ಅಂತೆಯೇ, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಭಾಗ, ಕೇಂದ್ರೀಯ ಹಿಂದೀ ನಿರ್ದೇಶನಾಲಯ, ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಪದಾವಲಿ ಆಯೋಗ ಇತ್ಯಾದಿ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ಈ ದಿಕ್ಕಿನಲ್ಲಿ ಸಹಕಾರವನ್ನು ಪಡೆದುಕೊಳ್ಳುವ ಆಲೋಚನೆಯನ್ನೂ ಅಕಾಡೆಮಿ ಇರಿಸಿಕೊಂಡಿದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಕಾರ್ಯಶಿಬಿರಗಳನ್ನು ಆಯೋಜಿಸಿ, ಅನುವಾದದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ, ಸಮರ್ಥ ಭಾಷಾಂತರಕಾರರನ್ನು ಗುರುತಿಸುವ ಪ್ರಯತ್ನಗಳನ್ನು ಅಕಾಡೆಮಿ ಮಾಡುತ್ತಿದೆ. ಈಗಾಗಲೇ ಕನ್ನಡ–ತೆಲುಗು, ಕನ್ನಡ–ಹಿಂದೀ, ಯಂತ್ರಾನುವಾದ, ವಿಜ್ಞಾನ ಸಾಹಿತ್ಯ ಅನುವಾದ ಇವುಗಳಿಗೆ ಸಂಬಂಧಿಸಿದಂತೆ ರಾಜ್ಯದ ಬೇರೆ–ಬೇರೆ ಕೇಂದ್ರಗಳಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ಕಾರ್ಯಶಿಬಿರಗಳನ್ನೂ, ವಿಚಾರಗೋಷ್ಠಿಗಳನ್ನೂ ನಡೆಸಲಾಗಿದೆ. ಉರ್ದೂ ಮತ್ತು ತಮಿಳು ಭಾಷೆಗಳ ಕಾರ್ಯಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಭಾಷಾಂತರ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನಕ್ಕೆ ತೆಗೆದುಕೊಂಡು ಆ ದಿಕ್ಕಿನಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಆಲೋಚನೆಯೂ ಇದೆ. ಇತ್ತೀಚೆಗೆ ಸ್ಯಾಮ್ ಪಿಟ್ರೋಡಾ ಅವರು 'ರಾಷ್ಟ್ರೀಯ ಅನುವಾದ ಮಿಷನ್' (National Translation Mission) ಅನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯೋಜನೆಯೊಂದನ್ನು ಸಲ್ಲಿಸಿದ್ದು, ಕೇಂದ್ರ ಸರ್ಕಾರ ಆ ಯೋಜನೆಯನ್ನು ಒಪ್ಪಿಕೊಂಡಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದಲ್ಲಿ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳು ಜನಸಾಮಾನ್ಯರವರೆಗೂ ಯಶಸ್ವಿಯಾಗಿ ಮುಟ್ಟುವುದು ಸಾಧ್ಯವಾಗುತ್ತದೆ ಹಾಗೂ ರಾಷ್ಟ್ರದ ಪ್ರಗತಿಯೂ ಅಭೂತಪೂರ್ವ ರೀತಿಯಲ್ಲಿ ಆಗುತ್ತದೆ ಎಂದು ಆಶಿಸಲಾಗಿದೆ. ಈ ಯೋಜನೆ ಉದ್ಯೋಗಸೃಷ್ಟಿಯ ಮಹತ್ತರ ಯೋಜನೆಯೂ ಆಗಲಿದೆ. ಇಂಥ ಸಂದರ್ಭದಲ್ಲಿ ಅಗತ್ಯವಾಗುವ ಲಕ್ಷಾಂತರ ಮಂದಿ ಅನುವಾದಕರ ಪಡೆಯನ್ನು ಸಿದ್ಧಪಡಿಸುವುದು ಇಂಥ ಸಂಸ್ಥೆಗಳ ಮತ್ತು ವಿಶ್ವವಿದ್ಯಾನಿಲಯಗಳ ಹೊಣೆಯೇ ಆಗಿರುತ್ತದೆ. ರಾಜ್ಯದ ಹಾಗೂ ಹೊರಗಿನ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಭಾಷಾಂತರ ವಿಭಾಗಗಳು ಸ್ಥಾಪಿತವಾಗಿದ್ದು, ಅವು ಕಾರ್ಯಶೀಲವಾಗುತ್ತಿರುವುದು ಶುಭಸೂಚಕವಾಗಿದೆ.

ಇದುವರೆಗೆ ವಿದ್ವಾಂಸರ ವೈಯಕ್ತಿಕ ಪಾಂಡಿತ್ಯ, ವ್ಯುತ್ಪತ್ತಿ ಮತ್ತು ಒಲವನ್ನು ಆಧರಿಸಿ ಅನುವಾದ ಕಾರ್ಯಗಳು ನಡೆಯುತ್ತಾ ಬಂದಿವೆ. ಆದರೆ ಇಂಥ ಕಾರ್ಯಗಳು ವ್ಯವಸ್ಥಿತವಾಗಿ ಹಾಗೂ ಉತ್ತಮ ಗುಣಮಟ್ಟದೊಂದಿಗೆ ನಡೆಯಬೇಕಾದ್ದು ಅಪೇಕ್ಷಣೀಯವಾಗಿರುವ ಹಿನ್ನೆಲೆಯಲ್ಲಿ, ಭಾಷಾಂತರ ಸಂಬಂಧವಾದ ಶಿಕ್ಷಣ–ಕ್ರಮಗಳನ್ನು ರೂಪಿಸುವುದು ಹಾಗೂ ದ್ವಿಭಾಷಾ ಮತ್ತು ಬಹುಭಾಷಾ ನಿಘಂಟುಗಳನ್ನು, ನುಡಿಗಟ್ಟುಗಳ ಮತ್ತು ಗಾದೆಗಳ ಕೋಶಗಳು, ಸಮಾನಾರ್ಥಕ ಮತ್ತು



ಭಿನ್ನಾರ್ಥಕ ಕೋಶಗಳು ಹಾಗೂ ವಾಕ್ಯರಚನಾ ಕೈಪಿಡಿಗಳನ್ನು ಹೊರತರುವುದು – ಇವೇ ಮೊದಲಾದ ಕಾರ್ಯಗಳು ಆದ್ಯತೆಯ ಮೇರೆಗೆ ನಡೆಯಬೇಕಾಗಿವೆ. ಅನುವಾದ ಅಕಾಡೆಮಿ ಸ್ಥಾಪಿತವಾದ ಅತ್ಯಲ್ಪ ಅವಧಿಯಲ್ಲಿಯೇ ಇತರ ಸಂಘ–ಸಂಸ್ಥೆಗಳ ಗಮನವನ್ನು ಸೆಳೆದಿದ್ದು, ಅಂತರರಾಷ್ಟ್ರೀಯ ಕನಕದಾಸ ಮಿಷನ್‌ನಂತಹ ಸಂಸ್ಥೆ ಅನುವಾದ ಅಕಾಡೆಮಿಯೊಂದಿಗೆ ಸಹಕರಿಸಲು ಮುಂದೆ ಬಂದಿರುವುದು ಗಮನಾರ್ಹವಾದ ವಿಚಾರವೇ ಆಗಿದೆ. ಅಂತೆಯೇ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕನ್ನಡದಲ್ಲಿ ಹೊರತರುವ ಬಗ್ಗೆಯೂ ಆಲೋಚನೆ ಮಾಡಲಾಗುತ್ತಿದೆ. ಹೀಗೆ ಅನುವಾದ ಅಕಾಡೆಮಿ ಅನೇಕ ದಿಕ್ಕುಗಳಲ್ಲಿ ಮುಂದುವರಿದು ಸಾಧನೆ ಮಾಡಬೇಕಾಗಿದೆ.

ಕರ್ನಾಟಕ ಸರ್ಕಾರ ಅನುವಾದ ಅಕಾಡೆಮಿಯ ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿ ಅಗತ್ಯವಾದ ನೆರವನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ವಿಶೇಷ ಸಂತೋಷದ ವಿಚಾರವೇ ಆಗಿದೆ. ಅದರಲ್ಲಿಯೂ ಈ ಬಾರಿ ಸುವರ್ಣ ಕರ್ನಾಟಕ ಕಾರ್ಯಕ್ರಮಗಳ ಅಂಗವಾಗಿ ವಿಶೇಷ ಧನಸಹಾಯ ನೀಡಿರುವುದರಿಂದ ಪ್ರಸಿದ್ಧ/ಅಲಭ್ಯ ಅನುವಾದಗಳ ಮರುಪ್ರಕಟಣೆ ಕಾರ್ಯವನ್ನು ಕೈಗೊಳ್ಳುವುದು, ಮತ್ತಿತರ ಮಹತ್ವದ ಪ್ರಕಟಣೆಗಳನ್ನು ಕೈಗೊಳ್ಳುವುದು ಸಾಧ್ಯವಾಗಿದೆ. ಈ ದಿಕ್ಕಿನಲ್ಲಿ ನಾಡಿನ ವಿದ್ವಾಂಸರು ವಿಶೇಷವಾದ ಸಹಾಯ–ಸಹಕಾರಗಳನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ಗೌರವದ, ಸಂತೋಷದ ಹಾಗೂ ಹೆಮ್ಮೆಯ ವಿಚಾರವೇ ಆಗಿದೆ. ಈ ಸಂದರ್ಭದಲ್ಲಿ ವಿಲ್ ಡ್ಯೂರಾಂಟ್ ಅವರ ಜಗತ್–ಪ್ರಸಿದ್ಧವಾಗಿರುವ ಹಾಗೂ ಭಾರತದ ಬೇರಾವ ಭಾಷೆಯಲ್ಲೂ ಇನ್ನೂ ಬೆಳಕು ಕಾಣದಿರುವ 'ದಿ ಸ್ಟೋರಿ ಆಫ್ ಸಿವಿಲಿಜೇಷನ್' ಸಂಪುಟಗಳ ಕನ್ನಡ ಅನುವಾದವನ್ನು ಹೊರತರುವಲ್ಲಿ ಪ್ರೊ॥ ಎಲ್.ಎಸ್. ಶೇಷಗಿರಿ ರಾವ್ ಅವರೂ, ಬಹಳ ಹಿಂದೆಯೇ ಇಂಗ್ಲಿಷ್‌ನಲ್ಲಿ ೧೦ ಸಂಪುಟಗಳಲ್ಲಿ ಪ್ರಕಟಣೆಗೊಂಡಿರುವ ಸಂಸ್ಕೃತ ಸಾಹಿತ್ಯದ ವಿಶಿಷ್ಟ ಕೃತಿಯಾದ ಸೋಮದೇವನ 'ಕಥಾಸರಿತ್ಸಾಗರ'ದ ಕನ್ನಡ ಅನುವಾದವನ್ನು ನೇರವಾಗಿ ಸಂಸ್ಕೃತದಿಂದ ಅನುವಾದಿಸಿ ಹೊರತರುವಲ್ಲಿ ಡಾ॥ ಪಿ.ಎಸ್. ರಾಮಾನುಜಮ್ ಅವರೂ ನೆರವು ನೀಡುತ್ತಿರುವುದು ವಿಶೇಷವಾಗಿ ಸ್ಮರಣೀಯವಾಗಿದೆ. ಕನ್ನಡ ಸಹೃದಯ ಲೋಕ ಅಕಾಡೆಮಿಯ ಈ ಕಾರ್ಯಚಟುವಟಿಕೆಗಳ ವಿಷಯದಲ್ಲಿ ತನ್ನ ಸಹೃದಯತೆಯನ್ನು ಮೆರೆಯುತ್ತದೆ ಎಂದು ಆಶಿಸಿದ್ದೇನೆ.

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಗೆ ಕಾರಣರಾದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರಿಗೂ, ಅಕಾಡೆಮಿಯ ಕಾರ್ಯಚಟುವಟಿಕೆಗಳ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿ, ಎಲ್ಲ ನೆರವನ್ನು ನೀಡುತ್ತಿರುವ ಇಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರಿಗೂ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಮಹದೇವ ಪ್ರಸಾದ್ ಅವರಿಗೂ ಅಕಾಡೆಮಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಬಗೆಯ ಸಹಾಯ–ಸಹಕಾರ–ಮಾರ್ಗದರ್ಶನ ನೀಡುತ್ತಾ ಬಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಉಷಾ ಗಣೇಶ್ ಅವರಿಗೂ, ಚೈತನ್ಯಶೀಲರೂ, ದೂರಗಾಮಿ ದೃಷ್ಟಿಯನ್ನುಳ್ಳವರೂ ಆದ ಇಂದಿನ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿಂದಿನ ಆಯುಕ್ತರುಗಳಾಗಿದ್ದ ಶ್ರೀ ಕೆ.ಆರ್. ನಿರಂಜನ್ ಮತ್ತು ಶ್ರೀ ಎಸ್.ಎಫ್. ಯೋಗಪ್ಪನವರ್ ಅವರಿಗೂ, ನಿರ್ದೇಶಕರಾಗಿರುವ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೂ ಅಕಾಡೆಮಿ ವಿಶೇಷ ವಂದನೆಗಳನ್ನು ಸೂಚಿಸಬಯಸುತ್ತದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಸಹಾಯ ಸಹಕಾರ ಮತ್ತು ಮಾರ್ಗದರ್ಶನ ಮಾಡುತ್ತಿರುವ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ವಿ.ಎಸ್. ಖಾಂಡೇಕರ (ವಿಷ್ಣು ಸಖಾರಾಮ ಖಾಂಡೇಕರ) ಅವರ 'ಎರಡು ಧ್ರುವ' ಕಾದಂಬರಿ ಮರಾಠಿ ಕಾದಂಬರಿ ಸಾಹಿತ್ಯದ ಅತ್ಯಂತ ಅಮೋಘ ಕೃತಿಗಳಲ್ಲಿ ಒಂದು. ಕಾದಂಬರಿಯ ಸ್ವರೂಪ, ಲಕ್ಷಣ ಮತ್ತು ಧ್ಯೇಯಗಳೇ ಬದಲಾಗುತ್ತ ಬಂದಿದ್ದರೂ ಈ ಕಾದಂಬರಿ ತನ್ನ ಮಹತ್ವ ಮತ್ತು ಜನ ಪ್ರಿಯತೆಗಳನ್ನು ಉಳಿಸಿಕೊಂಡು ಬಂದಿದೆ. ಇದರ ಕಲಾತ್ಮಕ ಮತ್ತು ಸಾಹಿತ್ಯಿಕ ಸೌಂದರ್ಯ ಮತ್ತು ಸ್ವಾರಸ್ಯಗಳೇ ಇದರ ಅಚ್ಚಳಿಯದ ಜನಪ್ರಿಯತೆಗೆ ಕಾರಣವಾಗಿವೆ. ಕನ್ನಡ ಸಾಹಿತ್ಯಲೋಕದ ದಿಗ್ಗಜರಲ್ಲಿ ಒಬ್ಬರಾದ ಪ್ರೊ॥ ವಿ.ಎಂ. ಇನಾಂದಾರ್ ಅವರು ಕನ್ನಡಕ್ಕೆ ಅನುವಾದಿಸಿದ ಈ ಕಾದಂಬರಿ ಕನ್ನಡದಲ್ಲಿಯೂ ತನ್ನ ಜನಪ್ರಿಯತೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಇದುವರೆಗೆ ಈಗಾಗಲೇ ಮೂರು ಮುದ್ರಣಗಳನ್ನು (೧೯೩೭, ೧೯೪೯, ೧೬೬೩) ಕಂಡಿರುವ ಈ ಜನಪ್ರಿಯ ಕಾದಂಬರಿಯನ್ನು ಅನುವಾದ ಅಕಾಡೆಮಿಯ ಸಾಹಿತ್ಯ ಮಾಲೆಯಲ್ಲಿ ಅಳವಡಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವ ಪ್ರೊ॥ ವಿ.ಎಂ. ಇನಾಂದಾರ್ ಅವರ ಬಂಧುವರ್ಗದವರಿಗೆ–ವಿಶೇಷವಾಗಿ ಶ್ರೀಮತಿ ಮೀನಾ ವಾಂಗೀಕರ್ ಅವರಿಗೆ– ಅಕಾಡೆಮಿ ಕೃತಜ್ಞವಾಗಿದೆ.

ಅನುವಾದ ಅಕಾಡೆಮಿಯ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಅಕಾಡೆಮಿಯ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ತಮ್ಮ ಅನೇಕ ಕಾರ್ಯಗಳ ನಡುವೆಯೂ ಬಿಡುವು ಮಾಡಿಕೊಂಡು ತಾಳ್ಮೆಯಿಂದ ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ಶ್ರೀ ಈಶ್ವರಚಂದ್ರ ಅವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ

# ಎರಡು ಮಾತು

ಸುಮಾರು ಹನ್ನೆರಡು ವರ್ಷಗಳ ಹಿಂದೆ ಪ್ರಕಟವಾದ ಈ ನನ್ನ ಮೊದಲ ಕೃತಿಯ ಎರಡನೆಯ ಆವೃತ್ತಿ ಇದೀಗ ಪ್ರಕಟವಾಗುತ್ತಿದ್ದುದು ಒಂದು ಸಂತೋಷದ ಸಂದರ್ಭವೆ. ಇದಕ್ಕಾಗಿ ಈಗಿನ ಪ್ರಕಾಶಕರಾದ ಆನಂದ್ ಬ್ರದರ್ಸ್, ಬೆಂಗಳೂರು, ಅವರಿಗೆ ನಾನು ಋಣಿಯಾಗಿರಬೇಕಾಗಿದೆ. ಇದನ್ನು ಸಾಧ್ಯವಾಗಿಸಿದವರು ನನ್ನ ತರುಣ ಮಿತ್ರರಾದ ಶ್ರೀ ಡಿ.ವಿ.ಕೆ. ಮೂರ್ತಿಯವರು. ಈ ಕೃತಿಯ ಗುಣವಿಶೇಷಗಳನ್ನು ಮೆಚ್ಚಿದ ರಸಾಭಿಜ್ಞರು ಅವರು. ಅವರ ಈ ರಸಾಭಿಜ್ಞತೆಯ ಫಲವಾಗಿಯೇ "ಎರಡು ಧ್ರುವ" ಎರಡನೆಯ ಬಾರಿ ಕನ್ನಡಿಗರೆದುರು ಬರುತ್ತಿದೆ.

ಮೊದಲ ಆವೃತ್ತಿಯನ್ನು ಓದಿದವರು ಇದನ್ನು ಓದಿದರೆ ಒಂದು ವ್ಯತ್ಯಾಸವನ್ನು ಕೂಡಲೆ ಗುರುತಿಸಬಹುದು. ಮೊದಲಿನಿಂದ ಕೊನೆಯವರೆಗೂ ಬರವಣಿಗೆಯನ್ನು ತಿದ್ದಿ ಬಹುಮಟ್ಟಿಗೆ ಪರಿಷ್ಕಾರಗೊಳಿಸಿದ್ದೇನೆ. ದೋಷಗಳು ಇನ್ನೂ ಉಳಿಯದೆ ಇಲ್ಲ ಎಂಬ ಅರಿವು ನನಗಿದೆ. ಇದಕ್ಕೆ ಕಾರಣವೆಂದರೆ ಈ ಆವೃತ್ತಿಗಾಗಿ ತಿದ್ದುಪಡಿಗಳನ್ನು ನಾನು ಮಾಡಿದ್ದು ೧೯೪೫ನೆ ಇಸವಿಯ ನವಂಬರ್–ಡಿಸೆಂಬರ್ ತಿಂಗಳಲ್ಲಿ ಆ ನಂತರ ಇಷ್ಟು ಕಾಲ ಸಂದರೂ ಅನಿವಾರ್ಯವಾದ ಕಾರಣಗಳ ಮೂಲಕ ಪ್ರಕಟನೆ ಸಾಧ್ಯವಾಗಲಿಲ್ಲ. ಇತ್ತೀಚೆ ಮತ್ತೊಮ್ಮೆ ಬರವಣಿಗೆಯನ್ನು ನೋಡಲು ಅವಕಾಶ, ವ್ಯವಧಾನ ದೊರೆಯಲಿಲ್ಲ. ಹೀಗಾಗಿ ಇನ್ನೂ ಕೆಲಮಟ್ಟಿಗೆ ಶುದ್ಧವಾಗಿರಬಹುದಾಗಿದ್ದ ಅನುವಾದ ಹೀಗೆಯೇ ಉಳಿಯಬೇಕಾಯಿತು. ಆದರೆ ಮೊದಲನೆಯದರಲ್ಲಿಯ ಬರಹದ ಕಲಸು ಮೇಲೋಗರದ ರೀತಿ ಮಾತ್ರ ಖಂಡಿತವಾಗಿಯೂ ಇಲ್ಲಿ ಉಳಿದಿಲ್ಲ. ಎಂಬ ಭರವಸೆ ನನಗಿದೆ. ಮೂರುನಾಲ್ಕು ಜನರ ಕೈವಾಡದ ಪರಿಣಾಮವಾಗಿ ಮೊದಲನೆಯದರಲ್ಲಿಯ ಬರಹ ಪೂರ್ತಿ ನನ್ನದಾಗಿಯೇ ಉಳಿಯಲಿಲ್ಲ. ಅಂದಿನ ಸಂದರ್ಭದಲ್ಲಿ ಅದು ಅನಿವಾರ್ಯವಾಗಿತ್ತು. ಆದರೆ ಈಸಲದ ಬರವಣಿಗೆ ಏನಿದ್ದರೂ ನನ್ನದೇ. ಅದರ ಹೊಣೆ ಇನ್ನೊಬ್ಬರ ಮೇಲಿಲ್ಲ.

ಕೃತಿಯ ಬಗ್ಗೆ ಹೆಚ್ಚಿಗೆ ಬರೆಯಬೇಕಿಲ್ಲ. ಮನರಂಜನೆಗೆಂದು ಮಾತ್ರ ಕಾದಂಬರಿಗಳನ್ನು ಓದುವವರು ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದ್ದಾರೆ. ವಿಮರ್ಶೆಯ ದೃಷ್ಟಿಯಿಂದ ಓದುವವರು ಇದರ ಕಲೆಗಾರಿಕೆಯ ಬಹುಮುಖವಾದ ಸೌಂದರ್ಯವನ್ನು ಎತ್ತಿ ತೋರಿಸಿದ್ದಾರೆ. ಈ ಕೃತಿ ಮಹಾರಾಷ್ಟ್ರದಲ್ಲಿ ಪ್ರಕಟವಾಗಿ ಸುಮಾರು ಹದಿನೆಂಟು ವರ್ಷವಾಯಿತು. ಈ ಹದಿನೆಂಟು ವರ್ಷಗಳಲ್ಲಿ ಮಹಾರಾಷ್ಟ್ರದಲ್ಲಿ ಕಾದಂಬರೀ ವಾಙ್ಮಯ ಬೇಕಾದಷ್ಟು ಬೆಳೆದಿದೆ. ಹೊಸ ಹಿರಿಮೆ–ಹೆಗ್ಗಳಿಕೆಗಳನ್ನು ಪಡೆದಿದೆ. ಆದರೆ ಈ ಕಾದಂಬರಿ ಮಾತ್ರ ಎಂದಿನಂತೆ ತನ್ನ ಸ್ಥಾನವನ್ನು ಕಾಯ್ದುಕೊಂಡಿದೆ. ಜನತೆಯ ಪ್ರೀತಿಗೆ, ವಿಮರ್ಶಕರ ಆದರಕ್ಕೆ ಪಾತ್ರವಾದ ಕೃತಿಯಾಗಿಯೇ ಉಳಿದಿದೆ. ಅದರಂತೆಯೇ ಕನ್ನಡ ಅನುವಾದ ಪ್ರಕಟವಾದಂದಿನಿಂದ

ಕಳೆದ ಹನ್ನೆರಡು ವರ್ಷಗಳಲ್ಲಿ ಕನ್ನಡ ಕಾದಂಬರಿಯಾದರೂ ಹೇಳಿಕೊಳ್ಳಬಹುದಾದ ಗುಣ, ಗಾತ್ರ, ವೈವಿಧ್ಯ ಪಡೆದಿದೆ. ಕಾದಂಬರಿಯ ಕ್ಷೇತ್ರದಲ್ಲಿ ಹೊಸ ಹವಣಿಕೆ ಪ್ರಯೋಗಗಳು ತಲೆದೋರಿವೆ. ಹೀಗಿದ್ದರೂ ಈ ಕಾದಂಬರಿಯಲ್ಲಿ ಓದುಗರು ಮಾತ್ರವಲ್ಲದೆ ಕಾದಂಬರಿಕಾರರೂ ಗಮನಿಸಬೇಕಾದ ಅಂಶಗಳು ಬೇಕಾದಷ್ಟು ಇವೆ ಎಂದು ಹೇಳಬಹುದಾಗಿದೆ. ಈ ಅಂಶಗಳಲ್ಲಿ ಮುಖ್ಯವಾದವುಗಳೆಂದರೆ ಇಲ್ಲಿಯ ತಂತ್ರವಿನ್ಯಾಸದಲ್ಲಿಯ ಕಲಾವಂತಿಕೆ, ಕತೆಯಲ್ಲಿಯ ಅಚ್ಚುಕಟ್ಟುತನ, ಪಾತ್ರದರ್ಶನದಲ್ಲಿಯ ಜೀವಕಳೆ, ಅಲ್ಲದೆ ಇವೆಲ್ಲವೂ ಏಕಮುಖವಾಗಿ ಸಾಧಿಸುವ ಅರ್ಥಸೂಚನೆ. ಸೂಕ್ಷ್ಮವಾಗಿ ನೋಡಿದಷ್ಟು ಸಾರೆಯೂ ಹೊಸದೊಂದು ವಿಶೇಷ ಓದುಗನ ಗಮನ ಸೆಳೆಯಬಲ್ಲದಾದರೆ ಆ ರೀತಿಯ ಸತ್ವ ಹಿರಿಯಾದುದು ಎಂಬ ಮಾತಿಗೆ ಇಲ್ಲಿ ಬಳಸಲಾದ ರೀತಿ ಒಂದು ನಿದರ್ಶನ ಎಂದು ಹೇಳಿದರೆ ಯಾವ ಅತಿಶಯೋಕ್ತಿಯೂ ಅಲ್ಲ. ಓದುಗರು ಕತೆಯ ಅರ್ಥವನ್ನೂ ಲೇಖಕರು ಕತೆಯ ರೀತಿಯ ಕಲಾವಂತಿಕೆಯನ್ನೂ ತಿಳಿಯುವಂತಾದರೆ ಅನುವಾದಕ ಪ್ರಕಾಶಕರಿಬ್ಬರ ಶ್ರಮವೂ ಸಾರ್ಥಕವಾಯಿತೆಂದು ತಿಳಿದಿದ್ದೇನೆ.

ಧಾರವಾಡ
೨೦ ಆಗಸ್ಟ್ ೧೯೪೯

**ವಿ.ಎಂ. ಇನಾಂದಾರ್**

## ಪರಿವಿಡಿ


| | |
|---|---|
| ಮುನ್ನುಡಿ | v |
| ಶುಭಾಕಾಂಕ್ಷೆ | vi |
| ಹೊಸಹೆಜ್ಜೆ | vii |
| ಪ್ರಸ್ತಾವನೆ | ix |
| ಎರಡು ಮಾತು | xiv |
| ಎರಡು ಧ್ರುವ | ೧–೨೫೯ |

# ಎರಡು ಧ್ರುವ

# ೧
# ಜ್ವಾಲಾಮುಖಿಯ ಸ್ಫೋಟ

'ಪೋರಾ, ಏ ಬಾಯ್ !' ಎಂಬ ಉಚ್ಚಸ್ವರದ ಕೂಗು ರಮಾಕಾಂತನ ಬರೆಯುವ ಕೋಣೆಯಿಂದ ಕೇಳಬಂದಿತು. ಕೂಡಲೆ ಗಂಟೆಯೂ ಖಣಖಣ ಬಾರಿಸಿತು. ಅಡುಗೆಮನೆಯಲ್ಲಿ ಇನ್ನೂ ಆರದೆ ಇದ್ದ ತನ್ನ ಕೂದಲಿನ ಬುಚಡ ಕಟ್ಟುತ್ತ ವತ್ಸಲೆಯು ಕುಳಿತಿದ್ದಳು. ಆ ಕೂಗು ಕೇಳಿ ಸ್ಟೇಷನ್ನಿನ ಮೇಲಿನ ಗೊಂದಲವು ಅವಳಿಗೆ ನೆನಪಾಯಿತು. ಹಾಗೂ ಹೀಗೂ ಬುಚಡ ಕಟ್ಟಿಕೊಂಡು ಅವಳು ಕುತೂಹಲದಿಂದ ಬಾಗಿಲಲ್ಲಿ ನಿಂತಳು.

ಪೋರನು ಓಡುತ್ತಲೇ ಬಂದ. ಅವನಿಗೆ ಕೆಮ್ಮಿನ ಠಸಿಕೆ ಹತ್ತಿತ್ತು. ಅದರ ಕಾರಣ ಮುಪ್ಪಂತೂ ಅಲ್ಲ! ಸಾವಿರಪಾಲಿಗೆ ಅದರ ಉಗಮವು ರಮಾಕಾಂತನು ಸೇದಿ ಎಸೆದ ಸಿಗರೇಟಿನ ತುಣುಕಿರಬೇಕು. ಆದರೆ ಋಷಿಯ ಕುಲವನ್ನೂ ಠಸಿಕೆಯ ಮೂಲವನ್ನೂ ಹುಡುಕದೆ ಇರುವುದೇ ಒಳ್ಳೆಯದು. ದೀನ–ದುರ್ಬಲರ ಕೈವಾರಿಯಾದ ಯಾವನಾದರೊಬ್ಬ ಕಥಾಲೇಖಕನು ಆ ಹುಡುಗನ ಕೆಮ್ಮನ್ನು ಕೇಳಿದ್ದರೆ ಅದರ ಮೇಲೆ ಅವನೊಂದು ಕರುಣ ಕಥೆಯನ್ನೇ ಬರೆಯಬಹುದಾಗಿತ್ತು. "ವಿಪರೀತ ಚಳಿ ! ಬಡವನಿಗೆ ಬೆಚ್ಚನ್ನ ಸ್ವೆಟರ್ ಎಲ್ಲಿಂದ ಸಿಗಬೇಕು? ತಣ್ಣಗಿನ ಫರಸಿಯ ಮೇಲೆ ಕುಳಿತು, ಚಳಿಯಲ್ಲಿ ತಿರುಗಾಡಿ, ಆ ಹುಡುಗನಿಗೆ ಚಳಿಯಾಗುವದು. ಅವನು ಕೆಮ್ಮಹತ್ತುವನು. ಕೆಮ್ಮಿನ ಮುಂದಿನ ಹೆಜ್ಜೆ 'ನ್ಯುಮೋನಿಯಾ!' ಅಯ್ಯೋ ಪಾಪ, ಬಡ ಹುಡುಗ ! ಈ ಹುಡುಗನನ್ನು ಯಾರು ಕೊಂದರು?"

ರಮಾಕಾಂತ ಲೋಕಪ್ರಿಯ ಕಥಾಲೇಖಕ. ಅಲ್ಲದೆ ಇನ್ನು ಮುಂದೆ ನಾಟಕಕಾರನೂ ಆಗುವವನಿದ್ದ. ಆದರೆ "ಈ ಹುಡುಗನನ್ನು ಯಾರು ಕೊಂದರು?" ಎಂಬ ಪ್ರಶ್ನೆ ಅವನಿಗೆ ಹೊಳೆಯಲೇ ಇಲ್ಲ. ತಿರುಗಿ, ಅವನು ತಡಮಾಡಿದ್ದಕ್ಕೆ ಅವನ ಕೆನ್ನೆಯ ಮೇಲೆ ಒಂದು ಒಳ್ಳೇ ಏಟು ಕೊಡಬೇಕೆಂಬ ವಿಚಾರವು ಮಾತ್ರ ಅವನ ತಲೆಯಲ್ಲಿ ಸುಳಿದುಹೋಯಿತು.

"ಛೋಕರಾ–"

"ಜೀ ಸಾಬ್–"

"ನಾಳೆ ನಿನ್ನನ್ನು ಡಾಕ್ಟರರ ಕಡೆಗೆ ಕಳಿಸುತ್ತೇನೆ!"

ಹುಡುಗನು ಹೆದರಿ ದೀನದೃಷ್ಟಿಯಿಂದ ರಮಾಕಾಂತನನ್ನು ನೋಡತೊಡಗಿದ.

"ಇತ್ತಿತ್ತಲಾಗಿ ನಿನಗೆ ಕಡಮೆ ಕೇಳಿಸುವುದೇನು ?"

"ಇಲ್ಲ ರಾವಸಾಬ್."

"ಹಾಗಾದರೆ ದೀಪ ಹಚ್ಚುವ ಮೊದಲೇ ನಿದ್ರೆ ಬರಹತ್ತಿತೇ? ಅದಕ್ಕೂ ಔಷಧ ಬೇಕಲ್ಲ!"

"ಒಬ್ಬ ಹೆಣಮಗಳು ಹಾಡಿಕೋತ ಹೊಂಟಿದ್ದಳರೀ–"

ರಮಾಕಾಂತ ನಕ್ಕು ಅವನ ಕಡೆ ನೋಡಿದ. ಒಂದು ಕ್ಷಣ ಅವನಿಗೆ ತನ್ನ ವಿಷಯವಾಗಿ ಅಭಿಮಾನವೆನಿಸಿತು. ಯಾವನೋ ಒಬ್ಬ ಸಂಸ್ಕೃತ ಪಂಡಿತನ ಮನೆಯ ಗಿಳಿ–ಮೈನಾಗಳು ಕೂಡ ವೇದಾಂತದ ಚರ್ಚೆಯನ್ನು ಮಾಡುತ್ತಿದ್ದವೆಂಬ ಕಥೆ ಅವನಿಗೆ ನೆನಪಾಯಿತು. ತನ್ನ ಮನೆಯ ಆಳುಮಗನಿಗೆ ಸಹ ಇಷ್ಟು ಹಾಡಿನ ಛಲವಿದೆ! ಆದರೆ ಬೇಸಿಗೆಯಲ್ಲಿ ತಂಪುಗಾಳಿಯ ಹಿಂದೆಯೇ ಭರ್‍ರನೆ ಝಳವು ಬರುವಂತೆ ಅವನ ತಲೆಯಲ್ಲಿ ಮತ್ತೊಂದು ವಿಚಾರವು ಬಂದಿತು. ತಿರಸ್ಕಾರದಿಂದ ಅಡುಗೆಮನೆಯ ಕಡೆಗೆ ನೋಡಲು ಬಾಗಿಲಲ್ಲಿ ನಿಂತಿದ್ದ ವತ್ಸಲೆಯು ಅವನಿಗೆ ಅರ್ಧಮರ್ಧ ಕಾಣಿಸಿದಳು.

"ಕಂಪನಿ ಗೊತ್ತಿದೆ ಅಲ್ಲೇನೊ ನಿನಗೆ?" ರಮಾಕಾಂತ ಕೇಳಿದ.

"ಅದ, ಸಾಹೇಬ, ನಾನಽ ಅಲ್ಲೇನ್ರಿ ಅರಿವಿ ಅಲ್ಲಿ ಕೊಟ್ಟಬರತೀನಿ."

"ಕತ್ತೇ, ವಾಶಿಂಗ್ ಕಂಪನಿ ಅಲ್ಲ! ನಾಟಕ ಕಂಪನಿ. ಹೋದ ತಿಂಗಳು ಆ ಬಾಯಿಯವರು ಬಂದಿದ್ದರು ನೋಡು, ನಮ್ಮ ಕಡೆ, ನೀ ಕಳಿಸಲಿಕ್ಕೆ ಹೋಗಿದ್ದಿ ಅವರನ್ನು–"

"ಹೋಹೋ, ಅವರ್‍ರೇ, ಥಕಪಕ ಮಿಂಚು ಹೌಂದಲ್ಲರಿ?"

"ಸಾಕುಮಾಡು ನಿನ್ನ ವರ್ಣನೆ. ಅವರ ಮನೆಗೆ ಹೋಗಿ ಈ ಕಾಗದ ಕೊಡು ಅವರಿಗೆ. ನಡೆ, ಓಡು."

ಹುಡುಗನು ಕೋಣೆಯ ಹೊರಗೆ ಬಂದು ಪಾವಟಿಗೆಗಳನ್ನು ಇಳಿಯುವಷ್ಟರಲ್ಲಿ "ಏ, ಇಲ್ಲಿ ನೋಡು, ಆ ಮೂಲೆಯ ಮೇಲಿನ ಸಲೂನಿನಲ್ಲಿ ನಾನು ಇದೇ ಈಗ ಬರುವೆನೆಂದು ಹೇಳಿ ಹೋಗು. ಆ ವಿಠ್ಯಾ ಎಲ್ಲಿಯಾದರೂ ಹೋಗಿದ್ದರೆ ಕರೆದುಕೊಂಡು ಬಾ ಅಂತ ಹೇಳು." ರಮಾಕಾಂತನ ಈ ಕೊನೆಯ ಮಾತು ವತ್ಸಲೆಗೆ ಸ್ಪಷ್ಟವಾಗಿ ಕೇಳಿಸಿತು. ವಿಠ್ಯಾನ ಹೊರತು ಬೇರೆ ಯಾರು ಕೂದಲು ಕತ್ತರಿಸಿದರೂ ಅದು ತನ್ನ ಗಂಡನ ಮನಸ್ಸಿಗೆ ಒಪ್ಪುವದಿಲ್ಲೆಂಬ ವರ್ಷದ ಹಿಂದಿನ ಮಾತು ಅವಳಿಗೆ ನೆನಪಾಯಿತು. ಆದರೆ ಈಗ ಸಂಜೆಯ ಹೊತ್ತಿಗೆ ಕೂದಲು ಕತ್ತರಿಸಿಕೊಂಡು ಇವರು ಹೋಗುವದಾದರೂ ಎಲ್ಲಿಗೆ ಎಂಬುದು ಅವಳಿಗೆ ಏನೂ ತೋಚಲಿಲ್ಲ.

ಇಷ್ಟರಲ್ಲಿ ರಮಾಕಾಂತನು ತನ್ನ ಕೋಣೆಯಿಂದ ಹೊರಬಿದ್ದ. ಅವನು ಬಾಗಿಲನ್ನು ಮುಂದೆಮಾಡಿಕೊಂಡು ಪಾವಟಿಗೆ ಇಳಿಯುವುದಕ್ಕೆಂದು ತಿರುಗುವಷ್ಟರಲ್ಲಿ ಅವನ ಹಾಗೂ ವತ್ಸಲೆಯ ದೃಷ್ಟಿಗಳು ಕೂಡಿದವು. ಆತನ ದೃಷ್ಟಿಯಲ್ಲಿಯ ವಿಷದ ಬಾಣವು ತಟ್ಟನೆ ವತ್ಸಲೆಯ ಮರ್ಮಕ್ಕೆ ಮುಟ್ಟಿತು. ಮೊದಲೇ ಭಗ್ನವಾದ ಅವಳ ಹೃದಯದಿಂದ ರಕ್ತವು ಹರಿಯತೊಡಗಿತು. ರಮಾಕಾಂತನು ಪಾವಟಿಗೆಗಳನ್ನು ಇಳಿಯುತ್ತಿರಲು ಅವನ ಚಪ್ಪಲಿಗಳ ಚಟಚಟ ಸಪ್ಪಳವು ಅವಳಿಗೆ ಭಯಂಕರವೆನಿಸಿತು– ಆತ ತನ್ನ ಹೃದಯವನ್ನೇ ತುಳಿದು ಹೋಗುತ್ತಿದ್ದನೇನೋ ಎನ್ನುವಂತೆ.



ಕಟಾಂಜನಕ್ಕೆ ಆತುಕೊಂಡು ಉದಾಸೀನ ದೃಷ್ಟಿಯಿಂದ ಹೊರಗೆ ನೋಡಹತ್ತಿದಳು. ಸಂಜೆಯು ಮೋರೆ ಮುದುಡಿದ ಮುದುಕಿಯಂತೆ ಮುಂಬಯಿ ನಗರವನ್ನು ಪ್ರವೇಶಿಸುತ್ತಿತ್ತು. ಬೀದಿಯ ಮೇಲೆ ಅತ್ತಿಂದಿತ್ತ ನಡೆದಿರುವ ಅಸಂಖ್ಯ ಜನಗಳು! ಆ ಮುದುಕಿಯ ಹೃದಯದೊಳಗಿನ ಅನಂತ ಆಶೆಗಳೇ ಅವು ! ವತ್ಸಲೆಯು ಎದುರಿನ ಮನೆಯ ಕಾಜಿನ ಹರಳುಗಳ ಕಡೆ ನೋಡಿದಳು. ಎರಡು ತಾಸಿಗೆ ಮೊದಲು ಸೂರ್ಯನ ಕಿರಣಗಳಲ್ಲಿ ಅವು ಥಕಥಕ ಹೊಳೆಯುತ್ತಿದ್ದವು. ಆದರೆ ಈಗ ? ಪ್ರಾಣವು ಹೋದಮೇಲೆ ಕಾಣುವ ಕಣ್ಣುಗಳಂತೆ ಅಮಂಗಲವಾಗಿ ತೋರಿದವು. ಅವನ್ನು ನೋಡುತ್ತ ನೋಡುತ್ತ ಅವಳಿಗೆನಿಸಿತು– ನನ್ನ ಆಶೆಗಳೂ ಈ ಕಾಜಿನ ಹರಳುಗಳೂ ಒಂದೇ ಅಲ್ಲವೇ? ಈ ಹರಳು ನಾಳೆ ಮತ್ತೆ ಹೊಳೆಯಬಹುದು. ಆದರೆ ನನ್ನ ಆಶೆಗಳು? ಮದುವೆಯ ಕಾಲಕ್ಕೆ ನಾನು ಅದೆಷ್ಟು ಮನೋರಾಜ್ಯಗಳನ್ನು ಕಟ್ಟಿದೆ! ನಾನೇನೂ ಯಾರ ಅಡುಗೆಯವಳಾಗಲಿಕ್ಕೆ ಹುಟ್ಟಿ ಬಂದಿಲ್ಲವೆಂದು ನಮ್ಮ ಸೊಕ್ಕಿನ ಸೋದರತ್ತೆಗೆ ಅದೆಷ್ಟು ಬಿಂಕದಿಂದ ಹೇಳಿದೆ. ಆದರೆ ಮನೋ ರಾಜ್ಯಗಳೆಂದರೆ ಮಂಜಿನ ಹನಿಗಳು. ಮಂಜುಹನಿಗಳ ಮಾಲೆಗಳು ಜಗತ್ತಿನಲ್ಲಿ ಯಾರಿಗಾದರೂ ಕೊರಳಲ್ಲಿ ಹಾಕಿಕೊಳ್ಳಲು ಸಿಗುವವೆ? ಮನಸ್ಸಿನಲ್ಲಿ ನಾನು ಸಾವಿರಾರು ಗೋಪುರಗಳನ್ನು ಕಟ್ಟಿದೆ. ಆದರೆ ಅವು ನಿಂತ ನೆಲದ ಅಂತರಂಗವು ನನಗೆ ಎಳ್ಳಷ್ಟು ಕೂಡ ತಿಳಿದಿರಲಿಲ್ಲ. ಆ ನೆಲವು ಅದುರಬಹುದು. ಅದರಲ್ಲಿ ಬಿರುಕು ಬೀಳಬಹುದು, ಆ ಬಿರುಕುಗಳೊಳಗಿಂದ ಗಂಧಕದ ಉಗ್ರವಾಸನೆ ಬರಬಹುದು.....ಬೀದಿಯಲ್ಲಿರುವ ಒಂದು ದೃಶ್ಯದಿಂದ ವತ್ಸಲೆಯ ವಿಚಾರಗಳು ಬೇರೊಂದು ದಾರಿಯನ್ನು ಹಿಡಿದವು. ಅಲ್ಲಿ ಹಾಯ್ದುಹೋಗುವ ಇಬ್ಬರು ದಂಪತಿಗಳು ಮಲ್ಲಿಗೆ ಮಾಲೆಗಳನ್ನು ಮಾರುವ ಹುಡುಗನ ಹತ್ತಿರ ವ್ಯಾಪಾರ ನಡಸಿದ್ದರು. ಗಂಡನು ಒಂದು ಮಾಲೆಯನ್ನು ಕೊಂಡು ಹೆಂಡತಿಯ ಕೈಯಲ್ಲಿ ಕೊಡಲು ಅವಳು ನಗುನಗುತ್ತ ಅದನ್ನು ಬುಚಡಕ್ಕೆ ಏರಿಸಿದಳು. ಅದೇನೊ ಆ ಮಾಲೆಯು ಅವರಿಬ್ಬರ ಅಂತಃಕರಣದಲ್ಲಿ ಅರಳಿದ ಪ್ರೀತಿಲತೆಯ ಹೂಗಳ ಮಾಲೆಯಾಗಿತ್ತು....ಈ ಮಧುರ ಅನುಭವವು ನನಗೇಕೆ ಸಿಗಬಾರದು? ಮದುವೆಯಾದಂದಿನಿಂದ ಇಂದಿನವರೆಗೆ ಅವರು ನನ್ನನ್ನು ದೂರದೂರವೇ ಇಡುತ್ತಿದ್ದಾರೆ. ಮೊದಲ ಎರಡು ಮೂರು ತಿಂಗಳು ಇಲ್ಲಿಯೇ ಕಳೆದವು. ನಡುವೆ ಒಂದು ವರ್ಷ ಅವರು ಇಲ್ಲಿ, ನಾನು ಪಾಂಚಗಣಿಯಲ್ಲಿ. ಅವರನ್ನು ತನ್ನ ಕಡೆ ಎಳೆದುಕೊಳ್ಳುವ ಶಕ್ತಿಯು ತನ್ನಲ್ಲಿ ಯಾಕಿರಬಾರದು? ಗಾಳಿಗುಂಟ ಹಾರುವ ಪುಚ್ಚದಂತೆ ಅವರ ಮನಸ್ಸಿರಬಹುದು! ಆದರೆ ಆ ಪುಚ್ಚದ ಮೇಲೆಯೂ ಪೃಥ್ವಿಯ ಆಕರ್ಷಣವು ಇದ್ದೇ ಇರುತ್ತದೆ! ಇಲ್ಲವೇ?

ಮಾವನವರು ತೀರಿಕೊಂಡರು. ಪಾಂಚಗಣಿಯಿಂದ ನಾನು ಬಂದು ಎಂಟು ದಿವಸವಾದರೂ ನನ್ನ ಕೂಡ ಅವರು ಒಂದು ಮಾತನ್ನೂ ಆಡಿಲ್ಲ. ಇಂದಿನತನಕ ನಾನು ಅವರಿಂದ ಬಚ್ಚಿಡುತ್ತಿದ್ದೆ. ಹೇಳುವ ಪ್ರಸಂಗವೇ ಸಿಕ್ಕಿದ್ದಿಲ್ಲ. ಆದರೆ ಈಹೊತ್ತು – ಹೌದು, ಈಗ ಮೂರು ದಿವಸ ಕುಳಿತು ಹೊತ್ತುಗಳೆಯುವುದು ಜೀವದ ಮೇಲೆ ಬಂದಿತ್ತು. ಮೊದಲು

ಓದಿದ್ದರಲ್ಲಿ ಪಾಂಚಗಣಿಯಲ್ಲಿ ಓದಿದ್ದಿಷ್ಟು ಭರತಿಬಿತ್ತು. ತೀರ ಸಹಜವಾಗಿ ಆ ಕಥೆಯನ್ನು ಬರೆದುಬಿಟ್ಟೆ. ಅದನ್ನು ನೋಡಿದರೆ ಅವರಿಗೆಷ್ಟು ಆನಂದವಾದೀತು! ತಮ್ಮಂಥ ಲೇಖಕನಿಗೆ ಒಪ್ಪುವಂಥ ಹೆಂಡತಿ ಈಕೆ ಎಂದೆನಿಸಿ ನನ್ನ ಮೇಲಿನ ಎಲ್ಲಾ ಸಿಟ್ಟನ್ನು ಅವರು ಬಿಟ್ಟು ಬಿಡಬಹುದು; ಮತ್ತು–

ಆಶೆಯಿಂದ ದಾರವನ್ನು ಎಳೆದು ಹಿಡಿಯಿತೆಂದರೆ ಮನದ ಪಟವು ಆಕಾಶವನ್ನೇರಿ ಆಡತೊಡಗುತ್ತದೆ. ವತ್ಸಲೆಗೂ ಹಾಗೇ ಆಯಿತು. ಅವಳು ಅಡುಗೆಮನೆಗೆ ಹೋಗಿ ತನ್ನ ಟ್ರಂಕನ್ನು ತೆರೆದು ಕೆಲವು ಕಾಗದಗಳೊಂದಿಗೆ ರಮಾಕಾಂತನ ಕೋಣೆಯ ಕಡೆಗೆ ತಿರುಗಿದಳು. ಒಳಗೆ ಕಾಲಿಡಬೇಕೊ ಇಡಬಾರದೊ ಎಂಬ ವಿಚಾರವು ಒಮ್ಮೆಲೆ ಅವಳ ಮನಸ್ಸಿಗೆ ಬಂದಿತು. ಆ ಕೋಣೆಯ ಗೋಡೆಗಳು ಒಂದರರೊಂದರ ಕಿವಿಯಲ್ಲಿ ಹಳೆಯ ಮಾತುಗಳನ್ನು ಗುಜುಗುಟ್ಟುತ್ತಿದ್ದಂತೆ ಅವಳಿಗೆ ಭಾಸವಾಯಿತು. ಆ ಮಾತುಗಳು–

ಅಂದು ಹುಡುಗಿಯ ಆಯುಷ್ಯದಲ್ಲಿಯ ಹುಣ್ಣಿಮೆಯ ರಾತ್ರಿ. ಆದರೆ ತನ್ನ ಆಯುಷ್ಯದಲ್ಲಿ ಮಾತ್ರ ಅದು ಅಮಾವಾಸ್ಯೆಯಾಯಿತು. ರಮಾಕಾಂತನ ಮೊಟ್ಟಮೊದಲನೆಯ ಭೆಟ್ಟಿ ! ತಾನು ಅರ್ಧ ನಾಚಿಕೆಯಿಂದ ಅರ್ಧ ಅಂಜಿಕೆಯಿಂದ ಮೂಲೆಯಲ್ಲಿ ನಿಂತಿದ್ದಳು. ತನ್ನ ಮೋರೆಯನ್ನು ಪತಿಯು ಅಂಗೈಯಲ್ಲಿ ಹಿಡಿದು ವಿದ್ಯುತ್ತಿನ ದೀಪದ ಕಡೆಗೆ ಅದನ್ನು ತಿರುಗಿಸಿ ನೋಡಿದ. ಅವರ ದೃಷ್ಟಿಯು ವಿಚಿತ್ರವಾಗಿತ್ತು. ಮೊದಲು ಕರುಣ, ಆಮೇಲೆ ಕ್ರೂರ! ತನ್ನ ರೂಪವು ಅವರಿಗೆ ಸೇರಿಲ್ಲವೆಂಬುದು ಒಡೆದು ಕಾಣುತ್ತಿತ್ತು. ಸಂತಾಪದಿಂದ ಅವರು ಅಂದರು "ಇದ್ದಲಿಯ ಉಪಯೋಗವು ಅಡುಗೆ ಮನೆಯಲ್ಲಿ, ಮಹಲಿನಲ್ಲಿ ಅಲ್ಲ!"

ಆ ಪೆಟ್ಟು ಅಸಹ್ಯವೆನಿಸಿ ತಾನು ಎಂದಳು "ಕೋಗಿಲೆಗಳೂ ಕರ್ರಗಿರುತ್ತವೆ."

"ಆದರೆ ಅವುಗಳ ಕಂಠವು ಕಾಗೆಯದರಂತೆ ಕರ್ಕಶವಿರುವುದಿಲ್ಲ!"

ತನಗೆ ಒಳ್ಳೆಯ ಬಣ್ಣವಿಲ್ಲ, ಹಾಡಲಿಕ್ಕೆ ಬರುವುದಿಲ್ಲ, ಗಂಡನಿಗೆ ಬೇಕಾದ ಯಾವೊಂದೂ ಗುಣವು ತನ್ನಲ್ಲಿ ಇಲ್ಲ ಎಂಬುದರ ಅರಿವು ಆ ಕ್ಷಣಕ್ಕೆ ತನ್ನ ಹೃದಯದಲ್ಲಿ ಕಠಾರಿಯಂತೆ ನೆಟ್ಟಿತು.

"ನಿಮ್ಮ ಮಾವ ಮದುವೆಯಲ್ಲಿ ಒಂದು ಪದಾರ್ಥ ಕೊಡಲಿಕ್ಕೆ ಮರೆತುಬಿಟ್ಟರು!"

ಬಂದೂಕು ಹೊಡೆಯುವಾಗ ಗುರಿ ನೋಡುವಂತೆ ನೋಡಿ ಅವರು ತನ್ನನ್ನು ಕೇಳಿದರು.

"ಏನದು?" ತಾನು ವಿಚಾರಿಸಿದಳು.

ಲಗ್ನದ ವರೋಪಚಾರದಲ್ಲಿ ಏನಾದರೂ ಹೆಚ್ಚುಕಡಿಮೆಯಾದ್ದರಿಂದ ಇವರ ಮನಸ್ಸು ಈ ರೀತಿಯಾಗಿರಬಹುದೆಂಬ ಆಶೆಯು ತನ್ನ ಮನಸ್ಸಿನಲ್ಲಿ ಹುಟ್ಟಿತು.

"ವಿಷದ ಪುಡಿ" ನಗುನಗುತ್ತ ಅವರು ಉತ್ತರ ಕೊಟ್ಟರು.

ಆ ಶಬ್ದಗಳನ್ನು ಕೇಳಿ ತನ್ನ ಕಣ್ಣುಗಳು ಅದೆಷ್ಟು ಶೂನ್ಯವಾದವು!

"ನಾನು ಬದುಕಬೇಕೆಂದು ನಿನ್ನ ಇಚ್ಛೆ ಇದೆಯಲ್ಲವೆ?"



ತನ್ನ ಬಾಯಿಂದ ಬಿಕ್ಕುಗಳ ಹೊರತು ಮತ್ತೇನೂ ಹೊರಬೀಳಲಿಲ್ಲ.

"ನನ್ನದೊಂದು ಮಾತು ಕೇಳುವಿಯಾ?"

"ಹುಂ."

ಅವರ ಪಾದಗಳ ಮೇಲೆ ತನ್ನ ತಲೆಯಿಡಬೇಕೆಂದು ತಾನು ಮುಂದಾಗಿ ತಲೆ ಬಾಗಲು ತನ್ನ ಸ್ಪರ್ಶವನ್ನು ತಪ್ಪಿಸಿಕೊಳ್ಳಲಿಕ್ಕೆ ಅವರು ಹಿಂದೆ ಸರಿದರು.

"ಆಣೆ ಮಾಡು ಹಾಗಾದರೆ ! ಇನ್ನು ಮೇಲೆ ನನ್ನ ಕೋಣೆಯೊಳಗೆ ಕಾಲು ಹಾಕಬೇಡ."

ಆ ದಿನ ರಾತ್ರಿ ತಾನು ಕಟಕಟ ನಡುಗುತ್ತ ಕೋಣೆಯ ಹೊರಗೇ ಮಲಗಿದಳು. ರಾಯರ ಸಿಟ್ಟಿನ ಮೊದಲ ಉಕ್ಕು ಇಳಿದ ಮೇಲೆ ಎಲ್ಲವೂ ಸರಿಹೋಗುವುದೆಂದು ತನ್ನ ಕಲ್ಪನೆಯಾಗಿತ್ತು. ಆದರೆ ಮುಂದೆ ಮಾವನವರ ಕಾಯಿಲೆಯ ದೆಸೆಯಿಂದ ತಾನು ಪಾಂಚಗಣಿಗೆ ಹೋಗಬೇಕಾಗಿ ಬಂದಿತು.

ಆ ಹಟವನ್ನು ಯಾರಾದರೂ ಮುರಿಯಲೇಬೇಕು. ತಾನೇ ಮುರಿದರೆ ಏನು ತಪ್ಪು? ಈ ಕಥೆಯ ಕಾಗದಗಳನ್ನು ಒಯ್ದು ಅವರ ಟೇಬಲ್ಲಿನ ಮೇಲೆ ಇಡಬೇಕು. ಅವು ತಮ್ಮವೇ ಕಾಗದವೆಂದು ತಿಳಿದು ಅವರು ಓದಹತ್ತುವರು, ಆಗ ಎಂಥ ಮೋಜು! ಒಣಗಿದ ಗಿಡ ಅರೆ ಕ್ಷಣದಲ್ಲಿ ಚಿಗುರಿಬಿಟ್ಟಿತು.

ಮೆಲ್ಲನೆ ಹೆಜ್ಜೆಯಿಡುತ್ತ ವತ್ಸಲೆಯು ಕೋಣೆಯಲ್ಲಿ ಹೋದಳು. ಸಂಜೆಯ ಮುಸುಕು ಬೆಳಕಿನಲ್ಲಿ ಟೇಬಲ್ಲ ಎದುರು ತೂಗುಹಾಕಿದ ಫೋಟೊ ನೋಡಿದಳು. ಮೊದಲು ಅಲ್ಲಿ ಅವಳ ಮಾವನ ಭಾವಚಿತ್ರವಿತ್ತು. ಈಗ ಒಬ್ಬ ಸುಂದರ ಸ್ತ್ರೀಯದು– ಹತ್ತಿರ ಹೋಗಿ ಕೆಳಗಿನ ಇಂಗ್ರೇಜಿ ಅಕ್ಷರಗಳನ್ನು ಓದಿದಳು : "ಚಿತ್ರಪಟ ತಾರೆ ಗ್ರೇಟಾ ಗಾರ್ಬೊ!" ಅವಳು ಕೋಣೆಯ ಸುತ್ತೆಲ್ಲ ದೃಷ್ಟಿ ಎಸೆದಳು. ಮಾವಂದಿರ ಫೋಟೊ ಅವಳಿಗೆ ಎಲ್ಲಿಯೂ ಕಾಣಲಿಲ್ಲ. ಎಲ್ಲಿ ನೋಡಿದರೂ ಸಿನೇಮಾ ನಟಿಯರ ಫೋಟೊಗಳನ್ನೂ ಸುಂದರವಾದ ಶೃಂಗಾರಮಯ ಚಿತ್ರಗಳನ್ನೂ ಹಚ್ಚಿತ್ತು. ಕುರ್ಚಿ, ಟೇಬಲ್ಲು, ಕೋಚು, ಫೋಟೊ, ಅದೇಕೆ ಟೇಬಲ್ಲ ಮೇಲಿನ ಆ ಸುಂದರ ಹಸಿರು ಮಸಿ, ಆ ಗುಲಾಬೀ ನೋಟಪೇಪರು, ಆ ಕೋಣೆಯಲ್ಲಿಯ ಪ್ರತಿಯೊಂದು ವಸ್ತುವೂ ರಮಾಕಾಂತನ ಸೌಂದರ್ಯಾಸಕ್ತಿಗೆ ಸಾಕ್ಷಿಯಾಗಿತ್ತು. ಟೇಬಲ್ಲ ಮೇಲಿನ ಸಿಗರೇಟಿನ ಪೆಟ್ಟಿಗೆಯನ್ನು ಅವಳು ಸಹಜವಾಗಿ ಎತ್ತಿದಳು. ಅದರ ಮೇಲೆ ತುಟಿಗೆ ತುಟಿ ಹಚ್ಚಿ ಮಾತಾಡುವ ದಂಪತಿಗಳ ಚಿತ್ರವೊಂದು ಕೊರೆದಿತ್ತು. ಆ ಜೋಡನ್ನು ನೋಡಿದೊಡನೆ ವತ್ಸಲೆಯ ಹೃದಯದಲ್ಲಿ ಹೇಗೊ ಹೇಗೊ ಆಯಿತು. ತನಗೆ ಮದುವೆಯಾಗಿ ವರ್ಷದ ಮೇಲಾಯಿತು. ಆದರೆ ರಮಾಕಾಂತನು ಒಮ್ಮೆಯಾದರೂ ತನ್ನನ್ನು.......

ಮೇಜಿನ ಮೇಲಿನ ಗುಲಾಬೀ ನೋಟಪೇಪರನ್ನು ಅವಳು ಎತ್ತಿ ನೋಡಿದಳು. ಜಾಜೀಹೂವಿನ ಹಾಗೆ ಮಂದಮಧುರವಾದ ಅದರ ಸುಗಂಧವು ಅವಳಿಗೆ ಮೋಹಕವೆನಿಸಿತು. ಅವಳಿಗೆ ತಿಳಿಯದಂತೆ ಆಶೆಯು ಕ್ಷಣಾರ್ಧದಲ್ಲಿ ಅವಳ ಕಣ್ಣ ಮುಂದೆ ಒಂದು ಚಿತ್ರವನ್ನು ನಿಲ್ಲಿಸಿತು. ರಮಾಕಾಂತನ ಭುಜದ ಮೇಲೆ ಕೊರಳನ್ನಿಟ್ಟು ತಾನು ಅವನನ್ನು ನೋಡುತ್ತಿದ್ದಾಳೆ,

ಮೋಡಿಯಿಂದ ತುಂಬಿದ ಹಾಗೆ ಅವನ ಮೋರೆಯು ಮೆಲ್ಲಮೆಲ್ಲಗೆ ಕೆಳಗೆ ಬರುತ್ತಿದೆ, ಅವನ ಕೂದಲಿನ ಮಾದಕವಾದ ಸುಗಂಧವನ್ನು ಮೂಸಿ ತಾನು ಕಣ್ಣು ಮುಚ್ಚುತ್ತಿರುವಳು–

ಕಾಗದವನ್ನಿಡಬೇಕೆಂದು ಅವಳು ಮೇಜನ್ನು ನಿಟ್ಟಿಸಲು ಒಂದು ನೋಟಪೇಪರಿನ ಮೇಲೆ ಏನೋ ಬರೆದಿತ್ತು. ಒಮ್ಮೆ ಎನಿಸಿತು–ಇದ್ದೀತು ಯಾರಿಗಾದರೂ ಬರೆದ ಪತ್ರ. ಕೂಡಲೆ ಹೊಳೆಯಿತು–ಸಂಜೆಯ ಮುಂದೆ ಸವಾರಿಯು ಕೂದಲು ಕತ್ತರಿಸಿಕೊಳ್ಳಲು ಹೋಗಿದೆ. ಅಂದಮೇಲೆ ಈ ಹೊತ್ತು ಎಲ್ಲಿಯಾದರೂ ನಾಟಕ, ಸಂಗೀತಕಛೇರಿ, ಇಲ್ಲವೆ ಊಟ, ಏನಾದರೂ ಇರಲಿಕ್ಕೆ ಬೇಕು. ಪತ್ರ ನೋಡಿದರೆ ಏನಾಗುತ್ತದೆ ಅಷ್ಟೊಂದು?

ಕಿಟಕಿಯ ಹತ್ತಿರ ಹೋಗಿ ಅವಳು ಆ ಪತ್ರವನ್ನು ಓದಹತ್ತಿದಳು. ಅದರ ಕೆಳಗಿನ ಕೆಲವು ಭಾಗವನ್ನು ಹೊಡೆದುಹಾಕಿತ್ತು. ಇದರಿಂದ ರಮಾಕಾಂತನು ಆ ಪತ್ರದ ಎರಡನೆಯ ನಕಲನ್ನು ಮಾಡಿರಬೇಕು. ಸಲೂನಿಗೆ ಹೋಗುವ ಅವಸರದಲ್ಲಿ ಮೊದಲು ಬರೆದ ಈ ಪತ್ರವನ್ನು ಹರಿದೊಗೆಯಲಿಕ್ಕೆ ಮಾತ್ರ ಅವನು ಮರೆತಿದ್ದನು. ಆ ಪತ್ರವನ್ನು ಓದುತ್ತಾ ಓದುತ್ತಾ ವತ್ಸಲೆಯು ಥರಥರ ನಡುಗಹತ್ತಿದಳು.

'ಪ್ರಿಯ ಸುರಂಗಾ,

ಇಂದು ಹುಣ್ಣಿಮೆ. ಹಿಂದೆ ಒಮ್ಮೆ ಮಾತು ಕೊಟ್ಟದ್ದು ನೆನಪಿದೆಯೆ? ಒಂಬತ್ತು ಗಂಟೆಗೆ ಜುಹೂಕ್ಕೆ ಮೋಟರಿನಲ್ಲಿ ಹೋಗೋಣ. ಬರೀ ನಾವಿಬ್ಬರೇ! ನಾನು ಮತ್ತು ನೀನು. ಜಗತ್ತಿನಲ್ಲಿ ಒಬ್ಬೊಂಟಿಯಾದ ಮನುಷ್ಯನಿಗೆ ಆತ್ಮಹತ್ಯೆಮಾಡಿಕೊಳ್ಳಬೇಕೆನಿಸುತ್ತದೆ. ಆದರೆ ಇಬ್ಬರು ಮನುಷ್ಯರು ಪೃಥ್ವಿಯ ಮೇಲೆ ಸ್ವರ್ಗವನ್ನೂ ನಿರ್ಮಿಸಬಲ್ಲರು. ಈ ಇಬ್ಬರ ನಡುವೆ ಮೂರನೆಯವರು ಯಾರು ಬಂದರೂ ಅವರನ್ನು ಕಡಿದು ಚೆಲ್ಲಬೇಕೆಂಬ ಇಚ್ಛೆ ಹುಟ್ಟುತ್ತದೆ. ಮುಂದಿನ ನಾಟಕದಲ್ಲಿ ನಾಯಕ ನಾಯಿಕೆಯರ ಬೆಳದಿಂಗಳಲ್ಲಿಯ ಸನ್ನಿವೇಶವನ್ನು ನಾನು ಬರೆಯುವವನಿದ್ದೇನೆ. ಅದರ ಕಲ್ಪನೆಯನ್ನು ಈ ಹೊತ್ತು ನಿನಗೆ ಹೇಳುವೆ. ಹೌದು, ಒಂದು ಮಾತ್ರ ಅಂಜಿಕೆ. ಚಂದ್ರನು ನಿನ್ನನ್ನು ನೋಡಿ ನಾಚಿಕೊಂಡು ಮೋಡದಲ್ಲಿ ಅಡಗಿ ಕುಳಿತನೆಂದರೆ ಜುಹೂದ ಉಸುಕಿನಲ್ಲಿ ನಾವಿಬ್ಬರೂ ಕತ್ತಲೆಯಲ್ಲಿ ಸಿಕ್ಕೇವು. ಆದರೆ ನೀನು ಕತ್ತಲೆಗೆ ಬೆದರುವವಳಲ್ಲವಷ್ಟೇ. ಮಳೆಯಲ್ಲಿ ತೋಯಿಸಿಕೊಳ್ಳುತ್ತ ಚಾರುದತ್ತನ ಮನೆಗೆ ಹೋಗುವ ವಸಂತಸೇನೆಯಲ್ಲವೆ ನೀನು? ನಿನ್ನ ಆ ಪ್ರವೇಶಕ್ಕೆ ಇಡೀ ಮುಂಬಯಿ ನಗರ ಇಂದು ತಲೆದೂಗುತ್ತದೆ. ಅಂದಮೇಲೆ.....

ಮುಂದಿನ ಸಮಾಚಾರದಲ್ಲಿ ಬಹಳ ಕಾಟು ಹಾಕಿದ್ದಿತ್ತು. ಮೇಲಿನ ಸಾಲುಗಳ ಮೇಲೆ ಬರೀ ಒಂದು ಗೆರೆಯೆಳೆದದ್ದರಿಂದ ಸಹಜವಾಗಿ ವತ್ಸಲೆಯು ಅದನ್ನು ಓದಿದಳು. ಓದಿದ ಮೇಲೆ ಅವಳಿಗೆ ಎನಿಸಿತು– ಹೀಗೆಯೇ ಹೋಗಿ ಗ್ಯಾಲರಿಯಿಂದ ಕೆಳಗೆ ಹಾರಿಬಿಡಬೇಕು. ಅಂದರೆ ಕ್ಷಣದಲ್ಲಿ ಈ ನಾಚಿಕೆಯ ಬಾಳುವೆಯಾದರೂ ಮುಗಿದೀತು. ಆದರೆ ಅವಳು ಗ್ಯಾಲರಿಯ ಮೇಲಿನಿಂದ ಬಾಗಿ ನೋಡುವುದಕ್ಕೂ ರಮಾಕಾಂತನು ತಿರುಗಿ ಬರುವುದಕ್ಕೂ ಗಂಟುಬಿದ್ದಿತು. ಪಾವಟಿಗೆಯ ಮೇಲೆ ಹೆಜ್ಜೆಯ ಸಪ್ಪಳವು ಕೇಳಹತ್ತಿತು. ತಟ್ಟನೆ ಹೋಗಿ



ಅಡುಗೆ ಮನೆಯಲ್ಲಿ ಅಡಗಬೇಕೆಂದು ಅವಳ ಮನಸ್ಸಿಗೆ ತೋರಿತು. ಕೂಡಲೆ ಎನಿಸಿತು– ಇಡೀ ಜನ್ಮವೆಲ್ಲ ಹೀಗೆ ಅಡಗಿಕೊಂಡೇ ಇರಬೇಕೆ ? ಪುಕ್ಕಟೆ ಅಡುಗೆಯವಳಾಗುವದಿದ್ದರೆ ಅನ್ನಛತ್ರದಲ್ಲಿ ಆ ಕೆಲಸ ಮಾಡಿದರೆ ತಪ್ಪೇನು? ಏನಾದದ್ದಾಗಲಿ, ಆಯುಷ್ಯದ ಸೋಕ್ಷಮೋಕ್ಷವನ್ನು ಈಗಲೇ ಮಾಡಿಕೊಂಡುಬಿಡಬೇಕು.

ಕೋಣೆಯ ಬಾಗಿಲು ತೆರೆದದ್ದು ನೋಡಿ ರಮಾಕಾಂತನಿಗೆ ಆಶ್ಚರ್ಯವಾಯಿತು. ಒಳಗೆ ಬಂದು ದೀಪದ ಬಟನ್ ಒತ್ತುತ್ತ ಅವನು ಕೇಳಿದನು: "ಯಾರದು?"

"ನಾನು."

"ಹೆಸರಿಲ್ಲವೇನೇ?"

"ಬಿಸುಟಿಬಿಟ್ಟ ವಸ್ತು ಮನೆಯಲ್ಲಿ ಹೇಗದು ಇರುತ್ತದೆ?'

ವತ್ಸಲೆಯ ಸ್ವರದಲ್ಲಿ ಅವಳ ಅಂತಃಕರಣದ ವಿಷಾದವು ಮೂರ್ತಿಮಂತವಾಗಿ ಇಳಿದಿತ್ತು. ಇಷ್ಟರಲ್ಲಿ ದೀಪದ ಸ್ವಚ್ಛ ಪ್ರಕಾಶವು ರಮಾಕಾಂತನ ಮುಖದ ಮೇಲೆ ಬಿದ್ದಿತು. ಸಲೂನಿನಲ್ಲಿ ಅವನ ಕೂದಲಿಗೆ ಹಚ್ಚಿದ ಯಾವುದೋ ಗಂಧದೆಣ್ಣೆಯ ಉಗ್ರವಾಸನೆಯಿಂದ ವತ್ಸಲೆಗೆ ತುಂಬ ಹೇಸಿಗೆಯಾಯಿತು. ವಿದ್ಯುತ್ತಿಗೆ ಬೆಳಕಿನಲ್ಲಿ ಹೊಳೆಯುವ ಆ ಕೋಣೆಯೊಳಗಿನ ಸೋಗಿನ ಸೌಂದರ್ಯವೂ ಅವಳಿಗೆ ಅಷ್ಟೇ ಉಗ್ರವೆನಿಸಿತು.

"ಈ ಕೋಣೆಯೊಳಗೆ ಕಾಲಿಡಕೂಡದೆಂದು ಹೇಳಿದ್ದಿಲ್ಲವೇ?" ಸಿಡುಕಿನಿಂದಲೇ ಅವನು ಕೇಳಿದನು.

"ಒಪ್ಪಿದ್ದನ್ನೆಲ್ಲ ನಡಸಲೇಬೇಕೇ?"

"ಹೌದು."

"ಹಾಗಾದರೆ–ದೇವ ಬ್ರಾಹ್ಮಣರೆದುರು ನನ್ನ ಕೈ ಹಿಡಿದಿರಿ. ಈಗ ಅದೇ ಕೈಯಿಂದ"

ಥರಥರ ನಡುಗುತ್ತ ವತ್ಸಲೆಯು ಸುರಂಗೆಗೆ ಬರೆದ ಆ ಪತ್ರವನ್ನು ರಮಾಕಾಂತನ ಮೈಮೇಲೆ ಎಸೆದಳು.

ರಮಾಕಾಂತನು ಬೆಚ್ಚಿದ, ಆದರೆ ಅದೊಂದು ಕ್ಷಣ ಮಾತ್ರ. ಕೂಡಲೆ ಕೋಚಿನ ಮೇಲೆ ಕೂಡುತ್ತ ಅಂದನು "ಈ ಪತ್ರ ತೆಗೆದುಕೊಂಡು ನೀನೇನು ಮಾಡುವವಳು?"

"ಹೌದು, ನಿಜವಾಗಿಯೂ ನಾನೇನು ಮಾಡುವವಳು?" ಎಂಬ ಪ್ರಶ್ನೆ ವತ್ಸಲೆಗೆ ಬಿದ್ದಿತು. ಆದರೆ ಅವಳು ಪ್ರಸಂಗಾವಧಾನದಿಂದ ಹೇಳಿದಳು: "ಹುಡುಗಿಯರ ಶಾಲೆಯಲ್ಲಿ ಕೆಲಸ ಮಾಡುವವರು ನೀವು! ಮತ್ತೆ ಇಂಥ ಪತ್ರ–"

"ಯಾರಿಗೆ ಬೇಕಾಗಿದೆ ಆ ಕೆಲಸ? ತಂದೆಯವರು ಇರುವವರೆಗೆ ಅವರ ಕಣ್ಣೊಳಗೆ ಮಣ್ಣು ಎಸೆಯಲಿಕ್ಕೆ ಚನ್ನಾಗಿತ್ತು ಅದು. ಈಗ ನಾನು ಕೇವಲ ಕಲೆಯ ಉಪಾಸನೆ ಮಾಡುವವನಿದ್ದೇನೆ."

"ಕಲೆಯದೋ ಸುರಂಗೆಯದೊ?"

"ಇಬ್ಬರದೂ! ಸುರಂಗೆಯ ಸಹವಾಸದಲ್ಲಿ ಎಂಥೆಂಥ ಸುಂದರ ಕಲ್ಪನೆ

ಹೊಳೆಯುವವು. ಆದರೆ ನಿನ್ನ ಮುಖ ನೋಡಿದರೆ– ಕ್ಷಣದಲ್ಲಿ ಉಗಿಯೂ ಕೂಡ ಮಂಜುಗಡ್ಡೆಯಾದೀತು."

"ಹಾಗಾದರೆ ನನ್ನನ್ನು ಯಾಕೆ ಮದುವೆಯಾದಿರಿ?"

"ನಾನೆಲ್ಲಿ ಮಾಡಿಕೊಂಡೆ ನಿನ್ನ ಕೂಡ ಲಗ್ನ? ನನ್ನ ತಂದೆಯವರು...."

"ಆಗ ನೀವು ಚಿಕ್ಕ ಮಗುವಾಗಿರಲಿಲ್ಲವಲ್ಲ?"

ರಮಾಕಾಂತನು ಬಾಯಿಂದ ಸಿಳ್ಳುಹಾಕಹತ್ತಿದನು. ತುಸು ಹೊತ್ತಿನ ಮೇಲೆ ವತ್ಸಲೆಗೆ ಕೇಳಿದ "ನೀನನ್ನುವುದಾದರೂ ಏನು?"

"ನನಗೆ ನಿಮ್ಮ ಪ್ರೇಮ ಬೇಕು."

"ಭಿಕ್ಷೆ ಬೇಡುವುದರಿಂದ ಸಿಗುವುದಿಲ್ಲ ಪ್ರೇಮ."

"ಮಾರಲಿಕ್ಕಾದರೂ?"

"ಓಹೋ. ಆದರೆ ಕಸ್ತೂರಿಗಿಂತ ತುಟ್ಟಿ."

"ಇರಲಿ. ಅಷ್ಟು ಬೆಲೆ ನಾನು ಕೊಟ್ಟರೆ?"

"ಸೋದರಮಾವನ ಮನೆಯೊಳಗೆ ಬಕ್ಕರಿ ಬಡಿಯುವುದರಲ್ಲಿ ಹೋಯಿತು ನಿನ್ನ ಜನ್ಮ! ಏನಿದೆ ನಿನ್ನ ಹತ್ತಿರ ಕೊಡಲಿಕ್ಕೆ? ಬಾಯೊಳಗಿನ ಬುರುಗು?"

"ಬಾಯೊಳಗಿನ ಬುರುಗು ಯಾತಕ್ಕೆ ಬೇಕು? ಎದೆಯ ರಕ್ತ ಕೊಡುವೆ ಬೇಕಾದರೆ!"

"ಅದಕ್ಕೆ ರಕ್ತ ಸೇರುವುದಿಲ್ಲ! ಪ್ರೇಮವೆಂದರೆ ಹುಲಿಯಲ್ಲವಲ್ಲ! ಅದಕ್ಕೆ ಸೌಂದರ್ಯ ಬೇಕು."

ಸೌಂದರ್ಯ ! ಎದುರಿನ ಕನ್ನಡಿಯಲ್ಲಿ ತನ್ನ ಪ್ರತಿಬಿಂಬದ ಕಡೆಗೆ ರಮಾಕಾಂತನು ನೋಡುತ್ತಿರುವನೆಂಬುದು ವತ್ಸಲೆಯ ಲಕ್ಷ್ಯಕ್ಕೆ ಬಂದಿತು. ಆ ಕನ್ನಡಿಯ ಎರಡೂ ಬದಿಗೆ ಇಬ್ಬರು ಸುಂದರ ನಟಿಯರ ಮೋಹಕವಾದ ಚಿತ್ರಗಳಿದ್ದವು. ಆ ಚಿತ್ರಗಳ ನಡುವೆ ತನ್ನ ತೀರ ಸಾಮಾನ್ಯ ಚಿತ್ರವನ್ನು ನೋಡಿ ಅವಳು ಮೋರೆ ತಿರುವಿದಳು.

ರಮಾಕಾಂತನು ವಿಕಟವಾಗಿ ನಕ್ಕನು. ನಗೆಯ ದನಿ ಎಂಥದು? ಕರಗಸದ ಹಲ್ಲೇ ಅದು. ಕರ್ ಕರ್ರೆಂದು ಸಪ್ಪಳ ಮಾಡುತ್ತ ಮಾಡುತ್ತ ವತ್ಸಲೆಯ ಹೃದಯವನ್ನು ಕೊರೆಯುತ್ತ ಅದು ಗಾಳಿಯಲ್ಲಿ ಬೆರೆತುಹೋಯಿತು.

"ಇಂದು ನಿನಗೆ ಈ ಸುರಂಗೆಯ ಬಗ್ಗೆ ಮತ್ಸರ. ನಾಳೆ ಆ ಸುಲೋಚನೆ ಮೇಲಿಂದ ಮೇಲೆ ನನ್ನ ಕಡೆಗೆ ಬರಹತ್ತಿದಳೆಂದರೆ–"

ವತ್ಸಲೆಯ ಕಂಬನಿದುಂಬಿದ ಕಣ್ಣುಗಳಲ್ಲಿ ದ್ವೇಷದ ಸೆಳೆಯೊಂದು ಹೊಳೆಯಿತು. ಮಳೆ ಬೀಳುವಾಗ ಚಮಕಿಸಿ ಹೋಗುವ ಹಳದಿ ಕೆಂಪು ಮಿಂಚೋ ಏನೋ! ಬಿರುದನಿಯಲ್ಲಿ ಅವಳು ಕೇಳಿದಳು "ಎಲ್ಲಿಯವಳು ಈ ಸುಲೋಚನೆ?"

"ಎಲ್ಲಿಯವಳೊ ಯಾರಿಗೆ ಗೊತ್ತು? ಆಕೆಯ ವಿಷಯ ಇಷ್ಟೆಲ್ಲ ಚೌಕಸಿಮಾಡಿ ನಾನೇನೂ ಅವಳನ್ನು ಮದುವೆಯಾಗುವುದು ಅಷ್ಟರಲ್ಲೇ ಇದೆ."



"ಅಂದರೆ ಮದುವೆ ಇಲ್ಲದೇನೆ–"

ರಮಾಕಾಂತನು ಉಪಹಾಸದ ನಗೆ ನಕ್ಕು ಅಂದನು: "ಹುಂ! ಮತ್ತೇನು ಕಾಣಿಸಬೇಕು ನಿನಗೆ? ಆದರೆ ನನ್ನ ಮನಸ್ಸು ಎಷ್ಟು ಗಟ್ಟಿ ಇದೆ ಎಂಬುದನ್ನು ನಿನಗೆ ಹೇಳಿ ಏನು ಉಪಯೋಗ? ನೀನು ಮದುವೆಯ ಹೆಂಡತಿ ! ಒಂದು ದಿನವಾದರೂ ಚೇಷ್ಟೆಗಾಗಿ ನಿನ್ನ ಗಲ್ಲಕ್ಕೆ ಕೈ ಹಚ್ಚಿರುವೆನೇ ನಾನು ?"

"ನಾನಂತೂ ಹೇಳಿ ಕೇಳಿ ಕುರೂಪಿ. ಆದರೆ ಆ ರಂಭೆಯ ಮುಂದೆ–"

"ಇಡೀ ಜನ್ಮದಲ್ಲಿ ಇಷ್ಟೊಂದು ಸತ್ಯ ಮಾತಾಡಿದಿ ನೋಡು. ರಂಭೆ ಇರುವಳು ರಂಭೆ ಆ ಸುಲೋಚನೆ ಅಂದರೆ. ನೀನು ಅವಳನ್ನು ನೋಡಿದಿ ಎಂದರೆ ಹುಚ್ಚು ಹಿಡಿದು ಹೋಗುವಿ. ಬ್ರಹ್ಮನು ಸ್ಫೂರ್ತಿಯಿಂದ ಮಾಡಿರುವನು ಅವಳ ಮೂರ್ತಿಯನ್ನು."

"ನಿಮಗೆಲ್ಲಿ ಭೆಟ್ಟಿಯಾಯಿತು ಅವಳದು?"

"'ಬಕುಲ' ವಾರಪತ್ರಿಕೆಯ ಕಚೇರಿಯಲ್ಲಿ. ನನ್ನ ಕಥೆಗಳಲ್ಲಿಯ ಚಿತ್ರಗಳನ್ನು ಅವಳೇ ತೆಗೆಯುತ್ತಿರುವಳು."

ರಮಾಕಾಂತನು ಮುಂಗೈ ಮೇಲಿನ ಬಂಗಾರದ ಗಡಿಯಾರದ ಕಡೆ ನೋಡಿದ. ಎಂಟು ಹೊಡೆಯಲು ಬಂದಿತ್ತು. ಕನ್ನಡಿಯ ಮುಂದೆ ನಿಂತು ತಿದ್ದಿ ತೀಡಿದ ಕ್ರಾಪಿನ ಮೇಲೆ ಟೊಪ್ಪಿಗೆಯನ್ನು ಇಡಹತ್ತಿದನು.

ವತ್ಸಲೆಯು ಬಾಗಿಲಲ್ಲಿ ಹೋಗಿ ನಿಂತಳು. ಕೆಳದುಟಿಯ ಮೇಲೆ ಹಲ್ಲು ಕಚ್ಚಿ ಬಿಗುವಿನಿಂದ ಅಂದಳು: "ನಿಮಗೆ ನಾನು ಹೋಗಗೊಡುವುದಿಲ್ಲ."

"ಯಾರು ನೀನು?"

"ನಿಮ್ಮ ಧರ್ಮಪತ್ನಿ."

"ಅಂದರೆ ಕಾಲೊಳಗಿನ ಬೇಡಿ."

"ಬೇಡಿಹಾಕಿದ ಕೈದಿಯನ್ನು ಸೆರೆಮನೆಯ ಹೊರಗೆ ಹೋಗಗೊಡುವುದಿಲ್ಲ."

"ನೀನೇ ಒಪ್ಪಿಕೊಂಡದ್ದು ಒಳ್ಳೆಯದಾಯ್ತು ! ಮನೆಯೆಂದರೆ ಸೆರೆಮನೆ ! ಆದರೆ ಲಕ್ಷ್ಯದಲ್ಲಿಡು. ಇದೇ ಸೆರೆಮನೆಯಲ್ಲಿ ನೀನು ಜನ್ಮವೆಲ್ಲ ಕೊಳೆಯಬೇಕಾದೀತು."

"ಯಾಕೆಂದು?"

"ನೀನು ಹೆಂಗಸೆಂದು–ನಾನು–ನಾನು ಗಂಡಸು. ನನ್ನದೇನು? ಒಂದು ಕ್ಷಣದಲ್ಲಿ ಈ ಬೇಡಿಯನ್ನು ಮುರಿಯಬಲ್ಲೆ–" ಕೋಟು ಹಾಕಿಕೊಳ್ಳುತ್ತಲೇ ರಮಾಕಾಂತನು ಬೇಡಿಯನ್ನು ಮುರಿದೊಗೆಯುವೆನೆಂದು ಮಾಡಿದ ಅಭಿನಯ ನೋಡಿ ವತ್ಸಲೆಯ ಹೃದಯದಲ್ಲಿ ಬೆದರಿಕೆ ತುಂಬಿತು.

"ಆದರೆ–ಆದರೆ–ನಾನು ಅಂಥಾದ್ದು ಮಾಡಿದ್ದಾದರೂ ಏನು?"

"ನೀನು ಏನು ಮಾಡಿದ್ದೀಯೋ ಕೇಳು ಈ ಕನ್ನಡಿಗೆ. ನಿನ್ನೆಲ್ಲ ಪಾಪದ ಪಟ್ಟಿಯನ್ನು ಅದು ಓದಿ ಹೇಳುವುದು. ಸುರಂಗೆಯ ಗಾಯನ, ಸುಲೋಚನೆಯ ಚಿತ್ರಕಲೆ–ಒಂದಾದರೂ ಗುಣವಿದೆಯೆ ನಿನ್ನಲ್ಲಿ?"

"ಏನು ಮಾಡಲಿ ? ದೇವರೇ, ಏನು ಮಾಡಲಿ ನಾನು?" ಗದ್ಗದದಿಂದ ವತ್ಸಲೆಯು ಉದ್ಗಾರ ತೆಗೆದಳು.

ರಮಾಕಾಂತನು ಮೇಜಿನ ಡ್ರಾವರಿನಿಂದ ಒಂದು ವಹಿಯನ್ನು ಹೊರತೆಗೆದು ಅದರ ಒಂದು ಪುಟ ತೆರೆದು ವತ್ಸಲೆಯ ಕೈಯಲ್ಲಿ ಕೊಟ್ಟನು. ವತ್ಸಲೆಯು ಓದತೊಡಗಿದಳು.

"ಮದುವೆಯಾದ ಕೆಲವು ದಿವಸಗಳಲ್ಲಿಯೇ ವತ್ಸಲೆಯನ್ನು ಸಮೀಪದಿಂದ ನೋಡಿದೆ. ಮನಸ್ಸಿಗೆ ದೊಡ್ಡ ಧಕ್ಕೆ ತಗಲಿತು. ನಿಶ್ಚಯ ಮಾಡುವಾಗ ತಂದೆ ಹೇಳಿದ್ದರು 'ಹುಡುಗಿ ಸಾದುಗಪ್ಪು' ಎಂದು. ಅವರ ಆಯುಷ್ಯವೆಲ್ಲ ಕಳೆದದ್ದು ಪೋಲೀಸಖಾತೆಯಲ್ಲಿ. ಅದಕ್ಕೆಂದೇ ಅವರಿಗೆ ಅವಳು ಸಾದುಗಪ್ಪಾಗಿ ಕಂಡಿರಬೇಕು. ಅವಳ ಬಣ್ಣ ನೋಡಿ ನನಗೆನಿಸಿತು–ಕೊಂಕಣದ ಕೂಲಿಕಾರ ಹೆಂಗಸರು ಪರೇಳದಲ್ಲಿ ಇರುವರಲ್ಲ–ಅವರಲ್ಲಿ ಅವಳು ಸಹಜವಾಗಿ ಕೂಡಿಕೊಂಡು ಹೋಗಬಹುದು.

ಇಂಥ ಹೆಂಡತಿಯ ಕೂಡ ಇಡೀ ಜನ್ಮ ಕಳೆಯುವುದೇ? ಅದಕ್ಕಿಂತ ಜೀವ ಕೊಟ್ಟರೇನು ಕೆಟ್ಟದು? ಕಲೆ ಹಾಗೂ ಸೌಂದರ್ಯ ಇವು ನನ್ನ ಜೀವನ. ಅವುಗಳ ಕೂಡ ಈಕೆಯದು ಬದ್ಧವಿರೋಧವೆಂದು ಕಾಣುತ್ತದೆ. ಗಂಡಹೆಂಡಿರ ನಡುವೆ ಎರಡು ಧ್ರುವಗಳ ಅಂತರ!

ಎರಡು ಧ್ರುವಗಳು ಎಂದಾದರೂ ಒಂದಾಗಬಹುದೇ?"

ರಮಾಕಾಂತನನ್ನು ನೋಡಲೆಂದು ವತ್ಸಲೆಯು ಮೋರೆ ಎತ್ತಿದಳು. ಆದರೆ ಆತ ಯಾವಾಗಲೋ ಹೊರಟು ಹೋಗಿದ್ದ. ಕೈಯಲ್ಲಿದ್ದ ವಹಿಯ ಮೇಲಿನ ಚಿತ್ರದ ಕಡೆಗೆ ಅವಳ ಲಕ್ಷ್ಯವು ಹರಿಯಿತು. ತೆರೆದ ಕೊರಳು, ಸರಿದುಹೋದ ಸೆರಗು, ಓರೆ ನೋಟ, ಸುಂದರ ಮುಖ–ಇವನ್ನೂ ತನಗೆ ತೋರಿಸಿ ಆ ಚಿತ್ರದಲ್ಲಿಯ ತರುಣಿ ಅನ್ನುತ್ತಿದ್ದಳೇನೊ, "ನನ್ನ ನಿನ್ನ ನಡುವೆ ಎರಡು ಧ್ರುವಗಳ ಅಂತರ" ಎಂದು.

ತನಗಿಂತಲೂ ಈ ನಿರ್ಜೀವ ಚಿತ್ರವು ರಮಾಕಾಂತನಿಗೆ ಹೆಚ್ಚು ಮೆಚ್ಚಿನದೆಂಬ ವಿಚಾರವು ಅವಳ ತಲೆಯಲ್ಲಿ ಬಂದಿತು. ತಿರಸ್ಕಾರದಿಂದ ಅಂಟಿಸಿದ ಆ ಚಿತ್ರವನ್ನು ಕಿತ್ತಿ ತೆಗೆದು ಹರಿದು ಚೂರುಚೂರು ಮಾಡಿದಳು. ಆ ಚೂರುಗಳನ್ನು ಕೆಳಗೆ ಎಸೆಯಬೇಕೆಂದು ಗ್ಯಾಲರಿಗೆ ಬಂದಳು.

ವಿದ್ಯುತ್ತಿನ ಝುಗಝುಗದಿಂದ ಶೋಭಿಸುವ ಎದುರಿನ ಮಾಟಾದ ಬಂಗಲೆಯು ಅವಳ ದೃಷ್ಟಿಗೆ ಬಿದ್ದಿತು. ಕಮಲಗಳನ್ನು ಏರಿಸಿದ ಒಂದು ಸುಂದರಮೂರ್ತಿಯಂತೆ ಅದು ಕಾಣುತ್ತಿತ್ತು. ಈ ಥಳಕು ಪಳಕಿನ ಕಾರಣವು ಅವಳ ಧ್ಯಾನಕ್ಕೆ ಬಂದಿತು. ಸಂಜೆಯ ಮುಂದೆ ಚಾಕರಿ ಹುಡುಗನು ಹೇಳುತ್ತಿದ್ದ: "ಎದುರಿನ ಬಂಗಲೆಯ ಬಾಯಿಯವರ ಕಡೆಗೆ ಒಬ್ಬ ಜಹಾಗಿರದಾರರು ಈ ಹೊತ್ತು ಬರುವವರಿದ್ದಾರೆ" ಎಂದು.

ವತ್ಸಲೆಯು ಕಾಗದದ ತುಣುಕುಗಳನ್ನು ಕೆಳಗೆ ತೂರಿದಳು. ಗಾಳಿಯ ಮೇಲೆ ತೇಲುತ್ತ ತೇಲುತ್ತ ಅವು ಕೆಳಗೆ ಹೋದವು. ಅವಳಿಗೆ ತೋರಿತು–ರಮಾಕಾಂತನು ಮಾಡಿದ ತನ್ನ ಅಂತಃಕರಣದ ಚೂರುಗಳನ್ನು ಎಲ್ಲಿ ಎಸೆಯುವುದು? ಹೀಗೇ ಗಾಳಿಗುಂಟ?



ಎದುರಿನ ಬಂಗಲೆಯ ಗೋಡೆಗೆ ಹೊಂದಿ ಕಾಲುದಾರಿಯ ಮೇಲೆ ಒಬ್ಬ ತಿರುಕನು ತನ್ನ ಹಾಸಿಗೆ ಹಾಸುವ ವಿಚಾರದಲ್ಲಿದ್ದ. ಬಂಗಲೆಯಿಂದ "ನೂಕರಿ ಆ ತಿರಕನ್ನ ಅತ್ತಕಡೆ" ಎಂದು ಯಾರೋ ಕೂಗಿಕೊಂಡರು.

"ದಿನಾ ನಾ ಇಲ್ಲೇ ಮಲಗತೀನಿಯಪ್ಪಾ."

"ಬಹಳ ವಹಿವಾಟೀ ಹಕ್ಕ ಹೇಳತಾನೆ ಮಗ. ನುಗಿಸಿಕೊಡಿರಿ ಅವನ್ನ. ಈ ಹೊತ್ತು ಜಹಾಗಿರದಾರ ಸಾಹೇಬರು ಬರುವವರಿದ್ದಾರೆ ! ಇದೆಲ್ಲೀ ಅನಿಷ್ಟ ಬಾಗಿಲಲ್ಲಿ?" ತಿರುಕನ ಉತ್ತರವೂ ಮುಂದಿನ ಸಂಭಾಷಣವೂ ವತ್ಸಲೆಗೆ ಕೇಳಿಬಂದವೆಂತಲ್ಲ. ಆದರೆ ಮೂಕ ಚಿತ್ರಪಟದಲ್ಲಿಯ ಹಾವಭಾವ ನೋಡಿ ಕಲ್ಪನೆ ಮಾಡಿಕೊಳ್ಳುವಂತೆ ಅವಳ ಮನಸ್ಸಿಗೆ ಆ ಸಂಭಾಷಣೆಯ ಅರ್ಥವಾಯಿತು.

ಅಚ್ಚುಕಟ್ಟಾಗಿ ಕಾಣುತ್ತಿದ್ದ ಆ ಬಂಗಲೆಯ ಕಡೆ ನೋಡ ನೋಡುತ್ತ ಆ ತಿರುಕನು ಹೋಗತೊಡಗಿದನು.

ಅವನು ಹೋದ ದಿಕ್ಕಿನ ಕಡೆಗೆಯೇ ನೋಡುತ್ತಿದ್ದ ವತ್ಸಲೆಯ ಕಣ್ಣುಗಳ ಮುಂದೆ ವಿದ್ಯುದ್ದೀಪದ ಬೆಳಕಿನಿಂದ ಕೂಡಿಸಿದ ಅಕ್ಷರಗಳು ಕುಣಿಯಹತ್ತಿದವು– **"ಎರಡು ಧ್ರುವ."**

## ೨

## ಅನಾಮಂತ್ರಿತ ಸಮ್ಮೇಳನ

ಕಾರು ವಾಯುವೇಗದಿಂದ ಸಾಗಿತ್ತು. ಆದರೆ ರಮಾಕಾಂತನಿಗೆ ಅದರ ವೇಗದ ಕಲ್ಪನೆಯಾಗಲಿ, ಅಥವಾ ಅದು ತನ್ನೊಡನೆ ಸ್ಪರ್ಧಿಸುತ್ತಿರುವದೆಂದು ಅದರ ಮೈಗೆ ಅಡರುವ ಚಳಿಗಾಳಿಯ ಕಲ್ಪನೆಯಾಗಲಿ ಇರಲಿಲ್ಲ. ಅವನಿಗೆ ಯಾತರ ಅರಿವೂ ಇರಲಿಲ್ಲ. ಗೂಡಿನಲ್ಲಿ ಒಂದರ ಪಕ್ಕದ ಕಾವಿನಲ್ಲೊಂದು ಮಲಗಿದ ಹಕ್ಕಿಯ ಮರಿಗಳಿಗೆ ಹೊರಗೆ ತಾಂಡವವಾಡುತ್ತಿರುವ ಬಿರುಗಾಳಿಯ ಅರಿವು ಎಲ್ಲಿ? ಸುರಂಗೆಯ ನಿಕಟವಾದ ಸಹವಾಸದಲ್ಲಿ ಸೌಂದರ್ಯಾಸಕ್ತವಾದ ಅವನ ಮನಸ್ಸು ಹೀಗೆಯೆ ತಲ್ಲೀನವಾಗಿಹೋಗಿತ್ತು. ನಡುನಡುವೆ ಒಂದೊಂದು ಹೊರಳಿಕೆಗೆ ಮೋಟರು ನರ್ತಕಿಯಂತೆ ಡೌಲಿನಿಂದ ತಿರುಗುತ್ತಿತ್ತು. ಆಗ ವಿದ್ಯುದ್ದೀಪದ ಬೆಳಕಿನ ಗೆರೆಗಳು ಸುರಂಗೆಯ ಮನೋಹರವಾದ ಕೂದಲಿನ ಮೇಲಿಂದ ಬೆಂಡೋಲೆಯ ಮೇಲೂ, ಬೆಂಡೋಲೆಯಿಂದ ಬಳೆಯ ಮೇಲೂ ಕುಣಿಯುತ್ತ ಕುಣಿಯುತ್ತ ಮಾಯವಾಗುತ್ತಿದ್ದವು. ಆ ಮೋಹಕ ದೃಶ್ಯವನ್ನು ನೋಡಿದಾಗ ನಾವೆಗಳಲ್ಲಿಯ ದೀಪಗಳ ಬೆಳಕು ನೀರ ಮೇಲೆ ಕುಣಿಯುತ್ತಿದ್ದುದನ್ನು ತಾನು ಚಿಕ್ಕವನಿದ್ದಾಗ ಕಂಡ ಸಂಗತಿಯು ರಮಾಕಾಂತನಿಗೆ ನೆನಪಾಗುತ್ತಿತ್ತು. ರಾತ್ರಿಯಲ್ಲಿ ಬಂದರಕ್ಕೆ ಹೋಯಿತೆಂದರೆ ಆ ನಾವೆಗಳಲ್ಲಿಯ ದೀಪಗಳ ಶೋಭೆಯು ಅವರ್ಣನೀಯವಾಗಿ ತೋರುತ್ತಿತ್ತು. ಸಮುದ್ರದ ಕಪ್ಪು–ನೀಲಿ ನೀರ ಮೇಲೆ ಉದ್ದುದ್ದಾದ ಬೆಳಕುಗೆರೆ ಕುಣಿಯುವುದನ್ನು ನೋಡಿ ಅವನ ಬಾಲಹೃದಯವು

ಕುಣಿಯುತ್ತಿತ್ತು. ಈ ಹೊತ್ತು ಸುರಂಗೆಯೂ ಅವನಿಗೆ ಸಾಗರದೇವಿಯಂತೆ ತೋರಿದಳು. ಕಪ್ಪು ನೀರ ತಳದಂತೆ ಕಾಣುವ ಅವಳ ಚೆಂದಾದ ಕೂದಲು, ಆಟಗುಳಿಯಾದ ತೆರೆಗಳಂತೆ ಗಾಳಿಯ ಕೂಡ ಕುಣಿದಾಡುವ ಅವಳ ಮುಂಗುರಳು, ವಿಹಾರ ನೌಕೆಯಂತೆ ತುರುಬಿನ ಮೇಲೆ ತೊನೆದಾಡುವ ಹೊನ್ನ ಹೂವು–ಸಾಗರಿಕೆಗೂ ಅವಳಿಗೂ ಅಂತರವೇನಿತ್ತು? ಸಾಗರಿಕೆಯು ನಗುತ್ತ ಕೆಲೆಯುತ್ತ ದಂಡೆಗೆ ಕಿವಿ ಹಚ್ಚಿ ಮಾತುಕತೆಯಾಡುವಂತೆ ಅವಳು ನಡುನಡುವೆ ಅವನ ಕೂಡ ಮುದ್ದಾಟದಿಂದ ಮಾತಾಡುತ್ತಿದ್ದಳು. ವತ್ಸಲೆಯ ಸಂಗಡ ಗಳಿಗೆಯ ಹಿಂದೆ ನಡೆದ ಜಗಳ ಅವನಿಗೆ ಆ ಸುಖಸಾಗರದಲ್ಲಿಯ ಒಂದು ಕಲ್ಲು ಬಂಡೆಯಂತೆ ಕಂಡಿತು.

ಕಾರು ಗಕ್ಕನೆ ನಿಂತನು. ಡ್ರಾಯವ್ಹರನು ಜೋರಿನಿಂದ ಬ್ರೇಕು ಹಚ್ಚಿದನು.

"ಸಾಯಬೇಕಂತೀದೇನಲೆ ಮಗನೆ? ಕಣ್ಣು ಇಂಗ್ಯಾವೇನ?" ಎಂದು ಡ್ರಾಯವ್ಹರ ಕೂಗಿದ.

ರಮಾಕಾಂತ ಸುರಂಗೆ ಇಬ್ಬರೂ ಹೊರಗೆ ನೋಡತೊಡಗಿದರು. ಬುಟ್ಟಿ ಹೊತ್ತ ಒಬ್ಬ ಹಮಾಲನು ತೂಗಾಡುತ್ತ ಮೋಟಾರಿಗೆ ಅಡ್ಡ ಬಂದಿದ್ದನು.

ರಮಾಕಾಂತನು ನಕ್ಕು "ಮನೆಯೊಳಗೆ ಮಕ್ಕಳಿಗೆ ಹಾಲು ಕೂಡ ಇರಲಿಕ್ಕಿಲ್ಲ. ಈತ ಮಾತ್ರ ಯಥೇಚ್ಛವಾಗಿ ಸೆರೆ ಕುಡಿಯುತ್ತಾನೆ" ಅಂದ.

"ನಾ–ನಾನು–ಸೆರೆ ಕುಡಿತೀನಿ. ನೀ–ನೀ–ಮೋ–ಟಾರಿನಾಗ ಕುಂದರತಿ."

ಕಾರು ಮತ್ತೆ ಮುಂದೆ ನಡೆದದ್ದರಿಂದ ಆ ಸೆರೆ ಕುಡುಕನ ಮಾತು ರಮಾಕಾಂತನಿಗೆ ಅರ್ಧಮರ್ಧ ಕೇಳಿದವು. ಡ್ರಾಯವ್ಹರ ಆಡಿದ "ಮಗ–ಮನ್ಯಾಗ ಮೃತ್ಯುಪತ್ರ ಬರದಿಟ್ಟಾಂಗ ಬಂದಿದ್ದ."

ರಮಾಕಾಂತನು ನಕ್ಕು ಅಂದ "ಇವ ಯಾತರ ಮೃತ್ಯುಪತ್ರ ಮಾಡಬೇಕು? ಒಡಕ ಮಡಕಿಗಳದೇ, ಹರಕ ಕೌದಿಗಳದೇ?"

ಬಡವನಿಗೇ ಬಡವನ ಕೈವಾರಿಯಾಗಬೇಕೆಂದು ಅನಿಸುತ್ತದೆ. ರಮಾಕಾಂತನ ಈ ಪ್ರಶ್ನೆಯು ತನಗೆ ಸಮ್ಮತವಿಲ್ಲೆಂದು ತೋರಿಸುತ್ತ ಡ್ರಾಯವ್ಹರ ಅಂದ "ಬಡವಗೂ ಹೆಂಡರುಮಕ್ಕಳು ಇರತಾರ ಸಾಹೇಬ್."

"ಹೌದು; ಆದರೆ ಏಟು ತಿನ್ನಲಿಕ್ಕೆ ಮಾತ್ರ !" ರಮಾಕಾಂತ ಉದ್ಗಾರ ತೆಗೆದನು. ಸುರಂಗೆಯು ಮೈಮೇಲೆ ಮುಳ್ಳೆದ್ದಂತೆ ಮಾಡಿದ ಹಾಗೆ ಅವನಿಗೆ ಭಾಸವಾಯಿತು.

ಅವನಂದ "ಬಹಳೇ ತಣ್ಣಗಿನ ಗಾಳಿ ಬಿಟ್ಟಿದೆ ಈ ಹೊತ್ತು."

ಸಹಜವಾಗಿ ಪರಾಜಯವನ್ನು ಒಪ್ಪಿಕೊಳ್ಳುವಷ್ಟು ಡ್ರಾಯವ್ಹರನು ಪೆಚ್ಚನಿರಲಿಲ್ಲ. ಹಿಂದೆ ಕತ್ತು ತಿರುಗಿಸಿ ಅವನಂದ "ಸಾಹೇಬ್, ಬಡಮಂದಿ ಹೆಂಡರನ್ನು ಬಡೀತಾರ ಈಟsಸ. ಅದರ ನಿಮ್ಮ ಬಿಳಿ ಅಂಗಿ ಮಂದೀದು ಅಗಸರವ ಘಳಿಗಿ ಹಾಕಿದ ಅರವೀ ಈಟs ನೋಡಬೇಕು, ಮನಸ ನೋಡಿದರ ಡಾಂಬರಕ್ಕಿಂತ ಕಪ್ಪು ಇರತ್ರೈತಿ."



ಹಿಂದಿನಿಂದ ಮತ್ತೊಂದು ಕಾರು ಹೆಚ್ಚು ವೇಗದಿಂದ ಬರುತ್ತಿತ್ತು. ಅದಕ್ಕೆ ಎಡೆಗೊಡಲೆಂದು ಡ್ರಾಯವ್ಹರನು ಗಾಲಿಯನ್ನು ಸ್ವಲ್ಪು ತಿರುವಿದ. ಗಾಲಿಯೊಡನೆ ಅವನ ವಿಚಾರಗಳೂ ಹೊರಳಿದವು. ಅವನೆಂದ "ಸಾಹೇಬ್, ಈ ಕುಡುಕರು ಹೆಂಡರಿಗೆ ಬಡೀತಾರ ಕರೇವು. ಆದರ ಅವರಿಗೆ ಮಾಯಾ–ಮಮತಾ ಏನ ಕಮ್ಮಿ ಇರಾಣಿಲ್ಲ. ಯೋಳೆಂಟು ವರ್ಸದ ಹಿಂದಿನ ಕತಿ, ಆದರೂ ಮತ್ತಮತ್ತ ನೆಪ್ಪಾಗತ್ರೈತಿ ನನಗ" ರಮಾಕಾಂತನ ಮೈಯಲ್ಲಿಯ ಕಥಾಲೇಖಕನ ರಕ್ತವು ಕಥೆ ಕೇಳಲಿಕ್ಕೆ ಉತ್ಸುಕವಾಯಿತು. ಅವ ಕೇಳಿದ "ಯಾವ ಕಡೆಯವನೋ ನೀನು?"

"ಕೊಂಕಣದವರಿ. ವೆಂಗುರ್ಲೇದ ಕಡ್ಯಾವ, ಸಾಹೇಬ್."

"ಅಲ್ಲೇನು ಮಾಡತಿದ್ದಿ?"

"ಢಮಣಿ ಹೊಡಿಯೋ ಧಂದೆ ಮಾಡತಿದ್ದನರಿ. ಈ ಮೋಟರ ಬಂದು ನಮ್ಮ ಹೊಟ್ಟಿಮ್ಯಾಗ ಕಾಲಕೊಟ್ಟಿತರಿ. ಒಂದಲ್ಲ ನಾಕೂ ಕಾಲ ಕೊಟ್ಟಿತು, ಸಾಹೇಬ್."

ಅವನ ಆಟಗಾರಿಕೆಯ ವೃತ್ತಿಯನ್ನು ನೋಡಿ ರಮಾಕಾಂತ ಹಿಗ್ಗಿದ.

"ಇಂದಿಗೆ ಯೋಳು ವರ್ಸಾತು. ಮೋಟರ ನಡಸತೀನರಿ. ಆದರ ಢಮಣಿ ಮಜಾ ಇಲ್ಲ ಬಿಡರಿ ಈ ಮೋಟಾರಿನ್ಯಾಗ ! ಇಲ್ಲೇನೈತಿ ? ಪೆಟ್ರೋಲ ಹಾಕು, ನೀರ ಸುರುವು–ಹ್ಯಾಂಡಲ ತಿರುವು–ಏನ ಯಾರ ಬೆನ್ನ ಛಪ್ಪರಸೋದಿಲ್ಲ, ಯಾರ ಗೋಣ ತುರುಸೂದಿಲ್ಲ, ಯಾರಿಗೂ ಹುಲ್ಲಿನ ಪೆಂಡಿ ತಿನಸೂದಿಲ್ಲ."

ಮೋಟಾರಿಗಿಂತ ಎತ್ತಿನ ಬಂಡಿಯು ಹೆಚ್ಚಿನದೆಂದು ತಿಳಿಯುವ ಆ ಹಳ್ಳಿಗಾಡ ಡ್ರಾಯವ್ಹರನನ್ನು ನೋಡಿ ರಮಾಕಾಂತನಿಗೆ ನಗು ಬಂದಿತು. ಆದರೆ ಅವನು ನೋಡಿದ–ಸುರಂಗೆಯು ತನ್ನ ಎಡದ ಅಂಗೈಯ ಮೇಲೆ ಗದ್ದವನ್ನೂರಿ ಡ್ರಾಯವ್ಹರನ ಮಾತುಗಳನ್ನು ಉತ್ಸುಕತೆಯಿಂದ ಕೇಳುತ್ತಿದ್ದಳು. ಅವಳ ಅಷ್ಟು ಮೋಹಕವಾದ ಆ ಮೂರ್ತಿಯನ್ನು ಕಣ್ಣು ತುಂಬ ನೋಡಬೇಕೆಂದು ರಮಾಕಾಂತನು ಡ್ರಾಯವ್ಹರನ ಗ್ರಾಮ್ಯವನ್ನು ಹೊಡೆದುಹಾಕುವ ಯತ್ನವನ್ನು ಸ್ವಲ್ಪವೂ ಮಾಡಲಿಲ್ಲ.

"ಢಮಣಿ ಅಂದರೆ ಢಮಣೀನರಿ ಸಾಹೇಬ್. ನಮ್ಮ ಅಂಬೋಲಿ ಘಟ್ಟಾ ದಾಟಾಕ ರಾತ್ರ್ಯಾಗ ಮೋಟಾರಿಗೆ ಪರವಾನಿಗಿ ಇಲ್ಲರಿ. ಇದ್ದರ ಸುದ್ದಾ ತಗೊಂಡೇನು ಮಾಡೂದೈತಿ? ಇದು ದೆವ್ವಿನಾಂಗ ಭರ್ರಂತ ಘಟ್ಟದಾಗಿಂದ ಹೋಗೂದು ! ಅದs ಢಮಣಿ ಇದ್ದ ಕಾಲಕ್ಕ ರಾತ್ರಿ ಒಂಬತ್ತಕ್ಕ ದಾನೋಲಿಂದ ಗಾಡಿ ಬಿಡೂದ್ರಿ. ಎತ್ತಿನ ಕೊಳ್ಳಾಗಿನ ಗೆಜ್ಜಿ ಘಲ್ ಘಲ್ ಅಲ್ಲಿಕ್ಕೆ ಹತ್ತಿದೂ ಅಂತ ಅಂದ್ರ ಎಂತಾ ಗಾಳಿ ತುಂಬಿದ್ದಂಗ ಆಗೂದು ಮೆಯ್ಯಾಗ! ದೆವ್ವದ್ದೂ ಹುಲೀದೂ ಕಿಂಮತ್ತಿಲ್ಲರಿ! ಒಮ್ಮೆ ಬೆಳಗಾವಿಂದ ವಾಡೀಗೆ ಮಂದೀನ್ನ ಕರಕೊಂಡ ಹೋಗಿದ್ದನರಿ. ಬೆಳಗಿನಾಗ ಗಾಡ್ಯಾಗಿನ ಹುಡುಗ ಅವ್ವಗ ಕೇಳತಿದ್ದನರಿ 'ರಾತ್ರೆಲ್ಲಾ ಲೇಜೀಮ ಯಾರ ಆಡತಿದ್ರs?' ಅಂತ. ಅವ್ವ ಹೇಳಿದ್ಲು ಘಟ್ಟದಾಗಿನ ದೆವ್ವಂತ. ಸಾಹೇಬ್, ಆ ಎತ್ತಗೋಳ ಲೇಜೀಮ ಹಿಂಗ ಸವಿಹತ್ತಿತ್ತರಿ ! ಇಲ್ಲದಿದ್ದರ ಈ ಮೋಟಾರಿನ ಪೊಂ–ಪೊಂ."

ಡ್ರಾಯುವ್ಹರನು ತೀರ ರಂಗಿಗೆ ಬಂದಿದ್ದ. ಮನುಷ್ಯನು ಆವೇಶದಿಂದ ಮಾತಾಡುತ್ತಿದ್ದನೆಂದರೆ ಹಾವಭಾವಗಳನ್ನು ಮಾಡುವನು. ಕಾರಣವಿಲ್ಲದೆ ಅವನು ಈ ಹೊತ್ತಿಗೆ ಹಾರ್ನು ಬಾರಿಸಿ ಮೋಟಾರಿನ ಸ್ವರವು ಕರ್ಕಶವೆಂಬ ತನ್ನ ಮಾತಿಗೆ ಪುಷ್ಟಿಯನ್ನು ಕೊಟ್ಟನು. ರಮಾಕಾಂತನಿಗಾದರೂ ಅವನ ಮಾತು ಮೊದಲಿನಗಿಂತ ಹೆಚ್ಚು ಮೋಜೆನಿಸ ಹತ್ತಿದವು.

"ಇಂದ ಹುಣ್ಣಿವಿ ಅಲ್ಲರಿ ಸಾಹೇಬ್ ? ಘಟ್ಟದಾಗ ಈ ದಿವಸ ಏನ ಚೆಂದರಿ ಅದು ! ಜಾತ್ರ್ಯಾಗ ಸುದ್ದಾ ಸಿಗಾಕಿಲ್ಲ ನೋಡಾಣಾಂತಂದರ. ಇನ್ನು ಸುದ್ದಾ ನನಗದು ಸ್ವಪನದಾಗ ಕಂಡ್ಹಂಗ ಆಗತೈತಿ– ತೆಲಿಮ್ಯಾಗ ಚಂದಪ್ಪ ಬಂದಾನ, ನೀರ ಬದಿಲೇ ಎತ್ತ ಬಿದಕೊಂಡಾವ, ಗಿಡಗಂಟಿ ಹೊಟ್ಯಾಗ ಕಾಲ ಹಕ್ಕೊಂಡು ಮಲಗ್ಯಾವ ಮತ್ತ ಒಬ್ಬ ಗಾಡಿಯವ ಯಾವದೋ ಒಂದು ನಾಟಕದಾಗಿನ ಹಾಡು ಇಂಪ ದನ್ಯಾಗ ಅಂತಾನ.

"ಈ ಚಂದಿರ ಮೇಲೆ ಬಂದರೂ
ಹೇ ಸುಂದರಿ
ಕಾರಿರುಳಿನ್ನೂ ಉಳಿದಿದೆ
ನಿನ್ನ ನೋಟವಲ್ಲದೆ ಯಾರದನು ಕಳೆವರೂ"

ಲಾವಣೀ ಮಟ್ಟದಿಂದ ಹಾಡುವ ಈ ಚರಣವನ್ನು ಡ್ರಾಯವ್ಹರನು ಸುಮಸುಮಾರು ಹಾಡಿಯೇ ತೋರಿಸಿಬಿಟ್ಟ. ಅವನ ಆ ವರ್ಣನೆಯನ್ನೂ ಗಾಯನವನ್ನೂ ಕೇಳಿ ರಮಾಕಾಂತನಿಗೆ ಕಾವ್ಯವು ಕೇವಲ ಕೋಮಲ ಪ್ರೇಮಕಥೆಗಳನ್ನು ಬರೆಯುವವರ ಜೀವನದಲ್ಲಿಯೇ ಇರದೆ ಗಟ್ಟಿಮುಟ್ಟಾದ ಗಾಡೀ ಹೊಡೆಯುವವರ ಜೀವನದಲ್ಲಿ ಸಹ ಹೊರ ಸೂಸುವದೆಂದು ಅನಿಸಿತು.

ಡ್ರಾಯವ್ಹರನ ಹಾಡಿನ ದನಿಯು ಗಾಳಿಯಲ್ಲಿ ಅಡಗಿಹೋಯಿತು. ರಮಾಕಾಂತ–ಸುರಂಗೆಯರು ಒಬ್ಬರ ಕಡೆಗೊಬ್ಬರು ನೋಡಿದರು. ಆ ಗಾಳಿಯೊಳಗಿನ ದನಿಯೇ ತಮ್ಮಿಬ್ಬರ ಕಣ್ಣಲ್ಲಿ ಹಾಡುತ್ತಿದ್ದಂತೆ ಅವರಿಗೆ ಭಾಸವಾಯಿತು. ಡ್ರಾಯವ್ಹರನು ಸ್ತಬ್ಧವಾಗಿಬಿಟ್ಟನು. ಅದೇನು ತನ್ನ ಘಟ್ಟದ ಮೇಲಿನ ಸವಿ ನೆನಪಿನ ಗುಂಗಿನಲ್ಲಿಯೇ ಅವನಿದ್ದನೊ ಏನೋ. ಆದರೆ ಅವನ ಕತೆಯನ್ನು ಕೇಳಲು ಉತ್ಸುಕನಾದ ರಮಾಕಾಂತನು ಅವನಿಗೆ ಸುಮ್ಮನೆ ಕೂರಗೊಡದೆ "ಹಾಗಾದರೆ ಮೋಟಾರು ನಿನಗೆ ಅಷ್ಟು ಆಗುವದಿಲ್ಲವೆನ್ನಬಾರದೇ?" ಎಂದು ಕೇಳಿದನು.

"ಹಾಂಗಲ್ಲ ಸಾಹೇಬ್. ಈ ಗಾಡಿ ಅಂದ್ರ ನನ್ನ ಮಗಳಿದ್ಹಂಗ. ಎರಡನೇದವರು ಯಾರಿಗೂ ಕೈ ಹಚ್ಚಿಗೊಡುದುಲ್ಲರಿ. ರಾತ್ರಿ ಇರ್ಲಿ ಅಪರಾತ್ರಿ ಇರ್ಲಿ ಈ ಗಾಡೀಗೆ ಬಾಡಿಗಿ ಬಂದರ ಡ್ರಾಯವ್ಹರ ನಾನsರಿ!"

"ಆದರೆ ಎತ್ತಿನ ಬಂಡಿ ಮೋಜೇನು ಇದಕ್ಕೆ–"

"ಹೌದು, ಅದು ಕರೇವ ಐತ್ರಿ ಸಾಹೇಬ್. ಮೋಟರ ಬಿಟ್ಟು ಇಮಾನ ನಡಸರಿ ನೀವು. ಆದರ ಎತ್ತಿನ ಗಾಡಿ ಮಜಾ ಏನು–"

"ಒಂದೇಸವನೆ ಧಕ್ಕೆ ತಿನ್ನೋದೇ, ಹೌದಲ್ಲೋ?" ರಮಾಕಾಂತನು ನಗುತ್ತ ಪ್ರಶ್ನೆಮಾಡಿದ.

"ಎತ್ತಿನ ಗಾಡ್ಯಾಗ ಜೀವ ಇರತೈತಿ ಸಾಹೇಬ್. ಮೋಟಾರ ಏನ್ರಿ ಯಂತ್ರ! ಹೆಣ!"



ರಮಾಕಾಂತನಿಗೆ ನಗು ಬಂದಿತು. ಟಾಲಸ್ಟಾಯ–ಗಾಂಧಿಯವರಂತೆ ಒಬ್ಬ ಯಃಕಶ್ಚಿತ್ ಡ್ರಾಯುವ್ಹರನಿಗೆ ಕೂಡ ಯಂತ್ರದ ಬಗ್ಗೆ ತಿರಸ್ಕಾರ ಹುಟ್ಟುವುದೆಂದರೆ ಅವನಿಗೆ ಆಶ್ಚರ್ಯವಾಯಿತು. ಎರಡು ತುದಿಗಳು ಜಗತ್ತಿನಲ್ಲಿ ಎಷ್ಟು ವಿಚಿತ್ರ ರೀತಿಯಿಂದ ಒಂದಾಗುವುದುಂಟು!

ರಮಾಕಾಂತನು ಡ್ರಾಯವ್ಹರನನ್ನು ಕೆಣಕಬೇಕೆಂದು ಮತ್ತೆ ಕೇಳಿದ "ಬರೀ ಜೀವ ತೆಗೆದುಕೊಂಡೇನು ಮಾಡುವದು? ಸುಖವಿದ್ದಿಲ್ಲವೆಂದರೆ–"

"ಛೇ ಸಾಹೇಬ್, ಹಂಗ್ಯಾಕಾದೀತರಿ. ಜೀವದ ಮಾತ ಬ್ಯಾರೆ, ಸುಖದ ಮಾತ ಬ್ಯಾರೆ. ನಮ್ಮನಿಯಾಕಿಗೆ ಮೈಲಿ ಎದ್ದಿದ್ದೂರಿ–ಬಾಳ ಕೆಟ್ಟ ಕಾಣಸಾಕ ಹತ್ತಿತರಿ ಮಾರಿ. ಸಾಹೇಬ್, ನಾ ನಮ್ಮೂರ ರಾಮೇಶ್ವರಗ ಹರಕಿ ಹೊತ್ತೆ 'ಮನೆಯಾಕಿಗೆ ನೆಟ್ಟಗಾಗಲಿ, ವರಸಾ ನಿನಗ ಬಾಳೀ ಘಡಾ ಕೊಡತೀನಿ' ಅಂತ."

"ಎದ್ದಳೇನು ಅವಳು ನೆಟ್ಟಗಾಗಿ?"

"ನಮ್ಮ ರಾಮೇಶ್ವರ ಅಂದ್ರ ಬಾಳ ಜಾಗರತ ದೇವ್ರ್ರಿ ! ಆಕಿಗೆ ನೆಟ್ಟಗಾತರಿ, ರಾಮೇಶ್ವರನ ಪುಣೇದಿಂದ ಎರಡು ಮಕ್ಕಳು ಮರಿನೂ ಆದುವರಿ ಆಕಿಗೆ. ಸಾಹೇಬ್ ಹಿಂಗ ನಿದ್ದೀ ಕಟ್ಟೊ ಪಾಳಿ ಬಂತ ನೋಡರಿ; ನಾ ಮಕ್ಕಳು ಮರಿ ನೆಪ್ಪು ಮಾಡಿಕೋತೀನರಿ. ಆಗ ಒಮ್ಮೆಗೆ ಮನಸಿಗೆ ಹೌರಗ ಆಕ್ಕೈತಿ ನೋಡರಿ."

ರಮಾಕಾಂತನ ಕಣ್ಣೆದುರಿಗೆ ವತ್ಸಲೆಯ ದೀನ ಮೂರ್ತಿಯು ನಿಂತಿತು. "ನನಗೆ ನಿಮ್ಮ ಪ್ರೇಮ ಬೇಕು" ಈ ಅವಳ ಶಬ್ದಗಳು ಅವನ ಕಿವಿಯಲ್ಲಿ ಕಟ್ಟಿದಂತಾದವು. ಅವನಿಗೆ ಒಂದು ಕ್ಷಣಮಾತ್ರ–ಅರ್ಧ ಕ್ಷಣವಾದರೂ ಆದೀತು–ಎನಿಸಿತು, ಡ್ರಾಯವ್ಹರನಿಗೆ ಮೋಟರು ತಿರುಗಿಸಲಿಕ್ಕೆ ಹೇಳಿ, ಲಗುಬಗೆಯಿಂದ ಮನೆಗೆ ಹೋಗಿ ವತ್ಸಲೆಗೆ ಅನ್ನಬೇಕು 'ನನ್ನ ಪ್ರೇಮ ಬೇಕಲ್ಲವೇ ನಿನಗೆ? ಇಗೋ ಹಾಗಾದರೆ'..... ಆದರೇನು, ವಿಚಾರದ ಕ್ಷಣಿಕ ಲಹರಿಯೆಂದರೆ ಹೊನ್ನಿಯ ಹೊಳಪಿದ್ದಂತೆ. ಅದರಿಂದ ಕತ್ತಲೆಯು ಬೆಳಗುವುದರ ಬದಲು ಹೆಚ್ಚು ಭಯಂಕರವೆನಿಸುವ ಸಂಭವವೇ ಬಹಳ ! ತಿರುಗಿ ಹೋಗುವ ವಿಚಾರವು ಮನಸ್ಸಿನಲ್ಲಿ ಮೂಡಿತೋ ಇಲ್ಲವೋ ಅಷ್ಟರಲ್ಲಿ ರಮಾಕಾಂತನು ಸುರಂಗೆಯ ಕಡೆಗೆ ನೋಡಿದ. ಬೆಳದಿಂಗಳಲ್ಲಿ ನಸು ಹೊಳೆಯುವ ಅವಳ ಕೂದಲು, ಅರಳಿದ ಸುಗಂಧಿಯಂತೆ ಬರುವ ಅದರ ಸುವಾಸ, ಡ್ರಾಯವ್ಹರನ ಮಾತು ಕೇಳಲಿಕ್ಕೆಂದು ಸ್ವಲ್ಪು ಹೊರಳಿದ್ದರಿಂದ ಹೆಚ್ಚು ಮನೋಹರವಾಗಿ ಕಾಣುವ ಅವಳ ಕೊರಳು, ಉಂಗುರದ ನೀಲವಾದ ಹರಳಿನಿಂದ ಎದ್ದು ಕಾಣುವ ಅವಳ ಕೈಯ ಬಿಳಿ ಬಣ್ಣ, ಸುಲೋಚನೆಯಂಥ ಚಿತ್ರಕಾರಳು ಮಾದರಿಗೆಂದು ಹೇಳಿ ಕೂಡಿಸಿದಂತೆ ತೋರುವ ಅವಳ ಮೋಹಕವಾದ ಕುಳಿತ ಮಾಟ, ಇವೆಲ್ಲವೂ ಆ ವಿಚಾರದ ಬಗ್ಗೆ ತನ್ನ ಕಡೆ ನೋಡಿ ಉಪಹಾಸದಿಂದ ನಗುತ್ತಿರುವಂತೆ ಅವನಿಗೆ ತೋರಿತು.

ಡ್ರಾಯವ್ಹರನು ಕಾರು ನಿಲ್ಲಿಸಿದ. ರಮಾಕಾಂತ ಸುರಂಗೆಯರ ಕೂಡ ತಾನೂ ಮಳಲಿನಲ್ಲಿ ಕೂಡಬೇಕೆಂದು ಅವನ ವಿಚಾರವಿದ್ದಿಲ್ಲ. ಅವರಿಬ್ಬರಲ್ಲಿಯ ಸಂಬಂಧವು ಅವನಿಗೆ

ಗೊತ್ತಿರಲಿಲ್ಲ. ಗೊತ್ತುಮಾಡಿಕೊಳ್ಳುವ ಕಾರಣವೂ ಇರಲಿಲ್ಲ. ಆದರೆ ಬೆಳದಿಂಗಳು ರಾತ್ರಿಯಲ್ಲಿ ಜುಹೂಕ್ಕೆ ಹೋಗುವ ಇಬ್ಬರು ಮನುಷ್ಯರಿಂದ–ವಿಶೇಷವಾಗಿ ಅವರು ಸ್ತ್ರೀ–ಪುರುಷರಿದ್ದರೆ–ತಾನು ದೂರದಲ್ಲಿ ಕೂಡಬೇಕೆಂದು ತಿಳಿಯುವಷ್ಟು ವ್ಯವಹಾರಜ್ಞಾನವು ಆತನಲ್ಲಿತ್ತು. ಅವನು ದೂರ ಹೋಗುತ್ತಿರುವುದನ್ನು ನೋಡಿ ಅವನಿಗೆ ರಮಾಕಾಂತನೆಂದ "ಅಲ್ಲೊ, ಆಗಳಿನ ನಿನ್ನ ಕತೆ ಅಲ್ಲಿಯೇ ಉಳಿಯತಲ್ಲ ! ಎಂಥ ಬೆಳದಿಂಗಳು ಬಿದ್ದಿದೆ! ಇಂಥ ಬೆಳದಿಂಗಳಲ್ಲಿ ಕುಳಿತು ಹರಟೆಹೊಡೆಯದಿದ್ದರೆ ಮತ್ತೆ–"

ಮಾತಾಡುತ್ತ ಆಡುತ್ತ ರಮಾಕಾಂತನು ಸಮುದ್ರದ ಕಡೆಗೆ ಮೋರೆಮಾಡಿ ಕುಳಿತುಕೊಂಡ. ಸುರಂಗೆಯು ಅವನಿಂದ ತುಸು ಅಂತರದ ಮೇಲೆ ಕುಳಿತಳು. ಡ್ರಾಯವ್ಹರನು ಸ್ವಲ್ಪ ದೂರವೇ ಇದ್ದ. ಅವನು ಹೇಳತೊಡಗಿದ–"ಕತಿ ಏನ ದೊಡ್ಡದಿಲ್ಲ ಸಾಹೇಬ್. ಅಂದರ ಈ ಕುಡುಕ ಮಂದಿಗೆ ಸೈತ ಮನಸಿನಾಗ ದಯಾ ಮಾಯಾ ಇರತೈತರಿ. ಯೋಳೆಂಟ ವರ್ಸ ಆಗಿದ್ದೀತರಿ ಆ ಮಾತಿಗೆ. ನಾ ಅದ ಈ ಧಂಧೇದಾಗ ಬಿದ್ದಿದ್ದನರಿ. ಕೊಂಕಣದಾಗಿನ ನಾವು ಇಬ್ಬರು ಮೂರು ಮಂದಿ ಒಂದೇ ಕ್ವಾಣ್ಯಾಗ ಇರತಿದ್ದಿವಿ. ಯಾವನೋ ಒಬ್ಬನ ಗೆಳೆಯ ಒಂದಿನ ನಮ್ಮ ಕ್ವಾಣ್ಯಾಗ ಬಂದನರಿ. ವಿಸಾ ತಿಂದೇನಂದರ ಸುದ್ದಾ ಒಂದು ಪೈ ಇದ್ದಿಲ್ಲ ಅವನ ಹಂತ್ಯಾಕ. ಮಗಾ ತನ್ನ ಪಗಾರೆಲ್ಲಾ ಜೂಜಿನಾಗ ಹಾಕ್ಕೊಂಡು ಕೂತಿದ್ದ. ನಡರಾತ್ರಿ ಹೊತ್ತರಿ ಕ್ವಾಣ್ಯಾಗ ಯಾರೋ ಅಳಾಕ ಹತ್ಯಾರಂತ ಅನಸಿ ನಾ ಚಟ್ಟನ ದೀಪಾ ಹಚ್ಚಿದನಿ. ನೋಡತೇನಿ, ಬಿಕ್ಕಿಬಿಕ್ಕಿ ಅತಗೋತ ಕುಂತಾನಲಾ ನಮ್ಮ ಗೆಣ್ಯಾ ಹಾಸಿಗಿ ಮ್ಯಾಗ. ನಾ ಸನೇಕ ಹೋಗಿ ಬೆನ್ನಮ್ಯಾಗ ಕೈಯಿಡಾಣಾ ಅವಗ ಅಗದೀ ಉಕ್ಕಿ ಬಂದುಬಿಟ್ಟಿತರಿ. ಅವ ಅಳಅಳಕೋತ ಅಂದ "ನನ್ನ ತುಳಸಿ ಸ್ವಪನದಾಗ ನನಗ ಕಂಡ್ಲು. ಚಿಂದಿ ಆದ ಸೀರಿ ಉಟಗೊಂಡಿದ್ಲು. ಆಕಿ ಅಂದ್ಲು 'ನೀವೆಲ್ಲಾ ರೊಕ್ಕಾ ಜೂಜಿನಾಗ, ಸೆರೇದಾಗ, ಹಾಕ್ಕೀರಿ. ನನಗ ಮಾನಾ ಮುಚಿಗೋಳಾಕ ಒಂದು ಗಟ್ಟಿ ಸೀರಿ ಸುದ್ದಾ ಇಲ್ಲ. ಹಿಂಗ ನಾ ಹೋಗಿ ಕಾಮಾಪುರದ ಕೆರ್‍ಯಾಗ ಜೀವಾ ಕೊಡತೀನಿ."

ರಮಾಕಾಂತನಿಗೆ ಈ ಕತೆಯಲ್ಲಿ ವಿಶೇಷವೇನೂ ಕಾಣಲಿಲ್ಲ. ಆದರೂ ಡ್ರಾಯವ್ಹರನಿಗೆ ಅವ ಕೇಳಿದ "ಮುಂದೇನು ಮಾಡಿದ ಆತ?"

"ಮಾಡತಾನೇನ್ರಿ ? ಒಂದೆಡ್ಡು ತುಡುಗ ಮಾಡಿದಾ ಮುಂಬಯಿದಾಗ ಸಿಗಬಿದ್ದ. ಸಣ್ಣ ಶಿಕ್ಷಾ ಆತರಿ. ಆದರೂ ಏನ ಅರವು ಬರಲಿಲ್ಲರಿ. ಕಡೀಕ ಕೊಂಕಣದಾಗಿನ ಒಂದು ದೊಡ್ಡ ತುಡಗಿನಾಗ ಸಿಕ್ಕ, ಯೋಳುವರ್ಸ ಶಿಕ್ಷಾ ಆತರಿ."

ಸುರಂಗೆಯ ಕಣ್ಣಲ್ಲಿ ನೀರು ಬಂದಂತೆ ರಮಾಕಾಂತನಿಗೆ ಭಾಸವಾಯಿತು. ನಕ್ಕು ಅವನಂದ "ಎಷ್ಟೊಂದು ಮೆತ್ತಗಿನದು ನಿನ್ನ ಮನಸ್ಸು?"

"ಇಶ್ಶ! ಉಸುಕಿನ ಕಣ ಹೋಯಿತು ಕಣ್ಣೊಳಗೆ."

"ಊದಲೇ ಹಾಗಾದರೆ?"

ಗಾಳಿ ತೀರ ನಿಂತಿತ್ತು. ಇಂಥ ಹೊತ್ತಿನಲ್ಲಿಯೂ ಸುರಂಗೆಯ ಕಣ್ಣಲ್ಲಿ ಉಸುಕಿನ



ಕಣವು ಹೋದದ್ದನ್ನು ನೋಡಿ ಡ್ರಾಯವ್ಹರನು ಅಲ್ಲಿಂದ ಕಾಲು ತೆಗೆದ. ಅವನು ದೂರ ಹೋದರೂ ಸುರಂಗೆ ಇನ್ನೂ ಕಣ್ಣು ತಿಕ್ಕುತ್ತಲೆ ಇದ್ದಳು.

"ಮತ್ತೆ ನಡುಗುವಿಯೆಷ್ಟು ಥರಥರ?" ರಮಾಕಾಂತನೆಂದ.

"ಗಾಳಿಯೇ ಬಿಟ್ಟಿದೆ ಹಾಗೆ."

"ನಾಳೆ ಜ್ವರ ಬಂದರೆ?"

"ಬಂದರೇನು?"

"ನಿಮ್ಮ ಮ್ಯಾನೇಜರನು ನನ್ನ ಹತ್ತಾರು ಪೀಳಿಗೆಯವರನ್ನು ಸ್ವರ್ಗಕ್ಕೆ ಕಳಿಸಿಯಾನು!"

"ಹೌದು ! ಆಗಲೆ ನಿಮ್ಮ ಮಾತಿನಲ್ಲಿ ಟಾನಿಕ್ ಎಂದು ಏನು ಬಂದಿತ್ತು!"

ರಮಾಕಾಂತನು ನೆನಪುಮಾಡಿಕೊಳ್ಳತೊಡಗಿದ. ತಾನು ಕಂಪನಿಯ ಬಿಡಾರಕ್ಕೆ ಹೋದ.....ಮ್ಯಾನೇಜರ ಅಂದರು "ಚಳಿಯ ದಿವಸ ಇವು. ಯಾಕೆ ಹೋಗುವಿರಿ ಜುಹೂಕ್ಕೆ? ಅದರಲ್ಲಿ ಸುರಂಗೆಯ ದೇಹಸ್ಥಿತಿ ನಾಜೂಕು. ಅವಳು ಇಂದು ಜುಹೂಕ್ಕೆ ಹೋದರೆ ನಾಳೆಗೆ ಆಸ್ಪತ್ರಿಯನ್ನೇ ಕಾಣಬೇಕಾದೀತು." ಅದಕ್ಕೆ ತಾನು ಉತ್ತರ ಕೊಟ್ಟ "ಡಾಕ್ಟರ ಬಿಲ್ಲು ನಾನು ಕೊಡತೇನೆ. ಆಯಿತಿಲ್ಲೊ?"

"ಆದರೆ ನೋಡಿರಿ ಕವಿಗಳೇ, ಜನರು ಏನಂದಾರು?"

"ಈಗೇನು ಅನ್ನುತ್ತಾರೆ?"

"ಏನನ್ನುತ್ತಾರೆ ?"

"ನನ್ನ ಬಾಯಿಂದ ಯಾಕೆ ಸುಮ್ಮನೆ ನುಡಿಸುವಿರಿ? ಸುರಂಗೆಗೆ ಬರುವ ಪತ್ರಗಳು–ಅವುಗಳಲ್ಲಿ ಏನೇನು ಇರುವದೋ ಅದನ್ನು–"

"ಜನರದೇನು? ಅವರು ಯಾವಾಗಲೂ ಕಡ್ಡಿ ಗುಡ್ಡ ಮಾಡುತ್ತಾರೆ."

"ನಾನು ಅನ್ನುವದಾದರೂ ಅದೇ. ಆದರೆ ಈ ಕಡ್ಡಿಯಿಂದಲೇ ಸುಂದರವಾದ ಆಸನಗಳನ್ನು ಮಾಡಲಿಕ್ಕೆ ಬರುವುದೆಂದು ಅವರಿಗೆಲ್ಲಿ ಗೊತ್ತು?"

ತನ್ನ ಈ ಸುಂದರ ಕೋಟಿಕ್ರಮದಿಂದ ಮ್ಯಾನೇಜರರ ಸಿಟ್ಟು ಅರ್ಧಕ್ಕರ್ಧ ಇಳಿಯಿತು. ನಗುನಗುತ್ತ ಅವರಂದರು: "ಲೇಖಕ ನೀವು, ನಿಮ್ಮ ಮಾತುಗಾರಿಕೆ ನನಗಿದ್ದರೆ ನಾನೂ ನಾಟಕಕಾರನೇ ಆಗಿಬಿಡುತ್ತಿದ್ದೆ."

ಆದರೆ ವಿದ್ಯುದ್ದೀಪದ ಬಟನ್ ಒತ್ತಿ ಚಟ್ಟನೆ ಆರಿಸಿದಂತೆ ಅವರ ನಗೆ ಮಾಯವಾಯಿತು. ತನ್ನ ಹತ್ತಿರ ಬಂದು ದನಿಯನ್ನು ಇಳಿಸಿ ಅವರಂದರು–"ಸುರಂಗೆಯು ಹಟವನ್ನೇ ಹಿಡಿದಿರುವಳು–ಹೋಗಲೇಬೇಕೆಂದು. ಮೇಲೆ ನಿಮಗೂ ವಿರಸವಾಗಬಹುದು. ಆದರೂ ನಿಮ್ಮ ಹಿತದ ಮಾತನ್ನೇ ಹೇಳುತ್ತೇನೆ–"

ಒಂದು ಆಳವಾದ ನೆಲಮನೆಯೊಳಗಿನಿಂದ ಬಂದಂತೆ ಅವರ ಸ್ವರವು ಕೇಳಬಂದಿತು.

"ಇಲ್ಲಿ ನೋಡಿರಿ ಕವಿಗಳೆ, ಇಂಥ ಪ್ರೇಮ–"

ತಾನು ಸಿಟ್ಟಿನಿಂದ ಉತ್ತರ ಕೊಟ್ಟನು "ಪ್ಲೆಟಾನಿಕ್ ಲವ್ಹ ಮತ್ತು–"

ಇಷ್ಟರಲ್ಲಿ ಕೂದಲ ಮೇಲೆ ಮೆಲ್ಲಗೆ ಕೈಯಾಡಿಸುತ್ತ ನೋಡುತ್ತ ಸುರಂಗೆ ಒಳಗೆ ಬಂದಳು. ಹೊರಡುವುದಕ್ಕೆ ಸಿದ್ಧಳಾಗಿಯೇ ಅವಳು ಬಂದಿದ್ದಳು. ಅವಳನ್ನು ನೋಡುತ್ತಲೆ ತನ್ನ ಮಾತು ನಡುವೆಯೇ ನಿಂತುಹೋದವು. ಮ್ಯಾನೇಜರನಿಗೆ ತನ್ನ ಪ್ರೇಮವು ಪ್ಲೆಟಾನಿಕ್ ಇರುವದೆಂದು ತಾನು ಹೇಳುತ್ತಿರುವಾಗ ಆ ಕೊನೆಯ ವಾಕ್ಯವು ಸುರಂಗೆಯ ಕಿವಿಗೆ ಬಿದ್ದಿರಬೇಕು. ನಿಮ್ಮ ಮಾತಿನಲ್ಲಿ ಅದೆಂಥ ಟಾನಿಕ್ ಬಂದಿತ್ತೆಂದು ಈಗಾಕೆ ಕೇಳಿದಳು. ಪಾಪ ಅವಳಿಗೆ ಪ್ಲೆಟಾನಿಕ್ ಎಂಬ ಶಬ್ದವು ಹೇಗೆ ಗೊತ್ತಿರಬೇಕು?

ವತ್ಸಲೆ ಹಾಗೂ ಸುರಂಗೆ ಇವರ ನಡುವಿನ ಶಿಕ್ಷಣದ ಈ ಅಂತರವು ರಮಾಕಾಂತನಿಗೆ ಮನಸ್ಸಿನೊಳಕ್ಕೆ ತಿಳಿಯದೆ ಇರಲಿಲ್ಲ. ಎಷ್ಟಾದರೂ ಸುರಂಗೆಯೊಬ್ಬ ಅಶಿಕ್ಷಿತ ನಟಿ. ಸುಂದರ ರೂಪದಿಂದಲೂ ಮಧುರ ಕಂಠದಿಂದಲೂ ನಾಟಕದಲ್ಲಿ ಅವಳ ಕೆಲಸವು ಚೆನ್ನಾಗಿ ನಡೆಯುತ್ತಿರಬಹುದು. ಆದರೆ ಅವಳ ಸಹವಾಸವು ತನಗೆ ಸ್ಫೂರ್ತಿದಾಯಕವಾಗಬಹುದೇ? ಅವಳ ಕಂಪನಿಯು ತನ್ನ ನಾಟಕವನ್ನು ಮಾಡಲು ತೆಗೆದುಕೊಂಡಿದ್ದರಿಂದ ಅವಳಿಗೂ ತನಗೂ ನಿಕಟ ಸಂಬಂಧವು ಉಂಟಾಯಿತು. ತನ್ನ ಇಡೀ ಆಯುಷ್ಯದಲ್ಲಿ ಕಲಾವಿದೆಯಾದ ತರುಣಿಯ ಕೂಡ ಸಲಿಗೆಯಿಂದಿರುವ ಸಂಧಿಯೇ ತನಗೆ ದೊರೆತಿರಲಿಲ್ಲ. ಆದ್ದರಿಂದಲೇ ತನ್ನ ಕಲಾಸಕ್ತವಾದ ಮನಸ್ಸು ಅವಳಿಗೆ ಮಾರುಹೋಗಿರಲಿಕ್ಕಿಲ್ಲವಷ್ಟೆ? ಚಿಕ್ಕಂದಿನಿಂದಲೂ ಕಥೆ–ಕಾದಂಬರಿಗಳಲ್ಲಿ, ನಾಟಕ–ಸೀನೇಮಾಗಳಲ್ಲಿ ಹಾಗೂ ಶಾಲೆ–ಕಾಲೇಜುಗಳಲ್ಲಿ ಯಾವ ಮಧುರ ಮೂರ್ತಿಯನ್ನು ಸ್ವಪ್ನದಂತೆ ತಾನು ನೋಡಿದನೊ ಅವುಗಳ ಸಮ್ಮೇಳನವು ಸುರಂಗೆಯಲ್ಲಿ ಆಗುವುದು ಶಕ್ಯವಿದೆಯೆ? ಇಲ್ಲವೆ–

ರಮಾಕಾಂತನು ಸುರಂಗೆಯ ಕಡೆಗೆ ನೋಡಿದ. ಅವನ ಎಲ್ಲ ಸುಂದರ ಸ್ವಪ್ನಗಳನ್ನು ಎರಕ ಹೊಯ್ದು ನಿರ್ಮಾಣ ಮಾಡಿದ ಪುತ್ಥಳಿಯಂತೆ ಅವಳು ಕಂಡಳು. ಅವಳನ್ನು ನೋಡಿ ಪ್ರಾಚೀನ ಕವಿಗಳು ಪ್ರಶಾಂತ ಸಮಯದಲ್ಲಿ ಲಕ್ಷ್ಮಿಯೇ ಸಮುದ್ರದಿಂದ ಹೊರಬಂದು ಕುಳಿತಿರುವಳೆಂದು ನಿಶ್ಚಯವಾಗಿ ಕಲ್ಪಿಸುತ್ತಿದ್ದರು. ಎದುರಿನ ನೀಲ ಸಮುದ್ರವೂ ಮೇಲಿನ ಬೆಳದಿಂಗಳ ಸಾಗರವೂ ಶಾಂತತೆಯ ಸಮುದ್ರದೊಡನೆ ಸಂಗಮವಾದಂತೆ ಭಾಸವಾಗುತ್ತಿತ್ತು. ಈ ಮೂರೂ ಸಮುದ್ರಗಳ ಮಂಥನ ಮಾಡಿದರೆ ಯಾವ ಅಮೃತವು ಹೊರಡಬಹುದೆಂದು ಕಲ್ಪಕತೆಯಿಂದ ರಮಾಕಾಂತನನ್ನು ಕೇಳಿದರೆ ಅವನು ಸುರಂಗೆಯ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿದ್ದನು. ಸಮುದ್ರದ ಮೇಲಿಂದ ಬರುವ ತಂಪುಗಾಳಿಯ ಸುಳಿಗಳು ಮೈಯಲ್ಲಿ ಮಧುರ ಕಂಪವನ್ನು ಉಂಟುಮಾಡುತ್ತಿದ್ದವು. ಸುರಂಗೆಯ ಲಾವಣ್ಯಲಹರಿಗಳೂ ರಮಾಕಾಂತನ ಮನಸ್ಸಿಗೆ ಅದರಂತೆಯೆ ಮೋಹಕವೆನಿಸಿದುವು. ಒಂದು ಸುಂದರಚಿತ್ರವನ್ನಾಗಲಿ ಸೃಷ್ಟಿಯಲ್ಲಿಯ ಮಧುರ ದೃಶ್ಯವನ್ನಾಗಲಿ ನೆಟ್ಟ ದೃಷ್ಟಿಯಿಂದ ನೋಡುವಂತೆ ರಮಾಕಾಂತನು ಅವಳನ್ನು ನೋಡುತ್ತಿದ್ದನು. ಸುರಂಗೆಯು ಯಾವುದೋ ಒಂದು ವಿಚಾರದಲ್ಲಿ ಮುಳುಗಿಹೋಗಿದ್ದರಿಂದ ಇದು ಅವಳ ಲಕ್ಷ್ಯಕ್ಕೆ ಬರಲಿಲ್ಲ. ತುಸು ಹೊತ್ತಿನ ಮೇಲೆ ರಮಾಕಾಂತನೆಂದ "ಸುರಂಗೆ. ನಿನ್ನ ವಯಸ್ಸೆಷ್ಟು?" ಸುರಂಗೆಯು ಬೆಚ್ಚಿ ನೋಡಿದಳು. ಅವನ ಆ ಪ್ರಶ್ನೆಯ ಓಘವೇ ಆಕೆಗೆ ತಿಳಿಯಲಿಲ್ಲ. ಅವಳು ಸಣ್ಣ ದನಿಯಲ್ಲಿ ಉತ್ತರ



ಕೊಟ್ಟಳು "ಊರೊಳಗಿನ ಜಾತ್ರೆಯ ದಿವಸ ನಾನು ಹುಟ್ಟಿದ್ದು. ಈ ಕಾರ್ತಿಕಕ್ಕೆ ಇಪ್ಪತ್ತುನಾಲ್ಕು ತುಂಬಿ ಇಪ್ಪತ್ತೈದು–"

"ಛೇ ! ಬಚ್ಚಿಡುತ್ತೀ ನೀನು–"

ಸುರಂಗೆಯ ಹುಬ್ಬು ಸ್ವಲ್ಪು ಕೊಂಕಿದವು. ತನ್ನ ಮೇಲೆ ಸುಳ್ಳು ಆರೋಪ ಮಾಡಿದ್ದಕ್ಕಾಗಿ ರಮಾಕಾಂತನ ಶಾಸನ ಮಾಡಬೇಕೆಂದು ಅವಳು ಸವ್ಯಸಾಚಿಯಂತೆ ಬಿಲ್ಲನ್ನೇ ಸಜ್ಜುಗೊಳಿಸುತ್ತಿರುವಳೇನೊ ಎಂಬಂತಿತ್ತು. ಆಕಾಶದಲ್ಲಿ ಕಾಮನಬಿಲ್ಲು ಮೂಡಿದ ಮೇಲೆ ಒಮ್ಮೊಮ್ಮೆ ಎದುರಿಗೆ ಅದರ ಪ್ರತಿಬಿಂಬ ಮೂಡಿ ಅಷ್ಟೇ ಸುಂದರವಾಗಿ ಕಾಣುತ್ತದೆ. ರಮಾಕಾಂತನಿಗೆ ಈಗ ಆ ಶೋಭೆಯ ನೆನಪಾಯಿತು.

"ನಿಜವಾಗಿಯೂ ನೀನು ವಯಸ್ಸನ್ನು ಬಚ್ಚಿಡುತ್ತಿರುವಿ."

"ಆಗಲಿ. ಎಪ್ಪತ್ತೈದು ವರ್ಷದ ಮುಪ್ಪಿನ ಮುದುಕಿ ನಾನು. ಈಗಾದರೂ ಆಯಿತೆ?" ಸುರಂಗೆಯು ಸ್ವಲ್ಪು ಸಿಡುಕಿನಿಂದಲೇ ನುಡಿದಳು.

ರಮಾಕಾಂತನು ಖೊಳ್ಳೆಂದು ನಗುತ್ತ ಅಂದನು: "ಕಳವು ಏನು ಒಂದೇ ತೆರದ್ದು ಇರುವುದೆಂದು ಕಾಣುತ್ತದೆ!"

"ನಾ ಒಲ್ಲೆ ತಾಯಿ. ನನಗೆ ತಿಳಿಯುವುದೇ ಇಲ್ಲ ನಿಮ್ಮ ಇಂಥ ಮಾತು. ನಾಟಕದೊಳಗೇನೋ ಅವು ಸರಿ. ಮುಂದೇನು ಉತ್ತರ ಕೊಡಬೇಕೆನ್ನುವದು ನಾಲಗೆಯ ಮೇಲೆಯೇ ಇರತದೆ."

ಸುರಂಗೆಯ ಈ ಅಣುಕು ಮಾತು ರಮಾಕಾಂತನಿಗೆ ಮಾರ್ಮಿಕವೆನಿಸಿತು. ಅವನೆಂದ: "ನಿನಗೆ ಇಪ್ಪತ್ತೈದನೆಯ ವರ್ಷವೇ ಈಗ? ಇದನ್ನು ಕೇಳಿ ಮ್ಯಾನೇಜರು ನಕ್ಕಾರು. ಅವರನ್ನುತ್ತಿದ್ದರು 'ತೀರ ಸಣ್ಣ ಹುಡುಗರಂತೆ ಜುಹೂಕ್ಕೆ ಹೋಗುವೆನೆಂದು ಹಟಹಿಡಿದಿರುವಳು' ಎಂದು."

ಸುರಂಗೆಯು ಒಮ್ಮೆಲೆ ಗಂಭೀರಳಾದಳು. ಸ್ವಲ್ಪು ಹೊತ್ತು ಸಮುದ್ರದ ಕಡೆ ನಿಟ್ಟಿಸಿ ನೋಡಿ ರಮಾಕಾಂತನಿಗೆ ಒಮ್ಮೆಲೆ ಅಂದಳು: "ನಿಜ ಹೇಳಲೇ?"

"ಹೌದು. ಸರಿಯಾಗಿ ಸಾಕ್ಷಿಗೆ ನಿಂತಂತೆ ಹೇಳು. ಅನ್ನು ದೇವರ ಸಾಕ್ಷಿಯಾಗಿ ಸತ್ಯ ಹೇಳುತೇನೆ, ಸುಳ್ಳು ಹೇಳುವದಿಲ್ಲ–"

ಸುರಂಗೆಯನ್ನು 'ಉಬ್ಬಿಸ'ಬೇಕೆಂದು ರಮಾಕಾಂತನು ಇದನ್ನಾಡಿಬಿಟ್ಟನು. ಆದರೆ ಇದರ ಪರಿಣಾಮವು ವಿಪರೀತವಾಯಿತು. ಅವಳು ಎಡಗೈಯ ಮುಷ್ಟಿಯನ್ನು ಗಟ್ಟಿಯಾಗಿ ಹಿಡಿದುಕೊಂಡು ಬಲಗೈ ಬೆರಳುಗಳನ್ನು ಅದರ ಮೇಲೆ ಆಡಿಸುತ್ತ ಸ್ತಬ್ಧಳಾಗಿ ಕುಳಿತಳು. ರಮಾಕಾಂತನ ಮನಸ್ಸಿನಲ್ಲಿ ವಿಚಾರ ಸುಳಿಯಿತು–ದೇವರ ಸಾಕ್ಷಿಯಾಗಿ ಸತ್ಯ ಹೇಳುವದು ! ಇರಲಿ, ಸುರಂಗೆಯು ತನ್ನ ಕಳೆದ ಆ ಇಪ್ಪತ್ತೈದು ವರ್ಷಗಳ ಆಯುಷ್ಯಕ್ರಮವನ್ನೇ ಇದ್ದಕ್ಕಿದ್ದಂತೆ ಹೇಳಹತ್ತಿದರೆ– ತನ್ನಿಂದ ಅದನ್ನು ಕೇಳುವದಾದರೂ ಆದೀತೇ?

ಆದರೆ ಸುರಂಗೆಯು ಸುಖವಾಗಿ ತನ್ನ ಎಡಮುಷ್ಟಿಯ ಮೇಲೆ ಕೈಯಾಡಿಸುವುದರಿಂದ ಈ ವಿಚಾರವು ರಮಾಕಾಂತನನ್ನು ಬಹಳ ಹೊತ್ತು ಕೆಣಕಲಿಲ್ಲ.

“ಬಿಚ್ಚುವದಿಲ್ಲೇನು ಆ ಮುಷ್ಟಿಯನ್ನು?” ಅವನು ಚೇಷ್ಟೆಯಿಂದ ಕೇಳಿದ.

“ಯಾಕೆ ಬಿಚ್ಚಬೇಕು? ಅದೇನೋ ಹೇಳುವರಲ್ಲ; ಮುಚ್ಚಿದ ಮುಷ್ಟಿ ಮೂರು ಲಕ್ಷದ್ದು, ತೆರೆದದ್ದೆಲ್ಲಾ ತೆರವು.”

ತನ್ನ ಲಗ್ನದಲ್ಲಿ ವತ್ಸಲೆಯ ಬಳಗದ ಕಡೆಯೊಬ್ಬ ಮುದುಕಿಯು ಮದುಮಕ್ಕಳು ಮುಚ್ಚಿಟ್ಟ ಅಡಕೆ ಹುಡುಕುವ ಆಟವನ್ನು ಆಡಬೇಕೆಂದು ಚುಚ್ಚಿದ್ದಳು. ಆಗ ರಮಾಕಾಂತನಿಗೆ ಆ ಸೂಚನೆಯು ಆ ಮುದುಕಿಯಷ್ಟೇ ಹಳೇ ತೆರದ್ದು ಎಂದೆನಿಸಿತ್ತು. ಆದರೆ ಸುರಂಗೆಯ ಮುಚ್ಚಿದ ಮುಷ್ಟಿಯನ್ನು ನೋಡುತ್ತಲೆ ಅವನ ಮನಸ್ಸು ಅಂದಿತು–ತನ್ನ ಲಗ್ನದೊಳಗಿನ ಆ ಹಳೇ ಆಟವು ಅಷ್ಟೇನು ಹುಚ್ಚುತನದ್ದಲ್ಲ! ಬೆಳದಿಂಗಳಿನಲ್ಲಿ ಹೊಂಬಾಳೆಯ ಎಳೆಯ ಹಣಿಗೆಯಂತೆ ಕಾಣುವ ಆ ಮುಷ್ಟಿ–ಸುರಂಗೆಯಾದರೂ ಕ್ಷಣಹೊತ್ತು ಅವನಿಗೆ ಬೆಡಗಿನ ಬಾಳೆಯ ಗಿಡದಂತೇ ಕಂಡಳು. ಹರವಾದ ಬಾಳೆಯ ತೆಳ್ಳನ್ನ ಎಲೆಯಂತೆ ಗಾಳಿಯಲ್ಲಿ ಹಾರಾಡುವ ಅವಳ ಸೆರಗು, ತೆಳ್ಳಗಾದರೂ ಹೊಳೆಹೊಳೆಯುವ ಅವಳ ಮೈಕಟ್ಟು–

ಸುರಂಗೆಯು ನಗುತ್ತ ಕೆಲೆಯುತ್ತಲೇ ಇದ್ದರೆ ಅವಳ ಮುಷ್ಟಿಯನ್ನು ಬಿಡಿಸುವ ಮೋಹವು ಒಂದು ವೇಳೆ ಅವನಿಗೆ ತಡೆಯದಂತಾಗುತ್ತಿತ್ತು. ಕಾರಿನಲ್ಲಿ ಕೂಡುವವರೆಗೆ ಸುರಂಗೆಯ ಮೇಲಿನ ತನ್ನ ಪ್ರೀತಿಯು ಪ್ಲೆಟಾನಿಕ್ ಎಂದು ಅವನಿಗೆ ನಿಜವಾಗಿಯೂ ಅನಿಸುತ್ತಿತ್ತು. ಆದರೆ ಮೈಗೆ ಮೈ ತಗಲಿಸಿ ಕುಳಿತು ಕಾರಿನಲ್ಲಿಯ ಪ್ರವಾಸ, ಸಮುದ್ರದ ಮೇಲಿನ ಶಾಂತ–ಏಕಾಂತವಾದ ಶರದೃತುವಿನ ಅಚ್ಚ ಬೆಳ್ದಿಂಗಳು–ಬೆಳ್ದಿಂಗಳೆಲ್ಲಿಯದು? ಚಂದ್ರನ ಹೂಜೆಯಿಂದ ನೆಲದ ಮೇಲೆ ಸುರಿಸುತ್ತಿದ್ದ ಉನ್ಮಾದಕ ಮದ್ಯ–ಈ ಎಲ್ಲದರ ಸಂಗಮದಿಂದ ಉಂಟಾದ ಮಧುರ ಸ್ವಪ್ನದಲ್ಲಿ ಅವನ ಮನಸ್ಸು ಈಗ ಈಜತೊಡಗಿತ್ತು. ಆದರೆ ಉಳಿದ ಹೊತ್ತಿನಲ್ಲಿ ಪಾತರಗಿತ್ತಿಯಂತೆ ಆಟವಾಡುವ ಸುರಂಗೆಗೆ ಈ ಹೊತ್ತೇ ಯಾಕೆ ಗಾಂಭೀರ್ಯದ ಲಹರಿಯು ಬರುತ್ತಿರಬಹುದೆಂಬುದು ಅವನಿಗೆ ತಿಳಿಯದಾಯಿತು. ಬಹಳ ಹೊತ್ತು ಅವಳು ಸುಮ್ಮನೆ ಕುಳಿತದ್ದನ್ನು ನೋಡಿ ಅವನೆಂದ “ಒಂದು ಮಾತ್ರ ತಪ್ಪಿಹೋಯಿತು ಈ ಹೊತ್ತು.”

“ಏನು?” ಸುರಂಗೆಯು ಬಲಗೈಯ ಕಿರಿಬೆರಳಿನಿಂದ ಉಸುಕಿನಲ್ಲಿ ಗೆರೆಯೆಳೆಯುತ್ತ ಕೇಳಿದಳು.

“ಆ ಸುಲೋಚನೆಯೂ ಇರಬೇಕಾಗಿತ್ತು ಸಂಗಡ.”

“ಯಾರು ಈ ಸುಲೋಚನೆ?”

“ನನ್ನ ಕಥೆಗಳಿಗೆ ಚಿತ್ರ ತೆಗೆದುಕೊಡುವವಳು ಒಬ್ಬಳಿರುವಳೆಂದು ಹೇಳಲಿಲ್ಲವೇ ಆ ದಿನ?”

“ಅವಳು ಮನುಷ್ಯಳಲ್ಲವೆಂದು ಕಾಣುತ್ತದೆ.”

ರಮಾಕಾಂತನಿಗೆನಿಸಿತು–ಹೆಂಗುಸರು ವಿಲಕ್ಷಣ ಹೊಟ್ಟೆಕಿಚ್ಚಿನವರೆಂದು.

ಸುರಂಗೆಯು ತಟ್ಟನೆ ಅಂದಳು: “ಪಾಪ ಪುಣ್ಯವಂತಳು! ಇಲ್ಲದಿದ್ದರೆ ಇವತ್ತು ಇಲ್ಲಿ ಅವಳ ಕೊಲೆ ಆಗಿಬಿಡುತ್ತಿತ್ತು!”



“ಅದು ಹೇಗೆ?”

“ಇಬ್ಬರೊಳಗೆ ಮೂರನೆಯವರು ಬಂದರೆ ಅವರ ಕೊಲೆ ಮಾಡುವಂತೆ ಆಗುವದಲ್ಲವೆ? ನನ್ನ ಮಾತಲ್ಲ ಇದು ಮತ್ತೆ ! ಒಬ್ಬ ಪ್ರಸಿದ್ಧ ಲೇಖಕನ ವಾಕ್ಯ” ಕೊನೆಯ ವಾಕ್ಯವನ್ನು ನುಡಿಯುವಾಗ ಸುರಂಗೆಯು ಸೆರಗಿನಿಂದ ಮೋರೆಯನ್ನು ಅರ್ಧ ಮುಚ್ಚಿ ಮನಃಪೂರ್ವಕವಾಗಿ ನಕ್ಕಳು. ಅವಳ ನಗೆ ರಮಾಕಾಂತನಿಗೆ ತಿಳಿ ಮೋಡಗಳ ಹಿಂದಿನ ಬೆಳ್ದಿಂಗಳಂತೆ ತೋರಿತು.

ಅವನೆಂದ : “ನನ್ನದೇನೂ ಕೆಲಸವಿರಲಿಲ್ಲ ಇವತ್ತು ಇಲ್ಲಿ.”

“ಅಂದರೆ ನಾನು ಇಷ್ಟು ಹಟ ತೊಟ್ಟು ಬಂದದ್ದು ಯಾರ ದೆಸೆಯಿಂದ?”

“ಸುಲೋಚನೆಯ ದೆಸೆಯಿಂದ.”

“ಅವಳ ಮುಖ ಕೂಡ ನೋಡಿಲ್ಲ ನಾನಂತೂ.”

“ಬಂದಾಗಿನಿಂದ ನೋಡಿದೆ. ಸುಮ್ಮನೆ ಚಿತ್ರದಂತೆ ಕುಳಿತುಬಿಟ್ಟಿರುವಿ. ಅದರಿಂದ ನನಗೇನು ಉಪಯೋಗ? ಸುಲೋಚನೆಗಾದರೆ ಒಂದು ಒಳ್ಳೇ ಮಾಡಲ್ ಆದರೂ ಸಿಗುತ್ತಿತ್ತು.”

“ಅವ್ವಯ್ಯ, ಯಾರೋ ಇತ್ತ ಕಡೆ ಬರುವಂತೆ ಕಾಣತದೆ.”

ಕುಳಿತ ಸ್ಥಳದಿಂದ ಏಳುತ್ತೇಳುತ್ತ ಸುರಂಗೆಯೆಂದಳು.

ಆಕೆಯನ್ನು ಕೆಣಕುವ ದೃಷ್ಟಿಯಿಂದ ರಮಾಕಾಂತನೆಂದ :

“ಸುಲೋಚನೆಯೇ ಬರುತ್ತಿರಬೇಕು – ನಿನ್ನ ಚಿತ್ರ ಬರಿಯಲಿಕ್ಕೆಂದು.”

ಸಮಿಸಮೀಪಕ್ಕೆ ಬಂದಂತೆ ಆ ವ್ಯಕ್ತಿಗಳು ತುಸು ಸ್ಪಷ್ಟವಾಗಿ ಕಾಣತೊಡಗಿದವು. ಒಬ್ಬನು ತರುಣ, ಇನ್ನೊಬ್ಬಳು ತರುಣಿ. ತಮ್ಮಂತೆಯೆ ರಸಿಕರು ಜಗತ್ತಿನಲ್ಲಿ ಇರುವರೆಂದು ನೋಡಿ ರಮಾಕಾಂತನಿಗೆ ಆನಂದವಂತೂ ಆಯಿತು. ಅವರಿಬ್ಬರಲ್ಲಿ ತರುಣಿಯು ಬೇರೆ ಯಾರೂ ಇರದೆ ಸುಲೋಚನೆಯೇ ಇರುವಳೆಂದು ಕಂಡೊಡನೆ ಅವನ ಆನಂದಕ್ಕೆ ಮೇರೆಯೇ ಉಳಿಯಲಿಲ್ಲ. ಲೇಖಕರು ಪ್ರವಾದಿಗಳೆಂಬ ತತ್ತ್ವದ ಅನುಭವವು ಅವನ ಆಯುಷ್ಯದಲ್ಲಿ ಇದೇ ಮೊದಲೆಯ ಸಾರೆ ಬಂದಿತ್ತು. ಅವನನ್ನು ನೋಡಿ ಸುಲೋಚನೆಯೂ ಆಶ್ಚರ್ಯಚಕಿತಳಾದಳು. ಅವಳು ನಗುನಗುತ್ತ ಮುಂದೆ ಬಂದು “ರಮಾಕಾಂತ, ನಿಮಗೆ ಪೂರ್ಣ ನೂರು ವರ್ಷ ಆಯುಷ್ಯ. ನಾನಿದೇ ಈಗ ವಿದ್ಯಾಧರರಿಗೆ ಹೇಳುತ್ತಿದ್ದೆ....”

“ನಾನೂ ನಿಮ್ಮದೇ ನೆನಪು ತೆಗೆದಿದ್ದೆ ಇದೇ ಈಗ. ಸಂಪೂರ್ಣ ನೂರು ವರ್ಷ....”

“ಎಂಥ ಭಯಂಕರ ಶಾಪ ಕೊಡುತ್ತೀರಿ ನೀವು!”

“ಶಾಪ?”

“ಶಾಪವಲ್ಲದೆ ಮತ್ತೇನು? ನೂರು ವರ್ಷ ಆಯುಷ್ಯ! ರಮಾಕಾಂತ, ನಾನು ಚಿತ್ರಕಾರಳೆಂಬುದನ್ನು ನೀವು ಮರೆತೇಬಿಟ್ಟಿರಲ್ಲ!”

ಎಲ್ಲರೂ ಉತ್ಸುಕತೆಯಿಂದ ಸುಲೋಚನೆಯ ಕಡೆ ನೋಡಹತ್ತಿದರು. ಕೈವಸ್ತ್ರದಿಂದ ಕೆಳಗಿನ ನೆಲವನ್ನು ಉಡುಗಿದಂತೆ ಮಾಡಿ ಉಸುಕಿನಲ್ಲಿ ಕೂಡುತ್ತ ಅವಳೆಂದಳು: “ನಾ ಒಲ್ಲೆ

ತಾಯಿ, ಈ ಮಾರ್ಕಂಡೇಯನ ಆಯುಷ್ಯ. ಕೂದಲೆಲ್ಲ ಹಂಜಿಯ ಬುಟ್ಟಿಯಾದ ಅಜ್ಜಿ ನಾ ಎಂದೆಂದೂ ಆಗಲಾರೆ."

ರಮಾಕಾಂತನು ನಗುತ್ತ ಈ ವಾಕ್ಯವನ್ನು ಸ್ವಾಗತಿಸಿದನು. ಸುರಂಗೆಯು ಕುತೂಹಲದಿಂದ ಸುಲೋಚನೆಯನ್ನೇ ನೋಡುತ್ತಿದ್ದಳು. ವಿದ್ಯಾಧರನು ಮಾತ್ರ ತೂಕಡಿಸುತ್ತಿದ್ದನೋ ಇಲ್ಲವೆ ಎದುರಿನ ಸಮುದ್ರದ ಕಡೆಗೆ ನೋಡುತ್ತಿದ್ದನೋ ಎಂಬುದನ್ನು ಯಾರಿಗೂ ನಿಶ್ಚಯವಾಗಿ ಹೇಳಲಿಕ್ಕೆ ಬರುವಂತಿರಲಿಲ್ಲ.

ಸುಲೋಚನೆಯು ಒಬ್ಬರಿಗೊಬ್ಬರ ಗುರುತು ಮಾಡಿಕೊಡಹತ್ತಿದಳು: "ಇವರು ವಿದ್ಯಾಧರ! ಗೋಡಂಬೆ ಸುಲಿಯುವ ಯಂತ್ರ ಶೋಧ ಮಾಡುವ ಬಗ್ಗೆ ಜಾಹೀರಾತು ಕೊಟ್ಟಿದ್ದರಲ್ಲ ನಮ್ಮ ದಾದಾ ಅವರು–"

"ಹೌದು?" ವಿದ್ಯಾಧರನನ್ನು ದಿಟ್ಟಿಸಿ ನೋಡುತ್ತ ರಮಾಕಾಂತನೆಂದ.

"ಇವರು ಭಾರೀ ಯಂತ್ರಶಾಸ್ತ್ರಜ್ಞರು ಇದ್ದಾರೆ ಮತ್ತೆ ! ಆ ಜಾಹೀರಾತು ಓದಿ ಇವರು ಬಂದರು. ಕೆಲವು ದಿವಸಗಳಲ್ಲಿಯೇ ಕೊಂಕಣದಲ್ಲಿಯ ನಮ್ಮ ಕಾರಖಾನೆಗೆ ಹೋಗುವವರಿದ್ದಾರೆ."

"ಇವರ ಅಭಿನಂದನೆಯ ಸುಪ್ರಸಂಗವು ಬೇಗನೆ...."

"ಇವರದಿಷ್ಟೇ ಯಾಕೆ? ನನ್ನದೂ ಸಹ?"

"ನೀವು ಎಂಥ ಯಂತ್ರ ಮಾಡುವವರಿದ್ದೀರಿ ಮತ್ತೆ? ಚಿತ್ರ ತೆಗೆಯುವ ಯಂತ್ರವೇನು ಮತ್ತೆ?–"

"ಯಂತ್ರವಲ್ಲ. ನಾನು ಒಂದು ಚೆಂದಾದ ಲಕ್ಷ್ಮಿಯ ಚಿತ್ರ ತೆಗೆಯುವವಳಿದ್ದೇನೆ. ನಮ್ಮ ಗೋಡಂಬೆಯ ಕಾರಖಾನೆಯ ಹತ್ತಿರ ದಾದಾ ಅವರ ಆಫೀಸಿಲ್ಲವೆ? ಅಲ್ಲಿ ಅದನ್ನು ಇಡುವವಳಿದ್ದೇನೆ."

"ಆದರೆ ಇಷ್ಟು ರಾತ್ರಿ ವೇಳೆಯಲ್ಲಿ ನಿಮ್ಮ ಅಬಚಿಯವರು ನಿಮಗೆ ಹೊರಗೆ ಹೇಗೆ ಹೋಗಗೊಟ್ಟರು?"

ರಮಾಕಾಂತನ ಈ ಪ್ರಶ್ನೆಯು ಕಾಣಲಿಕ್ಕೇನೊ ಸರಳವಾಗಿತ್ತು. ಆದರೆ ಸುಲೋಚನೆ ವಿದ್ಯಾಧರ ಇವರಿಬ್ಬರೂ ಬೆಳ್ದಿಂಗಳಲ್ಲಿ ತಿರುಗಾಡಲಿಕ್ಕೆ ಬಂದದ್ದು ನೋಡಿದಾಗಿನಿಂದ ಈ ಸಂಗತಿಯು ಅವನ ಮನಸ್ಸಿನಲ್ಲಿ ಚುಚ್ಚುತ್ತಿತ್ತು. ಸುರಂಗೆಯಂಥ ನಟಿ ಹಾಗೂ ತನ್ನಂಥ ನಾಟಕಕಾರ! ಇಂದಿಗೆ ಎರಡು ತಿಂಗಳಿಂದ ದಿವಸದೊಳಗಿನ ಎಂಟು ಹತ್ತು ತಾಸು ತಾವು ಕೂಡಿಯೇ ಕಳೆಯುತ್ತಿದ್ದಾರೆ ! ಆದರೆ ಆ ತಿರುಗಾಡುವ ಯೋಜನೆಗೆ ಆ ಗೋದಲಿಯೊಳಗಿನ ನಾಯಿ ಎಷ್ಟು ಎಡರು ತಂದೊಡ್ಡಿದಳು! ಸುಲೋಚನೆ ನೋಡಿದರೆ ಹಳೇಪದ್ಧತಿಯ ಅಬಚಿಯ ಮನೆಯಲ್ಲಿ ಇರುವವಳು ! ತನ್ನ ತಂದೆಯ ಜಾಹೀರಾತಿನ ನಿಮಿತ್ತದಿಂದ ಗುರುತಾದ ತರುಣನ ಕೂಡ ಅಪರಾತ್ರಿಯಲ್ಲಿ ಇವಳ ಅಬಚಿಯು ಹೊರಗೆ ಹೋಗಗೊಟ್ಟಳಾದರೂ ಹೇಗೆ? ಅಥವಾ ಇವರಿಬ್ಬರ–ರಮಾಕಾಂತನ ಮನಸ್ಸಿಗೆ ಹೊಳೆಯಿತೋ ಇಲ್ಲವೋ ಎನ್ನುವಷ್ಟು ಮತ್ಸರದ ಝುಳುಕು ಹಾಯ್ದುಹೋಯಿತು.



ಸುಲೋಚನೆಯು ನಗುನಗುತ್ತ ಹೇಳಹತ್ತಿದಳು: "ಅದು ಒಂದು ದೊಡ್ಡ ಮೋಜೇ ಆಯಿತು. ನಮ್ಮ ಅಬಚಿ ನನಗೆ ಅಪರಾತ್ರಿಯೊಳಗೆ ತಿರುಗಾಡಲಿಕ್ಕೆ ಹೋಗಗೊಡುವವಳೇ? ಮತ್ತು ಅವರು–"

ಅವಳು ವಿದ್ಯಾಧರನ ಕಡೆ ನೋಡಿ ಕಿಡಿಗೇಡಿತನದಿಂದ ನಕ್ಕಳು. ಅವನೂ ಮುಗುಳ್ನಗೆ ನಕ್ಕ. ರಮಾಕಾಂತನಿಗೆನಿಸಿತು– ಇದ್ದಾನೆ, ಗೃಹಸ್ಥ ಅಂತೂ ಜೀವಂತ ಇದ್ದಾನೆ ! ವಿದ್ಯಾಧರನು ಬಿಗುವಿನಿಂದ ಅಂದ "ಆ ಯಂತ್ರದ ನಿಮಿತ್ತದಿಂದ ನಾಲ್ಕು ದಿವಸದ ಹಿಂದೆ ನಮ್ಮ ಗುರುತಾಯಿತು. ನಾನು ಇವರಿಗೆ ಸಹಜವಾಗಿ ಕೇಳಿದೆ: 'ವಿಮಾನದಲ್ಲಿ ಎಂದಾದರೂ ಕುಳಿತಿದ್ದಿರಾ?' ಎಂದು. ಇಲ್ಲ ಎಂದರು ಇವರು. ಇಲ್ಲಿ ಜುಹೂಕ್ಕೆ ನನ್ನ ಒಬ್ಬ ಪಾರ್ಸಿ ಗೆಳೆಯನಿದ್ದಾನೆ. ಮೊನ್ನೆ ಅವನ ಭೆಟ್ಟಿ ಆಗಲಿಕ್ಕೆಂದು ಬಂದಿದ್ದೆ ಅಲ್ಲಿಂದ–"

ಸುಲೋಚನೆ ನಡುವೇ ಅಂದಳು: "ವಿಮಾನದಿಂದ ಜುಹೂವಿನ ನೋಟ ಎಷ್ಟು ಚೆಂದ ಕಾಣುತ್ತದೆ ಎಂದು ಇವರು ಹೇಳಹತ್ತಿದರು. ನಾನಂದೆ: 'ಇದಕ್ಕಿಂತಲೂ ಚೆಂದವಾದ ನೋಟ ತೋರಿಸುತ್ತೇನೆ ನಿಮಗೆ.' ಅದಕ್ಕೇನೆ ಇವರನ್ನು ಇಲ್ಲಿಗೆ ಕರೆದುಕೊಂಡು ಬಂದದ್ದು. ನಿಮ್ಮ ಆ ಕಥೆಯೊಳಗಿನ ಚಿತ್ರ ತೆಗೆಯುವುದೂ ಇತ್ತು–"

"ಆದರೆ ಅಬಚಿಯವರು ಹೋಗಗೊಟ್ಟರು ಹೇಗೆ? ಮೊನ್ನೆ ಮೃಚ್ಛಕಟಿಕದೊಳಗೆ ಈ ಸುರಂಗೆಯ ಕೆಲಸವನ್ನು ನೋಡಲಿಕ್ಕೆಂದು ನಿಮ್ಮನ್ನು ಕರೆದಾಗ ಮಾತ್ರ–"

"ಓಹೋ, ಇವರೇ ಏನು ಆ ಸುರಂಗಾಬಾಯಿಯವರು?"

ಸುರಂಗೆಯೂ ಸುಲೋಚನೆಯೂ ಒಬ್ಬರನ್ನೊಬ್ಬರು ನಿಟ್ಟಿಸಿ ನೋಡಿದರು. ಮಿಂಚು ಮಿಂಚನ್ನು ಕಂಡಂತೆ ಆಯಿತು.

"ನಾಟಕಕ್ಕೆ ಕೂಡ ಹೋಗಗೊಡದ ನಿಮ್ಮ ಅಬಚಿಯವರು–"

"ಆದರೆ ಅಬಚಿಯನ್ನೂ ಒಪ್ಪಿಸುವವರು ಸಿಕ್ಕಿದ್ದರು ಒಬ್ಬರು!"

"ಯಾರವರು?"

"ಬಾಪ್ಪಾ! ನನ್ನ ಸೋದರ ಮಾವ."

"ರತ್ನಾಗಿರಿಯ ತುರಂಗದಲ್ಲಿ ಇದ್ದರಲ್ಲವೇ ಅವರು?"

"ಹೌದು. ಅಲ್ಲಿಂದ ಬಿಡುಗಡೆಯಾದ ಕೂಡಲೆ ನನ್ನ ಭೆಟ್ಟಿಗೆ ಬಂದರು. ಮೈಯಲ್ಲಿಯೂ ಅಷ್ಟು ಸರಿಯಾಗಿಲ್ಲ ಅವರಿಗೆ. ಅವರನ್ನು ಮುಂದೆ ಮಾಡಿದೆ–"

"ಈ ಸತ್ಯಾಗ್ರಹೀ ಜನರಿಗೆ ಬೆಳದಿಂಗಳು ಸರಿಹೋಗುವುದೇ?"

ರಮಾಕಾಂತನು ಎಲ್ಲರನ್ನೂ ನಗಿಸಬೇಕೆಂದು ಈ ಪ್ರಶ್ನೆ ಕೇಳಿದ. ಆದರೆ ಸುಲೋಚನೆಯು ಕೂಡಲೆ ರೇಗಿ ಅಂದಳು: "ನಮ್ಮ ಬಾಪ್ಪಾ ಅವರೇನು ಅಷ್ಟು ಅರಸಿಕರಲ್ಲ! ಲಗ್ನ ಮಾಡಿಕೊಳ್ಳದಿದ್ದರೂ ಸಣ್ಣ ಹುಡುಗರು ಅಂದರೆ ಅವರಿಗೆಷ್ಟು ಪ್ರೀತಿ ! ಅವರೆಂದೂ ಲೇಖ ಬರೆಯುವುದಿಲ್ಲ. ಆದರೆ ಎಷ್ಟು ಓದುತ್ತಾರೆ ಅವರು! ಬಹಳ ದೊಡ್ಡ ದೊಡ್ಡವರ ಗುರುತು ಅವರಿಗೆ ! ಹಿಂದೊಮ್ಮೆ ಅವರು ಸಾಬರಮತಿಯ ಆಶ್ರಮದಲ್ಲಿದ್ದರು ! ಗಾಂಧಿಯವರ

ಸುದ್ದಿ ಅವರೆಷ್ಟು ಮೋಜುಮಾಡಿ ಹೇಳುತ್ತಾರೆಂದಿರಿ?"

"ಬಾಪ್ಪಾ ಎಲ್ಲಿದ್ದಾರೆ ಹಾಗಾದರೆ?" ರಮಾಕಾಂತ ಕೇಳಿದ.

"ನಮ್ಮ ಸಂಗಡವೇ ಮನೆಯಿಂದ ಹೊರಬಿದ್ದರು. ಆದರೆ ಇಂಥ ಚಳಿಯಲ್ಲಿ ಬರುವುದೆಂದರೆ ಅವರಿಗೆ ಆಗದು. ಇಲ್ಲದಿದ್ದರೆ ಅವರಿಗೆ ಸಮುದ್ರ, ಬೆಳದಿಂಗಳು ಎಂದರೆ ಜೀವ. ಎಲ್ಲಿಯಾದರೂ ಸಿನೇಮಾಕ್ಕೆ ಹೋಗುವೆನೆಂದು ಹೇಳಿ ಹೋದರು."

"ನಿಮ್ಮ ಮೇಲೆ ಅವರ ಮಮತೆ ಬಹಳೆಂದು ಕಾಣುತ್ತದೆ."

"ತಾಯಿ ತೀರಿಕೊಂಡಾಗ ನಾನು ಬಹಳ ಚಿಕ್ಕವಳು. ಆದ್ದರಿಂದ ಅವರದೇ ನನಗೆ ಸಲಿಗೆ ಆಯಿತು. ಈ ಹೊತ್ತೇ ಮುಂಜಾನೆ ಅವರು ಅನ್ನುತ್ತಿದ್ದರು 'ಸುಲುತಾಯಿ, ನಿನ್ನ ಕೈ ಬಹಳ ಚಲೋ ಎಂದು ಕಾಣಿಸತದೆ. ಈಗ ಇಂಥ ಚಿತ್ರಗಳನ್ನು ತೆಗೆಯಬೇಕು ನೋಡು, ಇಡೀ ಹಿಂದುಸ್ತಾನವೇ ಅವನ್ನು ತಲೆಯ ಮೇಲಿಟ್ಟುಕೊಂಡು ಕುಣಿದಿರಬೇಕು.' ಮುಂಜಾನೆಯಿಂದ ಆ ಲಕ್ಷ್ಮಿಯ ಚಿತ್ರ ಒಂದೇ ಸವನೆ ನನ್ನ ತಲೆಯೊಳಗೆ ಸುಳಿಯುತ್ತಿದೆ" ವಿದ್ಯಾಧರನೂ ಬೆಂಬಲ ಕೊಟ್ಟ "ನಿಜವಾಗಿಯೂ ಒಳ್ಳೇ ವಿಲಕ್ಷಣವಾಗಿದ್ದಾರೆ ನಿಮ್ಮ ಮಾವನವರು."

ಕೆಲಹೊತ್ತು ಎಲ್ಲರೂ ಸುಮ್ಮನಿದ್ದರು. ಆದರೆ ಸುಲೋಚನೆಗೆ ಅದು ಹೇಗೊ ಅನಿಸಿತು. ಅವಳೆಂದಳು: "ನಾವೇನು ಎಲ್ಲರೂ ಜಗಳ ಆಡಿದ್ದೇವೆಯೇ? ಸಮುದ್ರದ ಮೇಲೆ ಕುಣಿಯುವ ಬೆಳ್ದಿಂಗಳು ಎಷ್ಟು ಚೆಂದ ಕಾಣುತ್ತಿದೆಯಲ್ಲವೇ? ಆದರೆ ಈ ಹೊತ್ತಿನಲ್ಲಿ ಅದರ ಚಿತ್ರವನ್ನು ತೆಗೆಯಲಿಕ್ಕೆ ಬರುವುದಿಲ್ಲ ಬೇರೆ!"

"ಮತ್ತು ನನಗೆ ಅದರ ಮೇಲೆ ಕಥೆಯನ್ನೂ ಬರೆಯಲಿಕ್ಕೆ ಬರುವದಿಲ್ಲ!" ರಮಾಕಾಂತ ಅವಳೊಡನೆ ದನಿಗೂಡಿಸಿದನು.

"ಸಮುದ್ರದ ಕಡೆ ನೋಡಿದರೆ ನನಗೆನಿಸುವದು–" ವಿದ್ಯಾಧರನೆಂದ.

"ಏನು?" ರಮಾಕಾಂತನು ಉತ್ಸಾಹದಿಂದ ಕೇಳಿದ.

"ತೆರೆಗಳ ರೂಪದಿಂದ ಎಷ್ಟು ಶಕ್ತಿಯು ವ್ಯರ್ಥ ಹೋಗುವುದಲ್ಲ ಇದು ! ಇದರ ಉಪಯೋಗಮಾಡಿಕೊಳ್ಳುವ ಯಂತ್ರವೊಂದನ್ನು ಹುಡುಕಿ ತೆಗೆಯಲು ಬಂದರೆ–" ಈ ಪ್ರಾಣಿಯು ಹುಟ್ಟಿದಂದಿನಿಂದ ಕಾವ್ಯದ ಒಂದು ಪಂಕ್ತಿಯನ್ನಾದರೂ ಓದಿರಬಹುದೇ ಎಂದು ರಮಾಕಾಂತನಿಗೆ ಸಂಶಯ ಬಂದಿತು. ಈ ಮನುಷ್ಯನು ಇಷ್ಟೇಕೆ ಸ್ತಬ್ಧನಿರುವನೆಂಬ ಒಗಟು ಈಗ ಅವನಿಗೆ ಬಿಟ್ಟಿತು. ಅವನು ತನ್ನಷ್ಟಕ್ಕೆ ಅಂದ "ಸುಮ್ಮನೆ ಬಾಯ ಉಸಿರನ್ನು ಹಾಳುಮಾಡುವುದರಲ್ಲಿ ಏನು ಅರ್ಥವಿದೆ? ವ್ಯರ್ಥವಾಗಿ ಬಡಬಡಿಸುವ ಜನರ ಬಾಯೊಳಗಿನ ಉಸಿರಿನ ಸಂಗ್ರಹ ಮಾಡಲಿಕ್ಕೆ ಬರುತ್ತಿದ್ದರೆ ಅದರ ಜೋರಿನಿಂದ ಎಷ್ಟೋ ಕಾರಖಾನೆ ನಡೆಯಬಹುದು" ಎಂದೇ ಈ ವಿದ್ಯಾಧರನ ಮತವಿರಬೇಕು.

"ಸುರಂಗಾಬಾಯಿಯವರೇನು ಬರೀ ಶ್ರೋತೃವಿನ ಕೆಲಸ ನಡಸಿರುವರಲ್ಲ. ಹಾಡುವುದರ ಹೊರತು ಬಾಯಿ ತೆರೆಯುವದಿಲ್ಲವೆಂದು ಪಣ–ಗಿಣ ತೊಟ್ಟಿರುವರೇನು ಮತ್ತೆ?"



ರಮಾಕಾಂತನೆಂದ "ಹೌದು ! ಸುರಂಗೆ, ಒಂದು ಪದವನ್ನು ಹೇಳಬಾರದೆ?"

ರಮಾಕಾಂತನು ಎಷ್ಟೋ ಪರಿಯಿಂದ ಬಲವಂತ ಮಾಡಿದನು. ಆದರೆ ಏನು ಮಾಡಿದರೂ ಸುರಂಗೆಯು ಹಾಡಲಿಕ್ಕೆ ಒಪ್ಪದಾದಳು. ಈ ಹೊತ್ತೇ ಈಕೆಯ ಮೈಯಲ್ಲಿ ಈ ದೆವ್ವವು ಎಲ್ಲಿಂದ ಹೊಕ್ಕಿತೆಂಬುದು ಅವನಿಗೆ ಅರ್ಥವಾಗಲಿಲ್ಲ.

"ನನ್ನ ಮನಸ್ಸೇ ಇಂದು ಜಾಗೆಯಲ್ಲಿಲ್ಲ" ಎಂದು ಸುರಂಗೆಯು ಹೇಳುತ್ತಲೇ ಅವನು ಸಿಟ್ಟುಸಿಟ್ಟಿನಿಂದಲೇ ಅಂದ "ನಡೆಯಿರಿ, ಸುಲೋಚನಾಬಾಯಿ, ಇವಳ ಮನಸ್ಸು ಹೋಗಲಿ ತನ್ನ ಜಾಗೆಗೆ."

"ಯಾವ ಜಾಗೆ ಅದು?"

"ಕಂಪನಿಯ ಬಿಡಾರ, ಇನ್ನೆಲ್ಲಿ? ಅಲ್ಲಿ ಹೇಗೆ ಭಟ್ಟಂಗಿಯಂತೆ ಇವಳು ಹಾಡುತ್ತಾಳೆ! ಇಲ್ಲಿ ಮಾತ್ರ–"

ಸುರಂಗೆ ತುಸು ಕರುಣದೃಷ್ಟಿಯಿಂದ ರಮಾಕಾಂತನನ್ನು ನೋಡಿದಳು. ತಾನು ನಿರ್ದೋಷಿಯೆಂಬುದನ್ನು ಏನು ಮಾಡಿದರೂ ಸಿದ್ಧ ಮಾಡಲಿಕ್ಕೆ ಬಾರದ ಹೊತ್ತಿನಲ್ಲಿ ನಿರಪರಾಧಿಯಾದ ಆರೋಪಿಯ ದೃಷ್ಟಿಯಲ್ಲಿ ತೋರುವ ಹತಾಶೆಯು ಅವಳ ಕಣ್ಣಲ್ಲಿ ತೇಲುತ್ತಿತ್ತು. ಆದರೆ ರಮಾಕಾಂತನು ಅವಳ ಕಡೆಗೆ ಲಕ್ಷ್ಯವನ್ನೇ ಕೊಡಲಿಲ್ಲ. "ಅವ್ವಯ್ಯ ಬಹಳ ತಡವಾಯಿತಲ್ಲ! ಬಾಪ್ಪಾ ಅವರು ನಮ್ಮ ಹಾದೀ ನೋಡುತ್ತ ನಿಂತಿರಬಹುದು ಮೂಲೆಯಲ್ಲಿ !" ಎಂದು ಸುಲೋಚನೆಯು ತನ್ನ ಪತ್ತಲದೊಳಗಿನ ಉಸುಕಿನ ಕಣಗಳನ್ನು ಜಾಡಿಸುತ್ತ ಅಂದಳು. ಕಾರಿನ ಬಳಿಗೆ ಬಂದ ಮೇಲೆ ರಮಾಕಾಂತನು ತನ್ನ ಡ್ರಾಯವ್ಹರನಿಗೆ ಅಂದ : "ಸುರಂಗಬಾಯಿಯವರನ್ನು ಅವರ ಬಿಡಾರಕ್ಕೊಯ್ದು ಮುಟ್ಟಿಸು ಮೊದಲು ಮತ್ತು ಇದು ನೋಡು, ಈ ಸಾಹೇಬರು – ಇವರನ್ನೂ ಅವರ ಮನೆಗೆ ಮುಟ್ಟಿಸು–"

"ಅಂದರೆ? ನೀವು ಈ ಕಾರಿನಲ್ಲಿ ಬರುವುದಿಲ್ಲವೇ?" ಸುರಂಗೆ ಕೇಳಿದಳು.

"ನಾನು ಸುಲೋಚನಾ ತಾಯಿಯ ಕೂಡ ಹೋಗುತ್ತೇನೆ."

ಸುರಂಗೆಯು ಸ್ಪಷ್ಟಮುದ್ರೆಯಿಂದ ರಮಾಕಾಂತನನ್ನು ನೋಡಿದಳು. ವಿದ್ಯಾಧರನಿಗೂ ತನ್ನ ಈ ಹೊಸ ಸುಧಾರಣೆಯು ಸರಿಹೋಗಲಿಕ್ಕಿಲ್ಲವೆಂದು ಅವನ ಕಲ್ಪನೆಯಿತ್ತು. ಆದರೆ ಅವನ ಎಣಿಕೆ ಸಂಪೂರ್ಣ ತಪ್ಪಿತು. ಸುರಂಗೆಯು ಕಾರು ಹತ್ತುತ್ತಲೆ ಅವನಂದ : ಈ ಕಾರೇನು ಆ ಕಾರೇನು, ಎರಡೂ ಯಂತ್ರಗಳೇ!"

ರಮಾಕಾಂತನು ಮಾಡಿದ ಈ ಅದಲುಬದಲಿನಿಂದ ಸುಲೋಚನೆಯು ತುಸು ಸಿಟ್ಟಿಗೆದ್ದಳು. ಆದರೆ ವಿದ್ಯಾಧರನು ಹೋಗಿ ಸುರಂಗೆಯ ಕಾರಿನಲ್ಲಿ ಕುಳಿತುಬಿಟ್ಟದ್ದರಿಂದ ಅವಳಿಗೆ ಏನೂ ಮಾಡಲಿಕ್ಕೆ ಬರದಂತಾಯಿತು. ಮೆಲ್ಲನೆ ಅವಳಂದಳು "ಎಕ್ಸಕ್ಯೂಜ–ಆಂ–ವಿದ್ಯಾಧರ" "ನೆವ್ಹರ ಮಾಯಿಂಡ" ವಿದ್ಯಾಧರನ ಈ ಉದ್ಗಾರವು ಕಾರಿನ ಸಪ್ಪಳದಲ್ಲಿ ಅಡಗಿಹೋಯಿತು. ತನ್ನ ಕಾರಿನಲ್ಲಿ ಕೂಡುತ್ತಲೆ ಸುಲೋಚನೆ ಕೇಳಿದಳು "ಸರಿಯಾಗಿ ಕಂಡಿತೇ ನಿಮಗಿದು?"

"ಕಂಡಂತೆ ಎಲ್ಲೂ ಇರುವುದಿಲ್ಲ."

"ಆದರೆ ವಿದ್ಯಾಧರ ಏನನ್ನಬಹುದು?'

"ಆದರೆ ಯಂತ್ರಕ್ಕೆ ಭಾವನೆಗಳಿರುವವೆಂದು ನಾನು ಇಂದೇ ಕೇಳುತ್ತಿರುವೆ....."

"ಮತ್ತೆ ಆ ಸುರಂಗೆಗೆ ಏನು ಅನಿಸೀತು?"

"ಇದೇನು ಅವಳಿಗೆ ಹೊಸದೇ. ಸಾಮಾಜಿಕ ನಾಟಕದಲ್ಲಿ....."

"ಅಂದರೆ ಇದೆಲ್ಲ ನಾಟಕವೇ?"

"ಹೌದು, ಆದರೆ ರಸವತ್ತಾದ ನಾಟಕವಿದು."

ವಿದ್ಯಾಧರನ ರುಕ್ಷವಾದ ಸಹವಾಸದಲ್ಲಿ ಜುಹೂದಲ್ಲಿಯ ಹುಣ್ಣಿಮೆಯ ಸುಲೋಚನೆಗೆ ಅಮಾವಾಸ್ಯೆಯಷ್ಟೇ ಭಯಾನಕವೆನಿಸಿತು. ಕೇವಲ ಅವಳ ಬಲವಂತಕ್ಕಾಗಿ ಅವಳ ಕೂಡ ಬಂದಿದ್ದನಷ್ಟೇ. ಆದ್ದರಿಂದ ರಮಾಕಾಂತನು ಮಾಡಿದ ಅದಲುಬದಲು ಸುಲೋಚನೆಗೂ ಸುಖಕರವೆನಿಸಿತು.

ರಮಾಕಾಂತನ ಮಾತಿಗೆ ಮರುಮಾತನ್ನು ಹೇಳಬೇಕೆಂದು ಅವಳೆಂದಳು: "ರಸವತ್ತಾದ ನಾಟಕದಲ್ಲಿ ಕೊನೆಗೆ ಮದುವೆಯಾಗಬೇಕೆಂಬುದು ಗೊತ್ತಿದೆಯಲ್ಲವೇ?"

"ಇಲ್ಲವೆಂದು ಯಾರು ಹೇಳುವರು?"

"ಮತ್ತೆ ನಾನಂತೂ ಮದುವೆಯನ್ನೇ ಮಾಡಿಕೊಳ್ಳುವವಳಲ್ಲ! ಇವತ್ತೇ ಬೆಳಗ್ಗೆ ಅಬಚಿಯು ಮಾತೆತ್ತಿದ್ದಳು. ಆಗ ನಾನು ಕೇಳಿದೆ 'ಬಾಪ್ಪಾ ಅವರ ಸೋದರಸೊಸೆ ಅಲ್ಲವೆ ನಾನು?' ಎಂದು."

"ಆದರೆ ಬಾಪ್ಪಾ ಅವರು ದೇಶದ ಸಲುವಾಗಿ ಜೇಲಿಗೆ ಹೋಗುವರಲ್ಲವೇ?"

"ನಾನು ಚಿತ್ರ ಬರೆದು ದೇಶದ ಸೇವೆ ಮಾಡುವವಳು."

ರಮಾಕಾಂತನಿಗೆ ಅವಳ ಈ ದಿಟ್ಟತನದ ಉತ್ತರದಿಂದ ಸಂತೋಷವಾಯಿತು. ವತ್ಸಲೆ–ಸುರಂಗೆ–ಸುಲೋಚನೆ ಈ ಮೂವರೂ ಅವನ ಕಣ್ಣೆದುರು ನಿಂತರು. ತನ್ನ ಸೌಂದರ್ಯದೃಷ್ಟಿಗೆ ವತ್ಸಲೆಯು ಬೇಡವಾದದ್ದು ಸರಿಯೆಂದು ಅವನಿಗೆನಿಸಿತು. ಸುರಂಗೆಯೊಡನೆ ಕಳೆದ ಎರಡು ತಿಂಗಳಲ್ಲಿ ನಿಕಟ ಸಂಬಂಧವು ಬಂದದ್ದರಿಂದ ಅವಳ ಬಗ್ಗೆ ತನ್ನಲ್ಲಿ ಪ್ರೇಮ ಹುಟ್ಟಿದಂತೆ ಭಾಸವಾದದ್ದು ನಿಜ. ಆದರೆ ಸುರಂಗೆಯು ಕಲಾವಿದಳಾದರೂ ಸುಸಂಸ್ಕೃತಳಲ್ಲ. ರೂಢಿಯಿಂದ ಅವಳು ಉಚ್ಚ ಕುಲದವರಂತೆ ಮಾತನಾಡುತ್ತಾಳೆ. ನಾಟಕವೇ ವ್ಯವಸಾಯವಾದ್ದರಿಂದ ಒನಪು ಒಯ್ಯಾರಗಳೂ ಅವಳಿಗೆ ಚೆನ್ನಾಗಿ ಸಾಧಿಸಿರುತ್ತವೆ. ಆದರೆ ಅವಳಿಗೆ ಶಿಕ್ಷಣ ಅಷ್ಟರಪೂರ್ತಿಯೆ! ಯಾವ ಹಳ್ಳಿಗಾಡ ಒಕ್ಕಲಿಗನ ಗುಡಿಸಲಲ್ಲಿ ಅವಳ ಬಾಲ್ಯವು ಕಳೆಯಿತೋ ಯಾರಿಗೆ ಗೊತ್ತು! ಈ ಹೋಲಿಕೆಯಲ್ಲಿಯೇ ರಮಾಕಾಂತ ತೊಡಗಿದನು. ಆದರೆ ಸುಲೋಚನೆ ಆತನನ್ನು ಸುಮ್ಮನೆ ಇರಗೊಡಬೇಕಲ್ಲವೆ? ಅವಳೆಂದಳು: "ರಸವತ್ತಾದ ನಾಟಕದ ಕಥಾನಕವು ಹೊಂದಲೊಲ್ಲದೆಂದು ಕಾಣುತ್ತದೆ."

"ಹೊಂದದೇನು? ಆದರೆ ಸ್ವಲ್ಪ ಬೇರೆ ದಾರಿಯಿಂದ."



"ಅದು ಹೇಗೆ?"

"ನಾನು ಈ ಕಾರಿನಲ್ಲಿ ಯಾಕೆ ಕುಳಿತೆ ಗೊತ್ತಿದೆಯೇ?"

"ನಾನೇನು ಎರಡನೆಯವರ ಮನಸ್ಸು ತಿಳಿಯುವದನ್ನು ಕಲಿತಿಲ್ಲ."

"ನಿಮ್ಮ ಬಾಪ್ಪಾ ಅವರನ್ನು ನೋಡಬೇಕಾಗಿದೆ ನನಗೆ."

"ಈಗಲೇ?"

"ಹೌದು. ಈಗ ನೋಡುವುದರಲ್ಲಿಯೇ ಮೋಜಿದೆ. ಬೆಳ್ದಿಂಗಳ ರಾತ್ರಿಯಲ್ಲಿ ಸಮುದ್ರದ ಕಡೆಗೆ ಹೋಗಬೇಕೆನ್ನುವ ಸೋದರಸೊಸೆಯ ಇಚ್ಛೆ ನಡಸಲಿಕ್ಕೆಂದು ಮೈಯಲ್ಲಿ ಸರಿಯಿಲ್ಲದಿದ್ದರೂ ಹೊರಬೀಳುವ ಮಾವ...."

ಮೋಟರಿನ ತುತೂರಿಯ ಅಬ್ಬರದಲ್ಲಿ ರಮಾಕಾಂತನ ಮುಂದಿನ ಮಾತು ಸುಲೋಚನೆಗೆ ಕೇಳಿಬರಲಿಲ್ಲ. ಆದರೆ ರಮಾಕಾಂತನ ಕಲ್ಪನಾಮಯವಾದ ಉತ್ತರವು ಅವಳಿಗೆ ಮೋಜೆನಿಸಿತು. ಅಲ್ಲದೆ ಅವಳ ಮನಸ್ಸು ಒಳ ಒಳಗೆ ಪ್ರಸನ್ನಸ್ವರದಿಂದ ಅಂದಿತು : "ನನ್ನ ಬಾಪ್ಪಾ ಅವರು ನಿಜವಾಗಿಯೂ ಅಂಥವರು!"

* * * * *

ಸುರಂಗೆಯ ಮೋಟರ ಡ್ರಾಯವ್ಹರನಿಗೆ ಮಾತ್ರ ಹೆಜ್ಜೆ ಹೆಜ್ಜೆಗೆ ಆಶ್ಚರ್ಯವೆನಿಸುತ್ತಿತ್ತು. ಹಿಂದಿನ ಮಗ್ಗಲು ಮನುಷ್ಯರು ಕುಳಿತಿರುವರೆಂದು ಅವನಿಗೆ ಗೊತ್ತಿರದಿದ್ದರೆ ತಾನು ಬರಿದಾದ ಮೋಟರು ಹೊಡೆಯುತ್ತಿರುವೆನೆಂದು ಅವನಿಗೆ ಅನಿಸಬಹುದಾಗಿತ್ತು. ಅವನು ತಿರುಗಿ ನೋಡಿದ. ಸುರಂಗೆ ಚಂದ್ರನನ್ನು ಶೂನ್ಯದೃಷ್ಟಿಯಿಂದ ನೋಡುತ್ತಿದ್ದಳು. ಅವಳ ಕೈಯು ಅವಳ ಜಂಪರದ ಜೇಬಿನ ಮೇಲೆ ಅದು ಹೇಗೋ ಆಡುತ್ತಿತ್ತು. ಸುರಂಗೆಯ ಬಿಡಾರಕ್ಕೆ ಬಂದು ಡ್ರಾಯವ್ಹರನು ಮೋಟಾರು ನಿಲ್ಲಿಸಿದ ಮೇಲೆಯೇ ಅವಳಿಗೆ ಎಚ್ಚರ. ಉದಾಸೀನ ಮುದ್ರೆಯಿಂದ ಆಕಾಶದಲ್ಲಿ ತನ್ನೊಡನೆ ಓಡಿಬರುತ್ತಿದ್ದ ಚಂದ್ರನಿಗೆ ಅವಳೇನು ಕೇಳುತ್ತಿದ್ದಳೋ ಅವಳಿಗೇ ಗೊತ್ತು ! ಡ್ರಾಯವ್ಹರನು ಮೋಟಾರಿನ ಬಾಗಿಲು ತೆರೆದ, ಸುರಂಗೆಯು ಲಗುಬಗೆಯಿಂದ ಇಳಿದಳು. ಮೋಟರು ವಿದ್ಯಾಧರನ ಕೋಣೆಯ ಕಡೆಗೆ ಹೊರಟಿತು. ಈಗಾದರೂ ಒಳಗಿದ್ದ ಸಾಹೇಬರಿಗೆ ಮಾತು ಬರಬಹುದೆಂದು ಡ್ರಾಯವ್ಹರನಿಗೆ ತೋರಿತು. ಅವನಂದ : "ಜುಹೂಕ್ಕ ಬೆಳದಿಂಗಳದಾಗ ಬ್ಹಾಳ ಮಂದಿ ಹೋಕ್ಕಾರ ಸಾಹೇಬ್. ನನಗೇನು ಅದು ಸೇರಾಣೆಲ್ಲ, ಜುಹು."

ಅನ್ನಛತ್ರದಲ್ಲಿ ಪುಕ್ಕಟೆ ಉಂಡು ಮೆಣಸು ಪುಡಿಯನ್ನು ಬೇಡುವ ಈ ಡ್ರಾಯವ್ಹರನನ್ನು ಕಂಡು ವಿದ್ಯಾಧರನಿಗೆ ಆಶ್ಚರ್ಯವಾಯಿತು. ಅವನಂದ : "ಅದೇಕೋ ನಿನಗೆ ಸೇರುವದಿಲ್ಲ?"

"ನಮ್ಮ ಕೊಂಕಣದಾಗಿನ ಗಮ್ಮತ ಐತೇನರಿ ಜುಹೂದಾಗ ಸಾಹೇಬ್?"

"ಏನೇನಿದೆಯೋ ನಿನ್ನ ಕೊಂಕಣದಲ್ಲಿ?"

"ಮಾವು, ಹಲಸು, ಗೇರು–ಗುಡ್ಡದ ಮ್ಯಾಗ ಗೇರುಗಿಡದ ಸಾಲು ಹಿಂಗ ಹತ್ತಿರತಾವ

ಅಂತೀರಿ ! ಕ್ವೀನ್ಸರೋಡ ಮ್ಯಾಗಿನ ಸಂಜೀ ಮುಂದ ನಿಂದರೂ ಮೋಟರ ಸುದ್ದಾ ಏನೂ ಅಲ್ಲರಿ ಅದರ ಮುಂದ !"

"ಆದರೆ ಕೊಂಕಣದಲ್ಲಿ ಹಾವು, ಬಹಳ ಇರುತ್ತವಂತಲ್ಲ....?"

"ಹೌದು ಸಾಹೇಬ್. ದೇವರಹಂಗs ಅದಾವ್ರಿ ಆ ಕಡಿ. ರಾಮೇಶ್ವರ, ಬ್ರಹ್ಮೇಶ್ವರ, ಪಾತಾಳೇಶ್ವರ, ವೇತಾಳ–ಮತ್ತ ಹಾಂವು ಏಟೇಟ ತರದ್ದೂರಿ. ಮ್ಯೂಜಂದಾಗ ನೋಡಾಕ ಸಿಗಾಕಿಲ್ಲರಿ. ಒಂದು ಒನಕೀ ಅಟು ದೊಡ್ಡದಿದ್ದರ, ಒಂದು ಕಿರಬಳ್ಳಿನಟು ಸಣ್ಣದು. ಇಸದ ಹಾವಂತೂ."

"ಮತ್ತೆ ದೆವ್ವ?....."

"ದೆವ್ವ ಇದ್ದರ ಸಹಿತ ದೇವರ ಮುಂದ ಏನ ನಡೀತೈತಿ ಸಾಹೇಬ್ ಅವುಗಳದು? ನನ್ನ ಹುಡಗ್ಗ ಸೆಟವಿ ಬಡಕೊಂಡಿದ್ದಳ್ರಿ. ಕಾಮಾಪುರದ ಕಮಳೇಶ್ವರಿಗೆ ಹರಕಿ ಹೊತ್ತೆ. ಹುಡುಗ ಹುಶಾರಾದ. ಹೋಳಿ ಹುಣ್ಣಿವಿಗೆ ಎಂತಾ ಭಾರಿ ಜಾತ್ರಿ ಆಗ್ತೈತಿ ಅಲ್ಲೆ. ಅಯ್ದು ವರ್ಸಕ್ಕೊಮ್ಮೆ ಕ್ವಾಣಾ ಕೊಡತಾರ್ರಿ ದೇವಿಗೆ !"

"ನಿಲ್ಲಿಸು, ಇಲ್ಲೇ, ನಿಲ್ಲಿಸು" ವಿದ್ಯಾಧರನು ಒಮ್ಮೆಲೆ ಕೂಗಿ ಹೇಳಿದನು.

ಮೋಟರಿನ ಬಾಗಿಲನ್ನು ಧಡಕ್ಕೆಂದು ತೆರೆದು ಅವನು ಹೊರ ಬಂದನು. ಡ್ರಾಯವ್ಹರನ 'ರಾಮರಾಮ' ಸ್ವೀಕರಿಸಿ ಅವನು ರಸ್ತೆ ದಾಟಿ ಹೋಗಿದ್ದನೋ ಇಲ್ಲವೋ ಅದೇ ಡ್ರಾಯವ್ಹರನು ಚಪ್ಪಾಳೆ ಬಾರಿಸಿ "ಸಾಹೇಬ್, ಪತ್ರ ಒಂದು ಉಳದೈತಿ ನಿಂಬದು."

"ನನ್ನದು?"

"ಇದು ನೋಡಿರಿ ಸಾಹೇಬ್."

ಡ್ರಾಯವ್ಹರನು ಅವನ ಹತ್ತಿರ ಓಡುತ್ತಲೇ ಹೋದ. ಪತ್ರವು ತನ್ನದಲ್ಲವೆಂದು ವಿದ್ಯಾಧರನು ಹೇಳುವವನಿದ್ದ. ಆದರೆ ಇಷ್ಟರಲ್ಲಿ ತನ್ನ ಹತ್ತಿರ ಶೂನ್ಯವೃತ್ತಿಯಿಂದ ಕುಳಿತ ಸುರಂಗೆಯ ನೆನಪಾಯಿತು. ಆಗಲೆ ರಮಾಕಾಂತನು ಮಾಡಿದ ಅದಲುಬದಲಿನ ಬಗ್ಗೆ ಮನಸ್ಸಿನೊಳಗೆ ಹುದುಗಿಕೊಂಡಿದ್ದ ಸಣ್ಣ ಅಸಮಾಧಾನವು ಆ ಪತ್ರ ನೋಡಿದೊಡನೆ ಅಳುಕಹತ್ತಿತು. ನೆನಪುಮಾಡಿಕೊಂಡಂತೆ ಮಾಡಿ ಅವನು ಒಮ್ಮೆಲೆ ಅಂದನು : "ಎಲ, ಹೌದು. ಒಳ್ಳೆಯದಾಯಿತು. ಬಹಳ ಮಹತ್ವದ್ದಿತ್ತು ಆ ಪತ್ರ."

ಡ್ರಾಯವ್ಹರನು ಹೊರಟುಹೋಗುತ್ತಲೆ ವಿದ್ಯಾಧರನು ಆ ಪತ್ರ ಒಡೆದು ನೋಡಿದನು. ಬೆಳದಿಂಗಳಲ್ಲಿ ಅಕ್ಷರಗಳು ಸ್ವಲ್ಪ ಮಸುಕು ಮಸುಕಾಗಿ ಕಾಣುತ್ತಿದ್ದವು. ಅವನು ಅದರ ಆರಂಭವನ್ನು ನೋಡಿದ "ಪ್ರಿಯ ರಮಾಕಾಂತ," ಕೆಳಗಿನ ಸಹಿಯ ಕಡೆ ಕಣ್ಣು ತಿರುಗಿಸಿದ–

ತಮ್ಮ ಪ್ರೀತಿಯ ಗೆಳತಿ,
**–ಸುರಂಗಾ**



## ೩
## ಅಗ್ನಿರಸ

ರಮಾಕಾಂತನ ಆ ತ್ರೋಟಕವಾದ ಆತ್ಮವೃತ್ತದ ಪುಟಗಳನ್ನು ವತ್ಸಲೆಯು ಅದೆಷ್ಟೋ ಹೊತ್ತು ಮುಗುಚಿಹಾಕಿದಳು. ಸತ್ತ ಮನುಷ್ಯನನ್ನು ನೋಡುವಾಗ ಭೀತಿಯೇನೋ ಅನಿಸುತ್ತದೆ. ಆದರೆ ಉತ್ಸುಕತೆಯು ಮಾತ್ರ ಇಲ್ಲದಾಗುವುದಿಲ್ಲ. ಆ ಆತ್ಮವೃತ್ತದಲ್ಲಿಯ ತನ್ನ ಮೃತ ಸಂಸಾರದ ಕಡೆಗೆ ನೋಡುವಾಗ ಅವಳ ಸ್ಥಿತಿಯೂ ಹೀಗೇ ಆಯಿತು. ಎದುರಿಗೆ ಹಿಡಿದ ದೀಪವನ್ನು ದಿಟ್ಟಿಸಿ ನೋಡುತ್ತ ಹಾವು ಸುಮ್ಮನಿರುವಂತೆ ವತ್ಸಲೆಯು ಆ ವಹಿಯ ಕಡೆಗೆ ಎಷ್ಟೋ ಹೊತ್ತಿನವರೆಗೆ ನೋಡುತ್ತ ಕುಳಿತಳು. ಬೀದಿಯಲ್ಲಿಯ ಜನಸಂದಣಿಗೆ ಬಂದ ಭರ ಯಾವಾಗಲೋ ಸರಿದುಹೋಗಿತ್ತು. ಸಮುದ್ರಕ್ಕೆ ಉಕ್ಕು ಬಂದು ಇಳಿದು ಹೋದ ಮೇಲೂ ಅದರಿಂದ ತೊಯ್ದ ಉಸುಕಿನ ಭಾಗವು ಸ್ಪಷ್ಟವಾಗಿ ಕಾಣುವಂತೆ ಆ ಸಂದಣಿಯ ಚಿಹ್ನಗಳು ಬೀದಿಯಲ್ಲಿ ಕಾಣುತ್ತಿದ್ದವು. ಅತ್ತಿತ್ತ ವಿದ್ಯುದ್ದೀಪಗಳ ಚಕಚಕಾಟವಿತ್ತು. ಆದರೆ ವತ್ಸಲೆಯ ಹೃದಯದೊಳಗಿನ ಕತ್ತಲೆಯನ್ನು ಬೆಳಗುವ ಸಾಮರ್ಥ್ಯವು ಅವುಗಳಿಗೆ ಎಳ್ಳಷ್ಟೂ ಇರಲಿಲ್ಲ. ಎದುರಿನ ಬಂಗಲೆಯಿಂದ ಸಂಗೀತದ ಮಂಜುಳ ಸ್ವರವು ಕೇಳಬರುತ್ತಿತ್ತು. ಆದರೆ ನಿರಾಶೆಯು ಅವಳ ಭಗ್ನವಾದ ಹೃದಯವೀಣೆಯ ಮೇಲೆ ಮೃತ್ಯುಗೀತವನ್ನೇ ಬಾರಿಸುತ್ತಿತ್ತು. ನಡುವೇ ಅವಳಿಗೆ ಅನಿಸುತ್ತಿತ್ತು–ರಮಾಕಾಂತನು ತನ್ನನ್ನು ಧಿಕ್ಕರಿಸಿ ಆ ಸುರಂಗೆಯೊಡನೆ ಬೆಳ್ದಿಂಗಳಲ್ಲಿ ತಿರುಗಲಿಕ್ಕೆ ಹೋದನೆಂಬುದು ಕೇವಲ ಸ್ವಪ್ನದಲ್ಲಿಯ ಭಾಸವೆಂದು. ಈ ಸ್ವಪ್ನದಿಂದ ಎಚ್ಚರಹೊಂದಬೇಕೆಂದು ಅವಳು ಚಡಪಡಿಸಹತ್ತಿದಳು. ಆದರೆ ಅವಳ ತೊಡೆಯ ಮೇಲೆ ಬಿದ್ದಿರುವ ರಮಾಕಾಂತನ ಆ ವಹಿಯು ಪುಟಪುಟದಲ್ಲಿಯೂ ಸಾರಿ ಹೇಳುತ್ತಿತ್ತು– "ಈ ಸ್ವಪ್ನದಿಂದ ಎಚ್ಚರಿಯಲಿಕ್ಕೆ ಒಂದೇ ಒಂದು ಮಾರ್ಗವಿದೆ. ಅದೆಂದರೆ ಸಾವು !"

ಗಾಯಪಟ್ಟ ಜಾಗೆಯಮೇಲೆ ಕೈಯಾಡಿಸುವುದರಿಂದ ಗಾಯವೇನೂ ಮಾಯುವುದಿಲ್ಲ. ಆದರೆ ಹಾಗೆ ಕೈಯಾಡಿಸುವ ಮೋಹವು ಮಾತ್ರ ತಡೆಯದಾಗುತ್ತದೆ. ರಮಾಕಾಂತನ ಆತ್ಮವೃತ್ತವನ್ನು ತೆರೆದು ಯಾವೊಂದು ಪುಟವನ್ನು ಓದಿ ವತ್ಸಲೆಯು ಮತ್ತೆ ವಿಚಾರಮಗ್ನಳಾಗುತ್ತಿದ್ದಳು. ಒಂದು ಪುಟದಲ್ಲಿ–

"ವತ್ಸಲೆಯನ್ನು ಮದುವೆಯಾಗಲಿಕ್ಕೆ ನಾನು ಒಪ್ಪಬಾರದಿತ್ತು. ಆದರೆ ತಂದೆಯವರ ಹೆದರಿಕೆ ! ಅವರು ಸಬ್ ಇನಸ್ಪೆಕ್ಟರರಾಗಿದ್ದಾಗ ಒಬ್ಬ ಆರೋಪಿಯನ್ನು ಸಾಯುವ ಹಾಗೆ ಹೊಡೆದದ್ದನ್ನು ನಾನು ಚಿಕ್ಕವನಿದ್ದಾಗ ನೋಡಿದೆ. ಆ ಒದರಾಟ ಚೀರಾಟವನ್ನು ಕೇಳಿ ನಾನು ಓಡುತ್ತಲೇ ಒಳಗೆ ಹೋದೆ. ಆ ಮನುಷ್ಯನ ವೇದನೆಯಿಂದಲೂ ತಂದೆಯವರ ಉಗ್ರಮುಖದಿಂದಲೂ ನಾನೆಷ್ಟು ಗಾಬರಿಯಾದೆ? ಮುಂದೆ ತಂದೆಯವರಿಂದ ಏನಾದರೂ ಬೇಡುವದಾದರೆ ನಾನು ತಾಯಿಯನ್ನು ಮಧ್ಯಸ್ಥಳನ್ನಾಗಿ ಮಾಡಬೇಕಾಗುತ್ತಿತ್ತು. ತಮ್ಮ ಮಗನು ಎಷ್ಟು ಆಜ್ಞಾಧಾರಕನೆಂದು ತಂದೆಯವರಿಗೆ ಅನಿಸುತ್ತಿತ್ತು. ಈ ಆಜ್ಞಾಧಾರಕತ್ವದಿಂದಲೇ ನನ್ನ ಮದುವೆ ಹಾಳುಹಾಳಾಯಿತು. ನಾನು ಒಲ್ಲೆನೆಂದಿದ್ದರೆ ಅವರು ಆಸ್ತಿಯ ಮೇಲಿನ ನನ್ನೆಲ್ಲ

ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದರು. ಆಮೇಲೆ ಕಲೆಯ ಉಪಾಸನೆಗೆ ಬೇಕಾಗುವ ಸ್ವಾಸ್ಥ್ಯವು ನನಗೆಲ್ಲಿ ಸಿಗುತ್ತಿತ್ತು? ಈ ಎಲ್ಲ ಮಾತಿನಲ್ಲಿ ವತ್ಸಲೆಯು ನಿಷ್ಕಾರಣವಾಗಿ ಬಲಿಯಾದಳೆಂದು ಒಮ್ಮೊಮ್ಮೆ ಅನಿಸುತ್ತದೆ. ಆದರೆ ಅದಕ್ಕೆ ನಾನೇನು ಮಾಡಲಿ? ಮೀನದ ಸಾರು ಬೇಕಾದರೆ ಜಾಳಿಗೆಯಲ್ಲಿ ಸಿಕ್ಕ ಮೀನುಗಳ ಒದ್ದಾಟವನ್ನು ನೋಡಿ ಎದೆ ಕರಗಿ ಪ್ರಯೋಜನವಿಲ್ಲ. ವತ್ಸಲೆಯಂಥ ಕುರೂಪಿಯಾದ ಕಪ್ಪಗಿನ ಹುಡುಗಿಯ ಕೂಡ ಸಂಸಾರ ಮಾಡಲಿಕ್ಕೆ ನಾನೇನು ಕೊಂಕಣದಲ್ಲಿಯ ಗೇರುಹಣ್ಣಿನ ಕಾರಖಾನೆಯಲ್ಲಿ ಕೆಲಸ ಮಾಡುವ ಕೂಲಿಕಾರನೇ? ಮನುಷ್ಯನ ಮನಸ್ಸು ಪಾತರಗಿತ್ತಿಯಂತೆ ಇರುತ್ತದೆ. ಜೇನು ಇಲ್ಲದ ಹೂವಿನಿಂದ ಹಾರಿ ಇನ್ನೊಂದಕ್ಕೆ ಹೋದರೆ ಅದು ಆ ದೋಷ ನೀರಸವಾದ ಹೂವಿನದೇ ಅಲ್ಲವೇ?...." ಮೂರು ನಾಲ್ಕು ಪುಟಗಳನ್ನು ತಿರುವಿ ಮತ್ತೊಂದನ್ನು ಅವಳು ಓದತೊಡಗಿದಳು: "ತಾಯಿ ತೀರಿಕೊಂಡ ಮೇಲೆ ತಂದೆ ನನ್ನನ್ನು ಹೊಸ್ಟೆಲ್‌ನಲ್ಲಿ ಇಟ್ಟರು. ಜೇಲಿನಲ್ಲಿಯ ಕೈದಿಗಳಂತೆ ಅಲ್ಲಿಯ ಶಿಸ್ತು ಇತ್ತು. ಆದರೆ ಶಿಸ್ತು ಎಷ್ಟೇ ಕಠೋರವಾಗಿದ್ದರೂ ತುರಂಗದಲ್ಲಿಯ ಕೈದಿಗಳು ತಮಗೆ ಬೇಕಾದ್ದನ್ನು ದೊರಕಿಸುವದಿಲ್ಲವೆ? ನಾನು ಅಭ್ಯಾಸದ ಪುಸ್ತಕಗಳ ನಡುವೆ ಕಾದಂಬರಿಗಳನ್ನಿಟ್ಟು ಓದುತ್ತಿದ್ದೆ. ಸುಪರಿಂಟೆಂಡೆಂಟರು ಒಮ್ಮೆ ನಮಗೆ ನಾಟಕಕ್ಕೆ ಹೋಗಲು ಅಡ್ಡಿ ಮಾಡಿದರು. ನಾವು ಕಾವಲಿಗನನ್ನು ಕೈವಶ ಮಾಡಿಕೊಂಡು ಅವರನ್ನು ಹೇಗೆ ಮೋಸಮಾಡಿದೆವು ! ಮರುದಿವಸದಿಂದ ಆ ನಾಟಕದೊಳಗಿನ ಪದಗಳನ್ನು ಗಟ್ಟಿಯಾಗಿ ಹಾಡಿ ಇಡೀ ಹೊಸ್ಟೆಲ್‌ನ್ನೇ ಹೇಗೆ ನಮ್ಮ ತಲೆಯ ಮೇಲೆ ತೆಗೆದುಕೊಂಡೆವು! ಇದನ್ನೆಲ್ಲ ನೆನೆದರೆ ಇಂದಿಗೂ ನನಗೆ ನಗೆ ತಡೆಯಲಿಕ್ಕಾಗುವದಿಲ್ಲ."

"ಮನುಷ್ಯನೆಂದರೇನು ಅರಳೆಯಂತೆ ನಿರ್ಜೀವವಾದ ಕಚ್ಚಾಮಾಲೇ?– ಅವನಿಂದ ಬೇಕಾದ ತೆರದ ಪಕ್ಕಾ ಮಾಲು ಮಾಡಲಿಕ್ಕೆ ಬರುವುದೇ? ತಂದೆಗೆ ಮಗನು ತನ್ನನ್ನು ಅನುಸರಿಸಬೇಕೆಂದೆನಿಸುತ್ತದೆ. ಆದರೆ ಅವನು ಅನುಸರಿಸುವುದಿಲ್ಲವೆಂದು ಯಾರನ್ನಾದರೂ ಶಿಕ್ಷಿಸುವದಾದರೆ ಬ್ರಹ್ಮನನ್ನು ಶಿಕ್ಷಿಸಿರಿ. ಬಡಹುಡುಗನನ್ನೇಕೆ? ತಂದೆಯವರ ಸೇರು ರಕ್ತದಲ್ಲಿ ಮೂರು ಪಾಲಾದರೂ ಪೋಲೀಸ ರಕ್ತವಿರಬೇಕು. ಇಷ್ಟಿದ್ದರೂ ನನ್ನ ರಕ್ತದಲ್ಲಿ ಅದರ ಒಂದು ಹನಿಯೂ ಇಳಿದಿಲ್ಲ. ಇದಕ್ಕೆ ಯಾರು ಹೊಣೆಗಾರರು? 'ಚೌರ್ಯ'ದ ಹೊರತು ಬೇರೆ ಯಾವ ಕಲೆಗೂ ಪೋಲೀಸ ಖಾತೆಯ ಸಂಬಂಧವಿಲ್ಲ. ಆದರೆ ಸುಂದರ ಚಿತ್ರ, ಸುಂದರ ಹಾಡು, ಸುಂದರ ಮುಖ ಇವುಗಳ ಬಗ್ಗೆ ನನಗೆ ಚಿಕ್ಕಂದಿನಿಂದಲೂ ಆಕರ್ಷಣವೆನಿಸುತ್ತ ಬಂದಿತು. ಹೊಸ್ಟೆಲ್‌ನಲ್ಲಿ ವರ್ಗದ ಮೊದಲನೆಯ ನಂಬರಿನವನ ಕೂಡ ನನ್ನದೆಲ್ಲಿ ಗೆಳೆತನವಿತ್ತು? ಆ ಸವಾರಿ ಚೆಂಡಿಕೆಗೆ ಗಂಟು ಹಾಕಿ ತನ್ನ ಅಷ್ಟಾವಕ್ರವಾದ ಬಾಯಿಂದ 'ಘೋಕು' ಹೊಡೆಯುವದರಲ್ಲಿ ತೊಡಗಿರುತ್ತಿತ್ತು. ಅವನಂಥ ಕಾಡು ಹುಡುಗನಿಂದ ನಾನು ಅರ್ಧ ಮೈಲಿ ದೂರವೇ ಇರುತ್ತಿದ್ದೆ. ನನ್ನ ಮಿತ್ರ ಆ ಮನೋಹರ. ಒಬ್ಬ ವೇಶ್ಯೆಯ ಮಗನವನು. ಎಷ್ಟು ನಾಜೂಕು, ಎಷ್ಟು ಸುಂದರ ಕಾಣುತ್ತಿದ್ದ ಆತ. ಕೂದಲಿನ ನಟ್ಟನಡುವೆ ಬೈತಲ ತೆಗೆದು ಅವನು ಬಂದನೆಂದರೆ ನಾನು ಹೇಳುತ್ತಿದ್ದೆ ಅವನಿಗೆ 'ಮನ್ಯಾ, ಸ್ವಲ್ಪದರಲ್ಲಿ ತಪ್ಪಿತು ! ನೀನು ಹೆಣ್ಣಾಗಿಯೇ ಹುಟ್ಟಬೇಕಾಗಿತ್ತು !' ಅವನು ಯಾವುದೋ ನಾಟಕ ಕಂಪನಿ ಸೇರಿದನಂತೆ ಮುಂದೆ ದನಿ ಒಡೆದು ಚೂರಾಯಿತು. ಈಗ ಎಲ್ಲಿರುವನೋ ಯಾರಿಗೆ ಗೊತ್ತು?"



ಮುಂದಿನ ಒಂದು ಪುಟವನ್ನು ವತ್ಸಲೆ ತೆರೆದಳು.

"ನಾನು ದೇವರಾಗಿದ್ದರೆ ರಾತ್ರಿಯನ್ನು ಯಾವಾಗಲೂ ಹುಣ್ಣಿಮೆಯದನ್ನೇ ಮಾಡಿಬಿಡುತ್ತಿದ್ದೆ. ಎರಡು ಗುಲಾಬೀ ಗಲ್ಲಗಳ ನಡುವೆ ಚೆಂದಾದ ಹಲ್ಲುಗಳ ಸಾಲು ಕಾಣುವಂತೆ ನನ್ನ ಸೃಷ್ಟಿಯಲ್ಲಿ ಸಂಜೆ ಮುಂಜಾವುಗಳ ನಡುವೆ ಬರೀ ಚಿಕ್ಕೆಗಳು ಕಾಣುತ್ತಿದ್ದವು. ನನ್ನ ಸೃಷ್ಟಿಯಲ್ಲಿ ಹಲಸಿನ ಹಣ್ಣಿನ ಒಳಗೆ ರಸದುಂಬಿದ ತೊಳೆಗಳು ಇರುತ್ತಿದ್ದವಲ್ಲದೆ ಮೊಸಳೆಯಂತಿದ್ದ ಅದರ ಮೈಯನ್ನು ಚಿಗರೆಯ ಮೈಯಂತೆ ಮಾಡುತ್ತಿದ್ದೆ. ಈಗಿದ್ದ ಈ ಸೃಷ್ಟಿಯನ್ನು ಮಾಡಿದ ಬ್ರಹ್ಮನು ಮೊದ್ದು ಸ್ವಭಾವದ ತಾಯಿಯಂತಿರುವನು. ತನ್ನ ಮುದ್ದು ಕೂಸಿಗೆ ದೃಷ್ಟಿಯಾಗಬಾರದೆಂದು ತಾಯಿ ಗಲ್ಲಕ್ಕೆ ಕಾಡಿಗೆ ಬೊಟ್ಟು ಇಡುವಂತೆ ಅವನು ಸುಂದರವಾದ ಪ್ರತಿಯೊಂದು ವಸ್ತುವಿನಲ್ಲಿಯೂ ದೋಷಗಳನ್ನಿಟ್ಟಿರುವನು. ಸರಸ್ವತಿಯು ಇಂಥ ಈ ಅರೆಹುಚ್ಚ ಬ್ರಹ್ಮದೇವನ ಕನ್ಯೆಯೆಂದು ಹೇಳುವವರು ಹುಚ್ಚರೇ ಸರಿ!"

ವತ್ಸಲೆಯು ಖಿನ್ನಮನಸ್ಸಿನಿಂದ ಕೈಗೆ ಬಂದ ಪುಟ ತೆರೆದು ಓದುತ್ತಿದ್ದಳು :

"ಜೀವನದ ಉದ್ದೇಶವೇನು ? ಸೌಂದರ್ಯಲಾಭ. ಕಪ್ಪು ಮೋಡಗಳಿಂದ ತುಂಬಿದ ಆಕಾಶವನ್ನು ನಾನು ನೋಡಲಾರೆ. ಆದರೆ ಅದೇ ಕಪ್ಪು ಕಣ್ಣಿನ ಮೃದಂಗಗಳ ಮೇಲೆ ಸೃಷ್ಟಿಸುಂದರಿಯ ಮಿಂಚಿನ ಕೈಯು ಕುಣಿಯಹತ್ತಿತೆಂದರೆ ನನ್ನ ಮನಸ್ಸು ಮುಗ್ಧವಾಗಿ ಹೋಗುತ್ತದೆ. ಮಳೆಯ ನೋಟವು ಮನೋವೇಧಕವೇನೋ ಹೌದು. ಆದರೆ ಸೂರ್ಯನ ಸ್ವಾಗತಕ್ಕಾಗಿ ಆಕಾಶವು ಮಳೆಬಿಲ್ಲಿನ ತೋರಣ ಕಟ್ಟುವ ನೋಟವು ನನಗೆ ಹೆಚ್ಚು ಮೋಹಕವೆನಿಸುತ್ತದೆ."

"ಚಿಕ್ಕಂದಿನಿಂದ ನನ್ನ ಸೌಂದರ್ಯಾಸಕ್ತಿಯು ಬೆಳೆಯುತ್ತ ಬಂದಿತು. ಕೂದಲೇ ಆಗಲಿ, ಬಟ್ಟೆಯೇ ಆಗಲಿ. ಹೊಲಹೊಲಸುತನವು ನನಗೆ ಎಳ್ಳಷ್ಟೂ ಸರಿಹೋಗುವುದಿಲ್ಲ. ನನಗೆ ಯಾರಾದರೂ ಸರ್ವಾಧಿಕಾರವನ್ನು ಕೊಟ್ಟರೆ ಕುರೂಪಿ ಜನರನ್ನೂ ಅಸಹ್ಯವಸ್ತುಗಳನ್ನೂ ಒಂದು ಕ್ಷಣದಲ್ಲಿ ಇಲ್ಲದಂತೆ ಮಾಡುವೆ."

"ಕಾಲೇಜಿನಲ್ಲಿ ನಾನು ಹುಡುಗಿಯರ ಬೆಂಚಿನ ಹತ್ತಿರ ಬೇಕೆಂತಲೆ ಕೂಡುತ್ತಿದ್ದೆ. ಆ ಹೊತ್ತಿಗೆ ಕಿಡಿಗೇಡಿ ಹುಡುಗರು ನನ್ನ ಚೇಷ್ಟೆಮಾಡುತ್ತಿದ್ದರು. ಆದರೆ ಈಗ ಲೋಕಪ್ರಿಯವಾದ ನನ್ನ ಕತೆಗಳಿಗೂ ಆ ಕೂಡುವುದಕ್ಕೂ ಸಂಬಂಧವಿರುವುದೆಂದು ಹೇಳಿದರೆ ಯಾರಿಗೂ ಈಗ ನಿಜವೆಂದು ತೋರಲಿಕ್ಕಿಲ್ಲ. ಸುಂದರ ತರುಣಿಯೆಂದರೆ ಎಲ್ಲ ಕಲೆಗಳ ಮನೋಹರ ಸಂಗಮವಲ್ಲವೇ? ಅವಳ ಮೈಸಿರಿ, ತುಟಿ, ಗಲ್ಲ, ಕೂದಲು ಎಂದರೆ ಚಿತ್ರಕಲೆಯ ಪ್ರದರ್ಶನದ ಬೇರೆ ಬೇರೆ ವಿಭಾಗಗಳೇ ಸರಿ. ಅವಳ ಮುದ್ದು ಮಾತು, ಮಂಜುಳ ಗುಣುಗುಣು, ಸವಿಹಾಡು ಇವುಗಳಲ್ಲಿ ಗಾಯನಕಲೆಯು ಮೂರ್ತಿಮತ್ತಾಗಿ ಕಾಣುತ್ತದೆ. ಸುಂದರ ಸ್ತ್ರೀಯ ಸರಳ ನಡಿಗೆಯು ಕೂಡ ನೃತ್ಯಕಲೆಯ ಪಾಠವೇ ಆಗಿರುತ್ತದೆ."

“ಕಲಾವಿದನ ಸೌಂದರ್ಯದೃಷ್ಟಿಯು ಹೆಚ್ಚಾದಂತೆ ಅವನಿಗೆ ಸುಂದರ ಸ್ತ್ರೀಯ ರೂಪದಿಂದಾಗುವ ಆಕರ್ಷಣವೂ ಹೆಚ್ಚು. ಚಿಕ್ಕವನಿದ್ದಾಗ ನೆರೆಮನೆಯ ಒಂದು ಚಿಕ್ಕ ಹುಡುಗಿಗೆ ನಾನು ಆಟದಲ್ಲಿ ಮುದ್ದು ಕೊಟ್ಟೆನೆಂದು ತಂದೆಯವರು ನನ್ನನ್ನು ಚೆನ್ನಾಗಿ ಥಳಿಸಿದ್ದರು. ನಾನೇನೋ ಕೆಟ್ಟ ಕೆಲಸ ಮಾಡಿರಬೇಕೆಂದು ಆಗ ನನಗೆ ಕೂಡ ಅನಿಸಿತು. ಆದರೆ ಅದು ನನ್ನ ರಕ್ತದಲ್ಲಿದ್ದ ಕಲಾಸಕ್ತಿಯ ಪರಿಣಾಮವೆಂದು ಈಗ ತೋರುತ್ತದೆ. ನಮ್ಮ ಮನೆಯಲ್ಲಿ ಚಂದ್ರಿ ಎಂಬ ಚೆಲುವೆಯಾದ ಒಕ್ಕಲಗಿತ್ತಿಯಿದ್ದಳೆಂದು ನನಗೆ ಒಳ್ಳೆ ಜ್ಞಾಪಕವಿದೆ. ಅವಳ ಕೂಡ ಅತ್ತಿಂದಿತ್ತ ಸುಳಿದಾಡುವಾಗ ನನಗೆಷ್ಟು ಆನಂದವಾಗುತ್ತಿತ್ತು ! ಮುಂದೆ ಅವಳು ಸತ್ತಳೋ ಎಲ್ಲಿಯಾದರೂ ಹೋದಳೊ. ಇನ್ನೊಬ್ಬ ಕೆಲಸಗಿತ್ತಿ ಬಂದಳು. ನನ್ನ ಕೆಲಸಗಳು ಮೊದಲಿನಂತೇ ನಡೆದವು. ಆದರೆ ಚಂದ್ರಿಯಿಲ್ಲವೆಂದು ಒಂದೆರಡು ಸಾರೆ ನಾನು ಕಣ್ಣೀರು ಕೂಡ ಇಟ್ಟೆ. ರಜೆಯಲ್ಲಿ ತಂದೆಯವರ ಹತ್ತಿರ ಇರಲಿಕ್ಕೆ ಹೋದಾಗ ಪೇಟೆಯಿಂದ ಪಲ್ಲೆಕಾಯಿ ತರುವುದಾದರೆ–ಅತಿ ಕುರೂಪಿ ಕಾಣುವ ಹೆಂಗಸಿನ ಬಳಿ ಒಳ್ಳೆಯ ಪಲ್ಲೆಯನ್ನು ಮಾರಲಿಕ್ಕೆ ತೆಗೆದುಕೊಳ್ಳುವುದೆಂದರೆ ನನ್ನ ಜೀವದಮೇಲೆ ಬರುತ್ತಿತ್ತು.”

“ಶಾಲೆ–ಕಾಲೇಜುಗಳಲ್ಲಿ ಈ ಸೌಂದರ್ಯಾಸಕ್ತಿಯು ವಾಚನದಿಂದ ಇನ್ನೂ ಹೆಚ್ಚು ಬೆಳೆಯಿತು. ನಾಟಕ–ಸಿನೇಮಾಗಳನ್ನು ನೋಡಿದ ಮೇಲಂತೂ ಕಪ್ಪು, ಕುರೂಪಿ ಜನರ ಬಗ್ಗೆ ನನಗೆ ಹೇಸಿಕೆಯೇ ಹುಟ್ಟಿತು. ಎಲ್.ಎಲ್.ಬಿ. ಯಲ್ಲಿ ನಾನು ಎರಡು ಮೂರು ಸಾರೆ ಫೇಲಾಗಲು ತಂದೆಯವರು ನನಗಾಗಿ ಕೆಲಸ ನೋಡಹತ್ತಿದರು. ಆದರೆ ಹುಡುಗರ ಶಾಲೆಯಲ್ಲಿ ಹೆಚ್ಚಿನ ಸಂಬಳದ ಕೆಲಸವನ್ನು ಬಿಟ್ಟು ನಾನು ಹುಡುಗಿಯರ ಶಾಲೆಯಲ್ಲಿ ಕಡಮೆ ಸಂಬಳದ ಕೆಲಸವನ್ನು ಹಿಡಿದೆ. ನನ್ನ ಸ್ವಾರ್ಥತ್ಯಾಗವನ್ನೂ ಸ್ತ್ರೀಶಿಕ್ಷಣದ ವಿಷಯದಲ್ಲಿಯ ನನ್ನ ಕಳಕಳಿಯನ್ನೂ ಆ ಹೊತ್ತಿಗೆ ವೃತ್ತಪತ್ರಗಳು ಎಷ್ಟು ಹೊಗಳಿದವು. ಈ ತಲೆಕೆಟ್ಟ ಸಂಪಾದಕರ ಬುದ್ಧಿ ಹರಿಯುವುದು ಅಷ್ಟೇ ! ಹುಡುಗರ ಶಾಲೆಗಿಂತ ಹುಡುಗಿಯರ ಶಾಲೆಯಲ್ಲಿ ನನ್ನ ವಿಶುದ್ಧವಾದ ಸೌಂದರ್ಯ ದೃಷ್ಟಿಗೆ ಪೋಷಣ ಹೆಚ್ಚಾಗುವುದೆಂದು ಈ ಕೆಲಸವನ್ನು ಕೈಕೊಂಡೆ. ನನ್ನ ತರ್ಕವೆಲ್ಲಿ ಸುಳ್ಳಾಗಿತ್ತು ? ಇದೇ ಅವಧಿಯಲ್ಲಿ ತರುಣಿಯರ ಸುಂದರ, ಸಜೀವ ವರ್ಣನೆಗಳ ಸ್ಫೂರ್ತಿ ನನಗೆ ಹುಡುಗರ ಶಾಲೆಯಲ್ಲಿ ಸಿಗುತ್ತಿತ್ತೇ? ಹುಡುಗಿಯರ ವರ್ಗವೆಂದರೆ ಚೆಂದಾದ ಹೂದೋಟ. ಹುಡುಗರ ವರ್ಗ–ಅದೆಷ್ಟು ಒಳ್ಳೆಯದಿದ್ದರೂ–ಹಣ್ಣಿನ ತೋಟ ! ಐದನೇ ಇಯತ್ತೆಯಲ್ಲಿ ಇದ್ದ ಆ ಉಷಾ ಖರೆ ! ಅವಳು ಆರನೆಯ ಇಯತ್ತೆಗೆ ಹೋಗಲು ಆ ವರ್ಗಕ್ಕೆ ನನ್ನ ‘ತಾಸು’ ಇಲ್ಲದಿದ್ದರೂ ನಾನು ಬೇಕೆಂತ ಬೇಡಿ ಒಂದು ತಾಸು ತೆಗೆದುಕೊಳ್ಳಲಿಲ್ಲವೆ? ಉಳಿದ ಹುಡುಗಿಯರಿಗಿಂತ ಅವಳು ನನಗೆ ಹೆಚ್ಚು ಸೇರುತ್ತಿದ್ದಳೆಂಬುದು ಇನ್ನೊಬ್ಬರಿಗೆ ತಿಳಿಯುವದು ಕೂಡ ಶಕ್ಯವಿಲ್ಲ. ಇದೇ ನಿಜವಾದ ವಿಶುದ್ಧ ಸೌಂದರ್ಯ ದೃಷ್ಟಿ. ಈ ನಾಟಕವನ್ನು ಪ್ರಯೋಗಿಸುವ ನೆವದಿಂದ ನಾನು ಶಾಲೆಯ ಕೆಲಸದಿಂದ ರಜೆ ಪಡೆದೆ. ಅದರಲ್ಲಿಯೇ ತಂದೆಯವರ ಮರಣವೂ ಕೂಡಿತು. ಕಲೆಯ ಉಪಾಸನೆಯನ್ನು ಮಾಡುವುದಾದರೆ ಹನ್ನೊಂದರಿಂದ ಐದರವರೆಗಿನ ಶಾಲೆಯ ಚಕ್ರದಲ್ಲಿ ಸಿಕ್ಕು ಪ್ರಯೋಜನವಿಲ್ಲ.



ಆದರೆ ಹುಡುಗಿಯರ ವರ್ಗದಲ್ಲಿ ಕುಳಿತಾಗ ದೊರೆಯುವ ಪವಿತ್ರ ಸೌಂದರ್ಯದ ಆನಂದವನ್ನು ಕಳೆದುಕೊಳ್ಳಬಾರದೆಂದೂ ಒಮ್ಮೊಮ್ಮೆ ಎನಿಸುತ್ತದೆ. ವರ್ಗದಲ್ಲಿ ಏನಾದರೂ ಬರೆದುಕೊಳ್ಳಲಿಕ್ಕೆಂದು ಹುಡುಗಿಯರು ಮುಖಗಳನ್ನು ಕೆಳಗೆ ಹಾಕಿದರೆ ಅವರ ತುರುಬುಗಳ ಕೆಳಗೆ ಬಳ್ಳಿಯ ಕುಡಿಗಳಂತೆ ಆಡುವ ಕಳ್ಳ ಕುರುಳು, ಒಂದು ವಿನೋದವನ್ನು ಮಾಡಿದರೆ ಅವರ ಮುಖದಲ್ಲಿ ತಲೆದೋರುವ ನಾಚಿಕೆಯ ಕುಣಿತ–ಆದರೆ ಸೌಂದರ್ಯದ ಈ ಸಂಕುಚಿತ ಕ್ಷೇತ್ರದಲ್ಲಿ ನಾನು ಬೀಳುವದೇನು ಅವಶ್ಯ? ನನ್ನ ಸೌಂದರ್ಯ ದೃಷ್ಟಿಯ ಪೋಷಣವು ಮುಗ್ಧ ಹುಡುಗಿಯರಿಗಿಂತ ಕಲಾಚತುರೆಯರಾದ ತರುಣಿಯರ ಸಹವಾಸದಲ್ಲಿ ಹೆಚ್ಚಾಗಲಿಕ್ಕಿಲ್ಲವೆ? ಕಳೆದ ಎರಡು ತಿಂಗಳಲ್ಲಿ ಸುರಂಗೆಯ ಕೂಡ ನನಗೆಷ್ಟು ನಿಕಟ ಸಂಬಂಧವು ಬಂದಿತು! ಕಥೆಗಳಲ್ಲಿಯ ಚಿತ್ರಗಳ ನಿಮಿತ್ತದಿಂದ ಆ ಸುಲೋಚನೆಯ ಪರಿಚಯವೂ ಆಯಿತು. ಅವರ ಪರಿಚಯವಾದ ಕಾರಣ ವತ್ಸಲೆಯ ಕುರೂಪವೂ ಕಲಾಹೀನತೆಯೂ ಈಗ ನನಗೆ ತೀರ ಅಸಹ್ಯವಾಗಿವೆ !”

ಸಾಲಾಗಿ ಬರೆದ ಈ ಎರಡು ಮೂರು ಪಾನುಗಳನ್ನೋದಿ ವತ್ಸಲೆಯ ಕಣ್ಣಲ್ಲಿ ನೀರು ತುಂಬಿದವು. ಒಂದೆರಡು ಹನಿ ಪುಟಗಳ ಮೇಲೆ ಬಿದ್ದವು ಕೂಡ. ಆದರೆ ಇಷ್ಟರಲ್ಲಿ ಏನೋ ವಿಚಾರ ಮಾಡಿ ಅವಳು ಔಡುಗಚ್ಚಿ ವಹಿಯ ಕೊನೆಗೆ ಬರೆದ ಪುಟವನ್ನು ತೆರೆದಳು.

“ನನ್ನ ಲಗ್ನವಾದ ಎರಡು ಮೂರು ತಿಂಗಳಲ್ಲಿಯೇ ಕ್ಷಯದಿಂದ ಬೇನೆ ಬಿದ್ದು ತಂದೆಯವರು ನನ್ನ ಮೇಲೆ ದೊಡ್ಡದೊಂದು ಉಪಕಾರವನ್ನೇ ಮಾಡಿದರು ! ಅವರನ್ನು ಹವೆ ಬದಲಾಯಿಸುವುದಕ್ಕಾಗಿ ವತ್ಸಲೆಯನ್ನು ಅವರ ಶುಶ್ರೂಷೆಗಾಗಿ ಪಾಂಚಗಣಿಯಲ್ಲಿ ಇಟ್ಟು ನಾನು ಮುಂಬಯಿಯಲ್ಲಿ ಇಡೀ ಒಂದು ವರುಷ ಸುಖದಿಂದ ಇರುವದು ಶಕ್ಯವಾಯಿತು. ಆದರೆ ಈಗ ತಂದೆ ತೀರಿದರು. ಎಂಟು ದಿವಸದ ಹಿಂದೆ ಈ ಪೀಡೆಯು ಮನೆಯಲ್ಲಿರಲಿಕ್ಕೂ ಬಂದಿತು. ತಮ್ಮ ಸೋದರತ್ತೆಯ ಕಡೆಗೆ ಹೋಗೆಂದರೆ ಅವಳು ಒಪ್ಪುವದೇ ಇಲ್ಲ. ಇವಳ ಜೊತೆಯಲ್ಲಿ ದಿವಸಗಳನ್ನು ನೂಕುವದು–ಅವಳಲ್ಲಿ ಅಂಥದು ಏನಿದೆ? ಲಗ್ನದ ಹೊತ್ತಿಗೆ ತಂದೆ ಅನ್ನುತ್ತಿದ್ದರು: ‘ಹುಡುಗಿ ಬಹಳ ಮೆತ್ತಗಿನ ಮನಸ್ಸಿನವಳು.’ ಒಂದು ನಾಯಿಯ ಕುನ್ನಿ ಸತ್ತುಹೋಯಿತೆಂದು ಒಂದು ದಿನ ಇವಳು ಒಂದೇಸವನೆ ಅಳುತ್ತಿದ್ದಳೆಂದು ಇವರ ಮಾವನು ತಂದೆಯವರ ಮುಂದೆ ಸುಳ್ಳು ಹೇಳಿದ. ಲಗ್ನ ಮಾಡಿಸುವದಕ್ಕಾಗಿ ಸುಳ್ಳು ಹೇಳಲಿಕ್ಕೆ ಸಹ ಅವರು ಹಿಂದೆಮುಂದೆ ನೋಡಿರಲಿಕ್ಕಿಲ್ಲ. ನಮ್ಮ ತಂದೆಯೇನು? ಪೆನ್ಶನ್ ಸಿಕ್ಕ ಕೂಡಲೆ ಪೋಲೀಸ ಖಾತೆಯ ಸಂಬಂಧ ತಪ್ಪಿತು ! ಅಷ್ಟರಿಂದಲೇ ಖುಷಿಯಾಗಿಬಿಟ್ಟರು. ಆದರೆ ನಾಯಿ–ಬೆಕ್ಕುಗಳ ಸಲುವಾಗಿ ಅಳುತ್ತ ಕೂಡುವ ಹೆಂಡತಿಯಿಂದ ತಮ್ಮ ಕಲಾಪ್ರೇಮಿ ಮಗನಿಗೆ ಎಳ್ಳಷ್ಟೂ ಉಪಯೋಗವಿಲ್ಲೆಂಬುದು ಅವರ ಲಕ್ಷ್ಯಕ್ಕೆ ಬರಲಿಲ್ಲ. ಬರಬೇಕಾದರೂ ಹೇಗೆನ್ನಿರಿ. ಪೋಲೀಸ ಖಾತೆಯಲ್ಲಿಯೇ ಇಡೀ ಜನ್ಮ ಹೋಯಿತು. ಶೇಣವೆಯರ ಮನೆಯಲ್ಲಿ ಕುಡಾಳ ದೇಶಸ್ಥರ ಹುಡುಗಿಯನ್ನು ಮದುವೆ ಮಾಡಿಕೊಳ್ಳುವ ಈ ಸುಧಾರಣೆಯು ತಂದೆಯವರಿಗೆ ಸುಮ್ಮನೆ ಹೊಳೆಯಲಿಲ್ಲ. ನನ್ನ ಚಿಕ್ಕಂದಿನ ಸಮಾಚಾರ. ತಂದೆಯವರಿಗೆ ಕೊಂಕಣಕ್ಕೆ

ವರ್ಗವಾಗಿತ್ತು. ಎಲ್ಲಿಯದೋ ಒಂದು ಪೋಲೀಸ ತೊಡಕು ಅವರ ಕೊರಳಿಗೆ ಬಂದು ಬಿದ್ದಿತು. ಅದರಲ್ಲಿ ಜೀವ ಉಳಿಯುವದೋ ಇಲ್ಲವೋ ಎನ್ನುವಂತೆ ಸ್ಥಿತಿಯಾಯಿತಂತೆ. ಆಗ ವತ್ಸಲೆಯ ತಂದೆ ಅವರನ್ನು ಬಿಡಿಸಿಕೊಟ್ಟರು. ಪಾಪ ತಂದೆಯದು, ಪ್ರಾಯಶ್ಚಿತ್ತ ಮಗನಿಗೆ! ಒಳ್ಳೇ ನ್ಯಾಯ !"

"ಆದರೆ ಈ ಅಂಧನಗರಿಯ ನ್ಯಾಯಕ್ಕೆ ನಾನು ತಲೆ ಬಾಗಿಸುವವನಲ್ಲ. ವತ್ಸಲೆಯು ಒಂದು ಮನುಷ್ಯ ಜೀವವೆಂದು ಅವಳ ಬಗ್ಗೆ ನನಗೆ ತುಸು ಕೆಡಕೆನಿಸುತ್ತದೆ. ಆದರೆ ಅರಸನಿಗೆ ಯಾರಾದರೂ ಇದ್ದಲಿಯ ಕಪ್ಪಕಾಣಿಕೆ ಕೊಟ್ಟರೆ ಅದನ್ನು ಮುಕುಟದಲ್ಲಿ ಧರಿಸುವಷ್ಟು ಅವ ಹುಚ್ಚನಿರುವದಿಲ್ಲ ! ಜಗತ್ತಿನಲ್ಲಿ ಸಾಮಾನ್ಯ – ಅಸಾಮಾನ್ಯಗಳ ನಡುವೆ ಎರಡು ಧ್ರುವಗಳ ಅಂತರವು ಉಳಿದೇ ಉಳಿಯುವದು ! ಬ್ರಾಹ್ಮಣರಲ್ಲಿ ಹುಟ್ಟಿದವಳೆಂದು, ನನ್ನ ತಂದೆಯವರ ಕೃತಜ್ಞತೆಯು ಜಾಗೃತವಾಯಿತೆಂದು, ಹತ್ತು ಜನರಲ್ಲಿ ಎದ್ದು ಕಾಣುವ ಕಪ್ಪು ಹುಡುಗಿ ನನ್ನ ಹೆಂಡತಿಯಾದಳು. ಅದೇ ಕೀಳು ಜಾತಿಯಲ್ಲಿ ಹುಟ್ಟಿದ್ದರೆ ಕೊಂಕಣದಲ್ಲಿಯ ಯಾವುದಾದರೊಂದು ಹಳ್ಳಿಯಲ್ಲಿ ತಲೆಯ ಮೇಲೆ ಮೀನದ ಹೊರೆ ಹೊತ್ತು ಪೇಟೆಗೆ ಓಡುತ್ತ ಹೋಗುವದು, ಇಲ್ಲವೆ ಕೂಲಿಯಿಂದ ಮುಸುರೆ ತಿಕ್ಕುವುದು, ಗೇರುಹಣ್ಣು ಸುಲಿಯುವುದು ಇವೇ ಇವಳ ಪಾಲಿಗೆ ಬರುತ್ತಿದ್ದವು. ಹರಕು ಚಿಂದಿಯನ್ನುಡಿಸಿ ಹತ್ತುಮಂದಿ ಒಕ್ಕಲಿಗ ಹೆಂಗಸರ ನಡುವೆ ಇವಳನ್ನು ನಿಲ್ಲಿಸಿದರೆ ಇವಳು ಬ್ರಾಹ್ಮಣರಲ್ಲಿ ಹುಟ್ಟಿದವಳೆಂದು ಬ್ರಹ್ಮದೇವನಿಗೂ ಅನಿಸಲಿಕ್ಕಿಲ್ಲ. ಹೀಗಿದ್ದು ಇವಳು ನನ್ನ ಸೌಂದರ್ಯದ ಸುಂದರ ಚಿತ್ರಗಳನ್ನು ಬರೆಯುವ–ಕಲಾವಂತ ಕಥಾಲೇಖಕನೆಂದು ಮಹಾರಾಷ್ಟ್ರದಲ್ಲಿ ಮೋಹಿನೀಮಂತ್ರವನ್ನೂರುವ ರಮಾಕಾಂತನ–ಹೆಂಡತಿ !"

"ಮೊನ್ನಿನ 'ಬಕುಲ' ಪತ್ರಿಕೆಯಲ್ಲಿಯ 'ಭಾವದಂತೆ ದೇವ' ಎಂಬ ನನ್ನ ಕಥೆ ಎಂದರೆ ಜನರಿಗೆ ಹುಚ್ಚು. ತನ್ನ ತಂದೆಯು ಪ್ರಿಯಕರನೊಡನೆ ತನಗೆ ಮದುವೆ ಮಾಡಿಕೊಡುವುದಿಲ್ಲವೆಂದು ನಡುರಾತ್ರಿಯಲ್ಲಿ ಮನೆ ಬಿಟ್ಟು ಹೋಗುವ ಸುಂದರ ನಾಯಿಕೆ–ಕುಂಕುಮವಳಿಸಿ ಗುಡಿಯ ಆವಾರದಲ್ಲಿ ವಿಧವೆಯೆಂದು ಅವಳ ಇರುವಿಕೆ–ಅವಳ ಮೇಲೆ ಅಲ್ಲಿಯ ಪೂಜಾರಿಯ ಪಾಪದೃಷ್ಟಿ, ಅವನ ಮಾತಿನಲ್ಲಿ ನಂಬಿಗೆಯಿಟ್ಟು ದೇವರಿಗೆ ತನ್ನ ದೂರು ತೋಡಿಕೊಳ್ಳಲೆಂದು ನಟ್ಟನಡುರಾತ್ರಿಯಲ್ಲಿ ಅವಳು ಗುಡಿಯಲ್ಲಿ ಹೋಗುವದು–ಬೈರಾಗಿಯ ವೇಷದಿಂದ ತಿರುಗುತ್ತಿದ್ದು ದೇವರ ಮೂರ್ತಿಯ ಹಿಂದೆ ಅಡಗಿಕೊಂಡು ಕುಳಿತ ನಾಯಕನು ಅವಳ ಚೀರಾಟ ಕೇಳಿ ಪೂಜಾರಿಯ ಕೈಯಿಂದ ಅವಳನ್ನು ಬಿಡಿಸುವುದು–ಈ ಎಲ್ಲ ಸನ್ನಿವೇಶಗಳು ಎಷ್ಟು ರಮ್ಯವಾಗಿವೆ ! ಈ ಕಥೆ ಬರೆಯುವಾಗ ಹೆಜ್ಜೆ ಹೆಜ್ಜೆಗೆ ಸುರಂಗೆಯ ಮೂರ್ತಿಯನ್ನು ಕಣ್ಣಮುಂದೆ ತಂದುಕೊಂಡು ನಾನು ನಾಯಿಕೆಯನ್ನು ಚಿತ್ರಿಸುತ್ತಿದ್ದೆ. ವತ್ಸಲೆಯು ನನ್ನ ಪ್ರತಿಭೆಯನ್ನು ಹೀಗೆ ಪೋಷಿಸುವವಳೇ ? ಛೇ, ಅದರ ಹೆಸರು ಬೇಡ...... ಈವರೆಗೆ ತಂದೆಯವರ ದಾಕ್ಷಿಣ್ಯಕ್ಕಾಗಿ ಸುಮ್ಮನಿದ್ದೆ. ಆದರೆ ಈಗ ಅವಳಿಗೆ ಸ್ಪಷ್ಟವಾಗಿ ಹೇಳಲೇಬೇಕು. ಅವಳ ದಾರಿ ಬೇರೆ, ನನ್ನ ದಾರಿ ಬೇರೆ. ಒಂದು ಉತ್ತರ ಧ್ರುವ, ಇನ್ನೊಂದು ದಕ್ಷಿಣ ಧ್ರುವ. ಸೌಂದರ್ಯ ಹಾಗೂ ಕಲೆ ಇವು ನನ್ನ ಜೀವನ. ಅವಳ ಜೀವನ–ನನ್ನ ಹೆಂಡತಿಯೆಂದು; ಅವಳು ಮಿರುಗಿನ ಪತ್ತಲ ಉಡಬಹುದು, ಇಂಗ್ರಜೀ ಏಳನೆಯ ಇಯತ್ತೆಯವರೆಗೆ ಓದಿದ್ದರಿಂದ ಬಹಳವಾದರೆ ಒಂದರ್ಧ ಕಾದಂಬರಿಯನ್ನು ಓದಬಹುದು, ಅದು ಕೂಡ ಅಶಕ್ಯವೇ ಅನ್ನಿ, 'ಭಾವದಂತೆ ದೇವ' ಎಂಬ ಕತೆಯಿದ್ದ ಸಂಚಿಕೆಯನ್ನು ನಾನೊಮ್ಮೆ ಉಣ್ಣುತ್ತಲೇ ಓದುತ್ತಿದ್ದೆ. ಅದು ಅಲ್ಲಿಯೇ ಉಳಿಯಿತು. ಆದರೆ ಅವಳು ಆ ಕತೆಯ ಬಗ್ಗೆ ಒಂದು ಶಬ್ದವನ್ನಾದರೂ ಆಡಿದಳೇ? ಅದೆ ಸುರಂಗೆಯು ಸಾಯಂಕಾಲ 'ರಂಗತಾಲೀಮಿ'ನ ಕಾಲಕ್ಕೆ ಕಥೆಯಲ್ಲಿಯ ನಾಯಿಕೆಯ ಬಾಯಲ್ಲಿಯ ಎರಡು ವಾಕ್ಯಗಳನ್ನು ನಡುವೇ ಸೇರಿಸಿ ಎಷ್ಟು ನಗೆ ಹುಟ್ಟಿಸಿದಳು. ಆ ಸುಲೋಚನೆಯೂ ಹಾಗೇ. ದೇವಾಲಯದಲ್ಲಿಯ ಸನ್ನಿವೇಶದ ಚಿತ್ರವನ್ನು ಮರುದಿವಸವೇ ತೆಗೆದು ತಂದು ನನಗೆ ತೋರಿಸಿದಳು. ಇನ್ನು ಮುಂದೆ ತಾನೇ ನನ್ನ ಕತೆಗಳಲ್ಲಿಯ ಚಿತ್ರ ಬರೆಯುವವಳೆಂದು ಅವಳು ನಿಶ್ಚಯಿಸಿಬಿಟ್ಟಿರುವಳು. ಜನ್ಮದ ಜೋಡು ಹೀಗಿದ್ದರೆ ಚೆಂದ ! ಇಲ್ಲದಿದ್ದರೆ–"

"ಜಗತ್ತಿನಲ್ಲಿ ಜಾತಿಗಳು ಎರಡೇ! ಶರೀರದಿಂದ ದುಡಿಯುವ ಅರಸಿಕ, ಕಲಾಹೀನ, ಮಂದಬುದ್ಧಿಗಳಾದ ಜನರದೊಂದು, ಬುದ್ಧಿಯಿಂದ ಜೀವಿಸುವ, ರಸಿಕ, ಕಲಾಸಂಪನ್ನ ಪ್ರತಿಭಾವಂತರಾದ ಜನರದಿನ್ನೊಂದು. ಉಳಿದೆಲ್ಲ ಜಾತಿಗಳು ಒಂದು ವೇಳೆ ಮುರಿದುಹೋಗಬಹುದು. ಆದರೆ ಈ ಎರಡು ಜಾತಿಗಳ ನಡುವಿನ ಅಂತರವು ಎಂದೂ ಕಡಮೆಯಾಗುವುದಿಲ್ಲ. ವತ್ಸಲೆ ಒಂದು ಜಾತಿಯವಳು. ನಾನು ಇನ್ನೊಂದು ಜಾತಿಯವನು. ಹಿರಿಯರ ಹಟದಿಂದ ಬಾಹ್ಮಣರು ಒಟಗುಟ್ಟಿದ ಮಂತ್ರಗಳಿಂದ, ಜನರು ಹಾಕಿದ ಅಕ್ಷತೆಗಳಿಂದ, ಇಷ್ಟು ಭಿನ್ನ ಪ್ರಕೃತಿಯ ಜನರು ಏಕರೂಪವಾಗುವರೇ? ಇದನ್ನೆಲ್ಲ ವತ್ಸಲೆಗೆ ಬಾಯಿಂದ ಹೇಳಲಾಗುವುದಿಲ್ಲವೆಂದು ಮನಸ್ಸಿನೊಳಗಿನ ವಿಚಾರಗಳನ್ನು ಕಾಗದದ ಮೇಲೆ ಇಳಿಸತೊಡಗಿದೆ. ಈ ವಹಿಯನ್ನು ಒಮ್ಮೆ ವತ್ಸಲೆಯ ಮೈಮೇಲೆ ಎಸೆದೆನೆಂದರೆ ಪಾರಾದೆ. ಇಷ್ಟು ಸಾದ್ಯಂತವಾದ, ಬರೆದಿಟ್ಟ ಪ್ರಮಾಣವನ್ನು ಓದಿದ ಮೇಲೆ ಅವಳ ಮನೋದೇವತೆ ಕೂಡ ನನಗೆ ದೋಷಿಯೆಂದು ಗೊತ್ತುಪಡಿಸಲಾರದು. ಹೂವಿನಿಂದ ಹೂವಿಗೆ ಹಾರಾಡುವ ಪಾತರಗಿತ್ತಿ ಹುಟ್ಟು ನಾನು. ದೀಪಕ್ಕೆ ಮುಗಿಬಿದ್ದು ಸುಟ್ಟುಹೋಗುವ ಹುಳದ ಜನ್ಮವನ್ನು ಸೃಷ್ಟಿ ಅವಳಿಗೆ ಕೊಟ್ಟಿದೆ. ಈ ದೋಷವು ಯಾರದು ? ನನ್ನದಂತೂ ಅಲ್ಲವೇ ಅಲ್ಲ."

ವತ್ಸಲೆಯು ಆ ವಹಿಯನ್ನು ದೂರ ಬಿಸುಟಿದಳು. ಆದರೆ ಅಷ್ಟರಿಂದಲೇ ಅಂತಃಕರಣದಲ್ಲಿ ಹೊತ್ತಿದ ಉರಿಯು ಕಡಿಮೆಯಾಗುವುದೆಂತು? ಅವಳ ಕಣ್ಣಿನಿಂದ ನೀರು ಹರಿಯಹತ್ತಿತು. ಆದರೆ ಅದರಿಂದ ಆ ಉರಿ ಆರುವುದರ ಬದಲು ಇನ್ನೂ ಹೆಚ್ಚು ಹೊತ್ತಿಕೊಂಡಿತು. ಕಣ್ಣೀರು ಒರಿಸಲಿಕ್ಕೆ ಯಾರಾದರೂ ಇದ್ದರೇ ಅಳುವುದರಲ್ಲಿ ಆನಂದ. ಶೂಲದ ಮೇಲೆ ನಿಂತ ಆರೋಪಿತನ ದೃಷ್ಟಿಯಿಂದ ಅವಳು ಎಲ್ಲ ಕಡೆ ನೋಡಿದಳು. ರಮಾಕಾಂತನ ಕೋಣೆಯಲ್ಲಿ ಚಿತ್ರಪಟ ತಾರಕೆಗಳು ಮಿನುಗುತ್ತಿದ್ದವು. ಚಿತ್ರದಲ್ಲಿಯ ನಾಯಕ ನಾಯಿಕೆಯರು ಚುಂಬನಕ್ಕಾಗಿ ಕಾತರರಾಗಿದ್ದರು. ಅವಳಿಗೆನಿಸಿತು–ಒಂದು ಸುತ್ತಿಗೆಯಿಂದ

ಒಂದರ ಹಿಂದೊಂದು ಎಲ್ಲ ಫೋಟೋಗಳನ್ನು ಒಡೆದುಹಾಕಬೇಕು.

ಅವಳ ತಲೆಯಲ್ಲಿ ಬಿರುಗಾಳಿ ಹೋ ಎಂದು ತಾಂಡವವಾಡುತ್ತಿತ್ತು. ರಮಾಕಾಂತನ ದಾರಿ ಜುಹೂದ ಕಡೆಗೆ ! ತನ್ನದು ಅದಕ್ಕಿಂತ ಬೇರೆ. ಅಂದರೆ ಯಾವುದು ? 'ಮಹಾಲಕ್ಷ್ಮಿ'ಯದೇ? ನಾಳೆ ಮಹಾಲಕ್ಷ್ಮಿಯ ಬಳಿಯ ನೀರಲ್ಲಿ ಮುಳುಗಿದ ಒಬ್ಬ ಹೆಂಗಸಿನ ಹೆಣವು ಸಿಗಬೇಕೆಂದು ನಾನು ಜನ್ಮಕ್ಕೆ ಬಂದದ್ದೇ? ರಮಾಕಾಂತ ಪಾತರಗಿತ್ತಿ ! ತಾನು ಪತಂಗ! ಪಾತರಗಿತ್ತಿಯ ಬಣ್ಣ ಕಣ್ಣಿಗೆ ಚಂದ. ಆದರೆ ಪತಂಗವೂ ತನ್ನ ರೀತಿಯಿಂದ ಚೆನ್ನಲ್ಲವೆ? ಯಾವುದೋ ಒಂದು ಗಾಳಿಗೆ ಒಂದು ದೀವಿಗೆ ಹೊತ್ತಿಕೊಳ್ಳುವುದರಲ್ಲಿದೆ–ಅದು ಹೊತ್ತಿದರೆ ಒಂದೇ ಮನೆಯಲ್ಲಿ ಇಡೀ ಊರು ಸುಟ್ಟು ಕರಿಕಾಗಬಹುದು – ಇಂಥ ದೀವಿಗೆಗೆ ಪತಂಗ ತೆಕ್ಕೆಬಿದ್ದು ಅದನ್ನು ಆರಿಸಿಬಿಡುತ್ತದೆ. ಅದು ಸುಟ್ಟುಹೋದರೂ ಇಡೀ ಊರನ್ನು ಅದು ಬದುಕಿಸಲಿಲ್ಲವೇ? ಬಣ್ಣದ ಚಿಟ್ಟೆ ಬರೀ ಕುಣಿಯಬೇಕು. ಸೋಗು ಮಾಡಬೇಕು. ಆದರೆ ಈ ಜೀವದಾನ ಕೊಡುವ ಕೆಲಸ... ನಕ್ಷೆಯಲ್ಲಿ ಇಡೀ ಪೃಥ್ವಿಯು ಕಣ್ಣೆದುರಿಗೆ ನಿಲ್ಲುವಂತೆ ಅವಳ ವ್ಯಾಕುಲ ಹೃದಯವು ಅವಳ ಸ್ಮೃತಿಪಟಲದ ಮೇಲೆ ಅವಳ ಹಿಂದಿನ ಆಯುಷ್ಯದ ಚಿತ್ರವನ್ನೆಲ್ಲ ಬರೆದು ತೋರಿಸಿತು. ಹುಟ್ಟಿದಂದಿನಿಂದ ನಿರ್ಭಾಗ್ಯಳು ತಾನು ! ತಾಯಿ ಚಿಕ್ಕಂದಿನಲ್ಲಿಯೇ ತೀರಿಹೋದಳು. ತಂದೆ ಪರೋಪಕಾರದಲ್ಲಿ ಕೆಲಸ ಕಳೆದುಕೊಂಡರು. ಹೊಟ್ಟೆಪಾಡಿಗಾಗಿ ಕೊಂಕಣದಿಂದ ಮುಂಬೈಗೆ ಬಂದು ಅಲ್ಲಿ ಇನ್‌ಫ್ಲುಯೆಂಝಾ ರೋಗಿಗಳ ಶುಶ್ರೂಷೆ ಮಾಡುವಾಗ ತಾವೂ ಅದೇ ಪಿಡುಗಿಗೆ ಬಲಿಯಾದರು. ತಾನು ಬಾಲ್ಯದ ಐದಾರು ವರ್ಷಗಳನ್ನೇನೋ ರಮ್ಯವಾದ ಕೊಂಕಣದಲ್ಲಿ, ಅದಕ್ಕೂ ರಮ್ಯವಾದ ತಂದೆಯವರ ಸಹವಾಸದಲ್ಲಿ ಕಳೆದಳು. ಅಲ್ಲಿಂದ ಸಾಂಗಲಿಯಲ್ಲಿ ಸೋದರಮಾವನ ಮನೆಯಲ್ಲಿ ಕಳೆದ ಹದಿನಾಲ್ಕು ವರ್ಷಗಳು ! ಪೂರ್ತಿ ವನವಾಸವೇ ಸರಿ ! ಸುರೂಪಿಗಳಾದ ಮಾವನ ಹೆಣ್ಣು ಮಕ್ಕಳ ಬಿಗುವು, ಸೋದರತ್ತೆಯ ಹೊಟ್ಟೆಯುರಿ, ಹೆಂಡತಿಯ ಕೈಗೊಂಬೆಯಾಗಿದ್ದ ತನ್ನ ಮಾವ ಡಾಕ್ಟರನು ತನ್ನ ಕೊರಳಿಗೆ ಕಟ್ಟಿದ ಅಡಿಗೆ–ಕೆಲಸ, ಹುಡುಗರ ಶಾಲೆಯಲ್ಲಿ ಮೊದಲನೆಯ ನಂಬರು ಪಡೆದರೂ ಮ್ಯಾಟ್ರಿಕ್ ಕ್ಲಾಸಿನಲ್ಲಿದ್ದಾಗ ಬೇನೆಬಿದ್ದದ್ದರಿಂದ ತಾನು ಶಾಲೆ ಬಿಡಬೇಕಾದ ಪ್ರಸಂಗ–ದೈವವು ತನ್ನ ದುಃಖದ ಗುಡಿಯನ್ನೇ ಕಟ್ಟುತ್ತಿತ್ತು. ಅದರ ಮೇಲೆ ರಮಾಕಾಂತನ ರೂಪವು ಕಳಸವನ್ನಿಟ್ಟಿತು. ನಿಜವಾಗಿ ಆ ಗುಡಿಗೆ ಶೋಭಿಸುವಂಥ ಕಳಸವೇ ಅದು !

ಇದೇ ವೇಳೆಗೆ ಎದುರಿನ ಬಂಗಲೆಯಲ್ಲಿಯ ಸಂಗೀತ ಕಛೇರಿಯ ಮುಗಿಸಿಕೊಂಡು ಜಹಾಗಿರದಾರರ ಸವಾರಿಯು ಮೋಟರಿನಲ್ಲಿ ಕೂಡಲಿಕ್ಕೆಂದು ಹೊರಗೆ ಬಂದಿತು. ಬಂಗಲೆಯ ಯಜಮಾನತಿಯೂ ಸಿಂಗಾರಾಗಿ ಅವರೊಡನೆ ಸೋಗಿನಿಂದ ನಡೆಯುತ್ತಿದ್ದಳು. ಕಲೆ ಮತ್ತು ಸೌಂದರ್ಯ–ರಮಾಕಾಂತನು ಯಾವುದರ ಸಲುವಾಗಿ ತನ್ನ ಜೀವವನ್ನು ನಿವಾಳಿಸಿ ಎಸೆಯಲಿಕ್ಕೆ ಸಿದ್ಧನಾಗಿದ್ದನೋ ಆ ಕಲಾ–ಸೌಂದರ್ಯಗಳು ಕೈಯಲ್ಲಿ ಕೈ ಇಕ್ಕಿ ಎದುರಿನ ಬಂಗಲೆಯಲ್ಲಿ ಕುಣಿಯುತ್ತಿದ್ದವು. ಆದರೆ ವತ್ಸಲೆ ಅವುಗಳಿಗೆ ಹೇಸಿಕೊಂಡು ಮೋರೆ ತಿರುವಿದಳು. ಒಕ್ಕಲಿಗರ ಯಾವ ಕಪ್ಪು–ಕರೆ ಹೆಂಗಸರನ್ನು ರಮಾಕಾಂತನು ನಿಂದಿಸಿದ್ದನೋ



ಅವರು ಈ ಹೆಂಗಸಿಗಿಂತ ನೂರು ಪಾಲು ಬೇಕೆಂದು ಅವಳಿಗೆನಿಸಿತು. ಅವಳಿಗೆನಿಸಿತು– ಮಕ್ಕಳುಮರಿಗಾಗಿ, ತಮ್ಮವರಿಗಾಗಿ ಬಿಸಿಲುನೆರಳೆನ್ನದೆ ದುಡಿದು ಕಪ್ಪಾದ ಆ ಹೆಂಗಸರ ಜೀವನದಲ್ಲಿದ್ದ ಸೌಂದರ್ಯವು, ದುಡ್ಡಿನ ಆಶೆಗಾಗಿ ನರಪಶುವಿನೊಡನೆ ಬೆಳದಿಂಗಳಲ್ಲಿ ವಿಹರಿಸ ಹೋಗುವ ಈ ವೇಶ್ಯೆಯ ಆಯಷ್ಯದಲ್ಲಿರುವದೇ? ನಿಶ್ಚಯವಾಗಿಯೂ ಇಲ್ಲ ! ಪ್ರೇಮದ ದಾನ ಮಾಡಬಹುದು. ಆದರೆ ಮಾರಾಟವೇ ? ಛೇ ! ಹೊಟ್ಟೆಯಿಂದ ಹುಟ್ಟಿದ ಮಕ್ಕಳ ಮಾರಾಟದಷ್ಟೇ ಅದು ಅಮಂಗಲ.

ಅವಳ ಕೈಯು ರಮಾಕಾಂತನ ಟೇಬಲ್ ಮೇಲಿನ ವರ್ತಮಾನ ಪತ್ರಗಳನ್ನು ತಿರುವಿಹಾಕುತ್ತಿತ್ತು. ಸಹಜವಾಗಿ ಒಂದು ವರ್ತಮಾನ ಪತ್ರವನ್ನೆತ್ತಿ ಅವಳು ನೋಡತೊಡಗಿದಳು. ಅದು ಎಂಟು ಹತ್ತು ದಿವಸದ ಹಿಂದಿನ 'ಬಕುಲ'ದ ಸಂಚಿಕೆಯಿತ್ತು. ಅದರಲ್ಲಿ ಒಂದು ಜಾಹೀರಾತು ಅವಳ ದೃಷ್ಟಿಗೆ ಬಿತ್ತು. 'ಬೇಕು–'

ಮಾಸ್ತರಿಣಿಯ ಜಾಹಿರಾತು ಇರಬಹುದು ಒಮ್ಮೆ–ಆದರೆ ತಾನೇನು ಮ್ಯಾಟ್ರಿಕ್ ಪಾಸು ಮಾಡಿದವಳೇ?

"ನಮ್ಮ ಕಾಮಾಪುರದ ಕೇರುಹಣ್ಣಿನ ಕಾರಖಾನೆಯಲ್ಲಿ ಸದ್ಯಕ್ಕೆ ಐನೂರು ಜನ ಕೂಲಿಯವರು ಕೆಲಸ ಮಾಡುತ್ತಿದ್ದಾರೆ. ಆದರೆ ಆಫ್ರಿಕದ ಕೇರುಹಣ್ಣು–ಕೂಲಿ ಇವೆರಡೂ ಅಗ್ಗವಾಗಿರುವುದರಿಂದ ಅಲ್ಲಿಯ ಮಾಲು ಇಗ್ಲೆಂಡ್–ಅಮೆರಿಕಾಗಳಲ್ಲಿ ಹೆಚ್ಚಾಗಿ ಖರ್ಚಾಗಹತ್ತಿದೆ. ನಾವು ಯತ್ನ ಮಾಡದಿದ್ದರೆ ಪರದೇಶದ ಹಣವನ್ನು ಸ್ವದೇಶಕ್ಕೆ ತರುವ ಈ ಉದ್ಯೋಗವು ನಾಮಾವಶೇಷವಾಗಬಹುದು. ಅದನ್ನು ಉಳಿಸಿಕೊಳ್ಳಲಿಕ್ಕೆ ಒಂದೇ ಒಂದು ಉಪಾಯವಿದೆ: ಅದೆಂದರೆ ಕೇರುಹಣ್ಣು ಸುಲಿಯುವ ಯಂತ್ರವನ್ನು ತಯಾರಿಸುವದು. ಕೈಯಿಂದ ಸುಲಿದ ಗೋಡಂಬಿಯಷ್ಟೇ ಚೆನ್ನಾದ ಮಾಲು ಯಂತ್ರದಿಂದ ತಯಾರಾಗತೊಡಗಿದರೆ ಆಫ್ರಿಕದಲ್ಲಿಯ ಕಾರಖಾನೆಗಳಿಗೆ ಎದುರುನಿಂತೂ ಕೊಂಕಣದಲ್ಲಿಯ ಈ ಉದ್ಯೋಗವು ಬದುಕಬಹುದು. ಯಂತ್ರವನ್ನು ಯಶಸ್ವಿಯಾಗಿ ಸಿದ್ಧಪಡಿಸಿದವನಿಗೆ ನಾವು ಐದು ಸಾವಿರ ರೂಪಾಯಿಗಳ ಇನಾಮು ಕೊಡುವೆವು. ಆದರೆ ಈ ದ್ರವ್ಯಪ್ರಾಪ್ತಿಗಿಂತ ಅವನಿಗೆ ಶೋಧಕನೆಂದು ದೊರೆಯುವ ಕೀರ್ತಿಯು ಹೆಚ್ಚು ಮಹತ್ವದ್ದಾಗಿದೆ. ಅಮೆರಿಕಾದಲ್ಲಿ ಇಂಥ ಯಂತ್ರಗಳನ್ನು ತಯಾರಿಸುವ ಯತ್ನವು ನಡೆದಿದೆಯೆಂದು ಹೇಳುತ್ತಾರೆ. ಆದರೂ ಇದುವರೆಗೆ ಆ ಯತ್ನ ಯಶಸ್ವಿಯಾಗಿಲ್ಲ. ಈ ವಿಷಯದಲ್ಲಿ ಪ್ರಯತ್ನ ಮಾಡಿ ನೋಡಬೇಕೆಂದು ಇಚ್ಛಿಸುವ ಯಂತ್ರಶಾಸ್ತ್ರಜ್ಞನಿಗೆ ಆವಶ್ಯವಿದ್ದಷ್ಟು ದಿವಸ ಹತ್ತುವ ಎಲ್ಲ ಖರ್ಚು ನಡೆಯಿಸಲಿಕ್ಕೆ ಈ ಕಾರಖಾನೆಯು ಸಿದ್ಧವಿದೆ. ಎಷ್ಟೋ ಜನರಿಗೆ ಕೊಂಕಣ ಬಗ್ಗೆ ಏನೂ ಗೊತ್ತಿರುವದಿಲ್ಲ. ಆದರೂ ಇತ್ತ ಕಡೆಗೆ ಬರಲಿಚ್ಛಿಸುವವರು ನನ್ನ ಮಗಳಾದ ಸುಲೋಚನೆಗೆ ಕೆಳಗಿನ ವಿಳಾಸಕ್ಕೆ ಭೆಟ್ಟಿಯಾಗಬಹುದು.

* * * * *

ವಿಳಾಸವನ್ನು ಓದದೆಯೆ ವತ್ಸಲೆಯು ಆ ಜಾಹೀರಾತನ್ನು ಒಮ್ಮೆ, ಎರಡು ಸಾರೆ, ಮೂರು ಸಾರೆ ಓದಿದಳು. ಮೂರನೇ ಸಾರೆ ಓದಿ ಮುಗಿಸಿದ ಕೂಡಲೆ ಅವಳು ಒಮ್ಮೆಲೆ

ಎದ್ದಳು. ಮೊದಲು ದೂರ ಎಸೆದ ರಮಾಕಾಂತನ ವಹಿಯನ್ನು ತೆಗೆದುಕೊಂಡಳು. ಬೀದಿಯಲ್ಲಿ ಏನಾದರೂ ಊದುತ್ತ ಬಾರಿಸುತ್ತ ಬಂದರೆ ಅದನ್ನು ನೋಡಲಿಕ್ಕೆ ಓಡಿಹೋಗುವ ಮಕ್ಕಳಂತೆ ಲಗುಬಗೆಯಿಂದ ಅಟ್ಟದಿಂದಿಳಿದು ಕೆಳಗೆ ಬಂದಳು. ಬಾಗಿಲಲ್ಲಿ ಗೊರಕೆ ಹೊಡೆಯುತ್ತ ಬಿದ್ದುಕೊಂಡ ಕೆಲಸದ ಹುಡುಗನು ಅರ್ಧ ಮರ್ಧ ಕಣ್ಣು ತೆರೆದು ನೋಡಿ ಮಗ್ಗುಲಾದನು. ರಮಾಕಾಂತ ತಿರುಗಿ ಬಂದದ್ದರಿಂದ ಬಾಯಿಯವರು ಬಾಗಿಲು ತೆರೆದರೆಂದು ಅವನಿಗೆನಿಸಿತು.

ಅಬಚಿಯ ಮನೆಯ ಈ ಕಡೆಯ ಮೂಲೆಗೇ ಬಾಪ್ಪಾ ಅವರು ಕಾದಿದ್ದರು. ಅವರನ್ನು ನೋಡುತ್ತಲೇ ಸುಲೋಚನೆಯು ತಟ್ಟನೆ ಕಾರು ನಿಲ್ಲಿಸಿದಳು. ತಾನು ಕಾಲ್ನಡೆಯಿಂದಲೇ ಮನೆಗೆ ಹೋಗುವೆನೆಂದು ರಮಾಕಾಂತನೆಂದದ್ದರಿಂದ ಕಾರು ಹೊರಟುಹೋಯಿತು.

ಕಾರಿನಿಂದ ಇಳಿಯುತ್ತಲೇ ಕ್ಷಣಾರ್ಧದಲ್ಲಿ ರಮಾಕಾಂತನ ಮನಸ್ಸು ಬಾಪ್ಪಾ ಅವರ ಛಾಯಾಚಿತ್ರವನ್ನು ತೆಗೆದುಕೊಂಡಿತು. ಸವಾರಿ ಹೇಳಕೂಡದಷ್ಟು ಬಡಕಲು. ಒಂದೊಂದು ಪ್ರಸಂಗದಲ್ಲಿ ವಂದನೆಗೆ ಧ್ವಜವಿರದಿದ್ದರೆ ಇವರ ತಲೆಗೇ ಒಂದು ತ್ರಿವರ್ಣದ ಬಟ್ಟೆಯನ್ನು ಕಟ್ಟಿ ಧ್ವಜವಂದನವನ್ನು ಮಾಡಿದರೂ ನಡೆಯುವಂತಿತ್ತು. ಬಣ್ಣ ಕಪ್ಪಿನ ಮೇಲೆಯೆ. ಗಲ್ಲದ ಎಲುವುಗಳಂತೆ ಮುಂದಿನ ಎರಡು ಹಲ್ಲುಗಳೂ ಮೇಲೆ ಎದ್ದು ಕಾಣುತ್ತಿದ್ದವು. ಖಾದಿಯ ಪಂಚೆ ಮೊಳಕಾಲ ಕೆಳಗೆ ಒಂದೆರಡು ಬೊಟ್ಟು ಇತ್ತೋ ಇಲ್ಲವೊ. ತಲೆಗೆ ಸಮನಾಗಿ ಕೂದಲು ಕತ್ತರಿಸಿಬಿಟ್ಟದ್ದರಿಂದ ತಲೆಯು ಒಂದು ಬೋಳು ಬಂಡೆಯಂತೆ ತೋರುತ್ತಿತ್ತು. ಮೈಮೇಲಿನ ಖಾದಿಯ ಚಾದರವನ್ನು ಮಾತ್ರ ಭುಜದ ಹತ್ತರ ಎರಡೂ ಕೈಗಳಿಂದ ಅವರು ಗಟ್ಟಿಯಾಗಿ ಹಿಡಿದುಕೊಂಡಿದ್ದರು.

ಅವರು ಹೊದ್ದುಕೊಂಡ ಚಾದರವನ್ನು ನೋಡುತ್ತಲೆ ರಮಾಕಾಂತನಿಗೆನಿಸಿತು– "ಎಂಥ ಹುಚ್ಚ ಗೃಹಸ್ಥನಿವನು ಒಳ್ಳೇ ಸ್ವೆಟರಗಿಟರ ಬಿಟ್ಟು–"

ಆದರೆ ಕೂಡಲೇ ಸುಲೋಚನೆಯು ಹೇಳಿದ ಅವರ ಇತಿಹಾಸದ ನೆನಪಾಯಿತು. ಟಿಳಕರಿಗೆ ರಾಜದ್ರೋಹಕ್ಕಾಗಿ ಶಿಕ್ಷೆಯಾದಾಗ ಇವರು ಸರಕಾರೀ ಕಾಲೇಜಿನಲ್ಲಿ ಪ್ರೊಫೆಸರರಾಗಿ ಆರೇ ತಿಂಗಳಾಗಿತ್ತು. ಸವಾರಿಯು ಒಮ್ಮೆಲೇ ಕೆಲಸವನ್ನು ಬಿಟ್ಟುಕೊಟ್ಟಿತು. ಮೊದಮೊದಲು ಹೆಣ್ಣು ತಾವಾಗಿ ಬರುವ ಕಾಲದಲ್ಲಿ ಇವರು ಗಟ್ಟಿಗರಾದ ವಧೂ–ಪಿತರನ್ನು ಒಳ್ಳೇ ಚಮತ್ಕಾರ ರೀತಿಯಿಂದ ತಿರುಗಿ ಕಳುಹುತ್ತಿದ್ದರು. ವಯಸ್ಸಿನಿಂದ ಚಿಕ್ಕ ಹುಡುಗಿ ಬಂದರೆ "ನನಗೆ ಇನ್ನೂ ದೊಡ್ಡವಳು ಬೇಕು" ಎನ್ನುತ್ತಿದ್ದರು. ಆಗ ಬೆಳೆದ ಹುಡುಗಿಯರು ಹೆಚ್ಚಾಗಿ ದೊರೆಯುತ್ತಲೇ ಇದ್ದಿಲ್ಲ. ಅದರಲ್ಲಿ ಬಾರದೇಶಕರ ಪಂಥದಲ್ಲಿಯಂತೂ ತೀರ ವಿರಳ. ಅಂಥದರಲ್ಲಿಯೂ ಒಬ್ಬ ಬೆಳೆದ ಹುಡುಗಿ ಬಂದರೆ "ನನಗೆ ಇನ್ನೂ ಚಿಕ್ಕವಳಾಗಬೇಕು" ಎಂಬ ಮಂತ್ರವನ್ನು ಬಾಪ್ಪಾ ಅವರು ಉಚ್ಚರಿಸಿದರೆಂದೇ ತಿಳಿಯಬೇಕು.

ಈ ತಪ್ಪಿಸಾಟವು ಬಹಳ ದಿವಸ ನಡೆಯದಾದಾಗ ಮತ್ತೊಂದು ಉಪಾಯವನ್ನು ಹುಡುಕಿದರು. ನನಗೆ ಮದುವೆಯಾಗಿದೆ ಎಂದು ಜನರಿಗೆ ಹೇಳಹತ್ತಿದರು. "ಹೆಂಡತಿ ಎಲ್ಲಿದ್ದಾಳೆ?" ಎಂದು ಯಾರಾದರೂ ದಿಟ್ಟತನದಿಂದ ಕೇಳುತ್ತಿದ್ದರು.



"ಇಂಗ್ಲಂಡಿನಲ್ಲಿ !"

"ತಿರುಗಿ ಎಂದು ಬರುವರು?"

"ನೋಡೋಣ. ನೀವು ಕರೆತಂದಾಗಲೇ ಬರುವರು!"

"ಅಲ್ಲಿಗೆ ಹೋಗಿ ಎಷ್ಟು ದಿವಸವಾಯಿತು?"

"ನೂರು ವರ್ಷಗಳಾದರೂ ಆಗುತ್ತ ಬಂದವು."

"ಎಂದರೆ?"

"ನನ್ನ ಹೆಂಡತಿಯ ಹೆಸರು ಹೇಳಲೇ ? ಸ್ವತಂತ್ರತೆ!"

ಮದುವೆಯಂತೆಯೇ ಊಟ ಮೊದಲಾದ ಪ್ರತಿಯೊಂದು ಮಾತಿನಲ್ಲಿಯೂ ಅವರು ವಿಲಕ್ಷಣ ನಿಗ್ರಹಿಗಳಾಗಿದ್ದರು. ಒಣ ಅಕ್ಕಿ ಬೇಳೆಗಳ ಮೇಲೆಯೆ ತಿಂಗಳಾನುತಿಂಗಳೆಲ್ಲ ಇರುವ ಯತ್ನವನ್ನೂ ಅವರು ಮಾಡಿದ್ದರು. ೧೯೩೦ನೇ ಇಸ್ವಿಯ ಚಳವಳಿಯಲ್ಲಿ ಅವರು ಜೇಲಿಗೆ ಹೋದರು. ಹೋದ ಕೂಡಲೆ ಭಂಗಿಯ ಕೆಲಸವನ್ನು ಬೇಡಿದರು. ಬಿಡುಗಡೆಯಾಯಿತು. ಬಿಟ್ಟಕೂಡಲೆ ಮತ್ತೆ ಕಾನೂನಿನ ಅತಿಕ್ರಮಣ–ಮತ್ತೆ ಜೇಲು ಭಂಗಿಯ ಕೆಲಸ.

ಇದೆಲ್ಲವನ್ನು ನೆನೆದುಕೊಂಡೂ ಎದುರಿನಲ್ಲಿಯ ಆ ಮೂರ್ತಿಯನ್ನು ನೋಡಿ ರಮಾಕಾಂತನು ಕ್ಷಣಹೊತ್ತು ತೆಪ್ಪಗಾದ. ಅವನು ನಮಸ್ಕಾರ ಮಾಡಿದಾಗ ಬಾಪ್ಪಾ ಅವರು "ವಂದೇ ಮಾತರಮ್" ಎಂದು ಅವನನ್ನು ಬರಮಾಡಿಕೊಂಡರು.

ರಮಾಕಾಂತನನ್ನು ತೋರಿಸುತ್ತ ಸುಲೋಚನೆಯೆಂದಳು "ಇವರೇ ಆ ಪ್ರಸಿದ್ಧ ಕಥಾಲೇಖಕರಾದ ರಮಾಕಾಂತರು."

"ಹೀಗೋ. ಮಹಾರಾಷ್ಟ್ರದ ಭಾವೀ 'ಗಾರ್ಕಿ'. ಸುಲೂ, ನಿನ್ನ ಹತ್ತಿರ ಏನೋ ಮಾಟ ಇದ್ದಹಾಗಿದೆ. ವಿದ್ಯಾಧರ, ರಮಾಕಾಂತ, ನೀನು–ಹೀಗೆ ದೇಶದ ಆಧಾರಸ್ತಂಭಗಳೆಲ್ಲ ಒತ್ತಟ್ಟಿಗೆ ಕೂಡಿದರೆ ಮೇಲಿನ ಮಂದಿರವು ನೀಟಾಗಿ ನಿಲ್ಲಬಹುದೇ?"

"ನಮ್ಮ ಬಾಪ್ಪಾ ಅವರೇನು ಅರಸಿಕರಲ್ಲ ಅಂ–ನೋಡಿರಿ, ಎಷ್ಟು ಮೋಜು ಮಾತಾಡುತ್ತಾರೆ" ಎನ್ನುವ ದೃಷ್ಟಿಯಿಂದ ಸುಲೋಚನೆಯು ರಮಾಕಾಂತನನ್ನು ನೋಡಿದಳು.

"ಇಂದಿನ ಚಿತ್ರಪಟ ಚೆನ್ನಾಗಿತ್ತೆ?" ರಮಾಕಾಂತ ಕೇಳಿದ.

"ಚೆನ್ನಾಗಿತ್ತು. ಆದರೇನು ಅಲ್ಲಿಂದಿಲ್ಲಿಗೆ ಬರೀ ಕರುಣರಸ!"

ಕರುಣರಸದ ಒಳ್ಳೇ ಚಿತ್ರಪಟ ! ರಮಾಕಾಂತನಿಗೆ ಒಂದು ವಿದೇಶೀ ಚಿತ್ರದ ನೆನಪಾಯಿತು. ಕಳೆದ ವಾರದಲ್ಲಿಯೇ ತಾನದನ್ನು ನೋಡಲು ಸುರಂಗೆಯನ್ನೂ ಕರೆದುಕೊಂಡು ಹೋಗಿದ್ದ. ಅದರ ಕಥೆಯು ಸರ್ರನೆ ಅವನ ಕಣ್ಣಮುಂದೆ ಹಾಯ್ದುಹೋಯಿತು. ಕುಮಾರಿಕೆಯಾಗಿದ್ದಾಗ ಒಬ್ಬಳಿಗೆ ಮಗುವೊಂದಾಗುತ್ತದೆ. ಅದನ್ನು ಒಬ್ಬ ಮಕ್ಕಳಿಲ್ಲದ ಗೃಹಸ್ಥನ ಬಾಗಿಲಲ್ಲಿ ಅವಳು ಇಡುತ್ತಾಳೆ, ಮಗನ ಮೋರೆ ಯಾವಾಗಲೂ ದೃಷ್ಟಿಗೆ ಬೀಳುತ್ತಿರಬೇಕೆಂದು ಅವಳು ಅದೇ ಮನೆಯಲ್ಲಿ ಅಡುಗೆಯವಳೆಂದು ಇರುತ್ತಾಳೆ. ಮುಂದೆ ಆ ಹುಡುಗನು ಬೇನೆ ಬೀಳುವನು. ಕಂಡದ್ದನ್ನು ತಿನ್ನಲು ಬೇಡುತ್ತಾನೆ. ಆದರೆ ತನ್ನ ಕರುಳಿಗಾಗಿ ಅವನ

ಅವಿಚಾರದ ಬೇಡಿಕೆಗಳನ್ನು ಪೂರೈಸುವುದಿಲ್ಲ. ಖಾಯಿಲೆಯಿಂದೆದ್ದ ಮೇಲೆ ಹುಡುಗನು ಅವಳ ಮೇಲೆ ಕಳುವಿನ ಆರೋಪ ಹೊರಿಸಿ ಅವಳನ್ನು ಪೋಲೀಸರ ಕೈಯಲ್ಲಿ ಕೊಡುತ್ತಾನೆ. ಪೋಲೀಸರು ಹಿಡಿದುಕೊಂಡು ಹೋಗುವಾಗ "ಮಾಯ ಡಿಯರ" ಎಂಬ ಎರಡೇ ಶಬ್ದಗಳನ್ನುಚ್ಚರಿಸಿ ಅವಳು ಕರುಣದೃಷ್ಟಿಯಿಂದ ತಿರುಗಿಸಿದ ಮುಖ–ಆ ಹೊತ್ತಿಗೆ ಸುರಂಗೆಯ ಗಲ್ಲದ ಮೇಲೆ ಹರಿದ ಕಣ್ಣೀರ ನೆನಪಾಗಿ ರಮಾಕಾಂತನು ತಟ್ಟನೆ "ಆ ತಾಯಿ ಜನರ ಕಣ್ಣೀರು ತೆಗೆಸಿಯೇ ಬಿಡುತ್ತಾಳೆ" ಎಂದ.

"ತಾಯಿಯಷ್ಟೇ ಯಾಕೆ ? ಎಲ್ಲರೂ !"

ರಮಾಕಾಂತನಿಗೆನಿಸಿತು – ಭಂಗಿಯ ಕೆಲಸ ಮಾಡುವ ಈ ದೇಶಭಕ್ತನಿಗೆ ಚಿತ್ರಪಟದಲ್ಲಿ ಏನು ತನ್ನ ತಲೆ ತಿಳಿಯಬೇಕು ? ಕೂಡಲೆ ಅವನಿಗೆ ಹೊಳೆಯಿತು– ಬಾಪ್ಪ ಅವರಂಥ ಮನುಷ್ಯರು ವಿದೇಶೀ ಚಿತ್ರಗಳನ್ನು ನೋಡ ಹೋಗುವವರಲ್ಲ. ಯಾವುದೋ ದೇಶೀಪಟವನ್ನು ನೋಡಿರಬಹುದು. ಮೆಲ್ಲಗೆ ಅವನು ಬಾಪ್ಪಾ ಅವರಿಗೆ ಕೇಳಿದ : "ಚಿತ್ರ ದೇಶೀ ಅಂತ ಕಾಣುತ್ತದೆ ?"

"ತೀರ ಶುದ್ಧ ದೇಶೀ ! ಇಂಥ ಚಿತ್ರಪಟಗಳು ಪರದೇಶದಲ್ಲಿ ಆಗುತ್ತವೆಯೋ ಇಲ್ಲವೋ ಸಂಶಯವೇ !"

ರಮಾಕಾಂತ ಮನಸ್ಸಿನಲ್ಲಿಯೇ ಅಂದುಕೊಂಡ ; "ಸವಾರಿ ಹುಟ್ಟಿದಾಗಿನಿಂದ ಇದೇ ಮೊದಲೆಂದು ಕಾಣುತ್ತದೆ ಸಿನೇಮಾ ನೋಡಿದ್ದು !"

ಏನಾದರೂ ಮಾತಾಡಬೇಕೆಂದು ಕೇಳಿದ : "ಎಷ್ಟು ಉದ್ದವಿತ್ತು ಫಿಲ್ಮ ?"

"ಒಳ್ಳೇ ಎರಡು ಎರಡೂವರೆ ಮೈಲು !"

ಸುಲೋಚನೆಯು ಬೆಪ್ಪಾಗಿ ಬಾಪ್ಪಾ ಅವರ ಕಡೆಗೆ ನೋಡಹತ್ತಿದಳು. ರಮಾಕಾಂತನಿಗೆ ಮನವರಿಕೆಯಾಗಿಬಿಟ್ಟಿತು– ಜೇಲಿನಲ್ಲಿ ಎರಡು ಮೂರು ವರ್ಷ ಕಳೆದದ್ದರಿಂದ ಇವರ ಸ್ಕ್ರೂ ಸಡಿಲಾಗಿದೆಯೆಂದು.

ಬಾಪ್ಪಾ ನಗುನಗುತ್ತ ಹೇಳಿದರು– "ನಿಮಗೂ ನೋಡಬೇಕಾಗಿದೆಯೇ ಆ ಫಿಲ್ಮ?"

"ಈಗ ಹನ್ನೆರಡಕ್ಕೆ ಮುಗಿದುಹೋಗಿರಬೇಕು ಮೂರನೆಯಾಟ ಕೂಡ."

"ಈ ಸಿನೇಮಾ ಹಾಗಲ್ಲ. ಇದು ಹತ್ತು ಹನ್ನೊಂದು ಗಂಟೆಗೆ ಶುರುವಾಗಿ ಮುಂಜಾನೆ ಐದಾರು ಗಂಟೆಗೆ ಮುಗಿಯುವುದು. ಇದು ನೋಡಿರಿ ಅದರೊಳಗಿನದೊಂದು ಚಿತ್ರ. ನಿಂತಲ್ಲಿಯೇ ನಿಂತು ರಮಾಕಾಂತ ಸುಲೋಚನೆಯರು ಬಾಪ್ಪಾ ಅವರು ತೋರಿಸಿದ ಕಡೆಗೆ ನೋಡಿದರು. ಫುಟ್‌ಪಾಥದ ಮೇಲೆ ಕೈಕಾಲು ಮುದುಡಿಕೊಂಡು ಒಬ್ಬ ಮನುಷ್ಯ ಮಲಗಿದ್ದ. ರಮಾಕಾಂತನಿಗೆ ಒಮ್ಮೆಲೆ ಹೊಳೆಯಿತು. ಈ ಗೃಹಸ್ಥ ಸಿನೇಮಾಕ್ಕೆ ಹೋಗದೆ ಎರಡು ಎರಡೂವರೆ ಮೈಲು ಫುಟ್‌ಪಾಥನ ಮೇಲೆ ಎಷ್ಟು ಜನರು ಕಟಕಟ ನಡುಗುತ್ತ ಮಲಗಿರುವರೆಂಬುದನ್ನು ನೋಡಿ ಬಂದಿರಬೇಕು.

ಬಾಪ್ಪಾ ಮುಂದೆ ಹೇಳಿದರು: "ಸಿನೇಮಾದಲ್ಲಿ ಒಳ್ಳೇ ಏರಿಕೆಯ ಪ್ರಸಂಗವಿರುತ್ತದಲ್ಲ?



ಅದೂ ಸಿಕ್ಕಿತು ನನಗೆ ನೋಡಲಿಕ್ಕೆ."

ಇಬ್ಬರೂ ಉತ್ಸುಕತೆಯಿಂದ ನೋಡಹತ್ತಿದರು.

"ಒಂದು ಮಾಟನ್ನ ಬಂಗಲೆಯಿಂದ ಒಬ್ಬ ಸಿರಿವಂತ ಗೃಹಸ್ಥ ತಿರುಗಿ ಹೊರಟಿದ್ದ. ಅವನನ್ನು ಬೀಳ್ಕೊಡಲಿಕ್ಕೆ ಹೆಣ್ಣುಮಗಳೊಬ್ಬಾಕೆ ಹೊರಗೆ ಬಂದಿದ್ದಳು. ವೇಶ್ಯೆಯೇ ಇರಬಹುದು. ಮುಂದೆ ಕೆಲ ಹೊತ್ತಿನಲ್ಲಿಯೇ ಆ ಬಂಗಲೆಯ ಎದುರಿನ ಮನೆಯೊಳಗಿನಿಂದ ಒಬ್ಬ ಹೆಣ್ಣು ಮಗಳು ಕೆಳಗೆ ಬಂದಳು. ಬೀದಿಯ ನಟ್ಟನಡುವೆ ನಿಂತು ಈಕೆ ಏನು ಮಾಡುತ್ತಿರಬಹುದೆಂಬುದು ನನಗಂತೂ ತಿಳಿಯಲಿಲ್ಲ. ಅವಳೇನು ವಿಧವೆ ಇದ್ದಳೋ ಅಥವಾ ಉಪದ್ರವಕ್ಕೆ ಬೇಸತ್ತು ಜೀವ ಕೊಡ ಹೊರಟಿದ್ದಳೊ–ಎಷ್ಟೋ ಹೊತ್ತು ಬೀದಿಯಲ್ಲಿ ನಿಂತು ಆ ಮನೆಯನ್ನೇ ನೋಡುತ್ತಿದ್ದಳು. ಹೆಣಕ್ಕೆ ಬೆಂಕಿ ಇಡುವ ಮುಂದೆ ಮನುಷ್ಯ ಅದರ ಕಡೆ ನೋಡುತ್ತ ನಿಲ್ಲುವುದಿಲ್ಲವೆ? ಹಾಗೆ–"

"ಮುಂದೆ ಎಲ್ಲಿ ಹೋದಳು ಆಕೆ?" ಎಂದು ರಮಾಕಾಂತ ಕೇಳಿದ. ಅವನ ಧ್ವನಿಯಲ್ಲಿ ನಡುಕಿತ್ತು.

"ತಿರುಗಿ ಆಕೆ ಮೇಲೆ ಹೋದಳು. ಅಂತೇ ನಾನೂ ತಿರುಗಿದೆ. ಇಲ್ಲದಿದ್ದರೆ ಈ ಹೊತ್ತು ಅಬಚಿಯು ಸುಲೋಚನೆಗೆ ಒಳ್ಳೇ ಶಿಕ್ಷೆ ಮಾಡುತ್ತಿದ್ದಳು !"

"ಒಳ್ಳೇದು, ಬರಲೇ ನಾನು ?" ಎಂದು ರಮಾಕಾಂತ ಒಮ್ಮೆಲೆ ಹೊರಟ. ಅವನ ಈ ಅವಸರದ ಬಗ್ಗೆ ಸುಲೋಚನೆಗೆ ಆಶ್ಚರ್ಯವಾಗದೆ ಇರಲಿಲ್ಲ.

ಮುಂಬಯಿಯ ಶೂನ್ಯವಾದ ಬೀದಿಗಳು ಹುಣ್ಣಿಮೆಯ ಬೆಳದಿಂಗಳಲ್ಲಿ ಮಿಂದು ಮೇಲೇಳುತ್ತಿದ್ದವು. ಆದರೆ ಆ ದೃಶ್ಯವನ್ನು ನೋಡಿ ರಮಾಕಾಂತನಿಗೆ, ಮುತ್ತೈದೆಯ ಹೆಣಕ್ಕೆ ಹಾಕುವ ಸ್ನಾನ ನೆನಪಾಯಿತು.

೪

## ಹೆಣ್ಣು ಒಂದು, ಹೃದಯ ಎರಡು

ಒಂದು, ಎರಡು, ಮೂರು....ಸಾವಳ ಎಣಿಸಿ ಹನ್ನೆರಡು ಗಂಟೆಗಳನ್ನು ಒಂದು ಮಗ್ಗುಲಿಂದ ಇನ್ನೊಂದು ಮಗ್ಗುಲಿಗೆ ಹೊರಳಿದ. ಜೇಲಿಗೆ ಬಂದ ಮೇಲೆ ಕಣ್ಣಿಗೆ ಕಣ್ಣು ಹಚ್ಚದೆ ಅವನು ಕಳೆದ ರಾತ್ರಿ ಇದೇ ಮೊದಲನೆಯದು. ಅವನಿಗೆ ಈ ಮಾತಿನ ಆಶ್ಚರ್ಯವಾಗುತ್ತಿತ್ತು. 'ಕ' ವರ್ಗದ ಕೊಂಡವಾಡೆಯಲ್ಲಿ ಸುಖದಿಂದ ನಿದ್ದೆ ಬರಬೇಕಾದರೆ ಮನುಷ್ಯನು ಸ್ಥಿತಪ್ರಜ್ಞನೇ ಇರಬೇಕು. ಸಾವಳನು ಅಂಥವನೇ ಇದ್ದನೆಂಬುದರಲ್ಲಿ ಸಂಶಯವಿದ್ದಿಲ್ಲವಾದರೂ ಇಂದು ಅವನ ವಿರಕ್ತ ವೃತ್ತಿಗೆ ದೊಡ್ಡ ಏಟು ಬಿದ್ದಿತ್ತು. 'ನಾಳೆ ಮುಂಜಾವಿಗೆ ನಿನ್ನ ಬಿಡುಗಡೆಯಾಗುವುದು' ಎಂಬ ಜೇಲರನ ಶಬ್ದಗಳು ಅವನ ಕಿವಿಯಲ್ಲಿ ಒಂದೇ ಸವನೆ ಸುಳಿಯುತ್ತಿದ್ದವು.

ಸಾವಳನು ಕಣ್ಣು ತೆರೆದು ನೋಡಿದ. ಇಂದು ಹುಣ್ಣಿಮೆಯೆಂಬುದು ಅವನಿಗೆ ಗೊತ್ತಿತ್ತು.

ಅವನ ಹತ್ತಿರದ ಸಿಪಾಯಿಯೊಬ್ಬ ಸಾಯಂಕಾಲ ಯಾವುದೋ ಹುಣ್ಣಿಮೆಯ ಜಾತ್ರೆಯ ಬಗ್ಗೆ ಮಾತಾಡುತ್ತಿದ್ದ. ಬೆಳದಿಂಗಳೊಡನೆ ಯಾರದಾದರೂ ಸಂಬಂಧವಿದ್ದರೆ, ಅದು ಕಳ್ಳರದು, ಕವಿಗಳದು ! ಸಾವಳನು ಕವಿಯಾಗಿದ್ದಿಲ್ಲವೆಂಬುದು ಸ್ಪಷ್ಟವಿದೆ. ಇಲ್ಲದಿದ್ದರೆ ಜೇಲಿನಲ್ಲಿ ಕಳೆದ ಏಳು ವರ್ಷಗಳ ಅವಧಿಯಲ್ಲಿ ಅವನು ನಾಲ್ಕಾರು ಮಹಾಕಾವ್ಯಗಳನ್ನು ಬರೆದು ಮರಾಠಿ ಸಾಹಿತ್ಯದ ದೊಡ್ಡ ಕೊರತೆಯೊಂದನ್ನು ದೂರಮಾಡುತ್ತಿದ್ದ ! ಅವನು ಕಳ್ಳನೇನೋ ನಿಜ. ಆದರೆ ಮನಸ್ಸಿನಲ್ಲಿ ಬೆಳದಿಂಗಳಿರುವ ಹಾಗೆ ಅವನ ಸ್ಥಿತಿಯೆಲ್ಲಿತ್ತು ? ಅಪರಾಧವು ಸಿದ್ಧವಾಗಿ ಈಗ ಏಳು ವರ್ಷ ಅವನು ಜೇಲಿನಲ್ಲಿ ಕಲ್ಲು ಒಡೆಯುತ್ತಿದ್ದ.

ಹೀಗಿದ್ದೂ ಸಾಯಂಕಾಲ ಆ ಸಿಪಾಯಿಯ ಬಾಯಿಂದ 'ಹುಣ್ಣಿಮೆಯ ಜಾತ್ರೆ'ಯೆಂಬ ಶಬ್ದಗಳನ್ನು ಕೇಳಿದಾಗಿನಿಂದ ಅವನು ತೀರ ನೆಮ್ಮದಿಯಿಲ್ಲದಾಗಿಬಿಟ್ಟಿದ್ದ. ಹತ್ತು ವರ್ಷಗಳ ಹಿಂದಿನ ಹೋಳಿಯ ಹುಣ್ಣಿಮೆ ಅವನ ಕಣ್ಣು ಮುಂದೆ ಕಟ್ಟಿತ್ತು. ಮಾಗಿಯಲ್ಲಿ ತುಳಸಿಯು ತನಗೆ ಮಾಲೆ ಹಾಕಿ ಮದುವೆಯಾದಾಗ 'ಹಾರೂರಾಗ ಸಿಗಾಣಿಲ್ಲ ಇಂತಾ ಹೆಣ್ಣು' ಎಂದು ಊರಿಗೆ ಊರೇ ಮಾತಾಡಿತು. ತನ್ನ ತುಳಸಿ ಅಂಥ ಚೆಲುವಿಯೇ ಇದ್ದಳು. ಇದ್ದಳು ಯಾಕೆ? ಇನ್ನೂ ಇದ್ದಾಳು. ಈಗೇನು ಅಂಥ ವಯಸ್ಸು ಆಕೆಗೆ ? ಹೆಚ್ಚೆಂದರೆ ಇಪ್ಪತ್ತೈದು ವರ್ಷದವಳಾಗಿದ್ದಳು !

ತನ್ನಷ್ಟಕ್ಕೆ ಮಾತನಾಡಿಕೊಳ್ಳಹತ್ತಿದ ಸಾವಳ. "ತುಳಸೀ ತಾಯಿ ಇದ್ದರ ಈಕಿನ್ನ ಬಸವಿ ಧಂಧೆಕ್ಕs ನಿಲ್ಲಿಸಿಬಿಡತಿದ್ದಳು. ತಮ್ಮ ಜಾತ್ಯಾಗ ಈಗರೆ ಸರ್ರಾಸ ಲಗನ ಎಲ್ಲಿ ಆಕ್ಕಾವ ? ಮತ್ತ ತುಳಸೀ ದನಿ ಎಷ್ಟು ಸವಿ ಅದು ! ಕಲ್ಲಮ್ಯಾಗ ಬೀಸಿಗೋತ ಹಾಡಾಕ ಹತ್ತಿದಳಂದರ ಹಾದೀ ಗುಂಟ ಹೋಗೂವವರು ಸುದ್ದಾ ನಿಂತಲ್ಲೇ ನಿಂದರಬೇಕು. ಮನಿಯರs ಎಂತಾದದು? ಹೆಂಟೀ ಗ್ವಾಡಿ, ಮ್ಯಾಗ ಹುಲ್ಲಿನ ಚಪ್ಪರ. ಸಂಸಾರೆಲ್ಲಾ ಒಂದು ಕ್ವಾಣ್ಯಾಗ. ಒಮ್ಮೆ ಆ ಗಡಗೀ–ಮಡಕೀ ಅಡಕಲದಾಗ ಒಂದು ಹಾವು ಕೂತಿತ್ತು. ಏನೋ ವ್ಯಾಳ್ಯಾ ಚಲೋದಿತ್ತು. ಇಲ್ಲದಿದ್ದರ ತನಗದು ಕಡದs ಬಿಡೂದು. ತುಳಸಿ ಆ ಕಡೆ ಬೀಸಗೋತ ಹಾಡತಿದ್ದಳು. ಈ ಕಡೆ ನಾಗಪ್ಪನವರ ಸ್ವಾರೀ ಗಡಗೀ ಒಳಗಿಂದ ಹೆಡಿ ಹೊರಗ ತಗದು ತೂಗಾಡುತಿತ್ತು. ಗಡಗೀ ಒಳಗ ಏನ ಅಗಳಾಡತದ ನೋಡಬೇಕಂತ ನಾ ಹೋದೆ–ಅಯ್ಯಪ್ಪಾ ! ನೆಪ್ಪಾದರ ಈಗ ಸುದ್ದಾ ಕೂದಲ ನೆಟ್ಟಗ ನಿಲತಾವ !"

ಸಾವಳನ ಮನಸ್ಸು ಹಾವನ್ನು ಬಿಟ್ಟು ಮತ್ತೆ ಬೆಳದಿಂಗಳೊಡನೆ ಆಡತೊಡಗಿತು. ಕಾಮಾಪುರದ ಹುಣ್ಣಿಮೆಯ ಜಾತ್ರೆ ಅವನಿಗೆ ನೆನಪಾಯಿತು. ಆ ವರ್ಷ ದೇವಿಗೆ ಕೋಣವನ್ನು ಬಲಿಕೊಡುವುದಿತ್ತು. ಆ ದಿವಸ ಕಾಮಾಪುರಕ್ಕೆ ಹೋಗುವಾಗ ತುಳಸಿ ತನ್ನ ತುಂಬುತುರುಬಿನ ಸುತ್ತಲೂ ಹಾಕಿಕೊಂಡ ಸುರಂಗೀ–ಆಬೋಲಿ ಹೂವುಗಳ ಸರವು ಅವನ ಕಣ್ಣೆದುರು ನಿಂತಿತು. ಅತ್ತರವನ್ನು ನಾಚಿಸುವ ಆ ಸುರಂಗೀ ಹೂವಿನ ವಾಸನೆ ಆ ಕತ್ತಲೆಯ ಕೊಟಡಿಯಲ್ಲಿ ಇಡುಗಿದಂತೆ ಅವನಿಗೆ ಭಾಸವಾಯಿತು. ಆ ಜಾತ್ರೆಗೆ ಪಾತ್ರೆಗಳು ಬಹಳವಾಗಿ ಮಾರಲಿಕ್ಕೆ ಬರುತ್ತಿದ್ದವು. ತುಳಸಿಯು ಒಂದು ಬಿಂದಿಗೆಯನ್ನೂ, ಬ್ರಾಹ್ಮಣರ ಮಾಟಿನ ಹಿತ್ತಾಳೆಯ



ಒಂದು ತಂಬಿಗೆಯನ್ನೂ, ಮತ್ತೆರಡು ಮೂರು ಪಾತ್ರೆಗಳನ್ನೂ ಕೊಳ್ಳಬೇಕೆಂದು ಹಟತೊಟ್ಟಳು. ತನ್ನ ಕಿಸೆಯಲ್ಲಿದ್ದದ್ದು ಐದೇ ರೂಪಾಯಿ. ಜೂಜಿಗೆ ಹೋಗುವದಿದ್ದ ಕಾರಣ ತಾನು ಪಾತ್ರೆ ಕೊಳ್ಳುವದಿಲ್ಲವೆಂದು ಹೇಳಿದ. ಅವಳು ಅತ್ತು ಅತ್ತು ಗುಡಿಯಲ್ಲಿಯ ನಾಟಕಕ್ಕೆ ಹೋಗಿ ಕುಳಿತಳು. ತಾನು ಜೂಜಿಗೆ ಹೋದ. ಐದು ಐನೂರು ಆಯಿತು ಆ ರಾತ್ರಿಯಲ್ಲಿ ! ಮಾರ್ಗಶಿರದಲ್ಲಿ ಅವಳೊಡನೆ ಲಗ್ನವಾದದ್ದು. ತುಳಸಿಯ ಕಾಲಗುಣದಿಂದ ಇಷ್ಟು ದುಡ್ಡು ಸಿಕ್ಕಿತೆಂದು ತಿಳಿದು ಅವಳು ಹೇಳಿದ ಎಲ್ಲ ಪಾತ್ರೆಗಳನ್ನೂ ತಾನು ಕೊಂಡುಬಿಟ್ಟ ! ಪಾತ್ರೆ ನೋಡಿದ ಕೂಡಲೆ ಅವಳೆಷ್ಟು ನಕ್ಕಳು – ಹಾಗೆ ನೋಡಿದರೆ ಪುಕ್ಕಳು ಆಕೆ. ಆದರೆ ಆ ತನ್ನ ಆನಂದದಲ್ಲಿ ಹೊಲೆಯರು ಕೋಣ ಕಡಿಯುವುದನ್ನೂ ನೋಡಲಿಕ್ಕೆ ಬಂದುಬಿಟ್ಟಳು !

ಆದರೆ ಆ ನಗೆಯನ್ನು ತಾನೆಲ್ಲಿ ಅವಳ ಮೋರೆಯ ಮೇಲೆ ಇರಗೊಟ್ಟೆ ? ಅಂದು ಪಾತ್ರೆ ಬಂದವೆಂದು ಅವಳಿಗೆ ಆನಂದವಾಯಿತು. ಆದರೆ ಅಂದಿನಿಂದಲೇ ತನಗೆ ಜೂಜಿನ ಚಟವು ಪೂರ್ಣವಾಗಿ ಅಂಟಿಬಿಟ್ಟಿತು. ಕಾಮಾಪುರದ ಗೇರುಹಣ್ಣಿನ ಕಾರಖಾನೆಯ ಒಡೆಯ, ಆ ದಾದಾ–ಅವನ ಹೊಲದಲ್ಲಿ ನಾಲ್ಕು ತಿಂಗಳು ಮೈಮುರಿದು ದುಡಿದಾಗ ಹೊಟ್ಟೆಪೂರ್ತಿ ಭತ್ತ ಬರಬೇಕಾದರೆ ಸಾಕುಬೇಕಾಗಿ ಹೋಗುತ್ತಿತ್ತು ! ಅಂದು ಒಂದೇ ರಾತ್ರಿಯಲ್ಲಿ ಐನೂರು ರೂಪಾಯಿ ! ತನ್ನ ತಲೆ ಪೂರ್ತಿ ತಿರುಗಿಹೋಯಿತು. ತುಳಸಿಯು ಕಣ್ಣಿಗೆ ಕಾಣಿಸದಾದಳು. ಜೂಜು, ಸೆರೆ, ಕಳುವು–ಆ ದಾದಾನ ಹೊಲದ ಲಾವಣಿ ಮುಗಿದರೂ ತಾನೂ ಅದನ್ನು ಗಣನೆಗೆ ತರಲಿಲ್ಲ. ತುಳಸಿ ಕೂಲಿ ಕುಂಬಳಿ ಮಾಡಿ ಅದು ಹೇಗೋ ತನ್ನ ಹೊಟ್ಟೆ ತುಂಬಿಕೊಳ್ಳುತ್ತಿದ್ದಳು. ತಾನು ಸುಧಾರಿಸಿದವನಾಗಲಿಕ್ಕೆ ಯತ್ನಿಸಿದ. ಅದರೊಳಗೂ ಸಾವಕಾರರ ಮಕ್ಕಳು ಸೂಳೆಯರನ್ನಿಡುತ್ತಾರೆಂದು ತಾನೂ ಆ ಹುಚ್ಚಿಗೆ ಬಿದ್ದನು. 'ಹಾರಾರು ಸುದ್ದಾ ಸೆರೆ ಕುಡಿತಾರ' ಎಂದು ಹೇಳಿ ತಾನೂ ಸೆರೆ ಕುಡಿಯಹತ್ತಿದ. ಸಾಲ ಬೆಳೆಯಿತು. ದುಂದು ನಡೆಯದಂತಾಯಿತು. ಮುಂಬಯಿಗೆ ಬಂದುಬಿಟ್ಟ. ಒಳ್ಳೇ ನಡತೆಯಿಂದಿದ್ದು ತುಳಸಿಗಾಗಿ ಮನೆಗೆ ನಾಲ್ಕು ದುಡ್ಡು ಕಳಿಸಬೇಕೆಂದು ಮನಸ್ಸಿನಲ್ಲಿಯ ಎಣಿಕೆ. ಆದರೆ ದೇವರಿಗೆ ಮನುಷ್ಯನ ಎಣಿಕೆಯ ಪರಿವೆಯೆಲ್ಲಿ ? ಒಂದು ದಿನ ರಾತ್ರಿ ತುಳಸಿಯನ್ನು ನೆನಸಿ ತಾನು ಅತ್ತುಬಿಟ್ಟಿದ್ದ. ಆದರೂ ಅದೆಲ್ಲಾ ಎಲ್ಲೆಲ್ಲೋ ಹೋಯಿತು. ಮುಂಬಯಿಯ ಆ ಚಂಡಾಳಚೌಕಡಿ ಗಂಟುಬಿತ್ತು. ಕಳವು ಪತ್ತೆಯಾಗದೆ ಹೋಗಹತ್ತಿದವು. ದುಂದುಗಾರಿಕೆ ಮತ್ತೆ ನಡೆಯಿತು. ಕೊನೆಗೆ ಕಾಮಾಪುರದ ಗೇರುಹಣ್ಣಿನ ಕಾರಖಾನೆ ಒಡೆಯರ ಮನೆಗೆ ದರೋಡೆ ಹಾಕುವುದೆಂದು ಗೊತ್ತಾಯಿತು. ಆದರೆ ಹಂಚಿಕೆ ತಪ್ಪಿತು. ನಾಳೆ ತಾನು ಜೇಲಿನಿಂದ ಹೊರಬೀಳುವವ. ಆದರೆ ಈ ಕಪ್ಪು ಮೋರೆಯನ್ನು ತುಳಸಿಗೆ ಹೇಗೆ ತೋರಿಸಬೇಕು.?

ಅದನ್ನು ನೋಡಲಿಕ್ಕೆ ತುಳಸಿಯು ಈ ಭೂಮಿಯ ಮೇಲಾದರೂ ಇರಬಹುದೆ? ಜೇಲಿಗೆ ಬಂದ ಆರು ತಿಂಗಳಲ್ಲಿ ತಾನು ಅವಳಿಗೊಂದು ಪತ್ರ ಕಳಿಸಿದ. ಅವಳು ಪತ್ತೆಯಿಲ್ಲವೆಂದು ಅದು ತಿರುಗಿ ಬಂದಿತು. ಅವಳು ಮುಂಬಯಿಗೆ ಹೊಟ್ಟೆ ತುಂಬಿಕೊಳ್ಳಲಿಕ್ಕೆ ಹೋಗಿರಬಹುದು. ಆದರೆ ಗಿರಣಿಯ ಶ್ರಮದ ಕೆಲಸ ಅವಳ ಕೈಯಿಂದಾದೀತೆ ? ಗಿರಣಿಯ

ಮಾಲಕನ ಹೆಂಡತಿಯಾಗಲಿಕ್ಕೆ ಒಪ್ಪುವ ತುಳಸಿಯು ಗಿರಣಿಯಲ್ಲಿ ಕೂಲಿ ಮಾಡುವುದೆ ? ಛೆ ! ಒಣ ಎಲೆಯು ಉರವಲವಾಗುತ್ತದೆ : ಹೂಗಳನ್ನು ಯಾರಾದರೂ ಉರಿಯುತ್ತಾರೆಯೆ?

ತುಳಸಿ ಈಗ ಎಲ್ಲಿರಬಹುದು ? ಏನು ಮಾಡುತ್ತಿರಬಹುದು ? ಊರಲ್ಲಂತೂ ಇಲ್ಲ. ಮುಂಬಯಿಗೆ ಹೋಗಿ–

ಈ ವಿಚಾರದಿಂದ ಸಾವಳನ ತಲೆಗೆ ಕೊಡಲಿಯ ಏಟು ಬಿದ್ದಂತಾಯಿತು. ಕಡೆಗೆ ತುಳಸಿಯು ತನ್ನ ಜಾತಿಗೇ ಹೋದಳೋ ಏನು ? ರೂಪವಿದೆ, ಕಂಠವಿದೆ. ಅವಳ ತಾಯಿಯಂತೂ ಅದೇ ವ್ಯವಸಾಯ ಮಾಡುತ್ತಿದ್ದಳು. ತಾಯಿ ಸತ್ತಳೆಂದು ಇವಳಿಗೆ ಮದುವೆಯಾಯಿತು–ಇಲ್ಲದಿದ್ದರೆ ಇಂದು ಅವಳು ಮುತ್ತುರತ್ನದ ವಡವೆಗಳನ್ನಿಟ್ಟುಕೊಂಡು ಒಬ್ಬ ಸೇಠನೊಡನೆ ಮೋಟರಿನಲ್ಲಿ ಮೆರೆಯುತ್ತಿದ್ದಳು. ತುಳಸಿ ಹೀಗೆ ಕೆಟ್ಟ ನಡತೆಯವಳಾದರೆ ಆ ತಪ್ಪು ಯಾರದು ? ಅವಳದೆ ? ಅವನ ಕಿವಿಯಲ್ಲಿ ಯಾರೋ ಹೇಳುತ್ತಿದ್ದರು– "ನಿನ್ನದು, ಎಲ್ಲ ತಪ್ಪು ನಿನ್ನದು."

ಶರೀರದೊಡನೆ ಅವನ ಮನಸ್ಸೂ ತಳಮಳಿಸಹತ್ತಿತ್ತು. ತನ್ನ ದೋಷವೆ? ಹೌದು; ಎಲ್ಲ ದೋಷವು ತನ್ನದೆ ! ಚಿಕ್ಕಂದಿನಿಂದ ಎಲ್ಲ ಮಾತುಗಳೂ ಅವನಿಗೆ ನೆನಪಾದವು. ಮರಾಠಿ ಶಾಲೆಯಲ್ಲಿ ತನ್ನ ವರ್ಗದಲ್ಲಿಯೇ ಶ್ರೀರಂಗನೆಂಬ ಒಬ್ಬ ಸಿರಿವಂತರ ಹುಡುಗನಿದ್ದ. ಅವನ ಆ ಓರಣವಾದ  ಬಟ್ಟೆಗಳು, ಬೈತಲೆ ತೆಗೆದ ಕೂದಲು. ಅತ್ತರದ ಸುವಾಸ–ಅವನನ್ನು ನೋಡಿ ತಾನೂ ಅವನಂತಾಗಬೇಕೆಂದೆನಿಸಹತ್ತಿತು. ಶ್ರೀಯು ಶಾಲೆಗೆ ತಡಮಾಡಿ ಬಂದರೂ ಅವನಿಗೆ ಏಟು ಬೀಳುತ್ತಿರಲಿಲ್ಲ. ಓದಿನಲ್ಲಿ ಹಿಂದೆ ಇದ್ದರೂ ಪ್ರತಿ ವರ್ಷ ಅವನು ಮೇಲಿನ ವರ್ಗಕ್ಕೆ ಹೋಗುತ್ತಿದ್ದ. ಮರಾಠಿ ಏಳನೇ ವರ್ಗದಲ್ಲಿದ್ದಾಗ ಅವನು ಒಂದು ದಿನ ಒಬ್ಬ ಸೂಳೆಯ ಮನೆಗೆ ಹೋಗಿ ಬಂದಿದ್ದ. ಮರುದಿವಸ ಅವನು ಹೇಳಿದ ಅಲ್ಲಿಯ ಮೋಜು–ತಾನೂ ಅವನಂತೆ ಮಾಡಬೇಕೆಂದೆನಿಸಹತ್ತಿತು.

ಕೂಲಿಕುಂಬಳಿಯನ್ನು ಮಾಡಿ ತಾಯಿ ತನ್ನನ್ನು ಶಾಲೆಗೆ ಕಳಿಸುತ್ತಿದ್ದಳು. ತನ್ನ ನಡತೆಯನ್ನು ನೋಡಿ ಅವಳು "ಸಾವಳಾ, ಹೀಂಗ ನೀ ಮಾಡಬಾರದು" ಎಂದಳು.

"ಅವ್ವಾ, ಶ್ರೀ, ಮಾಡತಾನಲ್ಲ?"

"ಶ್ರೀ ಮಾತ ಬ್ಯಾರೆ, ನಿನ್ನ ಮಾತ ಬ್ಯಾರೆ !"

"ಅದ್ಯಾಕ ?"

"ಅವ ಶ್ರೀಮಂತ ಇದ್ದಾನ ! ಏನ ಮಾಡಿದರೂ ದಕ್ಕತೈತಿ !"

ಶ್ರೀಯು ಶ್ರೀಮಂತ, ತಾನು ಬಡವ. ಅಂತೇ ಇಬ್ಬರಲ್ಲಿ ಇಷ್ಟು ಅಂತರ ! ತಾನೂ ಶ್ರೀಮಂತನಾಗಬೇಕೆಂದು ಇಚ್ಛಿಸಿದ. ಆದರೆ ಮರಾಠಿ ಏಳನೇ ಇಯತ್ತೆಯಲ್ಲಿ ಪಾಸಾಗದ ಹುಡುಗ ಶ್ರೀಮಂತನಾಗುವದು ಹೇಗೆ? ಕಡೆಗೆ ಲಾವಳಿಯಿಂದ ಹೊಲ ಮಾಡುವುದೇ ತನ್ನ ಪಾಲಿಗೆ ಬಂದಿತು. ಅದನ್ನೇ ಪ್ರಾಮಾಣಿಕತನದಿಂದ ಮಾಡಿದ್ದರೆ ? ಮಾಡಿದ್ದರೆ ಹೊಟ್ಟೆ ತುಂಬ ತಿನ್ನಲಿಕ್ಕೆ ಸಿಗುತ್ತಿತ್ತೇ? ಯಾರಿಗೆ ಗೊತ್ತು ? ಆದರೆ ತುಳಸಿಯಾದರೂ ತನ್ನವಳಾಗುತ್ತಿದ್ದಳು !



ತಲೆಯಲ್ಲಿಯ ವಿಚಾರಗಳ ಕಾವು ಅಸಹ್ಯವಾಗಿ ಸಾವಳನು ಮಲಗಿದಲ್ಲಿಯೇ ಎದ್ದು ಕುಳಿತ. ಅವನ ಗದ್ದಲದಿಂದ ಹತ್ತಿರವೇ ಮಲಗಿದ ಮತ್ತೊಬ್ಬ ಕೈದಿಯ ನಿದ್ದೆ ಕೆಟ್ಟಿತು. ಅವನು ಸಿಟ್ಟಿಗೆದ್ದು "ಬೀಳಲೇ ಸುಮ್ಮ. ಕೆಲಸ ತಪ್ಪಿಸಿದ್ದಿ ಕಾಣತದ ಇವತ್ತ." ಅವನ ಈ ಉದ್ಗಾರದಿಂದ ಸಾವಳನಿಗೆ ಎರಡು ಮೂರು ತಿಂಗಳ ಹಿಂದಿನ ಇಂಥದೇ ಒಂದು ಮಾತಿನ ನೆನಪಾಯಿತು. ಜೇಲು ನೋಡಲಿಕ್ಕೆ ಕಲೆಕ್ಟರನೋ ಬೇರೆ ಯಾವ ಒಬ್ಬ ಸಾಹೇಬನೋ ಬಂದಿದ್ದ. ಅವನ ಸಂಗಡ ಕೆಂಪನ್ನ ಮೋರೆ, ಬಂಗಾರದ ಕೂದಲು, ಚಕಚಕಿಸುವ ಕಣ್ಣುಳ್ಳ ಬಹಳ ಚೆಂದನ್ನ ಹುಡುಗನೊಬ್ಬ ಬಂದಿದ್ದ. ಎಂದೂ ಆಗದಿದ್ದಷ್ಟು ತುಳಸಿಯ ನೆನಪು ಆ ಹುಡುಗನನ್ನು ನೋಡಿ ತನಗೆ ಆಯಿತು. ತಾನು ಸರಿಯಾಗಿದ್ದಿದ್ದರೆ ಆ ಹುಡುಗನಷ್ಟೇ–ಅವನಷ್ಟೇ ಕೆಂಪನ್ನ ಹುಡುಗ ತನಗೂ ಇರುತ್ತಿದ್ದ. ತನ್ನ ತುಳಸಿಯೇನು ಚೆಲುವಿಕೆಯಲ್ಲಿ ಕಡಿಮೆಯಾಗಿದ್ದಾಳೆಯೆ? ಆದರೆ ತಾನೇ ದುರ್ದೈವಿ ! ಆ ಹುಡುಗನಿಂದ ತುಳಸಿಯ ನೆನಪಾಗಿ ಆ ರಾತ್ರಿ ನಿದ್ದೆ ಹತ್ತಲಿಲ್ಲ. ತಾನು ಒಂದು ಮಗ್ಗುಲಿಂದ ಇನ್ನೊಂದು ಮಗ್ಗುಲಿಗೆ ಹೊರಳಾಡಹತ್ತಿದ. ತನ್ನ ಹೊರಳಾಟ ನೋಡಿ ಹತ್ತಿರವೇ ಮಲಗಿದ ಆ ಬಾಪ್ಪಾ ಅವರು ಎಚ್ಚರಾದರು. ಅವರು ಮೆಲ್ಲನೆ ತನ್ನ ಹೆಗಲ ಮೇಲೆ ಕೈಯಿಟ್ಟು, "ಸಾವಳ, ಏನಾಗಿದೆ ನಿನಗೆ?" ಎಂದು ಕೇಳಿದರು.

"ಏನಿಲ್ಲರಿ. ಮನಿಯಾಕಿಯ ನೆಪ್ಪು ಆಗೇತೀ ಬಾಪ್ಪಾ ಅವರ !"

"ಖರೇ ಅದನಪಾ ! ನಾ ಹೇಗೆ ಆರಾಮ ಇದ್ದೀನ್ನೋಡು, ಲಗ್ನಾನೇ ಮಾಡಿಕೊಂಡಿಲ್ಲ ಮೊದಲು !"

ಬಾಪ್ಪಾ ಅವರ ಇಂಥ ಚೇಷ್ಟೆಯಿಂದ ತನ್ನ ಉದಾಸೀನ ಮನಸ್ಸಿಗೆ ಯಾವಾಗಲೂ ಆನಂದವಾಗುತ್ತಿತ್ತು. ನಿಜವಾಗಿಯೂ ಬಾಪ್ಪಾ ಅವರು ಈಗ ಎಲ್ಲಿದ್ದಾರೋ ? ಬಡವರ ಕೆಲಸ ಎಲ್ಲಿದ್ದರೂ ಅಲ್ಲಿ ಅವರು ಇದ್ದವರೇ ! ಎಂಥ ದೇವರಂಥ ಮನುಷ್ಯ ! ಉಳಿದ ಸತ್ಯಾಗ್ರಹಿಗಳು "ಕ" ವರ್ಗದಲ್ಲಿರೆಂದು ತಾವು 'ಬ' ವರ್ಗವನ್ನು ಬಿಟ್ಟು 'ಕ' ವರ್ಗಕ್ಕೆ ಬಂದರು. ನನಗೆ ಅನ್ನವು ಹೆಚ್ಚು ಸೇರುತ್ತದೆಂದು ಅವರು ನನ್ನ ರೊಟ್ಟಿಯನ್ನು ತೆಗೆದುಕೊಂಡು ತಮ್ಮ ಅನ್ನವನ್ನು ಕೊಡಲಿಕ್ಕೆ ಕೂಡ ಹಿಂದೆ ಮುಂದೆ ನೋಡುತ್ತಿದ್ದಿಲ್ಲ. ಒಂದೇ ಹೊಟ್ಟೆಯ ಅಣ್ಣ ಕೂಡ ಇಷ್ಟು ಪ್ರೀತಿಸಲಿಕ್ಕಿಲ್ಲ. ಬಿಟ್ಟು ಹೋಗುವಾಗ ಅವರು ಹೇಳಿ ಕೂಡ ಹೋದರು– "ಸಾವಾಳಾ, ಇನ್ನು ಹೊರಬಿದ್ದೆಂದರೆ ಪುನರ್ಜನ್ಮ ಆಯಿತೆಂದು ತಿಳಿ. ಕೆಲಸ ಮಾಡಿ ಹೊಟ್ಟೆಗೆ ಏನಾದರೂ ಸಿಗದಿದ್ದರೆ ನನ್ನ ಕಡೆಗೆ ಬಾ. ಕಳವು ಮಾತ್ರ ಮಾಡಬೇಡ" ಎಂದು.

ಬಾಪ್ಪಾ ಅವರ ನೆನಪಿನಿಂದ ಸಾವಳನ ಮನವು ಒಂದಿಷ್ಟು ಸ್ತಿಮಿತಕ್ಕೆ ಬಂದಿತು. ನಾಳೆ ತನ್ನ ಬಿಡುಗಡೆಯಾಗುವುದೆಂದು ಅವನ ಒಂದು ಮನಸ್ಸಿಗೆ ಆನಂದವಾಗುತ್ತಿತ್ತು. ಇನ್ನೊಂದು ಮನಸ್ಸಿಗೆ ಸಣ್ಣ ಸೆರೆಮನೆಯನ್ನು ಬಿಟ್ಟು ವಿಶಾಲವಾದ ಇನ್ನೊಂದು ಸೆರೆಮನೆಯನ್ನು ಸೇರುವೆನೆಂಬ ಕಲ್ಪನೆಯಿಂದ ಭಯವಾಗುತ್ತಿತ್ತು. ಕಳ್ಳನೆಂದು ಮುದ್ರೆಯೊತ್ತಿದ ಮನುಷ್ಯನನ್ನು ಯಾರಾದರೂ ತಮ್ಮ ಬಾಗಿಲಲ್ಲಿ ನಿಲ್ಲಗೊಡುವರೇ? ಬೇರೆ ಯಾರೂ ನಿಲ್ಲಗೊಡದಿದ್ದರೂ ಇಬ್ಬರು ಮಾತ್ರ ನಿಶ್ಚಯವಾಗಿಯೂ ನಿಲ್ಲಗೊಡುವರು.

ಒಬ್ಬರು ಬಾಪ್ಪಾ ಅವರು, ಇನ್ನೊಬ್ಬಳು ತುಳಸಿ !

ನಾಳೆ ಬೆಳಗ್ಗೆ ತನ್ನ ಪುನರ್ಜನ್ಮವಾಗುವುದೆಂಬುದೆ ನಿಜ !

ರಾತ್ರಿಯೆಲ್ಲವೂ ಸಾವಳನು ತನ್ನ ಪುನರ್ಜನ್ಮದ ಕನಸುಗಳನ್ನು ಕಾಣುತ್ತಿದ್ದ. ಬಾಪ್ಪಾ–ತುಳಸಿ–ತುಳಸಿಗೆ ಆದ ಕೆಂಪನ್ನ ಹುಡುಗ.... ಈ ಪುನರ್ಜನ್ಮದಲ್ಲಿ ಅಲ್ಲಿಂದಿಲ್ಲಿಗೆ ಬರೀ ಆನಂದವೇ ಆನಂದವು ಕುಣಿಯುತ್ತಿತ್ತು.

ಆದರೆ ಪುನರ್ಜನ್ಮವು ಹಿಂದಿನ ಜನ್ಮದ ಕರ್ಮಕ್ಕೆ ಅನುಸರಿಸಿಯೇ ಸಿಗುತ್ತದೆಂಬ ಹಿಂದೂ ಧರ್ಮಶಾಸ್ತ್ರವು ಅವನಿಗೆ ಗೊತ್ತಿದ್ದರೆ–

* * * * *

ಕಾಲದ ಒಂದು ಕ್ಷಣವು ಎಷ್ಟು ಚಿಕ್ಕದೆಂದು ಅನಿಸುತ್ತದೆ. ಆದರೆ ಕ್ಷುದ್ರ ಜಂತುವನ್ನು ಸೂಕ್ಷ್ಮದರ್ಶಕ ಯಂತ್ರದಿಂದ ನೋಡಿದರೆ ಅದರ ಶರೀರದೊಳಗಿನ ತೊಡಕು ತೊಡಕಿನ ಕಲ್ಪನೆ ಬರುವಂತೆ ಕಾಲದ ಒಂದು ಕ್ಷಣವನ್ನೂ ಭಾವನೆಯ ದೃಷ್ಟಿಯಿಂದ ನೋಡಿದರೆ ಅದರಲ್ಲಿ ಇಡೀ ಬ್ರಹ್ಮಾಂಡವೇ ಕಾಣತೊಡಗುತ್ತದೆ. ಸಮುದ್ರದ ಒಂದೊಂದು ಹನಿಯಲ್ಲಿಯೂ ಹೊಳಪೂ ಉಪ್ಪೂ ಎರಡೂ ಕೂಡಿಕೊಂಡಂತೆ ಅನಂತ ಕಾಲದ ಒಂದು ಕ್ಷಣದಲ್ಲಿಯೂ ಜಗದ ಸುಖದುಃಖಗಳೆಲ್ಲವೂ ಸಮರಸವಾಗಿ ಮೆರೆಯುತ್ತಿರುವವು. ಅರಮನೆಯಲ್ಲಿ ತುಪ್ಪುಳದ ಹಾಸಿಗೆಯ ಮೇಲೆ ತಳಮಳಿಸುವ ಅರಸು, ಫುಟ್ ಪಾಥದ ಮೇಲೆ ಮುದುಡಿಕೊಂಡು ಗೊರಕೆ ಹೊಡೆಯುವ ತಿರುಕ, ವ್ಯಸನಿಯಾದ ಗಂಡನ ದಾರಿ ಕಾಯುತ್ತಿರುವ ಹೆಂಡತಿಯ ಕಣ್ಣೀರು, ಅದೇ ಗಂಡನೊಡನೆ ವಿಲಾಸಮಗ್ನಳಾದ ವೇಶ್ಯೆಯ ಬಟ್ಟಲಲ್ಲಿಯ ಮದ್ಯ, ಹೊಟ್ಟೆಗಾಗಿ ಕನ್ನ ಕೊರೆಯಲು ಹೊರಟ ಮನುಷ್ಯನ ಎದೆಗುದಿ, ಕಳ್ಳರ ಭೀತಿಯಿಂದ ಗಕ್ಕನೆ ಎಚ್ಚರಿಯುವ, ದುಡಿಯದೆ ದುಡ್ಡು ಕೂಡುಹಾಕಿದ ಧನಿಕನ ಚಿಂತೆ, ಕನಸಿನಲ್ಲಿ ತನ್ನ ಸತ್ತ ಗಂಡನ ತೋಳಿನ ಮೇಲೆ ತಲೆಯಿಡಲಿಕ್ಕೆ ಸಿಕ್ಕಿದ್ದರಿಂದ ತರುಣ ವಿಧವೆಯ ನಿದ್ರಿತ ಮುಖದ ಮೇಲೆ ಮೂಡುವ ಆನಂದ, ಮಗ್ಗುಲಲ್ಲಿಯೇ ಮಲಗಿದ ಪ್ರಿಯಪತ್ನಿಯು ಸತ್ತಂತೆ ಭಾಸವಾಗಲು ತರುಣ ಪತಿಯ ಮೋರೆಯಲ್ಲಿ ತೋರುವ ಸಂಕಟ–ಜಗತ್ತಿನಲ್ಲಿಯ ಪರಸ್ಪರ ವಿರೋಧಿಗಳಾದ ಭಾವನೆಗಳ, ಸುಖದುಃಖಗಳ ರಸಾಯನಿಕ ಮಿಶ್ರಣವೇ ಮಧ್ಯರಾತ್ರಿಯ ಒಂದು ಕ್ಷಣ. ಒಂದೆಡೆಗೆ ಸೆರೆಮನೆಯಲ್ಲಿ ಸಾವಳನಿಗೆ ತುಳಸಿ ಎಲ್ಲಿರಬಹುದೆಂಬ ಕಲ್ಪನೆಯಿಂದ ನಿದ್ದೆ ಬಾರದಂತಾಗಿತ್ತು. ಇತ್ತ ರೇಶ್ಮೆಯ ದಿಂಬುಗಳ ಮೇಲೆ ತಲೆಯಿಟ್ಟು ಮಲಗಿದ ರಮಾಕಾಂತನನ್ನು ಸಹ ಒಂದೇ ಪ್ರಶ್ನೆಯು ದಂಗುಬಡಿಸಿತ್ತು.

"ವತ್ಸಲೆ ಎಲ್ಲಿ ಹೋದಳು?"

ತಾನು ಮೈ ಮೇಲೆ ಎಸೆದ ವಹಿಯನ್ನು ಅವಳು ಪೂರ್ಣವಾಗಿ ಓದಿರಬೇಕು. ಸಿಟ್ಟಿನ ಭರದಲ್ಲಿ ಅವಳೂ ಜೀವ ಕೊಟ್ಟಿರಲಿಕ್ಕಿಲ್ಲವಷ್ಟೆ? ಹಾಗಿದ್ದರೆ ನಾಳಿನ ವರ್ತಮಾನ ಪತ್ರದಲ್ಲಿ ಅಚ್ಚಾಗಿ ಬರುವುದು.

**"ಪ್ರಖ್ಯಾತ ಕಥಾಲೇಖಕರಾದ ರಮಾಕಾಂತ ಇವರ ಪತ್ನಿಯ ಆತ್ಮಹತ್ಯೆ!"**



ಜನರು ಎಷ್ಟು ತರ್ಕ–ವಿತರ್ಕಗಳನ್ನು ಮಾಡಿಯಾರು ? ಸಾಹಿತ್ಯ ಕ್ಷೇತ್ರದಲ್ಲಿಯ ತನ್ನ ಹಿತಶತ್ರುಗಳು ಸುರಂಗೆಗೂ ತನಗೂ ಇದ್ದ ಪರಿಚಯವನ್ನು ಕಂಡಂತೆ ಅರ್ಥಮಾಡಿ ಕಥೆ ಕಾದಂಬರಿಗಳನ್ನೂ ಗೀಚಬಹುದು. ಸ್ವತಃ ಸುರಂಗೆಗಾದರೂ ಏನೆನಿಸಬಹುದು? ಸುಲೋಚನೆ ಎರಡು ದಿವಸಗಳ ಹಿಂದೆಯೇ ಅಂದಿರಲಿಲ್ಲವೆ "ನಿಮ್ಮ ಮನೆಯವರು ಬಂದ ಕೂಡಲೆ ತಪ್ಪದೆ ತಿಳಿಸಿರಿ ನನಗೆ" ಎಂದು. ಸುರಂಗೆಗಂತೂ ತಾನು, ತನಗೊಬ್ಬ ಹೆಂಡತಿಯಿರುವಳೆಂಬ ಸುದ್ದಿಯನ್ನು ಸಹ ಹತ್ತಗೊಟ್ಟಿಲ್ಲ. ಛೇ ! ಈ ವತ್ಸಲೆ ತನ್ನ ಪೂರ್ವಜನ್ಮದ ವೈರಿಯೇ ಸರಿ ! ತರ್ಕದ ದಾರಿ ಬದಲಿಸಿತು. ವಿಚಾರಚಕ್ರವು ಬೇರೊಂದು ದಿಕ್ಕಿನಲ್ಲಿ ತಿರುಗಹತ್ತಿತ್ತು.

ಅವಳು ಸಾಂಗಲಿಗೆ ಸೋದರಮಾವನ ಕಡೆಗೆ ಹೊರಟುಹೋಗಿರಲಿಕ್ಕಿಲ್ಲವಷ್ಟೆ? ಹೋಗಲಿ ! ಆಕೆ ಅಲ್ಲಿಯೇ ಉಳಿದರೆ ಒಳ್ಳೆಯದೇ ಆಯಿತು. ಬೇಡಿದಷ್ಟು ಹೊಟ್ಟೆ ಖರ್ಚು ಕೊಡುವೆ. ಆದರೆ ಕಣ್ಣೆದುರು ಬೇಡ ಆ ಪೀಡೆ ! ನಾನೇನು ಬಂದರದಲ್ಲಿಯ ಕೂಲಿಯೇ, ಕಚೇರಿಯ ಕಾರಕೂನನೇ? ಶರೀರಸುಖದ ಮುಂದೆ ಮದುವೆಯ ಕಲ್ಪನೆಯೆ ಹರಿಯದ ಪಶುವೃತ್ತಿಯ ಮನುಷ್ಯನು ಇಂಥ ಹೆಂಡತಿಯೊಡನೆ ಒಂದು ವೇಳೆ ಸುಖದಿಂದ ಸಂಸಾರ ಮಾಡಬಹುದು ! ಆದರೆ ಶರೀರ ? ಕಲಾವಂತನಿಗೆ ಶರೀರದ ಬೆಲೆಯೆಷ್ಟು ? ಕಲೆಯ ಹಾಗೂ ಸೌಂದರ್ಯದ ಸಂಬಂಧವು ಶರೀರಕ್ಕಿಂತಲೂ ಬುದ್ಧಿ–ಹೃದಯಗಳ ಕೂಡ ಹೆಚ್ಚಾಗಿಲ್ಲವೆ?

ಆದರೆ ಅವಳು ಮಾವನ ಕಡೆಗೆ ಹೋಗಿರಲಿಕ್ಕಿಲ್ಲ. ಮದುವೆಯಾದ ಮೇಲೆ ಒಮ್ಮೆ ಕೂಡ ಅವಳು ಅತ್ತಕಡೆ ಹೊರಳಿ ನೋಡಿಲ್ಲ ! ತಂದೆಯವರ ಬೇನೆಯ ನೆಪ ಅವಳಿಗೆ ತಾನಾಗಿ ಸಿಕ್ಕಿತೆನ್ನಬೇಕು. ಆದರೆ ಮಾವನ ಮನೆಯ ಕಡೆಗೆ ಅಷ್ಟೊಂದು ಅವಳ ಎಳೆತವಿರಲಿಲ್ಲವೆನ್ನುವುದೇ ನಿಜ. ಇನ್ನಾರೂ ಸಮೀಪದ ಆಪ್ತೇಷ್ಟರಿಲ್ಲ. ಅಂದಮೇಲೆ ಇವಳು ಹೋದದ್ದೆಲ್ಲಿ ?

ಅವಳು ಜೀವ ಕೊಟ್ಟರೂ ಅದು ಯಾರಿಗೂ ಗೊತ್ತೇ ಆಗದೆ ಹೋದರೆ? ಸಮುದ್ರದಲ್ಲಿ ಮುಳುಗಿದವರ ಹೆಣಗಳು ಕೂಡಲೆ ದಂಡೆಗೆ ಬರುವುದಂತೂ ಅಷ್ಟರಲ್ಲೇ ಇದೆ. ಅನಾಯಾಸವಾಗಿ ಮೀನುಗಳಿಗೆ ಹಬ್ಬದೂಟವಾಯಿತು ! ಇದರಲ್ಲಿ ಕೆಡಕೇನು ?

ಈ ರಾಕ್ಷಸ ವಿಚಾರವು ಮನಸ್ಸಿನಲ್ಲಿ ಬರುತ್ತಲೇ ರಮಾಕಾಂತನು ಹಾಸಿಗೆಯಿಂದ ಎದ್ದ. ಕಲೆಯ ನೃತ್ಯಭೂಮಿಯಾದ ತನ್ನ ಹೃದಯದಲ್ಲಿ ಈ ಅಮಂಗಲ ಕಲ್ಪನೆಯು ತಾಂಡವವಾಡುವುದೆಂದರೆ ಅವನಿಗೆ ಆಶ್ಚರ್ಯವಾಯಿತು. ಕಲ್ಪವೃಕ್ಷ ಎಂದಾದರೂ ಕವಳಿಯ ಹಣ್ಣು ಬಿಡುವುದುಂಟೆ? ಸೌಂದರ್ಯದ ನಂದನವನದಲ್ಲಿ ನಲಿದಾಡುವ ತನ್ನ ಬುದ್ಧಿ ! ಸ್ಮಶಾನಕ್ಕೆ ಯೋಗ್ಯವಾದ ಈ ಅಸಹ್ಯವಾದ ವಿಚಾರಕ್ಕೆ ಅದು ಅವಕಾಶವನ್ನಾದರೂ ಹೇಗೆ ಕೊಟ್ಟಿತು?

ರಮಾಕಾಂತ ಮನೆತುಂಬ ಸುತ್ತಿ ಬಂದ. ಅಡುಗೆ ಮನೆಯ ಕೋಣೆಯಲ್ಲಿ ವತ್ಸಲೆಯ ಟ್ರಂಕು ಹಾಗೇ ಇತ್ತು. ಮಧ್ಯಾಹ್ನದಲ್ಲಿ ಕೋಲುಗಳ ಮೇಲೆ ಒಣಗಹಾಕಿದ ಸೀರೆಗಳು ಇದ್ದಂತೆ

ಇದ್ದವು. ವತ್ಸಲೆಯು ಅಂದು ಎರೆದುಕೊಂಡದ್ದರಿಂದ ಕೂದಲು ಬಾಚಿಕೊಳ್ಳಲಿಕ್ಕೆಂದು ಸಂಜೆಯ ಮುಂದೆ ಹಣಿಗೆ ಕನ್ನಡಿಗಳ ಪೆಟ್ಟಿಗೆಯನ್ನು ಮುಂದಿಟ್ಟುಕೊಂಡು ಕುಳಿತಿದ್ದಳು. ಆ ಪೆಟ್ಟಿಗೆಯಲ್ಲಿಯ ಕನ್ನಡಿಯು ಸೊಟ್ಟಾಗಿ ನಿಲ್ಲಿಸಿದ್ದು ಹಾಗೇ ಇತ್ತು. ರಮಾಕಾಂತನು ತಟ್ಟನೆ ಅದರ ಮುಂದೆ ಕುಳಿತ. ಕನ್ನಡಿಯಲ್ಲಿ ತನ್ನ ಮೋರೆ ನೋಡಲು ತನ್ನದು ತನಗೇ ಭಯವಾಯಿತು. ಕನ್ನಡಿಯಲ್ಲಿ ಇಣಿಕಿ ಯಾರೋ ಆಪಾದಿಸುತ್ತಿದ್ದರೇನೊ– "ನೀನೇ ಕೊಂದವನು. ನೀನೇ ವತ್ಸಲೆಯ ಕೊಲೆ ಮಾಡಿದಿ."

ಈಗ ಮಾತ್ರ ರಮಾಕಾಂತನಿಗೆ ಹೆದರಿಕೆಯಾಗಹತ್ತಿತು. ಮೇಜಿನ ಹತ್ತಿರ ಬಂದು ಕಾಗದ ಪತ್ರಗಳನ್ನು ತಿರುವಿಹಾಕಿದ. ಅಲ್ಲಿ ಆ ವಹಿಯೊಂದು ಇದ್ದಿಲ್ಲ. 'ಬಕುಲ'ದ ಒಂದು ಹಳೇ ಸಂಚಿಕೆ ಅರ್ಧ ತೆರೆದದ್ದು ಹಾಗೇ ಬಿದ್ದಿತ್ತು. ಅದನ್ನವನು ಎತ್ತಿ ನೋಡಿದ. ದೊಡ್ಡ ಅಕ್ಷರದಲ್ಲಿ ಮೊದಲಿಗೆ ಒಂದು ಸುದ್ದಿ ಇತ್ತು. "ಉಗಿಬಂಡಿಯ ಹಳಿಯ ಮೇಲೆ ಬಿದ್ದು ಒಬ್ಬ ಹೆಂಗಸು ಜೀವಕೊಟ್ಟಳು. ಹೆಣವು ತೀರ ಚೂರುಚೂರಾಗಿದ್ದದರಿಂದ ಯಾರದೆಂದು ಗೊತ್ತಾಗುವುದು ಶಕ್ಯವಿರಲಿಲ್ಲ."

ರಮಾಕಾಂತನಿಗೆ ನಿಜವೆನಿಸಿತು. ಈ ಸುದ್ದಿಯನ್ನೋದಿ ವತ್ಸಲೆಯೂ ಜೀವ ಕೊಡಲಿಕ್ಕೆಂದೇ ಹೋಗಿರಬೇಕು. ಆ ವಹಿಯನ್ನು ಜೀವ ಕೊಟ್ಟ ಸ್ಥಳದಲ್ಲಿ ಇಡಬೇಕೆಂದು ಅವಳ ವಿಚಾರವಿರಬೇಕು. ಅದರ ಮೇಲೆ ನನ್ನ ಹೆಸರು ! ಒಳಗೆ ಬರೆದದ್ದು ತನ್ನ ಆಯುಷ್ಯದೊಳಗಿನ ನಿಜ–ನಿಜವಾದ ಮಾತುಗಳು. ಸಾಯುತ್ತಲೇ ಸೇಡು ತೀರಿಸಿಕೊಳ್ಳುವವಳು ಇವಳು. ಅಲ್ಲವೆ?

ಆ ವಹಿ ಕಾರೋನರ (Coroner) ನ ಕೋರ್ಟಿನಲ್ಲಿ ಹೋಗುವದು. ಅದರ ಆಧಾರದ ಮೇಲೆ ವೃತ್ತಪತ್ರಗಳು ನನ್ನ ಆಯುಷ್ಯಕ್ಕೆಲ್ಲ ಮಸಿ ಬಳಿಯುವವು! ಯಾವ ಕುಮುಹೂರ್ತದಲ್ಲಿ ತನಗೆ ಆ ವಹಿಯನ್ನು ಅವಳ ಮೈಮೇಲೆ ಎಸೆಯುವ ಬುದ್ಧಿ ಬಂದಿತೊ?

ವೃತ್ತಪತ್ರವನ್ನು ಮಡಿಕೆಮಾಡಿ ಇಡುತ್ತಿರುವಾಗಲೆ ಅದರೊಳಗಿನ 'ಬೇಕು' ಎಂಬ ಗೇರುಹಣ್ಣಿನ ಕಾರಖಾನೆಯ ಜಾಹೀರಾತು ಕಣ್ಣಿಗೆ ಬಿತ್ತು. ಅವನಿಗೆನಿಸಿತು–ಬ್ರಹ್ಮದೇವನ ತಲೆ ತಿರುಗಿರಲಿಕ್ಕೆ ಸಾಕು. ವಿದ್ಯಾಧರನಂಥ ಆ ಕಾಡು ಮಿಕಕ್ಕೆ ವತ್ಸಲೆ ಒಳ್ಳೇ ಹೆಂಡತಿಯಾಗುತ್ತಿದ್ದಳು! ಆದರೆ ಈಗ ಅವನಿಗೂ ಸುಲೋಚನೆಗೂ ಒಳ್ಳೇ ನಿಕಟ ಸಂಬಂಧವು ಬರುವದು. ಗೇರು ಒಡೆಯುವ ಯಂತ್ರವನ್ನೊಂದು ಅವನು ತಯಾರಿಸುವಂತಾದರೆ–ಐದು ಸಾವಿರವಷ್ಟೇ ಏಕೆ, ಇಡೀ ಕಾರಖಾನೆಯನ್ನೇ ದೋಚಿಕೊಂಡು ಹೋಗಬಹುದು ಅವನು ! ಮನೆಯ ಅಳಿಯನಾಗುವ ಈ ಮಗ ! ಅವನಿಗಿಂತ ತನಗೂ ಸುಲೋಚನೆಗೂ ಎಷ್ಟೋ ಸಾಮ್ಯವಿದೆ. ಆದರೆ–

ವತ್ಸಲೆಯು ಜೀವ ಕೊಟ್ಟರೆ ಸುಲೋಚನೆ ತನಗೆ ದೊರೆಯಲು ಪ್ರತಿಬಂಧವೇನು ? ಆದರೆ ಆ ವಹಿ ಮಾತ್ರ ಯಾರ ಕೈಗೆ ಹತ್ತುವುದೂ ಸರಿಯಲ್ಲ.

'ಸುಂದರ ಚಿತ್ರ'ವೆಂಬುದೊಂದು ಕಥೆಯನ್ನು ಅವನು ಕೂಡಲೇ ಬರೆಯಬೇಕಾಗಿತ್ತು.



ಅದರಲ್ಲಿಯ ಸಮುದ್ರದ ಮೇಲಿನ ಬೆಳದಿಂಗಳ ಸನ್ನಿವೇಶವನ್ನು ಅವನು ಚಿತ್ರ ಬರೆಯುವುದಕ್ಕಾಗಿ ಒಮ್ಮೆ ಸುಲೋಚನೆಗೆ ಹೇಳಿಯೂ ಇದ್ದ. ಆ ಕಥೆಯ ಬಗ್ಗೆ ವಿಚಾರಮಾಡುತ್ತ ನಿದ್ದೆ ಹೋಗಬೇಕೆಂದು ಅವನು ಹಾಸಿಗೆಯ ಮೇಲೆ ಬಂದು ಬಿದ್ದುಕೊಂಡ. ಆದರೆ ಅವನ ಅಂತಃಕರಣವು ತಳಮಳಿಸುತ್ತಿತ್ತು. ಎಷ್ಟೋ ವೇಳೆ ಮಗ್ಗುಲಿಂದ ಮಗ್ಗುಲಿಗೆ ಹೊರಳಾಡಿದ. ಆದರೆ ಕಾಲು ಮೇಲೆ ಕೆಳಗೆ ಮಾಡಿದರೆ ಅದರಲ್ಲಿ ಅಳುಕುವ ಮುಳ್ಳು ಹೊರ ಬರುವುದು ಸಾಧ್ಯವೆ?

ತಲೆ ಭಾರವಾಗಿತ್ತು. ಮೈಯು ದಣಿದಿತ್ತು. ಏನು ಮಾಡಿದರೂ ನಿದ್ರಾದೇವಿ ಪ್ರಸನ್ನಳಾಗಲಿಲ್ಲ. ಎದ್ದು ಬಂದು ಗ್ಯಾಲರಿಯಲ್ಲಿ ನಿಂತುಕೊಂಡ. ಭವ್ಯವಾದ ಬೀದಿ. ಎದುರಿನ ಆ ಮಾಟಾದ ಬಂಗಲೆ, ಎಲ್ಲವೂ ಇದ್ದಂತೆಯೇ ಇದ್ದವು. ಅದೇ ನಡುರಾತ್ರಿ ಮೀರಿದ್ದರಿಂದ ಬೀದಿಯಲ್ಲಿ ಯಾವ ಓಡಾಟವಿರಲಿಲ್ಲವೆಂದೇ ಹೇಳಬಹುದು. ಬೆಳದಿಂಗಳಲ್ಲಿ ಕಟ್ಟಡಗಳು ಹಗಲಿನಲ್ಲಿಯಗಿಂತ ಸುಂದರವಾಗಿ ಕಾಣುತ್ತವೆ. ಆದರೆ ರಮಾಕಾಂತನಿಗೆ ಅವು ಭಯಾನಕವಾಗಿ ತೋರಿದವು–ಹೂ ಹರವಿದ ಹೆಣಗಳೇನೋ ಎಂಬಂತೆ. ಅದೇ ಮನುಷ್ಯರಿಂದ ಬೀದಿಯು ತುಂಬಿಹೋಯಿತೆಂದರೆ ಆ ಚಿತ್ರವು ಇವೇ ಕಟ್ಟಡಗಳಿಂದ ಅಂದವಾಗಿ ಎದ್ದು ಕಾಣುತ್ತದೆಂಬುದು ಈಗ ಅವನ ಲಕ್ಷ್ಯಕ್ಕೆ ಬಂದಿತು. ಕಲೆ ಹಾಗೂ ಸೌಂದರ್ಯಗಳಿಗಿಂತ ಜೀವನದ–ಬರೀ ಸರಳ ಜೀವನದ ಬೆಲೆಯು ಹೆಚ್ಚಾದೀತೇ?

ಈ ಪ್ರಶ್ನೆಗೆ ಉತ್ತರವನ್ನು ಕೇಳಲಿಕ್ಕೇನೊ ಎನ್ನುವಂತೆ ಅವನು ಚಂದ್ರನ ಕಡೆಗೆ ಮೇಲೆ ನೋಡಿದ. ಶಾಲೆಯಲ್ಲಿದ್ದಾಗ ನಿರ್ವಾಹವಿಲ್ಲದ್ದಕ್ಕೆ ಬಾಯಿ ಪಾಠ ಮಾಡಿದ ಗೀತೆಯೊಳಗಿನ ಒಂದು ಸಾಲು ಅವನಿಗೆ ನೆನಪಾಯಿತು.

"ಪುಷ್ಣಾಮಿ ಚೌಷಧಿಃ ಸರ್ವಾಃ ಸೋಮೋಭೂತ್ವಾ ರಸಾತ್ಮಕಃ"

"ಒಂದೇ ರಾತ್ರಿಯಲ್ಲಿ ನಾನು ಮುದುಕನಾದೆನೋ ಏನು?" ಎಂಬ ವಿಚಾರವು ಆ ಗೀತೆಯ ಸಾಲಿನ ಬೆನ್ನ ಹಿಂದೆ ಅವನ ಮನದಲ್ಲಿ ಸುಳಿಯಿತು.

ಚಂದ್ರನ ಕಡೆಗೆ ನೋಡಿ "ಶಾಪಸಂಭ್ರಮ" ನಾಟಕದೊಳಗಿನ ತನ್ನ ಪ್ರೀತಿಯ ಪದವೊಂದನ್ನು ಅವನು ಗುಣುಗುಣು ಹಾಡಹತ್ತಿದನು.

* * * * *

ಮರುದಿವಸ ಮುಂಜಾನೆ ಹತ್ತು ಗಂಟೆಗೆ ಸಾವಳನು ತನ್ನ ಏಳು ವರ್ಷಗಳ ಹಿಂದಿನ ಬಟ್ಟೆಗಳನ್ನು ತೊಟ್ಟುಕೊಂಡು ಜೇಲನ್ನು ಕೊನೆಯ ಬಾರಿ ನೋಡಿ ಹೊರಟ. ಕೋಟು ತೊಟ್ಟುಕೊಳ್ಳುವಾಗ ಜೇಬಿನಲ್ಲಿಯ ಒಂದು ವಸ್ತ್ರವು ಅವನ ಕೈಗೆ ತಗಲಿತು. ವಸ್ತ್ರವೇಕೆ? ಹೃದಯದಲ್ಲಿ ಮಲಗಿದ್ದ ಮಧುರಸ್ಮೃತಿಯೇ ಕೈಗೆ ತಾಗಿತೆನ್ನಬೇಕು. ಈ ವಸ್ತ್ರಕ್ಕೆ ತುಳಸಿ ತಾನೇ ಅಂಚು ಕಟ್ಟಿದ್ದಳು. ಹೊಲಿಯುವುದು, ಹೆಣೆಯುವುದು, ಹಾಡುವುದು, ಬಾರಿಸುವುದು ಇಂಥವುಗಳಲ್ಲಿ ಅವಳಿಗೆಷ್ಟೊಂದು ಉತ್ಸಾಹ ! ಆದರೆ ಅವಳ ಎಲ್ಲ ಆಸೆಗಳನ್ನು ತಾನು ತುಳಿದು ಮಣ್ಣುಪಾಲು ಮಾಡಿದ. ಅವಳ ತಾಯಿ ಗಳಿಸಿದ ಎಲ್ಲ ದುಡ್ಡು ಕ್ಷಯದಂಥ

ಬೇನೆಯಲ್ಲಿ ಹೋಯಿತು. ಸೋದರಮಾವನಂತೂ ತೀರ ಬಡವ ! ಇಲ್ಲದಿದ್ದರೆ ಅವಳು ಒಳ್ಳೇ ಸಿರಿವಂತರ ಮನೆಗೆ ಬೀಳುವಂತಿತ್ತು.

ಜೇಲಿನಿಂದ ಹೊರಬಿದ್ದ ಕೂಡಲೆ ಸಾವಳನು ತಿರುಗಿ ನೋಡಿದ. ಅದಕ್ಕೆ ಅವನು ಕೊನೆಯ ದೀರ್ಘನಮಸ್ಕಾರವನ್ನೇ ಮಾಡುತ್ತಿದ್ದನೇನೋ ! ಜೇಲಿನಲ್ಲಿದ್ದಾಗ ಕೈದಿಗಳ ಮಾತು ನಿತ್ಯವೂ ಅವನ ಕಿವಿಗೆ ಬೀಳುತ್ತಿದ್ದವು. ಒಮ್ಮೆ ಕೈದಿಯಾದರೆ ಸಾಯುವವರೆಗೂ ಅವನು ಕೈದಿಯೇ ಎಂಬ ಸೂತ್ರವಂತೂ ಅವನಿಗೆ ಪಾಠವಾದಂತಾಗಿತ್ತು; ಆದರೆ ಹೊರಗೆ ಬಂದು ಜೇಲಿನ ಕಡೆಗೆ ನೋಡುವಾಗ ಅವನಿಗೆನಿಸಿತು – ಈ ನರಕಕ್ಕೆ ತಾನಿನ್ನೆಂದಿಗೂ ಬರುವವನಲ್ಲ. ಹೊರಜಗತ್ತಿನಲ್ಲಿ ಬಾಪ್ಪಾ ಅವರು ಇದ್ದಾರೆ, ತುಳಸಿ ಇದ್ದಾಳೆ. ಅವರನ್ನು ಬಿಟ್ಟು ಈ ತಿಪ್ಪೆಯಲ್ಲಿ ತೊಳಲಾಡಲಿಕ್ಕೆ ಬರುವಷ್ಟು ನಾನು ಮೂರ್ಖನಿದ್ದೇನೆಯೆ? ಈ ವಿಚಾರವು ಅವನ ಮನಸ್ಸಿನಲ್ಲಿ ಬಂದಾಗಲೇ ಕೈ ಸರಪಣಿಗಳ ಕಟುವಾದ ಖಣ ಖಣ ಸಪ್ಪಳವು ಅವನಿಗೆ ಕೇಳಿಬಂತು. ಒಳಗೆ ಕೈದಿಗಳು ಇತ್ತಿಂದತ್ತ ಹೋಗುತ್ತಿದ್ದರು.

ಕತ್ತಲೆಯೊಳಗಿಂದ ಹೊರಗೆ ಬರುತ್ತಿರುವ ಮನುಷ್ಯನಿಗೆ ಒಮ್ಮೆಲೆ ಮುಗಿಲ ಕಡೆಗೆ ನೋಡಲಾಗುವುದಿಲ್ಲ. ಹಾದಿಗುಂಟ ಹೋಗುವಾಗ ಸಾವಳನ ಸ್ಥಿತಿಯೂ ಹೀಗೇ ಆಯಿತು. ಮೊದಲನೇ ನಾವೆ ಹಿಡಿದು ಊರಿಗೆ ಹೋಗಬೇಕು, ಅಲ್ಲಿ ತುಳಸಿಯ ಬಗ್ಗೆ ವಿಚಾರಿಸಬೇಕು, ಎಂದಂತೂ ಅವನು ಎಂದೋ ನಿಶ್ಚಯಿಸಿದ್ದ. ನಾವೆ ಸಂಜೆಗೆ ಬರುವದು. ಅಲ್ಲಿಯವರೆಗೆ ಇಡೀ ದಿವಸವನ್ನು ಕಳೆಯುವುದು ಹೇಗೆ ! ತಾನು ಕೈದಿಯೆಂಬುದನ್ನು ಯಾರಾದರೂ ಗುರುತಿಸಿದರೆ ? ಅತ್ತಿತ್ತ ಸುತ್ತುವುದರಲ್ಲಿಯೇ ಅವನು ಸುಮಾರು ಎರಡು ಗಂಟೆ ವೇಳೆ ಕಳೆದ. ಆದರೆ ಜೇಲಿನಲ್ಲಿ ತರುಣನಂತೆ ಗಡಗಡನೆ ಸಾಗುವ ಹೊತ್ತು ಈಗ ಮುದುಕನಂತೆ ಕೋಲು ಊರುತ್ತ ನಡೆದಿದೆ ಎಂದು ಅವನಿಗೆ ಭಾಸವಾಯಿತು.

ದಾರಿಯಲ್ಲಿ ಒಂದು ಚಹದ ಅಂಗಡಿ ಕಂಡಿತು. ಏಳು ವರ್ಷದ ಅನಂತರ ಚಹ ಕುಡಿಯುವುದು ! ಹನ್ನೆರಡು ಗಂಟೆ ಸಮೀಪಿಸಿತ್ತು ! ಸಮುದ್ರಮಥನದ ಕಾಲಕ್ಕೆ ದೇವದೈತ್ಯರು ಆಸೆತುಂಬಿದ ಕಣ್ಣುಗಳಿಂದ ಅಮೃತದ ಕಡೆಗೆ ನೋಡಿರಬಹುದಾದ ಹಾಗೆ ಸಾವಳನು ಅಂಗಡಿಯಲ್ಲಿಯ ಚಹದ ಕಪ್ಪುಗಳ ಕಡೆಗೆ ನೋಡಹತ್ತಿದ. ಅವನಿಗೆ ಬಾಪ್ಪಾ ಅವರ ಮಾತು ನೆನಪಾಯಿತು. 'ನಿನ್ನ ಚಹಾ, ಸೆರೆ ಎಲ್ಲವೂ ತಾವಾಗಿಯೇ ಬಿಟ್ಟುಹೋಗಿವೆ. ಹೊರಬಿದ್ದ ಅನಂತರ ಮತ್ತೆ ಅವುಗಳ ಹುಚ್ಚು ಬೇಡ.' ಮೋಹ ತಡೆದು ಎರಡು ಹೆಜ್ಜೆ ಮುಂದಿಟ್ಟ. ಇಷ್ಟರಲ್ಲಿಯೇ ಅಂಗಡಿಯಿಂದ ಹೊರಬೀಳುವ ಒಬ್ಬ ಮನುಷ್ಯನು 'ಚಹಾ ಕುಡೀಬೇಕಾದರೆ ಇಲ್ಲೇ' ಎಂದದ್ದು ಕೇಳಿಸಿತು.

ಚಹದ ಮಾತು ಬೇರೆ–ಸೆರೆಯ ಮಾತು ಬೇರೆ ಎಂದು ವಿಚಾರ ಮಾಡುತ್ತ ಅವನು ಒಳಗೆ ಹೊಕ್ಕ. ಅತ್ತಿತ್ತ ನೋಡಿದ. ಮಧ್ಯಾಹ್ನದ ಹೊತ್ತಾದ್ದರಿಂದ ಹೋಟಲಿನಲ್ಲಿ ಒಬ್ಬ ಗಿರಾಕಿಯೂ ಇರಲಿಲ್ಲ.

"ಯಾಕಪಾ ಹಿರಿಯಾ, ಏನ ಬೇಕು?" ಎಂದು ಹದಿನೈದು ಹದಿನಾರು ವರ್ಷದ ಆ್ಯಕ್ಟಿಂಗ ಮಾಲಕನು ಕೇಳಿದ.



"ಚಹಾ ಒಂದ ಕಪ್ಪ."

"ಬರೇ ಚಹಾ?"

"ಹುಂ."

"ಭಜೀ, ಚೂಡಾ, ಶಂಕರಪಾಳೆ, ಬೇಸನ ಉಂಡಿ, ಚಕ್ಕಲಿ"–ಹುಡುಗ ನಾಮಾವಳಿ ಓದಿದ. ರತ್ನಾಗಿರಿ ಜಿಲ್ಲೆಯ 'ಭೂಗೋಲ' ಮುಖಪಾಠ ಹೇಳುವ ಹುಡುಗನಿಗಾಗಲಿ, ಒಂದೇ ಘಳಿಗೆಯಲ್ಲಿ ರುದ್ರ ಸೂಕ್ತವನ್ನು ಹೇಳುವ ಭಟ್ಟರಿಗಾಗಲಿ ಅವನ ಸ್ವರವನ್ನು ಕೇಳಿ ಅಸೂಯೆಯೆನಿಸುವಂತಿತ್ತು.

"ಚೂಡಾ ಕೊಡು ಎರಡು ಬಿಲ್ಲೀವು" ಎಂದು ಹೇಳಿದ. ಮಾರಾಟದ ಮೊದಲನೇ ಪರೀಕ್ಷೆಯಲ್ಲಿ ಪಾಸಾದ ಆನಂದವು ಆ ಹುಡುಗನ ಮೋರೆಯ ಮೇಲೆಯೂ ಮಿರುಗಿತು.

ಚಹ ತಯಾರಾಗುತ್ತಿತ್ತು. ಸಾವಳನು ಸಹಜವಾಗಿಯೇ ಅಂಗಡಿಯ ಸುತ್ತೂ ನೋಡಿದ. ಎದುರಿನಲ್ಲಿಯೇ ಯಾವುದೊ ನಾಟಕ ಕಂಪನಿಯ ಒಂದು ಒಳ್ಳೇ ದೊಡ್ಡ ಜಾಹೀರಾತು ಕಾಣುತ್ತಿತ್ತು. ಒಬ್ಬ ಹೆಂಗಸಿನ ಫೋಟೋ ಇತ್ತು ಅದರಲ್ಲಿ ! ಆ ಫೋಟೋ ನೋಡಿ ಅವನಿಗೆನಿಸಿತು–ಇವಳು ತುಳಸಿಯಾಗಿರಲಿಕ್ಕಿಲ್ಲವಷ್ಟೆ ? ಕೂಡಲೆ ಅವನಿಗೆ ತನ್ನ ಹುಚ್ಚು ವಿಚಾರಕ್ಕಾಗಿ ನಗೆ ಬಂದಿತು. ತನ್ನ ಹುಚ್ಚಳಂಥ ತುಳಸಿ ನಾಟಕ ಕಂಪನಿಯಲ್ಲಿ ಹೋದಾಳಾದರೂ ಹೇಗೆ ? ನಾಟಕವೆಂದರೆ ಸುಲಭ ಕೆಲಸವಲ್ಲ. ಸಾವಿರಾರು ಜನರೆದುರು ನಿಂತು ಮಾತಾಡುವದು! ಅಲ್ಲದೆ ಹಾಡಲಿಕ್ಕೆ ಬರಬೇಕು. ತುಳಸಿಯ ದನಿ ಚೆನ್ನಾಗಿತ್ತು. ಆದರೆ–

ಚಹದ ಉಗಿ ಮೋರೆಗೆ ಬಂದದ್ದರಿಂದ ಅವನು ಮುಖ ತಿರುಗಿಸಿದ. ಆದರೆ ಅವನು ಆ ಜಾಹೀರಾತಿನ ಕಡೆಗೆ ನೋಡುತ್ತಿದ್ದದ್ದು ಆ ಹುಡುಗನ ಲಕ್ಷ್ಯ ಸೆಳೆಯಿತು. ಅವನಂದ "ಹಳೇದದ ಏಳು ಆ ಜಾಹೀರಾತು !"

ಸಾವಳ ಚಹ ಕುಡಿಯಹತ್ತಿದ. ಎಷ್ಟು ವರ್ಷದ ಮೇಲೆ ಚಹ ಕುಡಿದದ್ದು ! ಮೊದಲ ಗುಟುಕು ಸ್ವಲ್ಪ ಕಹಿಯಾಗಿಯೇ ಎನಿಸಿತು.

ಬೀಡಿ ಸೇದುತ್ತ ಹುಡುಗನಂದ–"ನೀವು ನೋಡೀರೊ ಇಲ್ಲೊ ಈ ಕಂಪನೀ ನಾಟಕಾ?"

"ಎಲ್ಲಿ ನೋಡಬೇಕು ? ಹಳ್ಳೀ ಊರಾಗ ಇರಾವ ನಾ"

"ಹಳ್ಳೀ ಊರ ಎಲ್ಲಾ ಇಕಡೇ ಕಿತ್ತಿ ಬಂದಿತ್ತಲಾ–ಜಾತ್ರಿ ನೆರದ್ಹಂಗ ಆಗತಿತ್ತು ಜಾತ್ರಿ !"

"ಗಂಧರ್ವ ಮಂಡಳೀ ಬಂದಿತ್ತೇನ?"

"ಎಲ್ಲೀ ಗಂಧರ್ವನ್ನ ತರತೀ ! ಈ ಕಂಪನ್ಯಾಗಿನ ರಂಭೇರ ಮುಂದ."

"ಹೆಂಗಸರ ಕಂಪನೀನs ?"

"ಹೆ ! ಹೆಂಗಸಿಂದು!"

"ಅಂದರ?"

"ಒಬ್ಬಾಕಿನs ಹೆಂಗಸ ಅದಾಳ ಆ ಕಂಪನ್ಯಾಗ, ಆದರ ಹೀಂಗ ನಿವಳ ಅದಾಳ ಅಂತೀ"

"ಹೆಸರೇನು ಆಕಿದು?" ಎಂದು ಸಾವಳ ಗೊಗ್ಗರ ದನಿಯಲ್ಲಿ ಕೇಳಿದ.

"ನೆಗಡಿ ಆದಾಂಗ ಕಾಣತ್ಯೈತಿ ನಿಮಗ ಹಿರ್‍ಯಾ. ಚಾ ತಗೋರಿ ಮದಲ."

"ಇರಲೀ. ಹೆಸರೇನಾಕೀದು?'

"ನಿಮಗೇನ ಮಾಡಬೇಕಾಗ್ಯೆತಿ ಆಕೀ ಹೆಸರ ತಗೊಂಡು ! ನಿಮಗೂಡ ಅಕೀ ಮದಿವಿ ಮಾಡಿಕೊಳ್ಳೂದಟರಾಗೇ ಐತಿ ! ಹೆಸರ ಸುದ್ದಾ ಹೆಂಗ ಜ್ವಕಾಸ ಐತಿ ನೋಡ್ರಿ ! ಮಿಸ್ ಸುರಂಗಾ !"

ಸಾವಳನ ತ್ರಸ್ತವಾದ ಮುಖದ ಮೇಲೆ ಸಮಾಧಾನ ಮೂಡಿತು. ಚಹದ ಎರಡು ಮೂರು ಗುಟುಕು ಕುಡಿದ. ಆ ಹುಡುಗ ಜಾಹೀರಾತಿನ ಕಡೆಗೆ ಬೊಟ್ಟು ತೋರಿಸಿ ಅಂದ– " ಆ ಚಿತ್ರದ ಮ್ಯಾಗಿಂದ ಪರೀಕ್ಷಾ ಮಾಡಬ್ಯಾಡ ಎಣ್ಣಾ. ಈ ಚಿತ್ರ ಅಂದರ ನಮ್ಮ ಸೋಸಿದ ಚಾಪುಡೀ ಇದ್ದಾಂಗ. ನಿಮಗ ಖರೇ ಕಾಣಾಕಿಲ್ಲಾ–ಇಲ್ಲೀ ಒಬ್ಬ ಸಾವಕಾರ ತಿಂಗಳಿಗೆ ಐನೂರು ರೂಪಾಯಿ ಕೊಡಲಾಕ ತಯಾರಾಗಿದ್ದ ಆಕಿನ್ನ ಇಟಿಗೋಳಾಕ !"

"ಅಲ್ಲಿಂದ?" ಎಂದು ಸಾವಳ ಕುತ್ತಿಗೆ ಹಿಸುಕಲ್ಪಟ್ಟಂತೆ ಮೋರೆ ಮಾಡಿ ಕೇಳಿದ. "ಆಕಿ ಯಾಕ ಇರತಾಳಿರೀ ಹನ್ನೆರಡೂರ ನೀರ ಕುಡದಾಕೀ ! ಮತ್ತ ಆ ಮ್ಯಾನೇಜರ ಬಿಡತಾನ ?" ಈ ಕೊನೆಯ ವಾಕ್ಯವನ್ನು ಉಚ್ಚರಿಸುವಾಗಿನ ಆ ಹುಡುಗನ ಕಿಡಿಗೇಡಿತನಕ್ಕೆ ಸಾವಳನಿಗೆನಿಸಿತು – ಕಪ್ಪು ಎತ್ತಿ ಅವನ ತಲೆಗೆ ಬೀಸಬೇಕೆಂದು. ಆದರೆ ಅಷ್ಟರಲ್ಲಿ ಏನೋ ಬಗೆದು ಅಂದ– "ಈ ಸುರಂಗಾಗ ಹಾಡಲಾಕಗೀಡಲಾಕ ಬರತತೇನು?'

"ತೂ ! ತೂ ! ಹಾಡತಾಳಂತೇನ ಕೇಳತೀರೀ ? ಸುಮ್ಮನ ಸಾರಂಗೀ ಬಾರಿಸಿದ್ಹಂಗ ಆಗತ್ಯೆತೆ ಸಾರಂಗೀ ! ಥೇಟರಕ ಥೇಟರs ತಲಿದೂಗತ್ಯೆತಿ ಹಾವಿನಂಗ. ಆಕೀದು ಒಂದಂದರ ಒಂದ ನಾಟಕಾ ಸುದ್ದಾ ತಪ್ಪಸಲಿಲ್ಲ ನಾ. ಆ **'ಪ್ರಣಯತರಂಗ'** ನಾಟಕದಾಗ 'ಚಿಹಿ' ಅನ್ನ ಕೋತs ಬರತಾಳ ಆಗ ಏನಿರಿ ? ಚಪ್ಪಾಳಿ ಮ್ಯಾಲ ಚಪ್ಪಾಳಿ ಬೀಳತಾವ."

ಸುರಂಗ ಹಾಡುತ್ತಾಳೆಂಬುದನ್ನು ಕೇಳಿ ಸಾವಳನಿಗೆ ಸ್ವಲ್ಪ ಹಗುರೆನಿಸಿತು. ಮತ್ತೆ ಚಹ ಕುಡಿಯಹತ್ತಿದ. ವಿಷಯವನ್ನು ಬದಲಿಸಬೇಕೆಂದು ಆ ಹುಡುಗ ಕೇಳಿದ "ನಿಮ್ಮ ಊರ ಯಾವ ಕಡೆ ಐತರಿ?"

"ಬಾಳ ತೆಳಗ ಐತಿ. ವೆಂಗುರ್ಲಾದ ಹತೀಲೆ ಕಾಮಾಪೂರ ಐತಲಾ–"

"ಅಂದರ ಈ ಸುರಂಗಾ ನಿಮ್ಮೂರಾಕೀನೆ ಅನ್ನು......!"

"ಅಂದರ?"

"ಕಾಮಾಪೂರಕಡೀ ಪಾತರದಾಕಿ ಮಗಳಂತ ಆಕೀ ! ಬೆಳೆದ ಊರಾಗ ಕಿಮ್ಮತ ಬರೂದಿಲ್ಲ ಅನ್ನೂದ ಕರೇ ನೋಡು, ಹಿರ್‍ಯಾ."

"ಊರ ಕಡೀದೇನೂ ಸುದ್ದಿಸುಕಾಲ ಗೊತ್ತಿಲ್ಲ ನನಗ. ಈಗ ಏಳು ವರ್ಷ ಆತು ನಾ ಆಕಡೆ ಹೋಗದ."

"ಹಾಂಗಾರ ಎಲ್ಲಿದ್ದಿರಿ?"



ಕೈದಿಯ ಎದೆಗೆ ಬರೆ ಕೊಡುವ ಮೊದಲನೇ ಪ್ರಶ್ನೆ ಧುತ್ತೆಂದು ಸಾವಳನೆದುರು ನಿಂತಿತು. ಅವನೇನೂ ಮಾತಾಡಲೇ ಇಲ್ಲ.

"ಇಲ್ಲೇನು ಕೋರ್ಟಿನ್ಯಾಗ ಕೆಲಸ ಇತ್ತ ಕಾಣತತಿ."

"ಹೌಂದ."

"ನಿಕಾಲ ಆತೇನ?"

ಸಾವಳ ಸುಮ್ಮನೇ ಕುಳಿತ.

"ನಿಕಾಲ ವಿರುದ್ಧ ಆದಾಂಗ ಕಾಣತ್ಯೆತಿ" ಎಂದು ಹುಡುಗ ಮುಂದೆ ಸಾಗಿದ.

ಸಾವಳ ಮೇಲಿಂದ ಮೇಲೆ ಆ ಜಾಹೀರಾತಿನ ಕಡೆಗೆ ನೋಡುತ್ತಿದ್ದ. ಹುಡುಗನಂದ:

"ಸುರಂಗಾನ್ನ ನೋಡಬೇಕಾಗೇತೇನು ನಿಮಗ? ನನ ಹತ್ಯಾಕ 'ಪ್ರಣಯತರಂಗ' ನಾಟಕ ಐತಿ." ಅವನು ಒಳಗಿನ ಕೋಣೆಯಲ್ಲಿ ಹೋಗಿ ಒಂದು ಪೆಟ್ಟಿಗೆಯೊಳಗಿಂದ ನಾಟಕದ ಪುಸ್ತಕವೊಂದನ್ನು ತಂದು ಅದರ ಮುಖ ಚಿತ್ರವನ್ನು ತೆರೆದು ಸಾವಳನ ಕೈಯಲ್ಲಿ ಕೊಟ್ಟ. ಪ್ರಿಯಕರನ ದಾರೀ ಕಾಯುತ್ತಿದ್ದ ನಾಯಿಕೆಯ ಚಿತ್ರವಿತ್ತು! ಸಾವಳನು ಅದರ ಕಡೆಗೆ ನೆಟ್ಟ ದೃಷ್ಟಿಯಿಂದ ನೋಡತೊಡಗಿದ. ನೋಡನೋಡುತ್ತ ಅವನು ಹುಬ್ಬುಗಂಟಿಕ್ಕಿದ. ತುಟಿ ಕಚ್ಚಿದ. "ಒಳೇ ಅಡ್ನಾಡಿ ಕಾಣತಿದೀಯಲ್ಲಾ ಯಣ್ಣಾ. ಚಂದನ್ನ ಮಾರಿ ನೋಡಿ ಹೊಟ್ಟೆ ನೋಸಲಾಕ ಹತ್ತೆಂತ ಕಾಣತ್ಯೆತಿ ! ಈ ಫೋಟೋ ನೋಡಿ ಮಂದಿ ಏನ ಮಾಡತಾರ ಗೊತ್ತೈತೇನು?"

ಆ ಹುಡುಗನು ಕೆಳಗೆ ಬಾಗಿ ಆ ಚಿತ್ರವನ್ನು ತಟ್ಟನೆ ಮುದ್ದಿಸಿದ.

ಸಾವಳನು ಛಪ್ಪೆಂದು ಅವನ ಮುಸುಡೆಯ ಮೇಲೊಂದು ಏಟು ಕೊಟ್ಟ.

* * * * *

ಇದೇ ವೇಳೆಗೆ ಸರಿಯಾಗಿ ರಮಾಕಾಂತನು ಅದೇ ಊಟದ ಅನಂತರ ಒರಗಿ ಅಸ್ವಸ್ಥ ನಿದ್ರೆಯಲ್ಲಿ ಸುರಂಗೆಯ ಕನಸು ಕಾಣುತ್ತಿದ್ದ. ಅವನ ನಾಟಕದ 'ತಾಲೀಮು' ಮುಗಿಯ ಬಂದಿತ್ತು. ಅದರಲ್ಲಿ ಸುರಂಗೆಯನ್ನು ಮನಸೆಳೆಯುವ ಅಭಿನಯದ ಅನೇಕ ಸನ್ನಿವೇಶಗಳು ಅವನ ಸ್ವಪ್ನ ಚಿತ್ರದಲ್ಲಿ ಸರಸರನೆ ಮಿಂಚಿಹೋಗುತ್ತಿದ್ದವು. "ಹೀಗಲ್ಲ ಕೈ ಹಿಡಿಯೋದು, ಹೀಗೆ" ಎಂದು ಒಂದು ದಿನ ಅವಳ ಕೈ ಹಿಡಿದು ತಾನು ಅಭಿನಯವನ್ನು ಕಲಿಸಿದ್ದು ಅವನ ಕಣ್ಣ ಮುಂದೆ ನಿಂತಿತು.

ಇಷ್ಟರಲ್ಲಿ 'ಸಾಹೇಬ್ ಸಾಹೇಬ್' ಎಂದು ಯಾರೋ ಕರೆದದ್ದು ಅವನಿಗೆ ಕೇಳಬಂತು.

"ಏನೋ ?" ಎಂದು ಕಣ್ಣು ತೆರೆದು ಕೇಳಿದ. ಅವನ ಚಾಕರಿಯ ಹುಡುಗ ಬಾಗಿಲಲ್ಲಿ ನಿಂತು ಉಸಿರುತ್ತಿದ್ದ,

"ಬಾಯಿಯವರು ಬಂದಾರ್‍ರಿ."

ವತ್ಸಲೆಯೇ ಊರೆಲ್ಲ ತಿರುಗಿ ಬಂದಿರಬೇಕೆಂದು ಅವನಿಗೆನಿಸಿತು. ಅವನು ಉತ್ತರವನ್ನೇ ಕೊಡಲಿಲ್ಲ.

"ಅವರಿಗೆ ಏನಂತ ಹೇಳಲ್ರಿ?"

"ಮನೆಬಿಟ್ಟು ಹೋಗಲಿಕ್ಕೇ ನಾವೇನೂ ಹೇಳಿದ್ದಿಲ್ಲ."

"ಮನ್ಯಾಗಿನ ಅವ್ವನವರು ಅಲ್ಲರಿ."

"ಮತ್ತೆಲ್ಲಿಯವರು ? ಕಂಪನೀಯವರ ?" ಸುರಂಗೇಯೇ ಬಂದಿರಬೇಕೆಂದು ರಮಾಕಾಂತ ಆನಂದದಿಂದ ಕೇಳಿದ.

"ಅಲ್ಲರಿ. ಮತ್ತೊಬ್ಬರು ಅದಾರ‍್ರಿ."

"ಮತ್ತೊಬ್ಬರು?"

ರಮಾಕಾಂತ ವಿಚಾರದಲ್ಲಿ ಬಿದ್ದ. ಬೇಸರದಿಂದ ಎದ್ದು ಹೊರಗೆ ಬಂದು ನೋಡುತ್ತಾನೆ, ಸುಲೋಚನೆ ಬಂದು ಟೇಬಲಿನ ಹತ್ತಿರ ಕುಳಿತಿದ್ದಳು ! ರಣರಣ ಬಿಸಿಲು ಕಳೆದು ಸುಂದರ ಸಂಜೆಯಾಗಿತ್ತು. ಅವನಂದ–

"ಚೆನ್ನಾಗಿದೆ ಅಲ್ಲವೆ ಈ ಮೋಸಗಾರಿಕೆ?"

"ಅಂದರೆ? ನಿಮಗೂ ನನಗೂ ಏನು ವೈರ?"

ಈ ಪ್ರಶ್ನೆ ಕೇಳುವಾಗ ಸುಲೋಚನೆ ತನ್ನ ಹುಬ್ಬು ಕೊಂಚ ಕೊಂಕಿಸಿದ್ದಳು. ಬಿಸಿಲಲ್ಲಿ ಬಂದದ್ದರಿಂದ ಅವಳ ಕೆಂಪಾದ ಗಲ್ಲಗಳು, ಸುಂದರವಾದ ದುಂಡು ಮೋರೆಯ ಮೇಲೆ "ಬುರು ಬುರು" ಹಾರಾಡುವ ಮುಂಗುರುಳುಗಳು, ನಡುನಡುವೆ ಹೊಳೆಯುವ ಒಂದೆರಡು ಬೆವರು ಹನಿಗಳು–ರಮಾಕಾಂತನಿಗೆನಿಸಿತು–ಮೂರ್ತಿಮಂತ ಸಂಧ್ಯಾದೇವಿಯೇ ತನ್ನ ಕಡೆಗೆ ಬಂದಿರುವಳೆಂದು. ಮುಳುಗುವ ಸೂರ್ಯಬಿಂಬ, ಬಣ್ಣ ಬಣ್ಣದ ಮೋಡಗಳು, ಕತ್ತಲೆಯ ಕವಿನೆರಳು, ಅಲ್ಲೊಂದಿಲ್ಲೊಂದು ಚಿಕ್ಕೆ–ಇವೆಲ್ಲವುಗಳ ಮನೋಹರ ಸಮ್ಮೇಳನವನ್ನೇ ಅವನು ನೋಡುತ್ತಿದ್ದ.

"ಇಂಥ ಬಿಸಿಲಲ್ಲಿ ನಾನು ಯಾತಕ್ಕೆ ಬಂದಿರಬಹುದು ಹೇಳಿ ನೋಡೋಣ"

ರಮಾಕಾಂತನಿಗೆ ವತ್ಸಲೆಯ ನೆನಪಾಯಿತು. ಅವಳ ಹೆಣ ಪೊಲೀಸರಿಗೆ ಸಿಕ್ಕಿತೋ ಏನೊ? ಏನಾದರೂ ಹೇಳ ಬೇಕೆಂದು ರಮಾಕಾಂತ ಹೇಳಿದ – "ಬಿಸಿಲ ಹೊತ್ತನ್ನು ಸುಮ್ಮನೆ ಯಾಕೆ ಕಳೆಯಬೇಕೆಂದೆನಿಸಿತೋ ಏನೊ ! ಚಿತ್ರಗಾರರಿಗೇನು ಬೆಳದಿಂಗಳದಂತೆ ಬಿಸಲಿನದೂ ಉಪಯೋಗ."

"ಅಂದರೆ ಲೇಖಕರಿಗೆ ಇಲ್ಲವೇನೋ ? ನಾನು ನಿಮ್ಮನ್ನು ಬೇಕೆಂತಲೆ ಕರೆಯಲಿಕ್ಕೆ ಬಂದಿರುವೆ?"

"ಬಾಪ್ಪಾ ಅವರು ಕರೆದಿರುವರೇನು ಮತ್ತೆ?"

"ಉಂ.... ಹುಂ. ದಾದಾ ಬಂದಿದ್ದಾರೆ ಬೆಳಗ್ಗೆ."

"ಎಲ್ಲಿಂದ? ಕಾಮಾಪುರದಿಂದ?"

"ಹೌದು. ಅವರು ಬಂದಾಗ ನಾನು ನಿಮ್ಮ ಕಥೆಯೊಳಗಿನ ಚಿತ್ರ ಬರೆಯುತ್ತ ಕುಳಿತಿದ್ದೆ. ಅವರು ನಿಮ್ಮ ಬಗ್ಗೆ ಎಲ್ಲವನ್ನೂ ಕೇಳಿದರು. ನಿಮ್ಮ ಭೆಟ್ಟಿ ಆಗಲಿಕ್ಕೇ ಬೇಕೆಂದು ಹೇಳಿದರು."

"ನನ್ನದೆ?" ರಮಾಕಾಂತ ಆಶ್ಚರ್ಯದಿಂದ ಕೇಳಿದ. ಗೇರು ಹಣ್ಣಿನ



ಕಾರಖಾನದಾರನಿಗೂ ಕಥಾಲೇಖಕನಿಗೂ ಭೂಮ್ಯಾಕಾಶದಷ್ಟು ಅಂತರವಿದೆಯೆಂದು ಅವನ ಕಲ್ಪನೆಯಿತ್ತು. ಆಕಾಶವು ಆಲಂಕಾರಿಕ ಅರ್ಥದಲ್ಲಿಯೇ ಆಗಲಿ, ಒಮ್ಮೊಮ್ಮೆ ಕೆಳಗೆ ಬೀಳುವದುಂಟು. ಆದರೆ ನೆಲವು ಮುಗಿಲಿಗೆ ಭೆಟ್ಟಿಯಾಗಲಿಕ್ಕೆ ಎಂದಾದರೂ ಹೋಗುವದೆ?

"ಹೌದು ನಿಮ್ಮನ್ನೆ" ಸುಲೋಚನೆ ನಗುನಗುತ್ತೆಂದಳು: "ದಾದಾ ಅವರು ಕಾರಖಾನದಾರರಾದರೂ ಅವರೇನು ಕಡಿಮೆ ಓದಿಲ್ಲ."

"ಓದಲಿಕ್ಕೆ ಅವರಿಗೆ ಹೊತ್ತೆಲ್ಲಿ?"

"ತೀರ ಚಿಕ್ಕವಳಿದ್ದಾಗ ನನ್ನ ತಾಯಿ ತೀರಿಕೊಂಡಳು. ಆಗ ದಾದಾ ಅವರಿಗೆ ಆರು ತಿಂಗಳು ಕಣ್ಣಿಗೆ ಕಣ್ಣು ಹತ್ತಲಿಲ್ಲ. ಅದಕ್ಕೆ ಅವರಿಗೆ ರಾತ್ರಿ ಹನ್ನೆರಡು ಗಂಟೆಯತನಕ ಕೂಡ ಓದುತ್ತ ಕೂಡುವ ರೂಢಿಯಾಗಿಬಿಟ್ಟಿದೆ."

ರಮಾಕಾಂತ ಒಮ್ಮೆಲೇ ಕೇಳಿದ "ಮನೆಯಲ್ಲಿ ನಿಮ್ಮ ಮಲತಾಯಿ ಇರುವಳೇ?"

ಸುಲೋಚನೆಯ ಕಣ್ಣು ಹೊಳೆದವು. ಅವಳೆಂದಳು "ಸರಿ! ಇಂದಿನವರೆಗೂ ನಾನು ನಿಮ್ಮ ಮುಂದೆ ಹೇಳಿದ್ದೇ ಇಲ್ಲವಲ್ಲ! ನಮ್ಮ ತಂದೆಗೆ ಮೂವತ್ತೇ ವಯಸ್ಸು ಇನ್ನೂ ತಾಯಿ ತೀರಿದಾಗ. ಅಂದರೂ ಅವರು ಎರಡನೇ ಮದುವೆ ಮಾಡಿಕೊಳ್ಳಲಿಲ್ಲ!"

ರಮಾಕಾಂತನ ಮುಖದ ಮೇಲೆ ಆಶ್ಚರ್ಯ ಮೂಡಿತು. ಸರಕಾರಕ್ಕೆ ನೂರಾರು ರೂಪಾಯಿ ತೆರಿಗೆ ಕೊಡುವ ಸಾವುಕಾರ, ಸಾವಿರಾರು ರೂಪಾಯಿ ವ್ಯಾಪಾರ ಮಾಡುವ ಕಾರಖಾನದಾರ ಮೂವತ್ತುವರ್ಷದೊಳಗೆ ಹೆಂಡತಿಯನ್ನು ಕಳೆದುಕೊಂಡಿದ್ದರೂ ಎರಡನೇ ಮದುವೆಯಾಗಿಲ್ಲ! ಮಹಾರಾಷ್ಟ್ರದ ಮಹಾಕವಿಗಳ ಸಿದ್ಧಾಂತವು ಇಂಥ ಹುಂಬರ ಹಳ್ಳಿಯಲ್ಲಿ ಕೂಡ ಇರಬಾರದು! ಹೆಂಡತಿ ಸತ್ತಳೆಂದು ಪ್ರೇಮವು ಸಾಯುವದೆ? ಆ ಪ್ರೇಮಕ್ಕಾಗಿ ಎರಡನೇ ಹೆಂಡತಿಯನ್ನು ಮಾಡಿಕೊಳ್ಳಲೇಬೇಕಾಗುತ್ತದೆ.

ಸುಲೋಚನೆ ಮುಂದೆ ಹೇಳಹತ್ತಿದಳು – "ಒಮ್ಮೊಮ್ಮೆ ನನಗೆನಿಸುವುದು. ನಾನು ಹುಟ್ಟಿದ್ದಿಲ್ಲವೆಂದರೆ ಚೆನ್ನಾಗಿತ್ತು !"

"ಹಾಗಾದರೆ ನನ್ನ ಕಥೆಗಳಿಗೆ ಇಂಥ ಅಂದವಾದ ಚಿತ್ರ ಯಾರು ಬರೆಯುತ್ತಿದ್ದರು?"

"ಇಸ್ಸಿ ! ಹಾಗೆನ್ನುವದಿಲ್ಲ ನಾನು. ಮಲತಾಯಿ ನನಗೆ ಕಾಟ ಕೊಟ್ಟಾಳು ಎಂತ ದಾದಾ ಅವರು ಮತ್ತೆ ಮದುವೆಯಾಗಲಿಲ್ಲ!"

ಮದುವೆಯನ್ನೇ ಮಾಡಿಕೊಳ್ಳದ ಬಾಪ್ಪಾ ಅವರು, ಮಗಳಿಗಾಗಿ ಎರಡನೇ ಮದುವೆಯನ್ನು ಬಿಡುವ ದಾದಾ, ಇವರ ಜೀವನದ ರಹಸ್ಯವಾದರೂ ಏನು ? ಎಂಬ ಪ್ರಶ್ನೆ ರಮಾಕಾಂತನೆದುರು ನಿಂತಿತು.

"ದಾದಾ ಅವರು ಎಷ್ಟು ನನ್ನ ಪ್ರೀತಿಸುವರು ! ಅಂತೇ ಅವರ ಇಚ್ಛೆಗೆದುರು ಹೋಗುವುದೆಂದರೆ ಜೀವದ ಮೇಲೆ ಬರುತ್ತದೆ ನನಗಂತೂ. ನಾನು ಮ್ಯಾಟ್ರಿಕ್ ಪಾಸಾದ ಕೂಡಲೆ ನನಗೆ ಮಂಗಳಸೂತ್ರ ಕಟ್ಟಿಬಿಡಬೇಕೆಂದು ಮಾಡಿದ್ದರು. ಆದರೆ ಬಾಪ್ಪಾ ಅವರು ಹೇಳಿದರು – 'ಹುಡುಗಿಯ ಕೈ ಚೆನ್ನಾಗಿದೆ. ಕಲಿಯಲಿ ಒಂದಿಷ್ಟು ಚಿತ್ರಕಲೆಯನ್ನು.' ಎಲ !

ನಾನು ಬಿಸಿಲೊಳಗೆ ಯಾತಕ್ಕೆ ಬಂದೆ ಎಂಬುದನ್ನು ಹೇಳುವುದನ್ನು ಮರೆತೇಬಿಟ್ಟೆನಲ್ಲ ! ದಾದಾ ಈಗ ಮಲಗಿದ್ದಾರೆ, ನಾವಿನಲ್ಲಿ ಜಾಗರಣೆ ಆಗಿದೆ ಅವರಿಗೆ, ಎದ್ದಮೇಲೆ ನಿಮ್ಮ ಭೆಟ್ಟಿಗೆ ಬರುವವರಿದ್ದರು. ನಾನೂ ಒಂದಿಷ್ಟು ಮೋಜುಮಾಡಬೇಕೆಂದೆ. ಎದ್ದ ಕೂಡಲೆ ಅವರಿಗೆ ಹೇಳಬೇಕು– 'ದಾದಾ, ನಿಮ್ಮ ಸುಲೂ ಅಂದರೆ ಕಲ್ಪಲತೆ ಇದ್ದಂತೆ ! ನಿಮಗೆ ಯಾರು ಬೇಕು? ರಮಾಕಾಂತರಲ್ಲವೇ? ಇದೋ, ನೋಡಿರಿ ರಮಾಕಾಂತ ?" ಹೀಗೆ ಮಾತಾಡುವಾಗ ಸುಲೋಚನೆ ಒಂದು ಸುಂದರ ಲತೆಯಂತೆ ಬಳಕುತ್ತಿದ್ದಳು. ತಾನವಳನ್ನು ಒಂದೇಸವನೆ ನೋಡುತ್ತಿದ್ದನೆಂಬುದು ರಮಾಕಾಂತನಿಗೆ ಹೊಳೆದ ಕೂಡಲೆ ಅವನು ಒಳಗೊಳಗೇ ನಾಚಿ ಕೇಳಿದ– "ಒಂದು ಚೀಟಿ ನನಗೆ ಕಳಿಸಿದ್ದರೂ ಆಗುತ್ತಿತ್ತಲ್ಲ."

"ಚೀಟಿಗಿಂತಲೂ ಏಟೇ ನೆಟ್ಟಗೆ !"

ಇಬ್ಬರೂ ಹೊಟ್ಟೆತುಂಬ ನಕ್ಕರು. ರಮಾಕಾಂತನು ಕನ್ನಡಿಯ ಮುಂದೆ ನಿಂತು ಬ್ರಶ್ಶಿನಿಂದ ಕ್ರಾಪು ತೀಡಿಕೊಳ್ಳಹತ್ತಿದ. ಮೇಜಿನ ಮೇಲಿನ ಕಾಗದಗಳನ್ನು ತಿರುವಿಹಾಕುತ್ತ ಸುಲೋಚನೆಯೆಂದಳು– "ಬರೀ ಚೀಟಿ ಯಾಕೆ ಕಳಿಸಲಿಲ್ಲ ಗೊತ್ತೇ?"

ರಮಾಕಾಂತ ಹಿಂತಿರುಗಿ ನೋಡಿದ. ಸುಂದರವಾಗಿ ಕತ್ತರಿಸಿದ ಅವನ ಕ್ರಾಪು, ಅದರಲ್ಲಿಯ ಚೆನ್ನಾದ ಬೈತಲೆ, ಮನಸೆಳೆಯುವ ಮುದ್ರೆ, ಪ್ರಮಾಣಬದ್ಧವಾದ ಮೈಕಟ್ಟು– ರಮಾಕಾಂತ ಸುಲೋಚನೆಗೆ ಒಂದು ಚಿತ್ರದಂತೆ ಕಾಣಿಸಿದ. ಅವಳು ತಟ್ಟನೇ ಹೇಳಿದಳು– "ಆ ಸುಂದರ ಚಿತ್ರದಲ್ಲಿ ಸೇರಿಸಲಿಕ್ಕೆ ನನಗೊಬ್ಬ ನಾಯಕ ಸಿಕ್ಕ, ನೋಡಿ!"

"ಎಲ್ಲಿಂದ ಹುಡುಕಿ ತೆಗೆದಿರಿ?"

"ಇಲ್ಲಿಂದಲೇ!"

"ನನಗೆ ಕಾಣಿಸುವದಿಲ್ಲವಲ್ಲ!"

"ಆ ಕಡೆ ನೋಡಿರಲ್ಲ ! ಕನ್ನಡಿಯೊಳಗೆ ಕಾಣಿಸುವುದು."

ರಮಾಕಾಂತನ ಅಂತಃಕರಣದಲ್ಲೊಂದು ಮಧುರವಾದ ಉತ್ಕಂಠೇ ಹುಟ್ಟಿತು. ಅವನು ಉತ್ಕಂಠಿತ ಸ್ವರದಲ್ಲಿ ಕೇಳಿದ–"ಹಾಗಾದರೆ ನಾಯಿಕೆ?"

"ಆಕೆಯೂ ಸಿಕ್ಕಳು!"

"ಎಲ್ಲಿ?"

"ಜುಹೂದ ಮಳಲಿನಲ್ಲಿ."

"ಯಾವಾಗ?"

"ನಿನ್ನೆ ರಾತ್ರಿ."

ರಮಾಕಾಂತ ಸಂದಿಗ್ಧ ದೃಷ್ಟಿಯಿಂದ ಅವಳ ಕಡೆಗೆ ನೋಡತೊಡಗಿದ.

ಸುಲೋಚನೆ ಕುರ್ಚಿಯ ಮೇಲಿಂದೇಳುತ್ತೇಳುತ್ತ ಅಂದಳು– "ನಿಮ್ಮ ಆ ಸುರಂಗೆ !"



## ೫

## ಮಾತಾಡುವ ಪೇಲೆ

ಸುಲೋಚನೆಯ ದಾದಾ ಅವರನ್ನು ರಮಾಕಾಂತನು ಸಹಜವಾಗಿ ಒಮ್ಮೆ ನೋಡಿದ್ದರೆ ಅವರನ್ನು ಈಗ ವಿಶೇಷ ಲಕ್ಷ್ಯಕೊಟ್ಟು ನೋಡುತ್ತಿದ್ದನೋ ಇಲ್ಲವೋ ಸಂಶಯವೇ ಇದೆ. ಪಂಚೆ ಉಟ್ಟರೆ ವೈದಿಕ ಬ್ರಾಹ್ಮಣ, ರುಮಾಲು ಸುತ್ತಿದರೆ ಕಾರಕೂನ, ಜಾಕೀಟು ಹಾಕಿಕೊಂಡರೆ ಉಪಾಹಾರಗೃಹದ ಮ್ಯಾನೇಜರನಾಗಿ ಕಾಣಬಲ್ಲ ಅವರ ಮೂರ್ತಿಯು ರಮಾಕಾಂತನಿಗೆ ಅಂದವಾಗಿಯೇ ತೋರಿತು. ಅವರ ವಯಸ್ಸು ಐವತ್ತರ ಒಳಹೊರಗೆ ಇರಬಹುದು. ತುಂಬಿದ ಗಲ್ಲಗಳು. ದೃಷ್ಟಿ ಬೆಕ್ಕಿನದು! ತುಟಿಗಳ ಮೇಲಿಂದ ಮಾತ್ರ ಗೃಹಸ್ಥನೂ ದೃಢನಿಶ್ಚಯಿಯೂ ಒಳಗಂಟಿನವನೂ ಇರಬೇಕೆಂದು ಮಂದಟ್ಟಾಗುವಂತಿತ್ತು.

ರಮಾಕಾಂತ–ಸುಲೋಚನೆಯರು ಮನೆಗೆ ಬರುವಷ್ಟರಲ್ಲಿಯೇ ದಾದಾ ಅವರು ಎದ್ದು ಏನೋ ಕಾಗದಪತ್ರಗಳನ್ನು ತಿರುವಿಹಾಕುತ್ತ ಕುಳಿತಿದ್ದರು.

"ಬಾಪ್ಪಾ ಅವರು ಎಲ್ಲಿ ಹೋದರು, ದಾದಾ ?" ಎಂದು ಸುಲೋಚನೆ ಕೇಳಿದಳು.

"ಪರೇಳದಲ್ಲಿ ಯಾರಿಗೋ ಖಾಯಿಲೆಯಂತೆ."

"ಆಪ್ತರಿದ್ದಾರೇನಲ್ಲಿ ಯಾರಾದರೂ" ಎಂದು ರಮಾಕಾಂತ ಕೇಳಿದ.

"ನಮ್ಮ ಆಪ್ತರು ಯಾರೂ ಇಲ್ಲ. ಬಾಪ್ಪಾ ಅವರ ಆಪ್ತರಿದ್ದಾರೆ !" ಎಂದು ದಾದಾ ಉತ್ತರ ಕೊಟ್ಟರು.

"ಅಂದರೆ?"

"ಕೂಲಿಕಾರ ಜನರೆಲ್ಲ ಅವರ ಆಪ್ತರೇ ಸರಿ."

ಮಾತಾಡುತ್ತಾಡುತ್ತ ರಮಾಕಾಂತನ "ಭಾವದಂತೆ ದೇವ" ಎಂಬ ಕಥೆಯ ಮಾತು ಹೊರಟಿತು. ದಾದಾ ಅವರು– "ಕಥೆ ಚೆನ್ನಾಗಿದೆ. ಆದರೆ ಒಂದು ಮಾತ್ರ ನನಗೆ ಸರಿಹೋಗಲಿಲ್ಲ" ಎಂದರು.

"ಏನದು?" ರಮಾಕಾಂತ ಕೇಳಿದ.

"ಆ ಪೂಜಾರಿ ಆ ಹೆಣ್ಣುಮಗಳ ಮೇಲೆ ಪಾಪದೃಷ್ಟಿ ಇಡುವ. ಅಂದಿನವರೆಗೆ ಅವನು ಎಂದಾದರೂ ಹಾಗೆ ಮಾಡಿದ್ದನೇ?"

"ಇಲ್ಲ."

"ಹಾಗಿದ್ದರೆ ಆಕೆಯನ್ನೇ ನೋಡಿ ಅವನಿಗೆ ಇಂಥ ಬುದ್ಧಿ ಯಾಕೆ ಬಂದಿತು?"

"ಆಕೆ ಬಹಳ ಚೆಲುವೆಯಲ್ಲವೆ?"

"ಹಾಗಾದರೆ ಇದರಲ್ಲಿ ದೋಷ ಯಾರದು ? ಪೂಜಾರಿಯದೋ ಅವಳ ಸೌಂದರ್ಯದ್ದೋ?"

ರಮಾಕಾಂತನಿಗೆ ದಿಗಿಲು ಬಿತ್ತು. ಅವನು ತನ್ನಷ್ಟಕ್ಕೆ ಸೌಂದರ್ಯದ ಎಲ್ಲ ಕಲ್ಪನೆಗೆ

ಒಂದು ಪ್ರತಿಮೆಯನ್ನು ಮಾಡಿಕೊಂಡಿದ್ದ. ಆ ಪ್ರತಿಮೆಗೆ ದಾದಾ ಅವರ ಪ್ರಶ್ನೆಯಿಂದ ಏಟು ಬೀಳುತ್ತಿದೆಯೆಂದು ಅವನಿಗೆನಿಸಿತು.

ತಮ್ಮ ಪ್ರಶ್ನೆ ರಮಾಕಾಂತನಿಗೆ ಸರಿಬರಲಿಲ್ಲವೆಂದು ದಾದಾ ಅವರು ಕಂಡುಹಿಡಿದರು. ಗೋಡಂಬಿಯ ಧಾರಣೆಯಲ್ಲಿದ್ದಷ್ಟು ಅವರ ಲಕ್ಷ್ಯವು ವಾಙ್ಮಯದಲ್ಲಿದ್ದಿಲ್ಲ. ಆದರೆ ರಮಾಕಾಂತನ ಮೇಲೆ ತಮ್ಮ ವರ್ಚಸ್ಸು ಇರಬೇಕೆಂದೇ ಅವರು ಈ ಪ್ರಶ್ನೆಯನ್ನು ಕೇಳಿದ್ದರು. ಅವನು ಸುಮ್ಮನಿದ್ದುದನ್ನು ನೋಡಿ "ನಮಗಾದರೂ ಏನು ತಿಳಿಯುವದೆನ್ನಿರಿ ಈ ವಿಷಯ! ನಾವೇನು, ಗೋಡಂಬಿ ಸುಡಬೇಕು, ತಿಳಲು ಮಾರಬೇಕು."

ದಾದಾ ಅವರಿಗೆ ರಮಾಕಾಂತನ ಪರಿಚಯವು ಬೇರೊಂದು ಮಹತ್ವದ ಕೆಲಸಕ್ಕಾಗಿ ಬೇಕಾಗಿತ್ತು. ಆಫ್ರಿಕದಲ್ಲಿ ಹೊಸ ಗೇರುಹಣ್ಣಿನ ಕಾರಖಾನೆಗಳು ಆದ ಮೂಲಕ ಇಲ್ಲಿಂದ ಪರದೇಶಕ್ಕೆ ಹೋಗುವ ಮಾಲಿಗೆ ಅಷ್ಟೊಂದು ಪ್ರತಿಷ್ಠೆ ಇರಲಿಲ್ಲವೆಂಬುದಂತೂ ಸರಿಯೇ. ಆದರೆ ಅತ್ತ ಕಡೆಯ ವ್ಯಾಪಾರಿಗಳು ಇಲ್ಲಿಗೂ ಬಂದು ತಮ್ಮ ವ್ಯಾಪಾರವನ್ನು ಇಲ್ಲೆಲ್ಲ ಹಬ್ಬಿಸಿಬಿಡುವರೇನೋ ಎಂದು ಇತ್ತಿತ್ತಲಾಗಿ ಅವರಿಗೆ ಭೀತಿ ಉಂಟಾಗಿತ್ತು. ಅಲ್ಲಿಯ ಕಂಪನಿಗಳು ತಮ್ಮ ಮಾಲಿನ ಪ್ರಸಾರಕ್ಕಾಗಿ ಎಷ್ಟೋ ಚಿತ್ರಗಳೊಡನೆ ಒಂದು ಸಣ್ಣ ಪ್ರಚಾರ ಪುಸ್ತಕವನ್ನು ಪ್ರಸಿದ್ಧ ಮಾಡಿದ್ದವು. ಅದು ಕೈಗೆ ಬಂದ ಕೂಡಲೆ ತಮ್ಮದೊಂದು ಸ್ವದೇಶೀ ಉದ್ಯೋಗವೆಂದು ತಾವೂ ಪ್ರಸಿದ್ಧ ಮಾಡಬೇಕೆಂದು ದಾದಾ ಅವರಿಗೆ ತೋರಿದ್ದರಿಂದ ಮುಂಬಯಿಯ ಒಬ್ಬ ಒಳ್ಳೇ ಲೇಖಕನಿಂದ ಇಂಥ ಪುಸ್ತಕವನ್ನು ಬರೆಯಿಸಬೇಕೆಂದೂ ಗೋಡಂಬಿ ಒಡೆಯುವ ಯಂತ್ರ ಶೋಧಕನನ್ನು ಕರೆದುಕೊಂಡು ಹೋಗಬೇಕೆಂದೂ ಉದ್ದೇಶವನ್ನಿಟ್ಟುಕೊಂಡು ಅವರು ಈಗ ಮುಂಬಯಿಗೆ ಬಂದಿದ್ದರು. ಬೆಳಗ್ಗೆ ವಿದ್ಯಾಧರನ ಬಗ್ಗೆ ಎಲ್ಲವನ್ನೂ ತಿಳಿದು ಅವರಿಗೆ ಸಂತೋಷವಾಯಿತು. ಪುಸ್ತಕದ ಹೊಣೆಯನ್ನು ತೆಗೆದುಕೊಳ್ಳುವದು ಮೊದಮೊದಲು ರಮಾಕಾಂತನ ಮನಸ್ಸಿರಲಿಲ್ಲ. ಆದರೆ ಸುಲೋಚನೆಯ ಕಣ್ಣೊಳಗಿನ ಗಾರುಡಿಯಿಂದ ಅವನಿಂದ ಒಲ್ಲೆನ್ನುವುದಾಗಲಿಲ್ಲ.

ದಾದಾ ಅವರು ವಿದ್ಯಾಧರನ ಕೂಡ ಮರುದಿವಸವೇ ಹೊರಡುವುದನ್ನು ಗೊತ್ತುಮಾಡಿದರು. ರಮಾಕಾಂತನಂತೆ ಸುಲೋಚನೆಗಾದರೂ ಇದು ಹೇಗೋ ಹೇಗೊ ಎನಿಸಿತು. ಅವಳು ಸಲಿಗೆಯಿಂದ ಅಂದಳು– "ಇದೇನು ದಾದಾ? ಯಾವಾಗಲೂ ನೀವು ಮದುವೆಯ ಅವಸರದಲ್ಲಿದ್ದಂತೆಯೇ ಮಾಡುವಿರಲ್ಲ !"

ಮೊದಲು ಬರೀ ಉಸುಕು ತುಂಬಿದ ಹಳ್ಳವು ಕೂಡ ಮಳೆಗಾಲದಲ್ಲಿ ಎರಡೂ ದಂಡೆ ಸೂಸುವಂತೆ ಹರಿಯುತ್ತದೆ. ಆನಂದದ ಕ್ಷಣದಲ್ಲಿ ರುಕ್ಷ ಮನಸ್ಸೂ ಸೂರೆಗೊಳ್ಳುತ್ತದೆ. ತಮ್ಮ ನುಣುಪಾದ ತಲೆಯ ಮೇಲೆ ಕೈಯಾಡಿಸುತ್ತ ದಾದಾ ಅವರು ಅಂದರು– "ಕೇಳಿದಿರಾ ರಮಾಕಾಂತ, ಸುಲೂತಾಯಿ ನನಗೆ ಯಾವಾಗಲೂ ಮದುವೆಯ ಅವಸರ ಎನ್ನುವಳು. ಹಾಗಿರುವದೇನೋ ನಿಜ. ಆದರೆ ಮದುವೆ ಯಾರದು ಗೊತ್ತಿದೆಯೇ, ಸುಲೂತಾಯಿ?"

"ಇಸ್ಸಿ ! ಏನಾದರೊಂದು ಮಾತಾಡುವಿರಿ ಆಯಿತು," ಎಂದು ಕೊರಳು ಕೊಂಕಿಸುತ್ತ



ಸುಲೋಚನೆಯು ಕಿಟಿಕಿಗೆ ಆತುಕೊಂಡು ಹೊರಗೆ ನೋಡಹತ್ತಿದಳು.

"ಇಸ್ಸಿ ಎನ್ನಲಿಕ್ಕೆ ಏನಾಯಿತು ? ಶ್ರಾವಣಕ್ಕೆ ಇಪ್ಪತ್ತುಮೂರು ವರುಷ ನಿನಗೆ. ಚಿತ್ರಕಲೆಯ ಪರೀಕ್ಷೆಯನ್ನು ಪಾಸುಮಾಡಿದ್ದಾಯಿತು. ಇನ್ನು ಉಳಿದದ್ದು ಒಂದೇ ಒಂದು–"

"ಹಳೇ ಜನರಿಗೆ ಕಾಣುವುದೆಂದರೆ ಅದೊಂದೇ !" ಎಂದು ಸುಲೋಚನೆಯೆಂದಳು.

"ಈಗಿನವರಿಗೆ ಅದೂ ಕಾಣಿಸುವದಿಲ್ಲ."

"ಅದು ಯಾಕೆ?"

"ಪ್ರೇಮವು ಕುರುಡು ಇರುತ್ತದೆಂದು. ಬೇಕಾದರೆ ಕೇಳು ರಮಾಕಾಂತರನ್ನು. ಅವರ ಕಥೆಯೊಳಗೆ ನಾ ಇದೇ ಈಗ ಓದಿದೆ."

ತಂದೆ–ಮಕ್ಕಳ ಈ ಸಂವಾದವನ್ನು ರಮಾಕಾಂತನು ಕೌತುಕದಿಂದ ಕೇಳುತ್ತಿದ್ದ. ದಾದಾ ಅವರು ಸಾಕ್ಷಿಯಾಗಿ ನಡುವೆ ಸೇರಿಸಿಕೊಂಡರೂ ಅವನೇನೂ ಮಾತಾಡಲಿಲ್ಲ.

"ಆದರೆ ನನಗೆ ಮದುವೆಯೇ ಬೇಕಿಲ್ಲವಲ್ಲ !" ಎಂದು ಹೇಳಿ ಸುಲೋಚನೆ ಅವರಿಬ್ಬರನ್ನೂ ಅಭಿಮಾನದಿಂದ ನೋಡಿದಳು.

"ಅದೇಕೆ?"

"ಕಲಾದೇವಿಗೆ ಕುಮಾರಿಕೆಯಾಗಿರುವದೇ ಸರಿಹೋಗುತ್ತದೆ!" ಎಂದು ರಮಾಕಾಂತ ಸಹಜವಾಗಿ ಅಂದುಬಿಟ್ಟ.

ಕೋಣೆಯಲ್ಲಿ ಬರುಬರುತ್ತ ಬಾಪ್ಪಾ ಅವರು ಎಂದರು– "ಮೊದ ಮೊದಲು ಸರೆನಿಸುವದು. ಮುಂದೆ ಜೊತೆಯಿಲ್ಲದೆ ಇರುವದು ಬೇಸರ ಅವಳಿಗೆ." ಬಾಪ್ಪಾ ಅವರ ಚತುರ ಮಾತು ಸುಲೋಚನೆಗೆ ಯಾವಾಗಲೂ ಸೇರುತ್ತಿದ್ದುದರಿಂದ ಅವಳು ಕೇಳಿದಳು– "ಬೇಸರ ಬಂದರೆ ಏನುಮಾಡುವಳು ಕಲಾದೇವಿ?"

"ಮಾಡುವದೇನು ? ಮದುವೆ ! ಕಲಾದೇವಿ ಏನು ನನ್ನಂತೆ ಹುಚ್ಚಳಲ್ಲ !"

"ಅವಳ ಗಂಡನ ಹೆಸರೇನು ?"

"ಜೀವನ." ಬಾಪ್ಪಾ ಅವರು ಹಣೆಯ ಮೇಲಿನ ಬೆವರು ಒರಸುತ್ತ ಅಂದರು.

"ಬಾಪ್ಪಾ, ದಾದಾ ಅವರು ನಾಳೆ ಹೊರಡಬೇಕೆನ್ನುತ್ತಾರೆ."

"ಅದಕ್ಕೆ ನೀನೇನೆನ್ನುವಿ?"

"ಎರಡು ದಿನವಾದರೂ ಅವರು ಮುಂಬಯಿ ನೋಡಬೇಕು ಎಂದು."

"ಏನೇನು ನೋಡುವಂಥಾದ್ದಿದೆ ಮುಂಬಯಿಯಲ್ಲಿ?"

"ನಾಟಕ, ಸಿನೇಮಾ, ಚಿತ್ರಕಲಾ ಪ್ರದರ್ಶನ–"

"ಎಲ್ಲಿಯೂ ಏನೂ ಅರ್ಥವಿಲ್ಲ ! ನಾನಿದೇ ಈಗ ನೋಡಿ ಬಂದೆನಲ್ಲ ಎಲ್ಲ"

"ಎಲ್ಲಿ ಪರೆಳದಲ್ಲಿ ಏನು ?"

"ಹೌದು! ಅಲ್ಲಿಯ ಕೂಲಿಕಾರರ ಆಯುಷ್ಯ ಅಂದರೆ ಒಂದು ನಾಟಕವೆ ! ಅಲ್ಲಿಂದಿಲ್ಲಿಗೆ ದುಃಖ ತುಂಬಿದ್ದು. ಆದರೆ ಆ ನಾಟಕ ನೋಡಲಿಕ್ಕೆ ಪ್ರೇಕ್ಷಕರೆಲ್ಲಿದ್ದಾರೆ?"

“ಹಾಡಿದ್ದೇ ಹಾಡುವ ಕಿಸಬಾಯಿ ದಾಸ” ಎಂದು ಮುಖಮುದ್ರೆಯಿಂದಲೇ ಸೂಚಿಸುತ್ತ ಸುಲೋಚನೆ ನಕ್ಕಳು.

“ಸಿನೆಮಾ ಆದರೂ ಎಷ್ಟು ಚೆನ್ನಾಗಿದೆಯಲ್ಲ ! ಗಿರಣಿಯೊಳಗಿನ ಕತ್ತಲೆಯಲ್ಲಿ ಹೊಟ್ಟೆಗಾಗಿ ಒದ್ದಾಡುವ ಕೂಲಿಕಾರರ ಚಿತ್ರ ಎಷ್ಟು ಸ್ಪಷ್ಟವಾಗಿ ಎದ್ದು ಕಾಣಿಸುವವು.”

“ಗೃಹಸ್ಥ ಹುಚ್ಚನಲ್ಲದೆ ಮತ್ತೇನು?” ಎಂಬ ದೃಷ್ಟಿಯಿಂದ ರಮಾಕಾಂತ ಬಾಪ್ಪಾ ಅವರ ಕಡೆಗೆ ನೋಡಿದ.

“ಮತ್ತೆ ಚಿತ್ರಗಳ ಪ್ರದರ್ಶನವಾದರೂ ನೋಡಬೇಕಾದದ್ದೆ. ಏನು ಆ ಗಿರಣಿಗಳ ಹೊಗೆ! ತಿಪ್ಪೆಗಳಿಗಿಂತಲೂ ಕಡೆಯಾಗಿರುವ ಕೂಲಿಕಾರರ ಆ ಚಾಳುಗಳು ! ಗೇಣು ಗೇಣು ಕೋಣೆಗಳಲ್ಲಿಯ ಅವರ ಸಂಸಾರ–”

ಹಾ ಹಾ ಹಾ ಎಂದು ಆಕಳಿಸುತ್ತ ದಾದಾ ಅವರು ಕುಳಿತಲ್ಲಿಂದ ಎದ್ದರು. ಬಾಪ್ಪಾ ಅವರ ಈ ಶೋಕಗೀತವು ಎಂದಿಗೂ ನಡೆದದ್ದೇ ಎಂಬ ಅಭಿಪ್ರಾಯವು ಅವರ ಮೋರೆಯ ಮೇಲೆ ರಮಾಕಾಂತನಿಗೆ ಸ್ಪಷ್ಟವಾಗಿ ಕಾಣಿಸಿತು.

ಮರುದಿವಸ ಹೋಗುವ ಯೋಚನೆಯನ್ನು ದಾದಾ ಅವರು ಏನು ಮಾಡಿದರೂ ಬಿಡಲೊಲ್ಲರು. ಆಗ ರಮಾಕಾಂತನು ಅಂದೇ ಮುಗಿಯುವಂಥ ಒಂದು ಚಿಕ್ಕ ಕಾರ್ಯಕ್ರಮ ಗೊತ್ತುಮಾಡಿದ. ಮೊದಲು ಕಂಪನಿಯ ಬಿಡಾರಕ್ಕೆ ಹೋಗಿ ರಮಾಕಾಂತನ ನಾಟಕದ ‘ತಾಲೀಮ’ನ್ನು ನೋಡಬೇಕು. ಆಮೇಲೆ ಕಾರಿನಲ್ಲಿ ಮಹಾಲಕ್ಷ್ಮಿಯ ಕಡೆಗೆ ತಿರುಗಾಡಲಿಕ್ಕೆ ಹೋಗಬೇಕು, ರಾತ್ರಿ ಒಂದು ಒಳ್ಳೇ ಚಿತ್ರಪಟವನ್ನು ನೋಡಬೇಕು, ಎಂದು ಸರ್ವಾನುಮತದಿಂದ ನಿಶ್ಚಿತವಾಯಿತು.

*    *    *    *    *

ಕಾರು ಕಂಪನಿಯ ಬಿಡಾರದ ಮುಂದೆ ನಿಂತ ಕೂಡಲೆ ರಮಾಕಾಂತನು ತಟ್ಟನೇ ಕೆಳಗಿಳಿದು ಒಳಗೆ ಹೋಗಿ ಮ್ಯಾನೇಜರರ ಕಿವಿಯಲ್ಲಿ ಏನೋ ಹೇಳಿದ. ಕೂಡಲೆ ಅವರು ಹೊರಗೆ ಬಂದು ಒಳ್ಳೇ ಸಭ್ಯತೆಯಿಂದ ದಾದಾ ಸುಲೋಚನೆಯರ ಬರಮಾಡಿಕೊಂಡರು. ನಾಟಕ ಕಂಪನಿಯ ಕಾರಖಾನೆಯನ್ನು ತಮ್ಮ ವ್ಯವಸಾಯ–ದೃಷ್ಟಿಯಿಂದ ನೋಡುತ್ತ ನೋಡುತ್ತ ದಾದಾ ಅವರು ತಾಲೀಮಿನ ಕೋಣೆಯಲ್ಲಿ ಬಂದು ತೆಕ್ಕೆಗೆ ಆತುಕೊಂಡು ಕೂತರು.

“ಸುರಂಗೆ ಎದ್ದಂತೆ ಕಾಣುವದಿಲ್ಲ ಇನ್ನೂ?” ರಮಾಕಾಂತ ಕೇಳಿದ.

“ನಿನ್ನೆ ಜಾಗರಣೆಯಲ್ಲವೆ?” ಎಂದು ಮ್ಯಾನೇಜರರು ತಡವರಿಸುತ್ತ ಉತ್ತರ ಕೊಟ್ಟರು.

“ನಾಟಕ ಕಂಪನಿಯ ಜನರು ಜಾಗರಣೆಗೆ ಅಂಜುವರೇ? ಶಂಕರನಿಗೆ ವಿಷ ಏನು ಮಾಡಿತು?” ಎಂದ ರಮಾಕಾಂತ. ನಗುನಗುತ್ತ ಮ್ಯಾನೇಜರು ಸುರಂಗೆಯನ್ನು ಕರೆಯಲಿಕ್ಕೆಂದು ಹೋದರು.

ದಾದಾ ಅವರು ಕೇಳಿದರು. “ನಿಮ್ಮ ನಾಟಕ ಎಲ್ಲಿಗೆ ಬಂದಿದೆ ಈಗ?”

“ಎರಡು ಮೂರು ದಿವಸದಲ್ಲಿ ‘ರಂಗತಾಲೀಮು’ ನಡೆದೀತು.”



“ಈ ಸುರಂಗಾ ಅಂದರೆ ಗೋವೆಯ ಕಡೆಯವಳು ಇರಬೇಕು. ಬಹುತರವಾಗಿ ಅಲ್ಲವೆ?”

“ಉಂ, ಹುಂ. ಕೊಂಕಣದಲ್ಲಿಯೇ ಎಲ್ಲಿಯವಳೋ. ಇನ್ನು ನೋಡಿಲ್ಲವೇ ನೀವು ಅವಳನ್ನು?”

“ಛೇ ! ಎಲ್ಲಿಂದ ನೋಡಬೇಕು? ಕಾಮಾಪೂರಕ್ಕೆ ಯಾಕೆ ಬಂದೀತು ನಿಮ್ಮ ಕಂಪನಿ? ಎಂದಾದರೂ ನಾನು ಮುಂಬಯಿಗೆ ಬಂದರೆ ಹುಲಿ ಬೆನ್ನು ಹತ್ತಿದವರ ಹಾಗೆ ಬರತೇನಿ ಹೋಗತೇನಿ!”

ಮ್ಯಾನೇಜರರೊಬ್ಬರೇ ತಿರುಗಿ ಬಂದದ್ದನ್ನು ನೋಡಿ ರಮಾಕಾಂತ ಕೇಳಿದ. “ಯಾಕೆ? ಏಳಲಿಲ್ಲವೆ? ಮಧ್ಯಾಹ್ನದಲ್ಲಿ ಬಹಳ ನಿದ್ರೆಮಾಡಿದರೆ ನೆಗಡಿಯಾದೀತೆಂದು ಹೇಳಿರಿ.”

“ಎಚ್ಚರವಾಗಿಯೇ ಇದ್ದಾಳೆ. ಆದರೆ ತಲೆನೋವು ಬಹಳವಾಗಿದೆಯಂತೆ–”

ದಾದಾ ಅವರನ್ನೂ ಸುಲೋಚನೆಯನ್ನೂ ತಾನು ಬೇಕೆಂತಲೆ ಕಂಪನಿಯ ಬಿಡಾರಕ್ಕೆ ಕರೆದುಕೊಂಡು ಬಂದಿರುವಾಗ ಸುರಂಗೆಯು ಮಲಗಿಬಿಟ್ಟರೆ ಕಂಪನಿಯಲ್ಲಿ ತನ್ನದೇನೂ ನಡೆಯುವುದಿಲ್ಲವೆಂದೆನಿಸೀತೆಂಬ ವಿಚಾರವು ರಮಾಕಾಂತನ ಮನಸ್ಸಿನಲ್ಲಿ ಬಂದಿತು. ಅವನು ಏಳುತ್ತ “ನಾನೇ ಹೋಗಿ ನೋಡುವೆ” ಎಂದ.

“ನೋಡಿ ಬನ್ನಿರಿ ಬೇಕಾದರೆ : ಮುಂಜಾನೆಯಿಂದಲೂ ಹಾಸಿಗೆಯಲ್ಲಿ ಬಿದ್ದುಕೊಂಡೇ ಇರುವಳು !”

ಹೋಗುವಾಗ ಬೆನ್ನು ತಿರುವಿದ ರಮಾಕಾಂತನ ಕಡೆಗೆ ನೋಡುತ್ತ ಮ್ಯಾನೇಜರರಂದರು–

“ಈ ಕಲಾವಂತರೆಂದರೆ ಹೀಗೆಯೇ. ಲಹರಿ ಬಂದಂತೆ ಕೆಲಸ ಮಾಡುವವರು ! ಹಗಲು ಮಲಗುವದು, ರಾತ್ರಿ ಹಾಡುತ್ತ ಕೂಡುವದು, ತಮ್ಮಲ್ಲಿ ಕಲೆಗಾರಿಕೆಯಿದೆ ಎಂಬುದರ ಅರಿವು ಕೂಡ ಅವರಿಗಿರುವುದಿಲ್ಲ. ಈ ಸುರಂಗೆಯನ್ನೇ ನೋಡಬಾರದೆ ! ಈಗ ಆರು ವರ್ಷದ ಹಿಂದೆ ಬೆಳಗಾಂವಿಯೊಳಗೆ ನನಗೆ ಈಕೆ ಸಹಜವಾಗಿಯೇ ಸಿಕ್ಕಳು !”

“ಸಿಕ್ಕಳೇ ?”

“ಹೌದು. ಸುದೈವದಿಂದ ಸಿಕ್ಕ ಹಾಗೇ ಸರಿ ! ಆ ಊರಲ್ಲಿ ಇರುವ ಮಟ್ಟಿಗೆ ಎಂದು ಒಬ್ಬ ಮುದುಕಿ ಒಕ್ಕಲಗಿತ್ತಿಯನ್ನು ಗೊತ್ತುಮಾಡಿದ್ದೆವು–”

ಮುದುಕಿ ಶಬ್ದವನ್ನು ಅರ್ಥಸೂಚಕವಾಗಿ ಮ್ಯಾನೇಜರರು ಉಚ್ಚರಿಸಿದರೆಂದು ದಾದಾ ಅವರಿಗೆ ಹೊಳೆಯಿತು. “ಆ ಮುದುಕಿಗೆ ಬೀಸಲಿಕ್ಕೆ ಅಥವಾ ಉಳಿದ ಕೆಲಸಗಳಲ್ಲಿ ಸಹಾಯಮಾಡಲಿಕ್ಕೆಂದು ಈಕೆ ಯಾವಾಗಲಾದರೂ ಬರುತ್ತಿದ್ದಳು. ಬೀಸುವಾಗ ಎಷ್ಟು ಮಧುರವಾಗಿ ಹಾಡುತ್ತಿದ್ದಳೆನ್ನುತ್ತೀರಾ–”

“ಹಾಗಾದರೆ ಸಂಗೀತದ ಅಭ್ಯಾಸ ಮಾಡಿದ್ದು ಯಾವಾಗ?”

“ಕಂಪನಿ ಸೇರಿದನಂತರವೆ. ಹಾಗಂತೇ ಇಂದಿನವರೆಗೆ ಇಲ್ಲಿಯೇ ಅಂಟಿಕೊಂಡು ನಿಂತಿರುವಳು. ಇಲ್ಲದಿದ್ದರೆ–”

ತಾಲೀಮಿನ ಕೋಣೆಯಲ್ಲಿ ಯಾವ ಸುರಂಗೆಯ ಬಗ್ಗೆ ಈ ಮಾತು ನಡೆದಿತೋ ಆ ಸುರಂಗೆಯು ತನ್ನ ಕೋಣೆಯಲ್ಲಿ ಮಂಚದ ಮೇಲೆ ಒರಗಿದ್ದಳು. ಬಿಸಿಲಿನ ತಾಪವಾಗಬಾರದೆಂದು ಕಿಟಿಕೆಯ ಬಾಗಿಲುಗಳನ್ನು ಹಾಕಿತ್ತು. ರಮಾಕಾಂತನು ಅರೆಮುಚ್ಚಿದ ಬಾಗಿಲನ್ನು ತೆರೆಯುತ್ತಲೆ 'ಕೋಲನ್ ವಾಟರಿ'ನ ಮಧುರವಾಗಿದ್ದರೂ ತುಸು ಉಗ್ರವಾದ ವಾಸನೆಯು ಅವನನ್ನು ಮುತ್ತಿತು. ಆ ವಾಸನೆಯು ಸುರಂಗೆಯ ಅಭಿಮಾನದ ವಾಯುರೂಪಮೂರ್ತಿ ಎಂದೇ ಅವನಿಗೆನಿಸಿತು. ಅವನು ಒಮ್ಮೆಲೇ ಬಾಗಿಲಲ್ಲಿ ತಡೆದ.

ತಾನು ಬಂದದ್ದು ತಿಳಿದೂ ಸುರಂಗೆಯು ಎದ್ದು ಬರಲಿಲ್ಲವಲ್ಲ ! ಅವಳಿಗೆ ತನ್ನ ಪರಿವೆಯೇ ಇಲ್ಲ. ಅಂದ ಮೇಲೆ ತಾನಾದರೂ ಅವಳಿಗೇಕೆ ಇಲ್ಲದ ಮಹತ್ವ ಕೊಡಬೇಕು ! ನಟಿ ಮತ್ತು ನಾಟಕಕಾರ ಎಂಬುದಿಷ್ಟೇ ಅವಳದೂ ತನ್ನದೂ ಸಂಬಂಧ. ಅವಳು ನನಗೇನೂ ಅಲ್ಲ ! ನಾನು ಅವಳಿಗೇನೂ ಅಲ್ಲ ! ನಾನು ಅವಳನ್ನು ಕರೆಯಲಿಕ್ಕೇಕೆ ಬಂದೆ ! ಅವಳೇನು ರಾಜನ ರಾಣಿಯೇ? ಇದನ್ನು ನೋಡಿ ಸುಲೋಚನೆಗೆ ಏನೆನಿಸಿದ್ದೀತು?

ಬಂದಂತೆಯೆ ತಿರುಗಿ ಹೊರಡಬೇಕೆಂದು ರಮಾಕಾಂತ ಯೋಚಿಸಿದ. ಆದರೆ ತಿರುಗಿ ಹೋಗಿ ಹೇಳಬೇಕೇನು? ಸುರಂಗೆ ಬರುವದಿಲ್ಲೆಂದೇ? ಅವನ ಅಭಿಮಾನಿಯಾದ ಮನಸ್ಸಿಗೆ ಇದು ಹೇಗೋ ಎನಿಸಿತು. ಏನು ಮಾಡಬೇಕೆಂದು ಅವನು ಯೋಚಿಸುತ್ತಿರುವಾಗಲೆ ಬೆನ್ನು ತಿರುವಿ ಮಲಗಿದ ಸುರಂಗೆಯು ಒಂದು ಮಗ್ಗಲಿಗೆ ಹೊರಳಿದಳು. ಬಾಗಿಲಲ್ಲಿ ತುಸು ಹೊತ್ತು ನಿಂತಿದ್ದರಿಂದ ಕೋಣೆಯ ಒಳಭಾಗವು ಅವನಿಗೆ ಕಾಣ ಹತ್ತಿತು. ಅವನು ಒಳಗೆ ಬಂದು ಕಣ್ಣು ಮುಚ್ಚಿಕೊಂಡು ಮಲಗಿದ ಸುರಂಗೆಯ ಕಡೆಗೆ ದಿಟ್ಟಿಸಿ ನೋಡಹತ್ತಿದ. ಮಂಚದ ಮೇಲೆ ಮೆತ್ತಗಿನ ತಲೆದಿಂಬಿನ ಒಂದು ಮಗ್ಗಲು ಅವಳ ತಲೆಯ ಭಾರದಿಂದ ಸ್ವಲ್ಪ ಮೇಲಕ್ಕೆದ್ದಿತ್ತು. ತಲೆದಿಂಬಿನ ಗುಲಾಬೀ ಹೊದಿಕೆ, ಅವಳ ಗೌರವರ್ಣ, ನಡುನಡುವೆ ಹಾರಾಡುವ ಕರ್‍ರಗಿನ ಕೂದಲುಗಳು ಇವುಗಳ ತ್ರಿವೇಣೀಸಂಗಮವು ಅವನ ಮನಸೆಳೆಯಿತು. ಅರಳಿದ ಕಮಲಕ್ಕಿಂತಲೂ ಮೊಗ್ಗೇ ಅಂದವಾಗಿ ಕಾಣುತ್ತದೆ. ಅವಳ ಮುಚ್ಚಿದ ಕಣ್ಣುಗಳನ್ನು ನೋಡಿ ಅವನಿಗೆ ಇದೇ ಕಲ್ಪನೆ ಹೊಳೆಯಿತು. ಅವಳ ತುಟಿಗಳ ಕಡೆಗೆ ನೋಡಿದ. ಅವುಗಳ ಮೇಲೆ ಯಾವಾಗಲೂ ಕುಣಿಯುವ ಹುಡುಗಾಟಿಕೆ ಇಂದು ಅವನಿಗೆ ಕಾಣಿಸಲಿಲ್ಲ. ಕುತ್ತಿಗೆಯವರೆಗೆ ಹೊದ್ದುಕೊಂಡ ತೆಳುವಾದ ಬಣ್ಣದ ಚಾದರು ಸ್ವಲ್ಪ ಮೇಲೆ ಕೆಳಗೆ ಅಲುಗಾಡುತ್ತಿತ್ತು. ಈ ಸ್ಥಿತಿಯಲ್ಲಿ ಅವನು ಸುರಂಗೆಯನ್ನು ಎಂದೂ ನೋಡಿರಲಿಲ್ಲ. ಸಾಯಂಕಾಲದಂತೆ ರಮ್ಯವಾದ ಮಬ್ಬು ಬೆಳಕಿನಲ್ಲಿ ಅವಳು ಅವನಿಗೆ ಅತ್ಯಂತ ಚಿತ್ತಾಕರ್ಷಿಯಾಗಿ ಕಂಡಳು. ತುಸು ಮುಂದೆ ಹೋಗಿ 'ಸುರಂಗಾ–' ಎಂದು ಕರೆದ.

ಸುರಂಗೆಯು ಸ್ತಬ್ಧಳಾಗಿದ್ದಳು. ಇದೇ ಈಗ ನಿದ್ರೆಹೋಗಿದ್ದರೂ ಇರಬಹುದೆಂಬ ವಿಚಾರವೂ ಅವನಿಗೆ ಹೊಳೆದುಹೋಯಿತು. ಮಂಚದ ತೀರ ಸಮೀಪಕ್ಕೆ ಹೋಗಿ ಅವನು ಮತ್ತೆ ಕರೆದ "ಸುರಂಗಾ"– ಎಂದು.

ತನ್ನ ಸ್ವರದಲ್ಲಿಯ ಅಂತರದ ಅರಿವು ಅವನಿಗೂ ಆಯಿತು. ಸುರಂಗೆಯ



ಕೂದಲಲ್ಲಿಯ ಗುಲಾಬಿ ಮಧುರ ಗಂಧವು ತನ್ನನ್ನು ಸವಿಯಾಗಿ ಮೈಮರೆಸುತ್ತದೆ ಎಂದು ಅವನಿಗೆ ಭಾಸವಾಯಿತು. ಈಗೆರಡು ತಿಂಗಳಿಂದ ಅವನು ತನ್ನ ಪ್ರೇಮವು ಪ್ಲೇಟಾನಿಕ್ (Platonic), ಕೇವಲ ಕಲಾತ್ಮಕವಾಗಿದೆ ಎಂದು ತನ್ನ ಮನಸ್ಸಿಗೆ ಹೇಳುತ್ತಿದ್ದ. ಆದರೆ ಆ ಗುಲಾಬಿಯ ಉನ್ಮಾದದ ಗಂಧವು ಅವನ ತಲೆಯಲ್ಲಿಯ ಪ್ಲೇಟೋನ ತತ್ತ್ವಜ್ಞಾನವನ್ನು ಎತ್ತಲೋ ಓಡಿಸಿಬಿಟ್ಟಿತು. ತಾನು ಅರೆ ತೆರೆದು ಬಿಟ್ಟ ಬಾಗಿಲ ಹತ್ತಿರ ಯಾರಾದರೂ ಇರುವರೇನೊ ಎಂದು ಹೊರಳಿ ನೋಡಿದ. ಕೂಡಲೆ ಮೋರೆ ತಿರುಗಿಸಿ ಬಾಗಿದ. ಅನನುಭೂತವಾದ ಆನಂದವೂ ಭೀತಿಯೂ ಅವನ ರೋಮರೋಮದಲ್ಲಿ ಕುಣಿಯತೊಡಗಿದವು. ಇನ್ನು–

**"ಒಬ್ಬ ಸ್ತ್ರೀಯ ಅತ್ಮಹತ್ಯೆ !"** ಬೀದಿಯಲ್ಲಿ ವೃತ್ತಪತ್ರ ಮಾರುವ ಒಬ್ಬ ಹುಡುಗನ ಕರ್ಕಶವಾದ ಕೂಗು ಅವನ ಕಿವಿಗೆ ಬಿದ್ದಿತು. ಹಗ್ಗವೆಂದು ಹಿಡಿಯ ಹೋದದ್ದು ಹಾವಾದಾಗ ಬೆಚ್ಚುವಂತೆ ರಮಾಕಾಂತನು ತಟ್ಟನೆ ಹಿಂದೆ ಸರಿದ. ವತ್ಸಲೆಯು ಆತ್ಮಹತ್ಯೆ ಮಾಡಿಕೊಂಡಳೇ? ಅವನ ತಲೆ ಗರಗರನೆ ತಿರುಗಹತ್ತಿತು. ಅವನು ಸುರಂಗೆಯ ಕಡೆಗೆ ನೋಡಿದ. ಅವಳು ಕಣ್ಣು ತೆರೆದು ಕಿಡಿಗೇಡಿತನದಿಂದ ನಗುತ್ತಿದ್ದಳು.

"ನೀನು ಎಚ್ಚರಾಗಿಯೇ ಇದ್ದೆಯೆಂದು ಕಾಣುತ್ತದೆ?"

"ಛೇ ! ಇದೇ ಈಗ ಎಚ್ಚರಾದೆ."

"ಆ ಹುಡುಗ ಕಿರಿಚಿದ್ದಕ್ಕೆ?"

"ಉಂ ಹುಂ. ಹೀಗೆ ಒಬ್ಬರು ಬೆಚ್ಚಿದ್ದಕ್ಕೆ !"

ರಮಾಕಾಂತ ತನ್ನೊಳಗೇ ನಾಚಿದ. ಆದರೆ ಅವನ ಸಮಯ ಸೂಚಕತೆಯೇನೂ ಕಡಿಮೆಯಿರಲಿಲ್ಲ.

"ನಿನ್ನ ನಿದ್ರೆ ಕೆಡಿಸಬಾರದೆಂದು–"

"ನಾಟಕಕಾರರಲ್ಲವೇ ನೀವು?"

"ನಾನು ನಾಟಕಕಾರನಾದರೆ ನೀನು ಕುಶಲ ನಟಿ."

ಸುರಂಗೆ ನಸುನಗುತ್ತ ಹಾಸಿಗೆಯ ಮೇಲೆ ಎದ್ದು ಕುಳಿತಳು.

"ತಲೆ ಬಹಳ ನೋಯುತ್ತಿದೆಯೆ?"

"ಹೌದು–"

"ಏನಾಯ್ತು ಇಷ್ಟು ನೋಯಲಿಕ್ಕೆ?"

"ಏಟು ಬಿದ್ದಿದೆ ಅಂಥಾದ್ದು !"

"ಯಾವಾಗ ?"

"ನಿನ್ನೆ ರಾತ್ರಿ."

ಈಗ ರಮಾಕಾಂತನ ಲಕ್ಷ್ಯಕ್ಕೆ ಬಂತು. ತಾನು ನಿನ್ನೆ ಸುಲೋಚನೆಯ ಕಾರಿನಲ್ಲಿ ಕುಳಿತು ಹೋದದ್ದಕ್ಕೆ ಇದೆಲ್ಲ ತಿರುಗುಪ್ಪೆಂದು ಅವನಿಗೆ ಗೊತ್ತಾಯಿತು.

“ಹೊರಗೆ ಬರುವಿಯಾ ಒಂದು ನಿಮಿಷ? ಆ ಸುಲೋಚನೆ ಮತ್ತು ಅವರ ತಂದೆ ಬಂದಿದ್ದಾರೆ.”

“ಅವರ ತಂದೆ ಬರಲಿ, ತಂದೆಯ ತಂದೆ ಬರಲಿ ! ನನಗೇನು ಅವರ ಕೂಡ ಮದುವೆ ಮಾಡಿಕೊಳ್ಳುವುದು ಅಷ್ಟರಲ್ಲೇ ಅದೆ !”

“ನನಗಾದರೂ ಅವರಕೂಡ ಏನು ಮಾಡಬೇಕಾಗಿದೆ ?”

“ಅವರ ಅಳಿಯಂದಿರಾಗಬೇಕೆಂದು ಇರಬಹುದು ಮನಸ್ಸಿನಲ್ಲಿ !”

“ನಿನಗೆ ಏಟು ಬಿದ್ದದ್ದು ಸರಿಮಾಡಲಿಕ್ಕೆ ನಾನು ಒಪ್ಪುತ್ತೇನೆ. ಆಮೇಲಾದರೂ ಆಯಿತೇ?” ಹೊರಗೆ ಎಲ್ಲರೂ ತನ್ನ ಹಾದಿ ನೋಡುತ್ತಿರಬಹುದೆಂಬುದು ಲಕ್ಷ್ಯಕ್ಕೆ ಬಂದು ರಮಾಕಾಂತ ಹೇಳಿದ.

“ನಿನ್ನೆ ರಾತ್ರಿ ನನ್ನದೊಂದು ಪತ್ರ ಕಳೆದುಹೋಯಿತು !”

“ಯಾರಿಗೆ ಬರೆದಿದ್ದು ?”

“ನಿಮಗೆ !”

“ಕೊಡಲಿಲ್ಲವೇಕೆ ಮತ್ತೆ?”

“ಕೊಡಬೇಕೆಂತೇ ಜುಹೂಕ್ಕೆ ಹೋಗುವ ಹಟ ಹಿಡಿದದ್ದು.”

“ಎಲ್ಲಿ ಬಿದ್ದುಹೋಯಿತು ಅದು ?”

“ಉಸುಕಿನಲ್ಲಿ ಎಲ್ಲಿಯಾದರೂ ಬಿದ್ದು ಹೋಗಿರಬೇಕು.”

“ರಾತ್ರಿ ಮಾತಾಡದೆ ಸುಮ್ಮನೆ ಕುಳಿತದ್ದಕ್ಕೆ ಒಳ್ಳೇ ಶಿಕ್ಷೆ ಆಯಿತು !”

“ಇರಲಿ. ಅದು ಮತ್ತೆ ಯಾರ ಕೈಯಲ್ಲಿಯಾದರೂ ಬಿದ್ದರೆ ಹೇಗೆ ?”

“ಗಾಳಿಯ ಕೈಯಲ್ಲಿ ಸಿಕ್ಕಿದ್ದೀತು ! ಅಲ್ಲಿಯೇ ಬಿದ್ದರೆ ಬೀಳಲಿ. ಯಾರಾದರೂ ಕೊಲೆ–ಗಿಲೆ ಮಾಡುವ ವಿಚಾರವೇನು ಅದರಲ್ಲಿ ಇದ್ದಿಲ್ಲವಲ್ಲಾ ?”

ಸುರಂಗೆಯು ಬರುವಳೆಂದು ಹೇಳಲಿಕ್ಕೆ ರಮಾಕಾಂತ ಮುಂದೆ ಹೋದ. ಬೀದಿಯಲ್ಲಿ ಒದರುತ್ತ ಹೋಗುವ ಹುಡುಗನಿಂದ ಮ್ಯಾನೇಜರರು ವೃತ್ತಪತ್ರದ ಒಂದು ಪ್ರತಿಯನ್ನು ಮೊದಲೇ ಕೊಂಡಿದ್ದರು. ರಮಾಕಾಂತ ಬರುತ್ತಲೇ ದಾದಾ ಅವರು ಅಂದರು: “ಇದನ್ನು ನೋಡಿದಿರೇನು ಸುದ್ದಿ?”

ರಮಾಕಾಂತನ ಮೈಗೆ ಮುಳ್ಳು ಬಂದಂತೆಯೆ ಆಯಿತು. ದಾದಾ ಅವರು ಓದಹತ್ತಿದರು.

“ದಾದರದಲ್ಲಿರುವ ಇಪ್ಪತ್ತಾರು ವರ್ಷದ ಒಬ್ಬ ಬ್ರಾಹ್ಮಣ ಹೆಣ್ಣುಮಗಳು ಮೈಮೇಲೆ ಕಲ್ಲೆಣ್ಣೆಯನ್ನು ಸುರುವಿಕೊಂಡು ಸುಟ್ಟುಕೊಂಡಳು. ಆತ್ಮಹತ್ಯೆಯ ನಿಜವಾದ ಕಾರಣ ಇನ್ನೂ ತಿಳಿದಿಲ್ಲ.”

ರಮಾಕಾಂತ ಸಮಾಧಾನದಿಂದ ಉಸಿರ್ಗರೆದ. ಮ್ಯಾನೇಜರರು ಎದ್ದು ಒಳಗೆ ಹೋದರು. ಸುರಂಗೆಯು ಮೋರೆ ತೊಳೆದುಕೊಂಡು ಪತ್ತಲವನ್ನು ಬದಲಿಸಿ ಹೊರಗೆ



ಬರಹೊರಟಿದ್ದಳು. ಅವಳಿಗೆ ಅವರೆಂದರು : “ಈಗ ಬಂದವರಿವರು ಬಹಳ ಶ್ರೀಮಂತರಿದ್ದಾರಂತೆ.”

ಸುರಂಗೆಯು ಏನನ್ನೂ ಮಾತಾಡಲಿಲ್ಲ. ಒಳಗಿನಿಂದ ಅಡಿಗೆಯವನು ತಬಕದಲ್ಲಿ ಚಹದ ಐದು ಕಪ್ಪುಗಳನ್ನು ಇಟ್ಟುಕೊಂಡು ಬಂದ. ಅದರಲ್ಲಿಯ ಒಂದನ್ನು ಸುರಂಗೆಯ ಕೈಯಲ್ಲಿ ಕೊಡುತ್ತ ಮ್ಯಾನೇಜರರು ಹೇಳಿದರು : “ಇದನ್ನು ನೀನೇ ಒಯ್ದು ಕೊಡು ಅವರಿಗೆ.” ಸುರಂಗೆಯು ತೀವ್ರದೃಷ್ಟಿಯಿಂದ ಮ್ಯಾನೇಜರರನ್ನು ನೋಡಿದಳು. ಅಡಿಗೆಯವನು ತಬಕ ತಕ್ಕೊಂಡು ಮುಂದೆ ಹೋದ. ಸುರಂಗೆಯೆಂದಳು: “ಇಂಥಾದ್ದೇನೂ ನನಗೆ ಸರಿಬರುವುದಿಲ್ಲ ನೋಡಿರಿ !”

“ಬೆಳದಿಂಗಳಿನಲ್ಲಿ ತಿರುಗಾಡಲಿಕ್ಕೆ ಹೋಗುವುದು ಮಾತ್ರ ಸರಿಬರುವದಲ್ಲವೆ?” ಸುರಂಗೆಯ ಮರ್ಮಕ್ಕೆ ಏಟು ತಾಕಿತು.

“ಸುರಂಗಾ ! ಆರು ವರ್ಷದ ಹಿಂದಿನ ಕಥೆ ನಿನಗೆ ನೆನಪಿದೆಯೇನು ? ನೀನು ಕಂಪನಿಯಲ್ಲಿ ಹಿಟ್ಟು ಬೀಸಲಿಕ್ಕೆ ಬರುತ್ತಿದ್ದಿ–”

ಸುರಂಗೆಯು ಮೌನದಿಂದ ಕಪ್ಪು ತೆಗೆದುಕೊಂಡು ಹೊರಟಳು. ಅವಳು ಕೆಳಗೆ ನೋಡುತ್ತಲೇ ಕೋಣೆಯಲ್ಲಿ ಕಾಲಿಟ್ಟಳು. ಎದುರಿನ ತಕ್ಕೆ ಆತುಕೊಂಡು ಯಾವನೋ ಒಬ್ಬ ಪ್ರೌಢ ಗೃಹಸ್ಥನು ಕುಳಿತಿರುವನೆಂಬುದು ಮಾತ್ರ ಅವಳ ಕೆಳನೋಟಕ್ಕೆ ಕಾಣುತ್ತಿತ್ತು. ಅವನ ಕೈಯಲ್ಲಿ ಕಪ್ಪು ಕೊಡಬೇಕೆಂದು ಬಾಗಿ ಅವನ ಮೋರೆಯನ್ನು ನೋಡಿದಳು–

ಅವಳ ಕೈಯೊಳಗಿಂದ ಕಪ್ಪುಬಸಿಗಳು ಪಳ್ಳನೇ ಕೆಳಗೆ ಬಿದ್ದವು. ಆ ಕಪ್ಪು ಮಾತಾಡಿದಂತೆಯೇ ಆಯಿತು. ದಾದಾ ಅವರು ಸುರಂಗೆಯ ಕಡೆಗೆ ಒಂದು ಕ್ಷಣ ಮಾತ್ರ ನೋಡಿದರು. ಅವರ ಮೋರೆಯು ತೀರ ಇಳಿದುಹೋಗಿತ್ತು. ಸುರಂಗೆಯಂತೂ ಥರಥರ ನಡುಗುತ್ತಲೇ ಒಳಗೆ ಹೋದಳು.

“ಸಾವಿರ ಜನರ ಮುಂದೆ ಕೆಲಸಮಾಡುವಾಗ ಇವಳಿಗೆ ಹೆದರಿಕೆಯಾಗುವುದಿಲ್ಲ, ಅದೇ ಇಂದು–”

ಮ್ಯಾನೇಜರರು ಎಲ್ಲದರ ಮೇಲೂ ಬಣ್ಣ ಎಳೆದರು.

“ವಿಪರೀತ ತಲೆಶೂಲಿ ಆಕೆಗೆ” ಎಂದ ರಮಾಕಾಂತ.

ಚಹಾಪಾನವನ್ನು ಮುಗಿಸಿ ಎಲ್ಲರೂ ಕಂಪನಿಯ ಬಿಡಾರದಿಂದ ಹೊರಬಿದ್ದರು. ಆದರೆ ದಾದಾ ಅವರು ತಮಗೆ ಸ್ವಸ್ಥವಿಲ್ಲವೆಂದದ್ದರಿಂದ ತಿರುಗಾಡಲಿಕ್ಕೆ ಹಾಗೂ ಸಿನಿಮಾಕ್ಕೆ ಹೋಗುವ ಕಾರ್ಯಕ್ರಮವು ನಿಂತುಹೋಯಿತು.

## ೬

## ದೇವ, ಭಾವ

ರಮಾಕಾಂತನ ನಾಟಕದ ರಂಗತಾಲೀಮು ಚೆನ್ನಾಗಿ ನಡೆಯಿತು. ಮರುದಿವಸ

ಮಧ್ಯಾಹ್ನ ನಾಟಕವು ಯಾವಾಗ ಸುರುವಾದೀತು, ಪ್ರೇಕ್ಷಕರ ಕರತಾಡನವು ಯಾವಾಗ ತನ್ನ ಕಿವಿಗೆ ಬಿದ್ದೀತೋ, ಎಂದು ಅವನು ಆತುರನಾಗಿದ್ದನು. ನಾಟಕದ ಮೊದಲನೇ ಪ್ರಯೋಗವು ಮುಗಿಯಿತೆಂದರೆ ದಾದಾ ಅವರಿಗೆ ಬೇಕಾದ ಚಿಕ್ಕ ಪುಸ್ತಕವನ್ನು ಬರೆಯುವದಕ್ಕೆಂದು ಅವನು ಕಾಮಾಪುರದ ಗೇರುಹಣ್ಣಿನ ಕಾರಖಾನೆಯನ್ನು ನೋಡಲು ಹೋಗುವುದೆಂದು ಗೊತ್ತಾಗಿತ್ತು. ಕಾಮಾಪುರದಲ್ಲಿ ಇನ್ನೇನೂ ನೋಡುವಂತಹದಿರದಿದ್ದರೂ ದಾದಾ ಅವರು ತಮ್ಮ ತಂದೆಯ ನೆನಪಿಗಾಗಿ ಕಟ್ಟಿಸಿದ ಭವ್ಯವಾದ ದೀಪಮಾಲೆ, ದೇವಾಲಯದ ಹತ್ತಿರವೇ ಇದ್ದ ಒಂದು ಕೆರೆ, ಇವೆರಡು ಮಾತ್ರ ಇವೆಯೆಂದು ಸುಲೋಚನೆಯು ಹೇಳಿದ್ದಳು. ಸುಲೋಚನೆಯ ಸಹವಾಸದಲ್ಲಿ ದೀಪಮಾಲೆಯ ಮೇಲೆಯೂ ಕೆರೆಯ ಮೇಲೆಯೂ ಸಂಧ್ಯಾಕಾಲವು ಎಷ್ಟು ರಮ್ಯವಾಗಿ ಕಂಡೀತೆಂಬುದರ ಕಲ್ಪನಾಚಿತ್ರಗಳನ್ನು ಅವನು ಮೇಲಿಂದ ಮೇಲೆ ಬರೆಯುತ್ತಿದ್ದ. ನಾಟಕದ ಗೊಂದಲದಲ್ಲಿಯೂ ಈ ಆನಂದದ ಭರದಲ್ಲಿಯೂ ಅವನಿಗೆ ಬಹುತರವಾಗಿ ವತ್ಸಲೆಯ ನೆನಪು ಕೂಡ ಆಗುತ್ತಿದ್ದಿಲ್ಲ. ರಾತ್ರಿ ಹಾಸಿಗೆಯಲ್ಲಿ ಮಲಗಿದ ಮೇಲೆ ಮಾತ್ರ ಒಮ್ಮೆಲೆ ವಿಚಾರ ಸುಳಿಯುತ್ತಿತ್ತು. ವತ್ಸಲೆಯ ಗತಿ ಏನಾಗಿರಬಹುದು? ಅವಳು ತನ್ನ ಸೋದರಮಾವನ ಕಡೆಗೆ ಹೋದಳೋ ಏನು ಜೀವ ಕೊಟ್ಟಳೊ ! ಅವಳ ಬಗ್ಗೆ ತಾನು ವಿಚಾರಿಸಬೇಕಲ್ಲವೇ? ಆದರೆ ಬೆಳಗಾಗುತ್ತಲೇ ನಕ್ಷತ್ರಗಳಂತೆ ಈ ವಿಚಾರಗಳು ಎಲ್ಲಿಯೋ ಅಡಗಿಬಿಡುತ್ತಿದ್ದವು. ನಾಟಕದ ಮೊದಲನೇ ಪ್ರಯೋಗವನ್ನು ಒಂದು ಅಕ್ಷರ ಕೂಡ ತಪ್ಪಿಸದೆ ಮಾಡತಕ್ಕದ್ದೆಂದು ಗೊತ್ತಾಗಿತ್ತು. ಆದ್ದರಿಂದ ನಾಟಕವು ಮಧ್ಯಾಹ್ನ ಮೂರುವರೆ ಗಂಟೆಗೆ ಸುರುವಾಗುವದಿತ್ತು. ರಮಾಕಾಂತನು ಎರಡು ಗಂಟೆಗೇ ಥೇಟರಿಗೆ ಬಂದ. ಸುರಂಗೆ ಬಣ್ಣ ಹಚ್ಚಿಕೊಳ್ಳುತ್ತಿದ್ದಳು. ಅವನು ಅವಳಿಗಂದ– "ನನ್ನ ದೈವವೆಲ್ಲಾ ನಿನ್ನ ಕೈಯಲ್ಲಿದೆ ಸುರಂಗಾ!"

"ಮತ್ತೆ ನನ್ನದು?" ಎಂಬ ಪ್ರಶ್ನೆಯು ಸುರಂಗೆಯ ತುದಿನಾಲಗೆಗೆ ಬಂದಿತ್ತು. ಆದರೆ ಅದನ್ನು ಕೇಳುವ ಧೈರ್ಯ ಅವಳಿಗಾಗಲಿಲ್ಲ. ಅರ್ಧಮರ್ಧ ಬಣ್ಣ ಹಚ್ಚಿದ ತನ್ನ ಮೋರೆಯನ್ನು ಕನ್ನಡಿಯಲ್ಲಿ ನೋಡಿಕೊಳ್ಳುತ್ತ ಅವಳು ಕೇಳಿದಳು–

"ನನ್ನ ಕೈಗುಣ ಒಳ್ಳೆಯದಾದರೆ ಇನಾಮು ಏನು ಕೊಡುವಿರಿ?"

"ಏನು ಬೇಡಿದ್ದು."

"ನೋಡಿರಿ ಆಂ ! ಅವಸರದಿಂದ ಮಾತು ಕೊಡಬೇಡಿರಿ. ಇಲ್ಲದಿದ್ದರೆ–"

ಅವಳು ಅವಸರವಸರದಿಂದ ಬಣ್ಣ ಹಚ್ಚಿಕೊಳ್ಳಹತ್ತಿದಳು. ಆ ಬಣ್ಣದ ಕಡೆ ನೋಡುತ್ತಲೆ ರಮಾಕಾಂತನ ಮನಸ್ಸು ತಿರುಗಹತ್ತಿತ್ತು. ಸುರಂಗೆ ರೂಪವತಿ, ಗೌರವರ್ಣದಳು ; ಆದರೆ ರಂಗದ ಮೇಲೆ ಹೋಗುವ ಮೊದಲು ಅವಳಿಗೂ ಬಣ್ಣ ಹಚ್ಚಿಕೊಳ್ಳಬೇಕಾಗುತ್ತದೆ. ಸಮೀಪದಿಂದ ಈ ಬಣ್ಣ ಹಚ್ಚಿಕೊಂಡವರು ಹೇಗೆ ಬೂದಿಯನ್ನು ಬಳಿದುಕೊಂಡವರಂತೆ ಕಾಣುತ್ತಾರೆ? ಆದರೆ ದೂರದಿಂದ? ಪ್ರೇಕ್ಷಕರಿಗೆ ಇದೇ ಬಣ್ಣವು ಚೆಂದವಾಗಿ ಕಾಣುವುದಿಲ್ಲವೆ? ಈ ಜಗವೂ ಒಂದು ರಂಗಭೂಮಿ. ಈ ರಂಗಭೂಮಿಯ ಮೇಲೆ ಕೆಲಸ ಮಾಡುವವರು ಯಾವ ಬಣ್ಣವನ್ನು ಹಚ್ಚಿಕೊಳ್ಳುತ್ತಾರೆ ? ಕಲೆ ಹಾಗೂ ಸೌಂದರ್ಯ ಇವುಗಳ ಕಲ್ಪನೆಯೇ



ಆ ಬಣ್ಣವಲ್ಲವೆ?

ಒಬ್ಬ ಆಳು ಸುಲೋಚನೆಯು ಬಂದ ವರ್ತಮಾನ ತಿಳಿಸಿದ. ಅವಳನ್ನು ಸ್ವಾಗತಿಸಲಿಕ್ಕೆಂದು ರಮಾಕಾಂತನು ಪಡದೆಯ ಹೊರಗೆ ಬಂದ. ಅವನು ಸುಲೋಚನೆಯ ಕಡೆಗೆ ನೋಡಿದ. ಒಳಗೆ ನಾಯಿಕೆಯ ಪಾತ್ರಕ್ಕಾಗಿ ಬಣ್ಣ ಹಚ್ಚಿಕೊಳ್ಳುತ್ತಿದ್ದ ಸುರಂಗೆಗಿಂತ ಇವಳೇ ಅವನಿಗೆ ಹೆಚ್ಚು ಚೆಲುವೆಯಾಗಿ ತೋರಿದಳು. ಗಾಳಿಯಿಂದ ಅಸ್ತವ್ಯಸ್ತವಾದ ಅವಳ ಕೂದಲು ಪಡದೆಯ ಹಿಂಭಾಗದಲ್ಲಿ ತಿದ್ದಿ ತೀಡಿದ ಸುರಂಗೆಯ ಕೂದಲಿಗಿಂತಲೂ ಹೆಚ್ಚು ಆಕರ್ಷಕವಾಗಿ ತೋರುತ್ತಿದ್ದವು. ಸುಲೋಚನೆಯನ್ನು ಸ್ವಾಗತಿಸಲಿಕ್ಕೆ ರಮಾಕಾಂತನು ವಿನೋದದಿಂದ ಏನನ್ನೋ ಹೇಳುವಷ್ಟರಲ್ಲಿ ಕೈಯೊಳಗಿನ ವೃತ್ತಪತ್ರವನ್ನು ಅವನ ಕೈಯಲ್ಲಿ ಕೊಡುತ್ತ ಅವಳಂದಳು–

"ನೋಡಿರುವಿರೇನು ಈ ಸಂಚಿಕೆಯನ್ನು ?"

"ನಾಟಕದ ಮೇಲೆ ಏನಾದರೂ ಟೀಕೆ ಬಂದಿರುವುದೇ?"

"ಉಂ, ಹುಂ ! ಕಥೆ ಇದೆ !"

"ವೃತ್ತ ಪತ್ರದೊಳಗಿನ ದರಿದ್ರ ಕಥೆಗಳನ್ನು ಓದಲಿಕ್ಕೆ ವೇಳೆ ಯಾರಿಗೆ ?'

"ವಿದ್ಯಾಧರರಿಗೆ !"

"ಅಂದರೆ?"

"ಕಥೆಯನ್ನು ನಾನೇನೂ ಹುಡುಕಿ ತೆಗೆದಿಲ್ಲ. ಈ ಸಂಚಿಕೆಯನ್ನು ತಾವಾಗಿ ವಿದ್ಯಾಧರ ಅವರು ಕಳಿಸಿರುವರು."

"ಎಲ್ಲಿಂದ?"

"ಕಾಮಾಪುರದಿಂದ."

"ಒಳ್ಳೇ ರಸಿಕ ಕಾಣುತ್ತದಲ್ಲ ಸವಾರಿ ! ಬಹಳಮಾಡಿ ಕಾರಖಾನೆಯೊಳಗೆ ಕೆಲಸ ಮಾಡುವ ಕೂಲಿಯಾಕೆಯ ಕಥೆ ಇದ್ದೀತು."

"ಉಂ....ಹುಂ ! ನಮ್ಮ ನಿಮ್ಮದೇ ಅದೆ. ನಿಮ್ಮ ಆ 'ಭಾವದಂತೆ ದೇವ' ಎಂಬ ಕಥೆಯನ್ನು ನಾನು ಅವರಿಗೆ ಓದಲಿಕ್ಕೆ ಕೊಟ್ಟಿದ್ದೆ."

"ಅಂದರೆ, ಅದರದೇನು ಸಂಬಂಧ ಇದಕ್ಕೆ ?"

"ನಿಮ್ಮ ಕಥೆಗೆ ತೀರ ವಿರುದ್ಧವಾಗಿದೆ ಇದು. ಈ ಹೆಂಗಸು ಅನ್ನುತ್ತಾಳೆ– 'ದೇವನಂತೆ ಭಾವ' ಎಂದು."

"ಕಥೆ ಬರೆದವಳು ಹೆಂಗಸೇ ? ಬುರುಖೆಯೊಳಗಿನವಳಾಗಿರಬೇಕು ಬಹುತರವಾಗಿ ಇವಳು !" ಅದನ್ನು ತೆರೆಯುತ್ತ ರಮಾಕಾಂತ ನುಡಿದ. ಕಥೆಯ ಹೆಸರಿನ ಕೆಳಗೆ ನೋಡಿದ "ಲೇಖಿಕೆ–ಕೃಷ್ಣಾ."

"ಓದಿಯಾದರೂ ನೋಡಿರಿ. ಅಷ್ಟೇನೂ ಕೆಟ್ಟದಾಗಿಲ್ಲ ಕಥೆ !"

ಸುಲೋಚನೆಯು ನಾಟಕದ ಮೊದಲನೇ ಪ್ರವೇಶದ ರಂಗ ವ್ಯವಸ್ಥೆಯು ನಡೆದದ್ದನ್ನು

ನೋಡುತ್ತ ಕುಳಿತಳು. ರಮಾಕಾಂತನು ಖುರ್ಚಿಯ ಮೇಲೆ ಕುಳಿತು ಮನಸ್ಸಿನಲ್ಲಿಯೇ ಓದತೊಡಗಿದ. ಕಥೆಯ ನಾಯಿಕೆಯಾದ ಶಾಂತಾ ಎಂಬವಳು ಲಗ್ನವಾಗುವ ಮೊದಲು ಪತಿ ಎಂದರೆ ದೇವರೆಂದು ತಿಳಿದಿರುತ್ತಾಳೆ. ಆದರೆ ಲಗ್ನದ ಅನಂತರ ಅವಳಿಗೆ ಕೆಲವು ತೀರ ಕಟುವಾದ ಅನುಭವಗಳು ಬರಲು ವಿಧವೆಯಾದ ಮೇಲೆ ಅವಳು ಒಂದು ಕಥೆಯಲ್ಲಿ ಬರೆಯುತ್ತಾಳೆ– "ಪತಿಯೊಡನೆ ಸಮರಸಳಾದ ಪತ್ನಿಗೆ ವೈಧವ್ಯವೆಂದರೆ ಮರಣವೆನಿಸುತ್ತಿದ್ದೀತು. ಆದರೆ ಪತಿಯ ನಿರ್ದಯವಾದ ನಡೆಯಿಂದ ಹಣ್ಣಾದ ಜೀವಕ್ಕೆ ವೈಧವ್ಯವು ಪುನರ್ಜನ್ಮವೆಂದೇ ಎನಿಸುತ್ತದೆ."

ಕಥೆಯ ಕೊನೆ ಹೀಗಿತ್ತು– "ಶಾಂತೆಯು ಚಹಾವನ್ನು ಕೊಡುತ್ತಿರುವಾಗ ಅವಳ ಮೋರೆ ನನ್ನ ಕಣ್ಣಿಗೆ ಬಿತ್ತು. ಆ ದಿವಸವೂ ಅವಳು ಇದರಂತೆಯೇ ಚಹ ಕೊಟ್ಟಿದ್ದಳು. ಅದೇ ಈ ಕೋಣೆ. ಆದರೆ ಈಗ ಪೆಟ್ಟಿಗೆಯ ಮೇಲೆ ಪ್ರೀತಿಯ ನಾಯಿ ಇಲ್ಲ. ಶಾಂತೆಯ ಹಣೆಯ ಮೇಲೆ ಕುಂಕುಮ ತಿಲಕವಿಲ್ಲ. ಅವಳ ಹೃದಯದಲ್ಲಿ ಪತಿಯೇ ದೇವರು ಎಂಬ ಭಾವನೆಯೂ ಇಲ್ಲ. ಶಾಂತೆಯು ಶಾಲೆಯಲ್ಲಿ 'ಭಾವದಂತೆ ದೇವ' ಎಂಬ ಗಾದೆಯ ಮಾತನ್ನು ಕಲಿತಿದ್ದಳು. ಆದರೆ ಅನುಭವವು ಅವಳ ಹೃದಯದಲ್ಲಿ 'ದೇವನಂತೆ ಭಾವ'ವೆಂಬ ಹೊಸ ಗಾದೆಯನ್ನು ಕೊರೆದು ಬಿಟ್ಟಿತ್ತು."

ಕಥೆಯನ್ನೋದಿ ಮುಗಿಸಿದ ಕೂಡಲೆ ರಮಾಕಾಂತನು ಮೇಲೆ ನೋಡಿದ. ಕಥೆಯಲ್ಲಿಯ ಶಾಂತಾ, ನಾಯಿಗಳ ಮೇಲಿನ ಅವಳ ಪ್ರೀತಿ, ಗಂಡನಿಗೆ ಅವಳ ಬಗ್ಗೆ ಇದ್ದ ತಿರಸ್ಕಾರ– ಅವನಿಗೆ ಒಮ್ಮೆಲೇ ವತ್ಸಲೆಯ ನೆನಪಾಯಿತು. ಅವನು ಸಹಜವಾಗಿ ಕಥೆಯ ಕೆಳಗೆ ನೋಡಿದ. **"ಗೃಹ್ಯ ಸಂಸ್ಕಾರ !"** ಕಥೆಯ ಬಗ್ಗೆ ಚೇಷ್ಟೆ ಮಾಡಲಿಕ್ಕೆ ಒಳ್ಳೇ ಸಂಧಿ ಕೈಗೆ ಸಿಕ್ಕಿತೆಂದು ಅದನ್ನು ಓದಹತ್ತಿದ. ಆದರೆ ಕ್ಷಣಾರ್ಧದಲ್ಲಿ ಅವನ ಮೋರೆಯ ಮೇಲೆ ಆಶ್ಚರ್ಯವು ಮೂಡಿತು. ಆ "ಗೃಹ್ಯ ಸಂಸ್ಕಾರ"ವನ್ನು ವತ್ಸಲೆಯ ಸೋದರಮಾವನು ಕೊಟ್ಟಿದ್ದನು. ಸಾಂಗಲಿಯಲ್ಲಿ ಅವಳಿಗೆ ಜ್ವರ ಬಂದು ತೀರಿಕೊಂಡ ಸುದ್ದಿ ಅದರಲ್ಲಿತ್ತು. ಆ ದಿವಸ ರಾತ್ರಿ ಸಂತಾಪದಿಂದ ವತ್ಸಲೆ ಹೊರಟುಹೋಗಲು ಮುಂದೆ ಅದರಿಂದಲೇ ಜ್ವರ ಬಂದು ಅವಳು ಸತ್ತಿರಬೇಕೆಂದು ವಿಚಾರವು ಅವನ ಮನದಲ್ಲಿ ಬಂತು. ಆದರೆ ಕೂಡಲೆ ಅವನ ಮನಸ್ಸು ಇಬ್ಬಗೆಯಾಯಿತು. ಎರಡನೇ ಮನವು ಮೆಲ್ಲನೆ ಹೇಳಿತು–

"ಅವಳು ಜ್ವರದಿಂದ ಸಾಯಲಿಲ್ಲ !"

"ಇಲ್ಲದಿದ್ದರೆ ?" ಎಂದು ಮೊದಲನೆಯದು ಕೇಳಿತು.

"ಅವಳ ಕೊಲೆ ಆಯಿತು !"

"ಕೊಲೆ ? ಮಾಡಿದವರು ಯಾರು?"

"ನೀನು ! ರಮಾಕಾಂತ, ನೀನೇ ಮಾಡಿದೆ !"

"ಕೊಲೆ ಏನು ಆಯುಧವಿಲ್ಲದೆ ಆಗುತ್ತದೆಯೆ ?"

"ಒಂದೇ ಏಕೆ ಒಳ್ಳೇ ಎರಡು ಆಯುಧಗಳ ಪ್ರಯೋಗ ಮಾಡಿದೆಯಲ್ಲ ನೀನವಳ ಮೇಲೆ !"



"ಆದರೆ ಆಯುಧವನ್ನು ಉಪಯೋಗಿಸಲಿಕ್ಕೆ ಅಪ್ಪಣೆ ಬೇಕಾಗುವುದಿಲ್ಲವೆ?"

"ಬಿಳಿಯಂಗಿಯ ಸಮಾಜಕ್ಕೆ ಅದು ಸಹಜವಾಗಿಯೇ ಸಿಗುತ್ತದೆ."

"ಆ ಎರಡು ಆಯುಧ ಯಾವುವು ?"

"ಕಲೆ ಮತ್ತು ಸೌಂದರ್ಯ !"

ಶೂನ್ಯ ಮನಸ್ಸಿನಿಂದಲೂ ಶೂನ್ಯದೃಷ್ಟಿಯಿಂದಲೂ ರಮಾಕಾಂತನು ರಂಗಭೂಮಿಯ ಕಡೆಗೆ ನೋಡಿದ. ರಾಜನ ರಂಗಮಹಲಿನ ಸನ್ನಿವೇಶದ ಏರ್ಪಾಡು ನಡೆದಿತ್ತು. ಅವನ ಕಣ್ಣಿಗೆ ಸ್ಮಶಾನದಲ್ಲಿ ಚಿತೆಯ ಮೇಲಿಟ್ಟ ವತ್ಸಲೆಯ ಮೂರ್ತಿಯು ಸ್ಪಷ್ಟವಾಗಿ ಕಾಣಹತ್ತಿತ್ತು. ವೈರಾಗ್ಯದ ಅದೊಂದು ಝುಳುಕಿನಲ್ಲಿ ಅವನಿಗೆನಿಸಿತು– ಕಲೆ ಹಾಗೂ ಸೌಂದರ್ಯಗಳು ಮಾನವ ಜೀವನಕ್ಕೆ ಬರೀ ಅಲಂಕಾರಗಳು. ಆ ಜೀವನದ ಆತ್ಮ ಯಾವುದು ? ಪ್ರೇಮವೇ ಅದರ ಆತ್ಮ ! ಕಲೆ–ಸೌಂದರ್ಯಗಳಲ್ಲದೆ ಯಾವುದು ಎಳತಳಿರನಂತೆ ಅಲುಗುವದಿಲ್ಲವೊ ಅದು ಪ್ರೇಮವಲ್ಲ, ಅದು ಉಪಭೋಗ– ಕೇವಲ ಸುಸಂಸ್ಕೃತ ಉಪಭೋಗವೇ ಸರಿ.

ಅವನ ಓದು ಮುಗಿದದ್ದು ನೋಡಿ ಸುಲೋಚನೆ ಎಂದಳು– "ನಿಮ್ಮ ಕಥೆಗೆ ಅವಳು ಉತ್ತರವೆಂದೇನು ಇದನ್ನು ಬರೆದಂತೆ ಕಾಣುವದಿಲ್ಲ !"

ರಮಾಕಾಂತನು ಏನೂ ಉತ್ತರ ಕೊಡಲಿಲ್ಲ.

ಸರಿಯಾದ ವೇಳೆಗೆ ನಾಟಕವು ಆರಂಭವಾಯಿತು. ಪ್ರೇಕ್ಷಕರ ನಡುವೆ ಆ ಉಷೆಯನ್ನೂ ತನ್ನ ಇತರ ವಿದ್ಯಾರ್ಥಿನಿಯರನ್ನೂ ನೋಡಿ ರಮಾಕಾಂತನ ಮೈಯುಬ್ಬಿತು. ಕಥಾಲೇಖಕನೆಂದು ಅವನು ಇತ್ತೀಚೆ ಒಳ್ಳೇ ಲೋಕಪ್ರಿಯನಾಗಿದ್ದ. ಅಲ್ಲದೆ ಇದು ಅವನ ಮೊದಲನೇ ನಾಟಕ. ಅದಕ್ಕೆ ಸುರಂಗೆಯ ರೂಪದ, ಗಾಯನದ, ಜೋಡು ಸಿಕ್ಕಿದ್ದರಿಂದ ನಾಟಕಗೃಹವು ಇರುವೆಗೂ ಅವಕಾಶವಿಲ್ಲದಂತೆ ತುಂಬಿಹೋಗಿತ್ತು.

ತನ್ನನ್ನು ಕನ್ಯೆಯೆಂದು ನೋಡಲಿಕ್ಕೆ ಬಂದವರ ಮುಂದೆ ಕೂಡುವಾಗ ಹುಡುಗಿಯ ಮನಸ್ಸು ಯಾವ ವ್ಯಾಕುಲಸ್ಥಿತಿಯಲ್ಲಿ ಇರುವುದೆಂಬುದರ ಅನುಭವವು ರಮಾಕಾಂತನಿಗೆ ಈಗ ಬರತೊಡಗಿತು. ಖ್ಯಾತಿ ಶಿಖರದ ಕಡೆಗೆ ಓಡುವ ಅವನ ಮಹತ್ವಾಕಾಂಕ್ಷೆಯು ಯಾವುದೊಂದು ವಾಕ್ಯವು ಪ್ರೇಕ್ಷಕರಿಗೆ ರುಚಿಸಲಿಲ್ಲವೆನಿಸಿದ ಕೂಡಲೆ ಎಡವಿದಂತೆ ವಿಹ್ವಲವಾಗುತ್ತಿತ್ತು. ಯಾವೊಂದು ವಾಕ್ಯಕ್ಕೆ ಚಪ್ಪಾಳೆಯ ಕಡಕಡಾಟವಾದರೆ ಅದು ವೇಗದಿಂದ ಮುಂದೆ ಓಡುತ್ತಿತ್ತು. ಸುರಂಗೆಯಂತೂ ಮೊದಲನೇ ಪದ್ಯದಿಂದಲೇ ಚಪ್ಪಾಳೆ ದೊರಕಿಸಹತ್ತಿದಳು. ಯಶದ ಈ ಉಬ್ಬಿನಲ್ಲಿ ರಮಾಕಾಂತನು ಹಾಹಾ ಎನ್ನುವದರೊಳಗೆ ವತ್ಸಲೆಯ ಮರಣವನ್ನು ಮರೆತುಬಿಟ್ಟ.

ಮೊದಲನೇ ಅಂಕು ಮುಗಿಯಿತು. ವಿಶ್ರಾಂತಿಗಾಗಿ ಸುರಂಗೆಯು ರಮಾಕಾಂತ ಸುಲೋಚನೆಯರ ಹತ್ತಿರ ಬಂದು ಕುಳಿತಳು. ಅವಳ ಆ ಎದ್ದುಕಾಣುವ ಎತ್ತರ ಮೋರೆಯನ್ನು ನೋಡಿದೊಡನೆ ಸುಲೋಚನೆ ಎಂದಳು– "ಸುರಂಗಾತಾಯಿ, ನನ್ನದೊಂದು ಕೆಲಸವಿದೆ ನಿಮ್ಮ ಹತ್ತಿರ !"

ಸುರಂಗೆ ಬರೀ ನಕ್ಕಳು.

“ನನಗೊಂದು ಲಕ್ಷ್ಮಿಯ ಚಿತ್ರ ಬರೆಯುವದಿದೆ. ನಿಮ್ಮನ್ನು ಲಕ್ಷ್ಮಿಯನ್ನು ಮಾಡಬೇಕೆನ್ನುತ್ತೇನೆ.”

ಸುಲೋಚನೆಯು ಇವಳನ್ನಾರಿಸಿದ್ದು ರಮಾಕಾಂತನಿಗೂ ಸರಿಬಿತ್ತು. ಅವನಂದ– “ಈಕೆ ಲಕ್ಷ್ಮಿಯೇ ಸರಿ. ಕೇಳಿರಿ ಬೇಕಾದರೆ ಮ್ಯಾನೇಜರನ್ನು.”

ದುಡ್ಡಿನ ಪೆಟ್ಟಿಗೆಯು ತುಂಬಿ ತುಳುಕುತ್ತಿದ್ದದರಿಂದ ಮ್ಯಾನೇಜರ ಸಾಹೇಬರೂ ಒಳ್ಳೇ ಸಂತೋಷದಲ್ಲಿದ್ದರು. ಅವರೂ ನಕ್ಕು ರಮಾಕಾಂತನ ಮಾತನ್ನು ಅನುಮೋದಿಸಿದರು.

ಎರಡನೇ ಅಂಕು ಸುರುವಾಯಿತು. ಅದಕ್ಕೆ ಮೊದಲನೆಯದಕ್ಕಿಂತಲೂ ಹೆಚ್ಚಾಗಿ ರಂಗು ಏರಿತು. ರಮಾಕಾಂತನಿಗೆ ತಾನು ಸ್ವರ್ಗದಲ್ಲಿಯೇ ಇರುವೆನೆಂದು ಎನಿಸುತ್ತಿತ್ತು. ನಾಯಕ–ನಾಯಿಕೆಯರ ಸಂವಾದದಲ್ಲಿಯ ಮಾತುಮಾತಿಗೂ ಚಪ್ಪಾಳೆ ಬೀಳಹತ್ತಿದ್ದವು.

**ನಾಯಿಕೆ :– ಮಹಾರಾಜರೆ, ನಾನು ಬಡವರ ಕುಲದವಳು. ಕಬ್ಬಿಣದಿಂದ ಆಭರಣಗಳನ್ನು ಮಾಡುವದಿಲ್ಲ–ಬೇಡಿಗಳನ್ನು ಮಾಡುತ್ತಾರೆ.**

**ನಾಯಕ :– ಆದರೆ ಪರಸುಗಲ್ಲಿನ ಸ್ಪರ್ಶವಾದ ಕೂಡಲೆ ಕಬ್ಬಿಣವು ಬಂಗಾರವಾಗುತ್ತದೆ. ಇಂದುಮತೀ, ಈ ಸಂಧ್ಯಾಕಾಲದ ಸೂರ್ಯನಾರಾಯಣನ ಸಮಕ್ಷಮವಾಗಿ ನಿನ್ನ ಕೈಯನ್ನು ನನ್ನ ಕೈಯಲ್ಲಿ ಕೊಡು.**

ಈ ಸಂವಾದವು ಚಪ್ಪಾಳೆಯ ಕಡಕಡಾಟದಲ್ಲಿ ಮುಗಿಯಿತು. ನಾಯಕನು ನಾಯಿಕೆಯ ಕೈಯನ್ನು ತನ್ನ ಕೈಯಲ್ಲಿ ತಕ್ಕೊಂಡ. ಅವಳು ನಾಚಿ ಮೋರೆ ಕೆಳಗೆ ಮಾಡಿದಳು. ಇಷ್ಟರಲ್ಲಿ ಕೆಳಗಿನ ಅಂತಸ್ತಿನ ಹಿಂಭಾಗದಲ್ಲಿ ಏನೋ ಗದ್ದಲಕ್ಕೆ ಆರಂಭವಾಯಿತು. ಎಲ್ಲ ಪ್ರೇಕ್ಷಕರೂ ಹಿಂದೆ ನೋಡಹತ್ತಿದರು. ಏನಾಯಿತೆಂಬುದು ರಮಾಕಾಂತನಿಗೆ ತಿಳಿಯದಾಯಿತು. ಎದೆ ಧಡಧಡಿಸುತ್ತಿರಲು ಅವನು ಬಾಗಿಲ ಹತ್ತಿರ ಬಂದು ನಿಂತ.

ತುಸು ಹೊತ್ತಿನಲ್ಲಿಯೇ ಗದ್ದಲ ಶಾಂತವಾಯಿತು. ಯಾವನೋ ಕುಡುಕನು ಗೊಂದಲಹಾಕಹತ್ತಿದ್ದರಿಂದ ಪೊಲೀಸರು ಅವನನ್ನು ಹೊರಗೆ ಹಾಕಿದರೆಂದು ತಿಳಿಯಿತು. ರಮಾಕಾಂತನು ಮತ್ತೆ ಶಾಂತಚಿತ್ತದಿಂದ ತನ್ನ ಸ್ಥಳದಲ್ಲಿ ಬಂದು ಕುಳಿತುಕೊಂಡ. ಆ ನಾಟಕದ ಮೂರನೇ ಅಂಕೂ ಯಶಸ್ವಿಯಾಗಿ ಮುಗಿಯಿತು. ರಮಾಕಾಂತನಿಗೆ ತುಂಬಾ ಸಮಾಧಾನವಾಯಿತು.

ನಾಟಕ ಮುಗಿಯುತ್ತಲೇ ರಮಾಕಾಂತನು ಸುಲೋಚನೆಯನ್ನು ಕಾರಿನಿಂದ ಅವಳ ಮನೆಯವರೆಗೆ ಮುಟ್ಟಿಸಿದ. ಹೆಚ್ಚು ತಡವಾದರೆ ಅವಳ ಅಬಚಿಯು ರೇಗುವಳೆಂದು ಅವನಿಗೆ ಗೊತ್ತು. ಬಣ್ಣ ಅಳಿಸಿಕೊಂಡು ಸುರಂಗೆಯು ಬಿಡಾರಕ್ಕೆ ಹೋಗಲು ಅನುವಾಗಬೇಕಾದರೆ ಎಷ್ಟೋ ವೇಳೆ ಹಿಡಿಯಿತು. ಮ್ಯಾನೇಜರರು ಬರಬೇಕಾದರೆ ಇನ್ನೂ ತಡವಾಗುವದೆಂದು ಅವರಿಬ್ಬರೇ ಕಾರಿನಲ್ಲಿ ಹೊರಟರು. ಇಂದಿನ ಯಶಸ್ಸಿನ ಆನಂದ, ವಿದ್ಯುದ್ದೀಪಗಳ ಥಳಕು, ದೂರದಿಂದ ತೇಲಿ ಬರುವ ವಾದ್ಯಗಳ ಮಧುರಧ್ವನಿ, ಸುರಂಗೆಯು ಕೂದಲಿಗೆ ಹಚ್ಚಿದ



ಗಂಧದೆಣ್ಣೆಯ ಮನೋಹರ ವಾಸನೆ, ಇವೆಲ್ಲವುಗಳಿಂದ ಉತ್ತೇಜಿತನಾಗಿ ರಮಾಕಾಂತನು ಕಾರಿನಲ್ಲಿ ಕೂಡುತ್ತಲೇ ಕೇಳಿದ–

“ಸುರಂಗಾ, ಏನು ಕೊಡಲಿ ನಿನಗೆ ಇನಾಮು?”

ಅವಳು ತಟ್ಟನೆ ನುಡಿದುಬಿಟ್ಟಳು–

“ಪರಸುಗಲ್ಲಿನ ಸ್ಪರ್ಶವಾದ ಕೂಡಲೆ ಕಬ್ಬಿಣವು ಬಂಗಾರವಾಗುತ್ತದೆ !”

ಆ ಉನ್ಮಾದದ ಮನಃಸ್ಥಿತಿಯಲ್ಲಿ ರಮಾಕಾಂತನು ಮೆಲ್ಲನೆ ಅವಳ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡ. ಡ್ರಾಯವ್ಹರನಿಗೆ ಏನೂ ಕಾಣಿಸುವದು ಶಕ್ಯವಿದ್ದಿಲ್ಲ. ರಮಾಕಾಂತನು ಪ್ರೇಮಭರದಿಂದ ಅವಳ ಕೈಯನ್ನು ಒತ್ತುವಷ್ಟರಲ್ಲಿ ಕಾರಿನ ಹಿಂದಿನಿಂದ ಗೊಗ್ಗರದನಿಯಲ್ಲಿ “ತುಳಸೀ! ತುಳಸೀ !” ಎಂದು ಯಾರೋ ಚೀರಿದ್ದು ಕೇಳ ಬಂತು.

ಸುರಂಗೆಯು ಗಕ್ಕನೆ ಹಿಂತಿರುಗಿ ನೋಡಿದಳು. ಚೇಳು ಕಡಿದರೆ ಮನುಷ್ಯ ಕಾಲು ಜಾಡಿಸುವಂತೆ ಅವಳು ತನ್ನ ಕೈಯನ್ನು ರಮಾಕಾಂತನ ಕೈಯೊಳಗಿಂದ ಕಸಿದುಕೊಂಡಳು.

## ೭
## ಪುನರ್ಜನ್ಮ

ದೇವಾಲಯವನ್ನು ಸುತ್ತಿಕೊಂಡು ಬಂದು ಆ ಭವ್ಯ ಸುಂದರ ಸರೋವರವನ್ನು ಕಂಡೊಡನೆ ವತ್ಸಲೆಯ ಶ್ರಮ ಪರಿಹಾರವಾಯಿತು. ಅದರ ನೀಲೀ ನೀರ ಮೇಲೆ ಮೆಲ್ಲಮೆಲ್ಲನೆ ಮುಚ್ಚಿಕೊಳ್ಳುತ್ತಿದ್ದ ಕಮಲಗಳು ದೂರದಿಂದ ಚಿಕ್ಕೆಗಳಂತೆ ಕಾಣುತ್ತಿದ್ದವು. ನಡುನಡುವೆ ನೀರಲ್ಲಿ ಒಂದು ಚಿಕ್ಕ ತೆರೆ ಎದ್ದು ಒಂದು ಕಮಲದ ಬುಡದಲ್ಲಿ ಕುಣಿಯುತ್ತಿತ್ತು. ಅದು ಆ ಮೊಗ್ಗೆಗೆ ಸಲಿಗೆಯಿಂದ ಅನ್ನುತ್ತಿತ್ತೇನೊ ! “ಕಮಲಾತಾಯೀ ಇಷ್ಟು ಸಿಟ್ಟಿಗೇಳಲಿಕ್ಕೆ ಏನಾಯಿತು? ಇಗೋ ನನ್ನ ಮುತ್ತು !!” ಎಂದು. ಸರೋವರದ ಮೂರು ಕಡೆಗೆ ಮೂರು ದಿನ್ನೆಗಳಿದ್ದವು. ಅವುಗಳ ನಡುವೆ ಹಸಿರು ಕುಂದಣದಲ್ಲಿ ಕೂಡಿಸಿದ ನೀಲರತ್ನದಂತೆ ಆ ಸರೋವರವು ಹೊಳೆಯುತ್ತಿತ್ತು. ನಡುವೇ ಗಾಳಿಯ ಮಂದವಾದ ಝುಳುಕು ಗೇರು ಹೂವಿನ ಸುಗಂಧವನ್ನು ತರುತ್ತಿತ್ತು. ಅದರ ಮಂದಮಧುರವಾದ ವಾಸನೆಯು ವತ್ಸಲೆಗೆ ಅತ್ತರಕ್ಕಿಂತಲೂ ಆನಂದದಾಯಕವೆನಿಸಿತು. ಅವಳಿಗೆನಿಸಿತು–ನಿಸರ್ಗವು ಮನುಷ್ಯನಿಗಿಂತ ಶ್ರೇಷ್ಠವೆಂಬುದು ನಿಜ. ಮುಂಜಾವಿನ ಹೊಬಿಸಿಲನ್ನೂ ಮಳೆಗಾಲದ ಮೊದಲನೇ ಮಳೆಯನ್ನೂ ನೋಡುವಾಗ ಮನಸ್ಸು ಮುದದಿಂದ ಕುಣಿಯುತ್ತದೆ. ಹೂಗಳಂತೆ ತಾರೆಗಳನ್ನು ಅರಳಿಸುವ ಸಂಧ್ಯಾಕಾಲ, ಅವನ್ನು ಕೊಯ್ದುಕೊಂಡು ಹೋಗುವ ಉಷಃಕಾಲ, ಅಷ್ಟೇ ಮನೋಹರವಾಗಿರುವುದಿಲ್ಲವೆ? ಮೊನ್ನೆಯೆ ನಾನು ಮಾಲವಣದಲ್ಲಿ ಸಮುದ್ರವು ಏರುವದನ್ನೂ ನೋಡಿದೆ, ಇಳಿಯುವದನ್ನೂ ನೋಡಿದೆ ಎರಡೂ ಸಮಯದಲ್ಲಿಯ ಆ ತೆರೆಗಳ ಬೆನ್ನು ಮುಟ್ಟುವ ಆಟವು ಅಷ್ಟೇ ಮೋಹಕವೆನಿಸುತ್ತದೆ. ಸಾಧುಸಂತರು ಅಡವಿಗಳಲ್ಲಿ ಸೃಷ್ಟಿಯ ಸಹವಾಸದಲ್ಲಿರುವದರ ಕಾರಣವು ಇದೇ ಇರಬಹುದೇ? ನಿಸರ್ಗವು ಕೇವಲ ಆನಂದಮಯವಾಗಿದೆ. ಮನುಷ್ಯನು ದುಃಖದ

ಉಪ್ಪುನೀರಿನಿಂದ ತುಂಬಿದ ಸಮುದ್ರವಾಗಿದ್ದಾನೆ. ಅದರಲ್ಲಿ ಎಂದಾದರೊಮ್ಮೆ ಸುಖದ ಮುತ್ತುಗಳು ಹುಟ್ಟುತ್ತವಷ್ಟೇ !

ಕೈಯೊಳಗಿನ ಸಣ್ಣಮೂಟೆಯನ್ನು ದಂಡೆಯ ಮೇಲಿಟ್ಟು ಅವಳು ಕೆಂಪು ಮಣ್ಣಿನಿಂದ ಹೊಲಸಾದ ತನ್ನ ಕಾಲು ತೊಳೆದುಕೊಳ್ಳ ಹತ್ತಿದಳು. ನೋಡುನೋಡುತ್ತ ಅವಳಿಗೆ ಚಿಕ್ಕಂದಿನಲ್ಲಿ ಕಾಲಿಗೆ ಹಚ್ಚಿಕೊಳ್ಳುತ್ತಿದ್ದ ಮದರಂಗಿಯ ನೆನಪಾಯಿತು. ನಡೆದು ನಡೆದು ಕಾಲು ಬಹಳ ನೋಯುತ್ತಿದ್ದವು. ಬರಿಗಾಲಿನಿಂದ ನಡೆದದ್ದರಿಂದ ಜರಡಿಯಂತಾಗಿದ್ದವು. ಕಾಲು ತೊಳೆದುಕೊಂಡು ಒದ್ದೆ ಕೈಯಿಂದ ಅವಳು ಮೋರೆಯನ್ನೊರಸಿಕೊಂಡಳು. ಜಪ್ಪಿಸಿ ನೀರಿನಲ್ಲಿ ಬಾಗಿ ನೋಡಿದಳು. ಆ ತಿಳಿನೀರಿನಲ್ಲಿ ಅವಳ ಪ್ರತಿಬಿಂಬವು ಸ್ಪಷ್ಟವಾಗಿ ಕಾಣಿಸಿತು. “ಬಡವರಿಗೆ ದೊಡ್ಡ ಕನ್ನಡಿಗಳೆಲ್ಲಿ ಸಿಗಬೇಕು ? ಅಂತೇ ಸೃಷ್ಟಿಯು ಇಂಥ ಕೊಳಗಳನ್ನು ನಿರ್ಮಿಸುತ್ತಿರಬಹುದು” ಎಂಬ ಕಲ್ಪನೆಯು ಅವಳ ತಲೆಯಲ್ಲಿ ಸುಳಿದು ಹೋಯಿತು. ಮತ್ತೆ ಮೋರೆಯ ಮೇಲೆ ಕೈಯಾಡಿಸುತ್ತಿರಲು ಅದು ಕುಂಕುಮದ ತಿಲಕದ ಹತ್ತಿರ ಹೋಯಿತು. ಆ ಅಸ್ಪಷ್ಟ ಪ್ರತಿಬಿಂಬದಲ್ಲಿಯೂ ಆ ತಿಲಕವು ಎದ್ದು ಕಾಣುತ್ತಿತ್ತು. ನೀರಿನ ಒಂದೇ ಹನಿ ಸಾಕು ! ಆ ತಿಲಕವು ಎತ್ತಲೋ ಹೋಗಿಬಿಡುತ್ತಿತ್ತು. ಅವಳು ಆ ವಿಶಾಲವಾದ ಕೊಳವನ್ನು ನೋಡಿದಳು. ಎಲ್ಲ ನಿರ್ಭಾಗ್ಯರಾದ ಮುತ್ತೈದೆಯರ ಹಣೆಯ ಕುಂಕುಮವನ್ನು ಇಷ್ಟು ನೀರು ತೊಳೆದುಬಿಟ್ಟೀತೆಂಬ ಭಯಂಕರ ವಿಚಾರವೂ ಬಂದು ಹೋಯಿತು. ಅವಳು ಕೈಯನ್ನು ಮೆಲ್ಲನೆ ಮೇಲಕ್ಕೆತ್ತಿದಳು. ಅದು ಥರಥರ ನಡುಗುತ್ತಿತ್ತು. ಕುಂಕುಮ ತಿಲಕವನ್ನು ಒರಸಲಿಕ್ಕೆಂದು ಅವಳು ಹಣೆಯ ಕಡೆಗೆ ಕೈ ಒಯ್ಯುವಷ್ಟರಲ್ಲಿ ಅವಳಿಗೆ “ಅಜ್ಜೀ, ಅಲ್ಲಿ ನೋಡು ಅವ್ವ” ಎಂಬ ಶಬ್ದಗಳು ಕೇಳ ಬಂದವು.

“ಅವ್ವ” ಎಂಬ ಶಬ್ದವನ್ನು ಕೆಳುತ್ತಲೆ ಅವಳ ಕೈ ಒಮ್ಮೆಲೆ ಕೆಳಗೆ ಹೋಯಿತು. “ತಿಳಿದೂ ತಿಳಿದೂ ತಾನು ವಿಧವೆಯಾಗುತ್ತಿದ್ದಳಲ್ಲ. ವಿಧವೆಯು ತಾಯಿಯಾಗುವದೆಂತು? ಸಧವೆಗೆ ತಾಯಿಯಾಗುವದು ಶಕ್ಯವಿದೆ. ಇಂದಿಲ್ಲ ನಾಳೆಯಾದರೂ ರಮಾಕಾಂತನಿಗೆ ಪಶ್ಚಾತ್ತಾಪವಾಗಿ ಅವನು ತನ್ನನ್ನು ಆದರದಿಂದ ತಿರುಗಿ ಕರೆದುಕೊಂಡು ಹೋಗಬಹುದು. ಈ ವಿಚಾರದಿಂದ ಅವಳದವಳಿಗೇ ನಗೆ ಬಂದಿತು. ರಮಾಕಾಂತ ತನ್ನನ್ನು ಎಲ್ಲಿಂದ ತಿರುಗಿ ಕರೆದೊಯ್ಯಬೇಕು? ಸ್ವರ್ಗದಿಂದ ! ಅವನ ದೃಷ್ಟಿಯಿಂದ ತಾನು ಈಗ ಸ್ವರ್ಗದಲ್ಲಿಯೇ ಇದ್ದದ್ದು ; ತನ್ನ ಆ ಸ್ವರ್ಗ ಯಾವುದು ? ಕಾಮಾಪುರದ ಗೇರು ಕಾರಖಾನೆ ! ಕೂಲಿಕಾರರ ಹೆಂಡತಿಗೆ ಒಪ್ಪುವ ಹಾಗೇ ತನ್ನ ರೂಪವಿದೆಯೆಂದು ರಮಾಕಾಂತನಿಗೆನಿಸುತ್ತದೆ. ತನ್ನ ಪತಿ ಸುರೂಪಿ, ಕಲಾವಂತ, ಸಿರಿವಂತ, ಉಚ್ಚಕುಲದ ಮನುಷ್ಯ. ತಾನು ಕುರೂಪಿ, ಕಲಾಹೀನೆ, ದರಿದ್ರಳಾದ ಕೂಲಿಕಾರಳಾಗುವಳು. ಈ ಎರಡು ಕೊನೆಗಳು ಎಂದಾದರು ಒಂದಾಗಬಹುದೆ? ‘ಅವ್ವ’ ಎಂಬ ಶಬ್ದ ಕೇಳಿದ ಕೂಡಲೆ ತನಗೇನೆನಿಸಿತೋ ಅದೆಲ್ಲವೂ ಬರೀ ತೋರಿಕೆಯಾಗಿಯೇ ಉಳಿಯುವದು. ಹಿಂತಿರುಗಿ ಕ್ಷಿತಿಜದ ಕಡೆಗೆ ನೋಡಿದಳು ಕೆಂಪಾದ ಸೂರ್ಯಬಿಂಬವು ಕ್ಷಿತಿಜದ ಮೇಲೆ ಕಾಣುತ್ತಿತ್ತು. ಆಕಾಶವು ಬಾಗಿ ಪೃಥ್ವಿಯ ಮೇಲೆ ಪಶ್ಚಾತ್ತಾಪದಿಂದ ಕಾಯ್ದು



ತನ್ನ ಮಸ್ತಕವನ್ನಿಡುವಂತೆ ಅವಳಿಗೆ ತೋರಿತು. ಆ ದಿವ್ಯ ಸ್ಪರ್ಶದಿಂದ ಭೂಮ್ಯಾಕಾಶಗಳೆರಡೂ ಕೆಂಪಾಗಿ ಹೋಗಿದ್ದವು. ರಮಾಕಾಂತನಿಂದ ಎಂದಾದರೂ ಈ ಸುಖವು ತನಗೆ ಸಿಗಬಹುದೆ?” ತನ್ನ ದುರ್ಬಲ ಮನಸ್ಸನ್ನು ನೋಡಿ ಅವಳದವಳಿಗೇ ಸಿಟ್ಟು ಬಂದಿತು. ಮೊದಲನೇ ದಿನವೇ ತನ್ನ ನಿರಾಕರಿಸಿಬಿಟ್ಟವನು, ಆಮೇಲೆ ಅಸ್ವಸ್ಥನಾದ ತಂದೆಯ ಶುಶ್ರೂಷೆಯ ನೆಪದಿಂದ ತನ್ನನ್ನು ದೂರವಿಟ್ಟವನು. ಕಡೆಗೆ ತನ್ನ ಕಣ್ಣೆದುರಿನಲ್ಲಿಯೇ ಮತ್ತೊಬ್ಬ ಹೆಂಗಸಿನೊಡನೆ ಬೆಳದಿಂಗಳಲ್ಲಿ ತಿರುಗಾಡಲಿಕ್ಕೆ ಹೋದವನು–ಇಂಥ ಗಂಡನ ಕಡೆಗೆ ತನ್ನ ಮನವು ಮತ್ತೆಮತ್ತೆ ಆಶಾಪೂರ್ಣ ದೃಷ್ಟಿಯಿಂದೇಕೆ ನೋಡಬೇಕು? ಈ ವಿಚಾರದ ಭರದಲ್ಲಿರುವಾಲೇ ಅವಳು ಕೈಯಿಂದ ಸಹಜವಾಗಿ ಒಂದು ಕಲ್ಲನ್ನೆತ್ತಿಕೊಂಡು ಕೊಳದಲ್ಲಿ ಎಸೆದಳು. ಸಣ್ಣ ದೊಡ್ಡ ತೆರೆಗಳೆದ್ದವು. ಸಮೀಪದ ಕಮಲಗಳು ಕ್ಷಣಹೊತ್ತು ಅಲುಗಾಡಿದವು. ಆ ಸಪ್ಪಳದಿಂದ ದಂಡೆಯ ಮೇಲಿನ ಒಂದು ಪಕ್ಷಿಯು ಕಿರ್ ಶಬ್ದವನ್ನು ಮಾಡುತ್ತ ಹಾರಿಹೋಯಿತು.

ವತ್ಸಲೆಯು ಯೋಚಿಸತೊಡಗಿದಳು–ಈ ಕಲ್ಲಿನ ಬದಲು ನಾನೇ ಬಿದ್ದಿದ್ದರೆ? ನಿಸರ್ಗಕ್ಕೇನು ಕಲ್ಲೂ ಅಷ್ಟೇ, ನಾನೂ ಅಷ್ಟೇ ! ನಾನೇ ಬಿದ್ದಿದ್ದರೆ – ಬೀಳುವ ಸಪ್ಪಳವು ಸ್ವಲ್ಪ ಹೆಚ್ಚಾಗುತ್ತಿತ್ತು, ತೆರೆಗಳು ಬಹಳ ವೇಗದಿಂದ ಏಳುತ್ತಿದ್ದವು, ಕಮಲಗಳು ಹೆಚ್ಚು ವೇಳೆ ಅಲುಗಾಡುತ್ತಿದ್ದವು, ಒಂದುವೇಳೆ ಪಕ್ಷಿಗಳೂ ಕಲಕಲಾಟ ಮಾಡುತ್ತಿದ್ದವು. ಆನಂದಮಯವಾದ ನಿಸರ್ಗವು ತನ್ನ ಮರಣಕ್ಕಾಗಿ ಬಹಳವಾದರೆ ಇಷ್ಟೇ ದುಃಖವನ್ನು ತೋರುತ್ತಿತ್ತು. ಆದರೆ ಅದೇ ವೇಳೆಯಲ್ಲಿ ದಂಡೆಯ ಮೇಲೊಬ್ಬ ಮನುಷ್ಯನಿದ್ದರೆ ? ನಿಸರ್ಗದ ಶಾಂತರೀತಿಯಲ್ಲಿ ತನ್ನ ಮರಣವನ್ನು ನೋಡುತ್ತಿದ್ದನೇ? ಅವನಿಗೆ ಈಜು ಬರುತ್ತಿದ್ದರೆ ಜಿಗಿದುಬಿಡುತ್ತಿದ್ದ. ಬರುತ್ತಿದ್ದಿಲ್ಲವಾದರೆ ಒದರಾಟ–ಚೀರಾಟ ಮಾಡುತ್ತಿದ್ದ. ಮನುಷ್ಯನೇ ನಿಸರ್ಗಕ್ಕಿಂತ ಶ್ರೇಷ್ಠ. ನಿಸರ್ಗವು ನಿರ್ಜೀವ. ಮನುಷ್ಯನು ಸಜೀವ ! ಜೀವನವು ಜೀವನದೊಡನೆಯೇ ಸಮರಸವಾಗುವುದು.

“ಅದು ನೋಡು, ಅದು ನೋಡು” ಮತ್ತೆ ಆಗಲೆ ಕೇಳಿದ ದನಿಯೇ ಕೇಳಬಂತು. ವತ್ಸಲೆಯ ತಿರುಗಿ ನೋಡಿದಳು. ಬಲಗಡೆಯ ದಿನ್ನೆಯ ಮೇಲಿನ ಗೇರುಗಿಡಗಳ ತೋಪಿನೊಳಗಿಂದ ಒಬ್ಬ ಮುದುಕಿಯೂ ಐದಾರೂ ವರ್ಷದ ಒಬ್ಬ ಹುಡುಗನೂ ಕೆಳಗೆ ಇಳಿಯುತ್ತಿದ್ದರು. ಹುಡುಗನು ಕಲ್ಲಿನಿಂದ ಕಲ್ಲಿಗೆ ಜಿಗಿಯುತ್ತಿದ್ದ. ಮುದುಕಿಯು ತನ್ನ ತ್ರಾಣ ನೋಡಿಕೊಂಡು ಇಳಿಯುತ್ತಿದ್ದಳು. ಹುಡುಗನ ದನಿ ಕೇಳಿಸಿತು– “ಅಜ್ಜೀ, ನೀನು ಜಿಗಿಯಲ್ಲಾ, ನೋಡೂನು.”

“ಹೌದಲೆ ಕಳ್ಳ, ಮುದುಕಿಗೆ ಚಾಷ್ಟೀ ಮಾಡತೀ ಏನು?”

ವತ್ಸಲೆಯ ಮನದಲ್ಲಿ ಮಾತ್ರ ಈ ಸಂವಾದದಿಂದ ಬೇರೆ ವಿಚಾರವೇ ಹೊಳೆಯಿತು. ಚಿಕ್ಕಂದಿನಲ್ಲಿ ಕೂಸು ತಾಯಿತಂದೆಗಳ ಜೀವದ ಮೇಲೆ ಜಿಗಿದಾಡುತ್ತದೆ. ಆದರೆ ದೊಡ್ಡವನಾದ ಮೇಲೆ ಯಾರ ಜೀವದ ಮೇಲೆ ಜಿಗಿದಾಡಬೇಕು ? ತನ್ನ ಸ್ವಂತದ ಮೇಲೆಯೆ? ಈಗ ಸ್ಪಷ್ಟವಾಗಿ ಕಾಣುತ್ತಿದ್ದ ಅವರಿಬ್ಬರ ಜೋಡಿಯನ್ನು ಮತ್ತೆ ನೋಡಿದಳು. ಮುದುಕಿಯ

ಆಯುಷ್ಯದಲ್ಲಿ ಸಾಯಂಕಾಲವಾಗಿದ್ದರೂ ಅದು ವಸಂತ ಋತುವಿನ ಸಂಜೆಯಾಗಿತ್ತು. ಅವಳು ಅರವತ್ತು ವರ್ಷಗಳನ್ನು ಸಹಜವಾಗಿಯೇ ಮೀರಿರಬಹುದು ! ಆದರೂ ಅವಳ ಮೈಕಟ್ಟು ಎಷ್ಟು ದೃಢವಾಗಿತ್ತು ! ಮೋರೆಯ ಮೇಲೆ ಮುಪ್ಪಿನ ಕಳೆ ಇರಲಿಲ್ಲವೆಂದಲ್ಲ, ಆದರೆ ಅದರೊಡನೆಯೆ ತಾರುಣ್ಯದ ಉತ್ಸಾಹವೂ ಎದ್ದುಕಾಣುತ್ತಿತ್ತು. ಅವಳ ವೇಷವನ್ನು ನೋಡಿದರೆ ಅವಳು ಕೂಲಿಯವರ ವರ್ಗದವಳಂತೆಯೇ ಕಾಣುತ್ತಿದ್ದಳು; ಆದರೆ ಆ ಮಾನದಿಂದ ಅವಳ ಸೀರೆ ಗಟ್ಟಿಯಾಗಿಯೂ ಸ್ವಚ್ಛವಾಗಿಯೂ ಇತ್ತು. ಆದರೆ ವತ್ಸಲೆಗೆ ಹೆಚ್ಚು ಆಶ್ಚರ್ಯವಾದದ್ದು ಅವಳಿಗಿಂತಲೂ ಅವಳ ಮೊಮ್ಮಗನನ್ನು ನೋಡಿ. ಅವನದು ಒಳ್ಳೇ ಗೌರವರ್ಣ ! ಗರುಡನಂಥ ಅವನ ಮೂಗೂ, ಎದ್ದು ಕಾಣುವ ಮುಖಚರ್ಯೆ, ಅಂದವಾದ ಮೋರೆಯೂ, ಅಗಲವಾಗಿರದಿದ್ದರೂ ಚೆಲುವಾದ ಹಣೆಯೂ ಬಹಳೇ ಆಕರ್ಷಕವಾಗಿದ್ದವು. ಈ ಹುಡುಗನು ಆ ಮುದುಕಿಯ ಮೊಮ್ಮಗನೆಂದರೆ ಯಾರೂ ನಂಬುವಂತಿದ್ದಿಲ್ಲ !

ಹುಡುಗ ದಿನ್ನೆಯನ್ನಿಳಿದು ಕೆಳಗೆ ಬಂದು ಒಮ್ಮೆಲೇ ತಡೆದ. ಅವನು ವತ್ಸಲೆಯನ್ನು ದಿಟ್ಟಿಸಿ ನೋಡಿ ನಿರಾಶೆಯಿಂದೆಂದ– "ಅವ್ವ ಅಲ್ಲೇನ ಅಜ್ಜೀ ಇಕೀ?"

ಮುದುಕಿಯೂ ಕೆಳಗೆ ಬಂದು ವತ್ಸಲೆಯನ್ನು ದಿಟ್ಟಿಸಿ ನೋಡಹತ್ತಿದಳು. ಕಾಮಾಪುರದಲ್ಲಿಯ ಪ್ರತಿಯೊಂದು ಕಲ್ಲು ಹರಳು ಕೂಡ ಅವಳಿಗೆ ಗೊತ್ತು. ವತ್ಸಲೆಯ ಗಂಟಿನ ಕಡೆಗೆ ನೋಡಿ ಅವಳು ಕೇಳಿದಳು : "ಎಲ್ಲೀದ ಬಂದೆವ್ವ ನೀನು ?"

ತನ್ನ ಸ್ವಂತದ ಕಥೆಯನ್ನು ಇವಳಿಗೆ ತಿಳಿಸಿ ಹೇಳುವದು ಅಶಕ್ಯವೆಂದು ವತ್ಸಲೆಗೆನಿಸಿತು. ಅವಳು ಉತ್ತರ ಕೊಟ್ಟಳು– "ದೇವರ ಮನೆಯಿಂದ !" ನಡುವೇ ಆ ಹುಡುಗನಂದ– "ಅಜ್ಜೀ, ನಮ್ಮ ಬಾಬಾ ಅಲ್ಲೇ ಇದ್ದಾರಲ್ಲ?"

ಅವನ ಕಡೆಗೆ ಲಕ್ಷ್ಯಕೊಡದೆ ಮುದುಕಿಯು ಪ್ರೇಮಲಸ್ವರದಿಂದ ಕೇಳಿದಳು– "ಮುಂದೆ ಎಲ್ಲಿ ಹೋಗುವಾಕಿ ಇದ್ದೀ?"

ವತ್ಸಲೆಯು ಶೂನ್ಯದೃಷ್ಟಿಯಿಂದ ಮೇಲೆ ನೋಡಿದಳು. ಸಂಜೆಯಾಗಿದ್ದರಿಂದ ಕಾಗೆಗಳು ಹಿಂಡುಹಿಂಡಾಗಿ ಭರ್ರನೇ ಹಾರುತ್ತ ಗೂಡುಗಳ ಕಡೆಗೆ ಹೋಗುತ್ತಿದ್ದವು. ಅವಳಿಗೆನಿಸಿತು– ಈ ಹಕ್ಕಿಗಳಿಗೆ ಕೂಡ ಎಲ್ಲಿ ಹೋಗಬೇಕೆಂಬುದು ಗೊತ್ತಿದೆ. ಆದರೆ ನನಗೆ? ಅವಳ ಕಣ್ಣಲ್ಲಿ ನೀರು ತುಂಬಿತು.

ಮುದುಕಿಯು ವತ್ಸಲೆಯ ಹತ್ತಿರ ಹೋಗಿ ವಾತ್ಸಲ್ಯದಿಂದ ಅವಳ ಬೆನ್ನ ಮೇಲೆ ಕೈಯಿಡುತ್ತಾ "ತಂಗೀ" ಎಂದಳು. ಬಿಸಿಲಿನ ಕಾವಿಗೆ ಹಿಮ ಕರಗುವಂತೆ ವತ್ಸಲೆಯ ಮನಸ್ಸು ಆ ಮುದುಕಿಯ ವಾತ್ಸಲ್ಯದಿಂದ ಕರಗಿತು. ಅವಳು ಕೃತಜ್ಞ ದೃಷ್ಟಿಯಿಂದ ಅವಳ ಕಡೆಗೆ ನೋಡಿದಳು. ವತ್ಸಲೆಯ ಹತ್ತಿರ ಕೂಡುತ್ತ ಮುದುಕಿಯೆಂದಳು– "ಸೋನ್ಯಾ, ಬಕುಲದ ಹೂ ತಗೊಂಡು ಬಾ ಹೋಗು. ಮೂರೂ ಸಂಜೆ ಆಗೇದ. ಕಾಲಾಗ ನೋಡಿಕೊಂಡು ಹೋಗು ಹಂs" ಸೋನ್ಯಾ ಜಿಗಿದಾಡುತ್ತಲೆ ದೇವಾಲಯದ ಹತ್ತಿರವಿದ್ದ ಬಕುಲದ ಗಿಡದ



ಕಡೆಗೆ ಹೋದ.

"ತಂಗೀ, ನಿನ್ನ ಹೆಸರೇನು?"

"ಕೃಷ್ಣಾ."

"ಯಾವ ಜಾತಿ?"

"ನಿಮ್ಮದು ಯಾವದು ಅದೇ ನಂದೂ."

ಮುದುಕಿ ಆಶ್ಚರ್ಯದಿಂದ ತಿರುಗಿ ನೋಡಿದಳು. ಬಣ್ಣ ಕಪ್ಪಿನ ಮೇಲೆ. ರೂಪವೂ ಸಾಮಾನ್ಯ. ಮುದುಕಿ ವಿಚಾರದಲ್ಲಿ ಬಿದ್ದಳೆಂಬುದನ್ನು ನೋಡಿ ವತ್ಸಲೆಯೆಂದಳು– "ಎಲ್ಲಾ ಮನುಷ್ಯರ ಜಾತಿ ಒಂದೇ ಅಲ್ಲೇನು ಅಜ್ಜೀ ?"

"ದೇವರೆಲ್ಲಾ ಒಂದುಜಾತಿ ಮಾಡ್ಯಾನವ್ವಾ. ಆದರ ಮನಸ್ಯಾರು?"

"ಮನಸ್ಯಾರೆಲ್ಲಾ ಕೆಡಿಸಿ ಹಾಳಮಾಡ್ಯಾರ ಹೌದಲ್ಲೋ."

"ಹೌದ ಹೌದು ! ಆ ತೆಂಗಿನ ಗಿಡಾ ನೋಡು."

ಎದುರಿಗಿದ್ದ ಗುಡ್ಡದಡಿಯ ಹತ್ತಿರದ ತೆಂಗಿನ ತೋಪಿನ ಕಡೆಗೆ ಬೊಟ್ಟು ತೋರಿಸುತ್ತ ಮುದುಕಿಯೆಂದಳು– "ದೇವರು ಕಲ್ಪರಿಕ್ಷ ಕೊಟ್ಟಾನ. ಮನಸ್ಯಾರೇನ ಮಾಡತಾರ ನೋಡ ಅದರದು."

"ಏನು?"

"ಸೆರೆ ! ಸಿಂದಿ ! ಮೂರ ವರ್ಷದ ಹಿಂದ ದೇವ ಬಾಪ್ಪಾ ಅವರು ಎಲ್ಲಾ ಬಂದ ಮಾಡಿದ್ದರು–"

"ದೇವ ಬಾಪ್ಪಾ ! ದೇವ ಬಾಪ್ಪಾ ಅಂದರ ಯಾರು?"

"ದೇವ ಬಾಪ್ಪಾ ಗೊತ್ತಿಲ್ಲ ನಿನಗ? ಐ ತಂಗೀ ! ಇಡೀ ಕೊಂಕಣ ಪಟ್ಟೀಯೊಳಗ–"

ಮಾಲವಣದಲ್ಲಿ ಹೊತ್ತಿಗೆ ಸರಿಯಾಗಿ ನೋಡಿದ ಬಾಪ್ಪಾ ಅವರ ಮೂರ್ತಿ ವತ್ಸಲೆಗೆ ನೆನಪಾಯಿತು. ಊಟದಮನೆಯಲ್ಲಿ ಅವರ ಕತೆಯನ್ನು ಕೇಳಿದಾಗಿನಿಂದ ಗೋಡಂಬಿಯ ಕಾರಖಾನೆಯಲ್ಲಿ ತಾನು ಕೆಲಸ ಮಾಡಬೇಕೆಂಬ ತನ್ನ ನಿಶ್ಚಯವು ಸಂಪೂರ್ಣ ದೃಢವಾಗಿಬಿಟ್ಟಿತ್ತು. ಆದರೂ ಅವಳು ಕಾಶಿಗೆ ಹೇಳಿದಳು– "ನಾ ಘಟ್ಟದ ಮೇಲಿನವಳು ಅಜ್ಜೀ !"

"ಬೆಳಗಾಂವ ಕೊಲ್ಹಾಪೂರ ಕಡಿಯಾಕೇನು ?"

"ಹೌದು."

"ನಾನೂ ಇದ್ದನಿ ತಂಗೀ ಬೆಳಗಾಂವ್ಯಾಗ. ಭಾಳ ವರ್ಸ ಇದ್ದೆ.'

ಮುದುಕಿ ಬೆಳಗಾಂವಿಯ ಬಗ್ಗೆ ಏನಾದರೂ ಸಮಾಚಾರವನ್ನು ಎಲ್ಲಿ ಕೇಳುವಳೋ ಎಂದು ವತ್ಸಲೆಯು ಹೆದರಿದಳು.

ಮುದುಕಿ ಕೇಳಿದಳು– "ಕೊಂಕಣಕ್ಕೆ ಯಾತಕ್ಕೆ ಬಂದೀಯವ್ವಾ?"

"ಹೊಟ್ಟೆ ತುಂಬಿಕೊಳ್ಳಿಕ್ಕೆ !"

ಸ್ವಲ್ಪ ಹೊತ್ತು ಸುಮ್ಮನಿದ್ದು ಮುದುಕಿ ಮತ್ತೆ ಕೇಳಿದಳು– "ನಿನ್ನ ಗಂಡ ಏನ

ಮಾಡತಾನ?" ಆಗಲೇ ಮಂಗಳಸೂತ್ರ ಹರಿದೊಗೆದು ಕುಂಕುಮ ಒರಸಿಕೊಂಡುಬಿಟ್ಟದ್ದರೆ ಚೆನ್ನಾಗುತ್ತಿತ್ತೆಂದು ವತ್ಸಲೆಗೆ ಎನಿಸಿತು. ಅವಳು ಸರೋವರದ ಪ್ರಶಾಂತವಾದ ನೀರಕಡೆಗೆ ನೋಡ ಹತ್ತಿದಳು.

"ಅವ ನಿನ್ನ ಚಲೋತನ್ಯಾಗಿ ಇಟಗೋಳೂದಿಲ್ಲ ಕಾಣತೈತಿ. ಹೌದಲ್ಲೊ?"

ವತ್ಸಲೆಯು ಹೂಂ ಎಂಬರ್ಥದಲ್ಲಿ ತಲೆಯಲ್ಲಾಡಿಸಿದಳು.

"ಹೆಂಗಸರ ಗಿಂಗಸರ ನಾದ ಅದ ಏನು ?" ಸ್ವಲ್ಪ ಹೊತ್ತು ಸುಮ್ಮನಿದ್ದು ಮುದುಕಿ ಮತ್ತೆ ಅಂದಳು– "ಹರೇದ ಹುಡುಗಿ ನೀ ಇನ್ನ ! ಗಂಡ ಇಲ್ಲದ ನಿನ್ನ ಜಲ್ಮ ಹ್ಯಾಂಗ ಹೋದೀತ ತಂಗೀ."

ತನ್ನ ಉದ್ಗಾರದಿಂದ ಕೃಷ್ಣೆಗೆ ಕೆಡಕೆನಿಸುತ್ತದೆಂದು ಮುದುಕಿಗೆ ತೋರಿತು. ಅವಳಂದಳು– "ಗಂಡಸರಂದರ ನಾಯಿ ಇದ್ದಂಗ. ಒಮ್ಮೆ ಹುಚ್ಚು ಹಿಡೀತಂದರ– ಈ ಸೋನ್ಯಾನ ಅವ್ವ ಏನೇನು–" ಒಮ್ಮೆಲೆ ಮುದುಕಿ ನಾಲಗೆ ಕಚ್ಚಿಕೊಂಡಳು. ವತ್ಸಲೆ ಕೇಳಿದಳು– "ಇಲ್ಲೆ ಈ ಊರಾಗ ಗೋಡಂಬಿ ಕಾರಖಾನೆ ಅದ ಅಲ್ಲ?'

"ಅದ ಅಲ್ಲಾ. ಊರಾಗಿನ 'ದಮ್ಮಖೋರ' ಮಂದಿ ಎಲ್ಲಾ ಕೆಮ್ಮಿಕೋತ ಕೂತಿರತಾರ!"

"ಅಲ್ಲಿ ನನಗೆ ಕೆಲಸ ಸಿಕ್ಕೀತೇನು?"

"ಕೆಲಸ ಸಿಕ್ಕೀತು; ಆದರ ತಂಗೀ ನೀ ಬಹಾಳ ಸುಮಾರ ವ್ಯಾಳ್ಯಾಕ್ಕ ಬಂದಿ."

ವತ್ಸಲೆಯು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಿದಳು.

"ಇನ್ನ ಕಾರಖಾನೆದಾಗಿನ ಕೂಲಿ ಕಡಮಿ ಆಗತೈತಿ."

"ಅದ್ಯಾಕ?"

"ಆ ದಾದಾ, ಧಂದೇ ಸಾಗೂದಿಲ್ಲ ಅಂತಾನ."

"ದಾದಾ ಅಂದರ ಯಾರು?"

"ಆ ಕಾರಖಾನದಾರ ! ಬಂಗಲೆ ಕಟ್ಟಿಸಲಿಕ್ಕೆ ಸಾಗತೈತಿ, ಅವನ ಮಗಳಿಗೆ ಡೌಲು ಮಾಡಾಕ ಸಾಗತೈತಿ ಅವಗ ಬಡ್ಡಿ ಸಾಲಾ ಕೊಡಾಕ ಸಾಗತೈತಿ, ಕೂಲಿ ಕೊಡಲಿಕ್ಕೆ ಅsಟ ಧಂದೆ ಸಾಗೂದಿಲ್ಲ ಅವಗ."

"ಮತ್ತೇನಾರೆ ಕೆಲಸಾನೂ ಮಾಡತೀನಿ ಅದರೊಳಗ ಹೊಟ್ಟೆ ತುಂಬದಿದ್ದರ."

"ಕೆಲಸಾ ಮಾಡಲಿಕ್ಕೇನ ತಾಯಿ, ಬಡವರು ಹುಟ್ಟಿದ್ದು."

ಮುದುಕಿಯು ಸುತ್ತಲೂ ನೋಡಿದಳು. ಕತ್ತಲೆ ಬೀಳಹತ್ತಿತು. "ಸೋನ್ಯಾ, ಏ ಸೋನ್ಯಾ" ಎಂದು ಕೂಗಿದಳು. ಉತ್ತರ ಬರದೇ ಇದ್ದದ್ದನ್ನು ನೋಡಿ ಅವಳು ಕೂs ಎಂದು ಕೂಗಿದಳು. ಕೂಡಲೆ ಮತ್ತೊಂದು ಕೂಗು ಉತ್ತರ ಕೊಟ್ಟಿತು. ಕೂಗಿನ ಹಿಂದೆಯೆ ಸೋನ್ಯಾ ಬಂದ.

"ಇವ ನಿಮ್ಮ ಮೊಮ್ಮಗ ಏನು?" ಎಂಬ ಪ್ರಶ್ನೆ ಕೇಳಬೇಕೆಂದು ವತ್ಸಲೆಯ ಮನಸ್ಸಿನಲ್ಲಿ ಬಂದಿತ್ತು. ಆದರೆ ಅವಳಿಗೆ ಧೈರ್ಯವಾಗಲಿಲ್ಲ. ಇಷ್ಟರಲ್ಲಿ ಸೋನ್ಯಾ ಬೊಗಸೆ ತುಂಬ ಬಕುಲದ ಹೂವುಗಳನ್ನು ತೆಗೆದುಕೊಂಡು ಬಂದ. ಅವನ್ನು ನೋಡಿ ವತ್ಸಲೆಯೆಂದಳು : "ಬಕುಲದ್ದೂ



ಅಲ್ಲs ಈ ಹೂವು ?"

"ಅಲ್ಲ ಓವಳಿ ಹೂ" ಎಂದ ಸೋನ್ಯಾ.

"ಅಂದರೇನs ಬಕುಲದ್ದೂ" ಎಂದಳು ಮುದುಕಿ.

"ಅಲ್ಲ, ಅಲ್ಲ. ಇವು ಓವಳೀ ಹೂ" ಎಂದು ಸೋನ್ಯಾ ಗಟ್ಟಿಯಾಗಿ ತನ್ನ ಮತ ಹೇಳಿಬಿಟ್ಟ.

"ಯಾತರವೇನೋ ಅನ್ನೂ ಹಾಂಗ ಕಾಣಸ್ತಾವ ಇವು" ಎಂದು ವತ್ಸಲೆಯೆಂದಳು.

"ಹಂಗೇ ಅದನವ್ವಾ ಎಲ್ಲಾ" ಮುದುಕಿ ಅವುಗಳೊಳಗಿನ ಒಂದು ಹೂವು ತೆಗೆದುಕೊಂಡು ಅದರ ಮೇಲಿನ ಹೊದಿಕೆಯನ್ನು ತೆಗೆದು ಒಗೆದಳು. ಒಳಗೆ ನಾಜೂಕಾದ ಬಕುಲದ ಹೂವು ಇತ್ತು.

ತನ್ನ ಸ್ಥಿತಿಯೂ ಆ ಬಕುಲದ ಹೂವಿನಂತೆಯೆ ಎಂದು ವತ್ಸಲೆಗೆ ಎನಿಸಿತು. ರಮಾಕಾಂತನು ಬಹಿರಂಗದ ಮೇಲಿಂದಲೇ ತನ್ನನ್ನು ತಿರಸ್ಕಾರ ಮಾಡಿದನು. ಆದರೆ ತನ್ನ ಗುಣವು ತಿಳಿದರೆ ಅದೇ ರಮಾಕಾಂತ ತನಗೆ ಶರಣು ಬರಬಹುದು.

ಈ ವಿಚಾರದೊಡನೆಯೆ ಅವಳ ಮನಸ್ಸು ಉಲ್ಲಾಸದಿಂದ ತುಂಬಿಹೋಯಿತು. ತನ್ನ ಸುತ್ತಲಿನ ಸೃಷ್ಟಿಯೂ ಅವಳಿಗೆ ಅಷ್ಟೇ ಆನಂದದಾಯಕವೆನಿಸಿತು. ಬಿಸಿಲ ತಾಪವು ಕಳೆದು ಗಾಳಿಯು ತಂಪಾಗಿ ಬೀಸಹತ್ತಿತು. ಕೋಮಲವಾದ ಕೈಬೆರಳುಗಳಿಂದ ಕೊಳದಲ್ಲಿ ಅದು ಜಲತರಂಗವನ್ನು ಬಾರಿಸಹತ್ತಿತ್ತು. ಹೊರಗೆ ಸುತ್ತುತ್ತ ಹೋದ ಹುಡುಗನನ್ನು ಮನೆಗೆ ಕರೆತಂದು ತಾಯಿಯು ಹೊದಿಸಿ ಮಲಗಿಸುವಂತೆ ಸೃಷ್ಟಿಯು ತನ್ನ ನೀಲವಾದ ಹೊದಿಕೆಯನ್ನು ಪೃಥ್ವಿಯ ಮೈಮೇಲೆ ಎಳೆಯುತ್ತಿದೆಯೆಂದು ವತ್ಸಲೆಗೆನಿಸಿತು.

ಅತ್ತಕಡೆ ಕಮಲೇಶ್ವರಿ ಗುಡಿಯಲ್ಲಿಯ ಸಂಜೆಯ ವಾದ್ಯಕ್ಕೆ ಮೊದಲಾಯಿತು. ಶಾಂತವಾದ ವಾತಾವರಣದಲ್ಲಿ ಬರುವ ಅದರ ಪ್ರತಿಧ್ವನಿಯನ್ನು ವತ್ಸಲೆಯು ಉತ್ಸುಕತೆಯಿಂದ ಕೇಳಹತ್ತಿದಳು. ಅವಳಿಗೆ ಮುಂಬಯಿಯ ಗದ್ದಲದ ನೆನಪಾಯಿತು. ಚೌಪಾಟಿಯ ಮೇಲಿನ ಆ ಗದ್ದಲ, ಕೊಳದ ಮೇಲಿನ ಈ ಶಾಂತತೆ. ಅಲ್ಲಿಯ ಮೋಟಾರು–ಟ್ರಾಮುಗಳ ಖಣಖಣಾಟ, ಇಲ್ಲಿಯ ಬಜಂತ್ರಿಯ ಮಂಜುಳ ಸ್ವರ, ಈ ಎರಡು ಜಗತ್ತುಗಳಲ್ಲಿ ಎಷ್ಟು ವಿಲಕ್ಷಣವಾದ ಅಂತರ ! ರಮಾಕಾಂತನ ಶಬ್ದಗಳು ಅವಳಿಗೆ ನೆನಪಾದವು– "ನನ್ನ ನಿನ್ನ ನಡುವೆ ಎರಡು ಧ್ರುವಗಳ ಅಂತರವಿದೆ." ಅವಳಿಗನಿಸಿತು–ನಾನಂತೂ ಈ ಎರಡನೇ ಧ್ರುವದ ಮೇಲೆ ಬಂದೆ. ಇನ್ನು ಇಲ್ಲಿ ಏನು ಕಾಣಿಸಬಹುದು? ಏನೇ ಕಾಣಿಸಲಿ ಮೊದಲನೇ ಧ್ರುವವು ಕಾಣಿಸುವುದಿಲ್ಲವೆಂಬುದಂತೂ ನಿಶ್ಚಿತ !"

ತನ್ನ ಈ ವಿಚಿತ್ರ ಕಲ್ಪನೆಯಿಂದ ಅವಳಿಗೆ ತನ್ನೊಳಗೇ ಆಶ್ಚರ್ಯವಾಯಿತು. "ಮೊದಲನೇ ಧ್ರುವವು ಕಾಣಿಸುವುದಿಲ್ಲವೆಂಬುದಂತೂ ನಿಶ್ಚಿತ" ಎಂಬ ವಿಚಾರವು ಮನಸ್ಸಿನಲ್ಲಿ ಬರುತ್ತಲೇ ಅವಳು ಆಕಾಶದ ಕಡೆಗೆ ನೋಡಿದಳು. ಮುಂಬಯಿಯಲ್ಲಿ ಅವಳು ಮನೆಯಿಂದ ಹೊರಬಿದ್ದ ದಿವಸ ಆಕಾಶವು ಇಂದಿನಂತೇ ನಿರಭ್ರವಾಗಿತ್ತು. ಅವಳು ಮೇಲೆ ನೋಡುತ್ತಿದ್ದುದನ್ನು

ನೋಡಿ ಮುದುಕಿಯೆಂದಳು– "ಕಾಲಾಗ ನೋಡಿಕೊಂಡು ನಡೀ ಕೃಷ್ಣಾ !"

"ಇದೇ ಕಾಣಿಸಲಿಕ್ಕೆ ಹತ್ತಿದ ಆ ನಕ್ಷತ್ರ ಎಷ್ಟು ಚೆಂದ ಕಾಣಸತಾವ ನೋಡು !" ಎಂದು ವತ್ಸಲೆಯೆಂದಳು.

"ಅದ ನೋಡು ಏನೋ ಸರಸರ ಅಂತು ಅಲ್ಲಿ" ಎಂದು ಮುದುಕಿಯು ಸೋನ್ಯಾನನ್ನು ತನ್ನ ಕಡೆಗೆ ಎಳೆದುಕೊಂಡಳು.

ವತ್ಸಲೆ ಕೇಳಿದಳು "ಅದೇನು?"

"ಹಾವು ಇದ್ದೀತು. ಸುಧಾರಿಸಿದ ಮಂದಿ ಹ್ಯಾಂಗ ಸಂಜೇನಾಗ ಹವಾ ತಿಲ್ಲಿಕ್ಕೆ ಹೊರಬೀಳತಾರ ಹಾಂಗ ಹಾವುಗೀವು ಕೂಡಾ ಹೊರ ಬೀಳತಾವ !"

ಮುದುಕಿಯ ಈ ವಾಕ್ಯವು ಮತ್ತೆ ಯಾವಾಗಲಾಗಿದ್ದರೆ ವತ್ಸಲೆಗೆ ಮೋಜು ಅನಿಸುವಂತಿತ್ತು. ಆದರೆ ಅವಳು ತನ್ನ ಕಲ್ಪನೆಯೊಂದರಲ್ಲಿಯೆ ಲೀನಳಾಗಿದ್ದಳು.

ಸಂಜೆಯಾದ ಕೂಡಲೆ ನಕ್ಷತ್ರಗಳು ಮಿನುಗತೊಡಗುತ್ತವೆ. ಎಷ್ಟು ಚೆಂದ ! ಸಂಜೆಯಾದ ಕೂಡಲೆ ಹಾವುಗಳೂ ಹೋರುಗಳಿಂದ ಹೊರಬಿದ್ದ ತಿರುಗಹತ್ತುತ್ತವೆ. ಎಷ್ಟು ಭಯಂಕರ !

ನಕ್ಷತ್ರಗಳನ್ನು ಯಾರು ಹುಟ್ಟಿಸಿದರು ? ದೇವರು. ಹಾವುಗಳನ್ನು ಯಾರು ಹುಟ್ಟಿಸಿದರು ? ಅದೇ ದೇವರು–

"ಕಾಮಾಪುರದಾಗ ಏನು ಕಡದರೂ ಮನಸ್ಯಾಗ ಅಪಾಯ ಇಲ್ಲ."

"ಅದು ಹ್ಯಾಂಗ?" ವತ್ಸಲೆಯು ಕೇಳಿದಳು.

"ಕಮಳೇಶ್ವರಿ ಕುಂತಬಿಟ್ಟಾಳ ಉಳಸಾಕ. ಮತ್ತ ಆ ಕಡೀ ಆವಾರದಾಗ ಹಾವಿನ ಮಣಿ ಐತಿ !"

ಮಧ್ಯರಾತ್ರಿ ಮೀರಿರಬಹುದು. ನಡುನಡುವೆ ನಾಯಿಗಳು ಬೊಗಳುವುದು ಕೇಳಿಬರುತ್ತಿತ್ತು. ಗುಡ್ಡಗಳು ಸಮೀಪವಿದ್ದುದರಿಂದ ಅಲ್ಲಿಯ ನರಿಗಳು ಕೆಳಗೆ ಇಳಿದುಬರುತ್ತಿರಬಹುದೆಂದೂ ಆದ್ದರಿಂದಲೇ ನಾಯಿಗಳು ಬೊಗಳುತ್ತಿರಬಹುದೆಂದೂ ವತ್ಸಲೆಯು ತಿಳಿದಳು. ಅಲ್ಲಿಯೇ ತುಸು ದೂರದಲ್ಲಿ ಮುದುಕಿ ಮಲಗಿದ್ದಳು. ಸಂಜೆಯಿಂದಲೂ "ಅಬಚೀ, ಅಬಚೀ" ಎಂದು ವತ್ಸಲೆಯ ಹತ್ತಿರ ಸುತ್ತಾಡುತ್ತಿದ್ದ ಸೋನ್ಯಾ ಈಗ ಅವಳ ಹತ್ತಿರ ಸ್ವಸ್ಥವಾಗಿ ಮಲಗಿದ್ದ. ಆದರೆ ಅವರಿಬ್ಬರ ಮೇಲೆಯೂ ತನ್ನ ಮೋಹಿನೀ ಮಂತ್ರವನ್ನು ಪಸರಿಸಿದ ನಿದ್ರೆಯು ವತ್ಸಲೆಯ ಕಡೆಗೆ ಇಣಿಕಿ ಸಹ ನೋಡಲಿಲ್ಲ.

ಕತ್ತಲೆಯಲ್ಲಿ ಕಾಣದ ಕಣ್ಣುಗಳಿಂದ ವತ್ಸಲೆಯು ತನ್ನ ಗತ ಆಯುಷ್ಯದ ಚಿತ್ರಪಟವನ್ನು ನೋಡಹತ್ತಿದಳು. ತಾನು ಇಲ್ಲಿ ಬರುವುದು; ಈ ಮುದುಕಿಯ ಮನೆಯಲ್ಲಿ ಇರುವುದು; ನಾಳಿನಿಂದ ಗೋಡಂಬಿಯ ಕಾರಖಾನೆಯಲ್ಲಿ ದುಡಿದು ಹೊಟ್ಟೆ ತುಂಬಿಕೊಳ್ಳುವುದು; ಇದೆಲ್ಲ ಹುಚ್ಚುತನವಲ್ಲವೇ? ಉಚ್ಚಕುಲದ ತಂದೆಯ ಮಗಳು, ಸಾಂಗಲಿಯಲ್ಲಿ ಸುಖವಸ್ತುವಾಗಿ ಜೀವಿಸುತ್ತಿದ್ದ ಡಾಕ್ಟರನ ಸೋದರ ಸೊಸೆ, ಪೋಲೀಸ ಖಾತೆಯಲ್ಲಿಯ ಕೆಲಸದ ಬಗ್ಗೆ ರಾಮಸಾಹೇಬ ಪದವಿಯನ್ನು ದೊರಕಿಸಿದ ಅಮಲದಾರನ ಸೊಸೆ, ಮಹಾರಾಷ್ಟ್ರದಲ್ಲಿಯ



ಒಬ್ಬ ಪ್ರಖ್ಯಾತ ಕಶೆಗಾರನ ಹೆಂಡತಿ–ಕಾಮಾಪುರದಂಥ ಹಳ್ಳಿಯಲ್ಲಿ ಕೂಲಿ ಕುಂಬಳಿಯಿಂದ ಹೊಟ್ಟೆ ತುಂಬಿಕೊಳ್ಳಹತ್ತಿದರೆ ಜನರು ನಗದೆ ಇರುವರೆ? ಆದರೆ ಜನರದೇನು? ನಡೆದುಬಂದ ಸಂಪ್ರದಾಯದ ಎದುರು ಯಾರಾದರೂ ಹೋದರೆ ಅವರು ನಗಲಿಕ್ಕೆ ಆರಂಭಮಾಡಿದರೇ! ಗಂಡನ ಮನಸ್ಸಿಗೆ ಬಾರದೆ ಇದ್ದ ಹೆಂಡತಿ ಇನ್ನೊಬ್ಬಳಾಗಿದ್ದರೆ ಶಿಪಾಯಿಯಾಗಲಿ ನರ್ಸ್ ಆಗಲಿ ಆಗುತ್ತಿದ್ದಳು. ಆದರೆ ರಮಾಕಾಂತನ ಆ ಮಾತಿನ ಏಟಿನಿಂದ ತನಗೆ ಕೆಳಗಿನ ವರ್ಗದಲ್ಲಿಯೇ ಬೆರೆತುಹೋಗುವ ಬಲವಾದ ಇಚ್ಛೆಯುಂಟಾಯಿತು. ಇದರ ಪರಿಣಾಮವೇನಾಗಬಹುದು? ಆಗುವುದೇನು? ತಂದೆ ಚಿಕ್ಕಂದಿನಲ್ಲಿಯೇ ಸತ್ತುಹೋದರು. ಸೋದರಮಾವನ ಮನೆಗೆ ಹೋದರೆ ಅಡುಗೆ ಮಾಡುತ್ತ ಜನ್ಮ ಕಳೆಯಬೇಕು. ಮಾವನೂ ಸತ್ತುಹೋದ. ಗಂಡನಿಗಂತೂ ತಾನು ಕಣ್ಣೆದುರಿಗೆ ಬೇಡ. ಅಂದ ಮೇಲೆ ತಾನು ಎಲ್ಲಿಹೋದರೇನು? ಏನುಮಾಡಿದರೇನು ? ಇಲ್ಲಿ ಈ ಬಡಜನರ ಸೇವೆಯಾದರೂ ನನ್ನ ಕೈಯಿಂದಾದೀತು.

ಮೆಲ್ಲನೆ ಬಾಗಿಲು ತೆರೆದು ಹೊರಗೆ ಬಂದಳು. ಚಂದ್ರ ಮೊದಲೇ ಉದಯಿಸಿದ್ದ. ತೆಂಗಿನ ಗಿಡಗಳ ಹಚ್ಚಹಸಿರು ಗರಿಗಳೊಳಗಿಂದ ನಡು ನಡುವೆ ನೆಲದಮೇಲೆ ಬಿದ್ದ ಬೆಳ್ದಿಂಗಳು ಚಿತ್ರವಿಚಿತ್ರವಾದ ರಂಗೋಲಿಯಂತೆ ಕಾಣುತ್ತಿತ್ತು. ವತ್ಸಲೆಯು ಆಕಾಶದ ಕಡೆಗೆ ನೋಡಿದಳು. ನಕ್ಷತ್ರಗಳ 'ಥಳಿ' ಹೊಡೆದು ಬಿಟ್ಟಂತಾಗಿತ್ತು. ಅವಳಿಗೆ ಯೋಚನೆ ಹೊಳೆಯಿತು– "ಉಚ್ಚಕುಲದವರ ಜೀವನವೂ ಈ ಬೆಳ್ದಿಂಗಳಂತೆಯಲ್ಲವೆ? ನೋಡಲಿಕ್ಕೆಷ್ಟು ಚಂದ ! ಎಷ್ಟು ಶಾಂತ ! ಆದರೆ ಸೂರ್ಯನೇ ಇರದಿದ್ದರೆ ಚಂದ್ರನಿಗೆ ಪ್ರಕಾಶವೆಲ್ಲಿಯದು ? ತಮ್ಮ ರಕ್ತವನ್ನು ನೀರು ಮಾಡಿ ದುಡಿಯುವ ಬಡವರಿಲ್ಲದಿದ್ದರೆ 'ಬಿಳಿಯಂಗಿ' ಯವರ ವಿಲಾಸ ನಡೆದೀತೆ? ಕಲೆ, ಸೌಂದರ್ಯ, ಸಂಸ್ಕೃತಿ ಈ ಎಲ್ಲ ಬಂಗಾರದ ಕಳಸಗಳು ನೋಡಲಿಕ್ಕೆ ಮಾತ್ರ ಚೆಂದ ! ಆದರೆ ಕಳಸದ ಕೆಳಗಿನ ಗುಡಿಯನ್ನು ಕಟ್ಟಲಿಕ್ಕೆ ಗಟ್ಟಿಯಾದ ಕಲ್ಲುಗಳೇ ಬೇಕು. ಆ ಬಂಗಾರದಷ್ಟೇ ಅದೇಕೆ, ಇನ್ನೂ ಹೆಚ್ಚಾಗಿ ಆ ಕಲ್ಲುಗಳ ಕಡೆಗೇ ಲಕ್ಷ್ಯ ಕೊಡಬೇಕಲ್ಲವೆ?"

ನಿನ್ನೆ ದಾರೀ ನಡೆದದ್ದರಿಂದ ತನ್ನ ಕಾಲು ನೋಯುತ್ತಿರುವವೆಂದು ಅವಳಿಗೆನಿಸಿತು. "ಒಂದು ಧ್ರುವದಿಂದ ಇನ್ನೊಂದು ಧ್ರುವವನ್ನು ಮುಟ್ಟಿದೆ. ಇಷ್ಟೂ ಕಾಲು ನೋಯಬೇಡವೆ! ಎಂದು ಸಮಾಧಾನ ತಂದುಕೊಂಡಳು. ಅವಳ ವಿಚಾರ ಮತ್ತೆ ಮುಂದೆ ಸಾಗಿತು. ಈ ಜನರಲ್ಲಿದ್ದೂ ತನ್ನ ಆಯುಷ್ಯವು ಆನಂದದಿಂದ ಕಳೆಯಬಹುದು. ಓದು ಬರೆಯುವುದೊಂದೇ ಇಂದಿನವರೆಗೂ ತನಗೆ ಆನಂದದ ವಿಷಯವಾಗಿತ್ತು. ಅದನ್ನು ಇಲ್ಲಿಯಾದರೂ ಕಸಿದುಕೊಳ್ಳುವರಾರು? ಸೋದರತ್ತೆಯು ಕುತ್ಸಿತವಾದ ಮಾತುಗಳಿಂದ ನಿದ್ರೆ ಬರದಂತಾಯಿತೆಂದರೆ ರಾತ್ರಿಯ ಎರಡು ಗಂಟೆಯತನಕವೂ ಓದುತ್ತಿದ್ದೆ. ಪಾಂಚಗಣಿಯಲ್ಲಿ ಮಾವನವರಿಗೆ ಹೊತ್ತು ಹೋಗಬೇಕೆಂದು ದಿನಾಲು ಐದಾರು ಗಂಟೆಯಾದರೂ ತಾನು ಓದಬೇಕಾಗುತ್ತಿತ್ತು. ಮರಾಠಿಯನ್ನಂತೂ ಬೇಕಾದಷ್ಟು ಓದಿದೆ. ಆದರೆ ಶಿಕ್ಷಣದ ಮಾನದಿಂದ ತನ್ನ ಇಂಗ್ಲಿಷು ಓದೂ ಬೇಕಾದಷ್ಟಾಗಿತ್ತೆನ್ನಬಹುದು. ಈ ಓದಿನ ಉಪಯೋಗವನ್ನು ಬರೀ

ಡೌಲು ಮಾಡುವುದರಲ್ಲಿ, ಗಂಡನೊಡನೆ ನಾಟಕ–ಸಿನೆಮಾ ನೋಡುವುದರಲ್ಲಿ ಮಾಡಬೇಕೆ? ಆಗಲೇ ಮುದುಕಿಯೆಂದಳು–ಕಾರಖಾನೆಯಲ್ಲಿ ಕೂಲಿಯನ್ನು ಕಡಮೆ ಮಾಡುವರೆಂದು, ಬಡಬಗ್ಗರ ಹೊಟ್ಟೆಗೆ ಕೇರು ಬೀಳಬಾರದೆಂದು ಈ ವಿಷಯದಲ್ಲಿ ತನಗೆ ಯತ್ನ ಮಾಡಲಿಕ್ಕೆ ಆಗದೆ? ಇಲ್ಲಿಯೇ ಇದ್ದು ಕಥೆ ಬರೆಯಬಹುದು, ಕೂಲಿಕಾರರಲ್ಲಿ ಒಕ್ಕಟ್ಟು ಬೆಳೆಸಬಹುದು–

ಅವಳು ಚಂದ್ರನ ಕಡೆಗೆ ತುಚ್ಛತೆಯಿಂದ ನೋಡಿದಳು. ಅವನಿಗೆಂದಳೇನೊ "ನೋಡು, ಜಗತ್ತೆಲ್ಲ ಮಲಗಿದ್ದಾಗ ನಿನ್ನ ಕಲೆಗಳ ಉಪಯೋಗವೇನು! ಅದೆ ಬೆಳಗಾಗಲಿ, ಜೀವನವನ್ನು ಕೊಡುವ ಸೂರ್ಯನುದಿಸಲಿ, ಆಗ ನೋಡು ಜಗವೆಲ್ಲವೂ ಹೇಗೆ ಎಚ್ಚರಿಯುವದು."

* * * * *

ಸೂರ್ಯೋದಯದ ಸುಮಾರಿಗೆ ಮುದುಕಿ ವತ್ಸಲೆಯನ್ನು ಕಾರಖಾನೆಗೆ ಕರೆದುಕೊಂಡು ಹೋದಳು. ಕಾರಖಾನೆಲ್ಲಿಯದು ? ದನಗಳ ಕೊಂಡವಾಡೆಯೇ ಸರಿ ! ಮೇಲೆ ಒಂದು ದೊಡ್ಡ ಭಟ್ಟಿಯೊಳಗಿಂದ ಹೊಗೆ ಹೊರಬೀಳುತ್ತಿತ್ತು. ಅದರಲ್ಲಿ ಗೋಡಂಬಿಗಳನ್ನು ಹುರಿದು ತೆಗೆಯುತ್ತಿದ್ದರು. ಭರಭರನೆ ಚಿಕ್ಕ ದೊಡ್ಡ ಎಲ್ಲ ಹೆಂಗಸರೂ ಕೆಲಸಕ್ಕೆ ಕುಳಿತರು, ವತ್ಸಲೆಯು ಹೊಸಬಳಾದ್ದರಿಂದ ಮುದುಕಿ ಅವಳ ಹತ್ತಿರವೇ ಕುಳಿತು ಅವಳಿಗೆ ಗೋಡಂಬಿಗಳನ್ನು ಒಡೆಯಲಿಕ್ಕೆ ಕಲಿಸಹತ್ತಿದಳು. ಅವಳ ಆ ಚಿಂದಿಚಿಂದಿಯಾದ ಸೀರೆಗಳನ್ನೂ ಸಪ್ಪಗಿನ ಮೋರೆಗಳನ್ನೂ ನೋಡಿ ಅವರ ಅಂತಃಕರಣವು ಉಕ್ಕಿಬಂದಿತು. "ಈ ಬಡ ಜನರ ಕೂಲಿ ಇನ್ನೂ ಕಡಮೆಯಾಗುವದೆ?" ಎಂದು ವಿಚಾರಮಾಡಹತ್ತಿದಳು.

ಕಾರಖಾನೆಯಲ್ಲಿ ಮೇಲ್ವಿಚಾರಣೆಗೆ ದಾದಾ ಅವರು ಬಂದರು. ವತ್ಸಲೆಯನ್ನು ನೋಡಿದೊಡನೆ ಅವರಂದರು–

"ಏನು ಕಾಶೀ, ಈ ಹುಡುಗಿ ಯಾರು ?"

"ಇದ್ದಾಳ ಹಿಂಗs ದೂರದ ಬಳಗದಾಕಿ" ಎಂದು ಒಳ್ಳೇ ಪ್ರತಿಷ್ಠೆಯಿಂದ ಮುದುಕಿಯೆಂದಳು.

"ಕಾಶಿಗೆ ಬಳಗ ಬಹಾಳ ಕಾಣಸತದ ಅಂ. ಈಗ ಐದು ವರ್ಷದ ಮುಂದಲ್ಲ ? ಎಲ್ಲೀದೋ ಹುಡುಗನೊಬ್ಬನ್ನ ತಂದಳು" ಎಂದು ದಾದಾ ಅವರೊಡನೆ ಬಂದ ಕಾರಕೂನನು ಅದಕ್ಕೆ ತನ್ನ ಟಿಪ್ಪಣಿ–ಜೋಡಿಸಿದ.

ದಾದಾ ಅವರು ನಕ್ಕು ಅದನ್ನು ಅನುಮೋದಿಸಿದರು.

ಇಷ್ಟರಲ್ಲಿ ಒಬ್ಬ ಆಳು ಟಪ್ಪಾಲು ತಂದ.

ಒಂದು ಪತ್ರವನ್ನು ಒಡೆದು ಓದಿ ದಾದಾ ಅಂದರು– "ನಾಳೆಯೂ ಬರುವುದಿಲ್ಲ ಈಕೆ !"

"ಯಾರು ? ಸುಲೋಚನಾ ತಾಯಿಯೇನು?"

"ಹುಂ. ಆ ರಮಾಕಾಂತನನ್ನು ಕರೆದುಕೊಂಡು ಬರುವವಳಿದ್ದಳು."

ವತ್ಸಲೆಯು ಒಮ್ಮೆಲೆ ಮೇಲೆ ನೋಡಿದಳು. ಆದರೆ ಕೂಡಲೆ ಅವಳಿಗೆ ನೆನಪಾಯಿತು.



ಗೋಡಂಬಿ ಒಡೆಯುವುದು ತನ್ನ ಕೆಲಸ. ಕಾರಖಾನದಾರನ ಆಪ್ತೇಷ್ಟರು ಎಂದು ಬರುವರೆಂಬುದನ್ನು ತೆಗೆದುಕೊಂಡು ತಾನೇನು ಮಾಡುವದು?

"ಬರದೆ ಇರಲಿಕ್ಕೆ ಏನಾಯಿತು?"

"ಆ ರಮಾಕಾಂತನ ಹೆಂಡತಿ ಸತ್ತಳಂತೆ!"

"ಸತ್ತಳೇ ? ಒಳ್ಳೆಯದಾಯಿತು. ಪಾರಾದಳು ಪುಣ್ಯವಂತೆ !"

ಕಾರಕೂನನ ಈ ಟಿಪ್ಪಣಿಯೊಡನೆಯೇ ವತ್ಸಲೆ ಮತ್ತೆ ಮೇಲೆ ನೋಡಿದಳು. ಇದು ದಾದಾ ಅವರ ಲಕ್ಷ್ಯಕ್ಕೆ ಬಂದಿತು. ಅವರಂದರು; "ನೋಡಿರಿ, ಕೆಲಸದ ಕಡೆಗೆ ಲಕ್ಷ್ಯ ಅದೆ ಏನು ಈ ಹುಡುಗೀದು ! ಕೂಲಿ ಮಾತ್ರ ಭರಪೂರ ಬೇಕು !"

ವತ್ಸಲೆ ಮೋರೆ ಕೆಳಗೆ ಹಾಕಿ ತನ್ನ ಕೆಲಸವನ್ನು ಮಾಡಹತ್ತಿದಳು.

"ಮೈಲಿಗೆ ಮುಗಿದಿಂದ ಬಂದಾರು ಆ ರಮಾಕಾಂತ" ಎಂದ ಕಾರಕೂನ.

"ಮತ್ತೊಂದು ಮೈಲಿಗೆ ಬಂತಲ್ಲ, ಅವರಿಗೆ ! ಆ ನಟಿ ಸುರಂಗೆಗೆ ಅಜಾರಿ ಬಹಳವಾಗಿದೆಯಂತೆ !"

"ಈ ರಮಾಕಾಂತ ಅಂದರೇನು ಡಾಕ್ಟರ ಇರುವರೇನು ?" ಎಂದು ಕಣ್ಣು ಪಿಳುಕಿಸುತ್ತ ಕಾರಕೂನನು ಪ್ರಶ್ನೆ ಮಾಡಿದ.

"ಇವರು ನಾಟಕಕಾರರು, ಅವಳು ನಟಿ."

ವತ್ಸಲೆಯ ಲಕ್ಷ್ಯ ಕೆಲಸದ ಮೇಲಿಂದ ಹಾರಿಹೋಯಿತು. ಕಾಶಿಯು ಮೊಳಕೈಯಿಂದ ತಿವಿದು ಎಚ್ಚರಿಕೆ ಕೊಟ್ಟಳು.

ಇನ್ನೊಂದು ಪತ್ರ ಓದುತ್ತ ದಾದಾ ಅವರು ಅಂದರು– "ಬೇಡವಾದದ್ದೆ ಬರುವದು ಹಣೆಬರಹಕ್ಕೆ."

"ಗೋಡಂಬಿ ಧಾರಣಿ ಮತ್ತೆ ಇಳಿಯಿತೋ ಏನು?"

"ಛೇ ! ಬಾಪ್ಪಾ ಅವರು ಕೆಲವು ದಿವಸದಲ್ಲಿ ಬರುವವರಿದ್ದಾರೆ ಇತ್ತಕಡೆ !"

ಕಾರಕೂನ ಮತ್ತು ದಾದಾ ಅವರ ನಡುವೆ ಕಣ್ಣು ಸನ್ನೆಗಳಾದವು. ಆದರೆ ಕಾಶಿಯ ಲಕ್ಷ್ಯವು ಅತ್ತಕಡೆಗೆ ಇರಲಿಲ್ಲ. ಅವಳು ಉತ್ಸುಕತೆಯಿಂದ ಕೇಳಿದಳು– "ಎಂದ ಬರತಾರ ದೇವ ಬಾಪ್ಪಾ ಅವರು ?"

ತಿರಸ್ಕಾರದಿಂದ ತಲೆಯಲ್ಲಾಡಿಸಿ ದಾದಾ ಅವರು ಹೊರಟುಹೋದರು. ಸ್ವಲ್ಪ ವೇಳೆಯಲ್ಲಿ ಸೋನ್ಯಾ ಕೆರೆಯ ಕಡೆಗೆ ಹೋದಾನೆಂದು ನೋಡಲಿಕ್ಕೆ ಕಾಶಿಯು ಮನೆಗೆ ಹೊರಟಳು.

ಹನ್ನೊಂದು ಗಂಟೆಯವರೆಗೆ ಕೆಲಸ ಒಂದೇಸವನೆ ನಡೆದಿತ್ತು. ವತ್ಸಲೆಯ ಸುತ್ತುಮುತ್ತಲಿನ ಹೆಂಗಸರು ಕೊಂಕಣಿ ಭಾಷೆಯಲ್ಲಿ ಗುಜುಗುಟ್ಟುತ್ತ ಗೋಡಂಬಿ ಒಡೆಯುತ್ತಿದ್ದರು. ಚಿಕ್ಕಂದಿನಲ್ಲಿ ಮಾಲವಣದ ಕಡೆಗೆ ಇದ್ದಳಾದಕಾರಣ ಅವರ ಮಾತು ವತ್ಸಲೆಗೆ ತೀರ ತಿಳಿಯದಂತೇನೂ ಇರಲಿಲ್ಲ. ಅವರು ಏನು ಮಾತಾಡಿದರೂ ಅವರ ವಿಷಯಗಳು ಎರಡೇ ಇದ್ದವೆಂದು ವತ್ಸಲೆಗೆ ಅನಿಸಿತು. ಒಂದು ಅನ್ನದ ಮಾತು ! ಇನ್ನೊಂದು ಪ್ರೇಮದ

ಮಾತು ! ಆದರೆ ಈ ಎಲ್ಲ ಮಾತೂ ಕರುಣರಸದಿಂದ ತುಂಬಿಹೋಗಿದ್ದವು. ಒಬ್ಬಳು ಹಿಂದಿನ ರಾತ್ರಿ ಗಂಜಿಯ ಹೊರತು ಮತ್ತೇನೂ ಉಂಡಿದ್ದಿಲ್ಲವಾದರೆ ಒಬ್ಬಳ ಗಂಡ ರಾತ್ರಿಯಲ್ಲಿ ವಿಪರೀತ ಸೆರೆಕುಡಿದು ಬಂದಿದ್ದ, ಒಬ್ಬಳ ಬೇನೆಯ ಮಗುವಿಗೆ ಔಷಧಕ್ಕೆ ಬೇಕಾದ ಹಾಲು ಸಿಕ್ಕಿರಲಿಲ್ಲವಾದರೆ ಒಬ್ಬಳ ಅಣ್ಣ ಮುಂಬಯಿಗೆ ಹೋದವನು ಕ್ಷಯದಿಂದ ಹಾಸಿಗೆ ಹಿಡಿದು ಈಗ ಸಾಯುವನೋ ಇನ್ನೊಂದು ಗಳಿಗೆಗೆ ಸಾಯುವನೋ ಅನ್ನುವ ಹಾಗೆ ಆಗಿತ್ತು. ಅವರ ಬದುಕೆಲ್ಲ ದುಃಖ ದೈನ್ಯಗಳ ರಾಜ್ಯವೇ ಆಗಿತ್ತು.

ವತ್ಸಲೆಯ ಮನಸ್ಸಿನಲ್ಲಿ ವಿಚಾರಗಳ ಬಿರುಗಾಳಿಯೇ ಎದ್ದಿತು. ಆ ಎಲ್ಲ ಹೆಣ್ಣಮಕ್ಕಳೂ ಸಾಕ್ಷಾತ್ ಅನ್ನಪೂರ್ಣೆಯರೇ ಆಗಿದ್ದಿಲ್ಲವೆ? ಧಾರೆಯಾಗಿ ಬೀಳುವ ಮಳೆಯಲ್ಲಿ ಹೊಲಗಳಲ್ಲಿ ದುಡಿದು, ಸುಡು ಬಿಸಿಲಿನಲ್ಲಿ ಕಟ್ಟಿಗೆಯ ಹೊರೆಗಳನ್ನು ಹೊತ್ತು, ಗೋಡಂಬಿಯ ಹೊಗೆಯಲ್ಲಿ ಕತ್ತು ಮುರಿಯುವವರೆಗೆ ಶ್ರಮಿಸುವ ಇವರಿಗೆ ಬರುವುದೇನು ? ಹೊಟ್ಟೆ ತುಂಬ ಅನ್ನ ಕೂಡ ಇಲ್ಲ. ಅವಳು ವಿಲಕ್ಷಣ ದೃಷ್ಟಿಯಿಂದ ಆ ಕಾರಖಾನೆಯನ್ನೆಲ್ಲ ನೋಡಿದಳು. ತಲೆಯ ಮೇಲೆ ಕಾದ ತಗಡುಗಳು, ಮಗ್ಗುಲಲ್ಲಿ ಗೋಡಂಬಿಯ ಭಟ್ಟಿ, ಪ್ರತಿಯೊಬ್ಬರೆದುರಿಗೂ ಕರಿ ಸಿಪ್ಪೆಗಳ ರಾಶಿ, ಕೆಲಸಮಾಡುವವರ ಕಪ್ಪು ಮುಸುಕಿದ ಕೈಗಳು, ಒಡೆದ ಗೋಡಂಬಿಗಳ ವಿಚಿತ್ರವಾದ ವಾಸನೆ ಇವುಗಳ ಹೊರತು ಅಲ್ಲಿ ಮತ್ತೆ ಏನೂ ಕಾಣಲಿಲ್ಲ. ಜೀವನ ಮತ್ತು ಕಲೆ! ಸಾವಿರಾರು ರೂಪಾಯಿ ವೆಚ್ಚಮಾಡಿ ಏರ್ಪಡಿಸಿದ ನಾಟಕಗಳು, ಚಿತ್ರಕಲೆಯ ಪ್ರದರ್ಶನಗಳು, ಸಂಗೀತ ಕಛೇರಿಗಳು ಅವಳ ಕಣ್ಣಮುಂದೆ ನಿಂತವು. ಆ ಜಗತ್ತು ಮತ್ತು ಈ ಜಗತ್ತು ಈ ಎರಡರಲ್ಲಿ ಯಾವ ಸಂಬಂಧವೂ ಇಲ್ಲವೆ?

ಹನ್ನೊಂದು ಗಂಟೆಗೆ ಕೆಲಸ ಮುಗಿಯಿತು. ಇನ್ನು ಲೆಕ್ಕಕ್ಕೆ ಪ್ರಾರಂಭ. ಈಗ ಕೈಗೆ ಬರುವ ದುಡ್ಡು ತಕ್ಕೊಂಡು ಅಕ್ಕಿಯನ್ನು ಕೊಳ್ಳಲಿಕ್ಕೆ ಪೇಟೆಗೆ ಹೋಗಬೇಕು. ಮನೆಯಲ್ಲಿ ಮಕ್ಕಳು ಅತ್ತು ರಂಬಾಟ ಮಾಡಿದ್ದಾರು, ಬೇನೆಯ ಗಂಡನನ್ನು ಹಾಗೇ ಬಿಟ್ಟು ಬಂದೆ, ಅವನ ಗತಿ ಏನಾಗಿರಬಹುದು, ಈ ನಾನಾತರದ ಎಳೆತಗಳಿಂದ ತಮ್ಮ ಲೆಕ್ಕವು ಬೇಗನೆ ಮುಗಿಯಬೇಕೆಂದು ಹೆಂಗಸರು ಧಡಪಡಿಸಹತ್ತಿದರು. ನಾಟಕ ಸಿನೇಮಾಗಳ ಮೊದಲನೆಯ ಆಟದ ದಿನ ಮಾತ್ರ 'ಬಿಳಿಯಂಗಿ'ಯವರು ಈ ರೀತಿ ಆತುರಪಡುವರೆಂಬುದು ವತ್ಸಲೆಯ ಮನಸ್ಸಿನಲ್ಲಿ ಸುಳಿಯದೆ ಹೋಗಲಿಲ್ಲ. ಅವಳಿಗೆ ಆ ಕಾರಖಾನೆಯು ಕೊಂಡವಾಡೆಯಂತೆ ತೋರಿತು. ಪಶುಗಳಂತೆ ಕೂಲಿಕಾರರ ಆಯುಷ್ಯ ! ಅವರಿಗೆ ಸ್ವತಂತ್ರತೆಯಿಲ್ಲ, ಆನಂದವಿಲ್ಲ, ಸಾಯುವವರೆಗೆ ಹೊಟ್ಟೆಗಾಗಿ ದುಡಿಯುವುದು, ಯಜಮಾನನು ಕೊಟ್ಟದ್ದನ್ನು ತಿನ್ನುವುದು!

ಕಟ್ಟಕಡೆಗೆ ವತ್ಸಲೆಯ ಸರದಿ ಬಂದಿತು. ಕಾರಕೂನನು ಉಚ್ಚಸ್ವರದಿಂದ ಕರೆದ. 'ಕೃಷ್ಣಾ':

ವತ್ಸಲೆಯು ಕಟ್ಟಿಗೆಯ ಗೂಡುಗಳೊಳಗಿಂದ ಹೊರಬೀಳುವ ಪಾರಿವಾಳಗಳಂತೆ ಕಾರಖಾನೆಯೊಳಗಿಂದ ಹೊರಬೀಳುವ ಹೆಂಗಸರ ಕಡೆಗೆ ನೋಡುತ್ತಿದ್ದಳು. ಅವಳ ಲಕ್ಷ್ಯವು ಕಾರಕೂನನ ಕರೆಯ ಕಡೆಗೆ ಹೋಗಲಿಲ್ಲ.

"ಕೃಷ್ಣಾ– ಏ ತಂಗೀ."



ವತ್ಸಲೆಯು ಎಚ್ಚತ್ತು ಮುಂದೆ ಬಂದಳು.

"ಕಿವಿ ಒಡೆದು ಹೋದೂ ಏನು? ಮತ್ತ ಇಲ್ಲಿ ಗಂಡನ ಹೆಸರು ಹೇಳಿಲ್ಲ?"

ವತ್ಸಲೆಯು ಏನೂ ಮಾತಾಡಲಿಲ್ಲ.

"ಹೆಸರ ಬಿಟ್ಟೀದಿ ಕಾಣತದ ಅವನದು?"

ಹಃಹಃ ಮಾಡುತ್ತ ಕಾರಕೂನನಂದ– "ಹೌದು ! ಸುಧಾರಣೆಯ ಕಾಲಲ್ಲs ಈಗ ! ನಮ್ಮ ಸುಲೋಚನಾಬಾಯಿಯವರು ಲಗ್ನಾನs ಮಾಡಿಕೊಳ್ಳೂದಿಲ್ಲ ಅನ್ನತಾರ. ನೀ ಲಗ್ನಾಮಾಡಿಕೊಂಡು ಗಂಡಗ ರಜಾ ಕೊಟ್ಟಬಿಟ್ಟೇನು ? ಹ ಹ ಹ ! ಕಾಯಮ ರಜಾ ಏನು...?"

ವತ್ಸಲೆಯು ಸಂತಾಪದಿಂದಂದಳು– "ರೊಕ್ಕ ಕೊಡಿರಿ ನನ್ನವು."

"ಎಲ ! ಅಗದೀ ಶುದ್ಧ ಮಾತಾಡಲಿಕ್ಕೆ ಬ್ಯಾರೆ ಕಲಿತೀದಿ ! ಆದರೆ ಬರೆ ಶುದ್ಧ ಮಾತಾಡಲಿಕ್ಕ ಕಲ್ತರ ಗೋಡಂಬಿ ಒಡೀಲಿಕ್ಕೇನು ಬರೂದಿಲ್ಲ. ಇದ ನೋಡು ನಿನ್ನ ಕೆಲಸ, ಇಷ್ಟ ಚೂರ ಮಾಡಿ ಒಡದರ ನಾಳೆ ಕಾರಖಾನೀದು ದಿವಾಳಿ ಎದ್ದೀತು. ಇಕಾ ಆರು ದುಡ್ಡು !"

ನಾಲ್ಕು ತಾಸಿಗೆ ಆರು ದುಡ್ಡು !

ವತ್ಸಲೆಯ ಕಾಲಿಗೆ ಬಿಸಿಲಿನಿಂದ, ಹೃದಯಕ್ಕೆ ಇಂದು ನೋಡಿದ ನೋಟದಿಂದ, ಬರೆ ಬೀಳುತ್ತಿತ್ತು.

ನಾಲ್ಕು ತಾಸು ದುಡಿದರೆ ಈ ಕೂಲಿಕಾರರಿಗೆ ಆರು ದುಡ್ಡು ಸಿಗುವದು– ಸಾಂಗಲಿಯಲ್ಲಿ ತನ್ನ ಡಾಕ್ಟರರಾದ ಮಾಮಾ ಅವರು ಹೆಸರಿಗೆ ನಾಡಿಯನ್ನು ನೋಡಿದಂತೆ ಮಾಡಿ ಐದು ನಿಮಿಷಗಳಲ್ಲಿ ಎರಡು ರೂಪಾಯಿ ಗಳಿಸುತ್ತಾರೆ. ತನ್ನ ಮಾವನಿಗಂತೂ ಇನ್ನೂರು ರೂಪಾಯಿಗಳ ಪೆನ್ಶನ್ ಇತ್ತು ! ಈ ಬಡವರಿಗೆ ಬೇನೆ ಬಿದ್ದರೆ ಸಂಬಳವಿಲ್ಲ ! ಮುಪ್ಪಿನಲ್ಲಿ ಪೆನ್ಶನ್ ಇಲ್ಲ ! ಅಲ್ಲದೆ ಹರೆಯದಲ್ಲಿ ಹೊಟ್ಟೆತುಂಬ ಅನ್ನವಿಲ್ಲ !

ಪೇಟೆಯಲ್ಲಿ ಹೋಗಹೋಗುತ್ತ ಅವಳು ನೊಡಿದಳು. ಕಾರಖಾನೆಯಲ್ಲಿ ಬಂದಿದ್ದ ಒಬ್ಬಳ ಹುಡುಗ ಒಂದು ದುಡ್ಡಿನ "ಭಜೀ" ಬೇಡುತ್ತಿದ್ದ. ಅವಳು ಸ್ವಲ್ಪಹೊತ್ತು ಬೀದಿಯ ಬದಿಗಿದ್ದ ಆ ಅಂಗಡಿಯ ಮುಂದೆ ನಿಂತಳು. ಆದರೆ ಅವಳಿಗೆ ಆ ಹುಡುಗನ ಆಸೆಯನ್ನು ಪೂರೈಸುವುದಾಗಲಿಲ್ಲ. ಹುಡುಗ ಅಳತೊಡಗಿದ. ಅವನಿಗೊಂದು ಏಟು ಕೊಟ್ಟು ಎಳೆದುಕೊಂಡು ಮುಂದೆ ಹೋದಳು.

ನಿನ್ನೆ ರಾತ್ರಿ ವತ್ಸಲೆಗೆ ಸೂರ್ಯಪ್ರಕಾಶವೆಂದರೆ ಜೀವನವೆಂದು ಎನಿಸಿತ್ತು. ತಲೆಯ ಮೇಲೆ ಸುಡುತ್ತಿದ್ದ ಸೂರ್ಯನೂ ಕಾಲ ಕೆಳಗೆ ಬರೆ ಕೊಡುತ್ತಿದ್ದ ಭೂಮಿಯೂ ಈಗ ಅವಳಿಗೆನ್ನುತ್ತಿದ್ದವು: "ನೋಡಿದೆಯಾ, ಇದು ಜೀವನ !" ಎಂದು.

ಮನೆ ಮುಟ್ಟುವುದರಲ್ಲಿ ಅವಳು ಬೆವರಿನಿಂದ ತೊಯ್ದುಹೋದಳು.

ಬಾಗಿಲಲ್ಲಿ ಕಾಲು ಇಡುತ್ತಲೆ ಕಾಶಿಯು ಕೈ ಮುಂದಕ್ಕೆ ಮಾಡಿ "ಎಷ್ಟು ರೊಕ್ಕ ಸಿಕ್ಕವು?" ಎಂದಳು.

"ಆರು ದುಡ್ಡು" ಎಂದು ವತ್ಸಲೆಯು ಅವಳ ಕೈಯಲ್ಲಿ ರೊಕ್ಕ ಕೊಡುತ್ತ ಹೇಳಿದಳು.

"ಹೀಂಗ ಶ್ರೀಮಂತರಂಗ ಕೆಲಸಮಾಡಿದರ ನಿನ್ನ ಹೊಟ್ಟಿ ಹೆಂಗ ತುಂಬೀತs ಹುಡುಗೀ?"

ವತ್ಸಲೆಯು ಸುಮ್ಮನೆ ನಕ್ಕಳು. "ಹೊಟ್ಟೆಗಾಗಿ ಶ್ರೀಮಂತರು ಎಂದಾದರೂ ಕೆಲಸಮಾಡುತ್ತಾರೆಯೆ?" ಎಂದು ಆ ನಗೆಯಿಂದ ಅವಳು ಕಾಶಿಯನ್ನು ಕೇಳಿದಳೇನೊ !

## ೮

## ಸುಂದರ ಚಿತ್ರ

ಡಾಕ್ಟರನ ಹೇಳಿಕೆಯ ಮೇಲಿಂದ ಮ್ಯಾನೇಜರನೂ ರಮಾಕಾಂತನೂ ಸುರಂಗೆಯ ಕೋಣೆಯಿಂದ ಹೊರಗೆ ಬಂದರು. "ನಾಟಕಕ್ಕೆ ಒಳ್ಳೇ ಮುಹೂರ್ತವೇನೂ ಬರಲಿಲ್ಲ" ಎಂದು ರಮಾಕಾಂತ ಸಿಗರೇಟು ಹೊತ್ತಿಸುತ್ತ ನುಡಿದ.

"ಆ ದಿವಸ ಅವಳಿಗೆ ದೃಷ್ಟಿಯೇ ಆಯಿತು" ಎಂದರು ಮ್ಯಾನೇಜರ.

"ದೃಷ್ಟಿ ಆಗುವಹಾಗೆ ಇದ್ದೇ ಇರುವಳು ಸುರಂಗಾ ! ಇರಲಿ, ಎರಡನೇ ದಿವಸ ಬಂದಿದ್ದನಲ್ಲಾ, ಅವನ ಸುಳಿವು ಹತ್ತಿತೇನು?"

"ಹೇಗೆ ಹತ್ತಬೇಕು? ಕೊಂಕಣದ ಯಾವನಾದರೊಬ್ಬ ಗುರುತಿನ ಮನುಷ್ಯ ಇರಬಹುದು ಅಂತ ಆಳುಮಕ್ಕಳು ಒಳಗೆ ಕರೆದುಕೊಂಡು ಹೋದರು."

"ಆದರೆ ಅವರವರೊಳಗೆ ಮಾತುಕತೆ ಏನಾದವು?"

"ಯಾರಿಗೆ ಗೊತ್ತು?"

"ಯಾರೋ ದೂರಿನ ಆಪ್ತ ಅಂತ ಹೇಳುತ್ತಾಳೆ. ಅಲ್ಲವೆ?"

"ಆದರೆ ಅವನ ಹೆಸರು ದೆಸೆ ಏನೂ ಹೇಳಿರುವದಿಲ್ಲ ! ಆತ ದಾರೀ ಹಿಡಿದು ಹೋಗುವಷ್ಟರಲ್ಲಿಯೇ ಚಿಟ್ಟನೇ ಚೀರಿ ಅರಿವುತಪ್ಪಿ ಬಿದ್ದುಬಿಟ್ಟಳು."

"ಏನೋ ವಿಚಿತ್ರವಾಗಿದೆ !"

ಇಬ್ಬರೂ ಹೊಗೆಯ ವರ್ತುಲಗಳ ಕಡೆಗೆ ನೋಡುತ್ತ ಸುಮ್ಮನೆ ಕುಳಿತರು. ಆ ವರ್ತುಲಗಳ ಆಕೃತಿಗಳು ಕ್ಷಣಕ್ಷಣಕ್ಕೆ ಬದಲಾಗುತ್ತಿದ್ದಂತೆ ಸುರಂಗೆಯ ಖಾಯಿಲೆಯ ವಿಷಯಕ್ಕೆ ಅವರ ತರ್ಕಗಳೂ ಬದಲಾಗುತ್ತಿದ್ದವು. ಇಷ್ಟರಲ್ಲಿ ಡಾಕ್ಟರು ಟಾವೆಲಿನಿಂದ ಕೈ ಒರಸಿಕೊಳ್ಳುತ್ತ ಕೋಣೆಯಲ್ಲಿ ಬಂದರು. ಅವರು ಖುರ್ಚಿಯ ಮೇಲೆ ಕೂಡುತ್ತಲೇ ಮ್ಯಾನೇಜರರು ಅವರ ಕಡೆಗೆ ಕರುಣದೃಷ್ಟಿಯಿಂದ ನೋಡಿದರು. ಸುರಂಗೆಗೆ ಖಾಯಿಲೆಯೆಂದರೆ ಕಂಪನಿಯ ಮರಣವೇ ಎಂಬಂತಿದ್ದದ್ದರಿಂದ ಅವರ ಆ ದೃಷ್ಟಿಯಲ್ಲಿ ಅಸ್ವಾಭಾವಿಕವೇನೂ ಇದ್ದಿಲ್ಲ.

"ಏನು ಹೊರಟಿತು ತಪಾಸಿನಲ್ಲಿ."

"ಆಕೆಯ ಮನಸ್ಸಿಗೆ ಎಂಥದೋ ಒಂದು ಪೆಟ್ಟು ತಗಲಿದೆ. ಇದು ನೋಡಿರಿ



ಮ್ಯಾನೇಜರ, ನಾನು ಒಂದಿಷ್ಟು ಪೇಶಂಟಳ ಹಿಸ್ಟರೀ (ಇತಿಹಾಸ) ಕೇಳಲಾ?" ಎಂದು ರಮಾಕಾಂತನ ಕಡೆಗೆ ನೋಡುತ್ತ ಡಾಕ್ಟರರು ಪ್ರಶ್ನೆ ಕೇಳಿದರು.

"ಅವಶ್ಯ!"

"ಮಿಸ್ ಸುರಂಗಾ ಅಲ್ಲವೆ ಇವಳ ಹೆಸರು?"

"ಹೌದು"

"ಲಗ್ನವಾಗಿದೆಯೇ ಇವಳದು ? ಸ್ವಲ್ಪ ವಿಚಿತ್ರ ಪ್ರಶ್ನೆ ! ಆದರೂ ಕೇಳಿದ ಹೊರತು ಉಪಾಯವಿಲ್ಲ."

"ಲಗ್ನ ಆಗಿಲ್ಲ !"

"ಒಳ್ಳೇದು. ಪ್ರೇಮದ್ದೇನಾದರೂ ಪ್ರಕರಣ?"

"ಛೇ ! ಈಗ ಆರು ವರ್ಷದಿಂದ ಇದ್ದಾಳೆ ನನ್ನ ಕಂಪನಿಯೊಳಗೆ ! ಈ ವಿಷಯದಲ್ಲಿ ನಾನು ವಿಶೇಷ ಎಚ್ಚರದಿಂದ ನೋಡುತ್ತಿರುತ್ತೇನೆ."

"ಆಶ್ಚರ್ಯ, ನೋಡಿರಿ ! ಇಂಥಾದ್ದೇ ಒಂದು ಕೇಸನ್ನು ಹಿಂದೊಮ್ಮೆ ನೋಡಿದೆ. ಆದರೆ ಆ ಮಗ ಕೊಲೆ ಮಾಡಿದ್ದ. ಅದೇನು ಅವನಿಗೆ ದಕ್ಕಿಸಲಿಕ್ಕಾಗಲಿಲ್ಲ. ಅದರಿಂದ ತಲೆ ತಿರುಗಿಬಿಟ್ಟಿತು–"

ಸುರಂಗೆ ಮತ್ತು ಕೊಲೆಪಾತಕಿ ಇವರ ಹೋಲಿಕೆ !

ಡಾಕ್ಟರ ಮತ್ತು ಪೊಲೀಸ ಜವಾನ ಇವರ ರಸಿಕತೆ ಎಷ್ಟು ? ಎಂಬ ದೃಷ್ಟಿಯಿಂದ ರಮಾಕಾಂತನು ಅವರ ಕಡೆಗೆ ನೋಡಿದ.

"ಆಕೆಯ ಮನಸ್ಸಿನ ಮೇಲಿದ್ದ ಭಾರ ಕಡಿಮೆ ಆಗಬೇಕು–"

"ಆಹೊತ್ತು ಬಂದ ಮನುಷ್ಯ ಜೋತಿಷಿಗೀತಿಷಿ ಇದ್ದನೇನು ಮತ್ತೇ?" ರಮಾಕಾಂತನು ಮ್ಯಾನೇಜರರಿಗೆ ಪ್ರಶ್ನೆ ಮಾಡಿದ.

"ಯಾಕೆ?"

"ಇನ್ನು ಸ್ವಲ್ಪ ದಿವಸದಲ್ಲಿ ನಿನ್ನ ತಲೆ ಹೊಡೆಯುವರು ಎಂದೇನಾದರೂ ಆ ಹುಚ್ಚ ಹೇಳಿ ಹೋಗಿದ್ದನಂದರೆ–"

"ಕವಿ ಕಲ್ಪನೆ ಇದು" ಎಂಬರ್ಥದ ನಗೆಯನ್ನು ನಗುತ್ತ ಮ್ಯಾನೇಜರರು ಡಾಕ್ಟರರನ್ನು ಕಳಿಸಲಿಕ್ಕೆ ಎದ್ದರು. ರಮಾಕಾಂತನು ಸುರಂಗೆಯ ಕೋಣೆಯ ಕಡೆಗೆ ತಿರುಗಿದ.

ಕಿಟಕಿಗಳಿಗೆ ಪರದೆಗಳನ್ನು ಇಳಿಬಿಟ್ಟಿದ್ದರಿಂದ ಮುಂಜಾನೆ ಹತ್ತು ಗಂಟೆಯ ಹೊತ್ತಾಗಿದ್ದರೂ ಅದೇ ಬೆಳಗಾದಂತೆ ಭಾಸವಾಗುತ್ತಿತ್ತು. ಮಂಚದ ಮೇಲೆ ಬಿದ್ದುಕೊಂಡು ಸುರಂಗೆಯು ಕೈಯಲ್ಲೇನೋ ಹಿಡಿದುಕೊಂಡು ಅದರ ಕಡೆಗೆ ನೋಡುತ್ತಿದ್ದಳು. ರಮಾಕಾಂತನು ಮೆಲ್ಲನೆ ಒಳಗೆ ಬಂದದ್ದರಿಂದ ಮೊದಲು ಅವಳಿಗೆ ಅವನ ಸುಳಿವೇ ಗೊತ್ತಾಗಲಿಲ್ಲ. ಯಾರೋ ಸಮೀಪಕ್ಕೆ ಬಂದರೆಂದು ಅನಿಸಿದ ಕೂಡಲೆ ಅವಳು ಗಡಿಬಿಡಿಯಿಂದ ಕೈಯೊಳಗಿನ ಫೋಟೋ ಆಚೆಯ ತಲೆದಿಂಬಿನ ಮಗ್ಗುಲಿಗೆ ಇಟ್ಟಳು.

"ಯಾರದದು ಫೋಟೋ?"

"ನನ್ನದೇ!"

"ಹಾಗಾದರೆ ಕನ್ನಡಿಯನ್ನೇ ಹಿಡಿದುಕೊಳ್ಳಬೇಕು ಮೋರೆಯ ಮುಂದೆ !"

"ಈಗಿನದಲ್ಲ ಅದು, ಹಿಂದಕ್ಕೆ ತೆಗೆದದ್ದು !"

"ಹಿಂದಿನ ಫೋಟೊ ನೋಡುತ್ತ ಕೂಡಲಿಕ್ಕೆ ನೀಯೇನೂ ಮುದುಕಿ ಆಗಿಲ್ಲ. ಎಂದು ತೆಗೆದದ್ದು ಆ ಫೋಟೋ ?"

"ಆಗಿರಬಹುದು ೫–೬ ವರ್ಷ."

"ಎಲ್ಲಿ ತೆಗಿಸಿದ್ದು?"

"ಬೆಳಗಾಂವಿಯಲ್ಲಿ"

"ಯಾರು ತೆಗೆದರು ?"

ಸುರಂಗೆಯು ಕೋಣೆಯ ಭಿತ್ತಿನ ಕಡೆಗೆ ದೃಷ್ಟಿಯನ್ನು ತಿರುವಿದಳು ! ಒಮ್ಮೆ ಎದ್ದು ಆ ಫೋಟೋ ನೋಡಬೇಕೆಂದು ರಮಾಕಾಂತನಿಗೆನಿಸಿತು. ಆದರೆ ಅದನ್ನು ತೋರಿಸುವುದು ಸುರಂಗೆಯ ಮನಸ್ಸಿನಲ್ಲಿದ್ದರೆ ತಾನಾಗಿಯೇ ಮುಂದೆ ಹಿಡಿಯುತ್ತಿದ್ದಳು. ಅವಳು ಹಾಸಿಗೆ ಹಿಡಿದಾಗ ಅವಳ ಮನಸ್ಸಿನ ವಿರುದ್ಧ ವರ್ತನೆಯಿಂದ ಅವಳನ್ನು ಮತ್ತಿಷ್ಟು ನೋಯಿಸಿದಂತೆ ಮಾತ್ರ ಆದೀತೆಂದು ತಿಳಿದು ರಮಾಕಾಂತನು ಅವಳ ಕಡೆಗೆ ನೋಡುತ್ತ ಸ್ವಸ್ಥವಾಗಿ ಕುಳಿತುಬಿಟ್ಟನು.

ಸುರಂಗೆಯು ಈಗ ಎಂಟು ಹತ್ತು ದಿವಸಗಳಿಂದ ಮಾತ್ರ ಅಸ್ವಸ್ಥಳಾಗಿದ್ದಳು. ಆದರೆ ಪಾರಿಜಾತದ ಹೂವು ಅಂಗೈಯ ಉಷ್ಣತೆಯಿಂದ ಕೂಡ ಬಾಡಿಹೋಗುತ್ತದೆ. ಅವಳ ಕೋಮಲ ಶರೀರವು ಅದರಂತೆಯೆ ಬೇನೆಯಿಂದ ಬಾಡಿಹೋಗಿತ್ತು. ಜ್ವರದಿಂದ ಅವಳ ಮುಖದ ಮೇಲೆ ಬಂದ ಹಳದಿ ಛಾಯೆ, ಸಹಜವಾಗಿ ಕೈಮೇಲೆ ಮಾಡಿದರೆ ಮೊಳಕೈ ತನಕ ಸರಿದುಹೋಗುವ ಬಂಗಾರದ ಬಳೆಗಳು, ಬಣ್ಣವಿಲ್ಲದ್ದರಿಂದ ವಿಚಿತ್ರವಾಗಿ ತೋರುವ ಅವಳ ತುಟಿಗಳು, ಇವೆಲ್ಲ ಥಟ್ಟನೆ ರಮಾಕಾಂತನ ದೃಷ್ಟಿಗೆ ಬಿದ್ದವು. "ಇದು ಮೃತ್ಯುವಿನ ಅಸ್ಪಷ್ಟವಾದ ಛಾಯೆಯಲ್ಲವಷ್ಟೆ?" ಎಂಬ ಶಂಕೆಯೂ ಅವನಲ್ಲಿ ಹುಟ್ಟಿತು.

"ರಮಾಕಾಂತ, ನಿಮಗೊಂದು ಮಾತು ಕೇಳಬೇಕಾಗಿದೆ ನನಗೆ" ಎಂದು ಸುರಂಗೆಯು ಮೆಲ್ಲನೆ ಒಂದೊಂದೆ ಶಬ್ದವನ್ನುಚ್ಚರಿಸುತ್ತ ನುಡಿದಳು.

"ಅಗತ್ಯವಾಗಿ ಕೇಳಬಹುದು"

"ದೇವರು ನನ್ನನ್ನು ಏಕೆ ಹುಟ್ಟಿಸಿದ?"

"ನಮ್ಮಂಥವರಿಗೆ ನಿನ್ನ ಸೌಂದರ್ಯ ನೋಡಲಿಕ್ಕೆ ಸಿಗಲೆಂದು !"

"ಛೀ !" ಎಂದು ಸುರಂಗೆಯು ತಲೆಯಲ್ಲಾಡಿಸಿ ರಮಾಕಾಂತನ ಮಾತಿಗೆ ತನ್ನ ನಿಷೇಧವನ್ನು ವ್ಯಕ್ತಪಡಿಸಿದಳು.

"ನಾನು ಕಥೆ ಬರೆಯುವುದನ್ನು ಬಿಟ್ಟು ವೇದಾಂತಗ್ರಂಥ ಬರೆಯಲಿಕ್ಕೆ ಸುರುವು



ಮಾಡಿಲ್ಲ ಇನ್ನೂ !"

"ಮರಣವೆಂದರೆ ಮನುಷ್ಯ ಇಷ್ಟೇಕೆ ಹೆದರುತ್ತಾನೆ?" ಎಂದು ಸುರಂಗೆ ಎರಡನೇ ಪ್ರಶ್ನೆ ಕೇಳಿದಳು.

ರೋಗಿಯ ಮನಸ್ಸನ್ನು ಅನುಸರಿಸಿ ಹೋಗುವುದೇ ಹಿತವೆಂದು ರಮಾಕಾಂತನಿಗೆ ಗೊತ್ತಿದ್ದರಿಂದ ಅವನು ಸುಮ್ಮನಾದ.

ಸುರಂಗೆಯು ಮುಂದೆ ಕೇಳಿದಳು : "ಸುಖವು ಪಾಪದಲ್ಲಿದೆಯೋ ಪುಣ್ಯದಲ್ಲಿದೆಯೋ?"

ಹಾಸಿಗೆಯ ಮೇಲೆ ಬಿದ್ದುಕೊಂಡು ಇವಳು ಯಾವಾಗಲೂ ಮರಣದ ವಿಚಾರವನ್ನು ಮಾಡುತ್ತಿರಬೇಕೆಂಬುದು ರಮಾಕಾಂತನಿಗೆ ಮನದಟ್ಟಾಯಿತು. ಅವನಂದ– "ಮೊದಲು ಮೈಯಲ್ಲಿ ಗುಣವಾಗಲಿ, ಅಲ್ಲಿಂದ ಯಾವನಾದರೊಬ್ಬ ಶಂಕರಾಚಾರ್ಯನ ಕಡೆಗೆ ಹೋಗಿ ಕೇಳುವಿಯಂತೆ ಈ ಪ್ರಶ್ನೆ ! ನನ್ನ ಹೊಸ ಕಥೆಯೊಂದನ್ನು ಓದಿ ತೋರಿಸಲೇ ನಿನಗೆ ?"

ಅವಳು ಉತ್ಸುಕತೆಯಿಂದ ಕೇಳಿದಳು : "ಹೆಸರೇನು ಕಥೆಯದು?"

"ಸುಂದರ ಚಿತ್ರ !"

"ಸುಲೋಚನಾಬಾಯಿಯವರ ಮೇಲೆ ಬರದಿದ್ದೀರಿ ಅಂತ ಕಾಣತದೆ."

"ಯಾರ ಮೇಲೆ ಬರೆದಿರುವೆ ಅದನ್ನು ನೀನೇ ಹೇಳು. ಓದುವದಾದ ಮೇಲೆ–"

ರಮಾಕಾಂತ ಓದತೊಡಗಿದ. ಸುರಂಗೆಯು ಏಕಾಗ್ರಚಿತ್ತದಿಂದ ಕೇಳುತ್ತಿದ್ದಳು.

ಒಬ್ಬ ವೇಶ್ಯೆಯ ಮಗಳಿರುತ್ತಾಳೆ. ತಾಯಿಯ ವ್ಯವಸಾಯದ ಬಗ್ಗೆ ಅವಳಲ್ಲಿ ತಿರಸ್ಕಾರ ಹುಟ್ಟುತ್ತದೆ. ತಾಯಿ ಅವಳನ್ನು ಮನೆಯಿಂದ ಹೊರಗೆ ದೂಡುತ್ತಾಳೆ. ಚಿತ್ರಕಾರರ ಮುಂದೆ ಮಾಡೆಲ್ ಎಂದು ಕುಳಿತು ಅವಳು ತನ್ನ ಚರಿತಾರ್ಥ ಸಾಗಿಸುವಳು. ಆದರೆ ಅವಿವಾಹಿತ ಸ್ಥಿತಿಯಲ್ಲಿ ಇದ್ದು ಹೇಗಾದರೂ ಹೊಟ್ಟೆ ತುಂಬಿಕೊಂಡಿರುವುದರಲ್ಲಿ ಅವಳಿಗೆ ಸುಖವೆನಿಸುವದಿಲ್ಲ. ವೇಶ್ಯೆಯ ಮಗಳೊಡನೆ ಮದುವೆಯಾಗಲಿಕ್ಕೆ ಯಾರು ಸಿದ್ಧರಾಗಬೇಕು? ಕಟ್ಟಕಡೆಗೆ ಸಮುದ್ರದಲ್ಲಿ ಮುಳುಗಿ ತನ್ನ ರುಕ್ಷವಾದ ಬದುಕನ್ನು ಮುಗಿಸಬೇಕೆಂದು ನಿಶ್ಚಯ ಮಾಡುತ್ತಾಳೆ. ಕಗ್ಗತ್ತಲೆಯ ರಾತ್ರಿಯಲ್ಲಿ ಆತ್ಮಹತ್ಯೆಗಾಗಿ ಮನೆ ಬಿಟ್ಟು ಹೊರಬೀಳುತ್ತಾಳೆ. ಆದರೆ ಅವಳಿಗೆ ಧೈರ್ಯ ಸಾಲುವುದಿಲ್ಲ. "ನಾನು ಇಷ್ಟು ಚೆಲುವೆಯಾಗಿದ್ದೇನೆ. ನನಗೆ ಮರಣವಾದರೂ ಸುಂದರವಾದದ್ದು ಬೇಕೆಂ"ದು ಅವಳು ಒಂದು ಹುಣ್ಣಿಮೆಯ ರಾತ್ರಿ ಸಮುದ್ರದ ದಂಡೆಗೆ ಜೀವ ಕೊಡಲಿಕ್ಕೆ ಹೋಗುತ್ತಾಳೆ.

ಇಷ್ಟು ಕಥೆಯ ಭಾಗವನ್ನು ಓದಿದಮೇಲೆ ಸುರಂಗೆಗೆ ಕಥೆ ಹೇಗೆ ತೋರಿತೆಂಬುದನ್ನು ನೋಡಲಿಕ್ಕೆ ರಮಾಕಾಂತ ಮೇಲೆ ನೋಡಿ ಕೇಳಿದ–

"ನಿದ್ರೆ ಬಂದಂತೆ ಕಾಣತದೆ."

"ನಿದ್ರೆ ಅಷ್ಟೇ ಅಲ್ಲ. ಕನಸೊಂದು ಕಾಣಹತ್ತಿದೆ."

"ಎಂಥದ್ದು?"

"ನಿಮ್ಮ ಕೈಯಲ್ಲಿ ಇದೆಯಲ್ಲ ಅದೇ!"

ಸುರಂಗೆಯು ತಿಳಿಯದೆಯೆ ತನ್ನ ಕಥೆಯನ್ನೊಂದು ಸುಂದರವಾದ ಸ್ವಪ್ನಕ್ಕೆ ಹೋಲಿಸಿದ್ದು ರಮಾಕಾಂತನಿಗೆ ಸರಿಹೋಯಿತು. ಅವನು ಏನೋ ಮಾತಾಡಬೇಕೆನ್ನುವಷ್ಟರಲ್ಲಿ ಸುರಂಗೆ ಕೇಳಿದಳು–

"ಮರಣ ಅಂದರೆ ಇಷ್ಟು ಸುಲಭವೇ?"

ರಮಾಕಾಂತ ಕ್ಷಣಹೊತ್ತು ವಿಚಾರದಲ್ಲಿ ಬಿದ್ದ. ಸುರಂಗೆಯ ಪ್ರಶ್ನೆಯನ್ನು ನಗೆಯಲ್ಲಿ ತಪ್ಪಿಸಬೇಕೆಂದು "ನನಗೇನು ಅದರ ಅನುಭವ ಇಲ್ಲ !" ಎಂದ.

"ಅನುಭವ ಇಲ್ಲದೆ ಬರೆಯುತ್ತೀರೇಕೆ ಇದನ್ನೆಲ್ಲ ?"

"ಹಾಗಾದರೆ ಈ ಕಥೆಯೊಳಗಿನ ಹುಡುಗಿ ಏನು ಮಾಡಬೇಕಾಗಿತ್ತೆನ್ನುವಿ ನೀನು?"

"ಬದುಕಿರಬೇಕಾಗಿತ್ತು !"

"ಆದರೆ ಬದುಕಿರುವದು ಹೇಗೆ? ಪ್ರೇಮವಿಲ್ಲದೆ ಬದುಕಿರುವುದರಲ್ಲಿ ಏನು ಸ್ವಾರಸ್ಯ?"

"ಸುಮ್ಮನೆ ಬದುಕಿರುವುದರೊಳಗೂ ಆನಂದವಿದೆ. ನೀಲವಾದ ಮುಗಿಲು, ಹಸರು ಗಿಡ ನೋಡುವುದರಲ್ಲಿ, ಪಕ್ಷಿಗಳ ಕಿಲಕಿಲಾಟ ಕೇಳುವುದರಲ್ಲಿ, ಹೂವುಗಳನ್ನು ಮೂಸುವುದರಲ್ಲಿ, ಹೆಚ್ಚೇನು ಮೆತ್ತಗಿನ ಮಳಲಿನಲ್ಲಿ ನಡೆಯುವುದರಲ್ಲಿ ಕೂಡ ಆನಂದವಿದೆ !"

ಸುರಂಗೆಯ ತಲೆಯು ಸಡಿಲಾಗಿದ್ದರಿಂದ ಅವಳು ಬಡಬಡಿಸುತ್ತಿರುವಳೋ ಇಲ್ಲವೆ ಯಾವದಾದರೂ ನಾಟಕದೊಳಗಿನ ಮಾತುಗಳನ್ನು ಹೇಳುತ್ತಿರುವಳೋ ಎಂಬುದು ರಮಾಕಾಂತನಿಗೆ ತಿಳಿಯಲಿಲ್ಲ.

ಅವಳು ಮುಂದೆ ನುಡಿದಳು– "ನನಗೇನು ನಿಮ್ಮಂತೆ ಬರೆಯಲಿಕ್ಕೆ ಬರುವದಿಲ್ಲ. ಆದರೆ ಕಥೆ ಕೇಳತಾ ಕೇಳತಾ ಸುಮ್ಮನೆ ಒಂದು ಕಲ್ಪನೆ ಬಂದಿತು ನನಗೆ !"

"ಏನದು ?" ಎಂದು ರಮಾಕಾಂತ ಅಭಿಮಾನದಿಂದ ಕೇಳಿದ.

"ಆ ಹುಡುಗಿ ಜೀವ ಕೊಡಲಿಕ್ಕೆಂದು ಹೋದಳಲ್ಲವೆ ಸಮುದ್ರದ ದಂಡೆಗೆ ?"

"ಹೌದು."

"ಹಾಗಾದರೆ ಉಸುಕಿನಲ್ಲಿ ಹಾಯ್ದೇ ಹೋಗಿರಬೇಕಲ್ಲವೆ ಅವಳು ?"

"ಅದರ ವರ್ಣನೆ ಮುಂದೆ ಇದೆ ಅಲ್ಲ !"

"ಆ ಮೆತ್ತಗಿನ ಉಸುಕಿನ ಮೇಲಿಂದ ನಡೆದುಹೋಗಿಯೂ ಜೀವಕೊಡಬೇಕೆಂದು ಹೇಗೆ ಅನಿಸಿತು ಆಕೆಗೆ?"

ರಮಾಕಾಂತ ಮುಂದೆ ಓದತೊಡಗಿದ.

"ಅವಳು ದಂಡೆಯ ಮೇಲೆ ಬಂದು ನಿಂತಳು. ಭರತಿಯ ತೆರೆಗಳು ಪುನಃ ಪುನಃ ಅವಳ ಕಾಲುಗಳವರೆಗೆ ಬಂದು ಹೋಗುತ್ತಿದ್ದವು. ಅವಳನ್ನು ಆಡಲಿಕ್ಕೆ ಕರೆಯುತ್ತಿದ್ದುವೇನೋ ಅವು. ಅವುಗಳ ಸಪ್ಪಳವು ಯಮದೂತರ ಆಯುಧಗಳ ಖಣಖಣಾಟದಂತೆ ಅವಳಿಗೆ ಭಯಂಕರವೆನಿಸಿತು. ಅವಳ ಅರ್ಧೋನ್ನತ ಸ್ತನಭಾಗದ ಮೇಲಿಂದ ಸೆರಗು ಹಾರಿಸಬೇಕೆಂದು



ಉಚ್ಛೃಂಖಲವಾದ ಗಾಳಿಯು ಯತ್ನಿಸುತ್ತಿತ್ತು. ಆದರೆ ಆ ಕಡೆಗೆ ಅವಳ ಲಕ್ಷ್ಯವೇ ಇರಲಿಲ್ಲ. ಸ್ತ್ರೀಸುಲಭವಾದ ನಾಚಿಕೆ ! ಆದರೆ ಮೃತ್ಯುವಿನ ಬಾಗಿಲಲ್ಲಿ ಸ್ತ್ರೀಪುರುಷರೆಂಬ ಭೇದವೆಲ್ಲಿಯದು? ಅಲ್ಲಿ ನಡೆಯುವುದು ಒಂದೇ ದ್ವಂದ್ವ ! ಜೀವನ ವಿರುದ್ಧ ಮರಣ !

ತೆರೆಗಳ ಮೇಲೆ ನಲಿಯುತ್ತಿದ್ದ ಚಂದ್ರಬಿಂಬವನ್ನು ನೋಡಿದಳು. ಒಡನೆಯೆ ಅದೇ ಚಂದ್ರಬಿಂಬದಂತೆ ಸುಂದರವಾದ ತನ್ನ ಮೊಗವನ್ನು ನಾಳೆ ಮೀನುಗಳು ಹರಿದು ತಿನ್ನುವವೆಂಬ ಕಲ್ಪನೆಯು ಮನದಲ್ಲಿ ಮೂಡಿ ಅವಳ ಮೈಮೇಲೆ ಕೂದಲು ನೆಟ್ಟಗಾದವು. ಕಪ್ಪುಕಪ್ಪಾದ ತೆರೆಗಳು ! ಬೆಳ್ಳಗಿನ ಬೆಳದಿಂಗಳು ! ಮರಣಜೀವನಗಳ ಸಂಗಮವೇ ಆಗಿತ್ತು. ಚಂದ್ರನುದಿಸಿದ ಕೂಡಲೆ ಸಮುದ್ರದ ತೆರೆಗಳೇಕೆ ಏರಹತ್ತುವವೆಂಬದು ಈಗ ಅವಳ ಲಕ್ಷ್ಯಕ್ಕೆ ಬಂತು. ಜೀವನವನ್ನು ನುಂಗಲಿಕ್ಕೆ ಮೃತ್ಯುವಿನ ಸಾಹಸವು ನಡೆದೇ ಇರುತ್ತದೆ. ಅದೇ ಇದು; ಆದರೆ ಜೀವನವು ಮರಣಕ್ಕೆ ಮೋಸಮಾಡುವದು. ಸಾವಿರಾರು ಪ್ರತಿಬಿಂಬಗಳ ರೂಪದಿಂದ ಅದು ಮರಣದ ತಲೆಯಮೇಲೆ ಕುಣಿಯಹತ್ತುತ್ತದೆ. ಜೀವ ಕೊಡಬೇಕೆಂಬ ಅವಳ ನಿಶ್ಚಯವು ಅಲುಗಿತು !"

ಸುರಂಗೆಯು ನಕ್ಕು ಈ ವಾಕ್ಯವನ್ನು ಆದರಿಸಿದಳು. ರಮಾಕಾಂತನು ಮುಂದೆ ಓದುತ್ತಲೆ ಇದ್ದ. "ಸಮುದ್ರದಿಂದ ಬರುವ ತಂಪು ಗಾಳಿಯಿಂದ ಅವಳ ಮೈ ಥರಥರ ನಡುಗುತ್ತಿತ್ತು. ಅವಳ ಆ ಲತೆಯಂತಿರುವ ದೇಹವನ್ನೂ ಕರುಣವಾದ ಮುಖಮುದ್ರೆಯನ್ನೂ ನೋಡಿ ಕಲಾವಂತನಾದ ಚಿತ್ರಕಾರನು ಮುಗ್ಧನಾಗಿ ಹೋಗುತ್ತಿದ್ದ. ಹೆದರಿಕೆಯಿಂದ ಮೇಲೆ ಕೆಳಗೆ ಆಗುತ್ತಿದ್ದ ಅವಳ ಎದೆ, ಗಾಳಿಯಿಂದ ಪತ್ತಲವು ತೀಡಿದಂತೆ ಮೈಗೆ ಹತ್ತಿಕೊಂಡದ್ದರಿಂದ ಎದ್ದು ಕಾಣುತ್ತಿದ್ದ ಅವಳ ತೊಡೆಗಳು....."

"ಮುಂದೆ ಅವಳೇನು ಮಾಡಿದಳು ?" ಎಂದು ಸುರಂಗೆಯು ಬೇಸತ್ತವರಂತೆ ಕೇಳಿದಳು.

ರಮಾಕಾಂತನು ನಡುವಿನ ಕೆಲವು ಭಾಗವನ್ನು ಬಿಟ್ಟುಬಿಟ್ಟ.

ಅವಳು ಭೀತಿಯಿಂದ ಕಣ್ಣು ಮುಚ್ಚಿದವಳೇ ನೀರಲ್ಲಿ ಹಾರಿಕೊಂಡುಬಿಟ್ಟಳು. ತುಸು ಹೊತ್ತಿನ ಮೇಲೆ ಅವಳಿಗೆ ಎಚ್ಚರಾಯಿತು. ತಾನು ಪರಲೋಕದಲ್ಲಿರುವೆನೆಂದು ಅಂಜಂಜುತ್ತ ಕಣ್ಣು ತೆರೆದಳು. ಅವಳಿಗೆ ಆಶ್ಚರ್ಯವಾಯಿತು. ತಾನು ಮಾಡೆಲ್ ಎಂದು ಯಾವ ಚಿತ್ರಕಾರನೆದುರಿಗೆ ಕೂಡುತ್ತಿದ್ದಳೋ ಅದೇ ಚಿತ್ರಕಾರನು ಈಗ ಅವಳ ತಲೆಯನ್ನು ತೊಡೆಯ ಮೇಲಿರಿಸಿಕೊಂಡು ಅವಳನ್ನು ಎಚ್ಚರಿಸುವ ಯತ್ನ ಮಾಡುತ್ತಿದ್ದನು.

ಅವಳು ಕೇಳಿದಳು : "ನೀವು ಇಲ್ಲೇಕೆ ಬಂದಿರಿ?" ಅವನು ಉತ್ತರ ಕೊಟ್ಟ "ಚಿತ್ರ ತೆಗೆಯಲಿಕ್ಕೆ !"

"ಎಂಥ ಚಿತ್ರ ?"

"ಅದರ ಹೆಸರು '**ತೋಯಿಸಿಕೊಂಡವಳು!**' ಯಾವಾಗಲೂ ಬರುವಂತೆ ಈ ಸಾರೆ ಅದು ಕಾಗದದ ಮೇಲಿಂದ ಬರಲಿಲ್ಲ. ಸಮುದ್ರದೊಳಗಿನಿಂದ ತೆಗೆಯಬೇಕಾಯಿತು. ಅದೂ ಬ್ರಶ್ಶಿನಿಂದಲ್ಲ, ಕೈಯಿಂದ !"

ಅವಳು ನಾಚಿದಳು. ಆಕಾಶದಲ್ಲಿಯ ಚಂದ್ರನೂ ಅದೇ ವೇಳೆಗೆ ಕ್ಷಣಹೊತ್ತು ಮೋಡದ ಹಿಂದೆ ಮರೆಯಾದನು.

ಕೈಯೊಳಗಿನ ಸಂಚಿಕೆಯನ್ನು ಬದಿಗಿಡುತ್ತ ರಮಾಕಾಂತ ಕೇಳಿದ– "ಯಾರ ಬಗ್ಗೆ ಬರೆದದ್ದು ಈ ಕಥೆ ?" ಎಂದ.

"ಸ್ವಂತದ ಬಗ್ಗೆ !"

"ಅಲ್ಲವೇ ಅಲ್ಲ !"

ಇಷ್ಟರಲ್ಲಿಯೇ ಒಬ್ಬ ಸೇವಕನು ಸುಲೋಚನೆಯು ಬಂದ ಸಮಾಚಾರ ಹೇಳಿದ. ಒಳಗೆ ಬಂದು ಕುರ್ಚಿಯ ಮೇಲೆ ಕೂಡುತ್ತ ಅವಳಂದಳು: "ಹೇಗಿದೆ ಪ್ರಕೃತಿ ಸುರಂಗಾಬಾಯಿ?"

"ಜ್ವರ ಏನಿಲ್ಲ...."

"ಜ್ವರ ಇಲ್ಲವೆಂದ ಮೇಲೆ ನಡೆಯಿರಿ ಹವಾ ಬದಲಾಯಿಸಲಿಕ್ಕೆ ನಮ್ಮ ಕಾಮಾಪೂರಕ್ಕೆ."

ಕಾಮಾಪುರದ ಹೆಸರು ಕೇಳುತ್ತಲೆ ಸುರಂಗೆಯ ನಗೆಮೋರೆಯು ಬಾಡಿತು. ಅತ್ತ ಕಡೆಗೆ ಸುಲೋಚನೆಯ ಲಕ್ಷ್ಯವಿರಲಿಲ್ಲ. ಆದರೆ ಈ ಬದಲಾವಣೆಯು ರಮಾಕಾಂತನಿಗೆ ತಿಳಿಯದೆ ಹೋಗಲಿಲ್ಲ. ಅವನಿಗೆ ಸುಲೋಚನೆಯ ತಂದೆಯು ಕಂಪನಿಗೆ ಬಂದ ದಿವಸ ಸುರಂಗೆಯ ಕೈಯೊಳಗಿಂದ ಚಹದ ಕಪ್ಪು ಬಿದ್ದದ್ದು ನೆನಪಾಯಿತು. ಆ ಕಪ್ಪು ನಿಜವಾಗಿಯೇ ಕೈ ತಪ್ಪಿ ಬಿದ್ದಿತೋ ಅಥವಾ ಸುರಂಗೆಯ ಮನಸ್ಸಿನೊಳಗಿನ ಕೋಲಾಹಲದಿಂದ ಬಿದ್ದಿತೋ? ಆದರೆ ಸುರಂಗೆಯದೂ ದಾದಾಸಾಹೇಬರದೂ ಏನಾದರೂ ಸಂಬಂಧವಿದ್ದಲ್ಲಿ ಅದು ಸುಲೋಚನೆಗೆ ಗೊತ್ತಿರದೆ ಇರುವದು ಶಕ್ಯವಿಲ್ಲ. ಹಾಗೇನಾದರೂ ಇದ್ದರೆ ಸುಲೋಚನೆಯು ಸುರಂಗೆಯ ಮೋರೆಯನ್ನು ಸಹ ನೋಡುತ್ತಿರಲಿಲ್ಲ.

"ಕಾಮಾಪುರ ಬೇಡವಾದರೆ ಮತ್ತೆಲ್ಲಿಗಾದರೂ ನಡೆಯಿರಿ. ಹವೆ ಬದಲಿಸಿದ ಹೊರತು ನಿಮಗೇನೂ ಸಂಪೂರ್ಣ ಗುಣವೆನಿಸುವುದಿಲ್ಲ" ಎಂದು ಸುಲೋಚನೆಯು ಸುರಂಗೆಯ ಮೋರೆಯ ಕಡೆಗೆ ನೋಡುತ್ತ ಹೇಳಿದಳು.

"ಮತ್ತೆಲ್ಲಿಯಾದರೂ ಅಂದರೆ ಎಲ್ಲಿಗೆ ಹೋಗಬೇಕು ?" ಎಂದು ಸುರಂಗೆ ಕೇಳಿದಳು.

"ನಿಮ್ಮ ಕೊಂಕಣದ ಮಹಾಬಳೇಶ್ವರ ಇದೆ ಅಲ್ಲ" ಎಂದು ಪ್ರಶ್ನದ ರೂಪದಿಂದ ರಮಾಕಾಂತ ಸೂಚಿಸಿದ.

"ಅಂಬೋಲೀಯೆ ? ಈ ಚಳಿಯಲ್ಲಿ ಅಲ್ಲಿ ಹೋದರೆ ಚೆನ್ನಾಗಿ ಬದಲಿಸುವುದು ಹವೆ. ಒಮ್ಮೆಲೆ ಸ್ವರ್ಗದ ಹವೆಯೇ ಸಿಕ್ಕೀತು !"

ಸುಲೋಚನೆಯ ಮಾತಿಗೆ ರಮಾಕಾಂತ ಹೊಟ್ಟೆ ತುಂಬ ನಕ್ಕ. ಆದರೆ ಸುರಂಗೆಯ ಖಿನ್ನತೆಯು ಮಾತ್ರ ಹೆಚ್ಚೇ ಆಯಿತು. ರಮಾಕಾಂತನಿಗೆ ಇದು ತಟ್ಟನೇ ತಿಳಿಯಿತು. ಸುರಂಗೆಯ ಮನಸ್ಸಿನಲ್ಲಿಯ ಮರಣದ ವಿಚಾರವು ಸುಲೋಚನೆಯ ಮಾತಿನಿಂದ ತಿರುಗಿ ಮತ್ತೆ ಮೇಲೆ ಎದ್ದಿತೆಂದು ಅವನಿಗೆ ಮಂದಟ್ಟಾಯಿತು. ಅವನು ಸುಲೋಚನೆಗೆಂದ– "ಸುರಂಗೆಗೆ



ಗುಣವಾದನಂತರ ಏನು ಮಾಡುವವಳಿದ್ದಾಳೆ ಗೊತ್ತಿದೆಯೇ?"

"ಸತ್ಯನಾರಾಯಣ?"

"ಅರ್ಧಕ್ಕರ್ಧ ಸರಿ"

"ಅಂದರೆ?"

"ವೇದಾಂತದ ಅಭ್ಯಾಸ ಮಾಡುವವಳಿದ್ದಾಳೆ ! ಜನನಮರಣದ ತೊಡಕು ಬಿಡಿಸಲಿಕ್ಕೆ ಈಗ್ಗೇ ಸುರುವು ಮಾಡಿಬಿಟ್ಟಿದ್ದಾಳೆ !"

"ಹೌದೇ ಸುರಂಗಾಬಾಯಿ? ನನಗೆ ಹೇಳಿರಿ ನಿಮ್ಮ ತೊಡಕು ಏನದು ! ಒಂದು ಕ್ಷಣದೊಳಗೆ ಬಿಡಿಸಿ ನಿಮ್ಮಿಂದ ಇನಾಮು ತೆಗೆದುಕೊಂಡುಬಿಡುವೆ."

"ಚೇಷ್ಟೆಯಲ್ಲ, ಸುಲೋಚನಾತಾಯೀ, ನನ್ನ ತಲೆಯೊಳಗೆ ಏನೇನು ವಿಚಾರ ಬರುತ್ತಾವಂತೀರಿ–"

"ನಮಗಷ್ಟು ಹೇಳಬಾರದೇ?"

"ಮನುಷ್ಯರಿಗೆ ಸಾವಿನ ಹೆದರಿಕೆ ಯಾಕೆ ಅನಿಸಬೇಕು?"

"ಬದುಕಿರುವುದರಲ್ಲಿ ಆನಂದವಿದೆ ಎಂದು !"

"ಬಡವರಿಗೆ ಕೂಡ ಈ ಆನಂದ ಸಿಗುತ್ತದೆಯೇ?"

"ಹೌದು."

"ಅದು ಹೇಗೆ?"

"ಪ್ರೇಮದಿಂದ."

"ಪ್ರೇಮವೆಂದರೆ ಹೇಗಿರುತ್ತದೆ?"

"ಪರಮೇಶ್ವರನಂತೆ."

"ಹಾಗಾದರೆ ಪರಮೇಶ್ವರ ಹೇಗಿರತಾನೆ ?"

ಸುಲೋಚನೆಯು ತಡೆದಳು. ಸುರಂಗೆಯು ಮುಂದೆ ಹೇಳಿದಳು : "ಪರಮೇಶ್ವರನು ನಿರ್ದಯನಿರುತ್ತಾನೆ."

"ಯಾತರ ಮೇಲಿಂದ?"

"ಜಗತ್ತಿನಲ್ಲಿ ಬಡವರು ಹೊಟ್ಟೆಗಿಲ್ಲದೆ ಸಾಯುತ್ತಿರುವರೆಂದು."

"ಆ ಬಡವರ ಹತ್ತಿರ ಗುಣ ಇದ್ದಿಲ್ಲವಾದರೆ ಪರಮೇಶ್ವರನೇನು ಮಾಡಬೇಕು? ರೂಪ, ಧ್ವನಿ ಇಲ್ಲದಂಥ ನಟಿಗೆ ನಿಮಗೆ ಕೊಟ್ಟಷ್ಟು ಸಂಬಳವನ್ನು ಯಾರು ಕೊಡಬೇಕು?"

"ಏನರೀ ಗಾರ್ಗೀ, ಮೈತ್ರೇಯೀ ಈಗಾದಷ್ಟು ವೇದಾಂತ ಚರ್ಚೆ ಸಾಕು. ಸುರಂಗೆ, ಹವೆ ಬದಲಿಸಿದ ಹೊರತು ನೀನೇನು ಸುಧಾರಿಸುವುದಿಲ್ಲ."

"ಬೆಳಗಾಂವಿ ಏನು ಕೆಟ್ಟದು ?" ಸುಲೋಚನೆ ಕೇಳಿದಳು.

ಸುರಂಗೆಯು ತಲೆಯಲ್ಲಾಡಿಸಿ ಸಮ್ಮತಿಯನ್ನು ಸೂಚಿಸಿದಳು.

"ಬೆಳಗಾಂವಿಯಲ್ಲಿದ್ದರೆ ಎಲ್ಲ ಕೆಲಸಗಳೂ ಆಗುವುವು. ನಿಮಗೆ ಕಾಮಾಪುರಕ್ಕೆ ಹೋಗಿ

ಕಾರಖಾನೆ ನೋಡಿಕೊಂಡು ಬರಲಿಕ್ಕೂ ಆಗಬಹುದು."

"ಕಾರಖಾನೆ ಏನು ? ನಾಲ್ಕಾರು ತಾಸಿನಲ್ಲಿ ನೋಡಿಕೊಂಡು ಬರಲಿಕ್ಕಾಗುವದು. ಆದರೆ ಆ ಪುಸ್ತಕದಲ್ಲಿ ಮುದ್ರಿಸಲಿಕ್ಕೆ ಫೋಟೋ ಬೇಕಲ್ಲವೆ?"

"ವಿದ್ಯಾಧರ ಫೋಟೋ ತೆಗೆಯುವರು. ದಾದಾ ಅವರಿಗೆ ನಾನು ನಿನ್ನೆಯೇ ಬರೆದೆ, ಅಂದರಂತೆ. ನಿಮ್ಮ ಕೆಲಸವೂ ಆಗುವದು. ಅದರಂತೆ ನನ್ನ ಲಕ್ಷ್ಮಿಯ ಚಿತ್ರದ ಕೆಲಸವೂ ಆಗುವದು."

"ಈಕೆಯನ್ನು ಮಾಡೆಲ್ ಅಂತ ಕೂಡಿಸುವಿರೇನು?"

"ಯಾಕೆ ?"

"ಇಂಥ ಸೊರಗಿದ ಲಕ್ಷ್ಮಿಯಿಂದ ಉಪಯೋಗವಿಲ್ಲ ಕಾರಖಾನೆಗೆ !"

"ನಾನು ಉಬ್ಬಿಕೊಂಡು ಕೂಡುತ್ತೇನೆ ಆಗ" ಎಂದು ಸುರಂಗೆ ನಗುತ್ತ ಹೇಳಿದಳು.

"ಲಕ್ಷ್ಮೀನೆ ಸೆಟಗೊಂಡು ಉಬ್ಬಿಕೊಂಡು ಕುಳಿತಳೆಂದರೆ ಉಳಿಯಿತೇನು ಕಾರಖಾನೆಯಲ್ಲಿ?"

ಕೈಯೊಳಗಿನ ಸಂಚಿಕೆಯನ್ನು ತೆರೆಯುತ್ತ ಸುಲೋಚನೆಯೆಂದಳು : "ಈ ಕಥೆ ತೋರಿಸಲಿಕ್ಕೆಂದು ಬಂದೆ ನಾನು !"

"ಹೆಸರೇನದರದು?"

"ಸುಂದರ ಚಿತ್ರ !"

"ಇದೇ ಈಗ ಓದಿದರಲ್ಲ ಇವರು !"

"ಅದು ಇವರ ಚಿತ್ರ ಆಯಿತು."

"ಇದು ಯಾರದು ?"

"ಲೇಖಿಕಾ ಕೃಷ್ಣಾ."

ರಮಾಕಾಂತನು ಸ್ವಲ್ಪ ಬೆಚ್ಚಿ ನೋಡಿದ.

"ಎಲ್ಲಿಯವಳು ಈ ಹೆಣ್ಣು ಮಗಳು !"

"ಮುಂಜಾನೆ ಕಥೆ ಓದಿದ ಕೂಡಲೆ ನಾನು ಬೇಕೆಂತಲೆ ಆಫೀಸಿನಲ್ಲಿ ಹೋಗಿ ವಿಚಾರಿಸಿದೆ."

"ಏನು ಹೇಳಿದರು ಅಲ್ಲಿ? ಬಹುತರವಾಗಿ ಹೆಂಗಸು ಹೋಗಿ ಗಂಡಸಾಗಿರಬಹುದು!"

"ಉಂ. . ಹುಂ"

"ಅಂದರೆ?"

"ಆ ಹೆಣ್ಣು ಮಗಳ ವಿಳಾಸವೇ ಗೊತ್ತಿಲ್ಲ ಅವರಿಗೆ !"

"ಪತ್ತೆ ಇಲ್ಲದ ಹೆಣ್ಣುಮಗಳು ! ವಿಚಿತ್ರ !"

"ಆಕೆಯ ಮೊದಲಿನ ಕಥೆಯ ಮೇಲೆ ಮಾಲವಣದ ಅಂಚೆಮುದ್ರೆ ಇತ್ತಂತೆ. ಈ ಕಥೆಯ ಮೇಲೆ ಕಾಮಾಪುರದ್ದಿದೆ–"



"ಬರಬರುತ್ತ ಗೋಕರ್ಣ, ಮಂಗಳೂರು, ರಾಮೇಶ್ವರ ಮುಂತಾದ ಮುದ್ರೆ ಮೂಡುವಂತೆ ಕಾಣತದೆ ! ಉತ್ತರ ಧ್ರುವದಿಂದ ದಕ್ಷಿಣ ಧ್ರುವದ ಕಡೆಗೆ ಹೊರಟಂತೆ ಕಾಣುತ್ತಾಳೆ ಈ ಹೆಂಗಸು !"

"ನನಗೊಂದು ಬೇರೇ ಸಂಶಯವೇ ಬರುತ್ತಿದೆ."

"ಅದೇನು ?"

"ವಿದ್ಯಾಧರರೇ ಯಾಕೆ ಬರೆದಿರಲಿಕ್ಕಿಲ್ಲ ಈ ಕಥೆಗಳನ್ನು ?"

"ಕಥೆ ಬರೆಯುವ ಯಂತ್ರ ಹುಡುಕಿ ತೆಗೆಯಬಹುದು ಅವನು. ಸ್ವತಃ ಬರೆಯುವನೇ! ಛೇ !"

"ಯಾರು ಹೇಳಬೇಕು ? ಕಾಮಾಪುರದಲ್ಲಿ ವೇಳೆ ಕಳೆಯುವದು ಕಷ್ಟವಾಗಿದ್ದೀತು!"

"ಕಥೆಯನ್ನಾದರೂ ನೋಡೋಣ ! ಏನಿದೆ ?"

"ನಿಮ್ಮ ಕಥೆಯದೆ ಹೆಸರಿಟ್ಟುಕೊಂಡು ಬರೆದಿರುವಳು."

"ನನ್ನ ಹೆಸರು ತೆಗೆದುಕೊಳ್ಳಲಿಕ್ಕೆ ಏನು ಅಧಿಕಾರ ಈ ಹೆಂಗಸಿಗೆ?"

ಸುಲೋಚನೆಯು ಓದತೊಡಗಿದಳು.

**ಸುಂದರ ಚಿತ್ರ**

ಲೇಖಿಕೆ : ಕೃಷ್ಣಾ

ವಿಶೇಷ ಸಂಚಿಕೆಗಾಗಿ ಚಿತ್ರದ ಬೇಡಿಕೆ ; ಅದೂ ಇಂಥ ಶ್ರೇಷ್ಠ ಮಾಸಪತ್ರಿಕೆಯಿಂದ. ಎಂದಮೇಲೆ ಬ್ರಹ್ಮಾನಂದವೇನೂ ಬೇರೆ ಇರಲಾರದು. ಬಡ ಒಕ್ಕಲಿಗನ ಮಗಳಿಗೆ ತನ್ನ ಚೆಲುವಿನ ಅರಿವು ಇರುವುದಿಲ್ಲವೆಂದಲ್ಲ. ಆದರೆ ರಾಜಪುತ್ರನು ತನ್ನನ್ನು ಬೇಡಬಂದರೆ ಅವಳ ಹೃದಯದಲ್ಲಿ ಆಶ್ಚರ್ಯದ ತೆರೆಗಳು ಏಳುವುದಿಲ್ಲವೆ? ಆ ತರುಣ ಚಿತ್ರಕಾರನ ಸ್ಥಿತಿ ಹೀಗೇ ಆಯಿತು. ಅವನ ಒಳಗಣ್ಣಿನೆದುರು ಮುಗಿಲು ಮುಟ್ಟುವ ಮಂದಿರವೊಂದು ನಿಂತಿತು. "ಈ ಸುಂದರ ಮಂದಿರದ ತಳಪಾಯವನ್ನು ಇಂದು ನಾನು ಹಾಕಬೇಕಾಗಿದೆ. ಚಿತ್ರವಿಷ್ಟು ಸುಂದರವಾಗಿರಬೇಕಲ್ಲ–!"

ಸಂಜೆ–ಮುಂಜಾನೆ ಅವನು ಸಮುದ್ರ ತೀರದಲ್ಲಿ ಹೋಗಿ ಕೂಡ ಹತ್ತಿದ. ವದ್ಯ ಅಷ್ಟಮಿಯ ಮಧ್ಯರಾತ್ರಿಯ ಚಂದ್ರೋದಯವನ್ನು ನೋಡಿದ. ದಿನ್ನೆಯ ಮೇಲಿಂದ ಕೆಳಗೆ ಕಾಣುವ ಸುಂದರ ಬಯಲನ್ನು ನೋಡಿದ. ಆದರೆ ಅವನ ಮನಸ್ಸು ಎಲ್ಲಿಯೂ ತೃಪ್ತಿಹೊಂದಲಿಲ್ಲ. ಹಸಿದ ಮೊಲೆಗೂಸಿಗೆ ಅಕ್ಕ, ಕಕ್ಕಿ, ಅಬಚಿ ಇವರೆಲ್ಲರೂ ಎಷ್ಟು ರಮಿಸಿದರೂ ಶಾಂತವಾಗುವುದಿಲ್ಲ. ತಾಯಿ ಅದನ್ನು ತನ್ನ ಮಡಿಲಲ್ಲಿ ತೆಗೆದುಕೊಂಡು–

ಅವನ ಹರಿದ ಕಲಾದೃಷ್ಟಿಗೆ ಅವರ ತಾಯಿ ಕಾಣಿಸಿಕೊಂಡಳು. ಹೊಲಗಳಲ್ಲಿಯ ಕಾಲುದಾರಿಯಿಂದ ಹೋಗುತ್ತಿರುವಾಗ ಸಹಜವಾಗಿ ಬಲಗಡೆ ನೋಡಿದ. ಬಿತ್ತುವ ಕೆಲಸವು ಅದೇ ಮುಗಿದಿತ್ತು. ಹಚ್ಚ ಹಸುರಿನ ಹುಲ್ಲುಗದ್ದೆಯ ನಡುವೆ ಕೆಲವು ಪಾರಿವಾಳಗಳು ದೌಲಿನಿಂದ ಕುಳಿತಿದ್ದವು. ದೂರದಿಂದ ನೋಡುವವರಿಗೆ ನಡುವೆಯೆ ಹೂಗಳ ರಾಶಿಯೊಂದನ್ನು

ಹಾಕಿದಂತೆ ಕಾಣುತ್ತಿತ್ತು. ಚಿತ್ರಕಾರನು ಮೆಲ್ಲನೆ ಆ ಕಡೆಗೆ ನಡೆದ. ಪಾರಿವಾಳಗಳು ನಡುನಡುವೆ ಕೊರಳು ಕೊಂಕಿಸುತ್ತ ಅತ್ತಿತ್ತ ನೋಡುತ್ತಿದ್ದವು. ಚುಂಚುನಿಂದ ಏನನ್ನೋ ಕುಕ್ಕುತ್ತಿದ್ದವು. ಹಸರು ಹುಲ್ಲಿನ ರತ್ನಗಂಬಳಿಯ ಮಧ್ಯದಲ್ಲಿ ನಡೆದ ಅವುಗಳ ನೃತ್ಯ ಕೌಶಲವನ್ನು ನೋಡಿ ಚಿತ್ರಕಾರನು ಮುಗ್ಧನಾದ. ಹಿಂದೆ ಪಾರ್ಶ್ವ ಭೂಮಿಯಲ್ಲಿ ಒಂದು ತೆಂಗಿನ ಮರ, ಸುತ್ತಲೂ ಹಸರು ಮುರಿಯುವ ಭತ್ತದ ಬೆಳೆ, ಸುಂದವಾಗಿ ನಲಿಯುವ ಅತಿ ಶುಭ್ರವಾದ ಪಾರಿವಾಳಗಳು! ಎಂಥ ರಮ್ಯ ದೃಶ್ಯ ! ಅಮೆರಿಕದ ದಂಡೆಯ ಮೇಲೆ ಕಾಲಿಟ್ಟಾಗ ಕೋಲಂಬಸನಿಗೆ ಯಾವ ಆನಂದವಾಗಿರಬಹುದೆಂಬುದರ ಕಲ್ಪನೆಯು ಆ ಚಿತ್ರಕಾರನಿಗಾಯಿತು.

ತಾನು ಕವಿಯಲ್ಲವೆಂದು ಅವನಿಗೆ ಕೆಡಕೆನಿಸಿತು ಎಂಥ ಸುಂದರವಾದ ದೃಶ್ಯ ! ನಿರಭ್ರವಾದ ಆಕಾಶದಲ್ಲಿ ಮಿನುಗುವ ಚಿಕ್ಕೆಗಳ ಗುಂಪು, ರಮಣಿಯ ಸೆರಗಿನ ಮೇಲೆ ಇಳಿಬಿದ್ದ ದೊಡ್ಡ ಮುತ್ತಿನ ಹಾರ–ಹೀಗೆ ಎಷ್ಟೆಷ್ಟೋ ಸುಂದರ ಕಲ್ಪನೆಗಳು ಆ ಪಾರಿವಾಳಗಳನ್ನು ನೋಡಿ ಅವನಿಗೆ ಕಾಣಿಸಿಕೊಂಡವು. ತನ್ನ ಸುಳಿವು ಹತ್ತಿದರೆ ಆ ಪಾರಿವಾಳಗಳು ಹಾರಿ ಹೋಗುವವೆಂದು ಅವನು ದೂರದಲ್ಲಿಯೇ ನಿಂತ. “ಈ ಚಿತ್ರವನ್ನು ನನಗೆ ಬರೆಯಲಿಕ್ಕೆ ಬಂದರೆ ಏನು ಕೋಮಲ ಪಕ್ಷಿಗಳು ! ಅವುಗಳ ನಡೆ ನಿಲುವುಗಳಾದರೂ ಎಷ್ಟು ಅಂದ ! ಈ ಸುಂದರ ಚಿತ್ರದ ಮೋಹಿನೀ ಮಂತ್ರ–” ಬಂಜೆಯು ಮುದ್ದಾದ ಎಳೆ ಮಗುವಿನ ಕಡೆಗೆ ನೋಡುವಾಗಿನ ಆಶೆಯ ದೃಷ್ಟಿಯು ಆಗ ಆ ರಸಿಕನ ಕಣ್ಣುಗಳಲ್ಲಿ ಕುಣಿಯುತ್ತಿದ್ದಿತು.

“ಹೋ ! ಹೋ ! ಹೋ !” ಎಂಬ ಕಠೋರವಾದ ಕೂಗಿನಿಂದ ಅವನ ಕಲಾಸಮಾಧಿಯ ಭಂಗವಾಯಿತು. ‘ಲಂಡ’ ಪಂಚೆಯನ್ನುಟ್ಟ ಒಬ್ಬ ಅಚ್ಚ ಕರ‍್ರಗಿನ ಮನುಷ್ಯನು ದೂರದಿಂದಲೇ ಆ ಪಾರಿವಾಳಗಳನ್ನು ಬೆದರಿಸುತ್ತ ಚಿತ್ರಕಾರನ ಕಡೆಗೆ ಬರುತ್ತಿದ್ದ. ಕರ್ಣಕರ್ಕಶವಾದ ಆ ಕೂಗನ್ನು ಕೇಳಿ ಚಿತ್ರಕಾರನು ತನ್ನ ಸಮಾಧಿಯನ್ನು ಹಾಳುಮಾಡಿದ ಮನುಷ್ಯನ ಕಡೆಗೆ ಒಬ್ಬ ರೇಗಿದ ಋಷಿಯು ನೋಡುವಂತೆ ನೋಡಿದ. ಒಕ್ಕಲಿಗನಂತೆ ಕಾಣಿಸುವ ಆ ಮನುಷ್ಯನು ಸಮೀಪಕ್ಕೆ ಬರುತ್ತಲೆ ಚಿತ್ರಕಾರನು ಸಿಟ್ಟಿನಿಂದಲೇ ಅಂದ : “ಏ ಹುಚ್ಚ–”

“ನಾ ಹುಚ್ಚs ? ನೀ ಮಾತರ ಭಾಳ ಶಾಣ್ಯಾ, ಭಾಳ ದೊಡ ಮನಸ್ಯಾ ?” ಎಂದು ಅವನೂ ಸಿಡುಕುತನದಿಂದ ಉತ್ತರ ಕೊಟ್ಟ.

“ಪಾಪ ಹಕ್ಕಿ ಹೇಗೆ ಚೆಂದಾಗಿ ಕೂತಿದ್ದವು !”

“ಒಳೆ ಫೋಟೋವು ತಗಿಸಿಕೊಳಾಕ ಕೂತಿದ್ದು, ಅಲ್ಲs ”

“ಫೋಟೋ ಅಲ್ಲ. ಚಿತ್ರ ಬರೆಯುವವನಿದ್ದೆ ಅವುಗಳದು.”

“ನಿಮ್ಮ ಚಿತ್ತರ ಆತು ಗಿತ್ತರ ಆತು. ನನ್ನ ಮಕ್ಕಳು – ಮರಿ ಮಾತರ ಗಂಜಿ ಇಲ್ಲದ ಸತ್ತು ಹೋಗತಾವ.”

ಚಿತ್ರಕಾರನು ಆಶ್ಚರ್ಯದಿಂದ ಆವನ ಕಡೆಗೆ ನೋಡಹತ್ತಿದ. ಕಲೆಗೆ ಜೀವನವನ್ನು ಕೊಡುವ ಪಾರಿವಾಳಗಳಿಗೂ, ಈ “ಹುಂಬ”ನ ಮಕ್ಕಳು–ಮರಿಗಳು ಸಾಯುವುದಕ್ಕೂ



ಏನು ಸಂಬಂಧ?

“ಹುಚ್ಚು ಹಿಡಿದಿದೆ ನಿನಗೆ” ಎಂದು ಅವನು ಒಕ್ಕಲಿಗನಿಗೆ ಉಪಹಾಸ ಮಾಡಿದ.

“ನನಗಲ್ಲ. ನಿನಗs ಹಿಡದsತಿ. ಈಟೊತ್ತ ಇಲ್ಲೇ ನಿಂತೀದೀ. ಒಂದ ಹಕ್ಕಿ ಹೊಡಿಲಾಕ ಆಗಲಿಲ್ಲಲ್ಲs ನಿನ್ನ ಕೈಲಿ– ನಿನ್ನೆ ಗದ್ದೀ ಬಿತ್ತೇತೀ. ಬೀಜಾನs ಪಾರಿವಾಳ ತಿಂದಬಿಟ್ಟವು ಅಂದರ ಉಪಾಸ ಸಾಯತಾವ ನನ್ನ ಮಕ್ಕಳುಮರಿ.”

ವಿಶೇಷ ಸಂಚಿಕೆಯಲ್ಲಿ ಅದೇ ಸುಂದರ ಸನ್ನಿವೇಶದ ಚಿತ್ರವು ಪ್ರಸಿದ್ಧವಾಯಿತು. ಅದು ಎಲ್ಲರ ಪ್ರೀತಿಗೂ ಪಾತ್ರವಾಯಿತು. ಆದರೆ ಅದರೊಳಗಿನ ಪಾರಿವಾಳಗಳು ಮಾತ್ರ ಡೌಲಿನಿಂದ ಹೊಲದೊಳಗೆ ಕೂತಿರದೆ ಭೀತಿಯಿಂದ ಭರ‍್ರನೇ ಆಕಾಶದಲ್ಲಿ ಹಾರಿಹೋಗುತ್ತಿದ್ದವು.

ಕಥೆಯು ಮುಗಿಯುತ್ತಲೇ ರಮಾಕಾಂತನಂದ– “ಎಲ್ಲಿಯದೋ ಹುಡುಗರ ಕಥೆ ಕಾಣತದೆ, –ಪಾರಿವಾಳ ಕೂತಿದ್ದವಂತೆ, ಭರ‍್ರನೇ ಹಾರಿದವಂತೆ ! ಯಾಕೆ ಸುರಂಗೆ ನಿನ್ನ ಮನಸ್ಸಿಗೆ ಬಂದಿತೇ ಕಥೆ ?

“ನನಗೇನೂ ತಿಳಿಯಲೇ ಇಲ್ಲ.”

“ಒಳ್ಳೇ ವೇದಾಂತವಿದೆ ಆ ಕಥೆಯಲ್ಲಿ !”

“ಕಥೆಯೊಳಗಿನ ಆ ಪಾರಿವಾಳಗಳು ಹಾರಿದ ಚಿತ್ರ ಬರೆಯಬೇಕೆನ್ನುವೆ ನಾನು. ವಿದ್ಯಾಧರರನ್ನು ಒಮ್ಮೆಲೆ ಚಕಿತ ಮಾಡಲಿಕ್ಕೆ !”

“ಆ ವಿದ್ಯಾಧರನ ಯಂತ್ರದ ತಲೆಯ ಮೇಲೆ ಕೂಡತಕ್ಕದ್ದು ಅಂತ ಕಾಣತದೆ ಈ ಕಥೆ.”

“ನನಗಂತೂ ಮಂದಟ್ಟಾಯಿತು. ಕಥೆಯೊಳಗಿನ ಈ ದಿನ್ನೆ ಕಾಮಾಪುರದ ಕೆರೆಯ ಹತ್ತಿರದ್ದೇ. ಅದರಾಚೆಯ ನೆಲ್ಲು ಈಗ ಕೊಯ್ಯಲು ಯೋಗ್ಯವಾಗಿರಬೇಕು. ಮತ್ತು ದೇವರ ಗುಡಿಯೊಳಗಿನ ಪಾರಿವಾಳಗಳಂತೂ ಆ ತೋಟದೊಳಗೆ ಎಷ್ಟೋ ಸಾರೆ ಹಾರಿಹೋಗಿದ್ದವು.”

“ವಿದ್ಯಾಧರನ ಯಂತ್ರವು ಎಲ್ಲಿಗೆ ಬಂದಿತು?”

“ಯಂತ್ರ ನಡೆದಿದೆ. ಇನ್ನೂ ಯಾವುದೂ ನಿಶ್ಚಿತವಿಲ್ಲ. ಆದರೆ ಅವರ ಯಂತ್ರ ಬಗೆಹರಿಯದಿದ್ದರೂ ನಿಮ್ಮ ಪುಸ್ತಕ ಮಾತ್ರ ಬರಲೇ ಬೇಕು. ಹುಣ್ಣಿಮೆ ಇನ್ನು ಒಂದೂವರೆ ತಿಂಗಳ ಮಾತ್ರ ಉಳಿಯಿತು. ಆ ಜಾತ್ರೆಯ ಕಾಲಕ್ಕೆ ದಾದಾ ಅವರು ಪುಸ್ತಕಗಳನ್ನು ಹಂಚಬೇಕೆಂತ ಮಾಡಿದ್ದಾರು.”

“ಐದು ವರ್ಷಕ್ಕೊಮ್ಮೆ ಅಲ್ಲಿ ದೇವಿಗೆ ಕೋಣದ ಬಲಿ ಕೊಡತಾರಲ್ಲ ಹೇಗೇ?” ಎಂದು ಸುರಂಗೆ ಕೇಳಿದಳು.

“ಹೌದು. ನೀವೆಂದು ನೋಡಿದಿರಿ?”

“ನೋಡಿಲ್ಲ, ಕೇಳಿದ್ದೇನೆ.”

“ಈಗ ಒಳ್ಳೇ ದೇವಸ್ಥಾನ ಆಗಿದೆ ಅಲ್ಲಿ. ನಮ್ಮ ತಾಯಿಯ ಸ್ಮಾರಕವೆಂದು ನಮ್ಮ

ದಾದಾ ಅವರು ಅಲ್ಲಿ ಒಂದು ದೊಡ್ಡ ದೀಪಮಾಲೆಯನ್ನು ಕಟ್ಟಿಸಿದ್ದಾರೆ. ಅದರ ಮೇಲೆ ಕುಳಿತುಕೊಂಡರೆ, ತೆಂಗಿನ ಗಿಡ ಏರಿದಂತೆ ಅನಿಸತದೆ."

"ಹೊಲೆಯರು ಆ ಕೋಣವನ್ನು ಕಡಿಯುವರಲ್ಲವೆ?" ಸುರಂಗೆ ಕೇಳಿದಳು.

"ಹೌದು. ಮೊದಲು ಅದನ್ನು ಬಿಚ್ಚಿಬಿಡುವರು. ಆ ಮೇಲೆ ಬೆನ್ನು ಹತ್ತಿ ಕತ್ತಿಯಿಂದ ಅದನ್ನು ಕಚ್ ಕಚ್ ಕಡಿಯುವರು. ಒಮ್ಮೆಲೆ ಸಾಯ ಹೊಡೆಯುವುದಿಲ್ಲ ಅದನ್ನು. ಆ ಕೋಣದ ರಕ್ತ ಸುರಿದ ಹೊಲಗಳೆಲ್ಲ ಅವರಿಗೆ ಐದು ವರ್ಷ ಪುಕ್ಕಟೆ ಗೇಣಿಗೆ ಸಿಗುತ್ತವೆ."

"ಅದಕ್ಕೇ ಅವರು ಆ ಕೋಣವನ್ನು ಒಮ್ಮೆಲೇ ಕಡಿಯುವದಿಲ್ಲವೆ?"

"ಹೌದು."

"ಅವಯ್ಯ !" ಎಂದು ಸುರಂಗೆಯು ಒಮ್ಮೆಲೆ ಕಣ್ಣುಮುಚ್ಚಿಕೊಂಡಳು. ಕೋಣದ ಬಲಿಯ ವರ್ಣನೆಯಿಂದ ಅವಳ ಮೃತ್ಯುವಿನ ಭೀತಿಯು ಮತ್ತೆ ಜಾಗ್ರತವಾಯಿತೆಂದು ರಮಾಕಾಂತನಿಗೆ ತೋರಿತು.

## ೯
## ಸುರಂಗಿಯ ಮೊಗ್ಗೆಗಳು

ವತ್ಸಲೆಯು ಮಧ್ಯಾಹ್ನದಲ್ಲಿ ಕೆಲಸದಿಂದ ತಿರುಗಿ ಬಂದ ಕೂಡಲೆ ಸೋನ್ಯಾ "ಅಬಚೀ– ಅಬಚೀ–ಇಲ್ಲಿ ನೋಡು" ಎಂದು ಒದರುತ್ತ ಅಂಗಳದಲ್ಲಿಯೇ ಬಂದ. ಏನಾದರೂ ಹೊಸ ಆಟಿಗೆಯನ್ನು ಕಾಶಿಯು ಅವನಿಗೆ ತಂದುಕೊಟ್ಟಿರಬಹುದೆಂದು ಅವಳು ತಿಳಿದುಕೊಂಡಳು. ಇಷ್ಟರಲ್ಲಿಯೇ ಅವಳ ದೃಷ್ಟಿಯು ಹಂತಿಯ ಸಮೀಪದಲ್ಲಿದ್ದ ಒಂದು ಕೆಂಪು ರಾಶಿಯ ಕಡೆಗೆ ಸರಿಯಿತು. ಸಣ್ಣ ಸಣ್ಣ ನೆಲಗಡಲೆಯ ಕಾಳುಗಳ ರಾಶಿಯಂತೆ ಅದು ಕಾಣುತ್ತಿತ್ತು. ಕೆಂಪು ಬಣ್ಣದ ಸಣ್ಣ ಸಣ್ಣ ಕಾಳುಗಳು.

"ಏನೋ ಅವು?"

"ಸುರಂಗೀ ಮಗ್ಗಿ."

"ಮಾಲೀ ಮಾಡತಾರಲ್ಲs ಅದರೂ ?"

"ಹೌದು. ನಿನ್ನೆ ಅಜ್ಜಿ ಕೊಟ್ಟಿದ್ದಳಲ್ಲ ನಿನಗ ಮಾಲೀ."

ಆ ಮೊಗ್ಗೆಗಳ ರಾಶಿಯನ್ನು ನೋಡಿ ವತ್ಸಲೆಯ ಮೋರೆಯ ಮೇಲೆ ಖೇದ ಸುಳಿದು ಮರೆಯಾಯಿತು. ಅವಳ ಟೊಂಕಕ್ಕೆ "ಅಟ್ಟ ಮಿಟ್ಟಿ' ಹಾಕುತ್ತ ಸೋನ್ಯಾ ಕೇಳಿದ.

"ಏನಾತು?"

"ಸೋನ್ಯಾ, ನಿನಗ ಅವ್ವನ ನೆನಪ ಆತು ಅಂದರ ಏನ ಆಗತದ?"

"ಅಳು ಬರತದ."

"ಆ ಮಗ್ಗೀನೂ ಹಾಂಗೇ ಅಳಲಿಕ್ಕೆ ಹತ್ಯಾವ ನೋಡು ! ಅವಕ್ಕೂ ತಮ್ಮ ಅವ್ವನ ನೆನಪಾಗೇದ."

"ಅಂದರ ! ಅಜ್ಜಿನೇ ಹೇಳಿದಳು ಅವನ್ನ ತಗೀಲಿಕ್ಕೆ."



ಇಷ್ಟರಲ್ಲಿ ಬೀಸುವುದನ್ನು ಮುಗಿಸಿ ಕಾಶಿಯೇ ಹೊರಗೆ ಬಂದಳು. ವತ್ಸಲೆ ಅವಳಿಗಂದಳು– "ಅಜ್ಜೀ, ಈ ಮೊಗ್ಗೆ ಅರಳತಾವ ಏನ ಇನ್ನಮ್ಯಾಲೆ?"

ಕಾಶಿ ಗಟ್ಟಿಯಾಗಿ ನಕ್ಕಳು. "ಹೂವಿನ ದಸಿಂದ ತಗದಿಲ್ಲ ಕೃಷ್ಣಾ ಇವನ್ನ !"

"ಮತ್ತ ?"

"ಅತ್ತರದಸಿಂದ !"

"ಎಲ್ಲಿ ತಗೀತಾರ ಇದರ ಅತ್ತರ ?"

"ಘಟ್ಟದ ಮ್ಯಾಗಿನ ಮಂದಿ ಬರತಾರ ಇವನ್ನ ಒಯ್ಯಲಿಕ್ಕೆ. ಮೂರು ದುಡ್ಡಿಗೆ ಸೇರು! ಸೋನ್ಯಾ ಉಪದ್ರಾ ಕೊಡಾಕಹತ್ತಿದ ಆಟಾ ಆಡಿ. ಸುರಂಗಿ ಗಿಡದಮ್ಯಾಗ ಹತ್ತಿಸಿ ಮಗ್ಗೀ ತಗ್ಯಾಕ ಹೇಳಿ ತಗಿಸಿದ. ಎಡ್ಡು ತಾಸಿನಾಗ ಆರು ದುಡ್ಡು ಗಳಿಸಿಬಿಟ್ಟ !"

"ನನ್ನೂ ಆಂ ಅಜ್ಜೀ ಆ ದುಡ್ಡು, ಅಬಚೀ, ದೊಡ್ಡ ಜಾತ್ರಿ ಆಗತದಲ್ಲ ಇನ್ನ, ಆ ಜಾತ್ರ್ಯಾಗ ಬಾಜಾ ತಗೋತೀನಿ. ಅಲ್ಲಿಂದ ಹೆಂಗ ಊದತೀನಿ !"

ತನ್ನ ಕೈಯ ಬೆರಳುಗಳನ್ನು ತುಟಿಯ ಮೇಲೆ ಆಡಿಸುತ್ತ ಪೀ ಪೀ ಪೀ ಪೀ ಎಂದು ಸೋನ್ಯಾ ಸ್ವರವನ್ನು ತೆಗೆಯಹತ್ತಿದ.

ಆದರೆ ಮುದುಕಿಯಾದ ಕಾಶಿಯ ವ್ಯವಹಾರ ದೃಷ್ಟಿಯಾಗಲಿ, ಹುಡುಗನಾದ ಸೋನ್ಯಾನ ಆಟದ ದೃಷ್ಟಿಯಾಗಲಿ ವತ್ಸಲೆಯ ಮನಸ್ಸಿನಲ್ಲಿ ನಡಲಿಲ್ಲ. ಅಂಗಳದಲ್ಲಿಯ ಆ ಮೊಗ್ಗೆಗಳ ರಾಶಿ ಕಾರಖಾನೆಯೊಳಗಿನ ಕೂಲಿಕಾರರ ಜೀವನದಂತಿಲ್ಲವೆ? ಹುಟ್ಟಿಬರುವುದು, ಯಾರ ಸಲುವಾಗಿಯೋ ಮೈಯಲ್ಲಿಯ ರಕ್ತವನ್ನೆಲ್ಲ ಕೊಟ್ಟು ಸತ್ತುಹೋಗುವದು! ಹೂವುಗಳ ಆಯುಷ್ಯದಲ್ಲಿಯ ಆನಂದವೂ ಈ ಮೊಗ್ಗೆಗಳಿಗೆ ಕ್ಷಣಕಾಲವಾದರೂ ಸಿಕ್ಕಿರುವುದೇ ! ಎಲೆಗಳ ಕೂಡ ಕುಣಿಯುವುದು, ಗಾಳಿಯ ಕೂಡ ಆಡುವುದು, ಸೂರ್ಯಕಿರಣಗಳೊಡನೆ ನಗುತ್ತ ಕೆಲೆಯುತ್ತ ಮಾತಾಡುವುದು, ಮಧುರಗಾನದಿಂದ ಭೃಂಗಗಳನ್ನು ಆಕರ್ಷಿಸುವುದು, ಇವುಗಳಲ್ಲಿ ಒಂದು ಸುಖವೂ ಈ ಮೊಗ್ಗೆಗಳ ಹಣೆಬರಹದಲ್ಲಿಲ್ಲ. ಮೂರು ದುಡ್ಡಿಗೆ ಸೇರಿನಂತೆ ಇವು ಯಾರ ಕೈಗೂ ಬೀಳಬಹುದು. ನಾಳೆ ಇವುಗಳಿಂದ ಅತ್ತರವಾಗಬಹುದು. ಅದನ್ನು ಮೂಸಿದ ಮನುಷ್ಯನು "ಭಲೆ ! ಎಷ್ಟು ಚೆನ್ನಾಗಿದೆ ಅತ್ತರಿನ ವಾಸನೆ!" ಎನ್ನಬಹುದು. ಆದರೆ ಆ ಉದ್ಗಾರದ ಉಪಯೋಗವು ಈ ಮೊಗ್ಗೆಗಳಿಗೇನು?

ಊಟಕ್ಕೆ ಕುಳಿತಾಗಲೂ ಅವಳ ತಲೆಯಲ್ಲಿ ಇದೇ ವಿಚಾರವು ನಡೆದಿತ್ತು. ಮುದುಕಿಯು ಸಾರನ್ನು ಚೆನ್ನಾಗಿ ಮಾಡಿದ್ದಳು. ಅಡುಗೆಯಲ್ಲಿ ಷಡ್ರಸಗಳಿರುವುದರಿಂದ ಅದರಲ್ಲಿ ಎರಡು ಮೂರು ಅಂಶವಾದರೂ ಕಾವ್ಯವಿರುತ್ತದೆ. ಅದರಲ್ಲಿ ಇಂದಿನ ಕಾವ್ಯವು ಮುದುಕಿಯದು ! ಮುಪ್ಪಿನಲ್ಲಿ ವಯಸ್ಸು ಬುದ್ಧಿಗಳೊಡನೆ ಕರ್ತೃತ್ವ ಮತ್ತು ಅಭಿಮಾನಗಳ ಪ್ರಮಾಣವಾದರೂ ವ್ಯಕ್ತವಾಗುತ್ತದೆ. ಕಾಶಿಯಾದರೂ ಈ ನಿಯಮಕ್ಕೆ ಹೇಗೆ ಅಪವಾದವಾದಾಳು ? ಅವಳಿಗೆ ಸಂಸ್ಕೃತ ಬರುತ್ತಿದ್ದರೆ, ಉದಾಸೀನ – ಮುದ್ರೆಯಿಂದ ಸುಮ್ಮನೆ ಕುಳಿತು ಉಣ್ಣುತ್ತಿರುವ ವತ್ಸಲೆಯನ್ನು ಕುರಿತು ಅವಳು–

ಅರಸಿಕೇಷು ಕವಿತ್ವ ನಿವೇದನಮ್

ಶಿರಸಿ ಮಾ ಲಿಖ ಮಾ ಲಿಖ, ಮಾ ಲಿಖ

ಎಂದು ನಿಶ್ಚಯವಾಗಿಯೂ ಅನ್ನುತ್ತಿದ್ದಳು ! ಊಟದ ಕಡೆಗೆ ವತ್ಸಲೆಯ ಲಕ್ಷ್ಯವಿಲ್ಲದ್ದನ್ನು ನೋಡಿ ಅವಳು ಕೇಳಿದಳು– "ನಿನ್ನ ಮನಸ ಎಲ್ಲಿಟ್ಟೀದೆ ತಂಗೀ."

ವತ್ಸಲೆ ಏನು ಹೇಳಬಲ್ಲಳು ? ಅವಳ ಮನಸ್ಸು ಉತ್ತರಧ್ರುವದಿಂದ ದಕ್ಷಿಣಧ್ರುವದವರೆಗೆ ಓಡುತ್ತಿತ್ತು. ಒಂದು ಧ್ರುವದ ಮೇಲೆ ಅವಳಿಗೆ ಸುರಂಗೀ ಮೊಗ್ಗೆಗಳ ರಾಶಿ ಕಾಣುತ್ತಿತ್ತು. ಇನ್ನೊಂದು ಧ್ರುವದ ಮೇಲೆ ಆ ಮೊಗ್ಗಿಗಳ ಅತ್ತರವನ್ನು ಹಚ್ಚಿಕೊಂಡು ವೇಶ್ಯೆಯರ ಮನೆಮೆಟ್ಟಲುಗಳನ್ನೇರುವ ಪುರುಷರ ತಂಡವು ಕಾಣುತ್ತಿತ್ತು !

ವತ್ಸಲೆಯು ಸುಮ್ಮನಿದ್ದುದನ್ನು ನೋಡಿ ಮುದುಕಿಗೆ ಮತ್ತೆ ನೆಪಸಿಕ್ಕಿತು. ಅವಳು ನಗುತ್ತಲೆ ಅಂದಳು– "ಆ ಹೊಸದಾಗಿ ಬಂದಾವನ ಕಡಿ ಏನ ಹೋಗಿಲ್ಲ ಹೌದಲ್ಲೋ ?"

ವತ್ಸಲೆಯ ಕೈಯಲ್ಲಿಯ ತುತ್ತು ಇದ್ದಲ್ಲಿಯೇ ನಿಂತಿತು. ಅವಳು ಸ್ವಲ್ಪ ಸಿಟ್ಟಿನ ಸ್ವರದಿಂದ 'ಅಜ್ಜೀ–'

"ನಿನಗ ಅಜ್ಜೀ ಹಾಂಗಿದ್ದೇನಂತs ಹೇಳತೀನವ್ವ. ಅವ ತಿರಗೀ ಮುರಗೀ ನಿನ್ನ ಸಂಗಾಟ ಮಾತಾಡಾಕ ಬರತಾನಂತ."

"ಉಳದ ಹೆಂಗಸರ ಮಾತು ಅವರಿಗೆ ತಿಳಿಯೂದಿಲ್ಲ !"

"ನಿಂದ ಅsಟ ಮಾತ್ರ ತಿಳೀತೈತಿ" ಎಂದು ಕಾಶಿ ಹಿಯಾಳಿಸಿ ನುಡಿದಳು. ಉಳಿದ ಹೆಂಗಸರಲ್ಲಿ ಈ ಪ್ರೇಮದ ಭಾಷೆಯೆಲ್ಲಿಂದ ಬರಬೇಕು ಎನ್ನುವಂತಿತ್ತು ಅವಳ ಆ ಸ್ವರ.

"ಅವರಿಗೆ ಕೊಂಕಣೀ ಏನೂ ತಿಳಿಯೂದಿಲ್ಲ" ಎಂದು ವತ್ಸಲೆಯು ಶಾಂತವಾಗಿ ಹೇಳಿದಳು.

"ನಿನಗ ಹ್ಯಾಂಗ ಬರತೈತಿ ಅದು? ನಿನಕಿಂತ ನಾಕದಿನ ಮೊದಲ ಬಂದಾನ ಅವಾ. ಏನು ಅವನಕಿಂತಾ ನಿನ್ನ ಬುದ್ಧಿ ಹೆಚ್ಚಿಂದೇನೋ? ಹಾಂಗ ಇದ್ದರ ಮಾಡು ನೋಡೂಣು, ಅದೇನು ಯಂತ್ರಾನೋ ಮಂತ್ರಾನೋ ! ಅಂದರ ಐದಸಾವಿರ ರೂಪಾಯಾರs ಸಿಕ್ಕಾವು!"

ಸೋನ್ಯಾ ನಡುವೆ ಅಂದ : "ಐದು ಸಾವಿರ ! ಅಬ್ಬಬ್ಬ ! ಅಂದರ ಎಷ್ಟು ಅಬಚೀ ? ಭಾಳ ಭಾಳಲ್ಲ ? ಅಲ್ಲಿಂದ ಮೋಟರ ತರೂನು ! ಅದರಾಗ ಕೂತು ಅವ್ವನ ಹತೀಲೆ ಹೋಗೂನು."

ಕಾಶಿಯು ಕಡೆಕಡೆಗೆ ನಗೆಯ ಮೇಲೆಯೇ ಮಾತು ಸಾಗಿಸಿ ಮುಗಿಸಿದಳು. ಆದರೂ ನೆರೆಹೊರೆಯ ಹೆಂಗಸರ ಮಾತಿನಿಂದ ಮುದುಕಿಯ ಮನಸ್ಸಿನಲ್ಲಿ ಸಂಶಯವು ಮೂಡಿದೆಯೆಂಬುದು ವತ್ಸಲೆಗೆ ತಿಳಿಯದೆ ಹೋಗಲಿಲ್ಲ. ಕಾಶಿಯ ಸಂಶಯವನ್ನು ತೆಗೆದುಹಾಕಲಿಕ್ಕೆ ಅವಳಂದಳು– "ಅವರು ಇಲ್ಲಿ ಇರೂದೂ ಅಷ್ಟರಾಗೇ ಅದೆ !"

"ಅವರು ಹೋದರ ನೀನೂ ಹೋಗಾಕಿ" ಎಂದು ತನ್ನ ಹಟ ಸಾಧಿಸುವ ಉದ್ದೇಶದಿಂದ ಅಂದಳು.



ಒಂದೂವರೆ ತಿಂಗಳ ಅನುಭವದಿಂದ ವತ್ಸಲೆಯು ಒಂದು ಮಾತನ್ನು ತಿಳಿದಳು : ಅದೆಂದರೆ ಅಶಿಕ್ಷಿತ ಜನರನ್ನು ಅದರಲ್ಲಿ ಮುದುಕರನ್ನು ಯುಕ್ತಿವಾದದಿಂದ ಸಮಾಧಾನಪಡಿಸುವುದು ಶಕ್ಯವಿಲ್ಲೆಂಬುದು. ಇದಲ್ಲದೆ ಕೆಲವು ಮಾತು ಮುದುಕಿಯ ಅಬದ್ಧ–ತರ್ಕಕ್ಕೆ ಪುಷ್ಟಿಯನ್ನು ಕೊಡುವಂತೆಯೇ ಕೂಡಿಬಂದಿದ್ದವು. ಅವಳು ವಿಚಾರಮಾಡತೊಡಗಿದಳು. ವಿದ್ಯಾಧರನು ಬಂದ ನಾಲ್ಕುದಿವಸಗಳ ಮೇಲೆಯೆ ತಾನೂ ಆ ಊರಿಗೆ ಬಂದದ್ದು. ಅವನು ಊಟ ಉಡಿಗೆಯಲ್ಲಿ ಮನೆಯ ಮನುಷ್ಯನಾಗಬಹುದು. ಆದರೆ ಮಾತುಕತೆಯಲ್ಲಿ ಅವನು ಹೇಗೆ ಮನೆಯನಾದಾನು ? ಯಂತ್ರ ತಯಾರಿಸಲಿಕ್ಕೆಂದು ಬಂದ ವಿದ್ಯಾಧರನಿಗೆ ಗೋಡಂಬಿಗಳನ್ನು ಹೇಗೆ ಒಡೆಯುವರೆಂಬುದನ್ನು ಮೇಲಿಂದ ಮೇಲೆ ನೋಡಬೇಕಾಗುತ್ತಿತ್ತು. ಮತ್ತೇನನ್ನಾದರೂ ಕೇಳಬೇಕಾಗುತ್ತಿತ್ತು. ತನಗೆ ಶುದ್ಧವಾಗಿ ಮಾತಾಡಲಿಕ್ಕೆ ಬರುತ್ತದೆಂದು ಅವನು ಯಾವಾಗಲೂ ತನ್ನೊಡನೆ ಮಾತಾಡುತ್ತಿದ್ದ. ಆ ದಿವಸ ಅವನು ಚೇಷ್ಟೆಯಿಂದ ದಾದಾ ಅವರಿಗೆ ಅನ್ನಲಿಲ್ಲವೇ ! ಕೊಂಕಣೀ ಭಾಷೆ ಮತ್ತು ಮೀನು ಇವೆರಡು ಮಾತ್ರ ತನಗೆ ಸರಿಹೋಗುವುದಿಲ್ಲವೆಂದು ? ಅವನ ದೃಷ್ಟಿಯಲ್ಲಿ ಪಾಪವಿರಬಹುದೇ ? ಛೇ! ಪುರುಷರ ದೃಷ್ಟಿಯಲ್ಲಿ ಅಡಗಿದ ಪಾಪವನ್ನು ಸ್ತ್ರೀಯರು ಸಹಜವಾಗಿಯೇ ಹುಡುಕಿ ತೆಗೆಯುತ್ತಾರೆ. ಅವರ ದೃಷ್ಟಿಯಲ್ಲಿ ತೇಜಸ್ಸಿದೆ ; ಆದರೆ ಅದು ರತ್ನದ ತೇಜಸ್ಸು ! ಅಗ್ನಿಯದಲ್ಲ!

ಆದರೆ ಈ ಮಾತು ಮುದುಕಿಯಾದ ಕಾಶಿಯ ಗಂಟಲಲ್ಲಿ ಹೇಗೆ ಇಳಿಯಬೇಕು ? ಅವಳೊಬ್ಬಳಿಗೇ ಏಕೆ? ಕಾರಖಾನೆಯಲ್ಲಿಯ ಎಲ್ಲ ಹೆಂಗಸರ ತಿಳುವಳಿಕೆಯೂ ಹಾಗೇ ಆಗಿರಬೇಕು. ತಾನು ಮೂಲತಃ "ಬಿಳಿ ಅಂಗಿ"ಯವರ ವೈರಿಯೇ ; ವಿದ್ಯಾಧರನಿಗೂ ತನಗೂ ಏನಾದರೂ ಅನಿಷ್ಟ ಸಂಬಂಧವಿರಬೇಕು. ಇಲ್ಲಿ ಲಗ್ನವಿಲ್ಲದ ಹೆಂಗಸಿನೊಡನೆ ಇರುವುದು ಸರಿದೋರುವುದಿಲ್ಲವೆಂದು ತನಗೆ ಹೀಗೆ ಹೊರಗೆ ಇರಲಿಕ್ಕೆ ಹೇಳಿದ್ದಾನೆ. ತನಗೆ ಕೆಲಸವು ಹೆಚ್ಚು ಬೀಳಬಾರದೆಂದು ತನ್ನೊಡನೆ ಪುನಃಪುನಃ ಮಾತಾಡುತ್ತಾ ನಿಲ್ಲುತ್ತಾನೆ–

ಕಾಂಚನಗಂಗೆಯ ಶಿಖರವನ್ನು ಮುಟ್ಟಲಿಕ್ಕೆ ವಿಮಾನವಾದರೂ ಬೇಕು. ಆದರೆ ಅಬದ್ಧತರ್ಕದ ಮುಗಿಲು ಮುಟ್ಟುವ ಶಿಖರವನ್ನು ಜನರು ಕ್ಷಣಮಾತ್ರದಲ್ಲಿ ಮುಟ್ಟುತ್ತಾರೆ. ತನ್ನ ಮತ್ತು ವಿದ್ಯಾಧರನ ವಿಷಯದಲ್ಲಿಯಾದರೂ ಹೀಗೇ ಆಗಿರಬೇಕು. ತನ್ನ ಕೆಲಸವು ಬೇಗ ಬೇಗನೆ ಮುಂದೆ ಸಾಗಬೇಕೆಂದು ಅವನು ಚಹದ ಪಾತ್ರೆ ಮುಂತಾದವುಗಳನ್ನು ತೊಳೆಯಲಿಕ್ಕೆ ತನ್ನನ್ನು ಕರೆಯುತ್ತಿದ್ದ. ಮುಂಜಾನೆ ಎದ್ದು ವಿದ್ಯಾಧರನ ಮನೆಗೆ ಹೋಗುವದು, ಕಪ್ಪು ಬಸಿ ತೊಳೆದು ಅಲ್ಲಿಂದ ಕಾರಖಾನೆಗೆ ಹೋಗುವದು, ಅವಳ ನಿತ್ಯದ ಕೆಲಸವಾಗಿತ್ತು. ಆ ಯಂತ್ರದ ವಿಚಾರದಲ್ಲಿ ಅವನು ನಿದ್ದೆಗೆಡುತ್ತಾನೆ. ಏಳಲಿಕ್ಕೆ ಬೇಸರವಾದರೆ ತನಗೇ ಚಹ ಮಾಡ ಹೇಳುತ್ತಾನೆ. ಇದಕ್ಕಾಗಿ ತುಸು ತಡವಾಯಿತೆಂದರೆ ಅಂದು ಕಾರಖಾನೆಗೆ ಹೋಗಲಿಕ್ಕೆ ಎಂಟು ಗಂಟೆಯೇ ! ತಮ್ಮ ತಮ್ಮೊಳಗೆ ಗುಜುಗುಟ್ಟಿ ಪಿಸಿಪಿಸಿ ನಗುಹತ್ತುವವರೇ ಎಲ್ಲ ಹೆಂಗಸರೂ !

ಅದರಲ್ಲಿಯೂ ಆ ಕಾರಕೂನನು ಅವರ ಸಂಶಯಕ್ಕೆ ಪುಟಕೊಟ್ಟ. ವಿದ್ಯಾಧರನಿಗೆ ಚಹ ಸಕ್ಕರೆಗಳನ್ನು ಅವನು ಅಳೆದು ತೂಗಿ ಕಳಿಸಿಕೊಡುವವ. ಮತ್ತೆ ದಾದಾಸಾಹೇಬರ ಎದುರಿಗೇ ಅವನನ್ನು ಕೇಳಿದ–

“ಸಾಹೇಬ ! ತಮ್ಮ ಕೆಲಸ ಅಂದರ ಬರಿ ತಲೀ ಕೆಲಸ. ಮೊದಲಃ ರಕ್ತ ಸುಡತದ. ಅದರಾಗ ಮತ್ತ ಚಹಾ ಬಹಳ ಕುಡಿಯೂದು ಒಳ್ಳೇದಲ್ಲರಿ. ಹಾಲು ಬೇಕಾದರೆ ಹೆಚ್ಚಿಗೇ–”

“ನಾನೆಲ್ಲಿ ಹೆಚ್ಚಾಗಿ ಚಹ ಕುಡಿಯುವೆ? ದಿವಸಕ್ಕೆ ಎಣಿಸಿ ಎರಡು ಕಪ್ಪು” ವಿದ್ಯಾಧರನಿಗೆ ಅವನ ಮಾತಿನ ಒಲವು ತಿಳಿಯದ್ದರಿಂದ ಸರಳ ಉತ್ತರ ಕೊಟ್ಟ.

“ಎರಡೇ ಕಪ್ಪು?”

“ಹೌದು.”

“ಅಂದರೆ ಆ ಕೃಷ್ಣಾ ತುಡುಗಿ ಕಾಣತಾಳ ನೋಡ್ರಿ.”

ತಾನು ತಟ್ಟನೆ ಉತ್ತರ ಕೊಡುವವಳಿದ್ದಳು. ಅಷ್ಟರಲ್ಲಿ ವಿದ್ಯಾಧರನೂ ಸ್ವಲ್ಪ ಸಿಟ್ಟಿನ ನೋಟದಿಂದಲೇ ತನ್ನ ಪಕ್ಷವನ್ನು ಮಂಡಿಸಿದ.

“ಹಾಂಗಲ್ಲ ಸಾಹೇಬ, ಚಹಾ ಸಕ್ಕರಿ ನಾಲ್ಕು ಕಪ್ಪಿನದು ಖರ್ಚ ಆಗತದೆ ಅಂತ ತಿಳಿದು ನಾನು ಅಂದೆ–”

“ನಾಲ್ಕ ಕಪ್ಪು ಚಹಾ ಆಗೇ ಆಗತದಲ್ಲ. ಕೃಷ್ಣೆಗೆ ತನ್ನ ಸಲುವಾಗಿಯೂ ಸ್ವಲ್ಪ ಮಾಡಿಕೋ ಎಂದು ಹೇಳತೀನಿ.”

“ಹಃ ಹಃ ಹಃ ನಡಿಯೋದೇ ಇದು ! ಕಲಿತವರು ತಾವು ! ಸುಧಾರಿಸಿದವರು ! ತಮಗೊಬ್ಬರಿಗೇ ಚಹಾ ಹೆಂಗ ಸವಿ ಹತ್ತೀತು ? ಖರ್ಚಿನ ದಸಿಂದೇನೂ ನನ್ನ ತಕರಾರ ಇಲ್ಲ ಮತ್ತ ಸಾಹೇಬ ! ನಾನು ಕೋಠೀ ಕೋಣೆ ಅಧಿಕಾರಿ ಇದ್ದರೂ ನನಗೇನೂ ಹೊಟ್ಟಿ ಕಡಿಯೂದುಲ್ಲ.”

“ಚಹ ಸಕ್ಕರೀ ಖರ್ಚು ಸ್ವಲ್ಪ ಹೆಚ್ಚಾದರೂ ಅದರ ಸಲುವಾಗಿ ಯುಕ್ತಿ ಅದೆ ದಿವಾಣಜಿಯವರೆ !”

ದಿವಾಣಜಿಯವರು ಆಶ್ಚರ್ಯದಿಂದ ವಿದ್ಯಾಧರನನ್ನು ನೋಡ ಹತ್ತಿದರು.

“ನನಗೆ ಯಂತ್ರದ ಐದು ಸಾವಿರ ರೂಪಾಯಿ ಬರಬೇಕಲ್ಲವೇ?”

“ಹೌದು.”

“ನಾಲ್ಕು ಸಾವಿರದ ಒಂಭತ್ತನೂರು ತೊಂಬತ್ತೊಂಬತ್ತು ಕೊಟ್ಟರು ನಡೆದೀತು !”

ಆ ಸಂವಾದದ ಪರ್ಯವಸಾನವೆಂದರೆ ವಿದ್ಯಾಧರ ಕಾರಕೂನರಿಬ್ಬರೂ ನಕ್ಕುಬಿಟ್ಟರು. ಆದರೆ ಕಾರಖಾನೆಯ ಎಲ್ಲ ಹೆಂಗಸರಿಗೆ ಮಾತ್ರ ತಾನು ವಿದ್ಯಾಧರನ ಕೋಣೆಯಲ್ಲಿ ಚಹ ಕುಡಿಯುತ್ತೇನೆಂಬುದು ತಿಳಿದಂತಾಯಿತು. ಮೊದಲು ಎರಡು ಮೂರು ದಿವಸ ತಾನು ಚಹ ಇಲ್ಲದೆಯೆ ಇದ್ದಳಲ್ಲ ! ಆದರೆ ಅದು ಸಿಗಹತ್ತಿತು–ಸಂಧಿ ಸಿಕ್ಕಕೂಡಲೆ ಮನುಷ್ಯ ತನ್ನ ಸುಖವನ್ನು ಸಾಧಿಸುವನೆಂಬುದೇ ನಿಜ. ಎರಡು ಮೂರು ದಿವಸ ಚಹ ಇಲ್ಲದ್ದಕ್ಕೆ ತಲೆ



ನೋಯುತ್ತಿತ್ತು. ಬಿಸಿಲಲ್ಲಿ ಹೋಗಿ ಬಂದು ಕಾಲೂ ನೋಯುತ್ತಿದ್ದವು. ಎಂಟೆಂಟು ಗಂಟೆ ಕೆಲಸಮಾಡಿ ಬೆನ್ನೂ ನೋವಾಗಿತ್ತು. ಇಂಥಾದ್ದರಲ್ಲಿ ಅನಾಯಾಸವಾಗಿ ಚಹ ಸಿಗಹತ್ತಿತು. ತನ್ನ ಮೊದಲಿನ ಬಿಳಿಯಂಗಿಯವರ ಲಕ್ಷಣಗಳಲ್ಲಿ ಯಾವುದನ್ನೂ ಇಡುವುದಿಲ್ಲವೆಂದು ತಾನು ನಿಶ್ಚಯ ಮಾಡಿದ್ದಳು. ಆದರೂ ಹೂವಿನ ಗಿಡದ ಟೊಂಗೆಯನ್ನು ಎಲ್ಲಿ ಒಯ್ದು ನೆಟ್ಟರೂ ಅದಕ್ಕೆ ಮೂಲ ಗಿಡದ ಹೂವು ಬಿಡತಕ್ಕವೇ ! ಬೇರೆ ಹೂವು ಬಿಡಬೇಕಾದರೆ “ಕಲಮು” ಮಾಡಬೇಕು ! ಆ ಕಲಮು ಮಾಡುವ ಶಕ್ತಿ–ತಾನು ಚಹದ ಮೋಹಕ್ಕೆ ಬಲಿಬಿದ್ದುದು ನಿಜ. ಆದರೆ ಕಡ್ಡಿ ಗುಡ್ಡವಾದದ್ದು ಜನರಿಗೆ ತಿಳಿಯುವದೆಂತು? ಅಥವಾ ಆ ಗುಡ್ಡದಲ್ಲಿಯೇ ಬದುಕಿನ ದಾರಿ ತಪ್ಪಬೇಕೋ?

ಮಳೆಗಾಲವು ಆರಂಭವಾದ ಕೂಡಲೇ ನೆಲದಲ್ಲಿಯ ಗೆದ್ದಲಿಗಳು ಹೊರಗೆ ಬರಹತ್ತುತ್ತವೆ. ಅದರಂತೆಯೆ ಕಾಶಿಯ ಮಾತಿನಿಂದ ವತ್ಸಲೆಯ ಮನಸ್ಸಿನಲ್ಲಿ ಹುದುಗಿಕೊಂಡಿದ್ದ ಎಲ್ಲ ಸಂಗತಿಗಳೂ ಒಮ್ಮೆಲೆ ಹೊರಬಿದ್ದು ಅವಳ ಕಣ್ಣೆದುರಿಗೆ ಕುಣಿಯಹತ್ತಿದವು. ಆ ಕಥೆಗಳ ಸಂಚಿಕೆಯ ಮಾತು. ಅದಾದರೂ ಈ ಕೂಲಿಕಾರ ಹೆಣ್ಣುಮಕ್ಕಳಿಗೆ ವಿಲಕ್ಷಣವೇ ಎನಿಸಿರಬೇಕು. ಓದು ಬರೆಯಲಿಕ್ಕೆ ಬರುವ ಹೆಂಗಸು ಅವರಲ್ಲಿ ಐನೂರಲ್ಲಿ ಒಬ್ಬಳು ಕೂಡ ಸಿಗುವಂತಿದ್ದಿಲ್ಲ. ಆದರೆ ದಾದಾ ವಿದ್ಯಾಧರನಿಗೆ ಆ ಸಂಚಿಕೆಯನ್ನು ತೋರಿಸಿ ಕೇಳುತ್ತಿದ್ದರು.

“ಇದು ನೋಡಿದಿರಾ ನಮ್ಮ ಸುಲೋಚನೆಯ ಚಿತ್ರ ?”

ವಿದ್ಯಾಧರನು ಸಂಚಿಕೆಯನ್ನು ಕೈಯಲ್ಲಿ ತೆಗೆದುಕೊಂಡು ನೋಡಿ ತಲೆಹಾಕಿದ. ತನಗೂ ಅದನ್ನು ನೋಡುವ ಉತ್ಸುಕತೆಯಾಯಿತು.

“ಕಥೆಯನ್ನಾದರೂ ಚೆನ್ನಾಗಿ ಬರೆದಿರುವರು ರಮಾಕಾಂತ. ನಮ್ಮ ಕಾರಖಾನೆಯ ಪುಸ್ತಕವನ್ನು ಹೀಗೇ ಬರೆದರೆಂದರೆ ಎಷ್ಟು ಉತ್ತಮವಾಗುವದೆಂದಿರಿ !”

ವಿದ್ಯಾಧರನು ಆ ಸಂಚಿಕೆಯನ್ನು ತೆಗೆದುಕೊಂಡು ಹೋದ. ರಮಾಕಾಂತನ ಕಥೆ ! ಸುಲೋಚನೆಯ ಚಿತ್ರ ! ತನ್ನ ಮನಸ್ಸು ತಡೆಯಲಿಲ್ಲ. ಮುಚ್ಚಂಜೆಯಾಗುತ್ತ ಬಂದಿದ್ದರೂ ತಾನು ವಿದ್ಯಾಧರನ ಮನೆಗೆ ಹೋದಳು. ಅವನೆಲ್ಲಿಯೋ ತಿರುಗಾಡಲಿಕ್ಕೆ ಹೋಗಿದ್ದ. ತಾನು ದಾರೀ ನೋಡುತ್ತ ಕುಳಿತಳು. ತನಗೆ ಓದಲಿಕ್ಕೆ ಬರುತ್ತದೆಂಬುದನ್ನು ಕೇಳಿ ಅವನಿಗೆ ಎಷ್ಟು ಆಶ್ಚರ್ಯ ! ಆ ಸಂಚಿಕೆಯನ್ನು ತೆಗೆದುಕೊಂಡು ಮನೆಗೆ ಬರಲಿಕ್ಕೆ ಬಹಳ ತಡವಾಯಿತು. ಮುದುಕಿ ತನ್ನ ಮೇಲೆ ಬಹಳ ಸಿಟ್ಟಿಗೆದ್ದಳು. ಅವಳು ಹೇಳುವದಾದರೂ ತಪ್ಪಾಗಿರಲಿಲ್ಲ. ರಾತ್ರಿಯ ವೇಳೆ ದಾರಿಯಲ್ಲಿ ಕುಡುಕರು ಅಡ್ಡಾಡುವರು. ಹಳ್ಳಿಯ ವಸತಿ ! ಪ್ರಸಂಗದಲ್ಲಿ ಕಿರಿಚಿದರೂ ಗೊತ್ತಾಗದೆ ಹೋಗಬಹುದು.

ಆ ಕಥೆಯನ್ನು ಓದಿದ ಮೇಲೆ ತನಗೆ ನಿದ್ರೆಯೇ ಬರಲಿಲ್ಲ. ವೇಶ್ಯೆಯ ಮಗಳು ಸುಂದರಿ. ಚಿತ್ರಕಾರನೂ ಸುಂದರ, ಮರಣವೂ ಸುಂದರ. ಕೊನೆಯ ಮಿಲನವೂ ಸುಂದರ! ಎಲ್ಲವೂ ಕಲ್ಪನಾರಾಜ್ಯದ ಮಾತುಗಳೇ ಕೇವಲ ಕಾಗದದ ಹೂವುಗಳೇ. ಇಂಥ ಹೂವುಗಳಿಂದ ಎಂದಾದರೂ ಭೃಂಗಗಳಿಗೆ ತೃಪ್ತಿಯಾಗಿರುವದೆ? ಬಿಸಿಲು ಮಳೆಗಳು ಆಡಹತ್ತಿದಾಗ

ಇಂದ್ರಧನುಸ್ಸು ಮೂಡುವದು. ಅದು ಕ್ಷಣಹೊತ್ತು ಮಾತ್ರ ಮೂಡಿ ಮಾಯವಾಗುತ್ತದೆ. ಮಿಂಚಾದರೂ ಕ್ಷಣಹೊತ್ತೇ ಮಿಂಚುತ್ತದೆ. ಆದರೆ ಮಿಂಚಿನ ಶಕ್ತಿ ಇಂದ್ರಧನುಸ್ಸಿಗೆಲ್ಲಿ ? ಜೀವನದ ಚಿತ್ರವು ಚಿತ್ರಕಲೆಯ ಪಾರ್ಶ್ವಭೂಮಿಯಲ್ಲಿಯೇ ತನ್ನ ಪ್ರತಿಭೆಯನ್ನೆಲ್ಲ ವೆಚ್ಚಮಾಡುವ ರಮಾಕಾಂತನು ಕಲಾವಂತನೆಂದುಕೊಳ್ಳುತ್ತಾನೆ. ಕಲೆಯು ಜೀವನಕ್ಕಾಗಿಯೆ ಇದೆಯಲ್ಲದೆ ಜೀವನವು ಕಲೆಗಾಗಿ ಇಲ್ಲ. ಸಮುದ್ರದ ತೆರೆಗಳು ಕೈಯಲ್ಲಿ ಕೈಹಾಕಿ ಆಡುವವು, ಬೆನ್ನು ಮುಟ್ಟುವ ಆಟದಲ್ಲಿ ಮಗ್ನವಾಗಿ ಹೋಗುವವು. ಅವುಗಳ ಆ ಬಾಲಲೀಲೆಗಳು ಅತ್ಯಂತ ಆನಂದದಾಯಕವೇನೋ ಹೌದು. ಅವುಗಳಲ್ಲಿ ಕಲೆಯ ಸೌಂದರ್ಯವಿದೆ. ಆದರೆ ಆ ಕಲೆ ಜೀವನದಲ್ಲಿ ನಲಿಯುತ್ತದೆ. ಸಮುದ್ರವೇ ಕ್ಷಣಾರ್ಧದಲ್ಲಿ ಅಟ್ಟಿಸಿಹೋದರೆ ಅದರೊಳಗೆ ಎಷ್ಟು ಮುತ್ತು ರತ್ನಗಳಿದ್ದರೂ ಆ ಭಯಂಕರ ದೃಶ್ಯವನ್ನು ಯಾರಿಂದಾದರೂ ನೋಡುವದಾದೀತೆ?

ಆಕಾಶವು ಮೋಡಗಳಿಂದ ತುಂಬಿ ಬರುವಂತೆ ತನ್ನ ಮನಸ್ಸೂ ವಿಚಾರದಿಂದ ತುಂಬಿಬಂದಿತು. ಏನು ಮಾಡಿದರೂ ನಿದ್ರೆಯಿಲ್ಲ. ನಡು ರಾತ್ರಿಯಲ್ಲೆದ್ದು ಹೊಗೆ ಸೂಸುವ ದೀಪದ ಎದುರಿಗೆ ಬರೆಯಲಿಕ್ಕೆ ಕುಳಿತಳು. ಗುಡಿಯ ಎದುರಿಗೆ ಸುಂದರವಾಗಿ ತೋರುವ ಹಸಿರು ನೆಲ್ಲು ಗದ್ದೆ, ಅಲ್ಲಿ ಬಂದು ಕೂಡುವ ಕೋಮಲವಾದ ಪಾರಿವಾಳಗಳು, ತನ್ನೆದುರಿಗೆ ಆ ಚಿತ್ರ ನಿಂತಿತು. ತಾನು 'ಸುಂದರ ಚಿತ್ರ' ವೆಂಬ ಕಥೆಯನ್ನು ಬರೆದಳು. ದೀಪದ ಬೆಳಕಿನಿಂದ ಮುದುಕಿ ಎಚ್ಚತ್ತಳು. ನಿದ್ರೆ ಕೆಟ್ಟದ್ದರಿಂದ ಅವಳು ಸ್ವಲ್ಪ ಸಿಟ್ಟಿಗೆದ್ದಿದ್ದಳು.

ಅವಳು ಕೇಳಿದಳು : "ಏನು ಮಾಡತೀದೇ ?"

"ಏನೂ ಇಲ್ಲ !" ಏನೋ ತಾನು ಬರೆಯುತ್ತಿದ್ದಳೆಂಬುದು ಅವಳಿಗೆ ಸ್ಪಷ್ಟವಾಗಿ ಕಾಣುತ್ತಿತ್ತು.

"ಏನ ಬರದಿ ? ಪತ್ರs ?"

"ಉಂ.....ಹುಂ."

ಸಿಟ್ಟಿನಿಂದಲೇ ಅವಳು ತನ್ನ ಕಡೆಗೆ ಬೆನ್ನು ತಿರುವಿದಳು. ಅಂದಿನ ರಾತ್ರಿ ಬರೆದದ್ದರ ಬಗ್ಗೆ ಅವಳ ತಿಳುವಳಿಕೆ ಏನಾದರೂ ವಿಚಿತ್ರವಾಗಿರಬೇಕು. ತಾನು ಸಂಜೆಯ ಮುಂದೆ ಬೇಕೆಂತಲೆ ವಿದ್ಯಾಧರನ ಮನೆಗೆ ಹೋದದ್ದು. ನಡುರಾತ್ರಿಯಲ್ಲೆದ್ದು ಬರೆಯುತ್ತ ಕುಳಿತದ್ದು. ಏನು ಬರೆಯುತ್ತಿದ್ದಳೆಂಬುದನ್ನು ಅವಳಿಗೆ ಹೇಳದಿದ್ದದ್ದು. ಹೇಳುವುದಾದರೂ ಏನು ? ಗಂಡ ಬಿಟ್ಟುಕೊಟ್ಟ, ಆಪ್ತೇಷ್ಟರಿಲ್ಲದ ಹೆಂಗಸು ತಾನು ! ಯಾರಿಗೆ ಪತ್ರ ಬರೆಯುತ್ತೇನೆಂದು ಹೇಳಬೇಕು ? ಆದರೆ ತಾನು ಸುಮ್ಮನಿದ್ದುದಕ್ಕೆ ಕಾಶಿ ವಿಪರೀತವಾಗಿ ಅರ್ಥಮಾಡಿರಬಹುದು. ತಾನು ವಿದ್ಯಾಧರನಿಗೆ ಪತ್ರ ಬರೆದಳೆಂದು ಅವಳಿಗೆ ಮಂದಟ್ಟಾಗಿರಬಹುದು.

ಊಟವಾದ ಮೇಲೆ ಕೆಲಸದ ವೇಳೆಯವರೆಗೆ ವತ್ಸಲೆಯು ಅಕ್ಕಿ ಆರಿಸುತ್ತ ಕುಳಿತಳು. ಚಳಿಗಾಲ ಮುಗಿಯುತ್ತ ಬಂದದ್ದರಿಂದ ಗಾಳಿಯು ಬಲವಾಗಿ ಬೀಸುತ್ತಿತ್ತು. ಹೆಣ್ಣೆಲೆಗಳು ಭರಭರನೆ ಉದುರಿ ಬೀಳುತ್ತಿದ್ದವು ಗಾಳಿಯ ವೇಗದೊಡನೆ ಒಂದು ಒಣಗಿದ ಟೊಂಗೆಯೂ ಧಪ್ಪನೆ ಕೆಳಗೆ ಬಿತ್ತು. ಎದುರಿಗೆ ನೋಡಗೊಡದಷ್ಟು ಬಿಸಿಲು ರಣಗುಟ್ಟುತ್ತಿತ್ತು. ಆದರೆ ಆ



ಬೀಸುವ ಗಾಳಿಯ ಸ್ಪರ್ಶವು ಆ ಬಿಸಿಲಿನಷ್ಟೆ ತಾಪದಾಯಕವಾಗಿತ್ತು. ಅತ್ತಿತ್ತ ಎಲ್ಲ ಕಡೆಗೂ ಶಾಂತತೆ, ಆದರೆ ಆ ಶಾಂತತೆಯು ಒಬ್ಬ ಸ್ಮೃತಿ ತಪ್ಪಿದ ಮನುಷ್ಯನ ನೆನಪು ತಂದುಕೊಡುವಂತಿತ್ತು. ನಡುನಡುವೆ ಸಮೀಪದ ಆವಾರದಲ್ಲಿಯ ಕೋಳಿಯೊಂದು ಕೂಗುತ್ತಿತ್ತು. ಎದುರಿನ ದಿನ್ನೆಯಿಂದ ಒಂದು ಹಕ್ಕಿಯ ಕರುಣ ಸ್ವರವು ಕೇಳಬರುತ್ತಿತ್ತು. ಮತ್ತೆ ಎಲ್ಲ ಕಡೆಗೆ ಶಾಂತತೆ. ಮೂರ್ಛಿತ ಮನುಷ್ಯನು ನಡುವೆಯೆ ಒಂದೆರಡು ಸಾರಿ ಆರ್ತಸ್ವರದಿಂದ ಕೂಗುವಂತೆ ಅವು ಕೇಳಿಬರುತ್ತಿದ್ದವು. ಅಷ್ಟರಲ್ಲಿ ಎರಡು ನಾಯಿಗಳು ಕಡಿದಾಡುತ್ತ ಅಂಗಳದಲ್ಲಿ ಬಂದವು. ಕೇವಲ ಕಡಿದಾಡುವ ಪ್ರೀತಿಗಾಗಿಯೇ ಅವು ಕಡಿದಾಡುತ್ತಿರಬಹುದು. ವತ್ಸಲೆಯು ಕೈಮೇಲೆ ಎತ್ತಿ ಕಲ್ಲು ಒಗೆಯುವಂತೆ ನಟಿಸಿದಳು. ಒಂದಕ್ಕೊಂದು ಬೊಗಳುತ್ತ ಅವು ಅಲ್ಲಿಂದ ಹೊರಟುಹೋದವು. ಈ ಎಲ್ಲ ದೃಶ್ಯಗಳಲ್ಲಿ ತನ್ನ ಮನಸ್ಸಿನಲ್ಲಿಯಂತೆಯೆ ಇಡೀ ಸಮಾಜದ ಪ್ರತಿಬಿಂಬವೇ ಮೂಡಿದೆಯೆಂದು ವತ್ಸಲೆಗೆನಿಸಿತು. ಅಕ್ಕಿಯನ್ನಾರಿಸುತ್ತಲೆ ನೋಡಿದಳು. ನೆರಳು ಬೇಲಿಯ ಹತ್ತಿರ ಹೋಗಿತ್ತು. ಕೆಲಸಕ್ಕೆ ಹೋಗುವ ವೇಳೆಯಾಯಿತು.

"ಅಜ್ಜೀ, ನಾ ಹೊರಡತೀನಿ" ಮಡಕೆಯಲ್ಲಿ ಅಕ್ಕೀ ತುಂಬುತ್ತ ಹೇಳಿದಳು.

"ಕೃಷ್ಣಾ, ನಿನಗೊಂದು ಮಾತ ಹೇಳೂದದ."

ಕಾಶಿಯು ಸ್ವಲ್ಪ ಬಿಗುವಿನಿಂದಲೇ ಹೇಳಿದಳು. ವತ್ಸಲೆಯ ಎದೆ ಧಡಧಡಿಸಹತ್ತಿತು. ಮುದುಕಿ ತನ್ನನು ಮನೆಬಿಟ್ಟು ಹೊರಗೆ ಹಾಕುವಳೋ ಏನೊ? ವತ್ಸಲೆಯು ಅವಳ ಕಡೆಗೆ ಕರುಣದೃಷ್ಟಿಯಿಂದ ನೋಡಿದಳು.

"ತಂಗೀ, ಗಂಡಸರ ಗೂಡ ಸಲಿಗಿ ನೆಟ್ಟಗಲ್ಲ ಹಂs "

"ಅಲ್ಲಜ್ಜೀ......."

"ಅಲ್ಲs ಈ ಬಿಳಿಯಂಗಿಯವರದೇನು? ಹೊಳಿ ದಾಟಿದ ಮ್ಯಾಗ.........."

"ಆದರ ಆ ವಿದ್ಯಾಧರ ಅಂಥವರಲ್ಲ."

"ಅಂಥಾ ಬರವಸಿ ಕೊಡಬ್ಯಾಡ ನೀ ನನಗ. ಇವಾ ದಾದಾ ಕಾರಕಾನದಾರ. ಕಾಣತಾನ ಸರಳ ಮನಸ್ಯಾನ್ಹಂಗ. ಆದರೇನು ಗೊತ್ತ ನಿನಗ. ಅವಾ ಶಗಣಿ ತಿಂದನಲ್ಲ–"

"ಹೋಗಲಿ, ನಾವು ತಗೊಂಡೇನ ಮಾಡೋದು ಅದೆಲ್ಲ?"

"ಏನಮಾಡೂದು ? ಪಾರಾಗೂದು ಕಠಿಣ ಆಗತದವ್ವಾ, ಮುಂದ ಹಾವ ಸಣ್ಣದನಬಾರದು, ಗಂಡಸ ನನ್ನದನಬಾರದು."

ಮುದುಕಿಯ ಗಾದೆಯ ಮಾತು ಮೋಜೆನಿಸಿದ್ದರಿಂದ ವತ್ಸಲೆಯು ನಗುತ್ತ ಹೊರಗೆ ಹೋದಳು. ಮಧ್ಯಾಹ್ನ ಉರಿಬಿಸಲಿನಲ್ಲಿ ಅವಳಿಗೆ ಒಂದು ಒಂದೂವರೆ ಮೈಲು ನಡೆದುಹೋಗಬೇಕಾಗಿತ್ತು. ಯಾಕೋ ಯಾರು ಬಲ್ಲರು ? ಅವಳಿಗೆ ರಮಾಕಾಂತನ ನೆನಪಾಯಿತು. ಈ ವೇಳೆಯಲ್ಲಿ ಅವನು ಏನುಮಾಡುತ್ತಿರಬಹುದು? ರಾತ್ರಿಯ ನಾಟಕದ ನಿದ್ರೆ ಕಳೆಯಲಿಕ್ಕೆ ಮೆತ್ತನ್ನ ಹಾಸಿಗೆಯ ಮೇಲೆ ಮಲಗಿರಬೇಕು, ಆರಾಮ ಖುರ್ಚಿಯ ಮೇಲೆ ಒರಗಿ ಒಂದು ಸುಂದರವಾದ ಪ್ರಣಯ ಕಥೆಯನ್ನೋದುತ್ತಿರಬೇಕು. ಇಲ್ಲವೆ ಮೇಜಿನ

ಮುಂದೆ ಕುಳಿತು ಯಾವಳಾದರೂ ತರುಣಿಯು–ಆ ಸುರಂಗೆಯದಾಗಲಿ, ಸುಲೋಚನೆಯದಾಗಲಿ ಸೌಂದರ್ಯದೃಷ್ಟಿಯಿಂದ ನೋಡಿದ ರೂಪವನ್ನು ಕಾಗದದ ಮೇಲೆ ಇಳಿಸುತ್ತಿರಬೇಕು. ಎಲ್ಲಿ ರಮಾಕಾಂತ, ಎಲ್ಲಿ ತಾನು ?

ರಮಾಕಾಂತನೇತಕ್ಕೆ ? ಬಿಳಿಯಂಗಿಯವರ ಸಮಾಜವೆಲ್ಲಿ, ಕೂಲಿಕಾರರೆಲ್ಲಿ ? ಕಳೆದ ಒಂದೂವರೆ ತಿಂಗಳ ಅನುಭವಗಳು ಸರಸರನೆ ಅವಳ ಕಣ್ಣೆದುರಿಗೆ ಬಂದವು. ಗೋಡಂಬಿಯ ಕಾರ್ಖಾನೆಯಲ್ಲಿಯ ಹೆಂಗಸರ ಎಷ್ಟೋ ಕುಟುಂಬಗಳನ್ನು ತಾನು ನೋಡಿದಳು. ಕೂಲಿಕಾರರ ಆಯುಷ್ಯದಲ್ಲಿ ಬಾಲ್ಯ–ತಾರುಣ್ಯ–ವಾರ್ಧಕ್ಯಗಳೆಂಬ ಪಾವಟಿಗೆಗಳೇ ಇಲ್ಲವೆಂದು ಅವಳಿಗೆನಿಸಿತು. ಕೈಕಾಲು ಅಲುಗಿಸಲಿಕ್ಕೆ ಬಂದ ಕೂಡಲೆ ಪ್ರತಿಯೊಂದು ಜೀವವು ಕೆಲಸ ಸುರುಮಾಡಲಿಕ್ಕೇ ಬೇಕು. ಈ ಕೆಲಸವು ಕೈಕಾಲುಗಳ ವ್ಯಾಪಾರವು ನಿಂತುಹೋಗುವವರೆಗೆ ನಡೆಯುವುದೇ ! ಒಂದೇ ಒಂದು ಅಚ್ಚು ! ಎತ್ತಿನ ಗಾಣ ! ಈ ಗಾಣದಲ್ಲಿ ಕೂಲಿಕಾರರೇ ಎತ್ತು ! ಹೊರಡುವ ಕೊಬ್ಬರಿ ಅವನ ರಕ್ತಮಾಂಸಗಳದೇ ! ಅವುಗಳಿಂದ ಹೊರಡುವ ಎಣ್ಣೆ ಮಾತ್ರ ಕಲೆ, ಶಾಸ್ತ್ರ, ಧರ್ಮ, ಸಂಸ್ಕೃತಿ, ಇತ್ಯಾದಿಗಳ ವಿಚಾರ ಮಾಡಿ ತಪ್ತವಾದ ಬಿಳಿಯಂಗಿಯವರ ತಲೆಗಳನ್ನು ಶಾಂತ ಮಾಡಲಿಕ್ಕೆ !

ಗಂಜಿಗೂ ಗತಿ ಇಲ್ಲದಲ್ಲಿ ಎಲ್ಲಿಯ ಕಲೆ, ಎಲ್ಲಿಯ ಶಿಕ್ಷಣ ! ಮಕ್ಕಳಿಂದ ಮುದುಕರವರೆಗೆ ಎಲ್ಲರೂ ದುಡಿದರೂ ಮಧ್ಯಾಹ್ನವನ್ನು ನಿರ್ವಹಿಸಬೇಕಾದರೆ ಸಾಕುಬೇಕಾಗುವುದು. ಅಂದಮೇಲೆ ದುಡ್ಡು ಖರ್ಚುಮಾಡಿ ಶಿಕ್ಷಣವನ್ನು ಸಂಪಾದಿಸುವ ಸಾಮರ್ಥ್ಯವೆಷ್ಟು ಜನರಿಗೆ ಇದ್ದೀತು ? ಇಂಥ ಕೋಟ್ಯಾವಧಿ ಜನರು ಪಶುಗಳಂತೆ ಬದುಕನ್ನು ಸಾಗಿಸುತ್ತಾರೆಂದೇ ಬಿಳಿಯಂಗಿಯವರ ಕಲೆ, ಸೌಖ್ಯ, ಎಲ್ಲವೂ ನಡೆಯುತ್ತವೆ ! ಕೆಲವು ರೋಗಗಳಲ್ಲಿ ರೋಗಿಯನ್ನು ಬದುಕಿಸಲಿಕ್ಕೆ ತಮ್ಮ ರಕ್ತವನ್ನು ತೆಗೆದುಕೊಡಬೇಕಾಗುವುದಿಲ್ಲವೆ? ಕೂಲಿಕಾರರ ವರ್ಗವು ಎಷ್ಟು ತಲೆಮಾರುಗಳಿಂದ ಬಿಳಿಯಂಗಿಯವರಿಗೆ ಈ ರಕ್ತವನ್ನು ಪೂರೈಸುತ್ತ ಬಂದಿದೆ ; ಆದರೆ ಈ ರಕ್ತವನ್ನು ಪೂರೈಸುತ್ತಲೇ ಅದೇ ವರ್ಗವು ಸಾಯುತ್ತಿಲ್ಲವೆ?

ಸಾಂಗಲಿ, ಮುಂಬಯಿ, ಪಾಂಚಗಣಿಗಳಲ್ಲಿಯ ತನ್ನ ಆಯುಷ್ಯವು ವತ್ಸಲೆಗೆ ನೆನಪಾಯಿತು. ಆಳುಮಕ್ಕಳದಾಗಲೀ, ಒಕ್ಕಲಗಿತ್ತಿಯರದಾಗಲೀ ದೂರದಿಂದ ತನಗೆ ಎಷ್ಟು ಸಂಬಂಧವು ಬಂದರೂ ಆಗ ಅವರ ಸುಖದುಃಖಗಳು, ಅವರ ಮನಸ್ಸಿನಲ್ಲಿಯ ಇಚ್ಛೆಗಳು, ಕಡೆಗೂ ತಿಳಿಯಲೇ ಇಲ್ಲ. ಈ ಒಂದೇ ತಿಂಗಳಲ್ಲಿ ವಿಶ್ವರೂಪದ ದರ್ಶನವೇ ಆದಂತಾಯಿತು! ಕಿವಿಯ ಮೇಲೆ ಜುಟ್ಟುಗಳನ್ನಿಟ್ಟುಕೊಂಡು ಡೌಲಿನಿಂದ ತಿರುಗುವ ಏಳೆಂಟು ವರ್ಷದ ಹುಡುಗರು, ಅಚ್ಚುಕಟ್ಟಿನ ಕಲ್ಪನೆಯೂ ಇರದ್ದರಿಂದ ಭೂತಗಳಂತೆ ತೋರುವ ಹುಡುಗಿಯರು, ದುಡ್ಡಿಗಾಗಿ ಇನ್ನೊಬ್ಬರನ್ನು ವಂಚಿಸುವ ಮನುಷ್ಯರು, ಕ್ಷುಲ್ಲಕ ಕಾರಣಗಳಿಗಾಗಿ ಬೈದಾಡುವ ಹೆಂಗಸರು, ಸಂಜೆಯಲ್ಲಿ ಸೆರೆಯ ಅಂಗಡಿಯಿಂದ ಆರಂಭವಾಗುವ ಕೌಟುಂಬಿಕ ನಾಟಕಗಳು, ಒಂದಲ್ಲ ಎರಡಲ್ಲ, ಸಾವಿರಾರು ಇಂಥ ವಿಪರೀತಗಳು ಕಂಡುಬಂದವು. ಆದರೆ ಕೂಲಿಕಾರರ ಜೀವನದಲ್ಲಿಯ ಈ ವಿಪರೀತಗಳನ್ನು ಬಿಳಿಯಂಗಿಯವರೇ ಹುಟ್ಟಿಸಲಿಲ್ಲವೆ?



ಕಮಲೇಶ್ವರಿಗೆ ಬಲಿ ಕೊಡುವ ಕೋಣವು ಎದುರಿಗೆ ಬರುತ್ತಿದ್ದುದರಿಂದ ವತ್ಸಲೆಯ ವಿಚಾರ ಸೂತ್ರವು ಹರಿಯಿತು. ತೂಗಾಡುತ್ತ ಬರುತ್ತಿದ್ದ ಆ ಕೋಣವನ್ನು ನೋಡಿ ಬದಿಗೆ ಸರಿಯುವಾಗ ಅವಳಿಗೆನಿಸಿತು. ಈ ಕೋಣವನ್ನು ಬಲಿಕೊಡುವವರು ದಡ್ಡ ಜನರೆಂದು ಹೇಳುವವರು ತಾವೇನು ಮಾಡುತ್ತಿದ್ದಾರೆ ? ಬಲಿಕೊಡುವ ಕೋಣಕ್ಕೆ ಬಲಿಯಾಗಿ ಸಾಯುವ ಮೊದಲಾದರೂ ಬೇಕಾದಷ್ಟು ತಿನ್ನಲಿಕ್ಕೆ ಸಿಗುತ್ತದೆ. ಆದರೆ ಮನುಷ್ಯರಲ್ಲಿ–ಮನುಷ್ಯರಲ್ಲಿ ಅಷ್ಟು ಕೂಡ ಇಲ್ಲ ! ಅವಳು ಗಡಿಬಿಡಿಯಿಂದ ವಿದ್ಯಾಧರನ ಕೋಣೆಗೆ ಬಂದಳು. ಅವನು ನಿತ್ಯದಂತೆ ಏನನ್ನಾದರೂ ಓದುತ್ತ ಮಲಗಿರಲಿಲ್ಲ. ತನ್ನ ಕ್ಯಾಮರಾ ಬಿಚ್ಚಿ ಏನೇನೋ "ದುರಸ್ತಿ"ಯನ್ನು ನಡೆಸಿದ್ದ.

ನೀರು ಸೇದಿ ತಂದು ವತ್ಸಲೆಯು ಸ್ಟೋವಿನ ಮೇಲೆ ಎಸರಿಗಿಟ್ಟಳು. ಒಂದೇ ಕಪ್ಪು ನೀರು ಹಾಕಿದ ಸಪ್ಪಳವು ವಿದ್ಯಾಧರನಿಗೆ ಕೇಳಿಸಿತು. ಅವನು ಮೋರೆ ತಿರುವಿ ಕೇಳಿದ "ನೀನೂ ಕುಡಿಯುವದಿಲ್ಲವೇ?'

"ಉಂ.....ಹುಂ. ಬಿಟ್ಟುಬಿಟ್ಟೆ ಚಹ ಕುಡಿಯುವದನ್ನು."

"ಎಂದಿನಿಂದ?"

"ಇಂದಿನಿಂದ."

"ಭವಿಷ್ಯ ತಿಳಿಯುವಂತೆ ಕಾಣತದ ನಿನಗೆ?"

ವತ್ಸಲೆಯು ವಿಸ್ಮಯದಿಂದ ಅವನ ಕಡೆಗೆ ನೋಡಹತ್ತಿದಳು.

"ನಾಳಿನಿಂದ ಕಾರಖಾನೆ ಬಂದಾಗುವದೆಂದು ಇವತ್ತೇ ಚಹಾ ಬಿಡುವ ಕಾರಣವಿಲ್ಲ."

"ಕಾರಖಾನೆ ಬಂದಾಗುವದು?"

ಅವಳ ಸ್ವರದಲ್ಲಿಯ ಭೀತಿಯು ವಿದ್ಯಾಧರನಿಗೆ ತಿಳಿಯಿತು. ಬಡವರ ಆಯುಷ್ಯವು ಶ್ರೀಮಂತರ ಲಹರಿಯ ಮೇಲೆ ಹೇಗೆ ಕುಣಿಯುತ್ತಿರುವದೆಂಬುದು ಅವನ ಲಕ್ಷ್ಯಕ್ಕೆ ಬಂದಿತು.

"ಯಾಕೆ ಬಂದಾಗುವದು ಕಾರಖಾನೆ ?"

"ಅದು ಮಾಲೀಕರಿಗೆ ಗೊತ್ತು !"

"ಆಮೇಲೆ–"

"ನನಗೇನು ಗೊತ್ತು ಅದೆಲ್ಲ ; ಹಾಕು ಇನ್ನೊಂದು ಕಪ್ಪುನೀರು."

ತನ್ನ ಇಚ್ಛೆಯ ವಿರುದ್ಧವಾಗಿಯೆ ವತ್ಸಲೆಯು ಮತ್ತೊಂದು ಕಪ್ಪು ನೀರು ಸುರುವಿದಳು.

ಸ್ಟೋವಿನ ನೀಲವಾದ ಜ್ವಾಲೆಯ ಕಡೆಗೆ ನೋಡುತ್ತ ವತ್ಸಲೆ ವಿಚಾರಮಾಡಹತ್ತಿದಳು. ತಟ್ಟನೆ ಕೀಲಿ ತಿರುವಿ ನಾನು ಈ ಸ್ಟೋವನ್ನು ಆರಿಸಬಲ್ಲೆ. ಕಾರಖಾನೆಯನ್ನಾದರೂ ಹೀಗೆಯೇ ನಿಲ್ಲಿಸಬಹುದೋ? ನಾಳಿನಿಂದ ಇಷ್ಟು ಜನ ಹೆಂಗಸರಿಗೆ ಈ ಹಳ್ಳಿಯಲ್ಲಿ ಕೆಲಸವೇನು ಸಿಗಬೇಕು? ಬಡವರೆಂದರೆ ಬರೀ ಯಂತ್ರಗಳೋ ಹೇಗೆ? ಯಂತ್ರಗಳಿಗೆ ಸುಖದುಃಖಗಳ ಪರಿವೆಯಾದರೂ ಇರುವುದಿಲ್ಲ. ನಿಜವಾಗಿಯೂ ಬಡವರ ಹೃದಯವನ್ನು ಕಲ್ಲುಮಾಡಿಬಿಡಬಲ್ಲ ಒಂದು ಯಂತ್ರವನ್ನು, ಒಂದು ಔಷಧವನ್ನು ಯಾರಾದರೂ ಹುಡುಕಿ ತೆಗೆದರೆ–

ಗೋಡಂಬಿಗಳನ್ನು ಒಡೆಯುವ ಯಂತ್ರವನ್ನು ಸಿದ್ಧಪಡಿಸಲಿಕ್ಕೆ ಬಂದ ವಿದ್ಯಾಧರನಿಗೆನಿಸಿತು– ನಾಳಿನಿಂದ ಕಾರಖಾನೆ ನಿಂತುಹೋಗುವದೆಂದು ಇವಳು ಚಿಂತೆಯಲ್ಲಿ ಬಿದ್ದಿರುವಳೆಂದು. ಚಹ ಕುಡಿದ ಕೂಡಲೆ ಅವಳ ಕೈಯಲ್ಲಿ ಕ್ಯಾಮರಾ ಕೊಟ್ಟು ಕಾರಖಾನೆಗೆ ಅವನು ಬಂದ. ದಾದಾ ಅವರು ಅವನ ಹಾದಿಯನ್ನೇ ನೋಡುತ್ತಿದ್ದರು. ಅವರು ಅವಳ ಕಡೆಗೆ ನೋಡಿ ಅಂದರು : "ಫೋಟೋ ಯಾರದು ತೆಗೆಯುವಿರಿ? ಈಕೆಯದೇ ತೆಗೆಯಿರಿ; ಅಷ್ಟೇನೂ ಕಾಡು ಇಲ್ಲ, ನೋಡಲಿಕ್ಕೆ ! ಕುಂಕುಮವಾದರೂ ಸಾಕಷ್ಟು ಚಿಕ್ಕದಿದೆ !"

ದಾದಾ ಅವರ ಮಾತು ವಿದ್ಯಾಧರನಿಗೆ ರುಚಿಸಲಿಲ್ಲ. ಅವನು ಸುಮ್ಮನೆ ತನ್ನ ಕೆಲಸವನ್ನು ಪ್ರಾರಂಭಿಸಿದ. ವತ್ಸಲೆಯು ಒಡೆಯುವ ಬೇರೆಬೇರೆ ಕೆಲಸಗಳನ್ನು ಮಾಡಿದಳು. ವಿದ್ಯಾಧರ ಸರಸರನೆ ಅವುಗಳ ಫೋಟೋ ತೆಗೆದುಕೊಂಡ. ಈ ಫೋಟೋ ತೆಗೆಯುವದು ನಡೆದಾಗ ವತ್ಸಲೆಯ ತಲೆಯಲ್ಲಿ ಒಂದೇ ಒಂದು ವಿಚಾರವು ಸುಳಿದಾಡುತ್ತಿತ್ತು. ಅದೆಂದರೆ ಲಗ್ನದಲ್ಲಿಯ ಫೋಟೋದ ನೆನಪು. ವಧೂವರರ ಫೋಟೋ ತೆಗೆಯಿಸಬೇಕೆಂದು ಮಾವನವರು ಎಷ್ಟು ಆರ್ಭಟವನ್ನು ಮಾಡಿದರೂ ರಮಾಕಾಂತನು ಕೇಳಲಿಲ್ಲ. ಬೇರೆ ಫೋಟೋ ಏತಕ್ಕೆ ಎಂದು ಅವನು ಆ ಎರಡು ಸಾಲು ಅಂದು ತೋರಿಸಿದ ; ಮೇಲಿಂದ ಮೇಲೆ ಉಚ್ಚರಿಸಿ ಅವನು ಅವಳ ಹೃದಯದ ಮೇಲೆ ಅವನ್ನು ಕೊರೆದುಬಿಟ್ಟಂತಾಗಿತ್ತು !

"ನೆರಳಿಲ್ಲದ ಬೆಳಕನ್ನೊಂದೇ ಕಂಡವರಾರುಂಟು ? ಚಿತ್ರವಾಗುವದು, ನೆರಳು ಬೆಳಕಿಗೆ ಬಿದ್ದೊಡನೆ ಗಂಟು."

ತನ್ನ ಆಯುಷ್ಯದಲ್ಲಿಯ ಮೊದಲನೇ ಫೋಟೋ ಕೂಲಿಯವಳ ವೇಷದಲ್ಲಿ ಹೊರಟಿತೆಂಬುದರಿಂದ ಅವಳಿಗೆ ಕ್ಷಣಹೊತ್ತು ಅಭಿಮಾನವೇ ಎನಿಸಿತು. ಕೂಡಲೆ ಅವಳ ಮನಸಿನಲ್ಲಿ ಬಂತು–ಈ ಫೋಟೋ ಛಾಪಿಸುವುದಾದರೆ–ರಮಾಕಾಂತನ ದೃಷ್ಟಿಗೆ ಬೀಳಬಹುದು. ಆಗ–

ದಾದಾ ಅವರು ಸ್ವಲ್ಪ ದೂರ ಹೋದ ಕೂಡಲೆ ಅವಳು ವಿದ್ಯಾಧರನಿಗೆ ಕೇಳಿದಳು ; "ಈ ಫೋಟೋ ಏನು ಮಾಡುವವರು ?"

"ಪುಸ್ತಕದಲ್ಲಿ ಅಚ್ಚು ಹಾಕಬೇಕಾಗಿದೆ ಇವನ್ನು."

"ನಿಮ್ಮ ಯಂತ್ರದ ಪುಸ್ತಕವಲ್ಲವೇ ?"

"ಛೇ ! ಆ ರಮಾಕಾಂತನು ಕಾರಖಾನೆಯ ವಿಷಯಕ್ಕೆ ಒಂದು ಪುಸ್ತಕವನ್ನು ಬರೆಯುವವನಿದ್ದಾನೆ."

ವತ್ಸಲೆ ಮುಖ ಒಮ್ಮೆಲೆ ಬಿಳುಪಿಟ್ಟಿತು. ದಾದಾ ಅವರು ಅತ್ತ ಕಡೆಗೆ ಗಟ್ಟಿಯಾಗಿ ಹೇಳುತ್ತಿದ್ದರು– "ನಾಳಿನಿಂದ ಕೆಲಸ ಇಲ್ಲ."

ವಿದ್ಯಾಧರನಿಗೆನಿಸಿತು–ಅದು ಅವರ ಘೋಷಣೆಯ ಪರಿಣಾಮವಿರಬೇಕೆಂದು.



# ೧೦

# ಧ್ರುವ ಒಂದೋ ? ಎರಡೋ ?

ಬಾಪ್ಪಾ ಅವರು ಸಂಜೆಗೆ ಪೇಟೆಯ ಚೌಕಿನಲ್ಲಿ ಮೋಟರಿನಿಂದ ಇಳಿದರು. ಕಾರಖಾನೆಯ ಕಡೆಗೆ ಹೋಗಲಿಕ್ಕೆ ಮೋಟರುದಾರಿ ಇರಲಿಲ್ಲವೆಂದಲ್ಲ ; ಆದರೆ ಒಬ್ಬನನ್ನೇ ಇಳಿಸುವುದಕ್ಕಾಗಿ ಮೋಟರನ್ನು ಒಂದು ಕಡೆಗೆ ಒಯ್ಯುವುದೆಂದರೆ ಅವರ ತತ್ತ್ವಕ್ಕೇ ಅದು ವಿರುದ್ಧವಾಗಿತ್ತು. ಕಾರಖಾನೆಯು ಚೌಕಿನಿಂದ ಎರಡು ಮೂರು ಫರ್ಲಾಂಗು ದೂರ ಇತ್ತು. ಆದರೆ ವಿಮಾನವು ಆಕಾಶದಲ್ಲಿ ಎತ್ತರವಾಗಿ ಹಾರುತ್ತಿದ್ದರೂ ನೆಲದ ಮೇಲೆ ಅದರ ಸಪ್ಪಳವು ಕೇಳಬರುವದಿಲ್ಲವೇ ? ಹಾಗೆಯೆ ನೂರಾರು ಜನರಿಂದ ಸಂದಣಿಸಿದ ಆ ಕಾರ್ಖಾನೆಯ ಗದ್ದಲವು ಚೌಕಿನಲ್ಲಿ ಯಾವಾಗಲೂ ಕೇಳಬರುತ್ತಿತ್ತು. ಆದರೆ ಮೋಟರಿನಿಂದ ಇಳಿದ ಕೂಡಲೆ ತಮಗೆ ಪರಿಚಿತವಾದ ಆ ಕಲಕಲಾಟವು ಕೇಳಿಬರದದ್ದರಿಂದ ಬಾಪ್ಪಾ ಅವರಿಗೆ ತಪ್ಪಿಸಿಕೊಂಡಂತಾಗಿತ್ತು. ಖಾದಿಯ ಚೀಲವನ್ನು ಹೆಗಲಿಗೇರಿಸಿಕೊಂಡು ಅವರು ಪೇಟೆಯಲ್ಲಿ ಹೊರಟರು. ಬಲದ ಒಂದು ಅಂಗಡಿಯ ಕಡೆಗೆ ಅವರ ದೃಷ್ಟಿ ಹೋಯಿತು. ಅದು ಜಪಾನೀ ಮಾಲಿನಿಂದ ತುಂಬಿತ್ತೆಂಬುದು ಅವರಿಗೆ ಸ್ಪಷ್ಟವಾಗಿ ಕಾಣಿಸಿತು. ಎಡಕ್ಕೆ ನೋಡಿದರು. ಅತ್ತ ಕಡೆಯ ಅಂಗಡಿಯಾದರೂ ತನ್ನ ಪ್ರತಿಸ್ಪರ್ಧಿಯೊಡನೆ ಮೇಲಾಡಲಿಕ್ಕೆ ಅವೇ ಶಸ್ತ್ರಗಳನ್ನು ಸಜ್ಜು ಮಾಡಿತ್ತು. ಬಾಪ್ಪಾ ಅವರ ಕಣ್ಣೆದುರಿಗೆ ೧೯೩೦ನೇ ವರ್ಷ ನಿಂತಿತು. ತನ್ನ ಅಕ್ಕನ ನೆನಪಿಗಾಗಿ ಕಟ್ಟಿದ ದೀಪಸ್ತಂಭದ ಮೇಲೆ ನಿಂತು ಅವರು ಜನರ ಕಡೆಯಿಂದ ಸ್ವದೇಶಿಯ ಶಪಥವನ್ನು ಮಾಡಿಸಿದ್ದರು. ದೇವಾಲಯದ ಮುಂದಿಟ್ಟ ಒಂದು ತೆಂಗಿನಕಾಯನ್ನು ಮುಟ್ಟಿ ಪ್ರತಿಯೊಬ್ಬ ವ್ಯಾಪಾರಿಯೂ ಆಣೆ ಮಾಡಿದ್ದ. ಆ ದಿವಸ ಬಾಪ್ಪಾ ಅವರ ಆಶೆಗಳು ಆ ದೀಪಸ್ತಂಭಕ್ಕಿಂತಲೂ ಮೇಲೆ ನೆಗೆದಿದ್ದವು. ಆದರೆ ಈಗ ಅವರಿಗೆನಿಸಿತು. ಅವೆಲ್ಲ ಉಸುಕಿನಲ್ಲಿ ಕಟ್ಟಿದ ಮಂದಿರಗಳೇ ಎಂದು. ೧೯೩೦ ರಿಂದ ಜೇಲಿಗೆ ಹೋಗುವ ಕಾರ್ಯಕ್ರಮವೇ ಮೊದಲಾದದ್ದರಿಂದ ಅವರಿಗೆ ಕಾಮಾಪುರಕ್ಕೆ ಬರಲಾಗಿದ್ದಿಲ್ಲ. ಇಂದು ಅವರು ಬಂದು ನೋಡಿದರೆ ಅವರ ಹೃದಯಕ್ಕೆ ಭೂಕಂಪದಂಥ ಏಟು ಬಿದ್ದಿತು.

ಮೂರು ನಾಲ್ಕು ಅಂಗಡಿಗಳನ್ನು ದಾಟಿ ಹೋಗುವುದರಲ್ಲಿ ಒಂದು ಅಂಗಡಿಯಲ್ಲಿ ಇಸ್ಪೀಟಿನ ಆಟವು ನಡೆದದ್ದು ಕಂಡುಬಂದಿತು. ತೆಳ್ಳನ್ನ ಮಲಮಲಿನ ಲಂಡಂಗಿಗಳನ್ನು ತೊಟ್ಟ ನಾಲ್ಕಾರು ಜನರು ಆ ಇಸ್ಪೀಟಿನ ರಾಜಕಾರಣದಲ್ಲಿ ತೊಡಗಿದ್ದರು. ಅವರಲ್ಲಿ ಪ್ರತಿಯೊಬ್ಬನೂ ಬಾಪ್ಪಾ ಅವರ ಗುರುತಿನವನಿದ್ದನು. ಐವತ್ತರ ಸಮೀಪಕ್ಕೆ ಬಂದಿದ್ದರೂ ಡೌಲಿನ ಸಂಜಾಪವನ್ನಿಟ್ಟುಕೊಂಡು ಕೆಂಪುತುಟಿಗಳಿಂದ ಅಂಗಡಿಯ ಮುಂದೆ ಓಕಳಿ ಹೊಡೆಯುವ ಆ ವ್ಯಾಪಾರಿ–ಅವನ ನರಿಯಂಥ ನೋಟವು ಬಾಪ್ಪಾ ಅವರಿಗೆ ನೆನಪಾಯಿತು. ಕಾನೂನುಭಂಗದ ಕಾಲಕ್ಕೆ ಅವನು ಕೂಗಿ ಹೇಳುತ್ತಿದ್ದ– "ನೀವೆಲ್ಲರೂ ಕಾಮಾಪುರದ ಹೆಸರು ಕಾಯಬೇಕು !" ಆ ಹೆಸರು ಕಾಯಲಿಕ್ಕೆ ಇಂದು ಅವನು ನಡೆಸಿದ ಉದ್ಯೋಗವನ್ನು ಕಂಡು ಬಾಪ್ಪಾ ಅವರ ಮನಸ್ಸು ದಿಕ್ಕೆಟ್ಟು ಹೋಯಿತು. ಅವನ ಎದುರಿಗಿದ್ದ ಆ

ಇಪ್ಪತ್ತೈದರೊಳಗಿನ ತರುಣ– ಅವನ "ಧೈರ್ಯಧರೀ" ಕಟ್ಟು, ಮೈಯಲ್ಲಿಯ ತಿಳುವು ರೇಶ್ಮೆಯ ಅಂಗಿ, ಆಟದಲ್ಲಿ ಗುಂಗಾದ ಅವನ ಮನಸ್ಸು ಇದೆಲ್ಲವನ್ನು ನೋಡಿ ಬಾಪ್ಪಾ ಅವರಿಗೆನಿಸಿತು–ಮನುಷ್ಯರ ಮನವು ಪುಚ್ಚಕ್ಕಿಂತಲೂ ಚಂಚಲವಿರಬಹುದೇ ಎಂದು. ಆ ತರುಣನು ಮೊದಲನೇ ಸಾರೆಯ ಕಾನೂನು ಭಂಗದಲ್ಲಿ ಆನಂದದಿಂದ ಸೆರೆಮನೆಯನ್ನು ಸೇರಿದ್ದನು. ದಂಡ ಕೊಡುವಷ್ಟು ಮನೆಯಿಂದ ಸ್ಥಿತಿವಂತನಿದ್ದೂ ಸಶ್ರಮ ಶಿಕ್ಷೆಯನ್ನು ಭೋಗಿಸಿದ್ದನು. ಮೀನವಿಲ್ಲದೆ ಇವನಿಗೆ ತುತ್ತು ಗಂಟಲಲ್ಲಿಳಿಯುವದಿಲ್ಲೆಂದು ಜನರು ವರ್ಣಿಸುತ್ತಿದ್ದರೂ "ಕ" ವರ್ಗದ ಅನ್ನವನ್ನು ಆನಂದದಿಂದ ಉಂಡಿದ್ದನು. ಜೇಬಿನ ಚಳವಳಿಯ ಬಗ್ಗೆ, ಸಮಾಜ ಸುಧಾರಣೆಯ ಬಗ್ಗೆ ಈ ತರುಣನೊಡನೆ ಮಾತಾಡುವಾಗ ಬಾಪ್ಪಾ ಅವರ ರಸವಾಣಿಗೆ ಮಹಾಪೂರ ಬಂದುಬಿಡುತ್ತಿತ್ತು. ಆದರೆ ಈಗ ಅವನನ್ನು ನೋಡಿದ ಮಾತ್ರಕ್ಕೆ ನೀರೆಲ್ಲಾ ಬಾರಲು ಕೊಡದ ಮೇಲೆ ಸುರವಿದಂತಾಯಿತೆಂದು ಅವರಿಗೆ ತಿಳಿದುಹೋಯಿತು.

ಆಡುವವರಲ್ಲಿ ಯಾವನೋ ಸಹಜವಾಗಿ ಬೀದಿಯ ಕಡೆಗೆ ನೋಡಿದ. "ಬಾಪ್ಪಾ" ಎಂದು ಗುಣುಗುಣಿಸಿದ. ಆಡುವವರು ಭಯಚಕಿತರಾಗಿ ನೋಡಹತ್ತಿದರು. ಅವರು ಬಾಪ್ಪಾ ಅವರಿಗೆ ನಮಸ್ಕಾರ ಮಾಡಿದರು.

"ವಂದೇ ಮಾತರಮ್."

"ಯಾವಾಗ ಬಂದಿರಿ?"

ಮುಂದೆ ಯಾರು ಏನು ಮಾತಾಡಬೇಕು ? ಅವರೆಲ್ಲರೂ ಯಾಕೆ ಬೆಚ್ಚಿದರೆಂಬುದು ಬಾಪ್ಪಾ ಅವರಿಗೆ ತಿಳಿಯಿತು. ಅವರು ರೊಕ್ಕ ಹಚ್ಚಿ ಇಸ್ಪೀಟು ಆಡುತ್ತಿದ್ದರು. ಕಾಮಾಪುರದಂಥ ಸ್ಥಳದಲ್ಲಿ ಪೊಲೀಸರ ಕೈ ಬೆಚ್ಚಗೆ ಮಾಡಿದರೆ ದೊಡ್ಡ ಚೌಕಿನಲ್ಲಿ ಸಹ ಬೇಕಾದ್ದನ್ನು ಮಾಡಬಹುದೆಂಬುದು ಬಾಪ್ಪಾ ಅವರಿಗೆ ಗೊತ್ತಿರಲಿಲ್ಲವೆಂದಲ್ಲ. ಅವರಂದುಕೊಂಡರು: "ಈ ಅಶಿಕ್ಷಿತ ವ್ಯಾಪಾರಿಗಳ ಮಾತೇಕೆ ? ಒಳ್ಳೆ ಡಾಕ್ಟರರೂ ವಕೀಲರೂ, ಮಾಸ್ತರರೂ ಇದೇ ಆಟವಾಡುತ್ತಿದ್ದುದನ್ನು ನಾನು ಮೊನ್ನೆಯೇ ನೋಡಿಲ್ಲವೆ?"

ಬಾಪ್ಪಾ ಅವರು ಖಿನ್ನ ನಿಶ್ವಾಸವನ್ನು ಬಿಟ್ಟು ಮೇಲೆ ನೋಡಿದರು ಆಕಾಶದಲ್ಲಿ ಬಿಳಿಯ ಮೋಡಗಳು ಕಾಣಿಸುತ್ತಿದ್ದವು. ಬಾಪ್ಪಾ ಅವರಿಗೆನಿಸಿತು–ಇನ್ನು ಸ್ವಲ್ಪ ವೇಳೆಯಲ್ಲಿ ಈ ಮೋಡಗಳಿಗೆ ಬಣ್ಣ ಕಟ್ಟಬಹುದು. ಇವು ವಿವಿಧವಾದ ಮನೋಹರ ರೂಪಗಳನ್ನು ಧರಿಸಬಹುದು, ಆದರೆ ಆ ಬಣ್ಣ ನಿಜವೆನ್ನಬೇಕೆ? ನೀರಿದ್ದರೆ ಕಪ್ಪು, ಇಲ್ಲದಿದ್ದರೆ ಬಿಳಿ. ಇದೇ ಮೋಡದ ಬಣ್ಣ. ಮನುಷ್ಯರೂ ಹಾಗೆಯೆ. ಅವರ ಕ್ಷಣಿಕ ಸ್ಥಿತ್ಯಂತರಗಳನ್ನೇನು ನಿಜವೆನ್ನುವದೆ? ಮನುಷ್ಯರ ನಿಜವಾದ ಜಾತಿಗಳು ಎರಡೇ–.......!

ತುಪ್ಪವನ್ನು ತೆಗೆದ ಜೇನುಹುಟ್ಟಿನಂತೆ ತೋರುವ ಕಾರಖಾನೆಯನ್ನು ನೋಡಿ ಬಾಪ್ಪಾ ಅವರ ಆಶ್ಚರ್ಯಕ್ಕೆ ಸೀಮೆಯೇ ಉಳಿಯಲಿಲ್ಲ. ಒಳಗೆ ಬರೀ ಮೂರು ಜನರು ಮಾತ್ರ ಇದ್ದರು. ದಾದಾ, ಕಾರಕೂನ, ವಿದ್ಯಾಧರ. ಬಾಪ್ಪಾ ಅವರನ್ನು ಕಂಡಕೂಡಲೆ ದಾದಾ ಕುಳಿತಲ್ಲಿಂದ ಎದ್ದು "ಓಹೋಹೋ ಬಾಪ್ಪಾ ಬಂದರು" ಎಂದರು.



ವಿದ್ಯಾಧರನು ಮಾಡಿದ ನಮಸ್ಕಾರವನ್ನು ಬಾಪ್ಪಾ ಮೂಕತನದಿಂದಲೇ ಸ್ವೀಕರಿಸಿದರು. ದಾದಾ ಅವರ ಕಡೆಗೆ ತೀವ್ರದೃಷ್ಟಿಯಿಂದ ನೋಡುತ್ತ ಕೇಳಿದರು–"ಇಂದು ಕಾರಖಾನೆ ಬಂದ ಇದ್ದ ಹಾಗೆ ಕಾಣತದೆ ?"

"ಇಂದಷ್ಟೇ ಯಾಕೆ ನಾಳೆ, ನಾಡದು–"

"ಅಂದರೆ?"

"ಕಾಯಮ್ ರಜಾನೇ ಇನ್ನು."

ಬಾಪ್ಪಾ ಅವರಿಗೆ ಸಿಟ್ಟು ಬಂದಿತು. ಆದರೆ ಅವರು ಅದನ್ನು ಮೇಲೆ ತೋರಗೊಡಲಿಲ್ಲ. ದಾದಾ ರುಮಾಲು ಸುತ್ತಿಕೊಳ್ಳಹತ್ತಿರುವುದನ್ನು ನೋಡಿ ಬಾಪ್ಪಾ ಕೇಳಿದರು–

"ಎಲ್ಲಿ ಹೊರಟಿರಿ?"

"ದೇವೀ ಗುಡಿಗೆ."

"ಇಷ್ಟು ವರ್ಷ ಆದವು. ಆದರೆ ಪ್ರತಿನಿತ್ಯ ಸಾಯಂಕಾಲ ದೇವರ ದರ್ಶನ ತಪ್ಪಿಲ್ಲ ನೋಡಿರಿ. ಮೈಯಲ್ಲಿ ಸ್ವಸ್ಥವಾಗಿರದಿದ್ದರೆ ಸುಲೂತಾಯಿಯನ್ನಾದರೂ ಕಳಿಸಿ ಅಂಗಾರವನ್ನು ತರಿಸಿಕೊಳ್ಳುತ್ತಾರೆ" ಎಂದು ಕಾರಕೂನನು ನಡುವೇ ಬಾಯಿಹಾಕಿದ.

"ದೇವರು ಒಬ್ಬರನ್ನಾದರೂ ಕಾಯುತ್ತಾನೆನ್ನಬೇಕು ಹಾಗಾದರೆ" ಎಂದು ಬಾಪ್ಪಾ ಅವರು ಅಣಕವಾಡುವ ಸ್ವರದಿಂದ ನುಡಿದರು.

"ಕಾಯುತ್ತಾನೆಂದರೆ? ನಮ್ಮ ಕಮಲೇಶ್ವರಿ ಅಂದರೆ ಭಾರೀ ಜಾಗೃತ ದೇವರು. ಇಂದಿನ ಮಿತಿಗೆ ಈ ಊರೊಳಗಿನ ಅರ್ಧ ಸೀದಾ ಈ ಕಾರಖಾನಿಯೊಳಗಿಂದೇ ಹೋಗತದೆ–" ಕಾರಕೂನನು ತನ್ನ ಹೊತ್ತಗೆಯನ್ನು ಬಿಚ್ಚಿದ.

"ಸುಮ್ಮಗೆ ಕೂಡು ಮಾತುಬುರುಕ ! ಈಗ ಯಾರಿಗೆ ಬೇಕು ಈ ಜಮೀನು, ಬಾಪ್ಪಾ? ಸರಕಾರಿ ತೆರಿಗೆಯಷ್ಟು ಕೂಡ ಲಾವಣಿ ವಸೂಲು ಇಲ್ಲ."

ಬಾಪ್ಪಾ ಪುನಃ ಪುನಃ ಆ ಶೂನ್ಯವಾದ ಕಾರಖಾನೆಯ ಕಡೆಗೆ ನೋಡುತ್ತಿದ್ದರು. ಅವರಿಗೆ ಅದು ಸ್ಮಶಾನದಂತೆ ಕಂಡಿತು. ಆ ಕಡೆಯ ಆ ಗೋಡಂಬಿ ಸುಡುವ ಭಟ್ಟಿ– ಚಿತೆಯೆ ಎನ್ನುವಂತೆ ತೋರಿತು. ದಾದಾ ಮತ್ತು ಕಾರಕೂನ ಇವರಿಬ್ಬರು ಈ ಸ್ಮಶಾನದಲ್ಲಿ ಉತ್ತರ ಕ್ರಿಯೆ ಮಾಡಿಸುವ ಬ್ರಾಹ್ಮಣರು. ಪ್ರೇತಗಳ ನೆತ್ತಿಯ ಮೇಲಿನ ಬೆಣ್ಣೆಯನ್ನಾದರೂ ತಿಂದಾರು. ಆದರೆ–

ದಾದಾಸಾಹೇಬರು ಯಾವಾಗಲೋ ರುಮಾಲು ಸುತ್ತಿಕೊಂಡು ಸಿದ್ಧರಾಗಿದ್ದರು. ಅವರಂದರು– "ಏನು ಬಾಪ್ಪಾ ಅವರೇ, ಬರುತ್ತೀರೇನು ದೇವೀ ಗುಡಿಗೆ?"

"ನಾ ಏನು ಮಾಡುವವ ದೇವೀ ಗುಡಿಗೆ ಬಂದು? ಊರೊಳಗಿನ ಅರ್ಧ ಜಮೀನು ಕಿತ್ತುಕೊಳ್ಳುವದು ಅಷ್ಟರೊಳಗೇ ಅದೆ."

"ಆದರೆ, ಬಡಬಗ್ಗರ ಕಲ್ಯಾಣ ಮಾಡುವವದಾದರೂ ಇದೆಯಲ್ಲ" ಎಂದು ಮಾತಿನ ಪೆಟ್ಟುಕೊಡುವ ಸ್ವರದಿಂದ ದಾದಾ ಅಂದರು.

“ಅದನ್ನು ಯಾರು ಮಾಡುವವರು?”

“ದೇವಿ.”

“ಬಡವರ ಕಲ್ಯಾಣ ಮಾಡುವ ಶಕ್ತಿ ದೇವರಲ್ಲಿದ್ದರೆ–”

“ಗಾಂಧಿಯವರು ನಿಮ್ಮ ಹಾಗೆ ನಾಸ್ತಿಕ ಇಲ್ಲ ನೋಡಿರಿ ಬಾಪ್ಪಾ ಅವರೇ–”

“ನಿಮ್ಮ ಹಾಗೆ ನಿರ್ದಯನೂ ಇಲ್ಲ.”

ದಾದಾ ತಿರಸ್ಕಾರದಿಂದ ಬಾಪ್ಪಾ ಅವರ ಕಡೆಗೆ ನೋಡಿದರು. ಎಲ್ಲರೂ ಕಾರಖಾನೆಯಿಂದ ಹೊರಬಿದ್ದರು. ಬಾಪ್ಪಾ ವಿದ್ಯಾಧರನಿಗಂದರು– “ನಡೀರಿ ನಾವೂ ತಿರಗಾಡಲಿಕ್ಕೆ ಹೋಗೋಣ.”

“ಯಾವ ಕಡೆಗೆ?”

“ಕೆರೆಯ ಕಡೆಗೆ.”

ಅವರಿಬ್ಬರ ದಾರಿಯೂ ದಾದಾಸಾಹೇಬರ ದಾರಿಯೂ ಒಂದೇ ಆಗಿತ್ತು. ಸ್ವಲ್ಪ ವೇಳೆ ಎಲ್ಲರೂ ಸುಮ್ಮನಿದ್ದರು. ಚೌಕು ದಾಟಿದ ಮೇಲೆ ಬಾಪ್ಪಾ ಕೇಳಿದರು :

“ಕಾರಖಾನೆ ಕೆಲಸ ಏಕೆ ನಿಲ್ಲಿಸಿದಿರಿ?”

ದಾದಾನ ಮನಸ್ಸಿನಲ್ಲಿ ಕೂಲಿಯನ್ನು ಕಡಿಮೆ ಮಾಡುವದಿತ್ತು. ಆದರೆ ಅಷ್ಟರಲ್ಲಿ ಕಾಮಾಪುರಕ್ಕೆ ಬಾಪ್ಪಾ ಅವರ ಸವಾರೀ ಬರುವದಿದೆ ಎಂದು ತಿಳಿದ ಕೂಡಲೆ ಅವರು ಕಾರಖಾನೆಯನ್ನು ಮುಚ್ಚುವ ಯುಕ್ತಿಯನ್ನು ಹೂಡಿದ್ದರು. ಬಾಪ್ಪಾ ಅವರ ಪ್ರಶ್ನೆಗೆ ಅವರು ಉತ್ತರ ಕೊಟ್ಟರು–

“ಲಾಭವಿಲ್ಲೆಂದು.”

“ಹಾನಿ ಏನೂ ಇಲ್ಲವಲ್ಲ.”

“ಹಾನಿ ಆದರೂ ಆಗುವ ಅಂಜಿಕೆ ಇದೆ.”

“ಆದರೆ ಆಯ್ತು. ಒಂದು ತೆಂಗಿನ ಗರಿ ಕಳವಾಗಿ ಹೋದರೆ ತೆಂಗಿನ ಗಿಡದ ಉತ್ಪನ್ನ ಕಡಿಮೆ ಆಗುವದು ಅಷ್ಟರೊಳಗೆ ಅದೆ.”

“ನಾನು ಕುಟುಂಬವತ್ಸಲ ಇದ್ದೇನೆ ಬಾಪ್ಪಾ. ನಿಮ್ಮ ಹಾಗೆ ಹಿಂದಿಲ್ಲ ಮುಂದಿಲ್ಲ ಇದ್ದರೆ. . . ”

“ಇದ್ದೂ ಬಿದ್ದೂ ಅದೊಂದು ಹುಡುಗಿ ಅಲ್ಲದೆ?”

“ಒಂದು ಹುಡುಗಿ ? ಆನೆ ಸಾಕಬಹುದು, ಲಗ್ನದ ಹುಡುಗಿ ಬೇಡ ನೋಡಿರಿ ಈಗಿನ ದಿವಸದಲ್ಲಿ?”

“ಹುಡುಗಿ ಈಗ ಬಹಳ ತಿನ್ನುತ್ತಿದ್ದಾಳೆಯೇ, ದಾದಾ?”

“ನಿಮ್ಮ ಆಗ್ರಹಕ್ಕೆ ಆಕೆಯನ್ನು ಈ ಚಿತ್ರಕಲೆ ಕಲಿಯಲಿಕ್ಕೆ ಕಳಿಸಿದೆ. ಆಕೆಗೆ ಎಲ್ಲಾ ಬರೀ ಚೆಂದ ಬೇಕಾಗಹತ್ತಿತು. ಈ ಜರಿಯ ಪತ್ತಲ ಬೇಡ. ಆ ವಜ್ರದ ಹರಳು ಬೇಡ–ಇಷ್ಟಲ್ಲದೆ ನಾಳೆ ಒಳ್ಳೆ ಗಂಡನೊಬ್ಬ ಸಿಗಬೇಕಾದರೆ ಹತ್ತಿಪ್ಪತ್ತು ಸಾವಿರ ಆದರೂ ಬೇಕು.”



“ಪೈ ಸಹಿತ ಬೇಡ.”

“ಆಕೆ ಲಗ್ನ ಮಾಡಿಕೊಳ್ಳುವುದಿಲ್ಲ ಅಂತ ನೀವು ತಿಳಿದು ಹೊರಟೀರಿ ಬಾಪ್ಪಾ ! ಈ ಹುಡುಗರೆಂದರೆ ಗೋಡಂಬಿ ಬೀಜ ! ಮೊದಲು ಬರೀ ಹಸರುಕಾಯಿ, ಮುಂದೆ ಮೆಲ್ಲಗೆ ಕೆಂಪು ಹಣ್ಣು.”

“ನಾನನ್ನುವದು ಹಾಗಲ್ಲ. ಸುಲೂ ಲಗ್ನ ಮಾಡಿಕೊಳ್ಳುವದಿಲ್ಲವೆಂತಲ್ಲ. ಒಳ್ಳೇ ಚೆಲುವ ಚಿತ್ರದಂಥ ಗಂಡನನ್ನು ಹುಡುಕಿಕೊಂಡು ಬರತಾಳೆ. ಆದರೆ ನಿಮಗೇನು ಒಂದು ದುಡ್ಡು ಕೂಡ ವೆಚ್ಚಮಾಡಗೊಡುವದಿಲ್ಲ.”

“ಆ ರಮಾಕಾಂತನದೂ ಈಕೆಯದೂ ಸಖ್ಯ ಇದೆ ಅಂತ ನೀವು ಈ ತರ್ಕ ಮಾಡಿದ್ದೀರಿ. ಅವನ ಮೊದಲಿನ ಹೆಂಡತಿ ಮೊನ್ನೆ ಮೊನ್ನೆ ತೀರಿಕೊಂಡಳಂತೆ. ಮನೆತನ ಏನು ಕೆಟ್ಟದಲ್ಲ. ಆದರೆ ಜಾತಿಯ ಪ್ರಶ್ನೆಯೊಂದಿದೆಯಲ್ಲ.”

“ಸುಧಾರಣೆಯ ಪ್ರಯೋಗ ಮಾಡಿರಲ್ಲ !”

ಬಾಪ್ಪಾ ಅಂದರು. ವಿದ್ಯಾಧರ ನಕ್ಕ.

“ಮತ್ತು ನಾಟಕ ಕಂಪನಿಯ ಕೂಡ ಅವನದು ನಿತ್ಯದ ಸಂಬಂಧ.”

“ಇದ್ದರೇನು? ಒಳ್ಳೆಯ ವ್ಯವಸಾಯವೇ ಅದು.”

“ಒಳ್ಳೇ ವ್ಯವಸಾಯ ! ಇದೆಲ್ಲ ತಿಳಿಯಬೇಕಾದರೆ ಲಗ್ನ ಮಾಡಿಕೊಳ್ಳಬೇಕು ಬಾಪ್ಪಾ ಅವರೆ. ಆ ಕಂಪನಿಯೊಳಗೆ ಒಬ್ಬಾಕೆ ನಟಿ ಇದ್ದಾಳೆ ಗೊತ್ತೇ?”

“ನಿಮ್ಮ ಕಾರಖಾನೆಯೊಳಗೆ ನೂರು ಮಂದಿ ಹೆಂಗಸರಿದ್ದಾರೆ.”

“ನಟಿ ಅಂದರೆ ಚಲುವಿ.”

“ನಿಮ್ಮ ಕಾರಖಾನೆಯೊಳಗೆ ಮಾತ್ರ, ಇಷ್ಟು ಜನ ಹೆಂಗಸರಲ್ಲಿ ಒಬ್ಬಾಕೆಯೂ ಚೆಲುವೆ ಇರಲಿಕ್ಕಿಲ್ಲವೆ? ಇಷ್ಟು ಜನ ಬಡ ಹೆಂಗಸರ ಸಂಬಂಧ ಬಂದರೂ ನೀವು ತೊಳೆದ ಅಕ್ಕಿಯಂತೆ ಇದ್ದೀರೋ ಇಲ್ಲವೋ ? ದಾದಾ ನೀವು ತಪ್ಪುವದು ಇಲ್ಲಿಯೆ ! ತಮ್ಮ ಮೇಲಿಂದ ಜಗತ್ತು ತಿಳಿಯಬೇಕು.”

ಬಂದ ನಗುವನ್ನು ತಡೆಯಲಿಕ್ಕೆಂದು ವಿದ್ಯಾಧರನು ಬೇರೆ ಕಡೆಗೆ ನೋಡಹತ್ತಿದ. ದಾದಾ ಬಲಗಡೆಯ ತೆಂಗಿನ ಬನದ ಕಡೆಗೆ ನೋಡುತ್ತ “ಅಲ್ಲಿ ನೋಡಿರಿ ಬಾಪ್ಪಾ ಮಾತಾಡುವ ತೆಂಗಿನ ಗಿಡ !”

ಬಾಪ್ಪಾ ನೋಡಿದರು. ಬನದಲ್ಲಿಯ ಕೆಲವು ಗಿಡಗಳ ಮೇಲೆ ಬಿಳೀ ಚೌಕು ಪಟ್ಟಿಗಳಿದ್ದವು. ಅವುಗಳ ಮೇಲೆ ಅಂಕಿ ಅಕ್ಷರಗಳೂ ಇದ್ದವು. ವಿದ್ಯಾಧರ ಕೇಳಿದ : “ಇವೆಂಥ ಗಿಡ?”

“ಅವು ಸುಶಿಕ್ಷಿತ ಗಿಡಗಳು” ಎಂದು ಬಾಪ್ಪಾ ಅವರು ಖಿನ್ನಸ್ವರದಿಂದ ಉತ್ತರ ಕೊಟ್ಟರು.

“ಅಂದರೆ?”

“ಸಿಂದೀ ತೆಗೆಯಲಿಕ್ಕೆ ಕೊಟ್ಟ ಗಿಡ ಅವು. ಅವುಗಳ ಮೇಲಿನ ಸರಕಾರೀ ನಂಬರ

ನೋಡಿರಿ. ಬರೀ ತೆಂಗಿನ ಗಿಡಕ್ಕೆ ಯಾರು ಅಂಕೆಗಳನ್ನು ಬರೆದಾರು?"

ದಾದಾ ಅಂದರು– "ಈಗ ಮೂರು ವರ್ಷದ ಹಿಂದೆ ಅಂದಿರಲಿಲ್ಲವೆ ಇಲ್ಲಿಯವರೆಲ್ಲರು ಸಿಂದೀ ತೆಗೆಯಲಿಕ್ಕೆ ಒಂದು ಗಿಡವನ್ನು ಕೂಡ ಕೊಡುವದಿಲ್ಲೆಂದು?"

ಬಾಪ್ಪಾ ಶೂನ್ಯದೃಷ್ಟಿಯಿಂದ ತೆಂಗಿನಗಿಡಗಳ ಕಡೆಗೆ ನೋಡುತ್ತ ನಡೆದಿದ್ದರು.

"ಬಾಪ್ಪಾ, ಜಗತ್ತು ನಡೆಯುವುದು ಹೀಗೇ ನೋಡಿರಿ." ದಾದಾ ಸಾಹೇಬರ ಕೂಡ ಬಾಪ್ಪಾ–ವಿದ್ಯಾಧರರಿಬ್ಬರೂ ಗುಡಿಯಲ್ಲಿ ಹೋದರು. ದಾದಾಸಾಹೇಬರು ಗಂಟೆಯನ್ನು ಜೋರಿನಿಂದ ಬಾರಿಸಿದ ಕೂಡಲೆ ನಡುವಿನ ಆವಾರದಲ್ಲಿದ್ದ ಪಾರಿವಾಳಗಳು ಫಡಫಡ ಸಪ್ಪಳಮಾಡಿದವು. ಗಂಟೆಯನ್ನೂ ತಾವೂ ಬಾರಿಸಿ ದಾದಾ ಗರ್ಭಗುಡಿಯಲ್ಲಿ ಹೋಗಿ ಉದ್ದಂಡ ನಮಸ್ಕಾರ ಹಾಕಿದರು. ಆದರೆ ಅದು ಬಾಪ್ಪಾ–ವಿದ್ಯಾಧರರಿಗೆ ಅರ್ಥಮರ್ಥವೇ ಕಾಣಿಸಿತು. ಗರ್ಭಗುಡಿಯಲ್ಲಿ ಕತ್ತಲೆಯೇ ಇತ್ತು. ಒಂದು ಬದಿಗೆ ಸೀರೆಗಳನ್ನು ಸುತ್ತಿದ ನಾಲ್ಕೈದು ಹಿತ್ತಾಳೆಯ ಕಂಬಗಳನ್ನು ನಿಲ್ಲಿಸಿದ್ದರು. ಚಿಕ್ಕ ಗರ್ಭಗುಡಿಯಲ್ಲಿ ದೇವಿಯ ಹತ್ತರ ಮಂದವಾಗಿ ಉರಿಯುತ್ತಿದ್ದ ನಂದಾದೀಪವು ಅಲ್ಲಿಯ ಕತ್ತಲೆಯ ಭಯಾನಕತೆಯನ್ನೇ ಹೆಚ್ಚಿಸುತ್ತಿತ್ತು. ಎಲ್ಲಿಯಾದರೂ ಕಂಬಕ್ಕೊಂದು ಗಡಿಯಾರವನ್ನು ಹಚ್ಚಿರಬೇಕು. ಅದು ಟಿಕ್ ಟಿಕ್ ಅನ್ನುತ್ತಿತ್ತು. ಮೃತ್ಯುವಿನ ಬಾಗಿಲಲ್ಲಿ ಹೆಜ್ಜೆ ಇಡುವ ಮನುಷ್ಯನ ಗೊರಕೆಯಷ್ಟೇ ಭಯಾನಕವಾಗಿ ಆ ಟಿಕ್ ಟಿಕ್ ಶಬ್ದವು ಕೇಳಬರುತ್ತಿತ್ತು. ದಾದಾ ಪ್ರದಕ್ಷಿಣೆ ಹಾಕಹತ್ತಿದರು. ಉಸಿರುಗಟ್ಟಿದ ಧೂಪದ ಚಮತ್ಕಾರವಾದ ವಾಸನೆಯನ್ನು ಮೂಸಿನೋಡುತ್ತ ಬಾಪ್ಪಾ–ವಿದ್ಯಾಧರರು ಬಾಗಿಲ ಹತ್ತಿರವೇ ನಿಂತರು. ಆ ಸೀರೆಗಳನ್ನು ಸುತ್ತಿದ ಕಂಬಗಳ ಕಡೆಗೆ ಬೊಟ್ಟುಮಾಡಿ 'ಇವೇನು' ಎಂದು ವಿದ್ಯಾಧರ ಕೇಳಿದ.

" 'ತರಂಗ' ಅಂತಾರೆ ಅವಕ್ಕೆ."

"ಗುಡಿಯೊಳಗೆ ಯಾಕೆ ಇಟ್ಟಿದ್ದಾರೆ ಈ ಕಂಬ?"

"ಇವನ್ನು ಎತ್ತಿಕೊಂಡರೆ ಮೈಯೊಳಗೆ ದೇವರು ತುಂಬತದೆ."

"ನಾನು ಎತ್ತಿಕೊಂಡರೂ ತುಂಬೀತೇ?"

"ಕಂಡವರಿಗೆ ಅಲ್ಲ. ಮೊದಲೇ ಗೊತ್ತುಮಾಡಿದವರು ಇರಬೇಕಂತೆ ! ಇಂಥವು ನಮ್ಮ ಈ ಗುಡಿ !"

ಕಡೆಯ ವಾಕ್ಯದೊಡನೆ ಬಾಪ್ಪಾ ಅವರು ಉಸುರ್ಗರೆದದ್ದು ವಿದ್ಯಾಧರನಿಗೆ ಸ್ಪಷ್ಟವಾಗಿ ಕೇಳಬಂತು.

"ಈ ಮೈ ತುಂಬುವದರ ಮೇಲೆ ಬಿಳಿಯಂಗಿಯವರ ವಿಶ್ವಾಸವಿದೆಯೆ?"

"ಕೆಲಸದ ಪೂರ್ತಿ."

"ಉಳಿದ ಕೆಳಗಿನ ಜನರದು?"

"ಓ ! ಅದೇನು ಹೇಳುವ ಹಾಗಿಲ್ಲ ! ಪ್ರತ್ಯಕ್ಷ ದೇವತೆ ಎಂದು ತಿಳೀತಾರೆ ಈ ದೇವಿ ಅಂದರೆ. ಆದರೆ ನಾಳೆ ಕಾರಖಾನೆಯೊಳಗಿನ ಹೆಂಗಸರು ಉಪವಾಸ ಬಿದ್ದು ಸತ್ತರೂ ಸಹ ಈ ದೇವಿಯ ನಿದ್ರೆ ಮುಗಿಯುವುದಿಲ್ಲ."



ಇಷ್ಟರಲ್ಲಿ ದಾದಾ ತಮ್ಮ ಪ್ರದಕ್ಷಿಣೆಯನ್ನು ಮುಗಿಸಿ ಅಂಗಾರ ತೆಗೆದುಕೊಂಡು ಬಂದರು. ಅವರು ಕೈ ಮುಂದೆ ಮಾಡಿದ್ದರಿಂದ ಇವರಿಬ್ಬರೂ ಉಪಾಯವಿಲ್ಲದೆ ತೆಗೆದುಕೊಳ್ಳಬೇಕಾಯಿತು. ಇದು ದಾದಾಸಾಹೇಬರ ಲಕ್ಷ್ಯಕ್ಕೆ ಬರದೆ ಹೋಗಲಿಲ್ಲ. ಅವರಂದರು– "ವಿದ್ಯಾಧರ, ಇಂದಿನತನಕ ನಿಮ್ಮ ಯಂತ್ರ ಬಗೆಹರಿಯವಲ್ಲದು : ಇದರ ಕಾರಣ ನಿಮ್ಮ ಲಕ್ಷ್ಯದೊಳಗೆ ಬಂತೇ?"

"ಯಾತರ ಕಾರಣ ! ಶೋಧವೇನು ಹೇಳಿಕೇಳಿ ಬರುವುದಿಲ್ಲ."

"ಛೇ ! ನಿಮ್ಮ ನಾಸ್ತಿಕತನವೇ ಕಾಡುತ್ತಿದೆ ನಿಮ್ಮನ್ನ. ಇಲ್ಲಿ ನೀವು ಬಂದು ತಿಂಗಳಾಯಿತು ಇಂದು ಬಂದಿರಿ ಗುಡಿಗೆ. ನಮ್ಮ ದೇವಿಗೆ ಹರಕೆ ಹೇಳಿರಿ. ಆಮೇಲೆ ನೋಡೀರಿ ಅದರ ಚಮತ್ಕಾರ."

ಮಾತಾಡುತ್ತಾಡುತ್ತ ಮೂವರೂ ಹೊರಗಿನ ದೀಪಮಾಲೆಯ ಹತ್ತಿರ ಬಂದರು. ಅದು ದಾದಾ ಸಾಹೇಬರ ಔದಾರ್ಯದ ಪತಾಕೆಯಾಗಿತ್ತು.

"ಬಾಪ್ಪಾ, ಈ ದೀಪಮಾಲೆಯಾದರೂ ನಿಮ್ಮ ಮನಸ್ಸಿಗೆ ಬರುವದೋ ಇಲ್ಲೋ?" ಎಂದು ದಾದಾ ಕೇಳಿದರು.

ಬಾಪ್ಪಾ ಇಲ್ಲವೆಂದು ಸೂಚಿಸುತ್ತ ತಲೆಯಲ್ಲಾಡಿಸಿದರು.

"ನಿಮ್ಮ ತಂಗಿಯ ಸ್ಮಾರಕ ಇದು."

"ವೆಚ್ಚ ಎಷ್ಟಾಯ್ತು ಇದಕ್ಕೆ?"

"ಮೂರು ಸಾವಿರ."

"ಇಷ್ಟು ದುಡ್ಡಿನಲ್ಲಿ ಬಡವರ ಮನೆ ಎಷ್ಟಾಗುತ್ತಿದ್ದವು?"

"ಆದರೆ ಸುಲೂಗೆ ಎಷ್ಟು ಪ್ರೀತಿ ಈ ಕಂಬದ ಮೇಲೆ. ಪ್ರತಿದಿವಸ ಸಂಜೆಗೆ ಇದರ ಮೇಲೆ ಹೋಗಿ ಕೂಡುವುದೆಂದರೆ ಆ ಹುಡುಗಿಗೆ ಎಂಥ ಆನಂದ !"

"ಸುಲೂ ಎಂದು ಬರತಾಳೆ ಮುಂಬಯಿಯಿಂದ?"

"ಮುಂಬಯಿಯೊಳಗಿಲ್ಲ ಆಕೆ ಈಗ."

"ಮತ್ತೆಲ್ಲಿ?"

"ಬೆಳಗಾಂವಿಯಲ್ಲಿ."

"ಅಲ್ಲಿ ಯಾರಿದ್ದಾರೆ ಆಕೆಯ ಗುರುತಿನವರು?"

"ಆ ನಟಿ ಮನೆಯನ್ನೇ ಮಾಡಿಕೊಂಡಿದ್ದಾಳಲ್ಲ ಅಲ್ಲಿಯೇ ! ಅವ–ರಮಾಕಾಂತನೂ ಇದ್ದಾನೆ ಸಂಗಡ. ಚಿತ್ರದ ದೆಸೆಯಿಂದ ಇದ್ದೇನೆ ಅಂತ ಬರೀತಾ ಇದ್ದಾಳೆ." ಇದನ್ನು ಹೇಳುವಾಗ ದಾದಾ ಸಾಹೇಬರ ಸ್ವರವು ಏನೋ ಚಮತ್ಕಾರವಾಗಿತ್ತು. ಬಾಪ್ಪಾ ವಿಚಾರದಲ್ಲಿ ಮುಳುಗಿದ್ದಂತೆ ತೋರಿತು.

"ಇಲ್ಲಿ ಎಂದು ಬರುತ್ತಾಳೆ ?" ಎಂದು ಅವರು ಕೇಳಿದರು.

"ಸ್ವಲ್ಪ ಸಿಟ್ಟಿನಲ್ಲಿಯೇ ಪತ್ರ ಬರದೇನೆ. ಬಂದಾಳು ಮೂರು ನಾಲ್ಕು ದಿವಸದಲ್ಲಿ. ನಾಳೆ ಎಲ್ಲರೂ ಅಂಬೋಲಿಗೆ ಬರುತ್ತಾರಂತೆ. ಅಲ್ಲಿ ಒಂದೆರಡು ದಿವಸ ಇದ್ದು ರಮಾಕಾಂತನನ್ನು ಕರೆದುಕೊಂಡು ಸುಲೂ ಇತ್ತಕಡೆಗೆ ಬರುತ್ತಾಳೆ."

ರಮಾಕಾಂತ ಇಲ್ಲಿಗೇಕೆ ಬರುವನೆಂದು ಕೇಳುವುದು ಬಾಪ್ಪಾ ಅವರ ಮನಸ್ಸಿನಲ್ಲಿತ್ತು. ಆದರೆ ದಾದಾ ಮೋರೆಯನ್ನು ತಿರುವಿ ದೇವಿಗೆ ನಮಸ್ಕಾರವನ್ನು ಮಾಡಿ "ಒಳ್ಳೇದು" ಎಂದು ಹೊರಟರು. ಬಾಪ್ಪಾ ಗಂಭೀರಮುದ್ರೆಯಿಂದಂದರು : "ವಿದ್ಯಾಧರ, ದೀಪದ ಕೆಳಗೆ ಕತ್ತಲೆಯೆಷ್ಟು ಇರುತ್ತದೆ?"

"ದೀಪದ ಆಕಾರದಷ್ಟು."

"ಹಾಗಾದರೆ ದೀಪಮಾಲೆಯ ಕೆಳಗೆ?– ಕೆಳಗಿಲ್ಲದಿದ್ದರೂ ಸುತ್ತುಮುತ್ತು ಬಹಳ ಕತ್ತಲೆ ಇರಲಿಕ್ಕೇಬೇಕು. ಅಲ್ಲವೆ?"

ಈ ಪ್ರಶ್ನೆಯನ್ನು ಕೇಳಿ ಬಾಪ್ಪಾ ನಕ್ಕರು. ಆದರೆ ಆ ಹಾಸ್ಯವು ಮುರುಕು ಕೊಳಲಿನ ಸ್ವರದಂತೆ ಇತ್ತು.

ಕೆರೆಯ ಒಂದು ಬದಿಯನ್ನು ಸುತ್ತಿಕೊಂಡು ಅವರು ಗುಡ್ಡವನ್ನು ಏರಹತ್ತಿದರು. ಸಣ್ಣ ಕೂಸು ಆಡುತ್ತ ನಗುತ್ತ ತಾಯಿಯ ಮೊಲೆ ಕುಡಿಯುವಂತೆ ಅವರು ಹೆಜ್ಜೆ ಹೆಜ್ಜೆಗೆ ನಿಲ್ಲುತ್ತ ನಾಲ್ಕೂ ಕಡೆಗೆ ಉಲ್ಲಾಸದಿಂದ ನೋಡುತ್ತ ಮೇಲೆ ಏರುತ್ತಿದ್ದರು. ಸಾಯಂಕಾಲದಂಥ ಮಾಟಗಾರನು ಸೃಷ್ಟಿಯಲ್ಲಿ ಇನ್ನೊಬ್ಬನಿಲ್ಲ. ಗೂಡುಗಳ ಕಡೆಗೆ ತಿರುಗಿ ಹೋಗುವ ಕಾಗೆಗಳ ಹಿಂಡುಗಳು, ಕೆರೆಯ ನೀರ ಮೇಲೆ ಹಬ್ಬಿದ ಹಾವಸೆ, ಗುಡ್ಡದ ಕರೀಬಂಡೆಗಳು, ಇವೆಲ್ಲವುಗಳಲ್ಲಿಯೂ ಸಾಯಂಕಾಲವು ತನ್ನ ಸೊಗಸನ್ನು ತೋರಿಸುತ್ತಿತ್ತು. ಕೆರೆಯ ಎದುರಿನ ಬದಿಗೆ ಒಂದು ಕಡೆಗೆ ತೆಂಗಿನಗಿಡಗಳು ಸಿಪಾಯಿಗಳಂತೆ ನಿಂತಿದ್ದವು. ಇನ್ನೊಂದು ಕಡೆಗೆ ಬಾಳೆಯ ಗಿಡಗಳು ರಾಜಕನ್ಯೆಯರಂತೆ ನಲಿಯುತ್ತಿದ್ದವು. ವಾಯುಲಹರಿಯ ಮೃದುಮಂದಸ್ವರವು ಕಿವಿಯಲ್ಲಿ ತುಂಬುತ್ತಲೇ ಯಾವನೋ ಸಮುದ್ರಪರ್ಯಟನ ಮಾಡಿಬಂದ ಪ್ರವಾಸಿಯು ಸ್ವೈರವಾಗಿ ಮನಬಿಚ್ಚಿ ಗುಡ್ಡದೊಡನೆ ಕೆರೆಯೊಡನೆ ಮಾತಾಡುತ್ತಿದ್ದಂತೆ ಎನಿಸುತ್ತಿತ್ತು. ಗುಡ್ಡದ ತುದಿಗೆ ಏರಿ ಇಬ್ಬರೂ ಸುತ್ತಲೂ ನೋಡಿದರು. ಎದುರಿಗೆ ಆಕಾಶ ಸಮುದ್ರಗಳೆರಡೂ ಯಾರು ಹೆಚ್ಚು ನೀಲವೆಂಬುದನ್ನು ನೋಡಲಿಕ್ಕೆ ಗಲ್ಲಕ್ಕೆ ಗಲ್ಲವನ್ನು ಹಚ್ಚಿ ಕುಳಿತಿದ್ದವು. ಅಂತಃಕರಣದಿಂದ ಉಕ್ಕಿಬಂದ ಭಾವನೆಗಳಲ್ಲಿ ವ್ಯಾವಹಾರಿಕ ವಿಚಾರಗಳು ಎಲ್ಲಿಯೋ ಮಾಯವಾಗುವಂತೆ, ಹಚ್ಚಹಸುರಾದ ತೆಂಗಿನ ಬನಗಳಲ್ಲಿ ಕಾಮಾಪುರವು ಅಡಗಿಹೋಗಿತ್ತು. ಗಿಡದ ಗುಂಪಿನೊಳಗಿಂದ ಏಳುತ್ತಿದ್ದ ಹೊಗೆ, ಎಲ್ಲಿಂದಲೋ ಕೇಳುತ್ತಿರುವ ಸಪ್ಪಳದ ತಾಲಬದ್ಧವಾದ ಪ್ರತಿಧ್ವನಿ, ಊರು ಇಂಥಲ್ಲಿರುವುದೆಂದು ತೋರಿಸುತ್ತಿದ್ದವು.

ಹರ್ಷಭರದಿಂದ ಬಾಪ್ಪಾ ನುಡಿದರು : "ಇದೇ ನಿಜವಾದ ಗುಡಿ."

"ದೇವಿಯೂ ಇದ್ದಾಳೆ ಈ ಗುಡಿಯಲ್ಲಿ" ಎಂದ ವಿದ್ಯಾಧರ.



ಬಾಪ್ಪಾ ಕುತೂಹಲದಿಂದ ಅವನ ಕಡೆಗೆ ನೋಡಿದರು.

ಅವರು ಕುಳಿತ ಬಂಡೆಯ ಹತ್ತಿರವೇ ಹಾಯ್ದು ಗುಡ್ಡದ ಆಚೆಯ ಬದಿಗೆ ಒಂದು ದಾರಿ ಹೋಗಿತ್ತು. ಆ ದಾರಿಯಿಂದ ಗೋಡಂಬಿಯ ಕಟ್ಟಿಗೆಗಳ ಹೊರೆಯನ್ನು ಹೊತ್ತುಕೊಂಡು ವತ್ಸಲೆ ಬರುತ್ತಿದ್ದಳು. ಅವಳನ್ನು ಕುರಿತೇ ವಿದ್ಯಾಧರ ಈ ಮಾತು ಆಡಿದ್ದ. ಅವಳು ಎದುರಿನಲ್ಲಿ ಬಂದ ಕೂಡಲೆ ವಿದ್ಯಾಧರ ಅವಳನ್ನು ಕೂಗಿದ. ಅವಳು ನಿಲ್ಲಲೇ ಬೇಕಾಯಿತು. ಆದರೆ ಭಾರವಾದ್ದರಿಂದ ಹೊರೆಯನ್ನು ಕೆಳಗಿಟ್ಟು ಅವಳು ನಿಂತಳು.

"ಕೃಷ್ಣಾ, ಇವರು ಬಾಪ್ಪಾ – ನಿನ್ನ ಕಾಶಿ ಯಾವಾಗಲೂ ಇವರ ನೆನಪು ಮಾಡುವಳಲ್ಲ, ಅವರೇ."

ವತ್ಸಲೆಯು ಅತ್ಯಂತ ಆದರದಿಂದ ಬಾಪ್ಪಾ ಅವರ ಕಡೆಗೆ ನೋಡಿದಳು.

"ನಿಜವಾದ ಗುಡಿ ಈ ಗುಡ್ಡದ ಮೇಲಿದೆ ಅಂತ ಬಾಪ್ಪಾ ಹೇಳುತ್ತಿದ್ದರು. ದೇವಿಯೂ ಇಲ್ಲಿಯೇ ಇದ್ದಾಳೆ ನೋಡಿರಿ, ಎಂದು ನಾನೆಂದೆ."

ಕೊನೆಯ ವಾಕ್ಯವನ್ನು ವಿದ್ಯಾಧರ ಅಂಜಂಜುತ್ತಲೇ ಆಡಿದ್ದ. ವತ್ಸಲೆಯೊಡನೆ ಅವನು ಯಾವಾಗಲೂ ಸಲಿಗೆಯಿಂದ ಮಾತಾಡುತ್ತಿದ್ದ. ಅದರಿಂದಲೂ ಇಂದು ಫೋಟೋ ತೆಗೆಯುವುದಕ್ಕೆ ಪುನಃಪುನಃ ಅವಳ ಕಡೆಗೆ ನೋಡಬೇಕಾದ್ದರಿಂದಲೂ, ಅವನಿಗೆ ಅವಳೊಡನೆ ಚೇಷ್ಟೆ ಮಾಡುವ ಲಹರಿ ಬಂದಿರಬಹುದು ! ಒಳಗೆ ಒತ್ತಿಟ್ಟ ಆ ಲಹರಿ ಈಗ ಪ್ರಕಟವಾಯಿತು. ಮಾತಾಡಿದ ಮೇಲೆ ಅವನಿಗೆನಿಸಿತು – ಬಾಪ್ಪಾ ಅವರೊಡನೆ ಆ ಮಾತಿನ ವೈಚಿತ್ರ್ಯಕ್ಕೆ ಏನೂ ಅಡ್ಡಿಯಿರಲಿಲ್ಲ. ಆದರೆ ಕೃಷ್ಣೆಯ ಮೋರೆಯ ಮುಂದೆ–

ಅವನು ತಿಳಿದಂತೆ ವತ್ಸಲೆಯು ನಾಚಲೂ ಇಲ್ಲ, ಸಿಟ್ಟಿಗೂ ಏಳಲಿಲ್ಲ. ಅವರಿಬ್ಬರನ್ನೂ ನೋಡುತ್ತ ಅವಳಂದಳು– "ಒಂದೇ ಕಡಿಮೆ ಇದೆ ಈ ದೇವಿಗೆ."

"ಏನದು?"

"ನೈವೇದ್ಯ ! ಕಾರಖಾನೆಯಂತೂ ನಿಂತುಹೋಯಿತು."

"ನಾಳೆ ಮಧ್ಯಾಹ್ನದ ಚಿಂತೆಯನ್ನು ಇವೊತ್ತು ಸಂಜೆಗೆ ಮಾಡಬಾರದು."

"ಈ ನಿಯಮವು ಸಿರಿವಂತರಿಗಾಗಿ. ಬಡವರಿಗೆ–"

ವತ್ಸಲೆಯ ಈ ಉತ್ತರವನ್ನು ಕೇಳಿ ಬಾಪ್ಪಾ ಬೆಚ್ಚಿದರು. ಗೋಡಂಬಿಯ ಕಾರಖಾನೆಯಲ್ಲಿ ಕೆಲಸ ಮಾಡುವ ಕೂಲಿಕಾರ ಹುಡುಗಿ ಮಾತಾಡುತ್ತಾಳೆ. ಅದರಲ್ಲಿಯೂ ಕಲಿತವರಂತೆ ಮಾತಾಡುತ್ತಾಳೆ ! ಅವರು ಕೇಳಿದರು : "ಕೃಷ್ಣಾ ನೀ ಎಲ್ಲಿಯಾಕೆ ?"

"ಸಾಂಗಲಿ ಕೊಲ್ಲಾಪುರದ ಕಡೆಯಾಕೆ. ಸಣ್ಣವಳಿದ್ದಾಗ ಕೊಂಕಣದಲ್ಲಿ ಇದ್ದೆ."

"ಇಷ್ಟು ಶುದ್ಧವಾಗಿ ಮಾತಾಡಲಿಕ್ಕೆ ಹೇಗೆ ಬರತದೆ ನಿನಗೆ ?"

"ಚಿಕ್ಕಂದಿನಲ್ಲಿಯೇ ತಾಯಿ ಹೋಗಿಬಿಟ್ಟಳು ಅಂದಿನಿಂದ ಸ್ಥಿತಿವಂತರ ಮನೆಯಲ್ಲೇ ಬೆಳೆದಿದ್ದೇನೆ."

"ನಿನಗೆ ಬರೆಯಲಿಕ್ಕೆ ಓದಲಿಕ್ಕೆ ಬರತದೆಯೆ ?"

"ಓಹೋ ಬಹಳ ಆಶೆ ಆಕೆಗೆ ಅದರ ಮೇಲೆ ! ನನ್ನ ಕಡೆಯಿಂದ ಮಾಸಿಕ ಪತ್ರಗಳನ್ನು ತೆಗೆದುಕೊಂಡು ಹೋಗುತ್ತಾಳೆ" ಎಂದು ವಿದ್ಯಾಧರ ಹೇಳಿದ.

"ಕೊಂಕಣದೊಳಗೆ ಯಾತಕ್ಕೆ ಬಂದಿ ಹಾಗಾದರೆ ?" ಎಂದು ಬಾಪ್ಪಾ ಕೇಳಿದರು.

"ನನ್ನನ್ನು ಮುಂಬಯಿಗೆ ಕೊಟ್ಟಿದ್ದರು. ಆದರೆ ಯಜಮಾನರು–"

ಕೃಷ್ಣೆ ಮೋರೆ ತಿರುವಿದಳು. ಬಾಪ್ಪಾ ತಿಳಿದರು–ದುಃಖವನ್ನು ನೆನೆದು ಅವಳ ಕಣ್ಣಲ್ಲಿ ನೀರು ತುಂಬಿದೆಯೆಂದು. ಹೆಚ್ಚಿಗೆ ಕೇಳಿ ಅವಳನ್ನೇಕೆ ನೋಯಿಸಬೇಕು? ಮನೆಮನೆಗೂ ಅದೇ ಪರಿ ! ಸುಶಿಕ್ಷಿತರೆನಿಸುವವರು ಸಹ ಒಬ್ಬ ಹೆಂಡತಿ ಬದುಕಿರುವಾಗಲೇ ಎರಡನೆಯವಳನ್ನು ಮಾಡಿಕೊಳ್ಳುತ್ತಾರೆ. ಇಲ್ಲವೆ ಸೆರೆ ಕುಡಿದು ಹೆಂಡಿರು ಮಕ್ಕಳನ್ನು ಬಡಿಯುತ್ತಾರೆ. ಅಂದಮೇಲೆ ಅಶಿಕ್ಷಿತರಲ್ಲಿ ಹೀಗಾಗುತ್ತಿದ್ದರೆ ಆಶ್ಚರ್ಯವೇನು ?

ವಿದ್ಯಾಧರನಂದ– "ನನ್ನ ಸಮಾಚಾರ ಈಕೆಯವರ ವಿರುದ್ಧವಾಗಿದೆ ನೋಡಿರಿ."

ವತ್ಸಲೆಯು ತಟ್ಟನೆ ತಿರುಗಿ ನೋಡಿದಳು. ಬಾಪ್ಪಾ ಅವರಿಗೆ ಅವಳ ಕಣ್ಣಲ್ಲಿ ನೀರು ಕಾಣಲಿಲ್ಲ. ಅವರಿಗೆನಿಸಿತು–ದುಃಖವು ಹೆಚ್ಚಾದರೆ ಸಮುದ್ರವು ಕೂಡ ಸಹರಾ ಮರುಭೂಮಿಯಾಗುವದು.

ವಿದ್ಯಾಧರ ಹೇಳತೊಡಗಿದ–"ಇವರ ತಾಯಿಯ ಹಾಗೆ ನಮ್ಮ ತಾಯಿ ಏನು ಚಿಕ್ಕಂದಿನಲ್ಲಿ ತೀರಿಕೊಳ್ಳಲಿಲ್ಲ. ಆದರೆ ಆಕೆಗೆ ಸಿಡುಕು ಹಟ ಹೆಚ್ಚು. ಆದ್ದರಿಂದ ನನಗೆ ಆಕೆಯ ಸಲಿಗೆಯೆ ಆಗಲಿಲ್ಲ. ಧೊಂಡೂ ಅಂತ ಒಬ್ಬ ಒಕ್ಕಲಗಿತ್ತಿ ಇದ್ದಳು ನಮ್ಮ ಮನೆಯಲ್ಲಿ. ಹಗಲು ರಾತ್ರಿ ನಾನು ಆಕೆಯ ಹತ್ತಿರವೇ ಇರುತ್ತಿದ್ದೆ. ಆಕೆಯದೆ ರೊಟ್ಟಿ ತಿನ್ನುವದು ಹೀಗೆ ನನ್ನ ಚಿಕ್ಕಂದೆಲ್ಲ ಕಳೆಯಿತು. ನಮ್ಮ ತಾಯಿ ತೀರಿಕೊಂಡ ದಿನ ಮಾತ್ರ ನಾನೇನಾದರೂ ಅತ್ತಿರಬಹುದು! ಆದರೆ ಇಂದಿನ ತನಕ ಧೊಂಡೂನ ನೆನಪು ಆದರೆ ಕ್ಷಣಹೊತ್ತು ಹಳಹಳಿಯಾಗತದೆ. ಆಕೆಯ ಆ ಕೌದಿಯ ಊಬು, ಆ ಬಳ್ಳೊಳ್ಳಿ ಚಟ್ಣಿಯ ರುಚಿ, ಅಂತಃಕರಣದಿಂದ ತುಂಬಿತುಳುಕುತ್ತಿರುವ ಆ ಹಳ್ಳಿಗಾಡ ಮಾತು–"

"ಹೀಗಿದ್ದರೂ ಇಲ್ಲಿ ಬಂದನಂತರ ಕೊಂಕಣಿ ಮಾತೇನೂ ತಿಳಿಯಲೊಲ್ಲದು ನಿಮಗೆ" ಎಂದು ವತ್ಸಲೆ ನಡುವೆ ಬಾಯಿ ಹಾಕಿದಳು.

"ಭಾಷೆಯ ಕಡೆಗೆ ಮೊದಲಿನಿಂದಲೂ ನನ್ನ ಲಕ್ಷ್ಯ ಕಡಿಮೆ, ಹಾಗೆಂದೇ ಕಮ್ಮಾರನಂತೆ ಇಲ್ಲಿ ಈ ಗೋಡಂಬಿ ಒಡೆಯುವ ಯಂತ್ರ ತಯಾರಿಸಲಿಕ್ಕೆ ಬಂದೇನೆ"

"ಲಗ್ನ ಆಗಿದೆಯೇನು ನಿಮ್ಮದು ?" ಎಂದು ಬಾಪ್ಪಾ ತಟ್ಟನೆ ಕೇಳಿದರು

"ನಮ್ಮ ತಾಯಿಯ ದುಂದುಗಾರಿಕೆಯಿಂದ ನಾವು ಕೆಲ ದಿವಸದಲ್ಲಿಯೇ ಬಡವರಾದೆವು. ವಾರದ ಊಟ ಹಾಗೂ ಸ್ಕಾಲರಶಿಪ್ಪಿನ ಮೇಲೆ ನನ್ನ ಶಿಕ್ಷಣ ಆಯ್ತು. ನನ್ನಂಥ ಒಂಟಿಗನಿಗೆ ಯಾರು ಕೊಟ್ಟಾರು ಮಗಳನ್ನು ? ಈ ಯಂತ್ರ ಸಾಧಿಸಿ ಐದು ಸಾವಿರ ರೂಪಾಯಿ ಕೈಗೆ ಬರುವವು. ಆಮೇಲೆ ಮೆಚ್ಚಿನ ಹುಡುಗಿ ಸಿಕ್ಕರೆ ಮದುವೆ."

"ಮೆಚ್ಚಿನ ಹುಡುಗಿ ಅಂದರೆ ?"



"ದೊಡ್ಡವರ ಡೌಲಿನ ಗೊಂಬೆ ಬೇಡ ನನಗೆ. ನನ್ನ ಉದ್ಯೋಗ ಕಮ್ಮಾರನದು ! ಅಂದಮೇಲೆ ಒಬ್ಬಾಕೆ ಕಮ್ಮಾರಗಿತ್ತಿ–"

ವಿದ್ಯಾಧರನ ಈ ವಿನೋದಕ್ಕೆ ಯಾರಿಗೂ ನಗೆಯನ್ನು ತಡೆಯುವುದಾಗಲಿಲ್ಲ.

"ಧೋಂಡೂಗೆ ಒಬ್ಬ ಮಗಳಿದ್ದರೆ ಆಕೆಯನ್ನೇ ಕೊಡೂಂತ ಕೇಳುತ್ತಿದ್ದೆ ! ಇದ್ದು ಬಿದ್ದ ಎಲ್ಲ ಕೆಲಸವನ್ನು ಮಾಡುವ ಹೆಂಡತಿ ಬೇಕು ನನಗೆ. ಅಂಥಾಕೆ ದೊಡ್ಡ ಜನರಲ್ಲಿ ಅದರೊಳಗೆ ಬ್ರಾಹ್ಮಣರಲ್ಲಿ – ಉಸುಕಿನ ಅರಣ್ಯದಲ್ಲಿ ಸಂಗಮರವರೀ ಕಲ್ಲು ಸಿಕ್ಕರೂ ಸಿಕ್ಕೀತು! ಆದರೆ–"

"ಅಂದರೆ ಕಲಿತ ಹುಡುಗಿಯರು ಬೇಕಾದರೆ ದೊಡ್ಡವರಲ್ಲಿಯೇ ಸಿಗಬೇಕು."

"ಏನು ಮಾಡುವದು ಆ ಕಲಿಕೆ ತೆಗೆದುಕೊಂಡು ? ತುಟಿಯ ಬಣ್ಣ ಹೋದೀತೆಂದು ಮಕ್ಕಳಿಗೆ ಮುದ್ದುಕೊಡದ ತಾಯಂದಿರು, ಕೊಂಕಣವು ತಮ್ಮ ಮನಸ್ಸಿಗೆ ಬರುವದಿಲ್ಲವೆಂದು ಗಂಡಂದಿರಿಗೆ ಅಲ್ಲಿಯ ಕೆಲಸ ಬಿಡಿಸಿ ಕೆಲಸವಿಲ್ಲದಂತೆ ಮಾಡುವ ಹೆಂಡಿರು, ಲಗ್ನಮಾಡಿಕೊಳ್ಳುವುದಿಲ್ಲೆಂದು ಜಂಬಕೊಚ್ಚಿ ಶೃಂಗಾರದ ಚಿತ್ರಪಟ ಕಾದಂಬರಿಗಳಲ್ಲಿ ಮುಳುಮುಳುಗಿ ಏಳುವ ಹುಡುಗಿಯರು–ಇಂಥವರನ್ನು ನೋಡಿ ನನ್ನ ಮನಸ್ಸು ಹೇಸಿಹೋಗಿದೆ."

"ನೀವೂ ನನ್ನಂಥ ಗಾಂಧೀಭಕ್ತನ ಹಾಗೇ ಮಾತಾಡಹತ್ತಿಬಿಟ್ಟಿರಲ್ಲ !"

ಸಮುದ್ರ ಉಕ್ಕೇರುವ ಹೊತ್ತಿಗೆ ಸ್ವಲ್ಪ ಗಾಯವಾದರೂ ಬಹಳ ರಕ್ತ ಹರಿಯುವದೆಂದು ಸಮುದ್ರದ ದಂಡೆಯಲ್ಲಿರುವ ಜನರು ತಿಳಿಯುತ್ತಾರೆ. ಸಾಯಂಕಾಲದ ಪ್ರಸನ್ನ ವೇಳೆ, ಸಹಜವಾಗಿ ಯಾರ ಮುಂದೆಯೂ ಬಿಚ್ಚಿರದ ಅಂತಃಕರಣ, ಬಾಪ್ಪಾ ವತ್ಸಲೆಯರಂಥ ಮನಸೊಪ್ಪುವ ಶ್ರೋತೃಗಳು, ಈ ತ್ರಿವೇಣೀಸಂಗಮವಾದ್ದರಿಂದ ವಿದ್ಯಾಧರನು ಪೂರ್ತಿ ಮನಬಿಚ್ಚಿ ಮಾತಾಡಹತ್ತಿದನು.

"ನನ್ನ ಅನುಭವವೇ ಹಾಗಿದೆ ಬಾಪ್ಪಾ. ಕಲಿಯುವದು ಮುಗಿದ ಕೂಡಲೇ ನಮ್ಮ ಜಾತಿಯ ಯಾವನೋ ಒಬ್ಬ ದೊಡ್ಡ ಮನುಷ್ಯ ಮುನ್ನೂರು ರೂಪಾಯಿಗಳ ಒಂದು ಕೆಲಸ ಮತ್ತು ಒಬ್ಬ ಹುಡುಗಿ ತೆಗೆದುಕೊಂಡು ನನ್ನ ಕಡೆಗೆ ಬಂದ, ಆದರೆ ಕೆಲಸ ಹಿಡಿಯುವುದೇ ನನಗೆ ಬೇಕಾಗಿದ್ದಿಲ್ಲ."

"ಯಾಕೆ ?"

"ಕಾರಕೂನನಾಗುವುದು ಬೇಕಾಗಿಲ್ಲ ನನಗೆ, ನನ್ನ ಇಚ್ಛೆಯೆಂದರೆ ಏನಾದರೂ ಶೋಧಮಾಡಬೇಕು, ಹೆಸರಾಗಬೇಕು. ಆ ನಮ್ಮ ಮಾವಂದಿರ ಮೋಜು ಹೇಳುವದು ಹಾಗೇ ಉಳಿಯಿತಲ್ಲ. ಆ ಕೆಲಸದ ಅಮೃತದ ಕೂಡ ಎಂಥ ವಿಷ ತಂದಿದ್ದ–"

"ಕಪ್ಪು ಇದ್ದಳೆಂದು ಕಾಣತದೆ ಹುಡುಗಿ?"

"ಬಣ್ಣಕ್ಕೆ ಅಷ್ಟು ಬೆಲೆ ಕೊಡುವದಿಲ್ಲ ನಾನು ! ಸುಣ್ಣ ಬೇಕಾದಷ್ಟು ಬೆಳ್ಳಗಿದ್ದರೇನು, ಕಸ್ತೂರಿಯ ಬೆಲೆ ಬಂದೀತೇ ಅದಕ್ಕೆ ?"

ವಿದ್ಯಾಧರನು ವತ್ಸಲೆಯ ಕಡೆಗೆ ನೋಡಿ ನಸುನಕ್ಕ. ಅವಳ ಮೋರೆಯ ಮೇಲೆಯೂ ಅವಳರಿಯದೆಯೆ ನಸುನಗೆ ಮೂಡಿತು.

“ಅಲ್ಲಿಂದ ? ಏನು ಕಡಿಮೆಯಾಯ್ತು?”

“ಒಳ್ಳೇ ಕುಂಟಳು ಹುಡುಗಿ. ಆ ಕೆಲಸದ ಆಧಾರದಿಂದ ನಡೆಯಬಹುದೆಂದು ಅನಿಸಿತ್ತೋ ಏನೋ ಅವರಪ್ಪನಿಗೆ !”

ಬಾಪ್ಪಾ ನಗುನಗುತ್ತ ಕೇಳಿದರು–“ಕೆಲಸವನ್ನು ಎಂದಿಗೂ ಹಿಡಿಯಬಾರದೆಂದು ನಿಮ್ಮ ಸಂಕಲ್ಪವಿದೆ ಏನು?”

“ಖಂಡಿತವಾಗಿ ! ಹೊಸದೇನಾದರೂ ಶೋಧ ಮಾಡಬೇಕು, ದೇಶದ ಕೀರ್ತಿಯನ್ನು ಹೆಚ್ಚಿಸಬೇಕು–”

“ಸಿರಿವಂತರ ದುಡ್ಡನ್ನೂ ಹೆಚ್ಚಿಸಬೇಕು–”

“ಅದೇಕೆ ? ಬಡವರಿಗೂ ಶೋಧದ ಉಪಯೋಗವಾಗುವದಿಲ್ಲವೆ?”

“ದುಡಿಯದೆ ಹೊಟ್ಟೆ ತುಂಬಿಕೊಳ್ಳುವ ಯಂತ್ರ ತೆಗೆದರೆ ಆದೀತು ಉಪಯೋಗ.”

ವಿದ್ಯಾಧರ ಬೆಚ್ಚಿದ. ಆದರೆ ಬಾಪ್ಪಾ ಅವರ ಮೇಲೆ ತನ್ನ ವರ್ಚಸ್ಸು ಇರಬೇಕೆಂದು ಅವನಂದ– “ಎಷ್ಟಾದರೂ ಗಾಂಧೀ ಭಕ್ತರು ನೀವು. ಕೈಯೊಳಗೆ ಗಡಿಯಾರ ಕಟ್ಟುವುದಕ್ಕಿಂತ ಕೊರಳಲ್ಲಿ ಗಳಿಗೆ ಬಟ್ಟಲ ಕಟ್ಟಿಕೊಳ್ಳಬೇಕೆನ್ನುವತನಕ ಸರತಿ–ನಿಮ್ಮದು.”

ಬಾಪ್ಪಾ ಅವರಿಗೆ ಅವನ ಈ ಉಪಹಾಸದಿಂದ ಸಿಟ್ಟು ಬರಲಿಲ್ಲ. ಬಡತನದಲ್ಲಿ ಶಿಕ್ಷಣ ಸಂಪಾದಿಸಿಯೂ ಕೆಲಸದ ಸುಖಕ್ಕೆ ಅವನು ಮೆಚ್ಚಲಿಲ್ಲೆಂಬುದನ್ನು ನೋಡಿ ಅವರ ಮನಸ್ಸಿನಲ್ಲಿ ಅವನ ಬಗ್ಗೆ ಆದರವೆನಿಸಿತು. ಕಳೆದ ಹತ್ತು ವರ್ಷ ಸಾರ್ವಜನಿಕ ಕಾರ್ಯಗಳಲ್ಲಿಯ ತಮ್ಮ ಅನುಭವವು ಅವರ ಕಣ್ಣು ಮುಂದೆ ನಿಂತಿತು. ಮಹಾರಾಷ್ಟ್ರದಲ್ಲಿ ದುಡ್ಡಿಲ್ಲದಿದ್ದರೂ ಬುದ್ಧಿಯಿದೆ. ಆದರೆ ಈ ಬುದ್ಧಿಗೆ ಯೋಗ್ಯ ದಾರಿಯಿಲ್ಲ. ರಾಷ್ಟ್ರದ ತಾರುಣ್ಯವು ಹೇಗೆ ವಸಂತ ಋತುವಿನ ಸೂರ್ಯಪ್ರಕಾಶದಂತಿರಬೇಕು ! ಆದರೆ ಬಾಪ್ಪಾ ಅವರ ಅನುಭವವು ತೀರ ವಿರುದ್ಧವಾಗಿತ್ತು. ಬಡತನದಲ್ಲಿ ಶಿಕ್ಷಣ ಪಡೆದವರು, ಆಗರ್ಭ ಶ್ರೀಮಂತರು, ಕುಲೀನರು ಆದ ಅನೇಕ ತರುಣರೊಡನೆ ಕಲೆಯುವ ಪ್ರಸಂಗಗಳು ಅವರಿಗೆ ಬಂದಿದ್ದವು. ಆದರೆ ಅವರಲ್ಲಿ ಬಹುಜನರ ದೃಷ್ಟಿ ಸಂಕುಚಿತವಾದದ್ದು. ದುಡ್ಡು ದೊರೆಕಿಸಿದರೆ, ಇದ್ದ ಊರಲ್ಲಿಯೆ ನಗರಸಭೆಗೆ ಆರಿಸಿ ಬಂದರೆ, ಹೊಲ ಮನೆ ಕೊಂಡರೆ, ಹೆಂಡಿರುಮಕ್ಕಳ ಮೈಮೇಲೆ ವಸ್ತ್ರ ಒಡವೆಗಳನ್ನು ಹೇರಿದರೆ, ಬಹಳ ಹೆಚ್ಚೆಂದರೆ ವೃತ್ತ ಪತ್ರದಲ್ಲಿ ಹೆಸರು ಅಚ್ಚಾದರೆ ಅವರ ಕರ್ತೃತ್ವದ ಸೀಮೆ ಮುಟ್ಟಿಯಾಯಿತು! ದೊಡ್ಡದಾದ ಮಹತ್ವಾಕಾಂಕ್ಷೆ, ಉದಾತ್ತವಾದ ಧ್ಯೇಯ, ಗಟ್ಟಿಯಾದ ಮನಸ್ಸು, ಜನರ ಮನವೊಲಿಸುವ ಸ್ವಾರ್ಥತ್ಯಾಗ, ಒಂದೆಂದರೆ ಒಂದೂ ಇಂಥ ಸದ್ಗುಣವು ಈ ನೂರಾರು ತರುಣರಲ್ಲಿ ಅವರ ದೃಷ್ಟಿಗೆ ಬಿದ್ದಿರಲಿಲ್ಲ. ಈ ತರುಣರಿಗೆ ಜಗವೆಂದರೆ ಅವರ ಊರು. ಆ ಜಗತ್ತಿನಲ್ಲಿಯ ಮಹತ್ತ್ವದ ಭಾಗವೆಂದರೆ ಅವರ ಉದ್ಯೋಗ, ಅವರ ಮನೆತನ. ದೇಹಕ್ಕೆ ಸೆರೆಯ ಉಪಯೋಗವೆಷ್ಟೋ ಅಷ್ಟು ಅವರ ಮನಸ್ಸಿಗೆ ವೃತ್ತ ಪತ್ರದ ಉಪಯೋಗ. ಕೇವಲ



ಬಹು ದಿವಸದ ಚಟವೆಂದು ಅದನ್ನು ಓದುವದು. ವಿಚಾರಗಳ ಮೇಲಾಗಲಿ ಭಾವನೆಗಳ ಮೇಲಾಗಲಿ ಆ ಓದಿನ ಪರಿಣಾಮವು ಎಳ್ಳಷ್ಟೂ ಆಗುವ ಹಾಗಿಲ್ಲ. ಎಲ್ಲರೂ ಪ್ರವಾಹಪತಿತರೇ! ಕೈಕಾಲು ಅಲುಗಾಡಿಸಲಿಕ್ಕೆ ಯಾರಿಗೂ ಬೇಡ. ಎಲ್ಲರೂ ಕುರುಡರು ! ಕಣ್ಣುತೆರೆದು ನೋಡುವದು ಯಾರಿಗೂ ಬೇಡ. ಇಂಥ ನಾಚಿಕೆಗೇಡಿ ತರುಣರಿಗಿಂತ ಪ್ರವಾಹದ ವಿರುದ್ಧ ಈಜುವ ಧೈರ್ಯವುಳ್ಳವನೂ, ಕಣ್ಣು ತೆರೆದು ಸುತ್ತಲೂ ನೋಡಬಲ್ಲವನೂ ಆದ ವಿದ್ಯಾಧರನು ಅವರಿಗೆ ಎಷ್ಟೋ ಬೇಕೆನಿಸಿತು. ಅವನು ಮಾಡಿದ ಉಪಹಾಸವು ಕೂಡ ಒಂದು ದೃಷ್ಟಿಯಿಂದ ಅವನ ಕರ್ತೃತ್ವದ ದ್ಯೋತಕವೇ ಆಗಿತ್ತು.

ತುಸು ವೇಳೆ ಸುಮ್ಮನಿದ್ದು ಬಾಪ್ಪಾ ಅಂದರು–“ವಿದ್ಯಾಧರ, ನಾನೇನು ನಿಮ್ಮ ಯಂತ್ರಕ್ಕೆ ವಿರೋಧಕನಲ್ಲ.”

“ಹಾಗಾದರೆ?”

“ಮನುಷ್ಯರನ್ನು ಯಂತ್ರಗಳನ್ನಾಗಿ ಮಾಡುವವರೂ, ಈ ಜೀವಂತ ಯಂತ್ರಗಳಿಗೆ ಹೊಟ್ಟೆತುಂಬ ಅನ್ನವನ್ನೂ ಕೊಡದೆ ಅವನ್ನು ನಡೆಸಬಯಸುವವರು–”

ಬಾಪ್ಪಾ ನಡುವೇ ತಡೆದರು. ಅವರು ಖಿನ್ನ ದೃಷ್ಟಿಯಿಂದ ಮೇಲೆ ನೋಡಿದರು. ಅವರ ಮಾತಿಗಿಂತಲೂ ಅವರ ಈ ನೋಟದ ಪರಿಣಾಮವು ವತ್ಸಲೆ–ವಿದ್ಯಾಧರರ ಮೇಲೆ ಹೆಚ್ಚಾಯಿತು. ಕಾನೂನು ಭಂಗದ ಚಳವಳಿಯಲ್ಲಿ ಅವರ ಕಳಕಳಿಯ ಭಾಷಣಗಳಿಂದ ಇಡೀ ರತ್ನಾಗಿರೀ ಜಿಲ್ಲೆಯೇ ಹೇಗೆ ಅಲ್ಲೋಕಲ್ಲೋಲವಾಗಿತ್ತೆಂಬುದನ್ನು ವಿದ್ಯಾಧರನು ಸುಲೋಚನೆಯ ಬಾಯಿಂದ ಮೊದಲೇ ಕೇಳಿದ್ದ. ಅವನು ನೋಡಿದ–ಬಾಪ್ಪಾ ಅವರ ಕಣ್ಣುಗಳಲ್ಲಿ ಒಂದು ತರದ ತೇಜಸ್ಸು ಕಾಣುತ್ತಿತ್ತು. ಅವರು ಮತ್ತೆ ಮಾತಾಡುತ್ತಿದರು. ಯಾವಾಗಲೂ ಮೃದುವಾದ ಅವರ ದನಿಯು ಕೂಡ ಈಗ ಸ್ವಲ್ಪ ಕಠೋರವಾಗಿದೆಯೆಂದು ವಿದ್ಯಾಧರನಿಗೆ ತೋರಿತು.

“ವಿದ್ಯಾಧರ, ನಾಳೆ ನೀವು ಗೋಡಂಬಿ ಯಂತ್ರವನ್ನು ಶೋಧಿಸುವಿರಿ. ದಾದಾ ನಿಮಗೆ ಐದೇಕೆ ಹತ್ತು ಸಾವಿರಾದರೂ ಕೊಟ್ಟಾರು. ನಿಮ್ಮ ಕೀರ್ತಿ ಅಮೆರಿಕದವರೆಗೂ ಮುಟ್ಟೀತು. ನಮ್ಮ ಸುಲೋಚನೆಯಂಥ ಒಬ್ಬ ಒಳ್ಳೇ ಹುಡುಗಿ ನಿಮಗೆ ಮಾಲೆಯನ್ನೂ ಹಾಕಿಯಾಳು. ಮುಂಬಯಿಯೊಳಗಿದ್ದು ಪ್ರತಿದಿವಸ ಕಾರಿನಲ್ಲಿ ಜುಹೂದ ಕಡೆಗೆ ತಿರುಗಾಡಲಿಕ್ಕೆ ಹೋಗಬಹುದು. ಆದರೆ ಅದೇ ಹೊತ್ತಿಗೆ ಸರಿಯಾಗಿ ಪ್ರತಿ ನಿತ್ಯ ಇಲ್ಲಿ ಏನು ನಡೆಯುವುದು?”

ಕೊನೆಯ ಶಬ್ದಗಳನ್ನುಚ್ಚರಿಸುವಾಗ ಬಾಪ್ಪಾ ಅವರ ದನಿ ನಡುಗುತ್ತಿತ್ತು. ವಿದ್ಯಾಧರನಿಗೆನಿಸಿತು–ಮರಣದ ಅಮಂಗಲ ವಾರ್ತೆಯನ್ನು ಹೇಳುವವನ ಸ್ವರವು ಇದೇ ತರದ ಕಂಪವನ್ನು ಹೊಂದುವುದೆಂದು.

“ವಿದ್ಯಾಧರ, ಇಂದು ಐನೂರು ಜನರು, ಹೇಗೇ ಆಗಲಿ, ಇಲ್ಲಿ ತಮ್ಮ ಹೊಟ್ಟೆ ತುಂಬಿಕೊಂಡು ಇದ್ದಾರೆ. ನಾಳೆ ನಿಮ್ಮ ಯಂತ್ರ ಇವರ ಹೊಟ್ಟೆಯ ಮೇಲೆ ಕಾಲು ಕೊಡುವದು. ಯಂತ್ರವು ಬಂದ ಕೂಡಲೆ ಐವತ್ತೇ ಜನ ಈಗ ಐನೂರು ಜನ ಮಾಡುವ ಕೆಲಸವನ್ನು ಮಾಡುತ್ತಾರೆ. ನಿರುದ್ಯೋಗಿಗಳಾದ ಉಳಿದ ನಾಲ್ಕುವರೆ ನೂರು ಏನು ಮಾಡಬೇಕು?”

"ಹೊಟ್ಟೆಯ ಪಿಂಡಗಳನ್ನು ಕಲ್ಲಿನಂತೆ ಕೊರಳಲ್ಲಿ ಕಟ್ಟಿಕೊಂಡು ಈ ಕೆರೆಯೊಳಗೆ ಜೀವ ಕೊಡಬೇಕೇ; ಈ ಗುಡ್ಡದ ಮೇಲಿನ ಕಲ್ಲು ತಿಂದಿರಬೇಕೇ ? ಜುಹೂದ ಉಸುಕಿನಲ್ಲಿ ನೀವು ನಿಮ್ಮ ಮಕ್ಕಳ ಕಡೆಗೆ ಕೌತುಕದಿಂದ ನೋಡುತ್ತ ಕೂಡಬಹುದು, ಆದರೆ ಅದೇ ವೇಳೆಗೆ ಇಲ್ಲಿಯ ಕೂಲಿಕಾರರ ಗುಡಿಸಲುಗಳಲ್ಲಿ ಅವರ ಮಕ್ಕಳು ಹಸಿವೆಯಿಂದ ಹೋ ಎಂದು ಅಳುತ್ತಿರಬಹುದು. ನೀವು ಸಂಜೆಯ ಕೆಂಪನ್ನು ನಿಮ್ಮ ನಲ್ಲೆಯ ಗಲ್ಲದ ಗುಲಾಬಿಗೆ ಹೋಲಿಸಿ ನಲಿಯಬಹುದು. ಅದೇ ಈ ಕಡೆಗೆ ಕುಡುಕ ಗಂಡನು ದುಡ್ಡಿಲ್ಲದವಳೆಂದು ತನ್ನ ಹೆಂಡತಿಯ ಕೆನ್ನೆಯನ್ನು ಕೆಂಪುಮಾಡುವನು. ಸಂಜೆಯ ತಿರುಗಾಟದಿಂದ ನಿಮಗೆ ಗಾಢವಾದ ನಿದ್ರೆ ಬರಬಹುದು. ಇಲ್ಲಿ ಬಡವರು ಮರುದಿವಸದ ಚಿಂತೆಯಿಂದ ಬೆಳಗಿನವರೆಗೆ ಒಂದು ಮಗ್ಗುಲಿಂದ ಇನ್ನೊಂದು ಮಗ್ಗುಲಿಗೆ ಹೊರಳಾಡುವರು. ಈ ಪಾಪ–ಇದಕ್ಕೆಲ್ಲ ಪಾಪವೆಂದೇ ಅನ್ನುವೆ ನಾನು. ಈ ಪಾಪದ ಕೊಪ್ಪರಿಗೆ ಯಾರ ತಲೆಯನ್ನು ಒಡೆಯುವದು?"

ಎದುರಿಗೆ ಕೆಂಪಾದ ಸೂರ್ಯನೂ ಇದೇ ಪ್ರಶ್ನೆಯನ್ನು ಕೇಳುತ್ತಿರುವಂತೆ ವಿದ್ಯಾಧರನಿಗೆ ಭಾಸವಾಯಿತು. ಅವನು ಮೆಲ್ಲಗೆ ಅಂದ–

"ಇದಕ್ಕೇನು ಉಪಾಯ?"

"ಉಪಾಯ ? ಎರಡು ಧ್ರುವಗಳ ನಡುವಿನ ಅಂತರ ಕಡಿಮೆ ಮಾಡುವದು."

ಬಾಪ್ಪಾ ಅವರ ಶಬ್ದಗಳನ್ನು ಕೇಳಿ ವತ್ಸಲೆಯು ಬೆಚ್ಚಿದಳು. ಅದು ಅವರ ಲಕ್ಷ್ಯಕ್ಕೆ ಬಂದು ಕೇಳಿದರು : "ಹುಳುಹುಪ್ಪಟಿ ಏನಾದರೂ ಅದೆ ಏನು?"

ಇಲ್ಲವೆಂದು ಅವಳು ತಲೆಯಲ್ಲಾಡಿಸಿದಳು.

"ವಿದ್ಯಾಧರ, ಇಂಗ್ಲಿಷು ಸರಕಾರದವರು ಕಪ್ಪು ಬಿಳೀ ಜನರ ನಡುವೆ ಭೇದಮಾಡುವರೆಂದು ನಾವೆಲ್ಲ ಸಿಟ್ಟಿಗೇಳುತ್ತೇವೆ. ಆದರೆ ನಮ್ಮ 'ಬಿಳಿಯಂಗಿ' ಯಜಮಾನರೇನು ಕಡಿಮೆ? ಮೊದಲು ಹೇಗೆ ಕಲಿತವರೆಲ್ಲ ಸಾಹೇಬರಾಗಬೇಕಂತಿದ್ದರೊ ಹಾಗೆ ಈಗ ಎಲ್ಲರೂ 'ಬಿಳಿಯಂಗಿ' ಯವರಾಗಬೇಕೆಂತಿದ್ದಾರೆ. ಪ್ರತಿಯೊಬ್ಬನಿಗೆ ಗೌರವರ್ಣ ಬೇಕು, 'ಬಿಳಿಯಂಗಿ'ಯ ದೊಡ್ಡಸ್ತಿಕೆ ಬೇಕು–"

"ಮನುಷ್ಯ ಸ್ವಭಾವವೇ–"

"ಛೆ ! ಅದಕ್ಕೆ ಮತ್ತೊಂದು ಕಾರಣ ಇದೆ. ಕಪ್ಪು ಮೋರೆಯ ವಿಷ್ಣುವಿಗೆ ಲಕ್ಷ್ಮಿಯು ಮಾಲೆ ಹಾಕಿದ್ದು ಹಿಂದಿನ ಕಾಲದಲ್ಲಿ. ಈಗ ಲಕ್ಷ್ಮಿ ಬರೀ ಬಿಳಿಯಂಗಿಯವರಿಗೆ ಮಾಲೆ ಹಾಕುತ್ತಾಳೆ."

ಬಾಪ್ಪಾ ಅವರ ಈ ಭಾಷಣವು ಇನ್ನೂ ಬೆಳೆಯಬಹುದಿತ್ತು. ಆದರೆ ಗುಡ್ಡದ ಮೇಲೆ ಮೇಯಬಂದ ಗದ್ದೆಯ ದನಗಳು ಮನೆಯ ಕಡೆಗೆ ತಿರುಗಿ ಹೊರಟಿದ್ದವು. ಅವುಗಳಲ್ಲಿ ಒಂದು ಕರೇ ಆಡನ್ನು ವತ್ಸಲೆಯು ಕೈ ಮುಂದೆ ಮಾಡಿ ಕರೆದಳು. ಅದು ಬೆದರದೆ ಅವಳ ಹತ್ತಿರ ಬಂದಿತು. ವತ್ಸಲೆಯು ಅದರ ಮೈಮೇಲೆ ಕೈಯಾಡಿಸಹತ್ತಲು ಅದು ಅವಳ ಕೈಯನ್ನು ನೆಕ್ಕಲಿಕ್ಕೆ ಮೋರೆ ತಿರುವಿತು. ಬಾಪ್ಪಾ ಕೈ ಮುಂದೆ ಮಾಡಲು ಅದು ದಿಟ್ಟತನದಿಂದ ಅವರ



ಕಡೆಗೂ ಹೋಯಿತು. ತಾನೂ ಅದನ್ನು ಕರೆಯಬೇಕೆಂದು ವಿದ್ಯಾಧರನಿಗೆನಿಸಿತು. ಅವನೂ ಕೈ ಮುಂದೆ ಮಾಡಿದ. ಆದರೆ ಆ ಆಡು ಅವನ ಹತ್ತಿರ ಹೋಗದೆ ಬೆದರಿ ಹಿಂದೆ ಸರಿದು ವತ್ಸಲೆಗೆ ಹೊಂದಿಕೊಂಡು ನಿಂತಿತು.

ಬಾಪ್ಪಾ ನಗುನಗುತ್ತ ಅಂದರು– "ನೋಡಿದಿರಾ ವಿದ್ಯಾಧರ, ಈ ಮೂಕಪ್ರಾಣಿ ಕೂಡ ನನ್ನ ಮಾತೇ ನಿಜವೆಂದು ಹೇಳುತ್ತಿದೆ."

"ನಾನೇನೂ ಅದರ ಗುರುತಿನವಲ್ಲವಲ್ಲ?"

"ನನ್ನದಾದರೂ ಎಲ್ಲಿ ಗುರುತಿದೆ? ಕೃಷ್ಣಾ ಅದಕ್ಕೆ ತನ್ನಾಕೆಯೆನಿಸಿದಳು. ನಾನೂ ಹೊರಗಿನವ ಅನಿಸಲಿಲ್ಲ. ನೀವು ಮಾತ್ರ–"

"ಹೀಗೇಕೆ ಆಗಬೇಕು?"

"ನಿಮ್ಮ ಅರಿವೆ ನೋಡಿತದು? ಬಿಳಿಯಂಗಿಯವರು–"

ತಾನು ಬಹಳ ಹೊತ್ತು ಕುಳಿತೆನೆಂಬುದೂ ಕಾಶಿಯು ತನಗೆ ಆಡಿಕೊಳ್ಳದೆ ಇರುವದಿಲ್ಲೆಂಬುದೂ ವತ್ಸಲೆಯ ಲಕ್ಷ್ಯಕ್ಕೆ ಬಂದಿತು. ಅವಳು ತಟ್ಟನೆ ಎದ್ದು ಆ ಭಾರವನ್ನು ಎತ್ತಹತ್ತಿದಳು.

ಬಾಪ್ಪಾ ಅಂದರು : "ನಡೆಯಿರಿ ವಿದ್ಯಾಧರ, ಈಕೆಯ ಸಂಗಡವೇ ಹೋಗೋಣ. ನನಗೂ ಕಾಶಿಯ ಭೆಟ್ಟಿ ಆಗಬೇಕಾಗಿದೆ."

"ನಿಮ್ಮದೆಲ್ಲೀ ಗುರುತು?"

"ಮೂವತ್ತು ವರ್ಷದ ಹಿಂದಿನದು. ಸೆರೆಯ ಸಲುವಾಗಿ ತೆಂಗಿನ ಗಿಡ ಕೊಡಬೇಡಿರೆಂದು ಚಳವಳಿ ಹೂಡಲಿಕ್ಕೆ ನಾನಿಲ್ಲಿ ಬಂದಿದ್ದೆ. ಮೊದ ಮೊದಲು ಯಾರೂ ಒಪ್ಪಲಿಲ್ಲ. ಆಗ ಆ ಕಾಶಿ ಹೇಳಿಕೊಟ್ಟಳು ಗುರು ಮಂತ್ರ. ದೇವಿ ಹೇಳಿದರೆ ಕೇಳತ್ತಾರಂತ. ಆಕೆಯೆ ಮಾಡಿದಳು ಎಲ್ಲ ಪ್ರಯತ್ನ. ದೇವಿ ಆ ವರ್ಷ ಸೆರೆಗಾಗಿ ಗಿಡ ಕೊಡಬಾರದೆಂದು ಹೇಳಿದ್ದಾಳೆ ಎಂದು–"

"ವಾ ! ಮದ್ಯಪಾನ ನಿಷೇಧಕ ಮಂಡಳಿಯ ಅಧ್ಯಕ್ಷಳಾಗುವ ಯೋಗ್ಯತೆ ಇದೆ ಅನ್ನ ಬಾರದೆ ಕಾಶಿಯದೂ !"

"ಸೆರೆ ಅಂದರೆ ಕಾಲಿನಿಂದ ತಲೆತನಕ ಉರಿ ಆಕೆಗೆ. ಆಕೆಯ ಗಂಡ ಮತ್ತು ನಮ್ಮ ದಾದಾಸಾಹೇಬರ ತಂದೆ, ಅಂದರೆ ಸುಲೂನ ಅಜ್ಜ ಇಬ್ಬರೂ ಒಂದೇ ವಯಸ್ಸಿನವರು. ಒಂದೇ ಅಂಗಡಿಯೊಳಗೆ ತೊಡೆಯ ಮೇಲೆ ತೊಡೆ ಹಾಕಿಕೊಂಡು ಕುಳಿತು ಸೆರೆ ಕುಡಿಯುವವರೆನ್ನಿರಿ. ಸೆರೆಯ ಅಮಲಿನಲ್ಲಿ ಅವರಿಬ್ಬರೂ ಸೇರಿ ಒಬ್ಬ ಹೆಣ್ಣುಮಗಳ ಮನೆಗೆ ಉರಿ ಹಚ್ಚಿದರು."

"ಉರಿ ?"

"ಹೌದು. ಆದರೆ ಆ ಉರಿಯೊಳಗಿಂದ ಕಾಶಿಯ ಗಂಡ ಪೂರ್ತಿ ಸುಟ್ಟುಕೊಂಡೇ ಹೊರಬಿದ್ದ. ಎಂಟು ಹತ್ತು ವರ್ಷ ಜೇಲಿನಲ್ಲಿ ಕಳೆಯಬೇಕಾಯಿತು. ಹೊರಗೆ ಬಂದನಂತರ

ಯಾರೂ ಬಾಗಿಲೆದುರು ನಿಲ್ಲಗೊಡಲಿಲ್ಲ. ಮುಗಿಯಿತು. ಕಳವು ಮಾಡಹತ್ತಿದ. ಜೇಲಿಗೆ ಸರದಿ ಹಾಕುತ್ತಲೇ ಸತ್ತುಹೋದ. ಕಾಶಿ ಬೆಳಗಾಂವಿಗೆ ಹೋಗಿ ಇಲ್ಲಿಯವರದೇ ಯಾರದೋ ಒಂದು ಚಹದ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿರಹತ್ತಿದಳು–"

"ದಾದಾಸಾಹೇಬರ ತಂದೆಗೇನು ಶಿಕ್ಷೆ ಆಯಿತು?"

"ಅವರಿಗೆಲ್ಲೀ ಶಿಕ್ಷೆ ? ಬಿಳಿಯಂಗಿಯವರು ! ಸಿರಿವಂತರು ! ಬೆಂಕಿ ಹತ್ತಿದಾಗ ಅವರು ಮಾಲವಣದಲ್ಲಿದ್ದರಂತೆ ! ದೊಡ್ಡ ದೊಡ್ಡವರ ಸಾಕ್ಷಿ ಆದವು."

ಮುಂದೆ ಬಾಪ್ಪಾ, ನಡುವೆ ವಿದ್ಯಾಧರ, ಹಿಂದೆ ವತ್ಸಲೆ ಹೀಗೆ ಸಾಲಾಗಿ ಗುಡ್ಡವನ್ನಿಳಿಯಹತ್ತಿದರು. ಮೇಲೆ ಚೆನ್ನಾಗಿ ಬೆಳಕು ಇದ್ದುದರಿಂದಲೇ ಇವರೆಲ್ಲರೂ ಇಷ್ಟು ಹೊತ್ತು ಅಲ್ಲಿ ಕುಳಿತಿದ್ದರು. ಆದರೆ ಕೆಳಕೆಳಗೆ ಬಂದಂತೆ ಅವರಿಗೆ ದಾರಿ ಕೂಡ ಕಾಣದಂತಾಯಿತು. ವಿದ್ಯಾಧರ–ವತ್ಸಲೆಯರಿಗೆ ಅದೇ ಮಾತಾಡಿದ್ದು ನೆನಪಾಯಿತು. ಮೇಲೆ ಬೆಳಕು ಕೆಳಗೆ ಕತ್ತಲೆ ! ಬಾಪ್ಪಾ ವರ್ಣಿಸಿದ ಸಮಾಜಸ್ಥಿತಿಯ ಚಿತ್ರವಿದೇ ಅಲ್ಲವೆ?

ವಿದ್ಯಾಧರನು ಅಂದುಕೊಂಡ–ಈ ಕತ್ತಲೆಯಲ್ಲಿ ತಾನು ಎಡವಿಬಿದ್ದು ತನಗೆ ಏನಾದರೂ ಹಳಹುಪ್ಪಟಿ ಕಚ್ಚಿದರೆ, ಗುಡ್ಡದ ಮೇಲೆ ಮುಳುಗುವ ಸೂರ್ಯನನ್ನೂ ಮೂಡುವ ಚಂದ್ರನನ್ನೂ ನೋಡುತ್ತ ಕುಳಿತವರಿಗೆ ತನ್ನ ಸ್ಥಿತಿಯ ಅರಿವಾಗುವದೆಂತು ? ವತ್ಸಲೆಗೆನಿಸಿತು–ಮನುಷ್ಯರು ಯಾವಾಗಲೂ ಸೃಷ್ಟಿಗೆ ವಿರುದ್ಧವಾಗಿಯೇ ಹೋಗುವವರೆಂದು. ಬೆಳ್ಳನ್ನ ಹಗಲು ಕೆಲಸಮಾಡುತ್ತದೆ. ಕಪ್ಪಾದ ರಾತ್ರಿ ವಿಶ್ರಾಂತಿ ಪಡೆಯುತ್ತದೆ. ಆದರೆ ಸಮಾಜದಲ್ಲಿಯ ಬಿಳಿಯಂಗಿಯವರು? ಇಳಿಯುತ್ತ ಇಳಿಯುತ್ತ ಆ ಕಟ್ಟಿಗೆಯ ಹೊರೆ ಅವಳಿಗೆ ಭಾರವೆನಿಸ ಹತ್ತಿತು. ಅವಳು ತನ್ನಷ್ಟಕ್ಕೆ ನಕ್ಕಳು. ಅವಳ ಕಿವಿಯಲ್ಲಿ ಯಾರೊ ಹೇಳಿದರೇನೋ–ಇನ್ನೂ ನಿನ್ನ ರಕ್ತದಲ್ಲಿ ಬಿಳಿಯಂಗಿಯವರ ಗುಣವಿದೆ. ಈ ಹೊರೆ ನಿನಗೆ ಭಾರವೆನಿಸಿತು. ಆದರೆ ನಾಳಿನಿಂದ ಇಲ್ಲಿಯ ನೂರಾರು ಜನ ಹೆಂಗಸರಿಗೆ ತಮ್ಮ ಜೀವಗಳು ಇದಕ್ಕೂ ಭಾರವೆನಿಸುವವಲ್ಲ !– ಅದಕ್ಕೇನುಪಾಯ?

ವತ್ಸಲೆಯು ಹೊರೆಯನ್ನು ಅಂಗಳದಲ್ಲಿಯೇ ಒಗೆದಳು. ಕಾಶಿಯು ಒಳಗೆ ಒಲೆಯ ಹತ್ತಿರ ಇದ್ದಳು. ಬಾಪ್ಪಾ ನೆಟ್ಟಗೆ ಅಲ್ಲಿಗೇ ಹೋದರು. ವಿದ್ಯಾಧರನು ಅಂಗಳದಲ್ಲಿ ನಿಂತು ಮೇಲೆ ಆಕಾಶದ ಕಡೆಗೆ ನೋಡುತ್ತಿದ್ದ. ಮನೆಯ ಸುತ್ತಲಿನ ತೆಂಗಿನಮರಗಳಿಂದ ಮರೆಯಾದ ಆಕಾಶವು ಗಿಡಗಳೊಳಗೆ ಕಾಣುವ ಸಣ್ಣ ಸರೋವರದಂತೆ ಭಾಸವಾಗುತ್ತಿತ್ತು. ಅದರಲ್ಲಿ ಅದೆ ಮಿನುಗಹತ್ತಿದ ಚಿಕ್ಕೆಗಳು ಅರಳತೊಡಗಿದ ಕಮಲಗಳಂತಿದ್ದವು. ಗಾಳಿಯು ಈ ಸರೋವರದ ಮೇಲಿಂದ ಬಂದಿರುವದೇನೋ ಎಂಬಂತೆ ತಂಪಾಗಿತ್ತು. ಪ್ರಸನ್ನ ಮನಸ್ಸಿನಿಂದ ವಿದ್ಯಾಧರನು ತನ್ನ ದೃಷ್ಟಿಯನ್ನು ಕೆಳಗೆ ತಿರುಗಿಸಿದ. ಅಂಗಳದಲ್ಲಿ ಒಂದು ಬದಿಗೆ ನಿಂತಿದ್ದ ಕೃಷ್ಣೆಯನ್ನು ನೋಡಿದ. ಅವಳ ಶ್ಯಾಮಲವಾದ ಅಂಗಕಾಂತಿ, ವಲ್ಕಲದಂತೆ ತೋರುವ ಸೀರೆ, ಕಮಲಗಳಂತೆ ಶೋಭಿಸುವ ಕಣ್ಣುಗಳು–ಏನೋ ಒಂದು ತರದ ಶೀತಲವಾದ ತೆರೆಗಳು ವಿದ್ಯಾಧರನ ಮನವನ್ನು ಸ್ಪರ್ಶಿಸಿ ಮಾಯವಾದವು. ಟೊಂಕದ ಮೇಲಿನ ಮಣ್ಣು ಕೊಡವನ್ನು



ಹಿಡಿದುಕೊಂಡು ಅವಳು ಹಾಗೇ ನಿಂತಿದ್ದಳು.

"ಏನು ಮಾಡುತ್ತೀ ಕೃಷ್ಣಾ?"

"ಮಲ್ಲಿಗೆ ಕಂಟಿಗೆ ನೀರು ಹಾಕತೇನೆ."

"ಈ ದಿವಸದೊಳಗೆ ಮಲ್ಲಿಗೆ ಹೂ ಬಿಡುವದೇನು?"

"ಬಿಡಿಸಿದರೆ ಬಿಡತದೆ."

"ಅಂದರೆ ! ಮಲ್ಲಿಗೆ ಹೂ ಬಿಡುವದು ಮಳೆಗಾಲದಲ್ಲಿಯಲ್ಲವೇ?"

"ಬೇಸಿಗೆಯೊಳಗೆ ಅದಕ್ಕೂ ಚೆನ್ನಾಗಿ ಹೂ ಬಿಡುತ್ತದೆ. ಆದರೆ ಒಂದು ಕೆಲಸ ಮಾತ್ರ ಮಾಡಬೇಕಾಗುತದೆ."

"ಏನದು ?"

"ಹುರಪಳಿಸುವದು."

"ಅಂದರೆ? ಬಳ್ಳಿ ಸುಟ್ಟುಹಾಕಿಬಿಡಬೇಕೆ?"

ಕೃಷ್ಣೆಯು ನಗುತ್ತ ಹೇಳಿದಳು– "ಹೌದು, ಮೇಲೆ ಮೇಲೆ ಸುಡಬೇಕು. ಕೆಳಗಡೆ ಬೇರಿಗಾಗಿ ತುಂಬ ನೀರು ಹಾಕಬೇಕು."

"ಅಂದರೆ ಬೇಸಿಗೆಯೊಳಗೂ ಹೂ ಬಿಡತದೆಯೆ?"

"ಹೌದು ! ಮಳೆಗಾಲದಕಿಂತ ಚೆನ್ನಾಗಿ !"

"ನನಗಿದು ಗೊತ್ತಿದ್ದಿಲ್ಲ!"

"ನನಗಾದರೂ ಎಲ್ಲಿ ಗೊತ್ತಿತ್ತು ? ಇಲ್ಲಿ ಬಂದಮೇಲೇ ಗೊತ್ತಾಯಿತು."

"ಕಾಮಾಪೂರ ಅಂದರೊಂದು ವ್ಯವಹಾರದ ಕಾಲೇಜೇ ಅನ್ನಬಾರದೆ!"

ವತ್ಸಲೆ ಸುಮ್ಮನೆ ನಕ್ಕಳು. ಬಳ್ಳಿಯ ಕಡೆಗೆ ನೋಡುತ್ತ ಅವಳು ಹೇಳಿದಳು– "ಇನ್ನೂ ಏನು ಹೂ ಬಿಟ್ಟಿಲ್ಲ ಇದು. ಎರಡೇ ಎರಡು ಮೊಗ್ಗು ಕಾಣುತ್ತಿವೆ. ಆದರೂ ಎಷ್ಟು ಅವುಗಳ ಸುವಾಸನೆ !"

ಅವಳು ಟೊಂಕದ ಮೇಲಿನ ಕೊಡವನ್ನು ಕೆಳಗಿಟ್ಟಳು. ಮೆಲ್ಲಗೆ ಆ ಎರಡು ಮೊಗ್ಗುಗಳನ್ನು ತೆಗದು ವಿದ್ಯಾಧರನಿಗೆ ಕೊಡಲಿಕ್ಕೆ ಕೈ ಮುಂದೆ ಮಾಡಿದಳು. ಅವನ್ನು ತೆಗೆದುಕೊಂಡು ಮೂಸುತ್ತ ಮೂಸುತ್ತ ಅವನಂದ– "ಏನು ಮಧುರ ವಾಸನೆ ! ಇನ್ನೂ ಪೂರ್ತಿ ಅರಳಿಲ್ಲ ಕೂಡ, ಇನ್ನು ಅರಳಿದ ಮೇಲೆ !"

ಅವನು ಸ್ನಿಗ್ಧ ದೃಷ್ಟಿಯಿಂದ ವತ್ಸಲೆಯನ್ನು ನೋಡಿದ. ಆತ ಮಾತಾಡುತ್ತಿದ್ದುದು ಬಳ್ಳಿಯ ವಿಷಯಕ್ಕೊ ತನ್ನ ವಿಷಯಕ್ಕೊ ಎಂಬುದೊಂದು ಅವಳಿಗೆ ಒಗಟವೇ ಆಯಿತು. ಆದರೆ ಅದರ ವಿಚಾರವನ್ನು ಮಾಡದೆ ಅವಳು ಒಮ್ಮೆಲೆ ಅಂದಳು–

"ನಾನೊಂದು ಕೇಳಿಕೊಳ್ಳಬೇಕಾಗಿದೆ ನಿಮ್ಮ ಹತ್ತಿರ!"

"ಏನದು?"

"ಆ ಫೋಟೋ ತೆಗೆದಿರಲ್ಲ ಈಹೊತ್ತು ನನ್ನದು."

"ಅದರ ಪ್ರತಿಗಳು ಬೇಕೇ ?"

"ಉಂ.....ಹುಂ. ಪ್ರತಿ ತೆಗೆಯಲಿಕ್ಕೆ ಕೊಡಬೇಡಿರಿ ಅವನ್ನು!"

"ಯಾಕೆ ?"

'ಯಾಕೆ?' ಇದೊಂದು ಶಬ್ದದಲ್ಲಿ ಜಗತ್ತಿನ ದುಃಖಗಳೆಲ್ಲವೂ ಸಂಗ್ರಹವಾಗಿವೆಯೇನೋ ಎಂದು ವತ್ಸಲೆಗೆನಿಸಿತು. ಆದರೆ ಉತ್ತರ ಕೊಡಲೇಬೇಕೆಂದು ಅವಳೆಂದಳು– "ಅದರಿಂದ ಮತ್ತೆ ನನ್ನ ಪತ್ತೆಯಾಗಬಹುದು."

"ಯಾರಿಗೆ?"

"ಮನೆಯ ಯಜಮಾನರಿಗೆ?"

"ಸೆರೆಯ ಚಟ ಇದೆಯೇನು ಅವನಿಗೆ?"

"ಹೌದು. ಆ ಸೆರೆಗೆ ಕಲೆ ಎನ್ನುತ್ತಾರೆ" ಎಂಬ ಉತ್ತರವು ವತ್ಸಲೆಯ ತುದಿನಾಲಗೆಗೆ ಬಂದಿತ್ತು. ಆದರೆ ಅವಳು ಅದನ್ನು ಹಾಗೆಯೇ ನುಂಗಿ ಕಷ್ಟದಿಂದೆಂದಳು– "ನಾನವರ ಮನಸ್ಸಿಗೆ ಸರಿಬರುವುದಿಲ್ಲ."

"ನೀನೇ ! ನಿನ್ನಂತಹ ಹುಡುಗಿ ಬಿಳಿಯಂಗಿಯವರಲ್ಲಿ ಕೂಡ ಕೂಡಿ ಹೋಗಬಹುದು."

ಅಂದು ರಾತ್ರಿಯಲ್ಲಿ ರಮಾಕಾಂತನಂದದ್ದು ವತ್ಸಲೆಗೆ ನೆನಪಾಯಿತು. ರಮಾಕಾಂತ ವಿದ್ಯಾಧರರ ದೃಷ್ಟಿಯಲ್ಲಿ ಎಷ್ಟು ಅಂತರ ! ತನ್ನ ಮದುವೆ ರಮಾಕಾಂತನೊಡನೆ ಆಗುವುದರ ಬದಲು ವಿದ್ಯಾಧರನೊಡನೆ ಆಗಿದ್ದರೆ–ಆಗಿದ್ದರೆ ಇಂದು ಗೋಡಂಬಿಯ ಕಾರಖಾನೆಯಲ್ಲಿ ಕೂಲಿ ಮಾಡಲಿಕ್ಕೇಕೆ ಬರುತ್ತಿದ್ದೆ ? ಯಂತ್ರ ಶೋಧಿಸುವ ವಿದ್ಯಾಧರನ ಪತ್ನಿಯೆಂದು ಬರುತ್ತಿದ್ದೆ. ಈ ಸುಂದರವಾದ ಗುಡ್ಡದ ಮೇಲೆ ಅವನೊಡನೆ ಅಡ್ಡಾಡಲಿಕ್ಕೆ ಹೋಗುತ್ತಿದ್ದೆ. ಮಲ್ಲಿಗೆಯ ಮೊಗ್ಗೆಗಳನ್ನು ಹರಿದು ಅವನ ಕೈಗೆ ಕೊಟ್ಟರೆ ಅವನು ಅವನ್ನು ತಿರುಗಿ ತನ್ನ ತಲೆಯಲ್ಲಿ ಮುಡಿಸುತ್ತಿದ್ದ–ವತ್ಸಲೆಯ ಒಳಮನಸ್ಸಿನ ಬಯಕೆಗಳೆಲ್ಲವೂ ಜಾಗ್ರತವಾದವು–ಮಳೆಗಾಲ ಬಂದ ಕೂಡಲೆ ಗಿಡಗಳಲ್ಲಿ ಮಿಂಚು ಹುಳುಗಳು ಹೊಳೆಯ ಹತ್ತುವಂತೆ. ಕಳೆದ ಒಂದು ತಿಂಗಳಲ್ಲಿಯ ವಿದ್ಯಾಧರನ ಪ್ರೇಮದ ನಡತೆಯಿಂದ ಆರ್ದ್ರವಾದ ಅವಳ ಮನಸ್ಸಿನಲ್ಲಿ ಹಾಗೆಯೆ ಎಲ್ಲ ಆಶೆಗಳೂ ಕುಣಿಯತೊಡಗಿದವು. ಆದರೆ ಆ ಆಶೆಗಳೆಲ್ಲವನ್ನು ತಡೆಯುವ ವಿಚಾರವೊಂದು ಕೂಡಲೆ ಹೊಳೆಯಿತು. ತಾನು ಗುಡ್ಡದ ಮೇಲೆ ವಿದ್ಯಾಧರನೊಡನೆ ತಿರುಗಾಡಲಿಕ್ಕೆ ಹೋಗಿದ್ದರೆ– ಆ ಕುರಿಮರಿಗಳು ತನ್ನ ಹತ್ತಿರ ಬರುತ್ತಿದ್ದವೇ?

ಅವಳ ಮನಸಿನಲ್ಲಿಯ ವಿಚಾರವು ಅವಳಿಗೆ ತಿಳಿಯದೆಯೆ ಮೋರೆಯ ಮೇಲೆ ಮೂಡಿತು. ವಿದ್ಯಾಧರನು ಅವಳ ಸಮೀಪಕ್ಕೆ ಬಂದು ನುಡಿದ– "ಕೃಷ್ಣಾ ನಾನೊಂದು ಮಾತು ಕೇಳಲೆ?"

ವತ್ಸಲೆಯ ಎದೆ ಬಡಿದುಕೊಳ್ಳಹತ್ತಿತು. "ನಿನಗೆ ಸಿಟ್ಟು ಬರಲಿಕ್ಕಿಲ್ಲವಷ್ಟೆ ?" ಎಂದು ತಡವರಿಸುತ್ತ ವಿದ್ಯಾಧರನು ಕೇಳಿದ.



ಪ್ರಣಯದ ಉತ್ಕಂಠೆಯಿಂದಲೂ, ಪಾಪದ ಭೀತಿಯಿಂದಲೂ, ಕರ್ತವ್ಯದ ಜಾಗೃತಿಯಿಂದಲೂ ಅವಳ ಹೃದಯವು ಒಮ್ಮೆಲೇ ಮೂರು ಭಾಗವಾಯಿತು. ಅವಳೇನೋ ಮಾತಾಡಬೇಕೆನ್ನುವಷ್ಟರಲ್ಲಿ ಕಾಶಿಯು ಕೆಮ್ಮಿದ್ದು ಅವಳಿಗೆ ಕೇಳಬಂತು. ಇಬ್ಬರೂ ಬೆಚ್ಚಿ ಒಮ್ಮೆಲೆ ದೂರ ಸರಿದರು. ಕಾಶಿಯೂ ಅವಳ ಹಿಂದಿನಿಂದ ಬಾಪ್ಪಾ ಅವರೂ ಅಂಗಳದಲ್ಲಿ ಬಂದರು.

"ಒಳ್ಳೇದು ಕೃಷ್ಣಾ" ಬಾಪ್ಪಾ ಅಂದರು, ವಿದ್ಯಾಧರನು ಏನೂ ಮಾತಾಡದೆ ಬಾಪ್ಪಾ ಅವರ ಹಿಂದೆ ಹೊರಟ.

ಅವರಿಬ್ಬರೂ ಒಂದು ಕೂಗಳತೆಯಷ್ಟು ಹೋದದ್ದನ್ನು ನೋಡಿ ಕಾಶಿಯೆಂದಳು–

"ಕೃಷ್ಣಾ, ಮನುಸ್ಯಾರಿಗೆ ಮನದ ನಾಚಿಗೆ ಇಲ್ಲದಿದ್ದರ ಜನದ ನಾಚಿಕಿಅರ ಇರಬೇಕು. ಬಾಪ್ಪಾ ಏನಂದಾರು? ನಾ ಹುಟ್ಟಿ ಅರವತ್ತು ವರ್ಸಾದವು, ಆದರ ಇಂತಾ ಹೇಸಿ ಕೆಲಸ ! ಛೀ ಛೀ ! ನಾಳಿನಿಂದ ಕಾರಕಾನಂತೂ ಬಂದ ಆತು ! ನಿನ್ನ ಹೊಟ್ಟೆ ತುಂಬುವ ಬಗಿ ಹೆಂಗ ?"

ಕಳೆದ ತಿಂಗಳಲ್ಲಿ ಕಾಶಿಯ ಲೋಭಿ ಸ್ವಭಾವವು ವತ್ಸಲೆಗೆ ಪೂರ್ತಿ ಪರಿಚಿತವಾಗಿತ್ತು. ಸೋನ್ಯಾನಕಿಂತಲೂ ಅವನ ತಾಯಿಯ ಕಡೆಯಿಂದ ಬರುವ ದುಡ್ಡಿನದೇ ಅವಳಿಗೆ ಹೆಚ್ಚು ಮಹತ್ವವೆನಿಸುತ್ತದೆಂಬುದೂ ಅವಳಿಗೆ ತಿಳಿದಿತ್ತು. ಮೊದಲನೇ ದಿವಸ ಕೆರೆಯ ದಂಡೆಯ ಮೇಲೆ ಅವಳು ತನ್ನೊಡನೆ ಪ್ರೀತಿಯಿಂದ ವರ್ತಿಸಿದಳೇನೋ ನಿಜ. ಆದರೆ ಪುಕ್ಕಟೆಯಾಗಿ ಕೈಗೆ ಸಿಗುವ ಒಂದು ಆಳನ್ನು ಕಳೆದುಕೊಳ್ಳುವಷ್ಟು ಅವಳು ಹುಚ್ಚಿಯಾಗಿರಲಿಲ್ಲವೆಂಬುದೇ ಅದಕ್ಕೆ ಕಾರಣವಾಗಿತ್ತು. ನಾಳಿನಿಂದ ತಾನು ನಿರುದ್ಯೋಗಿಯಾಗುವಳೆಂಬ ಕಾರಣದಿಂದಲೇ ಕಾಶಿಯು ತನ್ನ ಮೇಲೆ ಮತ್ತಿಷ್ಟು ಸಿಟ್ಟಿಗೆದ್ದಳೆಂಬುದು ತಟ್ಟನೆ ವತ್ಸಲೆಯ ಲಕ್ಷ್ಯಕ್ಕೆ ಬಂದಿತು.

ಕಾಶಿ ಮತ್ತೆ ಪ್ರಾರಂಭ ಮಾಡಿದಳು : "ಬಾಜಾರದಾಗ ಹೂ ಒಯ್ದು ಮಾರೇನೆಂದು ನೀನಂದೀ. ಆದರ ಹೂವಿಗೆ, ಟೊಂಕ ಮುರಿದು ನೀರು ಹೊತ್ತಹಾಕುವ ತ್ರಾಣ ಎಲ್ಲೈತಿ ನಿನಗ? ಆ ದಿವಸ ತೆಂಗಿನ ಕಾಯ ಬುಟ್ಟಿ ತಲೀಮ್ಯಾಗ ಹೊರಿಸಿದರ ಮೂರು ದಿವಸ ಗೋಣು ನೋಯತದಂತ ಅಳತಿದ್ದಿ. ಇಂತಾ ಮ್ಯಾಣದ ಹೆಂಗಸು ಬಿಳಿಯಂಗಿಯವರಿಗೆ ದಕ್ಕೀತು, ಆದರ ನಮ್ಮ ಜಾತ್ಯಾಗ–"

ಕಾಶಿಯ ಸ್ವರವು ಒಮ್ಮೆಲೆ ಮೃದುವಾಯಿತು. ಮಳೆ ಇಳಿದ ಕೂಡಲೆ ಹವೆಯಲ್ಲಿ ಒಮ್ಮೆಲೆ ತಂಪು ಹುಟ್ಟುವಂತೆ ತನ್ನ ಕಡೆ ಏನಾದರೂ ಕಾಶಿಯ ಕೆಲಸವಿದೆ ಎಂಬುದು ಅವಳ ಬದಲಾದ ಸ್ವರದಿಂದ ವತ್ಸಲೆ ಊಹಿಸಿದಳು.

ಕಾಶಿಯೆಂದಳು– "ಇದೇ ಈಗ ಹೇಳಿದ್ದು ನಾ ಸುಮ್ಮನ ಹೇಳಲಿಲ್ಲ. ಈ ಬಿಳಿಯಂಗಿಯವರ ಕೂಡ ಜ್ವಾಕಿಯಿಂದಿರಬೇಕು ತಂಗೀ. ಇಲ್ಲದಿದ್ದರೆ ಈ ಸೋನ್ಯಾನ ಹಂಗ ಏನಾದರೊಂದು–"

ಕ್ಷಣಹೊತ್ತು ನಿಂತು ಅವಳು ಮತ್ತೆ ನುಡಿದಳು– "ಹಾಳಾಗಿ ಹೋಗ್ಲೊಲ್ಲದ್ಯಾಕ ಅದೆಲ್ಲ ! ನಾಳೆ ನಾ ಬೆಳಗಾಂವಿಗೆ ಹೋಗತೀನಿ. ಮನಿ ನೋಡಿಕೊಂಡಿರತೀ ಇಲ್ಲೊ ?"

"ಸೋನ್ಯಾ ನಾನೂ ಇರತೀವಲ್ಲ."

"ಸೋನ್ಯಾನ್ನs ನಾ ಕರಕೊಂಡು ಹೋಗೂಆಕಿ, ಅವರವ್ವ ಬಂದಾಳ ಅಲ್ಲಿ. ಮಗನ್ನ ನೋಡಬೇಕಂತಾಳ."

"ನಾನೊಬ್ಬಳs ಇರತೇನಿ ಹಂಗಾದರ."

"ಮತ್ತಿದು ನೋಡು ಕೃಷ್ಣಾ! ಸೋನ್ಯಾ ತನಗ ಅಬಚಿ ಒಬ್ಬಾಕಿ ಇದ್ದಾಳಂತ ತಮ್ಮವ್ವಗ ಹೇಳತಾನ. ಆಕಿ ಭಾಳ ಶ್ರೀಮಂತ ಇದ್ದಾಳ. ನಾ ಸುದ್ದಾ ಹೇಳತೀನಿ ಹುಡುಗನ ಮ್ಯಾಗ ಅಬಚೀ ಪಿರುತಿ ಬಹಳ ಅದ, ಆಕಿಗೊಂದು ಸೀರೀ ಕೊಡಂತ" –ಕಾಶಿಯು ಸೀರೆಯ ಆಸೆಯನ್ನು ಮುಂದೆ ಮಾಡಿದ್ದನ್ನು ನೋಡಿ ವತ್ಸಲೆಗೆ ನಗು ಬಂದಿತು. ಕಾಶಿಗೆ ಅದು ಹೇಗೋ ಎನಿಸಿತು. ಅವಳಂದಳು– "ನಗತೀ ಏನ ತಂಗೀ, ಸಂಬಾಳಿಸಿಗೊಂಡು ಇರು. ಒದರಿ ಕರದಿ ಅಂದರ ಆವಾರದಾಗಿನ ಮಂದಿ ಬಂದs ಬರತಾರ. ಆದರ ಕಂಡ ಹೊತ್ತಿನಾಗ ಕಂಡವರ ಕೂಡ ಮಾತಾಡತ ಕೂಡಬ್ಯಾಡ. ನಿನಗ ಗೊತ್ತಿಲ್ಲs. ಈ ದಾದಾ ಕಾರಖಾನದಾರ, ದರ ದಿವಸ ದೇವಿ ಮುಂದ ನೆಲಕ ಮೂಗ ತಿಕ್ಕತಾನಲ್ಲಾ, ಅಂದ್ರೂ–"

ಕಾಶಿಯು ಗಟ್ಟಿಯಾಗಿ ನಕ್ಕಳು ಕಾಶಿಯದು ಅದೊಂದು ಲಹರಿ. 'ಅಂದ್ರೂ' ಅನ್ನುವದು ಮತ್ತು ಗಟ್ಟಿಯಾಗಿ ನಗುವದು! ಇದು ಅವಳ ಪದ್ಧತಿಯೇ ಆಗಿದ್ದು ವತ್ಸಲೆಗೆ ಗೊತ್ತಿತ್ತು. ವಿಶೇಷವಾದ ಮಾತುಕತೆ ಇಲ್ಲದೆ ಊಟವಾಯಿತು. ಕಾಶಿಯು ಬೆಳಗಾಂವಿಗೆ ಹೋಗಲಿಕ್ಕೆ ತನ್ನ ಗಂಟು ಕಟ್ಟಹತ್ತಿದಳು. ಸೋನ್ಯಾ ಹಾಸಿಗೆಯ ಮೇಲೆ ಕುಳಿತು ತನ್ನ ಆತುರದಲ್ಲಿ ಚಡಪಡಿಸುತ್ತಿದ್ದ.

"ಅಬಚೀ, ನಿನ್ನ ಎಲ್ಲಾ ಕತೀ ಅವ್ವಗ ಹೇಳತೀನಿ."

"ಯಾವೋ ಅವು?"

"ರಾಮನದು, ಕೃಷ್ಣನದು, ಹನುಮನದು–"

"ಇಷ್ಟೇ?"

"ಮತ್ತ ಧ್ರುವಂದು. ಆದರ, ಅಬಚೀ, ಧ್ರುವ ಒಬ್ಬ ಇದ್ದೋ ಇಬ್ಬರು ಇದ್ದರೋ?"

ಅಜ್ಞಾನ–ಜ್ಞಾನಗಳು, ಒಂದಕ್ಕೊಂದು ಇಷ್ಟು ಸಮೀಪದಲ್ಲಿ ಹೇಗೆ ಬರುವವೆಂಬುದು ವತ್ಸಲೆಗೆ ಆಶ್ಚರ್ಯವೆನಿಸಿತು. ಅವಳು ನಕ್ಕು ಹೇಳಿದಳು–

"ಹುಚ್ಚಾ, ಧ್ರುವ ಒಬ್ಬನೇ ಇದ್ದ."

"ಯಾವ ಅವ?"

"ಅಪ್ಪನ ತೊಡೆಯ ಮೇಲಿಂದ ಮಲತಾಯಿ ಅವನನ್ನು ನೂಕಿದಳು."

"ಅಲ್ಲಿಂದ ಅವ ಅಡವಿಗೆ ಹೋದ. ಅಲ್ಲಿ ಅವಗ ದೇವರು ಭೆಟ್ಟಿಯಾದರು. ಅವನs ಹೌದಲ್ಲೋ?"

"ಹೌದು, ಅವ ಒಬ್ಬನೇ ಧ್ರುವ."

"ಮತ್ತ ಅವನ ತಮ್ಮ?"

"ಯಾರವ?"



"ಅವನ ಮಲತಾಯಿ ಮಗ! ರಾಜನ ತೊಡೀಮ್ಯಾಲೆ ಕೂತವ."

"ಅವ ಧ್ರುವ ಅಲ್ಲ."

"ಯಾಕ? ಅವ ಧ್ರುವನ ತಮ್ಮನೇ ಅಲ್ಲs ?"

"ಹೌದು. ಆದರ ಅವನ ಹೆಸರು ಬ್ಯಾರೆ ಅದ."

"ಇನ್ನ ತಪ್ಪೂದಿಲ್ಲ. ಅವ್ವನ ಮುಂದ ಹೇಳೂಮುಂದ. ಧ್ರುವ ಒಬ್ಬನೇ ಅಲ್ಲs."

ಸೋನ್ಯಾನು ಬಾಲಭಾವದಿಂದ ನುಡಿದ ಈ ಶಬ್ದಗಳು ಮನುಷ್ಯ ಜೀವನವನ್ನು ನಿರೀಕ್ಷಿಸಿ ಮುಪ್ಪಾದ ಕಾಲಪುರುಷನೇ ಉಚ್ಚರಿಸಿದಂತೆ ವತ್ಸಲೆಗೆ ಭಾಸವಾಯಿತು.

ಆಕಳಿಸುತ್ತ ಸೋನ್ಯಾ ಅಂದ :

"ಧ್ರುವ ಒಬ್ಬನೇ. ಹೌದಲ್ಲೋ ಅಬಚೀ?"

ಧ್ರುವ ಒಂದೇ ? ಛೇ ! ಎರಡು ! ಧ್ರುವ ಒಂದೇ ಆದರೆ ವಿದ್ಯಾಧರನ ಬಗ್ಗೆ ತನ್ನಲ್ಲಿ ಕ್ಷಣಹೊತ್ತಿನಮಟ್ಟಿಗಾದರೂ ಉಂಟಾದ ಕಲ್ಪನೆಗೇನೆನಬೇಕು ? ಅದೇ ಧ್ರುವವೇ?

ಛೇ ! ಅದಕ್ಕೆ ಧ್ರುವವೆಂದರೆ ಕಳೆದ ಒಂದೂವರೆ ತಿಂಗಳಲ್ಲಿ ಕೂಲಿಕಾರರಲ್ಲಿದ್ದು ತಾನು ದೊರಕಿಸಿದ ಅನುಭವ ಅದಕ್ಕೇನನ್ನಬೇಕು?

ಧ್ರುವ ಒಂದಲ್ಲ. ಎರಡು.

ರಮಾಕಾಂತ ಮತ್ತು ಬಾಪ್ಪಾ ಅವರು !

ವಿದ್ಯಾಧರ ಮತ್ತು ದಾದಾ !

ತಾನು ಮತ್ತು–ಯಾರು ? ಸುಲೋಚನೆಯೋ ಸುರಂಗೆಯೋ ?

ಕಲೆ ಮತ್ತು ಜೀವನ, ಬಿಳಿಯಂಗಿಯವರು ಮತ್ತು ಕೂಲಿಕಾರರು, ಭೋಗ ಮತ್ತು ತ್ಯಾಗ. ವತ್ಸಲೆಗೆ ಎಲ್ಲೆಲ್ಲಿಯೂ ಧ್ರುವಗಳು ಜೋಡು ಜೋಡಾಗಿಯೇ ಕಂಡವು. ಧ್ರುವಗಳು ಎರಡೆಂಬುದೇ ನಿಜ ! ಆದರೆ ಅವುಗಳ ನಡುವಿನ ಭಯಂಕರ ಅಂತರವೆಷ್ಟು ! ಈ ಅಂತರದಿಂದಲೇ ಜಗತ್ತಿನಲ್ಲಿಯ ಎಲ್ಲ ದುಃಖಗಳು ಉದ್ಭವಿಸಿವೆ.

ಈ ಅಂತರವು ಕಡಿಮೆ ಹೇಗಾಗಬೇಕು ? ಎರಡು ಧ್ರುವಗಳು ಎಂದಾದರೂ ಒಂದಾಗುವವೇ?

ಈ ಕೊನೆಯ ವಿಚಾರದಿಂದ ವತ್ಸಲೆಗೆ ರಮಾಕಾಂತನ ಆ ಹೊತ್ತಗೆಯ ನೆನಪಾಯಿತು. ಎರಡನೇ ಧ್ರುವದ ಕಡೆಗೆ ಬರುವಾಗ ತನ್ನದೆಂಬ ಒಂದು ಒಡವೆಯನ್ನೂ–ಒಂದು ಹೊಸ ಸೀರೆಯನ್ನೂ ಕೂಡ ತರಲಿಲ್ಲ. ಆದರೆ ಆ ಹೊತ್ತಗೆ–ಅದನ್ನೇಕೆ ಇಂದಿನವರೆಗೆ ಕಾಯ್ದು ಇಟ್ಟಿರಬೇಕು? ಎರಡು ಧ್ರುವಗಳ ನಡುವೆ ತನ್ನ ಜೀವನ ಎಳೆದಾಟವಾಗಲಿಕ್ಕೆ ಕಾರಣವೆಂದರೆ ಆ ಹೊತ್ತಗೆಯೇ. ಅದನ್ನೇ ಸುಟ್ಟುಹಾಕಿದರೆ?–

ಅಲ್ಲಿಂದ ಅವಳು ಅರ್ಧ ಎದ್ದಳು ಕೂಡ. ಆದರೆ ಮೊದಲನೆಯ ಮಾತೆಂದರೆ ಈ ಹೊತ್ತಿನಲ್ಲಿ ಏನಾದರೂ ಸುಟ್ಟಿದ್ದರೆ ಕಾಶಿಗೆ ಸಂಶಯ ಬರುತ್ತಿತ್ತು. ಮತ್ತೊಂದೆಂದರೆ–ಅವಳು ಅಂದುಕೊಂಡಳು, ಆ ಹೊತ್ತಗೆ ಎಂದರೆ ರಮಾಕಾಂತನ ಕಲೆಯ ಮೇಲೆ ಪ್ರಕಾಶ ಚೆಲ್ಲುವ

ವಿದ್ಯುದ್ದೀಪವೇ ಅಲ್ಲವೆ ? ಅದನ್ನು ಹರಿದುಹಾಕುವುದರಿಂದ ಆಗುವ ಲಾಭವಾದರೂ ಏನು? ಇದಲ್ಲದೆ ರಮಾಕಾಂತನ ಬರಹದ ಬೆನ್ನ ಹಿಮ್ಮಗ್ಗುಲಲ್ಲಿಯೇ ತನ್ನ ಅನುಭವಗಳನ್ನು ಬರೆದಿಟ್ಟಿದ್ದಳು. ನಿದ್ರೆಗೆ ಬಂದಿದ್ದ ಸೋನ್ಯಾ ಅಲ್ಲಿಯೇ ಮಲಗಿದ್ದ. ಅವನ ಗೋಣು ನೊಂದೀತೆಂದು ವತ್ಸಲೆಯು ಅವನನ್ನು ಸರಿಯಾಗಿ ಮಲಗಿಸಹೋದಳು.

ಸೋನ್ಯಾ ನಿದ್ರೆಯಲ್ಲಿ ಕನವರಿಸಿದ–

"ಧ್ರುವ ಒಬ್ಬನೇ ! ಅಲ್ಲs ಅಬಚೀ ?"

## ೧೦
## ಹಣ್ಣೆಲೆ–ಚಿಗುರೆಲೆ

ಸುರಂಗೆಯು ಸತಾರು ಬಾರಿಸತೊಡಗಿದಳು. ರಮಾಕಾಂತನಿಗೆ ತುಂಬಿಗಳ ಗುಂಜಾರವವನ್ನು ಕೇಳಿದಂತೆ ಭಾಸವಾಯಿತು. ಸತಾರಿನ ತಂತಿಗಳ ಮೇಲೆ ಅವಳ ಬೆರಳುಗಳು ಕ್ಷಣಾರ್ಧದಲ್ಲಿ ವಿಶ್ವಗೋಲದಿಂದ ಸ್ವರ್ಗದವರೆಗೆ ಹೋಗುವ ಕವಿಕಲ್ಪನೆಯಂತೆ ನರ್ತಿಸತೊಡಗಿದವು. ಸ್ವಲ್ಪ ಕಾಲದಲ್ಲಿಯೇ ನಾದಮಧುರ ಸ್ವರದಿಂದ ಕೋಣೆಯು ತುಂಬಿ ತುಳುಕಹತ್ತಿತು. ಒಮ್ಮೆ ಸತಾರು ಬಾಲಕರ ಸ್ವಚ್ಛಂದದಿಂದ ಆಲಾಪ ತೆಗೆಯುತ್ತಿತ್ತಾದರೆ, ಮತ್ತೊಮ್ಮೆ ರಮಣರಮಣಿಯರ ಮುಗ್ಧಪ್ರಣಯ ಕೂಜನವನ್ನು ಪ್ರಕಟಮಾಡುತ್ತಿತ್ತು. ಮರುಕ್ಷಣದಲ್ಲಿಯೇ ವೃದ್ಧನಂತೆ ಶಾಂತವಾದ ಮಾತುಗಳನ್ನೇ ಹೇಳಿದಂತೆ ಕೇಳಿಬರುತ್ತಿತ್ತು. ನಡು ನಡುವೆ ಹೊರಡುವ ಅತ್ಯಂತ ಕೋಮಲ ಸ್ವರವು ಮಧುರ ಬಾಲಿಕೆಯ ಕಂಠದೊಳಗಿಂದ ಹೊರಟ ಧ್ವನಿಯಂತೆ ಭಾಸವಾಗುವಂತಿತ್ತು. ಸುರಂಗೆಯ ವಾದನ ಕೌಶಲ್ಯವು ಅಷ್ಟೊಂದು ಅಪ್ರತಿಮವಾಗಿತ್ತು. ಅವಳೊಂದು ಶೃಂಗಾರಿಕ ಪದವನ್ನು ಬಾರಿಸಿದಾಗ ಲತಾಮಂಟಪದ ಹಿಂದೆ, ಮಂದಮಾರುತನಿಗೂ ಕೇಳಬರದಂತೆ ಪ್ರಣಯಿಗಳ ಜೋಡೊಂದು ಮೃದುಸ್ವರದಲ್ಲಿ ಮಾಡುವ ಪ್ರೇಮಗೋಷ್ಠಿಯಂತೆ ರಮಾಕಾಂತನಿಗೆ ಅದು ಭಾಸವಾಯಿತು. ಅವಳು ಭೈರವಿಯನ್ನು ಬಾರಿಸುವಾಗ ತನ್ನ ಒಬ್ಬನೇ ಒಬ್ಬ ಮಗನು ದೇಶದ ಸಲುವಾಗಿ ಶೂಲವನ್ನು ಏರುವಾಗ ಆತನನ್ನು ತಬ್ಬಿಕೊಂಡು ಅಳುವ ತಾಯಿಯ ಚಿತ್ರವು ಆತನ ಕಣ್ಣುಗಳ ಮುಂದೆ ನಿಂತಿತು. ಸತಾರಿನ ಆ ಮೃದು ಮುಗ್ಧ ಮಧುರ ಸ್ವರಗಳ ದ್ವಾರದಿಂದ ನೇತ್ರಪಲ್ಲವಿಯೇ ಏಕೆ, ಹೃದಯದ ಭಾಷೆಯೂ ಪ್ರಕಟವಾಗಬಹುದು ಎಂಬ ವಿಚಾರವು ರಮಾಕಾಂತನ ಮನಸ್ಸಿನಲ್ಲಿ ಬರದೆ ಇರಲಿಲ್ಲ.

"ಆ ಸತಾರು ಕೆಳಗಿಡು" ಎಂದು ರಮಾಕಾಂತನು, ತೂಗುವ ಖುರ್ಚಿಯ ಮೇಲೆ ತೂಗಿಕೊಳ್ಳುತ್ತ ಅಂದನು.

"ಯಾಕೆ ? ಬೇಸರಾಯಿತೇ ?" ಸುರಂಗೆಯು ಸತಾರನ್ನು ಕೆಳಗೆ ಇರಿಸುತ್ತ ಕೇಳಿದಳು.

"ಹೆಂಗಸರಿಗೆ ಆಭರಣಗಳ ಬೇಸರ ಬರಬಹುದು ಒಂದು ವೇಳೆ. ಆದರೆ–"

"ಮುಚ್ಚಿ ಮಾತನಾಡುವ ವಿದ್ಯೆ ಒಳ್ಳೇ ಸಾಧಿಸಿದೆ ನಿಮಗೆ" ಎಂದು ಸುರಂಗೆಯು ಮಂಚದ ಮೇಲೆ ಕುಳಿತು ತುಸು ವಕ್ರ–ದೃಷ್ಟಿಯಿಂದ ಆತನನ್ನು ನೋಡುತ್ತ ಅಂದಳು.



"ಇಲ್ಲಿ ನನ್ನ ಜೀವ ಹೋಗುತ್ತಿದೆ–"

"ಅಂಥಾದ್ದೇನು ನಾನು ನಿಮ್ಮ ಜೀವ ತೆಗೆದೆ?"

"ನೀನೇನು ಸತಾರು ಬಾರಿಸುತ್ತಿದ್ದೆಯೊ?"

"ಇಲ್ಲ ! ನಾನು ಬಾರಿಸಿದ್ದು ನಗಾರಿ!"

"ಕಲಾವಂತನು ಒಮ್ಮೆ ರಂಗಿಗೆ ಬಂದನೆಂದರೆ ಆತನಿಗೆ ಯಾತರ ಅರಿವೂ ಉಳಿಯುವದಿಲ್ಲ."

"ಅಂದರೆ? ನಾನು ಮಾಡಿದ್ದಾದರೂ ಏನು?"

"ನಿನ್ನ ಬೆರಳುಗಳು ಸತಾರಿನ ಮೇಲೆ ಆಡುತ್ತಿದ್ದವು ಇಷ್ಟೇ. ಆದರೆ ಅದರ ಗತಿಗಳೆಲ್ಲ ಇಲ್ಲಿ" ಎಂದು ರಮಾಕಾಂತನು ತನ್ನ ಎದೆಯ ಎಡಭಾಗದ ಕಡೆಗೆ ಕೈಯೊಯ್ಯುತ್ತ ಅಂದನು.

"ತಂತಿಗಳಾವೂ ಹರಿಯಲಿಲ್ಲವಷ್ಟೆ?"

"ತಂತಿಗಳೇನೋ ಹರಿಯಲಿಲ್ಲ–ಆದರೆ ಸ್ವರಗಳಿಗೆ ಹೊರಗೆ ಹೋಗಲು ದಾರಿಯಿಲ್ಲ. ಅಲ್ಲಿಯೇ ಅವು ಪ್ರತಿಧ್ವನಿಸಹತ್ತಿವೆ. ಹೃದಯವೆಷ್ಟು ಬಡವಾಗಿದೆ ನನ್ನದು !"

"ಅದರ ಭಾರವು ಕಡಿಮೆ ಹೇಗಾಗಬೇಕು ? ಅದಕ್ಕೆ ಔಷಧ–'

"ಎರಡನೇ ಹೃದಯ."

ಸುರಂಗೆಯು "ಏನಾದರೊಂದು ಮಾತಾಡುವಿರಿ ಆಯಿತು" ಎಂಬ ಅರ್ಥವನ್ನು ತನ್ನ ಕತ್ತಿನಿಂದಲೇ ಅಭಿನಯಿಸಿದಳು. ರಮಾಕಾಂತನ ಮಾತು ಅವಳಿಗೆ ಸರಿಹೋಯಿತೆಂಬುದು ಅವಳ ಮುಖದ ಮೇಲಿಂದಲೇ ತಿಳಿಯಬಹುದಾಗಿತ್ತು. ಇದನ್ನು ತಿಳಿದು ಉತ್ತೇಜಿತನಾಗಿ ರಮಾಕಾಂತನು "ಒಂದು ಶರೀರಕ್ಕೆ ರಕ್ತ ಕಡಮೆಯಾದರೆ, ಎರಡನೇ ಶರೀರದೊಳಗಿಂದ ತಂದು ಅದರಲ್ಲಿ ಹಾಕುವರು. ಇದು ನಿಮಗೆ ಗೊತ್ತಿದೆಯೆ?" ಎಂದು ಕೇಳಿದನು.

"ಹೀಗೇನೋ ಕೇಳಿರುವೆನು ನಿಜ. ಆದರೆ ಬೇಕಾದವರ ರಕ್ತ ನಡೆಯುವುದಿಲ್ಲವಂತೆ. ಒಬ್ಬರೊಬ್ಬರಂತೆಯೇ ಇರಬೇಕಾಗುತ್ತದಂತೆ ರಕ್ತ.

"ಹೃದಯಗಳಾದರೂ ಅದರಂತೆಯೇ......"

"ಈಗ ತಿಳಿಯಿತು ನನಗೆ !"

"ಏನದು ?"

"ಸತಾರು ಬಾರಿಸುವದನ್ನು ಕೇಳಲಿಕ್ಕೆ ಯಾಕೆ ಬೇಸರಾಯಿತು ಎನ್ನುವದು !"

"ಯಾಕೆ ?"

"ಹೃದಯದ ಭಾರವನ್ನಿಳಿಸಲಿಕ್ಕೆ ಎರಡನೇ ಹೃದಯವು ಇಲ್ಲಿ ಇಲ್ಲವೆಂದು."

"ಅಂದರೆ–ನಿನಗೆ ಹೃದಯವೇ ಇಲ್ಲವೋ?"

"ಸುಲೋಚನೆಯು ಇಂದು ಊರಲ್ಲಿ ಇರಲಿಕ್ಕೆ ಹೋಗಲಿಲ್ಲವೇ? ಅಂದಮೇಲೆ–"

ಖುರ್ಚಿಯ ಮೇಲಿಂದ ಏಳುತ್ತ ರಮಾಕಾಂತನು ಕರೆದ. "ಸುರಂಗಾ–" ಆತನ ಸ್ವರದಲ್ಲಿಯೂ ದೃಷ್ಟಿಯಲ್ಲಿಯೂ ಉನ್ಮಾದವು ಸ್ಪಷ್ಟವಾಗಿ ಕಂಡುಬರುತ್ತಿತ್ತು. ಸುರಂಗೆಗೆ

ಮನಸ್ಸಿನಲ್ಲಿ ಹೇಗೋ ಎನಿಸಿತು. ಬೆಳಗಾಂವಿಗೆ ಬಂದಾಗಿನಿಂದ ಸುಲೋಚನೆಯು ಯಾವಾಗಲೂ ಅವನ ಜೊತೆಯಲ್ಲಿ ಇರುತ್ತಿದ್ದಳು. ಆದ್ದರಿಂದ ರಮಾಕಾಂತನು ಸೂಚನೆಯಿಂದ ವ್ಯಕ್ತಪಡಿಸಿದ ಪ್ರಣಯ ಚಿಹ್ನೆಗಳು ಅವಳಿಗಷ್ಟೇ ತಿಳಿಯವಂತಿದ್ದವು. ಕಳೆದ ವಾರದಲ್ಲಿ, ಬೇಗನೇ ಬರುವ ಸಲುವಾಗಿ ಸುಲೋಚನೆಯ ತಂದೆಯವರಿಂದ ೨–೩ ಪತ್ರಗಳು ಬಂದವು. ಆ ಮೂಲಕ ಮರುದಿವಸ ಅಂಬೋಲಿಘಟ್ಟವನ್ನು ನೋಡಿಕೊಂಡು, ಅವಳೂ ರಮಾಕಾಂತನೂ ಮುಂದೆ ಹೋಗಬೇಕೆಂದು ಕಾರ್ಯಕ್ರಮವು ಗೊತ್ತುಮಾಡಲ್ಪಟ್ಟಿತ್ತು.

ಅವಳ ತಂದೆಗೆ ಊರಲ್ಲಿ ಯಾರೂ ಮಿತ್ರರು ಇರಲಿಲ್ಲ. ಅವಳನ್ನು ಇಂದು ಅತ್ಯಂತ ಬಲುಮೆಯಿಂದ ತಮ್ಮ ಕಡೆಗೆ ಇರಲಿಕ್ಕೆ ಕರೆದುಕೊಂಡು ಹೋಗಿದ್ದರು. ರಮಾಕಾಂತನನ್ನಾದರೂ ಅವರು ಕರೆದಿದ್ದರು. ಆದರೆ ಸುರಂಗೆಗೆ ಆಮಂತ್ರಣವಿರದ್ದರಿಂದ ಅವನೂ ಹೋಗಲಿಲ್ಲ ! ಅದೇಕೆ, ತನ್ನ ಕೂಡ ಏಕಾಂತದಲ್ಲಿ ಮಾತಾಡುವ ಸಂಧಿ ಸಿಗಬೇಕೆಂತಲೇ ಆತನು ಆಮಂತ್ರಣವನ್ನು ಅಲ್ಲಗಳೆದನೆಂದು ಸುರಂಗೆಗೆ ತೋರಿತು.

“ಸುರಂಗಾ”–ಎಂದು ಕರೆದು ರಮಾಕಾಂತನು ಕ್ಷಣಹೊತ್ತು ಸ್ತಬ್ಧವಾಗಿ ಉಳಿದನು. ತನ್ನ ಸ್ವಂತದ ಕಂಪಯುಕ್ತ ಸ್ವರವನ್ನು ಕೇಳಿ ತನ್ನದು ತನಗೆ ಆಶ್ಚರ್ಯವಾಯಿತು. ಕಳೆದ ಮೂರು ನಾಲ್ಕು ತಿಂಗಳಲ್ಲಿ ಸುರಂಗೆಯ ಸೌಂದರ್ಯದ ಪರಿಣಾಮವು ಆತನ ಮೇಲೆ ಮೋಹವನ್ನು ಉಂಟುಮಾಡುವ ಒಂದು ಔಷಧದಂತೆ ಆಗಿತ್ತು. ಬೆಳಗಾಂವಿಗೆ ಬಂದಾಗಿನಿಂದಲಂತೂ ಈ ಔಷಧವು ಆತನ ರಕ್ತದಲ್ಲಿ ಹೆಚ್ಚಾಗಿ ಬೆರೆತಿತ್ತು. ಕಂಪನಿಯ ಕೆಲಸಗಳ ಮೂಲಕ ಮ್ಯಾನೇಜರರಿಗಂತೂ ಸುರಂಗೆಯನ್ನು ಹಿಂಬಾಲಿಸುವುದು ಶಕ್ಯವಿರಲಿಲ್ಲ. ಸೇವಕರೆಂದರೆ ಹೇಳಿಕೇಳಿ ಸಂಬಳಕ್ಕೆ ಸರಿಯಾಗಿ ಕೆಲಸ ಮಾಡುವವರು ! ಪರ್ವತವು ಎಷ್ಟು ಎತ್ತರವಾದರೂ ಆಕಾಶದಿಂದ ಸಿಡಿದು ಬೀಳುವ ತಾರೆಗೆ ಆಸರೆಯಾದೀತೇ?

ಸುಲೋಚನೆಯು ಅಂತರಪಡದೆಯಾಗಿ ಇದ್ದಳೆಂದೆ ! ಇಲ್ಲವಾದರೆ–

ಆದರೆ ಇಂದು ರಮಾಕಾಂತನ ಸುದೈವದಿಂದ ಸುಲೋಚನೆಯೂ ಊರಲ್ಲಿರಲಿಕ್ಕೆ ಹೋದಳು. ಬೆಳಗಾಂವಿಯ ಹವೆಗೆ ಸುರಂಗೆಯ ದೇಹಸ್ಥಿತಿಯಾದರೂ ಹಾ ಹಾ ಅನ್ನುವದರಲ್ಲಿ ಸುಧಾರಿಸಿತು. ಆ ಮೂಲಕ ಸುಲೋಚನೆಯ ಚಿತ್ರದ ಕೆಲಸವಾದರೂ ಚನ್ನಾಗಿ ಸಾಗಿತ್ತು. ಇಂದು ಊಟವಾದ ಕೂಡಲೆ ಸುರಂಗೆಗೆ ಸತಾರು ಬಾರಿಸುವ ಲಹರಿಯಾಯಿತು. ರಮಾಕಾಂತನಿಗಾದರೂ ಇಂಥ ಮಧುರ ವಾತಾವರಣವು ಬೇಕಾಗಿಯೇ ಇತ್ತು. ಸುರಂಗೆಯ ಕೋಮಲ ಬೆರಳುಗಳೊಡನೆ ಆತನ ಹೃದಯವೂ ನರ್ತಿಸತೊಡಗಿತ್ತು. ತನ್ನ ಅಸ್ತಿತ್ವದ ಅರಿವು ಕೂಡ ತಾಪದಾಯಕವಾಗುವಷ್ಟು ಅವಳ ಗಾಯನ ವಾದನ ಕೌಶಲ್ಯವು ಅವನ ಪ್ರೇಮವೃತ್ತಿಯನ್ನು ಚಂಚಲವಾಗಿ ಮಾಡಿಬಿಟ್ಟಿತ್ತು. ಈ ಅರಿವನ್ನೇ ಮರೆಯಬೇಕು–ಒಂದು ನಿರಾಕಾರ ಆನಂದವನ್ನೇ ಸವಿಯಬೇಕೆಂಬ ಉತ್ಕಟವಾದ ಉತ್ಕಂಠೆಯು ಆತನ ಮನಸ್ಸಿನಲ್ಲಿ ಉತ್ಪನ್ನವಾಯಿತು.

ಆತನು ಮತ್ತೊಮ್ಮೆ ಅವಳನ್ನು ಕರೆದ “ಸುರಂಗಾ–” ಸುರಂಗೆಯು ಈ ಕರೆಗೆ



ಬೆದರಲಿಲ್ಲ. ಇದಕ್ಕೆ ಅವಳು ಪರಿಚಿತಳಾಗಿದ್ದಳು. ಆದರೆ ಅವಳಿಗೆ ತಿಳಿಯದೆಯೆ ಅವಳ ಕಣ್ಣುಗಳ ಮುಂದೆ ಮೂರು ಚಿತ್ರಗಳು ಕುಣಿದುಹೋದುವು. ತೊಪ್ಪಲು ಹೊಚ್ಚಿದ ಗುಡಿಸಲು ಹಾಗೂ ಸಾವಳನಿಗೆ ನಾಚಿಕೊಂಡು ದೂರ ಸರಿದು ನಿಲ್ಲುವ ತುಳಸಿ– ಊರಲ್ಲಿಯ ಜಮೀನುದಾರನ ಮನೆ, ಅಲ್ಲಿ ತಾನು ಒಕ್ಕಲಗಿತ್ತಿಯಂತೆ ಕೆಲಸಮಾಡುತ್ತಿರುವಾಗ ಆತನು ಕೈಹಿಡಿದ–ಬಾಯಿ ತೆರೆಯಬೇಕೆಂದು ತನ್ನ ಮನಸ್ಸಿನಲ್ಲಿ ಬಂದಿತ್ತು. ಆದರೇನು ? ಆತನು ತಟ್ಟನೆ ತನ್ನ ಮುಷ್ಟಿಯನ್ನೊತ್ತಿದ. ಅದರಲ್ಲಿ ರೊಕ್ಕವನ್ನು ನೋಡಿದ ಕೂಡಲೆ, ಕಂಠದವರೆಗೂ ಬಂದ ತನ್ನ ಧ್ವನಿಯು ಅಲ್ಲಿಯೇ ಕಟ್ಟಿ ನಿಂತುಬಿಟ್ಟಿತು.

ಇಂದಿನದು ಮೂರನೇ ಚಿತ್ರ ! ರಮಕಾಂತನಂಥ ಸಿರಿವಂತ ಕಲಾವಂತ ತರುಣನು ತನ್ನನ್ನು ಕರೆಯುತ್ತಲಿದ್ದ. ಕರೆಯೋಣವೇತರದು ? ಸೃಷ್ಟಿಕರ್ತನ ಮೋಹಿನೀ ಮಂತ್ರವೇ ಅದು. ಆ ನಿಮಂತ್ರಣದಲ್ಲಿ ವಸಂತನ ಸುಗಂಧ ಚಂದ್ರನ ತಂಪು ಇದ್ದವು. ಕಂಪನಿಯನ್ನು ಸೇರಿದನಂತರ ಮೊದಲಿನ ಎರಡು–ಮೂರು ವರ್ಷ ಸಂಗೀತ ಕಲಿಯುವುದರಲ್ಲಿಯೂ ತನ್ನ ಕೆಲಸವನ್ನು ಒಳ್ಳೇ ರೀತಿಯಿಂದ ಮಾಡುವುದರಲ್ಲಿಯೂ ಕಳೆದಿದ್ದಳು. ಆಗ ಅವಳಿಗೆ ಸುಖವಿಲಾಸಗಳ ಕಡೆಗೆ ಲಕ್ಷ್ಯವೇ ಇರಲಿಲ್ಲ. ಆದರೆ ಕಳೆದ ಮೂರು ವರುಷಗಳಲ್ಲಿ ಅವಳು ಚನ್ನಾಗಿ ನೆಲೆಗೊಂಡು ದೊಡ್ಡ ಸಂಬಳವನ್ನು ಗಳಿಸುತ್ತಿದ್ದಳು. ಜರದ ಪತ್ತಲಗಳು, ವಸ್ತುವಡವೆಗಳು, ಬೆಲೆಯುಳ್ಳ ಅತ್ತರಗಳು, ಕನ್ನಡಿಯಲ್ಲಿಯ ಪ್ರತಿಬಿಂಬಗಳು, ಸುತ್ತಲಿನ ದೃಶ್ಯಗಳು, ಇವೆಲ್ಲಗಳೂ ಅವಳಿಗೆ ಮುಗ್ಧೆ, ಏಳು, ಇದು ನಿನಗೆ ಜೋಗಿಣಿಯಾಗಿ ಬಾಳುವ ವಯಸ್ಸೇ ? ಎನ್ನುವಂತೆ ಆಗಿದ್ದವು.

ಆದರೆ ಮ್ಯಾನೇಜರನ ಕಠೋರ ಶಿಸ್ತಿನ ಸೆರೆಯಲ್ಲಿ ತಳಮಳಿಸುವುದರ ಹೊರತು ಅವಳಿಗೆ ಏನನ್ನೂ ಮಾಡಲಿಕ್ಕೆ ಬರುತ್ತಿರಲಿಲ್ಲ ಆತನೇ ಅವಳನ್ನು ಅನ್ನದ ಮಾರ್ಗಕ್ಕೆ ಹಚ್ಚಿದವನು. ಅವನ ಪ್ರಯತ್ನದ ಮೂಲಕವೇ ಅವಳಿಗೆ ಇಷ್ಟೊಂದು ಧನವೂ ಕೀರ್ತಿಯೂ ದೊರೆತಿತ್ತು. ಅವಳ ಕೃತಜ್ಞಮನವು ಅವನಿಗೆ ವಿರುದ್ಧವಾಗಿ ಹೋಗಲೆಳೆಸಿದ್ದಿಲ್ಲ. ರಮಾಕಾಂತನ ನಾಟಕವನ್ನು ಕಂಪನಿಯವರು ತೆಗೆದುಕೊಂಡಂದಿನಿಂದ ಈ ಸೆರೆಯಿಂದ ಬಿಡುಗಡೆಯಾಗಬಹುದೆಂಬ ಆಶೆಯು ಅವಳ ಮನಸ್ಸಿನಲ್ಲಿ ಹುಟ್ಟಿತು. ತನ್ನ ಪ್ರೇಮವು Platonic (ಪ್ಲೆಟೋನಿಕ್) ಇದೆ. ಶಾರೀರಕವಿಲ್ಲವೆಂದು ತನ್ನ ವಿಷಯದಲ್ಲಿ ರಮಾಕಾಂತನ ತಿಳುವಳಿಕೆಯಿತ್ತು. ಆದರೆ ಅವನ ಹೃದಯದ ಪ್ರತಿಬಿಂಬವನ್ನು ಸುರಂಗೆಯು ಯಾವಾಗಲೋ ಗುರುತಿಸಿದ್ದಳು. ಒಂದು ಕ್ಷಣ ಇದು ತೋರಿಕೆಗೆ ಮಾತ್ರ ಸುಶಿಕ್ಷಿತ ಕಲಾವಂತನೊಬ್ಬನ ನಿರ್ದೋಷವಾದ ಸೌಂದರ್ಯ ಪ್ರೇಮವಿದೆ ಎಂದೆನಿಸುತ್ತಿತ್ತು. ಆದರೆ ಮರುಕ್ಷಣದಲ್ಲಿಯೇ ಅವಳಿಗೆ ತಿಳಿದುಬಂದಿತು–ಅದು ಕಥಾಲೇಖಕನ ಗಾಯಿಕೆಯ ಮೇಲಿನ, ಕಲಾವಂತನ ಕಲೆಯ ಮೇಲಿನ ಪ್ರೀತಿಯಾಗಿರಲಿಲ್ಲ. ಆದರೆ ಅದು ಸ್ತ್ರೀಯ ಮೇಲಿನ ಪುರುಷನ ಪ್ರೇಮವೇ ಆಗಿತ್ತು.

ಅದು ಸ್ತ್ರೀಪುರುಷರ ಪ್ರೇಮವೇ ಇದ್ದ ಬಗ್ಗೆ ಸುರಂಗೆಗೆ ಏನೂ ಆಶ್ಚರ್ಯವಾಗಲಿಲ್ಲ. ಸೂಳೆಯ ವ್ಯವಸಾಯದಲ್ಲಿ ತನ್ನ ತಾಯಿಗೆ ಬಂದ ಅನುಭವವು ಅವಳ ಹೃದಯದ ಮೇಲೆ

ಚಿಕ್ಕಂದಿನಲ್ಲಿಯೇ ಚೆನ್ನಾಗಿ ಕೊರೆಯಲ್ಪಟ್ಟಿತ್ತು. ಬಹಿರಂಗದಲ್ಲಿ ತಾವು ತೊಳೆದ ಅಕ್ಕಿಯಂತೆ ಕಲಂಕರಹಿತರೆಂದು ಮೆರೆಯುವವರು, ಅಂತರಂಗದಲ್ಲಿ ಉದ್ದಿಗಿಂತಲೂ ಹೇಗೆ ಕಪ್ಪಾಗಿರುವರು, ಸೂಳೆಯರನ್ನು ನೋಡಿ ಮೂಗು ಮುರಿಯುವ ಗರತಿಯರ ಹೊಟ್ಟೆ ಹೇಗೆ ಉರಿಯುವುದು, ಹದಿನೈದರಿಂದ ಎಪ್ಪತ್ತೈದು ವರುಷದ ಮುಪ್ಪಿನವರೆಗೂ ಎಲ್ಲ ಪುರುಷರು ಬೀದಿಯಲ್ಲಿ ಹೋಗುವ ಸರ್ವಸಾಮಾನ್ಯ ಹೆಂಗಸಿನ ಕಡೆಗೂ ತಿರುಗಿ ತಿರುಗಿ ಹೇಗೆ ನೋಡುವರು, ಸಾಭ್ಯರೆಂದು ಹೇಳಿಕೊಳ್ಳುವವರ ಮನೆಯಲ್ಲಿಯೇ ಎಷ್ಟು ಗೊಂದಲವಿರುವದು–ಒಂದೇ ಎರಡೇ, ಇಂಥ ಸಾವಿರಾರು ಸಂಗತಿಗಳು. ಮೊದಲೇ ಸುರಂಗೆಯ ತಾಯಿಯದು ಎಲುಬಿಲ್ಲದ ನಾಲಗೆ. ಅದರಲ್ಲಿಯೂ ವೇಶ್ಯೆಯಾಗಿದ್ದ ಅನುಭವ!

ಇದರ ಮೂಲಕವೇ ಒಂದಿಲ್ಲೊಂದು ದಿನ ರಮಾಕಾಂತನು ತನ್ನೊಡನೆ ಹೆಚ್ಚು ಸಲಿಗೆಯಿಂದ ವರ್ತಿಸುವನೆಂಬುದು ಸುರಂಗೆಗೆ ನಂಬುಗೆಯಿತ್ತು. ಆ ಹುಣ್ಣಿಮೆಯ ದಿವಸ ಅವಳು ಆತನ ಸಂಗಡ ಜುಹೂ ಸಮುದ್ರತೀರಕ್ಕೆ ಹೋದದ್ದಾದರೂ ಅದೇ ಕಾರಣದಿಂದಲೇ. ತನ್ನ ಮನಸ್ಸಿನಲ್ಲಿಯ ಮಾತುಗಳನ್ನೆಲ್ಲ ಹೇಳಲಿಕ್ಕೆ ಬರಲಿಕ್ಕಿಲ್ಲವೆಂದು ಅವಳು ತನ್ನ ಜೊತೆಯಲ್ಲಿ ಒಂದು ಪತ್ರವನ್ನು ಒಯ್ದಿದ್ದಳು. ಆದರೆ ವಿಚಿತ್ರ ಘಟನೆಯಿಂದ ಪತ್ರವಂತೂ ರಮಾಕಾಂತನ ಕೈ ಸೇರಲೇ ಇಲ್ಲ. ತಿರುಗಿ ಮತ್ತೆ ಯಾರಿಗಾದರೂ ಸಿಕ್ಕಿರಲಿಕ್ಕಿಲ್ಲವಲ್ಲ ಎಂಬ ವಿಚಾರವು ಅವಳ ಮನಸ್ಸಿನಲ್ಲಿ ಎಷ್ಟೋ ದಿವಸ ಕಟೆಯುತ್ತಿತ್ತು.

ರಮಾಕಾಂತನು ದಿಟ್ಟತನದಿಂದ ಅವಳ ಕಡೆಗೆ ನೋಡುತ್ತ ಅಂದ–"ಸುರಂಗಾ, ನೀನು ನನ್ನವಳಾಗುವಿಯಾ?" ಭೂಮಿಯಲ್ಲಿ ದೃಷ್ಟಿಯನ್ನಿಟ್ಟು ಸ್ವಲ್ಪ ಕಂಪಿತ ಸ್ವರದಲ್ಲಿ ಅವಳು ಉತ್ತರ ಕೊಟ್ಟಳು– "ನಾನು ನಿಮ್ಮವಳಾಗಬಲ್ಲೆನೆ?"

"ಅಂದರೆ?"

"ನಾನು–ನಾನು–ಯಾರೆಂಬುದು ಇದು–"

"ನೀನೇ ? ನೀನು ಒಂದು ಸೌಂದರ್ಯದ ಮೂರ್ತಿ !"

"ಆದರೆ ಆ ಮೂರ್ತಿಯ ಹೃದಯದಲ್ಲಿ ಎಷ್ಟು ಪಾಪಗಳು–"

ಅವಳ ಎಡಗಡೆಯ ಭುಜದ ಮೇಲೆ ಕೈ ಇಟ್ಟು ಅವಳ ಕಡೆಗೆ ದಿಟ್ಟಿಸಿ ನೋಡುತ್ತ ರಮಾಕಾಂತನೆಂದ– "ಎಂಥ ಹುಚ್ಚಿ ನೀನು ? ಸೌಂದರ್ಯದ ಉಸಿರಿಗೂ ನಿಲ್ಲದು, ಪಾಪ."

"ಆದರೆ ನನ್ನ ಸೌಂದರ್ಯವು ನಷ್ಟವಾದರೆ, ನಾಳೆಯೇ ಸ್ಟೋವ್ಹಿನ ಅಪಘಾತದಿಂದ ನಾನು ಸುಟ್ಟುಕೊಂಡೆನೆಂದರೆ–"

"ನಾನು ಒಳ್ಳೇ ಉಪಚಾರ ಮಾಡುವೆ?" ರಮಾಕಾಂತನು ನಡುವೇ ನಸುನಗುತ್ತ ಹೇಳಿದ.

"ನನ್ನಲ್ಲಿ ಒಳ್ಳೆಯದು ಕೆಟ್ಟದು ಎಲ್ಲವನ್ನೂ ನೀವು ಸರಿಮಾಡಿಕೊಂಡು ಹೋಗುವಿರಾ?"

"ಸರಿಮಾಡಿಕೊಳ್ಳುವದೇಕೆಬೇಕು ? ಅದು ಸರಿಯಾಗಿಯೇ ಇದೆ."



ಸುರಂಗೆಯು ಭಯಾಕುಲದೃಷ್ಟಿಯಿಂದ ಆತನನ್ನು ನೋಡುತ್ತ ಅಂದಳು– "ಆ ದಿವಸ ಪತ್ರವು ಕಳೆದುಹೋಯಿತಲ್ಲ ! ಅದನ್ನು ನಾನು ಮತ್ತೆ ಬರೆಯಬೇಕೆಂದೆ. ಆದರೆ–"

"ಆ ಪತ್ರ ತೆಗೆದುಕೊಂಡು ಮಾಡುವದಾದರೂ ಏನು? ಪ್ರಣಯದ ವ್ಯವಹಾರಗಳಿಗೆ ಬರೆದ ಪ್ರಮಾಣಗಳಿಗಿಂತ ಬಾಯ ಪ್ರಮಾಣಗಳೇ ಒಳ್ಳೆಯವು."

ಅವಳ ಹೆಗಲ ಮೇಲೆ ಇಟ್ಟ ಅವನ ಕೈಯು ಥರಥರ ಕಂಪಿಸುತ್ತಿತ್ತು. ಮದಿರೆಯ ಪೇಲೆಯನ್ನೆತ್ತುವ ಮನುಷ್ಯನ ಕಣ್ಣುಗಳಲ್ಲಿಯ ಮದವು ಆತನ ಕಣ್ಣುಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತಿತ್ತು. ತನ್ನ ಎಡಗೈಯಿಂದ ಅವಳ ಗದ್ದಹಿಡಿದು ಮುಖವನ್ನು ಸಾವಕಾಶವಾಗಿ ಮೇಲಕ್ಕೆತ್ತಿದಾಗ, ಅವಳು ಆತನಿಗೆ ಮಧುರ ಸ್ವರ ತೆಗೆಯುವ ಒಂದು ಕೋಮಲ ವೀಣೆಯಂತೆ ಭಾಸವಾದಳು. ಆ ಸ್ಪರ್ಶದಿಂದ ಆತನ ರಕ್ತದಲ್ಲಿ ಒಂದು ಸವಿಯಾದ ಸುಖಸಂಚಾರವು ನರ್ತಿಸತೊಡಗಿತು. ಅವನು ಸ್ವಲ್ಪ ಬಾಗಿದನು ಕೂಡ.

ಕಿಟಕಿಯ ಹತ್ತಿರ ಏನೋ ಸಪ್ಪಳವಾಯಿತು.

ಇಬ್ಬರೂ ಬೆಚ್ಚಿ ದೂರ ಸರಿದರು.

"ಸುಲೋಚನೆ ಬಂದಳೋ ಏನೋ ?" ಎಂದು ಸುರಂಗೆಯು ನಡುಗುತ್ತ ಅಂದಳು.

"ಗಾಳಿ ಇರಬಹುದು !"

"ಛೇ, ಕಿಟಕಿಯು ಒಳ್ಳೇ ಜೋರಿನಿಂದಲೇ ಸಪ್ಪಳ ಮಾಡಿತು !"

"ಎಷ್ಟೊಂದು ಅಂಜುವಿ ನೀನು !"

ಸುರಂಗೆಯು ಕಿಟಕಿಯ ಹತ್ತಿರ ಹೋದಳು. ಕಿಟಕಿಯ ಎರಡೂ ಬಾಗಿಲುಗಳ ನಡುವೆ ಒಂದು ಸಂದಿ ಇತ್ತು. ಆ ಸಂದಿಯಲ್ಲಿ ಒಂದು ಚೀಟಯನ್ನು ತೆರೆದಳು. ಅದರೊಳಗಿನ ಸಮಾಚಾರದ ಮೇಲೆ ತನ್ನ ದೃಷ್ಟಿ ದಾಟಿದ ಕೂಡಲೆ ಅವಳು ಥರಥರ ನಡುಗತೊಡಗಿದಳು. ಹೊರಗಿನ ತಣ್ಣಗಿನ ಗಾಳಿಯ ಹೊಡೆತಕ್ಕೆ ಅವಳಿಗೆ ಮೈಮೇಲೆ ಮುಳ್ಳು ನಿಂತಿರಬಹುದು ಎಂದು ರಮಾಕಾಂತನಿಗೆ ಅನಿಸಿತು. ಅವಳ ಸಮೀಪಕ್ಕೆ ಹೋದಾಗ ಆ ಚೀಟಿಯ ಕಡೆಗೆ ಅವನ ಲಕ್ಷ್ಯವು ಹೋಯಿತು. ಅದರಲ್ಲಿ ಕೇವಲ ಎರಡೇ ಶಬ್ದಗಳು ಇದ್ದವು.

**"ಕಾಮಾಪುರದ ಜಾತ್ರೆ"**

* * * * *

ಸುಲೋಚನೆಯು ಸಹಜವಾಗಿ ಬರೆದ ಚೀಟಿಯೊಂದು ಕಿಟಕಿಯಲ್ಲಿ ಬಿದ್ದುಕೊಂಡಿರಬಹುದು ಎಂದು ರಮಾಕಾಂತನು ಸುರಂಗೆಯನ್ನು ಸಮಾಧಾನಪಡಿಸುವ ಯತ್ನಮಾಡಿದನು. ಆದರೆ ಚೀಟಿಯಲ್ಲಿಯ ಅಕ್ಷರಗಳು ಸುಲೋಚನೆಯವು ಅಲ್ಲವೆಂದು ಆತನಿಗೆ ಗೊತ್ತಿತ್ತು. ಸುರಂಗೆಯು ಮಂಚದ ಮೇಲೆ ಬಿದ್ದುಕೊಂಡು ಭಯಚಕಿತ ದೃಷ್ಟಿಯಿಂದ ನೋಡುತ್ತಿದ್ದಳು. ಬೇರೆ ಸನ್ನಿವೇಶದಲ್ಲಿ ಆ ದೃಶ್ಯವು ರಮಾಕಾಂತನಿಗೆ ರಮಣೀಯವಾಗಿಯೇ ಕಾಣಬಹುದಾಗಿತ್ತು. ಆದರೆ ನಡುವೇ ಚಿತ್ರಪಟವು ಹರಿಯಿತೆಂದರೆ ಅದರಲ್ಲಿ ಸಮರಸವಾಗಿದ್ದ

ಪ್ರೇಕ್ಷಕರಿಗೆ ವಿರಸವಾಗುವಂತೆ ಆತನ ಸ್ಥಿತಿಯು ಆಗಿತ್ತು. ಸ್ವಲ್ಪ ಸಿಡುಕಿನಿಂದಲೇ ಅಂದ "ಗಾಳಿಯಮೇಲೆ ಫಿರ್ಯಾದು ಮಾಡಲಿಕ್ಕೆ ಬರುವಂತಿದ್ದರೆ–"

"ಅದು ಏನುಮಾಡೀತು ಪಾಪ ?"

"ಹಾಗಾದರೆ ಕಿಟಕಿಯನ್ನು ಯಾರು ತೆರೆದರು?"

ಸುರಂಗೆಯು ಏನೂ ಮಾತಾಡಲಿಲ್ಲ.

"ಈ ಚಳಿಗಾಲದಲ್ಲಿಯ ಗಾಳಿ ದೆವ್ವದಂತೆ ಬಿರಬಿರನೆ ಬೀಸುತ್ತಿರುತ್ತದೆ."

"ಅಂತೆಯೇ ನನಗೆ ಇಷ್ಟೊಂದು ಅದರ ಹೆದರಿಕೆ."

"ಆದರೆ ಅದರಲ್ಲಿ ಒಂದು ಒಳ್ಳೇ ಗುಣವುಂಟು."

"ಯಾವದದು?"

"ಎಲ್ಲ ಹಣ್ಣು ಎಲೆಗಳು ಉದುರಿ ಬೀಳುವವು."

"ಎಲ್ಲವೂ ಉದುರಿ ಬೀಳುವವೆ?"

"ಹೌದು."

"ಪ್ರತಿಯೊಂದೂ ಎಲೆ?"

"ಪ್ರತಿಯೊಂದೂ ಎಲೆ ಹೇಗೆ ಬಿದ್ದೀತು?"

"ನಾನಾದರೂ ಅನ್ನುವದು ಅದೇ. ಗಿಡದ ಮೇಲೆ ಕೆಲವಾದರೂ ಹಳೆಯ ಎಲೆಗಳು ಉಳಿಯತಕ್ಕವೇ?"

"ಆದರೆ ಹೊಸ ಚಿಗುರಿನ ಲೆಕ್ಕದಿಂದ ಅವು ತೀರ ಕಡಿಮೆ ಇರುವವು."

"ಕಡಿಮೆಯೇ" ಎಂಬ ಶಬ್ದವನ್ನು ಉಚ್ಚರಿಸಿ, ಅರ್ಧ ಮುದುಡೆ ಮಾಡಿ ಮೇಲೆ ಚಲ್ಲಿದ ಪರದೆಯ ಕಡೆಗೆ ನೋಡಿದಳು. ಗಿಡದ ಮೇಲೆ ಹಳೆಯ ಹಣ್ಣೆಲೆಗಳಿರುವಾಗಲೇ ಹೊಸ ಚಿಗುರುಗಳು ಒಡೆಯುವವು. ಆದರೆ ಮನುಷ್ಯನ ಆಯುಷ್ಯವೃಕ್ಷದಲ್ಲಿ ಹೀಗೆ ಎಲ್ಲಿ ಆಗುತ್ತದೆ–ಎಂದು ಅನ್ನುವಂತೆ ಇತ್ತು ಅವಳ ದೃಷ್ಟಿ.

ಹೊರಗೆ ಗಾಳಿಯ ಹೊಡೆತಕ್ಕೆ ಉದುರಿ ಬೀಳುವ ಎಲೆಗಳ ಸಳ ಸಳ ಸಪ್ಪಳವು ಕೇಳಬರುತ್ತಿತ್ತು. ಆ ಸಪ್ಪಳವನ್ನು ಕೇಳಿದಂತೆ ಮಾಡಿ ಸುರಂಗೆಯು ಅಂದಳು "ಕೇಳಿದಿರಾ ಅದನ್ನು?"

"ಅದರಲ್ಲಿ ಕೇಳುವದೇನು?"

"ಹಳೆಯ ಎಲೆಗಳು ಕೂಗುತ್ತಿರುವದಿಲ್ಲವೆ? ಅವುಗಳ ಮನಸ್ಸಿನಲ್ಲಿಯಂತೂ ಗಿಡವನ್ನು ಬಿಟ್ಟು ಹೋಗುವದಿರುವದಿಲ್ಲ ಮತ್ತು–"

ರಮಾಕಾಂತನು ನಗುತ್ತ ಅಂದನು: "ತಪ್ಪಿ ನಟಿಯಾದೆ ನೀನು, ಸುರಂಗಾ, ಕವಯಿತ್ರಿಯೇ ಆಗುವವಳು."

"ಶಾಲೆ ಕಲಿತಿದ್ದರೆ ಅದೂ ಆಗಬಹುದಾಗಿತ್ತು."

ಸತಾರವಾದನದಿಂದ ಕೋಣೆಯನ್ನು ತುಂಬಿಕೊಂಡಿದ್ದ ಮಧುರ ಮಾಯೆ



ಯಾವಾಗಲೋ ಅಡಗಿಹೋಗಿತ್ತು ಎಂಬುದನ್ನು ರಮಾಕಾಂತನು ಗುರುತಿಸಿದನು. ಕೂತಲ್ಲಿಯೇ ಆತನು ಆಕಳಿಸಿದನು.

"ಯಾರೋ ನೆನೆಯುತ್ತಿರಬೇಕು ನನ್ನನ್ನು !" ಎಂದಳು ಸುರಂಗೆ.

"ಎದುರು ಕುಳಿತ ಜನರು ನೆನೆಯುವದುಂಟೆ?"

"ಸುಲೋಚನೆ ನೆನಸಿರಬಹುದು."

"ನೆನಸುವದು ನಿನ್ನನ್ನು, ಆಕಳಿಕೆ ನನಗೆ ! ಇದೊಳ್ಳೆ ನ್ಯಾಯ !"

"ನನ್ನನ್ನೇತಕ್ಕೆ ನೆನಸಿಯಾರು ಅವರು?"

"ನೀನು ಅವಳ ಲಕ್ಷ್ಮಿಯಲ್ಲವೆ? ಎರಡನೆಯದು ಯಾವದೂ ಅವಳ ಮನಸ್ಸಿನಲ್ಲಿ ಇಲ್ಲ.... ಹಗಲೂ ರಾತ್ರಿ ಚಿತ್ರವೇ ಚಿತ್ರ ! ನನ್ನ ನೆನಪನ್ನು ಬೇರೆ ಒಬ್ಬ ಹೆಂಗಸು ಮಾಡಿರಬಹುದು!"

ಗೋಣು ತಿರುಗಿಸಿ ಸುರಂಗೆಯು ವಿಚಾರಿಸಿದಳು.

"ಯಾರವಳು?"

"ನಿದ್ರಾದೇವಿ."

ರಮಾಕಾಂತನು ಎದ್ದು ಹೋದನಂತರ ಸುರಂಗೆಗೆ ೫–೧೦ ನಿಮಿಷ ಸಮಾಧಾನೆನಿಸಿತು. ವ್ಯಾಪಾರಿಯ ಪೆಟ್ಟಿಗೆಯಂತೆ ಮನುಷ್ಯನ ಮನಸ್ಸಿಗಾದರೂ ಒಂದು 'ಕಳ್ಳಜೇಬು' ಇದ್ದೇ ಇರುತ್ತದೆ. ಅದರೊಳಗಿನ ಪದಾರ್ಥಗಳನ್ನು ತೆರೆದು ನೋಡುವಾಗ ಅತ್ಯಂತ ಪ್ರೀತಿಯ ಮನುಷ್ಯನೂ ಸಮೀಪದಲ್ಲಿರಬಾರದೆಂದು ಅನಿಸುತ್ತದೆ. ಆ ಚೀಟಿಯಲ್ಲಿಯ 'ಕಾಮಾಪುರದ ಜಾತ್ರೆ' ಎಂಬ ಶಬ್ದಗಳನ್ನು ಓದಿ ಸುರಂಗೆಯ ಮನಃಸ್ಥಿತಿಯಾದರೂ ಇದರಂತೆಯೇ ಆಗಿತ್ತು. ೧೦ ವರ್ಷದ ಹಿಂದೆ ಆ ಜಾತ್ರೆಯಲ್ಲಿ ಕೊಂಡ ಪಾತ್ರೆಗಳು ಅವಳ ಕಣ್ಣು ಮುಂದೆ ಕಟ್ಟಿದವು. ಈಗ ಅಂಥ ಬೆಳ್ಳಿಯ ಪಾತ್ರೆಗಳನ್ನು ಕೊಳ್ಳುವ ಸಾಮರ್ಥ್ಯವು ತನ್ನಲ್ಲಿ ಇದ್ದರೂ, ಹತ್ತು ವರುಷಗಳ ಹಿಂದಿನ ತಾಮ್ರ ಹಿತ್ತಾಳಿಯ ಪಾತ್ರೆಗಳೇ ಅಮೃತದಿಂದ ತುಂಬಿದಂತೆ ಅವಳ ಕಣ್ಣುಗಳ ಮುಂದೆ ನಿಂತವು !

ನಿದ್ರೆಯಾದರೂ ಬರುತ್ತದೆಂದು ಅವಳು ಸುಮ್ಮನೆ ಬಿದ್ದುಕೊಳ್ಳುವ ಯತ್ನ ಮಾಡಿದಳು. ಆದರೆ ಮರುಕ್ಷಣದಲ್ಲಿಯೇ ಆ ಎಲ್ಲ ಪಾತ್ರೆಗಳು ದೇವಿಗೆ ಬಲಿಕೊಟ್ಟ ರಕ್ತದಿಂದ ತುಂಬಿದಂತೆ ಅವಳಿಗೆ ಕಾಣಿಸಿತು. ಅವಳು ಬೆಚ್ಚಿ ಒಮ್ಮೆಲೆ ಕಣ್ಣು ತೆರೆದಳು. ಮೊದಲಿನ ಕಿಟಕಿಯ ಕಡೆಗೆ ಸಹಜವಾಗಿ ನೋಡಿದ ಕೂಡಲೆ, ಅದರ ಹಿಂದೆ ಯಾರೋ ಇದ್ದ ಹಾಗೆ ಭಾಸವಾಯಿತು. ಒಮ್ಮೆಲೇ ಚೀರಬೇಕೆಂದೆನಿಸಿತು. ಆದರೆ ಅದೆಲ್ಲ ತನ್ನ ಅಂಜುಬುರುಕ ಮನಸ್ಸಿನ ಭಾಸವೇ ಇದ್ದರೆ ? ಆ ಮೊದಲಿನ ಚೀಟಿಯು ತಲೆದಿಂಬಿನ ಹತ್ತಿರವೇ ಬಿದ್ದಿತ್ತು. ಭಾಸವೆಂತಹದು?

ಅವಳ ಕಾಲುಗಳು ಥರಥರ ನಡುಗುತ್ತಿದ್ದವು. ಎದೆಯಲ್ಲಿ ಧಡ ಧಡ ನಡೆದಿತ್ತು. ಆದರೆ ಜೀವದ ಹಂಗು ತೊರೆದ ಹರಿಣಿಯು ಬೇಟೆಗಾರನ ಮೇಲೆ ತಿರುಗಿ ಬಿದ್ದು ಇರಿಯುವಂತೆ, ಅವಳು ಕೋಣೆಯ ಬಾಗಿಲಿಗೆ ಚಿಲಕವನ್ನು ಹಾಕಿ, ಆ ಕಿಟಕಿಯ ಕಡೆಗೆ ಹೋಗಿ ಅದನ್ನು ತೆರೆದಳು. ಹೊರಗಿನ ವ್ಯಕ್ತಿಯು ಹೆಸರುಗೊಂಡು ಕರೆದ: "ತುಳಸೀ–"

ಹೊರಗಿನ ತಣ್ಣಗಿನ ಗಾಳಿಯಿಂದ ಅವಳ ದೇಹವೂ, ಆ ಶಬ್ದದಿಂದ ಅವಳ ಹೃದಯವೂ ನಡುಗಹತ್ತಿದವು.

"ತುಳಸೀ–"

"ತುಳಸಿಯು ಸತ್ತಳು !" ಗೋಡೆಗೆ ಆನುತ್ತಾನುತ್ತ ಅವಳು ಉತ್ತರ ಕೊಟ್ಟಳು.

"ಯಾರು ಕೊಂದರು ?"

"ಸಾವಳ ! ಅವಳ ಗಂಡ !"

"ಯಾತರಿಂದ ?"

"ಉಪವಾಸದಿಂದ."

"ತುಳಸೀ, ಇದು ನಾಟಕಲ್ಲ !"

ಸುರಂಗೆಯು ಹುಚ್ಚು ಹಿಡಿದವಳಂತೆ ವಿಕಟಹಾಸ್ಯ ಮಾಡಿದಳು.

"ತುಳಸೀ, ನಾ ನಿನ್ನ ಗಂಡ ?"

"ಹೋದ ಜನ್ಮದಲ್ಲಿ ಇರಬಹುದು."

"ಹ್ವಾದ ಜಲ್ಮದವ ಅಲ್ಲ. ಈ ಜಲ್ಮದವನs."

ಸುರಂಗೆಯು ಕತ್ತಿನಿಂದಲೇ ಅಲ್ಲಗಳೆದಳು.

"ಈ ಜಲ್ಮದವ ಯಾಕ ಅಲ್ಲಾ ?"

"ಗಂಡಹೆಂಡಿರ ಜಾತಿ ಒಂದೇ ಇರಬೇಕಾಗತದೆ !"

"ನೀ ನನ್ನ ಜಾತಿಯಾಕಿ ಅಲ್ಲೇನು ?"

"ಉಂ ಹುಂ."

"ಅದ್ಹೆಂಗ ?"

"ನೀನು ಒಕ್ಕಲಿಗ–ನೀನು ಸೆರೆಕುಡಕ ! ನಾನು–ನಾನು–"

ಸುರಂಗೆಯ ಕಣ್ಣುಗಳ ಮುಂದೆ ಹತ್ತು ವರುಷಗಳ ಹಿಂದಿನ ಮತ್ತು ಇಂದಿನ ಜೀವನದ ಚಿತ್ರಗಳು ನಿಂತವು. ಆಗ ತಾನು ತೆಂಗಿನ ಗಿಡಕ್ಕೆ ಹಾಕುವ ಸಲುವಾಗಿ ಸೆಗಣಿಯ ಬುಟ್ಟಿಗಳನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿದ್ದಳು. ಈಗ ಸುಂದರ ಸುಗಂಧದ ಹೂವಿನ ಹೊರತಾಗಿ ಮತ್ತೆ ಯಾತಕ್ಕೂ ತನ್ನ ತಲೆಯ ಮೇಲೆ ಕೂಡಲಿಕ್ಕೆ ಅಧಿಕಾರವಿಲ್ಲ. ಆಗ್ಗೆ ಒಕ್ಕಲಗಿತ್ತಿಗೆ ಸಿಗುತ್ತಿದ್ದ ಆ ಹರಕು ಬಟ್ಟೆಗಳಾದರೆ ಈಗ ಹೊಸಹೊಸ ಜರದ ಪತ್ತಲಗಳು. ಆಗ್ಗೆ ಮಂದಿಯ ಮನೆಯಲ್ಲಿ ಮುಸುರೆ ತಿಕ್ಕುವಾಗ ಹೊಲಸು ಪಾತ್ರೆಗಳ ಮೇಲೆ ಕೈ ಆಡುತ್ತಿದ್ದವಾದರೆ, ಈಗ ಸತಾರಿನ ತಂತಿಗಳ ಮೇಲೆ ಬೆರಳುಗಳು ನರ್ತಿಸುತ್ತಿವೆ,– ತನ್ನ ಜಾತಿಯೂ ಬದಲಾಯಿಸಿತೆಂದೇ ಇವೆಲ್ಲಗಳಲ್ಲಿ ಇಷ್ಟೊಂದು ಅಂತರವಾಯಿತು.

"ಯಾವದು ನಿನ್ನ ಜಾತಿ?" ಕಿಟಕಿಯ ಮುಂದೆ ಬಂದು ಕೇಳಿದನು. ಈ ಎರಡೂ ಚಿತ್ರಗಳು ಸರ್ರನೆ ಅವಳ ಕಣ್ಣು ಮುಂದೆ ಹಾಯ್ದು ಹೋದವೆಂತಲೆ ಅವಳಿಗೆ ಉತ್ತರವು ಹೊಳೆಯಿತೇನೋ ; ಅವಳು ಹೇಳಿದಳು "ಬಿಳಿಯಂಗಿಯವರದು."



ಕಿಟಕಿಯ ಕಬ್ಬಿಣ ಕಂಬಿಗಳನ್ನು ಹಿಡಿದುಕೊಂಡು ಸಾವಳನು ನಿಂತುಕೊಂಡನು. ಅಲ್ಲಿಂದ ಆತನಿಗೆ ಕೋಣೆಯ ಅರ್ಧ ಭಾಗವಾದರೂ ಕಾಣುತ್ತಿತ್ತು. ತೆರತೆರದ ಖುರ್ಚಿಗಳು, ನಕ್ಷಿಯ ಮಂಚ, ತೆಳ್ಳಗಿನ ಪರದೆ, ಸುಂದರವಾದ ದಿಂಬುಗಳು, ಬೆಳ್ಳಿಯ ಉಗುಳು ಪಾತ್ರೆ, ಗೋಡೆಯ ಮೇಲಿನ ಅಂದವಾದ ಚೌಕಟ್ಟಿನಲ್ಲಿ ಕೂಡಿಸಿದ ಭಾವಚಿತ್ರಗಳು, ಆಚೆಗೆ ಬಿದ್ದು ಕೊಂಡಿರುವ ತಂಬೂರಿ–ಸುರಂಗೆಯು ಇರುವ ಕೋಣೆಯು ಈ ತೆರದ್ದಿತ್ತು. ಅವನು ಹಿಂದಿರುಗಿ ನೋಡಿದ–ಅಪಾರವಾದ ಇಡೀ ಜಗತ್ತೇ ತನ್ನ ಇರುವ ಕೋಣೆ ! ಅಲ್ಲಿಯ ಕಲ್ಲುಗಳ ದಿಂಬುಗಳು ತನ್ನ ದಾರೀ ನೋಡುತ್ತಲಿವೆ. ಮರುಭೂಮಿಯಲ್ಲಿಯ ಮಣ್ಣೇ ರತ್ನಗಂಬಳಿಯಾಗಿ ಯಾವಾಗಲೂ ತನ್ನ ಸಲುವಾಗಿ ಪಸರಿಸಿದೆ ಎಂದೆನಿಸಿತು. ಸಿಂದಿಯ ಅಂಗಡಿಯಲ್ಲಿ ಕಂಡುಬರುವ ಮುಖಚಿತ್ರಗಳೇ ತನ್ನ ಸುಂದರ ಫೋಟೋಗಳು, ಮತ್ತು ರಾತ್ರಿಯ ಕ್ರಿಮಿಗಳ ಕಿರ್ ಎಂಬ ಸಪ್ಪಳವೇ ತನ್ನ ಸತಾರಿನ ಸುಮಧುರ ಸ್ವರ !

ಸಾವಳ ಕ್ಷಣಮಾತ್ರ ಕಂಗೆಟ್ಟ. ಒಮ್ಮೆಲೆ ಎಚ್ಚತ್ತು ಅವಳಿಗೆ ಅಂದ: "ನೀ ಮತ್ತೆ ಒಕ್ಕಲಿಗೇರ ಜ್ಯಾತ್ಯಾಗ ಬಾ."

ಸುರಂಗೆಯು ಕಲ್ಲಿನ ಪುತ್ಥಳಿಯಂತೆ ಸ್ತಬ್ಧಳಾಗಿ ನಿಂತಿದ್ದಳು. ಅವನು ತನ್ನ ಕಡೆಗೆ ದಿಟ್ಟಿಸಿ ನೋಡುತ್ತಿರುವನೆಂದು ತಿಳಿದ ಕೂಡಲೆ ಅವಳು ಅಂದಳು: "ಸುರಂಗಿಯ ಗಿಡ ತುಳಸಿಯ ಗಿಡ ಆಗುವದು ಶಕ್ಯವಿಲ್ಲ."

"ತುಳಸೀ ಗಿಡದ್ದು ಸುರಂಗಿ ಗಿಡ ಹ್ಯಾಂಗ ಆತು ?"

"ಅದು ಆಗಲಿಲ್ಲ. ಅದನ್ನು ಸುರಂಗಿಯಾಗಿ ಮಾಡಿದರು !"

"ಯಾರು ?"

"ಒಬ್ಬ ಶ್ರೀಮಂತರು" ಸುರಂಗೆಯೂ ನಡುಗುತ್ತ ನಡುಗುತ್ತ ಉತ್ತರ ಕೊಟ್ಟಳು.

ಸಾವಳನ ಕಣ್ಣುಗಳಲ್ಲಿ ಕೆಂಪು ಕೆಂಡಗಳೇ ಹೊಳೆಯಲಾರಂಭಿಸಿದವು. ತನ್ನನ್ನು ತಡೆದುಕೊಳ್ಳುವ ಪ್ರಯತ್ನ ಮಾಡುತ್ತ ಸುರಂಗೆಯು ಅಂದಳು:

"ಸಾವಳ, ನಿನಗೆ ಬೇಡಿಕೊಳ್ಳುವೆ. ನಿನ್ನ ಕಾಲು ಬೀಳುವೆ. ಕೊಲ್ಲಬೇಡ ನನ್ನನ್ನು !"

"ನಿನ್ನ ಕೊಲ್ಲೂದಿಲ್ಲ–"

"ಅಂದರೆ ಯಾರನ್ನು ?" ರಮಾಕಾಂತನನ್ನು ಆಗಲೇ ಅವನು ಕೋಣೆಯಲ್ಲಿ ನೋಡಿರಬಹುದೆಂಬ ಸಂಶಯದಿಂದ ಕೇಳಿದಳು.

"ಆ ಶ್ರೀಮಂತನ್ನ."

"ಬೇಡ, ಇಂಥ ಗೊಂದಲದಲ್ಲಿ ಬೀಳಬೇಡ ! ಎಲ್ಲಿಯಾದರೂ ಸುಖವಾಗಿ ಇರು ! ನಿನಗೆ ಬೇಕಾದಷ್ಟು ಹಣವನ್ನು ಕೊಡುವೆ !"

"ಅದನ್ನs ಬೇಡಲಿಕ್ಕೆ ಬಂದೆ ನಾ ಮುಂಬಯಿಯಿಂದ."

"ಹೋದ ಸಾರೆಯವು ತೀರಿದವೇನು ಇಷ್ಟರಲ್ಲಿ ?"

"ಹೌದು."

“ಯಾತರಲ್ಲಿ ?”

“ಇಲ್ಲಿ ಉರಿ ಆರಸೂದರಾಗ–” ಎಂದು ತನ್ನ ಎದೆಯ ಮೇಲೆ ಕೈ ಇಡುತ್ತ ಸಾವಳನು ಉತ್ತರ ಕೊಟ್ಟನು.

ಸುರಂಗೆಯು ಗೋಡೆಯ ಮೇಲಿನ ಕೈತೆಗೆದು ಕಿಟಕಿಯ ಕಂಬಿಯ ಮೇಲೆ ಇಟ್ಟಳು. ಸಾವಳನ ಕೈಯು ಅದೇ ಕಂಬಿಯ ಕೆಳಗಿನ ಭಾಗದಲ್ಲಿ ಇತ್ತು. ಅವರಿಬ್ಬರ ಕೈಗಳಲ್ಲಿ ಏನೂ ಅಂತರವಿರಲೇ ಇಲ್ಲ. ಆದರೆ ಆ ಕಿಟಕಿ–ಅದರೊಳಗಿಂದ ಅವಳಿಗೆ ಹೊರಗೆ ಹೋಗುವದು ಶಕ್ಯವಿರಲಿಲ್ಲ–ಸಾವಳನಿಗೆ ಒಳಗೆ ಬರುವುದೂ ಶಕ್ಯವಿರಲಿಲ್ಲ. ಕಳೆದ ಏಳು ವರ್ಷಗಳಲ್ಲಿ ತಮ್ಮಿಬ್ಬರ ನಡುವೆ ಗಟ್ಟಿಯಾದ ಕಬ್ಬಿಣದ ಕಂಬಿಯ ಕಿಟಕಿಯನ್ನೇ ಕೂಡಿಸಿದ್ದಾರೆಂದು ಸಾವಳನಿಗೆ ನಂಬಿಗೆಯಾಯಿತು.

ಆಕಳಿಸುತ್ತ ಅವನು ಅಂದನು: “ರೊಕ್ಕ !” ಆತನ ಆಕಳಿಕೆಯ ಕೂಡ ಸೆರೆಯ ಉಗ್ರವಾಸನೆಯು ಕಿಟಕಿಯೊಳಗಿಂದ ಒಳಗೆ ಬಂದಿತು. ಸುರಂಗೆಯು ಮಂಚದ ಕಡೆಗೆ ಹೋಗಿ ಅದರ ಕೆಳಗಿನ ಟ್ರಂಕನ್ನು ಮುಂದಕ್ಕೆ ಎಳೆದುಕೊಂಡು, ಅದರೊಳಗಿಂದ, ಐದು ರೂಪಾಯಿಯ ಹತ್ತು ನೋಟುಗಳನ್ನು ತೆಗೆದುಕೊಂಡು ಕಿಟಕಿಯ ಕಡೆಗೆ ಬಂದಳು.

“ಎಷ್ಟ ಅವs ?”

“ಐವತ್ತು !”

“ಐವತ್ತೇ ? ಹುಂ. ನಾನು ಮತ್ತೆ ಲಗೂನs ಬಂದು ಭೆಟ್ಟಿ ಆಗಬೇಕು ಅಂತs ಇಷ್ಟ ಕೊಟ್ಟೆ ಹೌದ ? ಹಾಂ. ಮರತಿದ್ದೆ ನೋಡು. ಆ ಶ್ರೀಮಂತನ ಹೆಸರು–”

“ಸಾವಳ, ನಿನಗೆ ನನ್ನ ಕೊರಳ ಆಣೆ !”

“ಆ ನಿನ್ನ ರಮಾಕಾಂತಗೆ ಹಾಕು ನಿನ್ನ ಆಣೇನs ! ನಾ ಯೋಳು ವರುಷ ಜೇಲಿಗೆ ಹೋಗಿ ಬಂದೀನಿ–ಇನ್ನು ಏಳು ವರ್ಷ ಹೋಗತೀನಿ–ಫಾಶಿ ಹೋಗತೀನಿ !–”

ಅರ್ಧ ಬಡಬಡಿಸುತ್ತ ಸಾವಳನು ಹೊರಟುಹೋದ. ತನ್ನ ಕೋಣೆಯ ಬಾಗಿಲ ತೆರೆದು ಸುರಂಗೆಯು ರಮಾಕಾಂತನೆಲ್ಲಿರಬಹುದೆಂದು ನೋಡಿದಳು. ಅವನು ಬಹುತರವಾಗಿ ಎಚ್ಚರ ಇರಲಿಕ್ಕಿಲ್ಲ. ಅವಳು ತಿರುಗಿ ಕೋಣೆಯಲ್ಲಿ ಬಂದು ಬಾಗಿಲನ್ನಿಕ್ಕಿಕೊಂಡು ಗಳಗಳ ಅಳತೊಡಗಿದಳು.

* * * * *

ಜೇಲಿನೊಳಗಿಂದ ಹೊರಬಿದ್ದನಂತರ ಸಾವಳನ ಒಂದು ಕೈಯನ್ನು ಬಾಪ್ಪಾ ಅವರು ಮಿತ್ರನಂತೆಯೂ ಎರಡನೇ ಕೈಯನ್ನು ಸುರಂಗೆಯು ಮಡದಿಯುಂತೆಯೂ ಹಿಡಿದುಕೊಂಡು ಹೋಗಿದ್ದರೆ ಆತನು ಮತ್ತೆ ಹೆಂಡದಂಗಡಿಯ ಕಡೆಗೆ ಹೋಗದೆ ಇರಬಹುದಾಗಿತ್ತು. ಆದರೆ ಇವನು ಜೇಲಿನಿಂದ ಹೊರಬಿದ್ದಾಗಿನಿಂದ ಬಾಪ್ಪಾ ಅವರು ತಮ್ಮ ಕೆಲಸದಲ್ಲಿಯೇ ಸುತ್ತಿಕೊಂಡಿದ್ದರು. ರಾಜಕಾರಣದ ಹಳೆಯ ಕೋಳಿತ ಆಟಕ್ಕೆ ಅವರು ಹೇಸಲಿಲ್ಲ. ಹಾಗಾಗುವುದು ಸಾಧ್ಯವೇ ಇರಲಿಲ್ಲ. ಯಾಕೆಂದರೆ ಅವರ ಮೂಗು ಗಾಂಧೀಜಿಯವರ ಕೈಯಲ್ಲಿ ಸಿಕ್ಕಿತ್ತು.



ಗಾಂಧಿಯವರು ಅಂಥ ಹೊಲಸನ್ನು ತಿಳಿದು ಅಲುಗಾಡಿದರೆ ಅವರ ಕೈಯೊಳಗಿದ್ದ ಬಾಪ್ಪಾ ಅವರ ಮೂಗು ಅಲುಗಾಡಬೇಕು ; ಅವರು ಜೇಲಿನಿಂದ ಹೊರಬೀಳುವಾಗ, ಮೊದಲು ಮುಂಬಯಿಗೆ ಹೋಗತಕ್ಕದ್ದು, ತಂಗಿಗೂ ಸುಲೋಚನೆಗೂ ಭೆಟ್ಟಿಯಾಗಿ, ಸ್ವಾತಂತ್ರ್ಯ ದಿನದ ವೇಳೆಗೆ ಕಾನೂನುಭಂಗ ಮಾಡಿ ಮತ್ತೆ ಜೇಲು ಸೇರತಕ್ಕದ್ದು, ಎಂಬ ಕಾರ್ಯಕ್ರಮವನ್ನು ತಮ್ಮ ಮುಂದೆ ಇಟ್ಟುಕೊಂಡಿದ್ದರು. ಆದರೆ ಅವರು ಮುಂಬಯಿಗೆ ಬಂದ ಕೂಡಲೆ ಕಳೆದ ಮಳೆಗಾಲದಲ್ಲಿ ಮಹಾಪೂರಗಳಿಂದ ಕೊಂಕಣದಲ್ಲಿ ಆದ ಅನಾಹುತದ ಸವಿಸ್ತರವಾದ ವೃತ್ತಾಂತವು ಅವರ ಕಿವಿಗೆ ಬಿದ್ದಿತು. ಕೊಂಕಣವು ಅವರಿಗೆ ಜನ್ಮಭೂಮಿ, ಕರ್ಮಭೂಮಿ ಆಗಿದ್ದರಿಂದ ಅದರ ಮೇಲೆ ಅಷ್ಟೊಂದು ಅವರ ಪ್ರೇಮವಿತ್ತು. ಅಲ್ಲಿಯ ಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿಕೊಂಡೇ ಜೇಲಿಗೆ ಹೋಗಬೇಕೆಂದು ಅವರು ಕೊಂಕಣದಲ್ಲಿ ಬಂದರು. ಊರೂರಲ್ಲಿಯೂ ಅವರ ಸ್ವಾಗತವಾಯಿತು. ಸಭೆಗಳೂ ಆದವು. ಕೊಂಕಣ ರಿಲೀಫ ಫಂಡು ತನ್ನ ಕೆಲಸವನ್ನು ಚೆನ್ನಾಗಿ ಮಾಡಿದ್ದನ್ನು ಅವರು ಕಂಡುಹಿಡಿದರು. ಆದರೆ ಕಾನೂನು ಭಂಗ ತೆರೆಗಳು ಮಾತ್ರ ಸುಮ್ಮನೆ ಹಾಯ್ದುಹೋದದ್ದನ್ನು ನೊಡಿ ಅವರ ಮನಸ್ಸು ಉದ್ವಿಗ್ನವಾಯಿತು. ಮೂರು ವರುಷದ ಪೂರ್ವದಲ್ಲಿ ಯಾವ ಊರಲ್ಲಿ ಮೂರು ಸಾವಿರ ಟಕಳಿಗಳು ನೂಲುತ್ತಿದ್ದವೋ ಅದೇ ಊರಲ್ಲಿ ಔಷಧ ಮಾತ್ರಕ್ಕಾದರೂ ಒಂದೂ ಇಲ್ಲ !

ನೂಲಲಿಕ್ಕೆ ರಾಟಿಯ ಮುಂದೆ ಕೂಡುವುದೆಂದರೆ ಹೊಟ್ಟೆಯ ಮೇಲೆ ಕೂಡುವಷ್ಟು ಸುಲಭವೆಂದು ತಿಳಿದು ಚಳವಳಿಯಲ್ಲಿ ಬಿದ್ದ ವಿಲಾಸಿಗಳೂ ನಿರುದ್ಯೋಗಿಗಳೂ ಆದ ಬಿಳಿಯಂಗಿಯ ಹುಡುಗರೂ, ದೊಡ್ಡಸ್ತಿಕೆಗೆ ಆತುರಪಟ್ಟ ಹಿರಿಯರೂ ಆರ್ಡಿನನ್ಸನ ದೊಡ್ಡ ಗುಂಡುಕಲ್ಲು ಕಂಡಕೂಡಲೆ ಎತ್ತಲೋ ಅಡಗಿ ಕುಳಿತಿದ್ದರು.

ಬಡವರು ಬೆವರು ಸುರಿಸುತ್ತಿದ್ದರು ; ಸೆರೆಯನ್ನು ಕುಡಿಯುತ್ತಿದ್ದರು. ಶ್ರೀಮಂತರು ಗಾದಿಗಳಲ್ಲಿ ಹೊರಳಾಡುತ್ತಿದ್ದರು, ಸಭ್ಯರು ಜೂಜು ಆಡುತ್ತಿದ್ದರು. ಕಾಮಾಪುರದ ಕಾರಖಾನೆಯಲ್ಲಿ ದಾದಾ ಅವರು ಕೂಲಿಯ ದರವನ್ನು ಕಡಿಮೆ ಮಾಡುವರೆಂಬುದು ತಿಳಿದಕೂಡಲೆ ಬಾಪ್ಪಾ ಅವರು ಅತ್ತಕಡೆಗೆ ಹೋಗುವವರಿದ್ದರು. ಆದರೆ ಹೀಗೆ ತಿರುಗಾಡುವುದರಲ್ಲಿಯೇ ಅವರ ವೇಳೆಯೆಲ್ಲ ಕಳೆಯಿತು. ಪ್ರತಿಯೊಂದು ಊರು ಬಿಡುವಾಗ ಅವರ ಮನಸ್ಸಿನಲ್ಲಿ ನಿರಾಶೆಯು ನರಿಯ ಕೂಗಿನಂತೆ ಈ ಕೆಳಗಿನ ಎರಡು ಪದ್ಯದಲ್ಲಿ ವರ್ಣಿಸಿದಂತೆ ಆಕ್ರೋಶಿಸುತ್ತಿತ್ತು.

ಎದೆಯ ಮೇಲೆ ಕೈಯನಿಟ್ಟು ಎದೆಯ ನೋವ ಕಳೆಯಬಹುದೆ ?
ಕಡಲಿನಲ್ಲಿ ಎಲ್ಲ ಕಡೆಗು ನೀರು ಕುಡಿಯಲೇನು ಇಹುದೆ ?

ಇಂಥ ಸ್ಥಿತಿಯಲ್ಲಿ ಸಾವಳನು ಜೇಲಿನಿಂದ ಎಂದು ಹೊರಬೀಳುವನೆಂಬುದು ಅವರಿಗೆ ನೆನಪಿನಲ್ಲಿ ಉಳಿಯುವುದು ಹೇಗೆ? ರತ್ನಾಗಿರಿಯ ಚಹದ ಅಂಗಡಿಯ ಹುಡುಗನ ಕೂಡ ಬಡಿದಾಡಿದ ಅನಂತರ ಅವನು ನೇರವಾಗಿ ಮುಂಬಯಿಗೆ ಬಂದನು. ಅವನು ಬಂದದ್ದೆಂದರೆ ರಮಾಕಾಂತನ ನಾಟಕನ ರಂಗತಾಲೀಮಿನ ದಿನವೇ. ಆ ಹೊತ್ತಿನ ದಿವಸ ಅವನಿಗೆ ಸುರಂಗೆಯ

ಭೆಟ್ಟಿಯಾಗುವುದಂತೂ ಶಕ್ಯವಿರಲಿಲ್ಲ. ಎಷ್ಟೋ ವೇಳೆ ಅವನು ಹೊರಗೆ ಹಾಗೇ ದಾರೀ ನೋಡುತ್ತ ಕುಳಿತನು. ಕಡೆಗೆ ಅವನಿಗೆ ದೂರಿನಿಂದಲೇ ಸುರಂಗೆಯು ಮೋಟಾರಿನಲ್ಲಿ ಕೂಡುವುದು ಕಾಣಿಸಿತು. ಅವಳ ನಗೆ, ಅವಳ ವೇಷ, ಅವಳ ಒಯ್ಯಾರ–ಒಂದು ಕ್ಷಣದಲ್ಲಿಯೇ ಸಾವಳನಿಗೆ, ಅವಳ ಮತ್ತು ತನ್ನ ನಡುವೆ ಏಳು ವರುಷಗಳಷ್ಟೇ ಅಲ್ಲ, ಸಪ್ತ ಸಮುದ್ರದಷ್ಟು ಅಂತರವುಂಟಾಗಿದೆ ಎಂದು ತಿಳಿದು ಹೋಯಿತು. ಒಂದೇ ತೆಂಗಿನ ಮರದಿಂದ ತೆಂಗಿನ ಹಾಲೂ ಸೆರೆಯೂ ಹೊರಡುವವು. ಆದರೆ ಸೆರೆಯಿಂದ ಹಾಲನ್ನು ಮಾಡಬಹುದೇ ? ಛೇ! ಪಾತರಗಿತ್ತಿಯು ಹೊಟ್ಟೆಗಿಲ್ಲದೆ ಸಾಯಬಹುದು ; ಆದರೆ ಸೆಗಣಿಯೊಳಗಿನ ಹುಳವಾಗಿ ಬದುಕಲಿಕ್ಕಿಲ್ಲ.

ಕ್ಷಣಾರ್ಧದಲ್ಲಿಯೇ ಆಶಾತಂತುವು ಹರಿದು, ಸಾವಳನು ವ್ಯಸನದ ಕಂದರದಲ್ಲಿ ಪುನಃ ಹೋಗಿ ಬಿದ್ದನು. ಅದೇ ರಾತ್ರಿಯೇ ಅವನು ತನ್ನ ಗುರುತಿನ ಹೆಂಡದಂಗಡಿಗೆ ಹೋಗಿ ತನ್ನ ಮೊದಲಿನ ಮಿತ್ರರೊಂದಿಗೆ ಕೂಡಿಕೊಂಡು, ಇತಿಹಾಸದ ಪುನರಾವೃತ್ತಿಯನ್ನು ಆರಂಭ ಮಾಡಿದನು. ಆದರೆ ಈ ಆವೃತ್ತಿಯು ಕೆಡಿಸಿ ಬೆಳಿಸಿದ್ದಾಗಿತ್ತೆಂಬುದೊಂದೇ ದುರ್ದೈವದ ಮಾತು.

ಮರುದಿವಸ ನಾಟಕಕ್ಕೆ ಅವನು ಬೇಕೆಂತಲೇ ಟಿಕೀಟು ತೆಗೆದುಕೊಂಡು ಹೋದನು. ಆತನ ಹತ್ತಿರವೇ ಕುಳಿತ ಒಬ್ಬ ಪ್ರೇಕ್ಷಕನು ಸುರಂಗೆಯನ್ನು ಕಂಡು 'ಲಕಟಿ' ಹೊಡೆಯ ಹತ್ತಿದ ಕೂಡಲೇ ಆತನ ಕೂಡ ಇವನು ಜಗಳಕ್ಕೆದ್ದನು. ಬಡಿದಾಟ ಆರಂಭವಾಯಿತು. ಬಾಯಿಯಲ್ಲಿ ಹೆಂಡದ ಹೊಲಸು ಇಡುಗಿತ್ತು. ಪೋಲೀಸರು ಸೆರೆಗುಡಕನೆಂದು ಆತನನ್ನು ಥೇಟರಿನ ಹೊರಗೆ ತಳ್ಳಿದರು.

ಎರಡನೇ ದಿವಸ ಅವನು ಸುರಂಗೆಯ ದೂರಿನ ಆಪ್ತನೆಂದು ಅವಳಿಗೆ ಭೆಟ್ಟಿಯಾಗಲಿಕ್ಕೆ ಹೋದನು. ಆತನ ಬಾಯಿಯಿಂದ ಹೆಂಡದ ನಾತ ಬರುತ್ತಿತ್ತು. ಆತನ ದೃಷ್ಟಿಯಲ್ಲಿ ಕ್ರೂರತನ ಸಂಚರಿಸಿತ್ತು. ಆದದ್ದರ ಬಗ್ಗೆ ಕ್ಷಮೆ ಬೇಡುವುದಂತೂ ದೂರವೇ ಉಳಿಯಿತು. "ಕಾಮಾಪುರದ ಕೋಣನಂತೆ ನಿನ್ನನ್ನು ತುಂಡು ಮಾಡುವೆ" ಎಂದು ಅವಳಿಗೆ ಅಂಜಿಸುವದಕ್ಕೆ ಕೂಡ ಅವನು ಹಿಂಜರಿಯಲಿಲ್ಲ. ಅಂಥ ವಿಷವನ್ನೇ ಅವನ ಕಿವಿಗಳಲ್ಲಿ ಆತನ ಮಿತ್ರರು ಸುರುವಿದ್ದರು. ಚಿಲ್ಲರೆ ಜನರೆಲ್ಲರೂ ಮ್ಯಾನೇಜರ ಮತ್ತು ಸುರಂಗೆ ಇವರಿಬ್ಬರ ವಿಷಯದಲ್ಲಿ ಇಲ್ಲದ ಸಲ್ಲದ ಸಂಗತಿಗಳನ್ನೆಲ್ಲ ಉಪ್ಪುಕಾರ ಹಚ್ಚಿ ಹೇಳಿದ್ದರು. ಇದಲ್ಲದೆ ಸುರಂಗೆಯೇ ಅವನ ಕೂಡ ಇರಲಿಕ್ಕೆ ಅಲ್ಲಗಳೆದಿದ್ದಳು.

ಕಳೆದ ಆರೇಳು ವರುಷಗಳಲ್ಲಿ ಅವಳ ಆಯುಷ್ಯವು ಸುಖವಿಲಾಸಗಳಲ್ಲಿ 'ನಾಜೂಕು' ನಟನೆಗಳಲ್ಲಿ ಕಳೆದದ್ದರಿಂದ ಸಾವಳನು ತನ್ನ ಗಂಡನೆಂದು ತೋರಗೊಡುವದಕ್ಕಿಂತ ಜೀವ ಕೊಡುವುದು ಲೇಸೆಂದು ಅವಳಿಗೆ ತೋರಿತು. ಇಂಥ ಉದ್ಗಾರಕ್ಕೆ ಸಾವಳನು ಅವಳ ಕುತ್ತಿಗೆಯನ್ನು ಹಿಸುಕಿಯೇ ಅವಳಿಗೆ ಉತ್ತರ ಕೊಡಬಹುದಾಗಿತ್ತು. ಆದರೆ ಸುರಂಗೆಯು ಅಂಜಿ ಚೀರಿದರೆ ಕಂಪನಿಯಲ್ಲಿಯ ಜನರು ಧಾವಿಸಿ ಬರಬಹುದೆಂದೊ, ಆತನ ಮಿತ್ರರು



ಅವನಿಗೆ ಒಂದು ಕಿವಿಮಂತ್ರವನ್ನು ಊದಿ ಕಳಿಸಿದ್ದರೆಂದೊ ಅವನು ಸುಮ್ಮನಿದ್ದನು. ಸುರಂಗೆಯ ತನ್ನ ಕೂಡ ಇರಲೊಪ್ಪದಿದ್ದರೆ, ಹೆದರಿಕೆಯಿಂದಾದರೂ ತನಗೆ ಮೇಲಿಂದ ಮೇಲೆ ಹಣವನ್ನು ಕೊಡುವಳೆಂಬುದು ಅವನಿಗೆ ನಂಬಿಗೆಯಾಯಿತು. ತಾನು ಬಾಯಿ ಮುಚ್ಚಲಿಕ್ಕೆ ಒಪ್ಪಿದ ಕೂಡಲೆ ಅವಳು ನೂರು ರೂಪಾಯಿ ತೆಗೆದು ಕೈಯಲ್ಲಿಟ್ಟಳು. ಹೋಗು ಹೋಗುವ ಮುಂದೆ ಏನಾದರೊಂದು ಒಳ್ಳೇ ಉದ್ಯೋಗ ಮಾಡಬೇಕೆಂದು ಅವಳು ಅವನಿಗೆ ಸೂಚಿಸಿದ್ದಳು. ಆದರೆ ಅವನು "ನನಗ ಯಾಕ ಬೇಕು ಧಂದೆ? ನಿನ್ನ ಜೀವದ ಮ್ಯಾಗ–" ಎಂದು ವಿಕಟ ಹಾಸ್ಯ ಮಾಡುತ್ತ "ರೊಕ್ಕ ಇಲ್ಲ ಅನ್ನಲಾ–ಕಾಮಾಪುರದ ಜಾತ್ರೀsss" ಎಂದಿದ್ದನು.

ಈ ಶಬ್ದಗಳ ಉಚ್ಚಾರದ ಕೂಡ ಸಾವಳನು ಮಾಡಿದ ವಿಕಟವಾದ ಹಾವಭಾವಗಳ ಮೂಲಕ, ಅವನು ಹಾದಿಗೆ ಹೋಗಿ ಕೂಡುವಷ್ಟರಲ್ಲಿಯೆ ಸುರಂಗೆಯು ಮೂರ್ಛಿತಳಾಗಿ ಬಿದ್ದಳು. ಮುಂಬಯಿಯಂಥ ಪಟ್ಟಣದಲ್ಲಿ ವ್ಯಸನಿಯಾದ ಮನುಷ್ಯನ ನೂರು ರೂಪಾಯಿಗಳು ಪುಡಿ ಪುಡಿಯಾಗಲಿಕ್ಕೇನು ವರ್ಷಗಳು ಬೇಕೆ ? ರೊಕ್ಕ ತೀರಿದ ಕೂಡಲೇ ಅವನು ಮತ್ತೆ ಕಂಪನಿಯ ಬಿಡಾರಕ್ಕೆ ಹೋದ. ಆದರೆ ಅವಳು ಹವೆ ಬದಲಾಯಿಸುವುದರ ಸಲುವಾಗಿ ಬೆಳಗಾಂವಿಗೆ ಹೋದ ಸಂಗತಿಯು ಅವನಿಗೆ ಒಬ್ಬ ಸೇವಕನಿಂದ ತಿಳಿಯಿತು. ಅಲ್ಲಿಂದ ಬೆಳಗಾಂವಿಗೆ ಬಂದು, ಅವಳ ಬಂಗಲೆಯಲ್ಲಿ ಒಬ್ಬ ಸೇವಕನ ಗುರುತು ಮಾಡಿಕೊಂಡು ರಾತ್ರಿ ವೇಳೆಯಲ್ಲಿ ಮತ್ತೆ ಕಿಟಕಿಯ ಹತ್ತಿರ ಅವಳಿಗೆ ಗಂಟುಬಿದ್ದನು.

ಎರಡನೇ ದಿವಸ ಸಂಜೆಗೆ ಸಾವಳನು ಸುರಂಗೆಯ ಬಂಗಲೆಯ ಕಡೆಗೆ ಹೊರಟ. ಆತನ ಕಿಸೆಯಲ್ಲಿ ರೊಕ್ಕವಿದ್ದರೂ ಮನಸ್ಸು ಶೂನ್ಯವಾಗಿತ್ತು. ಕಳೆದ ರಾತ್ರಿಯಲ್ಲಿ ಸುರಂಗೆಯ ಮಾತುಗಳ ಮೇಲಿಂದ ಆತನ ಮನಸ್ಸಿನಲ್ಲಿ ಬೇರೆ ವಿಚಾರಗಳೇ ಬರತೊಡಗಿದವು. ಯಾವನಾದರೊಬ್ಬ ಶ್ರೀಮಂತನು ತುಳಸಿಗೆ ಮೋಸಮಾಡಿ ಮನೆಯ ಹೊರಗೆ ಕರೆದೊಯ್ದಿರಲಿಕ್ಕೇ ಬೇಕು. ಇಲ್ಲದಿದ್ದರೆ, ತನ್ನೊಡನೆ ಸಂಸಾರ ಮಾಡಲಿಕ್ಕೆ ಅವಳು ಎಂದಿಗೂ ಅಲ್ಲಗಳೆಯುತ್ತಿರಲಿಲ್ಲ. ಸಿರಿವಂತರ ಮೇಲೆ ಆತನದು ಎಷ್ಟೊಂದು ಸಿಟ್ಟು ! ಬಡವರಿಗೆ ಅನ್ನ ಕೊಡುವುದಂತೂ ದೂರವೇ ! ತಿರುಗಿ ಅವರ ಸುಖವನ್ನು ಮಣ್ಣುಗೂಡಿಸುವರು ! ತುಳಸಿಯನ್ನು ಮನೆಯಿಂದ ಹೊರಗೆಳೆದ ಆ ಶ್ರೀಮಂತನ ಮೇಲೆ ಸೇಡು ತೀರಿಸಲೇ ಬೇಕೆಂದು ಅವನಿಗೆನಿಸಿತು. ಆದರೆ ಅವನು ಯಾರೆಂಬುವುದು ಹೇಗೆ ಗೊತ್ತಾಗಬೇಕು ? ತಾನು ತನ್ನ ಊರಿಗೆ ಹೋದರೆ ? ಅದಕ್ಕಿಂತಲೂ ತುಳಸಿಗೆ ಸ್ವಲ್ಪ ಬೆದರಿಸಿದರಾಯಿತು. ಅವನ ಮೇಲೆ ಸೇಡು ತೀರಿಸಿಕೊಂಡರೆ, ಅವಳಿಗಾದರೂ ಸ್ವಲ್ಪ ಆನಂದವಾಗಬಹುದು. ಸುರಂಗೆಯ ವಿಷಯದಲ್ಲಿ ನಿರಾಶೆ ಮತ್ತು ಸೆರೆ ಕುಡಿಯಲಿಕ್ಕೆ ಸಾಕಷ್ಟು ಹಣ ಇವೇ ಆತನ ಸೇಡಿನ ಕಲ್ಪನೆಯ ಮೂಲಗಳಾಗಿದ್ದವು.

ಬಂಗಲೆಯ ಕಿಟಕಿಗಳೆಲ್ಲವೂ ಮುಚ್ಚಿದ್ದನ್ನು ನೋಡಿ ಆಶ್ಚರ್ಯವೆನಿಸಿತು. ಸೇವಕ ಇರುವ ಸ್ಥಳಗಳ ಕಡೆಗೆ ಹೋಗಿ ತನ್ನ ಮೊದಲನೇ ದಿವಸದ ಮಿತ್ರನನ್ನು ಕುರಿತು

"ಬಾಯಿಯವರು ಎಲ್ಲಿ ಹೋಗ್ಯಾರ?" ಎಂದು ವಿಚಾರಿಸಿದ.

"ಅಂಬೋಲಿಗೆ !"

"ಯಾತಕ್ಕ ?"

"ನೋಡಲಿಕ್ಕೆ !"

"ಒಬ್ಬರs ?"

"ರಾಧಾನ ಕೂಡ ಕೃಷ್ಣ ಇರಾವನs ಅಲ್ಲಪಾ !"

"ಎರಡನೇ ಗವಳಿಗೇರಾಕೀನೂ ಹೋಗ್ಯಾಳೇನ?" ಸಾವಳನು ನಿರ್ವಿಕಾರ ಮುದ್ರೆಯಿಂದ ಪ್ರಶ್ನೆಮಾಡಿದ.

"ಹೌದು. ಕೊಂಕಣದಾಗ ಐತಿ ಅಂತ ಆಕಿ ಮನಿ. ಕಾಮಾಪೂರೋ ಘಾಮಾಪೂರೋ ಅಂತಾರ ಅದಕ. ಅಲ್ಲಿ ಒಂದು ದೊಡ್ಡ ಜಾತ್ರಿ ಆಗತೈತಿ. ನಮಗೂ ಐತಿ ಅಲ್ಲಿಗೆ ಔತನ."

ಇಷ್ಟರಲ್ಲಿ ಬಂಗಲೆಯ ಮುಂದಿನ ಅಂಗಳದಲ್ಲಿ ಆಡುವ ಒಬ್ಬ ಹುಡುಗನ ಕಡೆಗೆ ಸಾವಳನ ಲಕ್ಷ್ಯವು ಹೋಯಿತು. ಆ ಹುಡುಗನ ಹತ್ತಿರವೇ ಒಬ್ಬ ಮುದುಕಿ ಕುಳಿತಿದ್ದಳು. ಸಾವಳನು ಕೇಳಿದ–

"ಆ ಹುಡುಗ ಯಾರದು ಇದೂs ?"

"ದೇವರಿಗೇ ಗೊತ್ತು !"

ಸಾವಳನು ಸಂಶಯದ ದೃಷ್ಟಿಯಿಂದ ಅವನ ಕಡೆಗೆ ನೋಡಿದ. ಅವನು ತನ್ನಿಂದ ಏನಾದರೂ ಬಚ್ಚಿಡಹತ್ತಿದ್ದಾನೆಂದು ಅವನಿಗೆ ಅನಿಸಿತು.

"ಯಾರ ಕಡೆ ಬಂದೈತಿ ಅದು ?"

"ಬಾಯಿಯವರ ಕಡೆ"

"ಎಲ್ಲೀದ ?

"ಕೊಂಕಣದಿಂದ."

"ಮತ್ತ ಅವರರ ಅಂಬೋಲಿಗೆ ಹೋಗಿದಾರ !"

"ಯಾವದರ ಮುದುಕಿ ಒಂದು ಹುಡುಗನ ಕರಕೊಂಡು ಬಂದರ ಎಡ್ಡ ದಿವಸ ಇಟಗೊಳ್ಳಾಕ ಹೇಳಿದಾರ ಅವರು!"

"ಬಾಯವರಿಗೆ ಆ ಹುಡುಗನ ಕೂಡ ಏನ ಮಾಡೂದೈತಿ ?"

"ಒಳೇ ಹೇಳತೀ ನೀನೂs ? ಮದಿವಿ ಆಗಿಲ್ಲಾ ಅಂದರ ಹುಡುಗೂರು ಬ್ಯಾಡ ಆಗತಾವ ಏನ ಯಾರಿಗಾರs ?"

ಕೈಯೊಳಗಿನ ಚಿಲುಮೆಯ ಮೇಲೆ ಕೆಂಡ ಇಡುತ್ತ ಅವನು ಉದ್ಗಾರ ತೆಗೆದ. ಕೂಡಲೆ ಒಂದು ಝುರಕಿ ಎಳೆದು ಮೂಗಿನೊಳಗಿಂದ ಹೊಗೆ ಹೊರಗೆ ಬಿಟ್ಟ. ಸಾವಳನ ಕೈಯೊಳಗೆ ಚಿಲುಮೆ ಕೊಡಬೇಕೆಂದು ಕೈ ಮುಂದೆ ಮಾಡುವಷ್ಟರಲ್ಲಿ, ಒಂದು ಶಬ್ದ ಕೂಡ ಮಾತಾಡದೆ ಅವನು ಅಲ್ಲಿಂದ ಹೊರಟ. ಕೈಯ ಹೆಬ್ಬೆರಳೂ ಅದರ ಹತ್ತಿರದ ಬೆರಳೂ ಕೂಡಿಸಿ ತನ್ನ



ಮುಂಗೈ ಅಲ್ಲಾಡಿಸಿ, ಆ ನೌಕರನು ಅವನ ವಿಷಯದ ತನ್ನ ಅಭಿಪ್ರಾಯವನ್ನು ವ್ಯಕ್ತಮಾಡಿದ.

ಸಾವಳನು ಬಂಗಲೆಯ ಹತ್ತರ ಬಂದಾಗ ಆ ಹುಡುಗನು ಮುದುಕಿಯ ಮೊಳಕಾಲಿಗೆ ತಬ್ಬುತ್ತ ಕೇಳುತ್ತಿದ್ದ "ಅಜ್ಜೀ, ಅವ್ವ ಎಲ್ಲಿ ಹೋಗ್ಯಾಳ ?"

"ಅಂಬೋಲಿಗೆ."

"ಎಲ್ಯದ ಆ ಅಂಬೋಲಿ?"

"ಸುಮ್ಮನಿರೊ ಖೋಡಿ" ಎಂದು ಕಾಶಿಯು ಅವನನ್ನು ಬೆದರಿಸಿದಳು. ಸೋನ್ಯಾ ಸಮೀಪದಲ್ಲಿ ಬಂದ ಸಾವಳನ ಕಡೆಗೆ ದಿಟ್ಟಿಸಿ ನೋಡುತ್ತಿದ್ದ. ಸಾವಳನು ಕಾಶಿಗೆ ಕೇಳಿದ– "ತುಳಸೀದೇನ ಈ ಹುಡುಗ ?"

ಕಾಶಿಗೆ ಆಶ್ಚರ್ಯವಾಯಿತು. ಸುರಂಗೆಯನ್ನು ಏಳು ವರ್ಷದ ಪೂರ್ವದ ತುಳಸಿ ಎಂಬ ಹೆಸರಿನಿಂದ ಗುರುತು ಹಿಡಿಯಬಲ್ಲವನು ಇವನು ಯಾರೆಂಬ ವಿಚಾರದಲ್ಲಿದ್ದಳು ಅವಳು. ಸಾವಳನು ಕೊಂಕಣಿ ಭಾಷೆಯಲ್ಲಿ ಅದೇ ಪ್ರಶ್ನೆ ಮಾಡಿದ. ಒಮ್ಮೆಲೆ ಸೋನ್ಯಾ ಉತ್ತರಕೊಟ್ಟ "ತುಳಸಿಯ ಮಗ ಅಲ್ಲ ನಾ ! ನನ್ನ ಅವ್ವನ ಹೆಸರು ಮಿಸ್ ಸುರಂಗಾ !"

ಅವನನ್ನು ಸುಮ್ಮನಿರಿಸುತ್ತ ಕಾಶಿಯು "ಗಪ್ ಕೂಡೂದಿಲ್ಲೇನೋ ಸೋನ್ಯಾ ? ಆಡಲಿಕ್ಕೆ ಹೋಗು ಅತ್ತ ನೋಡೋಣ ಆಂ. ಅದು ನೋಡು ಮೋಟಾರು ಬಂತು" ಅಂದಳು.

ಮೋಟಾರು ನೋಡುವ ಸಲುವಾಗಿ ಸೋನ್ಯಾ ಗೇಟಿನ ಕಡೆಗೆ ಓಡಿದ. ಪಾವಟಿಗೆಯ ಮೇಲೆ ಕೂಡುತ್ತ ಕೂಡುತ್ತ ಸಾವಳನು ಅಂದ– "ತುಳಸಿ ಹೋಗ್ಯಾಳ ಅಂಬೋಲಿಗೆ."

"ಹುಡುಗನ ಕರಕೊಂಡ ಬಾ ಅಂತ ಪತ್ರ ಬರದಿದ್ಲು."

"ಹಗಲೆಲ್ಲಾ ನಿನ್ನ ಹತ್ಯಾಕ ಇರತಾನ ಏನ ಇವ?"

"ಹೌದು. ಊರ ಊರ ತಿರಗಬೇಕ ಆಗತೈತಿ ಆಕಿಗೆ ಮತ್ತ–"

"ಇವನ ಸಲುವಾಗಿ ನಾಚಿಕೆ ಬರತೈತಿ ! ಹೌದಲ್ಲ ?"

"ಅಂತs ದೂರ ಇಟ್ಟಾಳ ಹುಡಗನ್ನ."

"ದೊಡದೊಡ ಮಂದ್ಯಾಗ ಹೋಗಬೇಕಾಗತತಿ ಆಕೀಗೆ–ಮತ್ತ ಹಡದಾಳ ಅಂತ ಅಂದರ–ಮತ್ತ ಇಷ್ಟಾಗಿ, ಆ ಕಂಪಣಿ ಮ್ಯಾನೇಜರ ಹಟಾನ ಹಿಡಿದ, ಹುಡಗನ್ನ ದೂರ ಇಡಲಾಕ ಬೇಕ ಅಂತ !"

"ಆದರ ಇದು ಎಲ್ಲಾ ಎಲ್ಲೀದು ಸುರೂ ಆತು?"

ಕಾಶಿಯು ಅವನ ಕಡೆಗೆ ದಿಟ್ಟಿಸಿ ನೋಡಹತ್ತಿದಳು. ಸಾವಳನು ಕಿಸೆಯೊಳಗೆ ಕೈಹಾಕಿ ಒಂದು ಐದು ರೂಪಾಯಿ ನೋಟು ತೆಗೆದು ಅವಳ ಕೈಯಲ್ಲಿಟ್ಟ. ನೋಟು ಎಂಥಾದು ಅದು? ಮುದುಕಿಯ ಬಾಯಿ ಬೀಗಕ್ಕೆ ನಡೆಯುವ ಕೀಲಿ ಕೈಯೆ ಆಗಿತ್ತು ! ಅತ್ತಿತ್ತ ನೋಡುತ್ತ ಕಾಶಿಯು ಹೇಳಿದಳು: "ತುಳಸಿ ನನಗ ಕೊರಳ ಆಣೀ ಹಾಕ್ಯಾಳ ! ಮತ್ತ ಯಾರಿಗೂ ಗೊತ್ತಿಲ್ಲ ಈ ಸುದ್ದಿ !"

ಹಾಕಿದ ಆಣೆಗೆ "ಒಳಿತು" ಅನ್ನುವಂತೆಯೆ ಏನೋ ಮತ್ತೊಂದು ನೋಟು ತೆಗೆದು ಸಾವಳನು ಅವಳ ಕೈಯಲ್ಲಿಟ್ಟ. ಮುದುಕಿ ಒಮ್ಮೆಲೆ ಮಾತಿಗಾರಂಭಿಸಿದಳು. ಭಯಭೀತ ದೃಷ್ಟಿಯಿಂದ ಅತ್ತಿತ್ತ ನೋಡುತ್ತ ಏಳೆಂಟು ವರ್ಷದ ಪೂರ್ವದ ಎಲ್ಲ ಸುದ್ದಿ ಹೇಳಿದಳು. ತಾನು ಬೆಳಗಾಂವಿಯಲ್ಲಿಯ ಒಂದು ಫರಾಳದ ಅಂಗಡಿಯಲ್ಲಿ ಕೆಲಸಗಿತ್ತಿಯಾಗಿ ಇದ್ದಳು. ಒಂದು ದಿವಸ ತುಳಸಿಯು ಏನನ್ನೋ ಕೊಳ್ಳುವ ಸಲುವಾಗಿ ಅಲ್ಲಿಗೆ ಬಂದಳು. ಅವಳ ಮಾತು ಕೇಳಿ ತಾನೂ ಹೊರಗೆ ಬಂದಳು. ಮೊದಲೇ ನಕ್ಷತ್ರದಂಥ ರೂಪ, ಅದರಲ್ಲಿ ಬೆಳೆದ ಬಸಿರು ! ಮೈಮೇಲಿನ ಬಟ್ಟೆ ಹರಿದಿದ್ದರೂ ಸಹ ಆಕೃತಿ ಕಣ್ಣು ತುಂಬುವಂತೆ ಇತ್ತು. ಅವಳು ತನ್ನ ಕರ್ಮಕಥೆಯ ಪುರಾಣವನ್ನು ಬಿಚ್ಚಿದಳು. ತನಗೆ ಕರುಣೆ ಬಂದಿತು. (ಸಾವಳನಿಗೆ ಅನಿಸಿತು : ಅವಳ ಸಲುವಾಗಿ ಅಂದರೆ ಅವಳ ಹತ್ತಿರದ ಹಣದ ಸಲುವಾಗಿಯೇ ಕರುಣೆ ಬಂದಿರಬಹುದೆಂದು.) ಮುಂದೆ ಹೆರಿಗೆಯಾದನಂತರ ತನ್ನ ಕೂಡ ಕೆಲಸಕ್ಕೆ ಬರಹತ್ತಿದಳು. ತನ್ನ ಅಂಗಡಿಯ ಮಾಲಕನಿಗೆ ನಾಟಕದ ಹುಚ್ಚು ವಿಶೇಷವಾಗಿತ್ತು. ಅಷ್ಟರಲ್ಲಿ ಅಲ್ಲಿ ಒಂದು ಕಂಪನಿ ಬಂದಿತು. ಅದರ ಮಾಲಕನು ಒಕ್ಕಲಗಿತ್ತಿಗಾಗಿ ಕೇಳಿದ. ತನ್ನೊಡನೆ ಸುರಂಗೆಯಾದರೂ ಕಂಪನಿಯಲ್ಲಿ ಬರತೊಡಗಿದಳು. ಆ ಮ್ಯಾನೇಜರನು ಬೀಸುವ ಕಲ್ಲಿನ ಅವಳ ಹಾಡು ಕೇಳಿದ, ಅವಳ ರೂಪವನ್ನು ಕಂಡ–

ಸಾವಳನಿಗೆ ಮುದುಕಿಯ ರಗಳೆ ಪುರಾಣವು ತೀರ ಅಸಹ್ಯವಾಯಿತು. ಅವನು ಕೇಳಿದ : "ಅವಳನ್ನು ಮೊದಲು ಮನ್ಯಾಗಿಂದ ಹೊರಗೆ ಯಾರ ಹಾಕಿದರು?"

"ದಾದಾ ಅವರು."

"ದಾದಾ ಯಾವ?" ಸಾವಳನ ಧ್ವನಿಯು ಕಠೋರವಾಗಿತ್ತು.

"ಕಾಮಾಪುರದ ದಾದಾ."

"ಗ್ವಾಡಂಬಿ ಕಾರಖಾನೆದವನs ?"

"ಹೌದು. ತಲಿಯಿಂದ ತಲಿಗೆ ಬಂದ ಭಾರಿ ನೀಚತನ ಅದು. ಅವರ ಅಪ್ಪ ನನ್ನ ಗಂಡನ್ನ–"

ಆದರೆ ಸಾವಳನಿಗೆ ಮುದುಕಿಯ ಆತ್ಮಚರಿತ್ರೆಯನ್ನು ಕೇಳುವ ಮನಸ್ಸಿರಲಿಲ್ಲ.

"ನೀ ಎಲ್ಲಿ ಇರತೀ?"

"ಕಾಮಾಪುರದಾಗ. ಮನ್ಯಾಗ ದೀವಿಗಿ ಹಚ್ಚತೇನಿ. ಅಂತೂ ಹೋದ ಐದು ವರ್ಸ."

"ನಿನ್ನ ಮನಿ ಎಲ್ಲಿ ಐತಿ ?"

"ಕೇರೀ ಮಗ್ಗಲಿಗೆ."

ಸಾವಳನು ಮೇಲಕ್ಕೆ ನೋಡಿದ. ಬೆಳಕಿನ ಆಳಿಕೆ ಮುಗಿದು ಸಾವಕಾಶವಾಗಿ ಕತ್ತಲೆಯು ಪೃಥ್ವಿಯನ್ನು ಮುಸುಕುತ್ತಿತ್ತು. ಅವನ ಸಂತಪ್ತ ಮನಸ್ಸಿನ ಪ್ರತಿಬಿಂಬವೇ ಇತ್ತೋ ಏನೋ ಅದು !



## ೧೨
## ಮಧ್ಯರಾತ್ರಿ – ಮಧ್ಯಾಹ್ನ

ಮುಂಜಾನೆ ಮೋಟಾರಿನಿಂದ ಅಂಬೋಲಿಗೆ ಬಂದಾಗ ಸುರಂಗೆಯು ತೆಪ್ಪಗಾಗಿದ್ದಳು. ಆದರೆ ಸೂರ್ಯನು ಮೇಲಕ್ಕೇರಿದಂತೆ ಅಂಬೋಲಿಯು ಮಂಜಿನ ಮುಸುಕಿನೊಳಗಿಂದ, ಅವಳ ಮನಸ್ಸು ಉದಾಸೀನತೆಯೊಳಗಿಂದ ಹೊರಬಿದ್ದವು.

"ಸಂಜೆಗೆ ನಾವು ಬಹಳ ದೂರ ತಿರುಗಾಡಲಿಕ್ಕೆ ಹೋಗೋಣ" ಎಂದು ಸುರಂಗೆಯು ಅಂದಾಗ ರಮಾಕಾಂತನಿಗೆ ನಗು ಬಂದದ್ದು ಇದಕ್ಕಾಗಿಯೇ.

"ನಗಲಿಕ್ಕೆ ಏನಾಯಿತು?" ಅವಳು ಕೇಳಿದಳು.

"ಮಂಜು ಕರಗಿತು."

"ಮತ್ತೆ ಸಂಜೆಯು ಕಡೆಗೆ ಮುಸುಕುವದಿಲ್ಲವಲ್ಲ" ಎಂದು ಸುಲೋಚನೆ ಪ್ರಶ್ನೆಮಾಡಿದಳು.

"ಅದನ್ನು ಈ ಜೀವಂತ ಅಂಬೋಲಿಗೆ ಕೇಳು" ಎಂದು ಸುರಂಗೆಯ ಕಡೆಗೆ ಕೈ ಮಾಡುತ್ತ ರಮಾಕಾಂತನು ಉದ್ಗಾರ ತೆಗೆದ.

ಸುಲೋಚನೆಯು ಸುರಂಗೆಯ ಕಡೆಗೆ ನೋಡಿ ನಗುತ್ತ "ನಿರ್ಜೀವ ಅಂಬೋಲಿ ಬೇಸಿಗೆಯಲ್ಲಿ ಕೂಡ ತಂಪಾಗಿರುತ್ತದೆ."

"ಆದರೆ ಇದು ಮಾತ್ರ ಚಳಿಯ ದಿವಸದಲ್ಲಿ ಕೂಡ ಬೆಚ್ಚಗೆ ಇರುತ್ತದೆ."

ಮಧ್ಯಾಹ್ನದ ಊಟ ಮುಗಿಯುವಷ್ಟರಲ್ಲಿಯೇ ಬಾಗಿಲಲ್ಲಿ ಬಾಪ್ಪಾ ಮತ್ತು ವಿದ್ಯಾಧರರು ಧುತ್ತೆಂದು ಹಾಜರಾಗಿದ್ದರು. ಸುಲೋಚನೆಯ ಮನಸ್ಸಿನಲ್ಲಿ ಮೊದಲು ಆಶ್ಚರ್ಯ, ಆಮೇಲೆ ಆನಂದದ ತೆರೆಗಳು ಎದ್ದವು.

"ಹೀಗೆ ಹೇಗೆ ತಪ್ಪದೆ ಬಂದಿರಿ ನೀವು ಬಾಪ್ಪಾ?"

"ಒಳ್ಳೇ ಗುಪ್ತಪೋಲೀಸನಾಗಬಹುದಾಗಿತ್ತಲ್ಲವೇ ನಾನು ?"

"ಹಾಗಾಗಿದ್ದರೆ ನೀವು ಉಟ್ಟ ಪಂಚೆಗೆ ಒಡೆಯರು ಯಾರು ಸಿಗುತ್ತಿದ್ದರು?"

"ಮಾಡು ಚೇಷ್ಟೆ ! ಆದರೆ ನಿನ್ನನ್ನು ಕಾಮಾಪುರಕ್ಕೆ ಕರೆದೊಯ್ಯುವದರ ಸಲುವಾಗಿಯೇ ನಾನು ಈಗ ಬಂದೆ !"

"ದಾದಾ ಬಹಳ ಸಿಟ್ಟಿಗೆದ್ದಿರಬಹುದಲ್ಲವೆ? ಮೊನ್ನೆ ಬರೆದ ಅವರ ಪತ್ರದಲ್ಲಿಯಂತೂ ಎಣಿಸಿ ಎರಡೇ ಸಾಲುಗಳಿದ್ದವು."

"ಎಲ್ಲಿಯಾದರೂ ನಿನ್ನ ಸಲುವಾಗಿ ವರ ನೋಡುವ ಗಡಿಬಿಡಿಯಲ್ಲಿ ಇದ್ದಾರೆ ದಾದಾ ಈಗ !"

ಎಲ್ಲರೂ ಆಶ್ಚರ್ಯದಿಂದ ನೋಡತೊಡಗಿದರು. ಸುಲೋಚನೆಯು ಸಿಟ್ಟಿನ ಸೋಗಿನಿಂದ ಕೇಳಿದಳು.

"ಯಾರದು ಮದುವೆ ? ನನ್ನದೇ ?"

"ಹೌದು ನಿನ್ನದೇ. ಈಗ ಅವರ ಮದುವೆಯೇನೂ ಆಗಬೇಕಾಗಿಲ್ಲ ! ನನ್ನದೂ ಆಗಬೇಕಾಗಿಲ್ಲ ! ನಿನ್ನ ಲಗ್ನದ ಸಲುವಾಗಿ ಕಾರಖಾನೆಯನ್ನು ಬಂದುಮಾಡಿರುವರು ಈಗ."

"ಅಂದರೆ ?"

"ಈಗೇನೂ ವಿಶೇಷ ಲಾಭ ಇಲ್ಲ. ಕಾರಖಾನೆಯ ಕೆಲಸದಲ್ಲಿ ಹಾನಿಯಿಂದ ಹಾಗೇ ನಡೆಸಬೇಕೆಂದರೆ ನಿನ್ನ ಲಗ್ನದ ಸಲುವಾಗಿ ಕಾದಿಟ್ಟ ಹಣ ವೆಚ್ಚಮಾಡಬೇಕಾಗುತ್ತದೆ."

ವಿದ್ಯಾಧರನ ಕಡೆಗೆ ನೋಡುತ್ತ ಸುಲೋಚನೆಯು ಕೇಳಿದಳು :

"ವಿದ್ಯಾಧರ, ಗಾಂಧೀಜಿಯವರಲ್ಲಿ ಸತ್ಯ, ಅಸ್ತೇಯ ಮುಂತಾದ ತತ್ತ್ವಗಳು ಇವೆಯಲ್ಲವೆ?"

"ಹೌದು."

"ಅದರಲ್ಲಿ ಇನ್ನೊಂದು ಹೆಚ್ಚಿಗೆ ಕೂಡಿಸಬೇಕಾಯಿತು."

"ಯಾವದು ?"

"ಚೇಷ್ಟೆ."

ಮಧ್ಯಾಹ್ನದ ಚಹದನಂತರ ಎಲ್ಲರೂ ತಿರುಗಾಡಲಿಕ್ಕೆ ಹೊರಬಿದ್ದರು. ಸುಲೋಚನೆಯು ಈ ಮೊದಲೆ ಬಿಸಿಲುಗಾಲದಲ್ಲಿ ಒಂದೆರಡು ಸಲ ಅಂಬೋಲಿಗೆ ಬಂದು ಹೋದವಳಾಗಿದ್ದರಿಂದ ಅವಳಿಗೆ ಅಲ್ಲಿಯ ದಾರಿಗಳೆಲ್ಲವೂ ಪರಿಚಿತವಾಗಿದ್ದವು. ಎಲ್ಲರಿಗೂ ಮುಂದೆ ಸುಲೋಚನೆ– ವಿದ್ಯಾಧರರು, ಆಮೇಲೆ ಸುರಂಗೆ–ರಮಾಕಾಂತರು, ಕಟ್ಟಕಡೆಗೆ ಬಾಪ್ಪಾ ಅವರು,–ಈ ಪ್ರಕಾರವಾಗಿ ಎಲ್ಲರೂ ನಡೆದಿದ್ದರು. ಅದೇ ಮಧ್ಯಾಹ್ನದ ಮೂರು ಗಂಟೆಯಾಗಿ ಹೋಗಿತ್ತು. ಹವೆಯಲ್ಲಿಯ ಬಿಸಿಲು ಚಳಿಗಳ ಸಮ್ಮಿಶ್ರಣವು ಆಹ್ಲಾದಕರವಾಗಿತ್ತು. ಗಾಳಿಯಿಂದ ಅಲ್ಲಾಡುವ ಗಿಡಗಳು ಆನಂದದಿಂದ ಕುಣಿಯುವವೆಂದು ಅನಿಸುತ್ತಿತ್ತು. ಜನರ ಹೆಜ್ಜೆ ಸಪ್ಪಳ ಕೇಳಿದೊಡನೆಯೆ ಅಲ್ಲಿಯೇ ಮೇಯುತ್ತಿರುವ ಆಡುಗಳು ದೂರದಲ್ಲಿ ಜಿಗಿದು ಹೋಗುತ್ತಿದ್ದವು. ಅವುಗಳ ಮೊಂಡ ಬಾಲಗಳೂ, ಸಣ್ಣ ಮೋರೆಗಳೂ, ಓಟದ ಚಪಲತೆಯೂ ಮನೋಹರವಾಗಿದ್ದವು. ಪಕ್ಷಿಗಳ ಮಧುರವಾದ ಕಿಲಕಿಲಾಟವು ಒಂದೇ ಸವನೆ ಕೇಳಬರುತ್ತಿತ್ತು. ಆದರೆ ಗುಜುಗುಡುತ್ತಿರುವ ವರ್ಗದಲ್ಲಿ ಕಿಡಿಗೇಡಿ ವಿದ್ಯಾರ್ಥಿಯೊಬ್ಬನು ನಡುವೇ ಕೂಗುವಂತೆ ಆ ಕಿಲಕಿಲಾಟದ ನಡುವೆ ಕೋಳಿಯ ಕೂಗು ಜೋರಿನಿಂದ ಕೇಳಿಸಿ ಲಕ್ಷ್ಯವನ್ನು ಎಳೆಯುತ್ತಿತ್ತು. ಗಾಳಿಯ ಝುಳುಕಿನ ಕೂಡ ಉದುರಿ ಬೀಳುವ ಎಲೆಗಳು ಸುತ್ತಿಸುತ್ತಿ ನೆಲಕ್ಕೆ ಬರುತ್ತಿದ್ದವು ; ಮರಣವು ಕೂಡ ಅವುಗಳ ದೃಷ್ಟಿಯಿಂದ ಆನಂದ ಕೊಡುವ ಕಲೆಯೇನೋ ಅನ್ನುವಂತೆ.

ಸುಲೋಚನೆಯು ಕೆಲ ವೇಳೆಯಲ್ಲಿಯೇ ಒಂದು ಸುಂದರವಾದ ಸ್ಥಳಕ್ಕೆ ಕರೆದು ತಂದಳು. ಕೆಳಗಡೆಗೆ ಸಿಂಹದಂತೆ ಬಾಯಿ ತೆರೆದ ಕೊಳ್ಳ. ಅದರ ಸುತ್ತಲೂ ಆಯಾಲಿನಂತೆ ಕುಣಿಯುವ ಬಳ್ಳಿಗಳು. ವಿದ್ಯಾಧರನು ಆ ದಿಬ್ಬದ ಮೇಲೆ ಏರಿ ತುತ್ತತುದಿಯ ಮೇಲೆ ಹೋಗಿ ಕುಳಿತನು. ಸುಲೋಚನೆಯು ಹೇಳಿದಳು–



"ಅಷ್ಟು ಮುಂದಕ್ಕೆ ಹೋಗಿ ಕೂಡಬೇಡಿರಿ, ತೂಕ ತಪ್ಪೀತು."

"ಆದರೇನಾಯಿತು, ಅನಾಯಾಸವಾಗಿ ವೃತ್ತಪತ್ರದಲ್ಲಿ ಹೆಸರು ಬರುವದು !"

ಸುಲೋಚನೆಗೆ ಅವನ ಸ್ವಾಭಾವಿಕ ಧೈರ್ಯ ಕಂಡು ಕೌತುಕವೆನಿಸಿತು. ಅವಳು ಸ್ವಲ್ಪ ಇತ್ತ ಕಡೆಗೇ ಕುಳಿತುಕೊಂಡಳು. ಬಾಪ್ಪಾ ಅವರಂತೂ ಎಲ್ಲಿದ್ದರೋ ಯಾರಿಗೂ ಗೊತ್ತಿರಲಿಲ್ಲ. ವಿದ್ಯಾಧರ ಕೇಳಿದ–

"ಬಾಪ್ಪಾ ಅವರು ಎಲ್ಲಿ?"

"ಅವರೇನು ಎಲ್ಲಿ ಹೋದರೂ ಹುಲಿಯಂತೂ ಅವರನ್ನು ಮುರಿದು ತಿನ್ನುವದಿಲ್ಲ."

"ಅದೇಕೆ ?"

"ಅಹಿಂಸಾವಾದಿಗಳಲ್ಲವೇ ಅವರು?"

"ಆದರೆ ಹುಲಿಗಳು ಎಲ್ಲಿ ಆಗಿವೆ ಅಹಿಂಸಾವಾದಿಗಳು?"

ವಿದ್ಯಾಧರನು ಇಷ್ಟೊಂದು ಹುಡುಗಾಟಿಕೆಯಲ್ಲಿ ಮಾತಾಡಬಲ್ಲನೆಂದು ಸುಲೋಚನೆಗೆ ಕಲ್ಪನೆಯೇ ಇರಲಿಲ್ಲ. ಜುಹೂಕ್ಕೆ ಹೋದ ದಿವಸ ಹುಣ್ಣಿಮೆಯ ಬೆಳದಿಂಗಳಲ್ಲಿ ಸ್ತಂಭದಂತೆ ಕುಳಿತ ವಿದ್ಯಾಧರನು ಇವನೇ ಏನೆಂಬುದು ಸುಲೋಚನೆಗೆ ತಿಳಿಯದಾಯಿತು ! ಅವಳು ಚೇಷ್ಟೆಯಿಂದ ಅಂದಳು: "ಕಾಮಾಪುರದ ಹವೆ ನಿಮಗೆ ಚೆನ್ನಾಗಿ ಒಪ್ಪಿದಂತೆ ಕಾಣುತ್ತದೆ."

"ನನಗೋ ನನ್ನ ಬಾಯಿಗೋ ?" ಅವಳ ಪ್ರಶ್ನೆಯ ಅರ್ಥ ತಿಳಿದುಕೊಂಡು ವಿದ್ಯಾಧರನು ಪುನಃ ಪ್ರಶ್ನೆಮಾಡಿದನು.

"ನಿಮ್ಮ ಯಂತ್ರ ಎಲ್ಲಿಯವರೆಗೆ ಬಂದಿದೆ ?"

"ಎಲ್ಲವೂ ಸರಿಯಾಗಿದೆ, ಆದರೆ ನಡುವಿನ ಜೋಡಣೆಯ ಬಗ್ಗೆ ಒಂದು ಕೆಲಸ ಉಳಿದಿದೆ."

"ನನ್ನ ಚಿತ್ರದಂತೆಯೇ ಅನ್ನಬಾರದೇ ? ಸುರಂಗಬಾಯಿಯಂಥ ಲಕ್ಷ್ಮಿಯು ಸಿಕ್ಕರೂ ಚಿತ್ರಕ್ಕೆ ಹಿನ್ನೆಲೆಯೇ ಹೊಳೆಯಲ್ಲೊಲ್ಲದು. ಅಂಬೋಲಿಗೆ ಹೋದರೆ ಮಾತ್ರ ಸಾಧ್ಯ. ಮತ್ತೆ–"

ಸುರಂಗೆಯು ರಮಾಕಾಂತನಿಗೆ ಅಂಬೋಲಿಯ ಸಮುದ್ರದೊಳಗಿಂದ ಹೊರಗೆ ಬಂದ ಲಕ್ಷ್ಮಿಯಂತೆಯೇ ಕಂಡಳು. ಒಂದು ದೊಡ್ಡ ಪರದೆಯ ಮೇಲೆ ಸಮುದ್ರದ ತೆರೆಗಳನ್ನು ಚಿತ್ರಿಸಿದಂತೆ ನೀಲವರ್ಣದ ಗುಡ್ಡಗಳ ಹಿಂದಿನ ಗುಡ್ಡಗಳೂ, ವಿಸ್ತೀರ್ಣವಾದ ಕೆರೆಯಂತೆ ಕಾಣುವ ಆ ಆಳವಾದ ಕೊಳ್ಳವೂ, ಅಖಂಡವಾಗಿ ನರ್ತಿಸುವ ಆ ಗಿಡಬಳ್ಳಿಗಳೂ, ಆಕಾಶದಲ್ಲಿಯ ಸೌಮ್ಯವಾದ ತಿಳಿ ಹಳದಿ ಬಣ್ಣದ ಛಾಯೆಯೂ ಅವರಿಗೆ ಆ ಕ್ಷಣದಲ್ಲಿ ಸೃಷ್ಟಿಯ ಹೃದಯದಲ್ಲಿಯೆ ಪ್ರವೇಶ ಸಿಕ್ಕಂತಾಗಿತ್ತು. ಸೌಂದರ್ಯಕ್ಕಿಂತಲೂ ಜೀವನವನ್ನು ಶ್ರೇಷ್ಠವೆಣಿಸುವ ಮಾನವರು ಮೂರ್ಖರೆಂದು ಅವರಿಗೆ ಅನಿಸಿರಬಹುದು. ಜೀವನ ! ಎಲ್ಲಿದೆ ಇಲ್ಲಿ ಜೀವನ ! ಎತ್ತ ನೋಡಿದತ್ತ ಸೌಂದರ್ಯದ ಸಾಮ್ರಾಜ್ಯ–

"ಗಣ್ ಗಣ್" ಸಪ್ಪಳ ಕೇಳಿದೊಡನೆಯೆ ರಮಾಕಾಂತನು ಹಿಂದಿರುಗಿ ನೋಡಿದ.

ಬಾಪ್ಪಾ ಅವರು ಒಬ್ಬ ಕುರುಬನನ್ನು ಕರೆದುಕೊಂಡು ಬರುತ್ತಿದ್ದರು. ಅವನ ಕೈಯಲ್ಲಿಯ ಕೋಲಿನ ತುದಿಗೆ ಕಟ್ಟಿದ ಗಂಟೆಯು ಸಪ್ಪಳ ಮಾಡುತ್ತಿತ್ತು. ಸುಲೋಚನೆಗೆ ಕೇಳಿಸಿತೋ ಇಲ್ಲವೋ ಅನ್ನುವಂತೆ ಅವನು ಮೆಲ್ಲನೆ "ಸಮಾನಸ್ಕಂದರ ಸಂಯೋಗವೇ ಆಗಿದೆ" ಎಂದನು.

ಆ ಕುರುಬನು ದೂರದಲ್ಲಿಯೇ ಕುಳಿತುಕೊಳ್ಳಬೇಕೆಂದರೆ ಬಾಪ್ಪಾ ಅವರು ಅವನನ್ನು ತಮ್ಮ ಬಳಿಯಲ್ಲಿಯೇ ಕೂಡಿಸಿಕೊಂಡರು. ಅವನ ಕರ‍್ರಗಿನ ಮೈಬಣ್ಣಕ್ಕೆ ಅವನ ಬೆಳ್ಳಿಯ ಉಡುದಾರವು ಒಳ್ಳೇ ಎದ್ದು ಕಾಣುತ್ತಿದ್ದಿತು. ಒಂದು ತುಂಡು ವಲ್ಲಿಯ ಹೊರತು ಅವನ ಮೈಮೇಲೆ ಬೇರೆ ಏನೂ ಅರಿವೆಗಳಿರದಿದ್ದರೂ, ಶರೀರವು ಚೆನ್ನಾಗಿ ಪುಷ್ಟವಾಗಿದ್ದ ಮೂಲಕ ಸೆಕೆಯಾಗುತ್ತಿದ್ದರೂ ಅರಿವೆಗಳನ್ನು ಹಾಕಿಕೊಳ್ಳುವ ಮನುಷ್ಯನಿಗೆ ಅಸೂಯೆಯುಂಟಾಗುವಂತೆ ತೋರುತ್ತಿದ್ದನು. ಮುಷ್ಟಿಯಲ್ಲಿ ಬಿಗಿಯಾಗಿ ಕೋಲನ್ನು ಹಿಡಿದದ್ದರಿಂದ ಎದ್ದುಕಾಣುವ ಮುಂಗೈಯೂ, ಆತನ ಕಾಲೊಳಗಿನ ಹಳ್ಳಿಗಾಡ ಜೋಡುಗಳೂ ನೋಡಿದ ಕೂಡಲೆ ಕಣ್ಣಲ್ಲಿ ತುಂಬುವಂತಿದ್ದವು. ಸುಧಾರಿಸಿದ ಜನರಲ್ಲಿ ಬಂದು ಕುಳಿತುಕೊಂಡದ್ದರಿಂದ, ಕ್ಷಣಮಾತ್ರ ಹೇಗೋ ಎನಿಸಿಕೊಂಡು ಅವನು ತನ್ನ ಎಡಬಲಕ್ಕೆ ನೋಡುತ್ತಿದ್ದನು. ಆದರೆ ಮರುಕ್ಷಣವೇ ಆತನ ಪ್ರಸನ್ನ ದೃಷ್ಟಿಯು ಅವರೆಲ್ಲರ ಮೇಲೆ ಬಿದ್ದಿತು. ಹೆಗಲ ಮೇಲಿನ ಕಂಬಳಿಯನ್ನು ತೆಗೆದು ಅದನ್ನು ತನ್ನ ಮೈಮೇಲೆ ಹೊದ್ದುಕೊಳ್ಳುತ್ತಿರುವಷ್ಟರಲ್ಲಿ–

"ಇವರೆಲ್ಲಿ ಸಿಕ್ಕರು ನಿಮ್ಮ ಸ್ನೇಹಿತರು ?" ರಮಾಕಾಂತನು ಉಪಹಾಸದ ಸ್ವರದಲ್ಲಿ ಕೇಳಿದ.

"ಇಲ್ಲಿಯೇ ಇದ್ದ. ನೀವು ಅಂಬೋಲಿಯನ್ನು ನೋಡಲಿಕ್ಕೆ ಬಂದಿರುವಿರೆಂದ ಮೇಲೆ"

"ನೋಡುತಕ್ಕದ್ದೆಲ್ಲವೂ ನಮ್ಮ ಮುಂದೆ ಹಬ್ಬಿದೆ."

"ಮುಂದೆ ಕುಳಿತೂ ಇದೆ."

ರಮಾಕಾಂತನು ತುಚ್ಛದೃಷ್ಟಿಯಿಂದ ಆ ಕುರುಬನ ಕಡೆಗೆ ನೊಡಿದ್ದು ಬಾಪ್ಪಾ ಅವರ ಲಕ್ಷ್ಯದಲ್ಲಿ ಬಂದಿತು. ಅವರು ಅಂದರು :

"ಈ ಕುರುಬನು ನಿಮ್ಮನ್ನೇನೋ ಕೇಳಬೇಕೆಂದು ಬಂದಿರುವನು."

"ನಾನೇನೂ ಪಶುಗಳ ವೈದ್ಯನಲ್ಲ ? ಸುರಂಗೆಯಾದರೂ ಕಂಬಳಿಗಳ ಕಾರಖಾನೆಯನ್ನೇನು ತೆರೆದಿಲ್ಲ ಮತ್ತು ಸುಲೋಚನೆಯು–."

"ಅವನೇನು ಅನ್ನುವನು ಅದನ್ನಾದರೂ ಕೇಳಿಕೊಳ್ಳುವಿರೋ ಇಲ್ಲವೋ ? ಕೇಳೋ ಇವರನ್ನು"

"ನನ್ನನ್ನು ಕೇಳಬೇಡಪ್ಪ. ಈ ಬಾಯಿಯವರನ್ನು ಕೇಳಿಕೋ ಬೇಕಾದರೆ" ಎಂದು ಅನ್ನುತ್ತ ರಮಾಕಾಂತನು ಸುರಂಗೆಯ ಕಡೆಗೆ ಬೆರಳುಮಾಡಿ ತೋರಿಸಿದ.

"ಹಂತಾದ ಏನ ದ್ವಾಡದ ಇಲ್ಲ ಬಿಡ್ರಿ, ದ್ಯಾವರೂ ಕೇಳೂದೂ."

"ಎಲೇ ಈ ಬಾಯಿಯವರಿಗೆ 'ದ್ಯಾವರೂ' ಏನ ಅಂತೀಯೋ?"



"ಬಾಯಾವ್ರೂ.....ಗಾಂಧೆಪ್ಪನವರ್‍ನ ಬಿಟ್ರೇನರಿ ?"

ಈ ಪ್ರಶ್ನೆಯನ್ನು ಕೇಳಿದ ಕೂಡಲೆ, ಬಾಪ್ಪಾ ಅವರ ಹೊರತಾಗಿ ಎಲ್ಲರೂ ಚಕಿತರಾಗಿ ಅವನ ಕಡೆಗೆ ನೋಡತೊಡಗಿದರು. ಜಗತ್ತಿನ ಯಾವುದೋ ಒಂದು ಮೂಲೆಯಂತಿರುವ ಈ ಸ್ಥಳದಲ್ಲಿ ಇದ್ದುಕೊಂಡು ತನ್ನ ಕುರಿಗಳನ್ನು ಕಾಯುತ್ತಿರುವ ಈ ಅಕಾಡುಪ್ರಾಣಿ– ಈತನದು ಗಾಂಧಿಯವರ ಕೂಡ ಏನು ಸಂಬಂಧ? ರಮಾಕಾಂತ–ಸುರಂಗೆಯರ ಮಾತಿನಲ್ಲಿ ತಿಂಗಳಲ್ಲಿ ಒಮ್ಮೆಯಾದರೂ ಗಾಂಧಿಯ ಹೆಸರು ಬಂದಿರಲಿಲ್ಲ. ಮತ್ತು ಬರಲಿಕ್ಕೆ ಕಾರಣವಾದರೂ ಏನು ? ಮಹಾತ್ಮಾಜಿಯವರೇನು ಕಥಾಲೇಖಕ, ನಾಟಕಕಾರ, ಚಿತ್ರಕಾರ ಅಥವಾ ಗಾಯಕರಾಗಿರಲಿಲ್ಲ.

ಸುರಂಗೆಗೆ ಗಾಂಧಿಯನ್ನುವವರೊಬ್ಬರು ಇದ್ದದ್ದು ಮಾತ್ರ ಗೊತ್ತಿತ್ತು. ಆದರೆ ಆ ಕುರುಬನ ಆ ಪ್ರಶ್ನೆಯ ಮೂಲಕ ಅವಳಿಗೆ ತನ್ನಲ್ಲಿ ಏನೋ ಕಡಿಮೆ ಎನಿಸಿತು. ಮೈಮೇಲೆ ಪೂರ್ಣ ಅರಿವೆಗಳು ಕೂಡ ಇರದಂಥವನು, ಗಾಂಧಿಯವರ ವಿಷಯಕ್ಕೆ ಕುತೂಹಲದಿಂದ ಕೇಳುತ್ತಿರಬೇಕು, ಮತ್ತು ನನಗೆ ಮಾತ್ರ, ಅವರು ಜೇಲಿನಲ್ಲಿದ್ದರೇನು, ಹೊರಗೆ ಇದ್ದರೇನು ಒಂದೇ ಎನಿಸಬೇಕು. ಅವನಿಗೆ ಹೊದ್ದುಕೊಳ್ಳಲಿಕ್ಕೆ ಅರಿವೆಗಳಿಲ್ಲದಿದ್ದರೂ ಅವನ ಹೃದಯ–

ಸುರಂಗೆಯು ಸುಮ್ಮನಿದ್ದುದನ್ನು ನೋಡಿ, ರಮಾಕಾಂತನು ಕೇಳಿದ :

"ಗಾಂಧಿಯವರನ್ನು ನೊಡಿರುವಿ ಏನು ನೀನು ?"

"ನೋಡೀನಿ ದ್ಯಾವರು. ಈ ಬ್ಯಾಸಿಗ್ಯೆ ಯೋಳ ವರಸ ಆದೂ ನೋಡ್ರಿ. ಇಲ್ಲೇ ಆ ಬಂಗಲೇದಾಗ ಬಂದ ಇದ್ರು. ಒಂದು ದಿನಾ ಬೆಂಚೀಕಡೆ, ದೂರದಾಗ ನಿಂತ ನೋಡೀನಿ ಕಣ್ತುಂಬ ಅವರನ್ನ."

ಸುರಂಗೆಯು ಗಾಂಧೀಜಿಯವರನ್ನು ನೋಡಿದ್ದಿಲ್ಲ. ಅವಳು ತನ್ನ ಮೇಲೆ ತಾನೇ ತುಸು ಸಿಟ್ಟಾದಳು.

"ಯಾರಂತೆ ಕಾಣಸತಾರೋ ಗಾಂಧೀಜಿಯವರು ?" ರಮಾಕಾಂತನು ಪ್ರಶ್ನೆಮಾಡಿದ.

"ಅಗದೀ ಸಾಟಂಸ್ವಾಮಿ ಅವರ ಹಾಂಗ ಕಾಣಿಸತಾರ ಯಪಾ !"

"ಈ ಸಾಟಂಸ್ವಾಮಿ ಅಂದರೆ ಯಾರು ಇವ ?" ರಮಾಕಾಂತನು ನಸುನಗುತ್ತ ಸುಲೋಚನೆಗೆ ಕೇಳಿದ.

"ಈ ಘಟ್ಟದ ಕೆಳಗಡೆಗೆ ಇರತಾರೆ ಒಬ್ಬರು."

"ಏನು ಮಾಡುತಾರೆ ಅವರು ?"

"ಸ್ವಾಮಿ ಅವರು ಏನಾದರೂ ಮಾಡಬೇಕಾಗುತ್ತದೆಯೆ ?"

ರಮಾಕಾಂತನೇ ಇನ್ನೂ ಏನೋ ಮಾತಾಡತಕ್ಕವನಿದ್ದನು.

ಇಷ್ಟರಲ್ಲಿ ದೂರದಿಂದ ಕೂಗು ಕೇಳಬಂದಿತು. ಅದನ್ನು ಕೇಳಿದ ಕೂಡಲೆ ಕುರುಬನು ಎದ್ದು "ಬರತೀನರಿಯಪ್ಪಾ" ಅಂದ.

ಎಲ್ಲರೂ ಅವನು ಹೋಗುವುದನ್ನು ಸ್ತಬ್ಧರಾಗಿ ನೋಡುತ್ತಿದ್ದರು. ಅವನು ಹೋದ ಮೇಲೆ, ರಮಾಕಾಂತ ಹಾಗೂ ಬಾಪ್ಪಾ ಅವರ ನಡುವೆ ಜೀವನ ಮತ್ತು ಕಲೆ ಈ ವಿಷಯದ ಮೇಲೆ ಘೋರ ವಾಗ್ವಾದವಾಯಿತು. ಆ ಕುರುಬನ ಜೀವನವು ಅಂಬೋಲಿಯ ಸೌಂದರ್ಯದಷ್ಟೇ ಮಹತ್ವದ್ದು ಎಂದು ಬಾಪ್ಪಾ ಅವರ ಮತ. "ಇಂಥ ಸುಂದರ ಸ್ಥಳದಲ್ಲಿ ಇಂಥ ಕುರುಬರಿಗೆ ಇರಗೊಡುವುದೇ ಮೂಲ ತಪ್ಪು. ಏನು ಕರಿಯ ಹೆಡ್ಡ ಅವ ! ಇಂಥ ಸೃಷ್ಟಿಸೌಂದರ್ಯಕ್ಕೆ ದೃಷ್ಟಿಯಾಗಬಾರದೆಂದೇ ಸೃಷ್ಟಿಯ ಮೊಗದ ಮೇಲಿಟ್ಟ ಕರಿಯ ಬೊಟ್ಟೇ!" ಇದು ರಮಾಕಾಂತನ ಉತ್ತರ. ಸುರಂಗೆಯು ಸುಮ್ಮನೆ ವಾದವನ್ನು ಕೇಳುತ್ತ ಕುಳಿತಿದ್ದಳು. ಸುಲೋಚನೆಯಾದರೂ ರಮಾಕಾಂತನ ಮತವನ್ನು ಎತ್ತಿಹಿಡಿಯಲಿಲ್ಲ. ಆದರೆ ಅವಳು ಹೇಳಿದ್ದೇನೆಂದರೆ : "ಈ ಕುರುಬನ ಸರಳವಾದ ಆಯುಷ್ಯದಲ್ಲಿಯಾದರೂ ಒಂದು ಪ್ರಕಾರದ ಸೌಂದರ್ಯವಿದೆ. ಇದೇನೋ ನಿಜ. ಆದರೆ, ಈ ಸೃಷ್ಟಿ ಸೌಂದರ್ಯದ ಉಪಯೋಗ ಆತನಿಗೆ ಏನು?"

ವಿದ್ಯಾಧರನು ಅರ್ಧಮರ್ಧ ಬಾಪ್ಪಾ ಅವರ ಕಡೆಗಿದ್ದನು. ಅವನು ಹೇಳಿದ್ದೇನೆಂದರೆ : "ಗಾಂಧಿಯವರ ವಿಷಯದಲ್ಲಿ ಅವನು ಪ್ರಶ್ನೆ ಮಾಡಿದಾಗ ನನಗೆ ನಿಜವಾಗಿಯೂ ಆಶ್ಚರ್ಯವಾಯಿತು. ಆದರೆ ಆತನ ದೃಷ್ಟಿಯಲ್ಲಿ, ಗಾಂಧಿಯವರೂ ಒಬ್ಬ ಸ್ವಾಮಿಯೂ ಒಂದೇ ಅಲ್ಲವೇ? ಜೀವನದಲ್ಲಿ ಇಂಥ ದೃಷ್ಟಿ ಇದ್ದರೆ ಜೀವನಕ್ಕಿಂತಲೂ ಕಲೆಯೇ ನನಗೆ ಒಳ್ಳೆಯದಾಗಿ ಕಾಣುತ್ತದೆ !"

ರಾತ್ರಿ ಊಟದ ವೇಳೆಯಲ್ಲಿ ಬಾಪ್ಪಾ ಅವರು ಸುಮ್ಮನಿದ್ದರು. ಊಟವಾದ ಅನಂತರ ಅವರು "ನಿದ್ರೆ ಬಂದಿರುವದೋ ಎಲ್ಲರಿಗೂ?" ಎಂದು ಕೇಳಿದರು.

"ಇಲ್ಲ ಬಾಪ್ಪಾ ಅವರೇ. ಕಥೆ–ಗಿಥೆ ಹೇಳುವಿರಾ ಒಂದನ್ನು ?" ಹೀಗೆನ್ನುತ್ತ ಸುಲೋಚನೆಯು ಅವರ ಹತ್ತಿರವೇ ಬಂದು ಕುಳಿತುಕೊಂಡಳು.

"ಚಿಕ್ಕವಳಿದ್ದಾಗ ಹೀಗೆಯೆ ಹಟಮಾಡುತ್ತಿದ್ದಿ ನೀನು, ಸುಲು" ಬಾಪ್ಪಾ ಅವರು ಅಂದರು.

"ಆ ರಾಜಾ ರಾಣಿಗಳ ಕಥೆ ಬೇಡ ನನಗೆ ಈಗ. ಯಾವಾಗಲೂ ಕಥೆ ಅಂದಕೂಡಲೇ 'ಹಿಂಗ ಒಬ್ಬ ಅರಸಿದ್ದ. ಅವನಿಗೆ ಇದ್ದರು ಇಬ್ಬರು ರಾಣಿಯರು. ಒಬ್ಬಳ ಮೇಲೆ ಬಹಳ ಪ್ರೇಮ, ಮತ್ತೊಬ್ಬಳ ಮೇಲೆ ಪ್ರೀತಿಯಿರಲಿಲ್ಲವಂತೆ.' ಅಲ್ಲ ಬಾಪ್ಪಾ, ಪ್ರೇಮವಿಲ್ಲದೆ ಮಾಡಿಕೊಂಡನಾದರೂ ಹೇಗೆ ಲಗ್ನವನ್ನು ? ಅಲ್ಲವೇ ರಮಾಕಾಂತ ?"

ರಮಾಕಾಂತನೂ ಸುಮ್ಮನೆ ನಕ್ಕುಬಿಟ್ಟನು. ಆದರೆ ವತ್ಸಲೆಯ ನೆನಪಾಗಿ ಆತನಿಗೆ ಹೇಗೇಗೋ ಆಯಿತು.

ಬಾಪ್ಪಾ ಅವರು ಕಥೆ ಹೇಳುವುದಕ್ಕೋಸ್ಕರ ಪಂಚೆಯನ್ನು ಮೊಳಕಾಲಿಗೆ ಸುತ್ತಿಕೊಂಡು ಕುಳಿತರು. ಚಳಿಯ ಸಲುವಾಗಿ ಅವರು ಒಂದು ಖಾದಿಯ 'ಬಗಲಬಂಡಿ'ಯನ್ನು ಹಾಕಿದ್ದರು. ಉಳಿದವರೆಲ್ಲರೂ ಸ್ವೆಟರ ಮುಂತಾದವುಗಳನ್ನು ಹಾಕಿಕೊಂಡು ರಗ್ಗು ಹೊದ್ದುಕೊಂಡು ಕುಳಿತಿದ್ದರು. ಬಾಪ್ಪಾ ಅವರು ತನ್ನ ಕಡೆಗೆ ನೋಡಿ ಮಾತಾಡುವದನ್ನು ಕಂಡು ಸುರಂಗೆಗೆ ಹೇಗೋ ಅನಿಸಿತು.



"ಸಾಯಂಕಾಲದಲ್ಲಿ ನಮ್ಮ ವಾದವಿವಾದ ನಡೆದಿತ್ತಲ್ಲ........" ಬಾಪ್ಪಾ ಅವರು ಆರಂಭ ಮಾಡಿದರು.

"ನಮಗೆ ಆ ವಾದ ಬೇಕಾಗಿಲ್ಲ ನಿಮ್ಮ ನೆನಹುಗಳನ್ನು ಹೇಳಿರಿ ನಮಗೆ."

"ಅದನ್ನು ಹೇಳುವವನಿದ್ದೇನೆ ನಿಮಗೆ. ಚಿತ್ರಕಾರರದಾಗಲಿ ಹಾಡುಗಾರ ಜನರದಾಗಲಿ ಗುರುತು ನನಗೆ ವಿಶೇಷವಾಗಿಲ್ಲ. ಆದರೂ ಮೊದಲಿನಿಂದ ನನಗೆ ಓದುವ ಹುಚ್ಚು ಬಹಳ ! ಸ್ವಲ್ಪ ಬಿಡುವು ಸಿಕ್ಕ ಕೂಡಲೆ ಯಾವುದಾದರೊಂದು ಕಾವ್ಯವನ್ನು ಓದುತ್ತ ಕುಳಿತುಬಿಡುತ್ತೇನೆ! ಇದಲ್ಲದೆ ಒಮ್ಮೆ ಆರು ತಿಂಗಳು ಪ್ರೊಫೆಸರನೂ ಇದ್ದೆ ! ತಿಳಿಯಿತೇ ರಮಾಕಾಂತ ? ನನಗೆ ಕೇವಲ ಬಾಪ್ಪಾ ಅನ್ನಕೂಡದು. ಪ್ರೊ. ಬಾಪ್ಪಾ ನಾನು !"

ಶ್ರೋತೃವರ್ಗದ ಮೇಲೆ ನಗೆಯ ತೆರೆ ಹಾಯ್ದು ಹೋದವು.

"ಮೂರು ದೊಡ್ಡ ಲೇಖಕರ ಅನುಭವ ಇದೆ ನನಗೆ. ಹೆಸರು ನಿಮ್ಮ ಲಕ್ಷ್ಯದಲ್ಲಿ ಬರಬಹುದು. ಮೊದಲನೆಯವನು ಸ್ತ್ರೀ ಸ್ವಾತಂತ್ರ್ಯದ ಸಲುವಾಗಿ ಇಷ್ಟು ಕಥೆಗಳನ್ನು ಬರೆದಿರುವನಲ್ಲ, ಅದೇನು ಹೇಳುವದು ಸುಲಭವಿಲ್ಲ. ಪ್ರತಿಯೊಂದು ಕಥೆಯಲ್ಲಿಯೂ ಗಂಡಸು ಕೆಟ್ಟವ. ಸ್ತ್ರೀ ಉತ್ತಮ. ಪ್ರತಿಯೊಬ್ಬ ಸ್ತ್ರೀಗೂ ಉಪದೇಶವೆಂದರೆ– ಲಗ್ನ ಮಾಡಿಕೊಳ್ಳಬೇಡಿರಿ, ಗುಲಾಮರಾಗಿರಬೇಡಿರಿ. ಸೌಭಾಗ್ಯವತಿ ಶಬ್ದವನ್ನು ವೇಶ್ಯೆ ಶಬ್ದದಂತೆ ಮನ್ನಿಸಿರಿ. ಎಲ್ಲ ಬರೆಹಗಳಲ್ಲಿ ಒಂದೇ ಮಂತ್ರ–ಪುರುಷಜಾತಿಯೆಂದರೆ, ವಿಶ್ವಾಸಘಾತಕವಾದದ್ದು."

"ಬಾಪ್ಪಾ ಅವರೇ, ಅಂಬೋಲಿಯಲ್ಲಿ ತಮ್ಮದೇನೂ ಸಾಹಿತ್ಯದ ಮೇಲೆ ವ್ಯಾಖ್ಯಾನವಿಲ್ಲ." ಸುಲೋಚನೆಯು ನಡುವೆಯೆ ಅಂದಳು.

"ಚೆನ್ನಾಗಿ ಬ್ರೇಕ್ ಹಾಕಿದೆ, ಹೀಗೆ ಸ್ತ್ರೀಯರ ಕಡೆಯಿಂದ ಪುಕ್ಕಟೆ ವಕೀಲ ಪತ್ರ ತಕ್ಕೊಂಡ ಈ ಮಹಾತ್ಮನು ತನ್ನ ಹೆಂಡತಿಯನ್ನೇ ಹೇಗೆ ನಡೆಸಿಕೊಂಡಿರಬೇಕು ? ನೀವು ಅನ್ನಬಹುದು, ಹೂವುಗಳಿಂದ ಪೂಜೆಮಾಡಿರಲಿಕ್ಕೇಬೇಕು! ಎಂದು. ಪೂಜೆಯನ್ನೇನೋ ಮಾಡಿದ ಪುಣ್ಯಾತ್ಮ! ಆದರೆ ಅದರಲ್ಲಿ ಚಮತ್ಕಾರವಿಷ್ಟೇ, ಅವನು ಕೈಹಚ್ಚಿದ ಕೂಡಲೆ ಆತನ ಹೂವುಗಳೆಲ್ಲವು ಕೋಲುಗಳಾಗುತ್ತಿದ್ದವು. ಇಡೀ ರತ್ನಾಗಿರಿಯ ಜನರನ್ನೇ ಕೇಳಿರಿ ಬೇಕಾದರೆ. ಅದೊಂದು ಮೋಜಿನ ಪ್ರಸಂಗವೇ ಆಗಿತ್ತು. 'ಆ ಹರಾಮಖೋರ' ಪುರುಷನು ತನ್ನ ಹೆಂಡತಿಯನ್ನು ಒಂದು ಕೋಣೆಯಲ್ಲಿ ಹಾಕಿ, ಹೊರಗಿನಿಂದ ಒಂದು ದೊಡ್ಡದಾದ ಕೀಲಿ ಹಾಕಿಬಿಟ್ಟಿದ್ದ. ಇನ್ನು ಮತ್ತೊಬ್ಬ ಕಲಾವಂತನ ಕಥೆ ಹೇಳುವೆ ! ಸೆರೆಯ ಮೇಲಿನ ಆತನ ಕಾದಂಬರಿಯಂತೂ ಪ್ರಸಿದ್ಧವೇ ಇದೆ. ತನ್ನ ಮೇಜಿನ ಮೇಲೆ ಬಾಟಲಿಯನ್ನು ಇಟ್ಟುಕೊಂಡೇ ಅವನು ಪ್ರತಿಯೊಂದು ಪ್ರಕರಣವನ್ನು ಬರೆಯುತ್ತಿದ್ದ. ನನ್ನಂಥ ಮಿತ್ರರು ಯಾರಾದರೂ ಕೇಳಿದರೆ ಕಾದಂಬರಿಯು ಮುಗಿದ ಅನಂತರ ಸೆರೆ ಬಿಡುವೆನೆಂದು ಹೇಳುತ್ತಿದ್ದ ! ಕಾದಂಬರಿಯ ಆವೃತ್ತಿಯ ಮೇಲೆ ಆವೃತ್ತಿಗಳಾದವು. ಅವನ ಮನೆಯಲ್ಲಿಯೂ ಸೆರೆಯ ಬಾಟ್ಲಿಯ ಮೇಲೆ ಬಾಟ್ಲಿಗಳು ಉರುಳಾಡಿದವು. ಕೊನೆಗೆ ಸೆರೆಯು ತೀರಿತು. ಆದರೆ ಅದು ಅವನೊಡನೆಯೇ !"

ರಾತ್ರಿಯ ಆ ಪ್ರಶಾಂತ ವಾತಾವರಣದಲ್ಲಿ ಬಾಪ್ಪಾ ಅವರ ಆ ಶಬ್ದಗಳು ವಿಲಕ್ಷಣ ಗಂಭೀರವಾಗಿ ತೋರುತ್ತಿದ್ದುವು. "ಇನ್ನು ಮೇಲೆ ಮೂರನೇ ಗೃಹಸ್ಥ–ಪ್ರೇಮದ ದೊಡ್ಡ ಕವಿ. ನಡುವೆಯೆ ಆತನ ಹೆಂಡತಿ ಬೇನೆ ಬಿದ್ದಳು. ಡಾಕ್ಟರನು ಏನೋ ಹೇಳಿದ ಆತನ ಕಿವಿಯಲ್ಲಿ. ಕೂಡಲೆ ಹೊರಟಿತು ಆ ಸವಾರಿ ಒಬ್ಬ ವೇಶ್ಯೆಯ ಮನೆಯ ಕಡೆಗೆ. ಆ ವೇಶ್ಯೆಯು ನಮ್ಮ ಊರವಳೇ ಎಂದು ನನಗೆ ತಿಳಿಯಿತು, ಈ ಸಮಾಚಾರ. ಅವಳು ನನಗೆ ಮೇಲಿಂದ ಮೇಲೆ ಕೇಳುವಳು 'ನೋಡಬೇಕಾಗಿದೆಯೋ ನಿಮಗೆ ನನ್ನ ಸರ್ಕಸ ಹೇಗಿದೆ ಎಂಬುದನ್ನು ?' ಎಂದು."

"ಅವಳ ಮನೆಯ ಹೊಸ್ತಿಲವನ್ನು ಎಷ್ಟು ಜನ ಲೇಖಕರು, ಗಾಯಕರು, ನಟರು ದಾಟಿದ್ದರೆಂಬುದನ್ನು–"

ಬಾಪ್ಪಾ ಅವರು ತನ್ನನ್ನುದ್ದೇಶಿಸಿ ಮಾತಾಡುತ್ತಾರೆಂದು ರಮಾಕಾಂತನ ತಿಳುವಳಿಕೆಯಾಯಿತು. ಅವನು ಸಿಳ್ಳು ಹಾಕುತ್ತ ಹೊರಗಡೆಗೆ ಹೋಗಿ ನಿಂತುಕೊಂಡ. ಇದು ಸುಲೋಚನೆಯ ಲಕ್ಷ್ಯದಲ್ಲಿ ಬಂದಿತು. ಸುರಂಗೆಯು ಮಾತ್ರ ಒಂದು ಮಂತ್ರಮುಗ್ಧವಾದ ನಾಗರಹಾವಿನಂತೆ ಸ್ತಬ್ಧವಾಗಿ ಕುಳಿತುಕೊಂಡಿದ್ದಳು. ಅವಳಿಗೆ ಅನಿಸುತ್ತಿತ್ತು. "ಬಾಪ್ಪಾ ಅವರು ತನ್ನಿಂದ ನಾಲ್ಕು ಮೊಳದ ಅಂತರದ ಮೇಲೆ ಕುಳಿತಿದ್ದರು. ಆದರೆ ನಿಜವಾಗಿ ಅವರಿಗೂ ತನಗೂ ಭೂಮ್ಯಾಕಾಶದಷ್ಟು ಅಂತರವಿರಲಿಲ್ಲವೆ? ಪ್ರೊಫೆಸರನ ಕೆಲಸವನ್ನು ಬಿಟ್ಟುಕೊಟ್ಟು, ಮದುವೆ ಮಾಡಿಕೊಳ್ಳದೆ, ಪಂಚೆಯನ್ನು ಉಟ್ಟುಕೊಂಡು ಇರುವ ಈ ಬುದ್ಧಿವಂತ ಮನುಷ್ಯನೆತ್ತ! ರಮಾಕಾಂತನಂಥ ರಸಿಕ ತರುಣನ ಜೊತೆಯಲ್ಲಿ ಆಯುಷ್ಯವನ್ನು ಕಳೆಯಲೆಳಸುವ ತಾನೆತ್ತ ! ಬಾಪ್ಪಾ ಅವರ ಮತ್ತು ತನ್ನ ವೇಷ–ಭಾಷೆಗಳ ತುಲನೆ ಮಾಡಿದ ಕೂಡಲೇ ಅವಳಿಗೆ ನಾಚಿಕೆಯಾಗಿ ಅವಳು ಇನ್ನೆಲ್ಲಿಯೋ ನೋಡಹತ್ತಿದಳು. ರಮಾಕಾಂತನು ಹೊರಗೆ ಹೋದ ಕಾರಣವು ಸುರಂಗೆಗೂ ತಿಳಿದಿರಬಹುದೆಂದು ಸುಲೋಚನೆಯೂ ಕೊನೆಗೆ ಕೇಳಿದಳು: "ಈ ಕಥೆಯ ಸಾರಾಂಶವೇನು ಬಾಪ್ಪಾ ? ಕಲೆಯನ್ನು ಗಲ್ಲಿಗೇರಿಸಬೇಕೆಂದಲ್ಲವೆ?"

"ಅಲ್ಲ–"

"ಹಾಗಾದರೆ ?"

"ಜೀವನವೆಂದರೆ ಒಂದು ತೆಗ್ಗು ತೆವರಿನ ಕರ್ರಗಿನ ಎರೆ ಭೂಮಿ. ಆದರೆ ಅದರೊಳಗಿಂದಲೆ ಧಾನ್ಯ ಬೆಳೆಯುವದು. ಕಲೆಯು ಆಕಾಶದಂತೆ ! ಆಕಾಶದಲ್ಲಿ ನಕ್ಷತ್ರಗಳು ಮಿನುಗಿದರೆ, ಫಲಗಳು ಬೆಳೆಯುವದು ಭೂಮಿಯಲ್ಲಿಯೇ !"

"ಆದರೆ ಬೆಳೆಯಿಸುವವರು ಯಾರು ? ಆಕಾಶದೊಳಗಿಂದ ಮಳೆಯು ಬಿದ್ದರೇನೆ ಅಲ್ಲವೆ ಬೆಳೆಯುವದು ?" ಸುಲೋಚನೆ ಕೇಳಿದಳು.

"ಆಕಾಶದೊಳಗಾದರೂ ಮಳೆಯು ಹೋಗುವದೆಲ್ಲಿಂದ, ಭೂಮಿಯಿಂದಲ್ಲವೆ?"

ಬಾಗಿಲ ಹೊರಗೆ ನಿಂತಿದ್ದರೂ ರಮಾಕಾಂತನಿಗೆ ಅನಿಸಿತು–ಬಾಪ್ಪಾ ಅವರು ಆಯುಷ್ಯದಲ್ಲಿ ಒಳ್ಳೇ ದಿಕ್ಕು ತಪ್ಪಿದರು. ಅವರು ದೊಡ್ಡ ಕವಿಗಳಾಗಬಹುದಾಗಿತ್ತು !



ವಿದ್ಯಾಧರನು ನಡುವೆಯೇ ಕೇಳಿದ "ಪ್ರೇಮವಾದರೂ ಕಲೆಯಂತೆಯೆ ಅನಿಸುವುದೇನು ನಿಮಗೆ ?"

ವಿದ್ಯಾಧರನ ಈ ಪ್ರಶ್ನೆಯು ಸುಲೋಚನೆಗೆ ಸ್ವಲ್ಪ ವಿಚಿತ್ರವಾಗಿಯೇ ಭಾಸವಾಯಿತು. ಒಂದೇ ತಿಂಗಳ ಅವಧಿಯಲ್ಲಿ ಅವನು ಇಷ್ಟು ಹೇಗೆ ಮಾತನಾಡಿಸಲಾರಂಭಿಸಿದನೆಂಬುದು ಅವಳಿಗೆ ಸೋಜಿಗದ ಸಂಗತಿಯಾಗಿತ್ತು. ಈ ಪ್ರಶ್ನೆಯು ಅವಳಿಗೆ ಅದನ್ನು ಸ್ವಲ್ಪ ತಿಳಿಸಿಕೊಟ್ಟಂತೆ ಮಾಡಿತು.

ಇವನು ಯಾರ ಕೂಡವಾದರೂ ಪ್ರೇಮದಲ್ಲಿ ಸಿಕ್ಕಿರಬೇಕು. ಆದರೆ ಸುಲೋಚನೆಗೆ ಕೂಡಲೆ ವಿಚಾರ ಹೊಳೆಯಿತು–ಕಾಮಾಪುರದಲ್ಲಿ ಇವನು ಪ್ರೀತಿಸಲಿಕ್ಕೆ ಇರುವವರಾದರೂ ಯಾರು ? ಸುಧಾರಿಸಿದ ಹುಡುಗಿಯರ ಒಂದು ಮುಖವು ಕೂಡ ನೋಡಲಿಕ್ಕೆ ಸಿಗುವದು ಶಕ್ಯವಿರಲಿಲ್ಲ. ಅಲ್ಲಿಂದ ಕೂಡಿ ಮಾತಾಡುವುದಂತೂ ದೂರವೇ ಉಳಿಯಿತು. ದಾದಾ ಅವರು "ಸುಲೂ, ಕಾಮಾಪುರದಲ್ಲಿ ನಿನಗೆ ಎಲ್ಲರೂ 'ಗಂಡು' ಅನ್ನುತ್ತಾರೆ ನೋಡು" ಎಂದು ಅಂದದ್ದು ಅವಳ ನೆನಪಿಗೆ ಬಂದಿತು. ಅವರಿಗೆ ಅದರಂತೆಯೇ ತಾನು ಉತ್ತರ ಕೊಟ್ಟಿದ್ದಳು. "ಹೀಗೆ ಅನ್ನುವವರು ಹೆಣ್ಣು ಗಂಡಸರಿಬೇಕು !" ಎಂದು.

ಬಾಪ್ಪಾ ಅವರು ವಿದ್ಯಾಧರನ ಕಡೆಗೆ ತಿರುಗಿ ಉತ್ತರ ಕೊಟ್ಟರು.

"ಒಳ್ಳೇ ಪ್ರಶ್ನೆ ಕಲೆ ಮತ್ತು ಪ್ರೇಮ ! ಈಗಿನ ತರುಣರಿಗೆ ತಾಯಿ ತಂದೆಗಳಿಗಿಂತಲೂ ಪ್ರಿಯವಾಗಿದೆ ಈ ಎರಡು ವಿಷಯಗಳು ! ನನಗೆ ಕೇಳಿದರೆ ಪ್ರೇಮವು ಮೂರು ತರದ್ದಾಗಿರುತ್ತದೆ. ಸ್ವಾಭಾವಿಕ, ಉಪಭೋಗಾತ್ಮಕ ಹಾಗೂ ಉದಾತ್ತ ಎಂದು."

ಸುರಂಗೆಗೆ ತಾನು ಒಂದು ಪ್ರವಚನವನ್ನೇ ಕೇಳುತ್ತಿರುವಂತೆ ಅನಿಸಿತು. ಬಾಪ್ಪಾ ಅವರು ಹೇಳುವ ಮೂರು ಪ್ರಕಾರಗಳ ಅರ್ಥವೂ ಅವಳಿಗೆ ಪೂರ್ಣವಾಗಿ ತಿಳಿದಿರಲಿಲ್ಲ. ಆದರೆ ಮಾತಾಡುತ್ತಿರುವಾಗ ಅವರ ಮುಖದ ಮೇಲೆ ನಲಿದಾಡುವ ಪವಿತ್ರ ಹಾಸ್ಯದ ಬಗ್ಗೆ ಅವಳಿಗೆ ಆಶ್ಚರ್ಯವಾಯಿತು. ಒಂದು ನಾಟಕದಲ್ಲಿ ಒಬ್ಬ ಅರಸನು ತನ್ನ ರಾಣಿಯ ವಿಷಯದಲ್ಲಿ ಸುಳ್ಳೇ ಸಂಶಯವನ್ನು ಹಿಡಿದು, ಅವಳನ್ನು ಅಗ್ನಿಯಲ್ಲಿ ಶುದ್ಧೀಕರಿಸಿ ತಕ್ಕೊಳ್ಳುವಾಗ ರಾಣಿಯು ಹಾಸ್ಯ ಮುದ್ರೆಯಿಂದ ಬೆಂಕಿಯನ್ನು ಪ್ರವೇಶಿಸಲಿಕ್ಕೆ ಸಿದ್ಧಳಾದದ್ದನ್ನು ನೋಡಿ ಅವನ ಸಂಶಯವು ದೂರವಾಗುತ್ತದೆ. ಈ ಪ್ರಸಂಗಕ್ಕೆ ಅನುರೂಪವಾದ ಹಾಸ್ಯವನ್ನು ಸುರಂಗೆಯು ಅನುಕರಣ ಮಾಡಲಿಕ್ಕೆ ಎಷ್ಟೋ ಸಾರಿ ಕನ್ನಡಿಯ ಮುಂದೆ ಕುಳಿತು ಪ್ರಯತ್ನ ಮಾಡಿದ್ದರೂ ಸಹ, ನಾಟಕ ನಡೆದ ವೇಳೆಯಲ್ಲಿ ಅವಳ ಹಾಸ್ಯವು ಒಯ್ಯಾರದ್ದೂ, ಅರ್ಧ ಶೃಂಗಾರಿಕವೂ ಆದಂತೆ ಪ್ರೇಕ್ಷಕರಿಗೆ ಅನಿಸುತ್ತಿತ್ತು. ತನಗೆ ಇಷ್ಟು ಪ್ರಯತ್ನದಿಂದಲೂ ಸಾಧಿಸದ ಈ ಉದಾತ್ತ ಪಾವಿತ್ರ್ಯವು ಬಾಪ್ಪಾ ಅವರ ಮುಖದ ಮೇಲೆ ಕುಣಿಯುತ್ತಿದ್ದುದನ್ನು ನೋಡಿ ಸುರಂಗೆಯು ಹೆಚ್ಚಿನ ಆದರದಿಂದ ಅವರ ಮಾತುಗಳನ್ನು ಕೇಳಹತ್ತಿದಳು.

"ತಾಯಿಯ ಪ್ರೇಮವು ಯಾವ ಪ್ರಕಾರದಲ್ಲಿ ಬರುತ್ತದೆ ?" ಸುಲೋಚನೆಯು ಕೇಳಿದಳು.

"ಅದು ಸ್ವಾಭಾವಿಕ."

"ಅದು ಉದಾತ್ತವಲ್ಲವೇ ?"

"ತ್ಯಾಗವಿಲ್ಲದೆ ಪ್ರೇಮವು ಉದಾತ್ತವಾಗಲಾರದು. ಪ್ರತಿಯೊಬ್ಬ ತಾಯಿಯ ಪ್ರೇಮವು ತನ್ನ ಮಗನಮೇಲೆ ಉದಾತ್ತವೇ ಇದ್ದರೆ, 'ಅತ್ತೆಯ ಕಾಟ' ಎಂಬ ಶಬ್ದಗಳೇ ಜಗತ್ತಿನಲ್ಲಿ ಕೇಳಬರುತ್ತಿದ್ದಿಲ್ಲ !"

"ನನ್ನ ಮೇಲಿನ ದಾದಾ ಅವರ ಪ್ರೇಮವಾದರೂ ಉದಾತ್ತವಿದೆಯೋ ಇಲ್ಲವೋ?"

ಬಾಪ್ಪಾ ಅವರು ಕ್ಷಣಹೊತ್ತು ವಿಚಾರದಲ್ಲಿ ಬಿದ್ದರು.

"ನನ್ನ ಸಲುವಾಗಿಯಂತಲೇ ಅವರು ಎರಡನೇ ಸಲ ಮದುವೆಯಾಗಲಿಲ್ಲ. ಅವರ ನಡೆಯಾದರೂ ಎಷ್ಟು ಪವಿತ್ರವಾಗಿದೆ!"

ಸುರಂಗೆ ಒಮ್ಮೆಲೇ ಬೆಚ್ಚಿದಂತೆ ನಡುಗಿದಳು.

"ಏನಾಯಿತು ?" ಸುಲೋಚನೆಯು ಕೇಳಿದಳು.

"ಅಲ್ಲಿ ಒಂದು ಜಿರಲಿ ಹೋಯಿತು !"

"ಎಲ್ಲಿ ? ಅದು ಕಿವಿಯಲ್ಲಿ ಸೇರಿತೆಂದರೆ, ತಲೆಯನ್ನೆಲ್ಲ ಪೊಳ್ಳು ಮಾಡಿಬಿಡುತ್ತದಂತೆ! ನನಗೆ ಸಣ್ಣವಳಿರುವಾಗಿನಿಂದ ಅದರದು ಒಳ್ಳೇ ಹೆದರಿಕೆ–"

ಸುಲೋಚನೆಯು ದೀಪ ತಕ್ಕೊಂಡು ಅಲ್ಲಿ ಇಲ್ಲಿ ನೋಡಿದಳು. ಆದರೆ ಜಿರಲಿಯು ಎಲ್ಲಿಯೂ ಕಾಣಲಿಲ್ಲ. ಬಾಪ್ಪಾ ಅವರು ಅಂದರು:

"ನಿನ್ನ ಮೇಲಿನ ದಾದಾ ಅವರ ಪ್ರೇಮ ಉದಾತ್ತವಿದೆಯೇ ಇಲ್ಲವೋ ಇದನ್ನು ಪರೀಕ್ಷೆ ಮಾಡಲಿಕ್ಕೆಂದೇ ನಾನು ಈಗ ಬಂದಿರುವೆ."

"ಪರೀಕ್ಷೆ?"

"ಹೌದು. ಕಾರಖಾನೆಯಿಂದ ಹಾನಿಯಾದರೂ ಅದನ್ನು ನಡೆಸಲೇಬೇಕೆಂದು ನೀನು ಹಟಹಿಡಿ. ಅಲ್ಲಿಂದ ನೋಡೋಣ ಅವರ ಪ್ರೇಮ ಎಂಥಾದ್ದಿರುವದೆಂಬುದನ್ನು !"

ಸುಲೋಚನೆಯು ಅಭಿಮಾನದಿಂದ ಹೇಳಿದಳು– "ಒಳ್ಳೇದು ಏನೂ ಅಡ್ಡಿಯಿಲ್ಲ– ನಮ್ಮದೂ ನಿಮ್ಮದೂ ಏನು ?"

"ನನ್ನದು ಏನು ಜಿದ್ದು ? ಈ ಬಗಲಬಂಡಿ ಇಲ್ಲವೆ ಈ ಪಂಚೆ !"

ಬಾಪ್ಪಾ ಅವರ ಉತ್ತರದಿಂದ ಹೊರಟ ಹಾಸ್ಯವು ಶಾಂತವಾಗುವಷ್ಟರಲ್ಲಿ ರಮಾಕಾಂತನು ಬಾಗಿಲದ ಹೊರಗಿನಿಂದಲೇ ಅಂದನು: "ಬಾಪ್ಪಾ ಅವರೇ, ಈ ನಿಮ್ಮ ತತ್ತ್ವಜ್ಞಾನವೆಲ್ಲ ಬಹಳ ಹಳೆಯದಾಗಿ ಹೋಗಿದೆ. ಯುರೋಪ ಅಮೆರಿಕದಲ್ಲಿಯ ಹೊಸ ಹೊಸ ಪುಸ್ತಕಗಳನ್ನು ಓದಿರಿ ಸ್ವಲ್ಪ, ಈ ನಿಮ್ಮ ಉದಾತ್ತ–ಗಿದಾತ್ತಗಳೆಲ್ಲವು ಸುಳ್ಳು ಎಂದು ಅವರ ಮತ. ಮಾನವ ಜೀವನದಲ್ಲಿ ಕೋಲಾಹಲ ಮಾಡುವ ಶಕ್ತಿ ಕೇವಲ ಒಂದೇ ಎಂದು ಪಾಶ್ಚಿಮಾತ್ಯ ಶಾಸ್ತ್ರಜ್ಞರು ಹೇಳುವರು !"

"ಅದು ಯಾವುದು ?"



"ಪ್ರಣಯ–ಸ್ತ್ರೀಪುರುಷರ ಆಕರ್ಷಣ !"

"ಆ ಶಾಸ್ತ್ರಜ್ಞರು ಪರೀಕ್ಷೆಗಳಲ್ಲಿ ಪಾಸಾಗಬಹುದು !"

"ಕೇವಲ ಪಾಸಾಗುವುದೆ ! ಅವರಿಗೆ ಸುವರ್ಣಪದಕ ಕೊಡಬೇಕು !"

"ಉಂ ಹುಂ. ಅವರ ಉತ್ತರ ಒಂದು ಮೂರಾಂಶದಷ್ಟೇ ಸರಿಯಾಗಿದೆ."

"ಅದು ಹೇಗೆ ?"

"ಪ್ರಣಯದ ಜೊತೆಯಲ್ಲಿ ಇನ್ನೂ ಇಬ್ಬರ ಹಕ್ಕು ಇದೆ ಮಾನವ ಜೀವನದ ಮೇಲೆ !"

"ಯಾರು ಯಾರದು ?"

"Hunger and soul ಹೊಟ್ಟೆ ಹಸಿವು ಮತ್ತು ಆತ್ಮ !"

"ಹೊಟ್ಟೆ ಏನು ? ನರಿ ನಾಯಿಗಳು ಸಹ ಹೊರೆಯುತ್ತವೆ. ಮತ್ತು ಆತ್ಮವೋ – ಪಾಶ್ಚಿಮಾತ್ಯರು, sole ಕ್ಕೆ (ಮೆಟ್ಟುಗಳ ತಳಕ್ಕೆ) ಕೊಟ್ಟಷ್ಟು ಮಹತ್ವವನ್ನು soul (ಆತ್ಮ)ಕ್ಕೆ ಕೊಡುವದಿಲ್ಲ ! ಅಂತಹ ಮೆಟ್ಟಿನ ತಳ ನೆಟ್ಟಗೆ ಇರದಿದ್ದರೆ ಜಾರಿಕೊಂಡು ಬಿದ್ದು ಅರಿವೆ ಹೊಲಸಾಗುವ ಸಂಭವವಿದೆ. ಈ ಆತ್ಮವಿರದಿದ್ದರೆ ಏನು ಕೆಡಬೇಕಾಗಿದೆ ?"

"ಏನೂ ವಿಶೇಷ ಕೆಡುವುದಿಲ್ಲ. ಪಶುಗಳಿಂದ ಮನುಷ್ಯನನ್ನು ಬೇರೆಯಾಗಿ ಮಾಡುವ ಸೃಷ್ಟಿಯ ಶ್ರಮವು ವ್ಯರ್ಥವಾಗುವದಿಷ್ಟೆ." ಬಾಪ್ಪಾ ಅವರ ದನಿಯೊಳಗಿನ ತೀವ್ರತೆಯು ರಮಾಕಾಂತನ ಹೊರತಾಗಿ ಎಲ್ಲರಿಗೂ ತಿಳಿಯದೆ ಇರಲಿಲ್ಲ.

"ಈ ಆತ್ಮ, ಇದು ಎಲ್ಲಿ ಬೆಳೆಯುತ್ತದೆ ಬಾಪ್ಪಾ."

"ಹೃದಯದಲ್ಲಿ. ಆದರೆ ಹೃದಯವು ಕಲ್ಲಿನಂತೆ ಇದ್ದು ಉಪಯೋಗವಿಲ್ಲ."

"ಹೃದಯವು ಈ ಬೆಳೆಗೆ ಭೂಮಿಯಾಗಿರಬೇಕು ! ಅಲ್ಲಿಂದ ಅದಕ್ಕೆ ನೀರುಗೀರು ಬೇಕಾಗುತ್ತಿರಬೇಕಲ್ಲವೆ?"

"ಅದಕ್ಕೆ ನೀರೋ ? ಎರಡನೆಯವರ ದುಃಖವನ್ನು ಕಂಡು ಬರುವ ನಮ್ಮ ಕಣ್ಣೀರೇ ಅದಕ್ಕೆ ನೀರು !"

"ಮತ್ತು ಅದಕ್ಕೆ ಬಿಸಿಲು?"

"ಆ ದುಃಖದ ತಾಪದಿಂದ ಕಾಯ್ದ ಹಣೆಯೆ !"

ಬಾಪ್ಪಾ ಅವರನ್ನು ಮಾತಿನಲ್ಲಿ ಸಹಜವಾಗಿಯೇ ಸೋಲಿಸಬಹುದೆಂದು ರಮಾಕಾಂತನು ಬಗೆದಿದ್ದನು. ಆದರೆ ಅಡವಿಯಲ್ಲಿ ಹಾರಿಸಿದ ಕೋವಿಯ ಸಪ್ಪಳಕ್ಕಿಂತ ಹೆಚ್ಚಾಗಿಯೇ ಪ್ರತಿಧ್ವನಿ ಬರುವಂತೆ, ಅವನು ಚುಚ್ಚಿ ಚುಚ್ಚಿ ಕೇಳಿದ ಪ್ರಶ್ನೆಗಳಿಗೆ ಸರಿಯಾಗಿಯೇ ಉತ್ತರಗಳು ದೊರೆತವು. ಅವನು ಹೊರಗಿನ ಕತ್ತಲೆಯಲ್ಲಿ ಮಿನುಗುವ ತಾರೆಗಳ ಕಡೆಗೆ ನೋಡಹತ್ತಿದ. ಬಾಪ್ಪಾ ಅವರು ವಿದ್ಯಾಧರನ ಕಡೆಗೆ ತಿರುಗಿ ಅಂದರು : "ಹಸಿವೆಯೂ ಪ್ರಣಯವೂ ಪಶುಗಳಲ್ಲಿಯೂ ಕಂಡುಬರುವವು. ಮನುಷ್ಯನಿಗೆ ಆತ್ಮವನ್ನು ಕೊಟ್ಟದ್ದೆಂದರೆ, ಪಶುಗಳಿಗಿಂತ ಶ್ರೇಷ್ಠನಾಗಿರಬೇಕೆಂತಲೆ ! ಆದರೆ ಈ ಶತಮಾನದಲ್ಲಿ ಅದು ಮರಣದ

ದಾರಿಯನ್ನೆ ಹಿಡಿದಂತೆ ತೋರುತ್ತದೆ !"

"ಈ ಶತಮಾನವೆಂದರೆ ಕಲೆ ಮತ್ತು ಶಾಸ್ತ್ರಗಳ ಉತ್ಕರ್ಷದ ಯುಗವೆಂದು ತಿಳಿಯಲ್ಪಡುತ್ತದೆ–"

"ಉತ್ಕರ್ಷ ? ಇಡೀ ಜಗತ್ತಿನಲ್ಲಿ ಕೋಟ್ಯಾವಧಿ ಜನರು ಅರೆಹೊಟ್ಟೆ ಜೀವಿಸುತ್ತಿರುವರು, ಬೇನೆಯಿಂದ ಬಳಲುತ್ತಿರುವರು, ಪಶುಗಳ ಸ್ಥಿತಿಯನ್ನೇ ಅಸೂಯೆಯಿಂದ ಬಯಸುತ್ತಿರುವರು. ಇದೇನು ಸಣ್ಣ ಪುಟ್ಟ ಉತ್ಕರ್ಷವಾಯಿತೆ ? ನಾಲ್ಕೆಂಟು ಜನ ಬಿಳಿಯಂಗಿಯವರು ಮಾತ್ರ ಕಲೆ ಮತ್ತು ಶಾಸ್ತ್ರಗಳ ಸುಖವನ್ನು ಅನುಭವಿಸುತ್ತಿರಬಹುದು; ಆದರೆ ಇತರರಿಗೆ–"

"ಅದಿರಲಿ ಬಿಡಿರಿ ಬಾಪ್ಪಾ ಅವರೇ, ತುರಂಗದಲ್ಲಿಯ ಮೋಜಿನ ನಾಲ್ಕು ಸಂಗತಿಗಳನ್ನು ಹೇಳಿರಿ, ನಮಗೆ ಸಾಕು. ಆಮೇಲೆ ಸುಖವಾಗಿ ನಿದ್ರೆ ಹೋಗೋಣವಂತೆ. ಕಲೆಗಿಂತಲೂ ಜೀವನವು ಶ್ರೇಷ್ಠವಾಗಿದೆ ಎಂಬುದಕ್ಕೆ ನಾನು ಒಪ್ಪುತ್ತೇನೆ. ಚಿತ್ರ ತೆಗೆಯುವ ಇಚ್ಛೆಯಾದರೆ ಅದನ್ನು ಬದಿಗಿರಿಸಬಹುದು, ಆದರೆ ಮನುಷ್ಯನಿಗೆ ನಿದ್ರೆ ಬಂದರೆ–"

"ಹಾ ಹಾ ಹಾ" ಅನ್ನುತ್ತ ಸುಲೋಚನೆಯು ಅಕಳಿಸಿದಳು.

ಬಿಸಿನೀರಿನ ಪಾತ್ರೆಯನ್ನು ತಣ್ಣೀರಿನಲ್ಲಿರಿಸಿದರೆ ಆರುವ ಪಾತ್ರೆಯಂತೆ ಬಾಪ್ಪಾ ಅವರು ಶಾಂತವಾದರು.

"ಜೇಲನ್ನು ಸೇರುವ ಎಲ್ಲ ಜನರೂ ಕೆಟ್ಟವರೇ ಇರುವರೇನರಿ, ಬಾಪ್ಪಾ ?' ಸುಲೋಚನೆಯು ಕೇಳಿದಳು.

"ಜೇಲಿನ ಹೊರಗಿರುವ ಎಷ್ಟೋ ಜನರಿಗಿಂತಲೂ ಒಳ್ಳೆಯವರಿರುತ್ತಾರೆ."

"ಹಾಗಾದರೆ ಅವರು ಜೇಲಿಗೆ ಯಾಕೆ ಬೀಳುತ್ತಾರೆ ?"

"ಬಡವರೆಂದು !"

"ಅಂದರೆ, ಅವರೇನೂ ಅಪರಾಧ ಮಾಡಿರುವುದೇ ಇಲ್ಲವೆ ?"

"ಮಾಡುತ್ತಾರೆ. ಆದರೆ ಅದನ್ನು ಅವರು ದಕ್ಕಿಸಿಕೊಳ್ಳಲಾರರು. ಸಿರಿವಂತಿಕೆಯು ಜಗತ್ತಿನೊಳಗಿನ ಎಲ್ಲಕ್ಕೂ ಶ್ರೇಷ್ಠವಾದ ಅರಗಿಸುವ ಔಷಧವಾಗಿದೆ."

"ಅದು ಹೇಗೆ ?"

"ಬಡವನಿಗೆ ಸಾಕ್ಷಿ ಸಿಗುವದಿಲ್ಲ. ದೊಡ್ಡ ವಕೀಲರೂ ದೊರಕುವದಿಲ್ಲ, ನ್ಯಾಯಾಧೀಶನ ಬಾಯಿಗೆ ಸಾಲುವಂಥ ತಕ್ಕ ಬೀಗವನ್ನೂ ಅವರು ಶೋಧಿಸಲಾರರು–"

"ಕೆಲವು ವೇಳೆ ಮಾತ್ರ ಹೀಗೆ ಆಗುತ್ತಿರಬೇಕು ! ಆದರೆ ಎಲ್ಲ ಪ್ರಸಂಗದಲ್ಲಿಯೂ–"

"ಒಂದೇ ಪ್ರಸಂಗ ಹೇಳುತ್ತೇನೆ ಹಾಗಾದರೆ ! ಕೇಳಿರಿ, ಜೇಲಿನಲ್ಲಿ ನನ್ನ ಜೊತೆಯಲ್ಲಿ ಒಂದು ಇಂಗ್ಲೀಷ ಶಾಲೆಯ ಜವಾನನೊಬ್ಬನಿದ್ದ."

"ಅವನೇನು ಮಾಡಿದ್ದ ?"

"ಸೆರೆ ಕುಡಿಯುವ ವ್ಯಸನವು ಸೇರಿಕೊಂಡಿತ್ತು ಅವನಲ್ಲಿ. ಶಾಲೆಯೊಳಗಿನ ಸಣ್ಣಪುಟ್ಟ



ಪದಾರ್ಥಗಳನ್ನು ಒಮ್ಮೊಮ್ಮೆ ಅವ ಕಳವು ಮಾಡುತ್ತಿದ್ದ."

"ಅಂದಮೇಲೆ ಅವನಿಗೆ ಶಿಕ್ಷೆಯಾಯಿತು. ಇದರಲ್ಲಿ ಕೇಡೇನಾಯ್ತು ?"

"ಅವನ ಕೂಡ, ಆ ಶಾಲೆಯ ಮುಖ್ಯ ಉಪಾಧ್ಯಾಯನಿಗೆ ಆಗಲಿಲ್ಲ. ಇದೇ ಅದರಲ್ಲಿ ತಪ್ಪು."

"ಅದೇಕೆ ? ಅವನೂ ಶಾಲೆಯೊಳಗಿನ ವಸ್ತುಗಳನ್ನು ಕದಿಯುತ್ತಿದ್ದನೋ ಹೇಗೆ ?"

"ಉಹುಂ. ಹಾಗಲ್ಲ ಅದು ! ಡ್ರಾಯಿಂಗ ಪರೀಕ್ಷೆಗಳು ಆಗುತ್ತಿದ್ದವು ಆಗ ಶಾಲೆಯಲ್ಲಿ."

"ಇದೇನು ಉಪಾಧ್ಯಾಯನ ಅಪರಾಧವೆ !"

"ನಾನು ಹೇಳುವದನ್ನಾದರೂ ಕೇಳುವಿಯೊ ಇಲ್ಲವೋ ? ತನ್ನ ಶಾಲೆಯೊಳಗಿನ ಹುಡುಗರು ಹೆಚ್ಚಾಗಿ ಪಾಸಾಗಬೇಕೆಂದು ಅವನು ಪ್ರಶ್ನ ಪತ್ರಿಕೆಯನ್ನು ಮೊದಲೇ ಒಡೆದು ನೋಡುತ್ತಿದ್ದ. ಮತ್ತು–"

"ಅಬ್ಬಾ !"

"ಯಾರಾದರೂ ಅವನ ವಿರುದ್ಧ ತಕರಾರು ಹೇಗೆ ಮಾಡಲಿಲ್ಲ ?" ವಿದ್ಯಾಧರ ಕೇಳಿದ.

"ತಕ್ರಾರೂ ಆಯಿತು. ದೊಡ್ಡ ಇನ್ಸಪೆಕ್ಟರರೂ, ವಿಚಾರಣೆಗೆ ಬಂದರು. ಇನ್ಸಪೆಕ್ಟರನಿಗೆ ಸ್ವತಃ ತಾನು ಇನ್ಸಪೆಕ್ಟರನೋ, ಅರಸನೋ ಎಂಬ ಭ್ರಾಂತಿಯಾಗುವಂತೆ ಆತನ 'ಸರಬರಾಯಿ' ಆಯಿತು. ಆತನಿಗೆ ಮಲಗಲಿಕ್ಕೆ ಮಂಚವೇನು ಆತನಿಗೆ ದಿನಾಲು ಹೊಸ ಹೊಸ ಮೀನುಗಳೇನು; ಒಂದೇ, ಎರಡೇ–"

"ಕಡೆಗೆ ಆಯಿತಾದರೂ ಏನು ಆ ಪ್ರಕರಣ?"

"ಆಗುವದೇನು ? ಮುಖ್ಯ ಉಪಾಧ್ಯಾಯ ನಿರ್ದೋಷಿ !"

ಕ್ಷಣಮಾತ್ರ ಒಳಹೊರಗಿನ ಶಾಂತತೆಯು ಎಲ್ಲರಿಗೂ ಭಯಂಕರವಾಗಿ ಭಾಸವಾಯಿತು. ಬಾಪ್ಪಾ ಅವರು ಮುಂದೆ ಹೇಳಿದರು– "ಮನುಷ್ಯತ್ವವು ಕೇವಲ ಬಿಳಿಯಂಗಿಯವರಲ್ಲಿಯೇ ಇರುವದಿಲ್ಲ. ಸುಲೋಚನಾ, ಏನಾದರೊಂದು ನೆಪ ಹೂಡಿ ಮೊದಲನೇ ಹೆಂಡತಿಯನ್ನು ಹೊರಗೆ ಹಾಕಿದ ಎಷ್ಟೋ ಪದವೀಧರರನ್ನು ನಾನು ತೋರಿಸಬಲ್ಲೆ. ಆದರೆ ನನ್ನ ಹತ್ತಿರವೇ ಜೇಲಿನಲ್ಲಿ ಇನ್ನೊಬ್ಬ ಕೈದಿ ಇದ್ದ. ಆತನಿಗೆ ಏಳು ವರ್ಷದ ಶಿಕ್ಷೆಯಾಗಿತ್ತು. ಒಂದು ದಿನ ರಾತ್ರಿ ಅವನು ತಳಮಳಿಸುತ್ತಿದ್ದುದನ್ನು ನೋಡಿ ನಾನು 'ಯಾಕೋ ಏನಾಗುತ್ತದೆ' ಎಂದು ಅವನಿಗೆ ಕೇಳಿದೆ.

'ಏನೂ ಇಲ್ಲರೀ' ಅವನು ಹೇಳಿದ 'ಹೆಂಡತಿಯ ನೆನಪಾಗಿತ್ತು.' ಆತನ ಪ್ರೇಮವು ಉಪಭೋಗಾತ್ಮಕವೇ ಇರಬಹುದು. ಆದರೆ ಆ ಕ್ಷಣದಲ್ಲಿ ಅದು ನನಗೆ ಉದಾತ್ತವೆನಿಸಿತು."

"ಅವನ ಹೆಸರೇನು ?" ಸುರಂಗೆಯು ಕೇಳಿದಳು. ಇಷ್ಟು ಹೊತ್ತಿನವರೆಗೆ ಅವಳು ಸ್ತಬ್ಧಳಾಗಿ ಕುಳಿತಿದ್ದಳು.

“ಅವನ ಹೆಸರು, ಸಾವಳ ! ಅವನೂ ಈಗ ಬಿಡುಗಡೆಹೊಂದಿರಬೇಕು. ಕಾಮಾಪುರದ ಕಡೆಯವನೇ ಅವನೂ !”

ನಿದ್ರೆ ಬಂದ ಮೂಲಕ ಸುರಂಗೆಯು ಕಣ್ಣುಗಳನ್ನು ತಿಕ್ಕುತ್ತಿರಬೇಕೆಂದು ಸುಲೋಚನೆಗೆ ಅನಿಸಿತು. ಎಲ್ಲರೂ ಮಲಗಲು ಎದ್ದರು. ಆದರೆ ಆ ದಿನ ರಾತ್ರಿ ಬಾಪ್ಪಾ ಅವರ ಹೊರತಾಗಿ ಯಾರಿಗೂ ನಿದ್ರೆ ಬರಲಿಲ್ಲ. ದೀಪದ ಮೂಲಕ ನಿದ್ರೆ ಬರಲೊಲ್ಲದೆಂದು ಸುಲೋಚನೆಯು ಅದನ್ನು ಆರಿಸಿದಳು. ಆದರೆ ಹೊರಗಿನ ದೀಪದಂತೆ ಅಂತರಾಳದಲ್ಲಿಯ ದೀಪವನ್ನು ಆರಿಸುವದು ಯಾರಿಗಾದರೂ ಸಾಧ್ಯವೆ ?

* * * * *

ಮರುದಿವಸ ಮುಂಜಾನೆ ಎಲ್ಲರೂ ಹಿರಣ್ಯಕೇಶಿ ನದಿಯ ಉಗಮವನ್ನು ನೋಡಲಿಕ್ಕೆ ಹೊರಟರು. ಪ್ರಾತಃಕಾಲದ ತಣ್ಣಗಿನ ಸುಳಿಗಾಳಿಯು ನಿದ್ರೆ ಇಲ್ಲದ ಮೂಲಕ ಬಂದ ಅಸ್ವಸ್ಥತೆಯನ್ನು ಹೋಗಲಾಡಿಸಿತು. ರಾತ್ರಿಯ ಕಿರ್ರೆನ್ನುವ ಕತ್ತಲೆಯ ಬದಲಾಗಿ ಪ್ರಾತಃಕಾಲದ ಪ್ರಕಾಶವು ಹೊರಗೆ ಅಲ್ಲಲ್ಲಿ ಹಬ್ಬಿದಂತೆ, ವಿಚಾರದಿಂದ ಜಡವಾಗಿದ್ದ ಎಲ್ಲರ ಮನಗಳೂ ಹಗುರಾದವು. ಮುಂಜಾವಿನ ದೃಶ್ಯವಾದರೂ ರಮಣೀಯವಾಗಿತ್ತು. ಪ್ರದರ್ಶನದಲ್ಲಿ ಒಂದು ಒಳ್ಳೇ ಕಲೆಗಾರಿಕೆಯ ಕೆಲಸವನ್ನು ನೊಡಿ ಮುಂದಕ್ಕೆ ಹೋಗುವಷ್ಟರಲ್ಲಿ ಅಷ್ಟೇ ಸುಂದರವಾದ ಕುಸರುಳ್ಳ ಮತ್ತೊಂದು ಕೃತಿಯನ್ನು ನೋಡುವವರಂತೆ ಅವರಿಗೆ ವಿವಿಧ ದೃಶ್ಯಗಳು ಕಂಡವು. ಮೀನಗಾರನ ಅತ್ಯಂತ ಜಿನುಗು ಜಾಳಿಗೆಯನ್ನೂ ನಾಚಿಸುವಂಥ ಆ ಇಬ್ಬನಿಯ ಜಾಳಿಗೆಯು, ಅದರೊಳಗೆಯೇ ಸುವರ್ಣದ ಮೀನುಗಳಂತೆ ಹೊಳೆಯುವ ಜಲಬಿಂದುಗಳು–ರಾತ್ರಿಯಲ್ಲಿ ತಾರೆಗಳು ಪೃಥ್ವಿಯ ಮೇಲೆ ಕ್ರೀಡೆಗೆ ಬಂದು, ಆಡಿ ದಣಿದು ಈ ರೇಶಿಮೆಯ ಡೇರೆಯಲ್ಲಿ ವಿಶ್ರಮಿಸಿರುವವೋ ಏನೊ ! ಅಲ್ಲದೆ ಆ ಡೇರೆಗಳಲ್ಲಿಯ ಮಾಟದ ಕನ್ನಡಿಗಳು ಅವುಗಳ ಪ್ರತಿಬಿಂಬಗಳನ್ನು ತಮ್ಮ ಹೃದಯದ ಹತ್ತಿರವೇ ಹಿಡಿದಿಟ್ಟುಕೊಂಡಂತೆಯೇ ಇತ್ತು. ಜಾಳಿಗೆಯ ಮೇಲೆ ದೃಷ್ಟಿಯು ಹೋದರೆ ಮಂಜಿನಲ್ಲಿ ಮುಸುಕಿಕೊಂಡ ಗಿಡಬಳ್ಳಿಗಳು ಕಾಣುವವು. ಒಂದು ಗಿಡಕ್ಕೆ ಅಂಟಿಕೊಂಡ ಒಂದು ಬಳ್ಳಿಯು ಗಾಳಿಯಲ್ಲಿ ಅಲ್ಲಾಡುತಿತ್ತು. ಅದರ ಕಡೆಗೆ ಬೊಟ್ಟು ಮಾಡಿ ರಮಾಕಾಂತನು ಸುರಂಗೆಗೆ ಕೇಳಿದನು.

“ನೋಡಿದಿಯಾ ?”

“ಏನು ?”

“ಮಂಜಿನ ಪರದೆಯಲ್ಲಿ ಮಲಗಿಕೊಂಡ ಆ ಬಳ್ಳಿಯು ಆ ಗಿಡದಿಂದ ದೂರವಾಗಲು ನೋಡುತ್ತಿರುವದು !”

“ಯಾಕೆ ?”

“ಪಾತರಗಿತ್ತಿ ಕರೆದರೂ, ಗಾಳಿ ಸಿಳ್ಳು ಹಾಕಿದರೂ ಈ ‘ಜೋಡಿ’ಗೆ ಎಚ್ಚರವಾಗಲಿಲ್ಲ. ಆಮೇಲೆ ಸೂರ್ಯನು ತನ್ನ ಕಿರಣಗಳನ್ನು ಕಳಿಸಿಕೊಟ್ಟ. ಕಿರಣಗಳು ಬಂದು ಪರದೆಯನ್ನು ಮೇಲಕ್ಕೆತ್ತಿದಾಗ–ಅದು ನೋಡು ಎಷ್ಟೊಂದು ನಾಚಿಕೊಂಡಂತೆ–”



ಸುರಂಗೆಯ ಮನಸ್ಸಿನಲ್ಲಿ ರಾತ್ರಿಯಲ್ಲಿಯ ಬಾಪ್ಪಾ ಅವರ ಮಾತಿನ ಮಂಜು ತುಂಬಿತ್ತು. ಅದು ಈಗ ರಮಾಕಾಂತನ ಈ ಮೋಡಿಯಿಂದ ಅಡಗಹತ್ತಿತು. ನಡುನಡುವೆ, ಎಲೆಗಳ ವಾಸನೆ, ಕಾಡ ಹೂವುಗಳ ಸಮ್ಮಿಶ್ರ–ಸುಗಂಧವು ಗಾಳಿಯ ಲಹರಿಯೊಡನೆ ಅವರಿಬ್ಬರ ಅಂತಃಕರಣದಲ್ಲಿಯ ನಾಚುವ ಇಚ್ಛೆಗಳೇ ಹೊರಗೆ ಆಡುತ್ತ ಅಡಗಿಕೊಳ್ಳುತ್ತ ಬಂದಂತೆ ಬರುತ್ತಿತ್ತು. ಇಬ್ಬನಿಯಿಂದ ತುಂಬಿದ ಹುಲ್ಲಮೇಲೆ ನಡೆಯುವಾಗ, ಮಂಜು ಮುಸುಕಿದ ಗುಡ್ಡಗಳನ್ನು ನೋಡುವಾಗ, ಹೊಸದಾಗಿ ಚಿಗುರಿದ ಗಿಡಗಳ ಟೊಂಗೆಗಳಿಗೆ ಕೈಹಚ್ಚಿದಾಗ, ರಮಾಕಾಂತನಿಗೆ ಹೆಜ್ಜೆ ಹೆಜ್ಜೆಗೆ ಆನಂದವಾಗುತ್ತಿತ್ತು. ಆತನ ಈ ಆನಂದದ ಉಗಮವು ಸುತ್ತಲಿನ ಸುಂದರ ಸೃಷ್ಟಿಯಲ್ಲಿತ್ತೋ ಎಂಬುದು ಆತನಿಗೆಯೇ ತಿಳಿಯದಂತಾಗಿತ್ತು. ತನ್ನ ಕಿವಿಗಳ ಮೇಲೆ ಬೀಳುವ ಪಕ್ಷಿಗಳ ಕಿಲಕಿಲಾಟವು, ತನ್ನ ಹೃದಯದಲ್ಲಿಯ ಅಸ್ಫುಟ ಮಧುರಭಾವಗಳ ಪ್ರತಿಧ್ವನಿಯೇ ಎಂದು ಅವನಿಗೆ ಕ್ಷಣಮಾತ್ರ ಭಾಸವಾಯಿತು. ರಮಾಕಾಂತನೂ ಸುರಂಗೆಯೂ ಹಿಂದೆ ಉಳಿಯಹತ್ತಿದ್ದನ್ನು ನೋಡಿ ಸುಲೋಚನೆಯು “ಯಾಕೆ ಹಿಂದಿನಿಂದಲೇ ಓಡಿಹೋಗುವ ವಿಚಾರವಿದೆಯೋ ಏನು ?” ಎಂದು ಕೇಳಿದಳು.

“ನಡೆಯಲಿಕ್ಕೆ ಆಗುವುದಿಲ್ಲವೆನ್ನುತ್ತಾಳೆ, ಸುರಂಗೆ !”

ಸುರಂಗೆಯು “ಇದು ನಿಮ್ಮ ಕೈಗಂಟು” ಅನ್ನುವಂತೆ ಅಭಿನಯದಿಂದಲೇ ತೋರಿಸಿದಳು. ಆದರೆ ರಮಾಕಾಂತನು ಅವಳಿಗೆ ಕಣ್ಸನ್ನೆ ಮಾಡಿದ. ಕೊನೆಗೆ ಸುರಂಗೆಯ ಜೊತೆಯಲ್ಲಿ ರಮಾಕಾಂತನು ಬರತಕ್ಕದ್ದೆಂದು ನಿಶ್ಚಯಿಸಿ ಉಳಿದವರೆಲ್ಲರೂ ಮುಂದೆ ಸಾಗಿದರು.

ಕಾಲುದಾರಿಯನ್ನು ಬಿಟ್ಟು ದೂರದಲ್ಲಿ ರಮಾಕಾಂತನೂ ಸುರಂಗೆಯೂ ಹೋಗಿ ನೆರಳಿನಲ್ಲಿ ಕುಳಿತುಕೊಂಡರು. ಉದುರಿಬಿದ್ದ ಒಂದು ಎಲೆಯ ಕೂಡ ಆಟವಾಡುತ್ತ ಸುರಂಗೆಯು ಕೇಳಿದಳು–“ಕಾಮಾಪುರದಿಂದ ಯಾವಾಗ ಬರುವವರು ನೀವು ?”

“ನನ್ನದೇನು ? ಊರು ಒಳ್ಳೆಯದಾಗಿ ಕಂಡರೆ, ಇರುವೆ ನಾಲ್ಕು ದಿವಸ ಹೆಚ್ಚು.”

“ನಾಲ್ಕು ದಿವಸವೇ. ಅಂದರೆ ಬೆಳಗಾಂವಿಯಲ್ಲಿ ನಾನು ಒಬ್ಬಳೇ ಇರಬೇಕೇ ?”

“ನೀನೂ ನಡೆ, ಹಾಗಾದರೆ ಕಾಮಾಪುರಕ್ಕೆ.”

“ಇದೊಳ್ಳೆಯ ನ್ಯಾಯ ! ಲಗ್ನ ಮಾಡು ಎಂದರೆ ಹೆಂಡತಿನ್ನ ತಾ ಮೊದಲು ಅಂದಂತೆ!” ಸುರಂಗೆ ನಗುನಗುತ್ತ ಅಂದಳು– “ನೀವಿಲ್ಲದೆ ನನಗೆ ಬೆಳಗಾಂವಿಯಲ್ಲಿ ವೇಳೆಯು ಹೋಗುವಂತಿಲ್ಲ.”

“ಹಾಗಾದರೇ ನಾನೊಬ್ಬ ಒಳ್ಳೇ ವಿದೂಷಕನೇ ಅನ್ನಬೇಕು !”

“ಅದೇಕೆ ?”

“ಮೊದಲಿನ ಕಾಲದ ಅರಸರು ಮನರಂಜನೆಯ ಸಲುವಾಗಿ ವಿದೂಷಕರನ್ನು ಸಾಕಿರುತ್ತಿದ್ದರು. ಆದರೆ ಈಗಿನ ರಾಣಿಯರು–”

“ಆದರೆ ರಾಣಿಗೆ ವಿದೂಷಕನಿಗಿಂತಲೂ ಹೆಚ್ಚಾಗಿ ಬೇಕಾದವರು ಇನ್ನೊಬ್ಬರಿರುತ್ತಾರೆ.”

“ಯಾರವರು ?”

ಕೆಳಗೆ ನೋಡುತ್ತ ನೋಡುತ್ತ ಸುರಂಗೆ ಉತ್ತರ ಕೊಟ್ಟಳು– "ರಾ...ಜ...ನು."

ರಮಾಕಾಂತನ ಮುಗ್ಧದೃಷ್ಟಿಯು ಅವಳ ಕೇಶಕಲಾಪದ ಮೇಲೆ ನಟ್ಟಿತ್ತು. ಕಿವಿಗಳ ಮೇಲೆ ಹೊರಳಿ, ಗಾಳಿಯಲ್ಲಿ ಅಲುಗಾಡುತ್ತಿದ್ದ ಅವಳ ಕುರುಳುಗಳ ಶೋಭೆಯು ಆತನಿಗೆ ಭರತಿಯ ತೆರೆಯ ಶೋಭೆಯನ್ನು ನೆನಪುಮಾಡಿಕೊಟ್ಟಿತು. ಮತ್ತು ದಂಡೆಯ ಪಕ್ಕದಲ್ಲಿಯೇ ಅತ್ತಿಂದಿತ್ತ ಪಟಪಟನೆ ಹಾರಾಡುವ ಮೀನುಗಳನ್ನು ಕಚ್ಚಿಕೊಂಡು ಹೋಗುವ ಹಕ್ಕಿಯಂತೆ, ಅವಳ ಸೆರಗು ಅವಳ ಹೆಗಲಿನಿಂದ, ಕರ್ಣಾಗ್ರದವರೆಗೂ ಹಾರಾಡುತ್ತಿತ್ತು. ಅವಳು ತನ್ನ ಮುಖವನ್ನು ಮೇಲಕ್ಕೆತ್ತಲಾರಳೆಂದು ಮನಗಂಡು ರಮಾಕಾಂತನು ಅಂದನು : "ಈ ಕತ್ತಲೆಯಲ್ಲಿ ಹಡಗವು ಬಂದರವನ್ನು ಕಾಣುವುದಾದರೂ ಹೇಗೆ ?"

"ಕಪ್ತಾನನ ಹತ್ತರ ಯಂತ್ರವಿರುತ್ತದಲ್ಲ !"

"ಹೋಕಾಯಂತ್ರವೇ ? ಅದರದೇನು ಉಪಯೋಗ ? ಧ್ರುವ ನಕ್ಷತ್ರವು ಆಕಾಶದಲ್ಲಿ. ಯಂತ್ರವು ದಿಕ್ಕು ತೋರಿಸಬಹುದು. ಆದರೆ ದಂಡೆಯು–"

"ದಂಡೆಯ ಮೇಲೆ ದೀಪಗಳಿರುತ್ತವಲ್ಲ."

"ದೀಪಗಳೇ ಕಾಣಿಸಲೊಲ್ಲವು. ಅಂತೇ–"

"ದೀಪಗಳನ್ನು ಎತ್ತರದ ಮೇಲೆ ಹಚ್ಚುತ್ತಾರೆ."

"ಇಲ್ಲವೆಂದು ಯಾರು ಅನ್ನುವರು?"

"ಅಷ್ಟು ಎತ್ತರದ ಮೇಲೆ ನನ್ನನ್ನು ಒಯ್ಯುವಿರಲ್ಲವೇ ?" ಸುರಂಗೆಯು ಮೇಲಕ್ಕೆ ದೃಷ್ಟಿಯನ್ನೆತ್ತುತ್ತ ಕೇಳಿದಳು.

ಗಿಡಗಂಟಿಯೊಳಗಿನಿಂದ ಅಷ್ಟಮಿಯ ಸುಂದರ ಚಂದ್ರನನ್ನು ಕಂಡಂತೆ ರಮಾಕಾಂತನಿಗೆ ಅವಳ ಮುಖವನ್ನು ನೋಡಿ ಭಾಸವಾಯಿತು. ಅವಳಿಗೆ ಉತ್ತರ ಕೊಡುವ ಎಚ್ಚರವೂ ಅವನಿಗೆ ಉಳಿಯಲಿಲ್ಲ. ಒಮ್ಮೆಲೆ ಮುಂದಕ್ಕೆ ಬಂದು ಅವಳನ್ನು ಚುಂಬಿಸಿದ.

* * * * *

ತಿರುಗಿ ಬರುವ ಮುಂದೆ ಸುಲೋಚನೆಗೆ ದಣುವಾಗಿತ್ತು. ಆದರೂ ನದಿಯ ಮೂಲದವರೆಗೂ ಹೋಗಿ ಬಂದ ಆನಂದವು ಅವಳ ಮುಖದ ಮೇಲೆ ಒಡೆದು ಕಾಣುತ್ತಿತ್ತು. ನಡುನಡುವೆ ವಿದ್ಯಾಧರನ ಮೋಜಿನ ಮಾತುಗಳಿಂದ ಅವಳ ಶ್ರಮವು ಅರ್ಧ ಪರಿಹಾರವಾಗಿತ್ತು. ಬಾಪ್ಪಾ ಅವರು ಮಾತ್ರ ಯಾವುದೋ ವಿಚಾರದಲ್ಲಿ ಮಗ್ನರಾಗಿದ್ದು ಅವರಿಬ್ಬರ ಹಿಂದಿನಿಂದ ನಿಧಾನವಾಗಿ ಬರುತ್ತಿದ್ದರು.

ರಮಾಕಾಂತ ಸುರಂಗೆಯರ ಆನಂದದ ಮುದ್ರೆಗಳನ್ನು ಕಂಡು ಸುಲೋಚನೆಗೆ ಆಶ್ಚರ್ಯವಾಯಿತು. ಮುಂದೆ ಹೋಗಲಿಕ್ಕೆ ಸಿಗಲಿಲ್ಲವೆಂದು ಅವರಿಬ್ಬರೂ ಹಳಹಳಿಸುತ್ತಿರಬಹುದೆಂದು ಅವಳ ಭಾವನೆ.

"ಅದು ಎಷ್ಟು ಮೋಜೆಂದಿರಿ ರಮಾಕಾಂತ, ಅಲ್ಲಿ ಹೋಗುವದೆಂದರೆ !"

"ಹೀಗೋ ? ನನಗೇನೋ ಬೇರೆ ಉದಾತ್ತ ವಿಚಾರವೇ ಹೊಳೆಯಿತು. ನದಿಯ



ಮೂಲವನ್ನೂ ಋಷಿಯ ಕುಲವನ್ನೂ ಶೋಧಿಸಬಾರದೆನ್ನುತ್ತಾರೆ. ಋಷಿಗಳಂತೂ ನಿಮ್ಮ ಕೂಡ ಇದ್ದೇ ಇದ್ದರಲ್ಲಾ !" ಹಿಂದಿನಿಂದ ಬರುವ ಬಾಪ್ಪಾ ಅವರು ಇದನ್ನು ಕೇಳಿ ನಸುನಗುತ್ತ ಹೇಳಿದರು "ಇವೆಲ್ಲ ಹಳೆಯ ಮಾತುಗಳು, ರಮಾಕಾಂತ."

"ಹಾಗಾದರೆ ಹೊಸದೊಂದು ಹೇಳಿರಿ ! ಎಲ್ಲಿಯಾದರೂ ಒಂದು ಕಥೆಯಲ್ಲಿ ಸೇರಿಸಿಬಿಡೋಣ."

"ಕಲೆಯ ಮೂಲವನ್ನೂ ಶ್ರೀಮಂತರ ಕುಲವನ್ನೂ ವಿಚಾರಿಸಬಾರದು."

ರಮಾಕಾಂತನು ಒಮ್ಮೆಲೆ ತೆಪ್ಪಗಾದನು. ಸುರಂಗೆಯೂ ಇನ್ನೆಲ್ಲಿಯೋ ನೋಡಹತ್ತಿದಳು. ತುಸು ದಾರೀ ನಡೆದಮೇಲೆ ಅವನು ಸುಲೋಚನೆಗೆ ಅಂದನು.

"ನಾನು ತಿರುಗಿ ಬೆಳಗಾಂವಿಗೆ ಹೋಗಿಬಿಡಬೇಕೆನ್ನುವೆ."

"ದಾದಾ ಅವರು ಮೊದಲೇ ನನ್ನ ಮೇಲೆ ಕೋಪಿಸಿಕೊಂಡಿದ್ದಾರೆ. ಅದರಲ್ಲಿ ನೀವೂ ಅಲ್ಲಿಗೆ ಬರದಿದ್ದರೆ–"

"ನಾಲ್ಕು ದಿವಸದ ಅನಂತರ ಬರುವೆ."

"ದಾದಾ ಅವರು ನೀವು ಬರುವ ದಾರೀ ಕಾಯುತ್ತಿದ್ದಾರೆ. ಅವರ ಆ ಪುಸ್ತಕ– ವಿದ್ಯಾಧರನ ಫೋಟೋಗಳು ತಯಾರ ಇರಬಹುದು ಕೂಡ. ಅಲ್ಲವೇ?"

ವಿದ್ಯಾಧರನು ಇಲ್ಲವೆಂದು ಗೋಣುಹಾಕಿದ. ಸುಲೋಚನೆಗೆ ಆಶ್ಚರ್ಯವಾಯಿತು. ಪುಸ್ತಕದ ಸಲುವಾಗಿ ಬೇಕಾಗುವ ಫೋಟೋಗಳನ್ನು ವಿದ್ಯಾಧರನು ತೆಗೆಯುತ್ತಿರುವ ಬಗ್ಗೆ ದಾದಾ ಅವರು ತನಗೆ ಮೊದಲೇ ತಿಳಿಸಿದ್ದರು. ಅವಳು ವಿಸ್ಮಯದಿಂದ ಕೇಳಿದಳು: "ಫೋಟೊಗಳನ್ನು ತೆಗೆದಿದ್ದರಲ್ಲವೇ?"

"ಹೌದು."

"ಹಾಗಾದರೆ ಸರಿಯಾಗಿ ಹೊರಡಲಿಲ್ಲವೇ ಅವು ?"

ತನಗೆ ಫೋಟೋಗಳನ್ನು ಚೆನ್ನಾಗಿ ತೆಗೆಯಲಿಕ್ಕೆ ಬರುವದಿಲ್ಲವೆಂದು ಹೇಳುವದೂ ವಿದ್ಯಾಧರನಿಗೆ ಬೇಡವಾಗಿತ್ತು. ಆದರೆ ಕೂಡಲೆ ಕೃಷ್ಣೆಯ ಮೂರ್ತಿಯು ಆತನ ಕಣ್ಣೆದುರಿಗೆ ನಿಂತಿತು. ಆ ಫೋಟೋಗಳನ್ನು ಪುಸ್ತಕದಲ್ಲಿ ಹಾಕಿದರೆ ದುಷ್ಟ ಗಂಡನಿಗೆ ಅವಳ ಗುರುತು ಸಿಕ್ಕೀತು–ಛೇ ! ಅದೇನೂ ಉಪಯೋಗದ್ದಲ್ಲ.

"ಅವೆಲ್ಲ ಕಾಜುಗಳು ಒಡೆದುಹೋದವಲ್ಲ" ಅವನು ಉತ್ತರ ಕೊಟ್ಟ.

"ಯಾತರಿಂದ?"

"ಅಲ್ಲಿ ಪಾತ್ರೆಗಳನ್ನು ತೊಳೆಯಲಿಕ್ಕೆ ಕೃಷ್ಣಾ ಎಂಬ ಒಕ್ಕಲಗಿತ್ತಿ ಬರುತ್ತಾಳೆ."

"ಕೃಷ್ಣಾ ? ಅವಳು ನನ್ನ ಗುರುತಿನವಳೇನು?"

"ಇತ್ತೀಚೆಗೆ ಬಂದಿರುವಳು ಅವಳು ಕಾಮಾಪುರದಲ್ಲಿ. ಅವಳ ಕೈಯಿಂದ ಆ ಕಾಜುಗಳೆಲ್ಲವೂ ನೆಲಕ್ಕೆ ಬಿದ್ದವು...."

"ಆ ಪುಸ್ತಕಕ್ಕೇನು ಮುಹೂರ್ತ ಒಳ್ಳೆಯದಿದ್ದಂತೆ ಕಾಣುವುದಿಲ್ಲ."

ರಮಾಕಾಂತನು ಸುಲೋಚನೆಗೆ ಅಂದ: "ನಾನು ಬರುವದಿಲ್ಲವೆನ್ನುವದು ಇಷ್ಟರ ಸಲುವಾಗಿಯೆ !"

"ನಿಮಗೇನು ಭವಿಷ್ಯ ಮೊದಲೇ ಗೊತ್ತಾಗಿತ್ತು ?"

"ಭವಿಷ್ಯವಲ್ಲದೆ ಮತ್ತೇನು ?"

"ನಾನು ಹೇಳಲೋ ?"

"ಹುಂ."

"ದೃಷ್ಟಿಲಾಭ."

**'ದೃಷ್ಟಿಲಾಭ'** ಇದು ರಮಾಕಾಂತನು ಬೆಳಗಾಂವಿಗೆ ಬಂದ ಅನಂತರ ಬರೆದ ಕಥೆ. ಎರಡು ದಿವಸ ಪೂರ್ವದಲ್ಲಿ ಅದು 'ಬಕುಲ'ದಲ್ಲಿ ಪ್ರಸಿದ್ಧವಾಗತಕ್ಕದ್ದಿತ್ತು. ಅದರ ಕಥಾನಕವೆಂದರೆ– ನಾಯಕ ಇಬ್ಬರು ಚೆಲುವೆ ಹುಡುಗಿಯರನ್ನು ಪ್ರೀತಿಸುತ್ತಾನೆ. ಅಷ್ಟೇ ತೂಕದ, ಒಂದೇ ಆಕಾರದ ಎರಡು ಮಾಣಿಕಗಳಲ್ಲಿ ಒಂದನ್ನು ಆರಿಸಿಕೊಳ್ಳುವದು ಕಷ್ಟ ಸಾಧ್ಯ ಕೆಲಸವಷ್ಟೆ ! ಒಮ್ಮೆ ಒಬ್ಬಳು ರೂಪವತಿಯಾಗಿ ಕಂಡರೆ ಮತ್ತೊಮ್ಮೆ ಇನ್ನೊಬ್ಬಳು ಸುಂದರಳಾಗಿ ಕಾಣುತ್ತಾಳೆ. ಚೀಟಿಗಳನ್ನು ಹಾಕಿ ಆರಿಸುವ ಪ್ರಸಂಗ ಬರುತ್ತದೆ. ಇಷ್ಟರಲ್ಲಿ ಕುರುಡುತನದ ಸೋಗು ಹಾಕಿಕೊಂಡು ಬೀದಿಯಲ್ಲಿ ಬರುವ ಒಬ್ಬ ಭಿಕ್ಷುಕನನ್ನು ಕಂಡು ಅವನಿಗೆ ಒಂದು ಯೋಚನೆಯು ಹೊಳೆಯುತ್ತದೆ. ಅವನು ಒಬ್ಬ ಡಾಕ್ಟರನ ಸಹಾಯದಿಂದ ಒಂದು ಕಪಟವನ್ನು ಏರ್ಪಡಿಸುತ್ತಾನೆ. ಡಾಕ್ಟರನಾದರೂ ಅವನ ಕಣ್ಣುಗಳು ಹೋದವೆಂದು ಪ್ರತಿಪಾದಿಸಿ, ಅವನ ಕಣ್ಣುಗಳನ್ನು ಕಟ್ಟಿಬಿಡುತ್ತಾನೆ. ಆ ಇಬ್ಬರೂ ತರುಣಿಯರಲ್ಲಿ, ಒಬ್ಬಳು ಡಾಕ್ಟರನ ಕಡೆಗೆ ಬಂದು ಅವನ ಕುರುಡುತನದ ಬಗ್ಗೆ ವಿಚಾರಿಸುತ್ತಾಳೆ. ಅವನ ಕಣ್ಣುಗಳು ಸಂಪೂರ್ಣವಾಗಿಯೇ ಹೋದವೆಂದು ತಿಳಿದಕೂಡಲೆ ಅವಳು ಅವನಿಗೆ ಪುನಃ ಭೆಟ್ಟಿ ಕೂಡ ಆಗದೆ ಹೋಗಿಬಿಡುತ್ತಾಳೆ. ಆದರೆ ಮತ್ತೊಬ್ಬಳು ಅವನ ಹಾಸಿಗೆಯ ಹತ್ತಿರ ಬಂದು, ನಿಟ್ಟುಸಿರು ಬಿಟ್ಟು ಮೆಲ್ಲನೆ ಅವನನ್ನು ಚುಂಬಿಸುತ್ತಾಳೆ. ಅವನು ಕೇಳಿದ : "ಯಾರು ಅವರು ?" ಅವಳು ಮಾತಾಡುವದಿಲ್ಲ. ಅವನು ಕಣ್ಣುಗಳನ್ನು ಬಿಚ್ಚಿಕೊಂಡು ಅವಳ ಕಡೆಗೆ ನೋಡಿ, ಅವಳನ್ನು ಕರೆಯುತ್ತಾನೆ.

"ನೀವು ನನ್ನನ್ನು ಹೇಗೆ ಗುರುತಿಸಿದಿರಿ ?"

"ನಿಚ್ಚಳವಾಗಿ ನೀನು ನನಗೆ ಕಾಣಿಸುವಿಯಲ್ಲ !"

"ಅವ್ವಯ್ಯಾ, ನಿಮ್ಮ ಕಣ್ಣುಗಳು–"

"ಅಂದರೆ ?"

"ರಾಮಾಬಾಣದಂಥ ಔಷಧವೇ ಸಿಕ್ಕ ಮೇಲೆ."

"ಯಾರು, ಡಾಕ್ಟರರು ಕೊಟ್ಟರೆ ?"

"ಛೇ ! ಡಾಕ್ಟರರು ಕೊಡಲಿಲ್ಲ. ಕೊಟ್ಟವಳು ನೀನು !"

"ಹೋಗಿರಿ ಇದೇನು ?"

"ಹೋಗಿರಿ ಏನು ? ರೋಗವು ಕಣ್ಣಲ್ಲಿಯಾದರೆ ಔಷಧವು ತುಟಿಗಳ ಮೇಲೆ !" ಈ



ಸಂವಾದದಲ್ಲಿ ಕಥೆ ಮುಗಿದಿತ್ತು.

ಸುಲೋಚನೆಯು ಆ ಕಥೆಯನ್ನು ಎರಡಮೂರು ಸಾರೆ ಓದಿದ್ದಳು. ನಿಜವಾಗಿಯೂ ಅದು ಅವಳ ಕಣ್ಣುಗಳೆದುರಿಗೆ ನಿಂತಿತು.  ಸುರಂಗೆ ರಮಾಕಾಂತರು ಬೇಕೆಂತಲೇ ಹಿಂದೆ ಉಳಿದರೆಂದು ಅವಳಿಗೆ ಅನಿಸಿತು. ನೊಂದ ಮನಸ್ಸಿನಿಂದ ಅವಳು ಸುತ್ತು ಕಡೆ ನೋಡಿದಳು. ಹವೆಯಲ್ಲಿ ಸೆಕೆಯೂ ಹೆಚ್ಚಾಗಿತ್ತು. ನಿಜವಾದ ಅನುಭವವು ಕಲ್ಪನೆಯನ್ನು ಹೊರದೂಡುವಂತೆ ಮೇಲಕ್ಕೇರಿದ ಸೂರ್ಯನು ಹತ್ತು ದಿಕ್ಕುಗಳಲ್ಲಿಯೂ ಹಬ್ಬಿದ ಮಂಜನ್ನು ಓಡಿಸಿಬಿಟ್ಟಿದ್ದನು. ರಮಾಕಾಂತ ಸುರಂಗೆಯರ ಕಲಾವಂತಿಕೆಯ ಸೋಗಿನ ವಿಷಯದಲ್ಲಿ ಅವಳಿಗೆ ಆಗ ತುಂಬ ಸಿಟ್ಟುಬಂದಿತು. ತನ್ನ ನೆರಳಿನ ಕಡೆಗೆ ಸಹಜವೇ ಅವಳ ಲಕ್ಷ್ಯ ಹೋಯಿತು. ಮುಂಜಾವಿನಲ್ಲಿ ಅಷ್ಟೊಂದು ದೀರ್ಘವಾದದ್ದು. ಈಗ ಎಲ್ಲಿ ಮಾಯವಾಗಿತ್ತೊ ? ರಾತ್ರಿಯಲ್ಲಿಯ ಬಾಪ್ಪಾ ಅವರ ಮಾತಿನ ಮೂಲಕವೇ ಇರಬಹುದು. ಅವಳಿಗೆ, ಕಲೆಯು ಜೀವನದ ನೆರಳು ಎಂದೆನಿಸಿತು.

## ೧೩
## ದೃಷ್ಟಿಲಾಭ

ಕಾಶಿಯು ಸೋನ್ಯಾನನ್ನು ಕರೆದುಕೊಂಡು ಹೋದ ಅನಂತರ ವತ್ಸಲೆಗೆ ಎರಡು ದಿವಸ ಕೂಡ ಕಳೆಯುವದು ಕಷ್ಟವಾಯಿತು. ಕಾರಖಾನೆಯು ನಿಂತುಹೋಗಿತ್ತು. ವಿದ್ಯಾಧರ ಅಂಬೋಲಿಗೆ ಹೋಗಿದ್ದ. ಮನೆಯಲ್ಲಿ ಸೋನ್ಯಾ ಕೂಡ ಇಲ್ಲ !  ಕಾಶಿಯು ಹೇಳಿದ ಕೆಲಸಗಳನ್ನು ಹೂವುಗಳನ್ನು ಒಯ್ದು ಪೇಟೆಯಲ್ಲಿ ಮಾರುವದು, ವೃಂದಾವನದ ಮುಂದೆ ದೀಪವನ್ನು ಹಚ್ಚುವದು–ಇವೆಲ್ಲವುಗಳನ್ನು ಹಾಹಾ ಅನ್ನುವದರಲ್ಲಿ ಮುಗಿಸಿಬಿಡುತ್ತಿದ್ದಳು. ಮೊದಲನೇ ದಿವಸ ಹೂವುಗಳನ್ನು ಮಾರುವ ಮುಂದೆ ಬಂದ ಅನುಭವವು ಮಾತ್ರ ಅವಳ ಮನಸ್ಸಿನಲ್ಲಿ ಒಂದೇ ಸವನೆ ಸುಳಿದಾಡುತ್ತಿತ್ತು.

ಗುಲಾಬಿ ಹೂವುಗಳನ್ನು ಒಂದು ಸಣ್ಣ ಬುಟ್ಟಿಯಲ್ಲಿಟ್ಟುಕೊಂಡು ಪೇಟೆಯಲ್ಲಿ ಹೋದಳು. ಬೀದಿಯಂಚಿನ ಧೂಳಿಯಲ್ಲಿಯೇ ಕೂಡಬೇಕಾಯಿತು ಅವಳಿಗೆ. ನಾಲ್ಕೆಂಟು ಮೈಲುಗಳ ಮೇಲಿಂದ ಹುಲ್ಲು ಅಥವಾ ಕಟ್ಟಿಗೆ ಹೊರೆಗಳನ್ನು ಹೊತ್ತುಕೊಂಡು ಬಂದ ಹೆಂಗಸರನ್ನು ಅವಳು ಅಲ್ಲಿ ನೋಡಿದಳು. ಮೊಳಕಾಲಿನವರೆಗೂ ಧೂಳಿಯಿಂದ ತುಂಬಿದ ಅವರ ಕಾಲುಗಳನ್ನೂ, ಬೆವರು ಪ್ರವಾಹವಾಗಿ ಹರಿಯುತ್ತಿರುವ ಅವರ ಮುಖಗಳನ್ನೂ ನೋಡಿ ಅವಳಿಗೆ ಹೇಗೋ ಅನಿಸಿತು. ಆದರೆ ಕಟ್ಟಿಗೆ ಅಥವಾ ಹುಲ್ಲು ಕೊಂಡುಕೊಳ್ಳಲಿಕ್ಕೆ ಬಂದವರಿಗೆ ಆ ಧೂಳಿಯೂ ಆ ಬೆವರೂ ಎಲ್ಲಿಕಾಣುತ್ತಿದ್ದವು ? ಹೊರೆಯೊಂದಕ್ಕೆ ಮೂರಾಣೆಯ ಬದಲು ಮೂರಾಣೆಯ ಮೇಲೆ ಒಂದು ಬಿಲ್ಲಿಯನ್ನಾದರೂ ಕೊಡಲು ಯಾರೂ ಸಿದ್ಧರಿಲ್ಲ ! "ನೆತ್ತಿಗೆ ತಾಕಲಿ ಬಿಸಿಲು ಹನ್ನೆರಡು ಹೊಡೆಯುವತನಕ, ಅಲ್ಲಿಂದ

ತಾವೆ ಕೊಡುವರು ಹತ್ತುಬಿಲ್ಲಿಗೆ !" ಇಂಥವೇ ಅವರ ಉದ್ಗಾರ ! ಬಿಳಿಯಂಗಿಯವರಿಗೆ ತಮ್ಮ ದುಡ್ಡಿನ ಬೆಲೆ ತಿಳಿಯುವದು, ಬಡವರ ಶ್ರಮದ ಬೆಲೆ ತಿಳಿಯುವದೆ ? ಎನಿಸಿತು. ಬೆವರಿದ್ದಲ್ಲಿಯೇ ದುಡ್ಡು ಬೇಡವೇ ?

ಅವಳು ಹೂವುಗಳನ್ನು ಮಾರುವದಕ್ಕಾಗಿ ಒಂದೆಡೆಗೆ ಕೂಡ್ರುವಷ್ಟರಲ್ಲಿ ಒಬ್ಬ ಗಟ್ಟಿಮುಟ್ಟ ತರುಣನು ಅಲ್ಲಿಗೆ ಬಂದನು. ಆತನಿಗೆ ಬೀದಿಯ ಹಿಂದಿನ ಬದಿಗೆ ದಾಟಿಹೋಗಬೇಕಾಗಿತ್ತು. ನಾಲ್ಕು ಹೆಜ್ಜೆ ಮುಂದಕ್ಕೆ ಹೋದರೆ ಅತ್ತ ಕಡೆಗೆ ಹೋಗಲು ದಾರಿಯಿತ್ತು. ಆದರೆ ಅಷ್ಟೊಂದು ಶ್ರಮವನ್ನು ಈ ಡಬ್ಬಲ್ ಬ್ರೆಸ್ಟುಕೋಟು ಧರಿಸಿ, ನಾಟಕದ ಪದ್ಧತಿಯಲ್ಲಿ ಕೂದಲು ಕತ್ತರಿಸಿಕೊಂಡ ಬಿಳಿಯಂಗಿಯವನು ತಕ್ಕೊಳ್ಳುವವನೇ ? ವತ್ಸಲೆಯ ಮುಂದೆ ನಿಂತು ಒದರಿದ 'ಏಳವ್ವೊ.'

ಅವನ ಆ ಅಧಿಕಾರದ ದನಿ–ವತ್ಸಲೆಗೆ, ಸರಿದು ನಿಂತು ಅವನ ಕೆನ್ನೆಗೆ ಒಂದು ಹೊಡೆಯಬೇಕೆನಿಸಿತು ! ಆದರೆ ಒಮ್ಮೆಲೆ ಅವಳಿಗೆ ನೆನಪಾಯಿತು. ತಾನು ಕೂಲಿಯವಳು ! ಅವನು ಬಿಳಿಯಂಗಿಯವ ! ಹಾಹಾ ಅನ್ನುವದರಲ್ಲಿ ಜನ ಕಲೆಯಬಹುದು. ದಾದಾ ಅವರು ಕಾರ್ಖಾನೆಯಲ್ಲಿ ಈತನಿಗೆ 'ಲಫಂಗ'ನೆಂದರೂ ಕೂಡ ಜನರೆಲ್ಲರೂ ಅವನ ಪಕ್ಷವನ್ನೇ ಹಿಡಿಯತಕ್ಕವರು. ತಿರಸ್ಕಾರದಿಂದ ಅವನ ಕಡೆಗೆ ನೋಡುತ್ತ ತನ್ನ ಬುಟ್ಟಿಯನ್ನೆತ್ತಿ ಒಂದು ಕಡೆಗೆ ಸರಿದಳು. ಆ 'ಸಭ್ಯ' ಗೃಹಸ್ಥನು ಒಳ್ಳೇ ಠೀವಿಯಿಂದ ದಾಟಿ ಹೋದನು.

ಈ ಗೃಹಸ್ಥನ ವಿಷಯಕ್ಕೆ ಎಲ್ಲ ಸಮಾಚಾರವನ್ನು ಅವಳು ದಾದಾ ಅವರ ಕಾರಖಾನೆಯಲ್ಲಿ ಕೇಳಿದ್ದಳು. ವಿದ್ಯಾಭ್ಯಾಸ ಇಂಗ್ಲಿಷು ನಾಲ್ಕು ಇಯತ್ತೆಗಳವರೆಗೇ ಆದರೂ, ಆತನ ವೇಷದ ಮೇಲಿಂದ ಇದೇ ಇಂಗ್ಲಂಡದ ಹಡಗದಿಂದ ಇಳಿದಂತೆ ಶಿಸ್ತು ಇಟ್ಟಿದ್ದ. ಮನೆಯದೇನೋ ಸ್ವಲ್ಪಮಟ್ಟಿಗೆ ಉತ್ಪನ್ನವಿತ್ತು. ಅದನ್ನು ಮನೆಯಿಂದ ಮಾಡಿಕೊಂಡು ಹೋಗಿದ್ದರೆ ಸುಖವಾಗಿ ಸಂಸಾರ ಸಾಗಿಸಿಕೊಂಡು ಹೋಗುವಂತಿತ್ತು. ಆದರೆ ಊಟ ಮಾಡಿ ಎದ್ದ ನಂತರ ಸಹ ಕೈ ತೊಳೆದುಕೊಳ್ಳಲಿಕ್ಕೆ ಸಾಬೂನು ಬೇಕಾಗುವ ಈ ಸಾಹೇಬನು ಮನೆಯಿಂದ ಹೊಲ ಸಾಗಿಸುವವನೇ ? ಮೂರು ವರುಷಗಳ ಹಿಂದೆ ಚಳವಳಿಯೆದ್ದಿತು. ಬಾಪ್ಪಾ ಅವರು ಸಿಂದಿಯ ಗಿಡಗಳನ್ನು ಕೊಡುವಂತಿಲ್ಲವೆಂದು ಹೇಳಿದಾಗ ಇವನೇನು ಅವರ ಕೊರಳಲ್ಲಿಯ ಕೇವಲ ತಾಯಿತವಾಗಿದ್ದ. ಆದರೆ ಮರುವರ್ಷವೇ ಸಿಂದಿಗಿಡಗಳ ಹರಾಜಿನಲ್ಲಿ ಇವನದೇ ಮತ್ತೆ ಮೊದಲನೇ ಹೆಸರು ! ಬಾಪ್ಪಾ ಅವರು ಅಲ್ಲಿ ಇಲ್ಲಿ ಬಂಡವಾಳ ಕಲೆ ಹಾಕಿ ಒಂದು ಸಾವಿರ ರೂಪಾಯಿಯ ಒಂದು 'ಖಾದೀ ಭಾಂಡಾರ'ವನ್ನು ತೆಗೆದು ಕೊಟ್ಟರು. ಒಂದೆರಡು ವರ್ಷಗಳಲ್ಲಿ ಆ ಸಾವಿರ ರೂಪಾಯಿಗಳನ್ನು ಚಕ್ಕಾಚೂರು ಮಾಡಿ, ಅಂಗಡಿಯ ಹೆಸರನ್ನು ಸಾರ್ಥಗೊಳಿಸಿದ. ಖಾದಿಯನ್ನು ಕೊಳ್ಳುವುದಕ್ಕಾಗಿ ಮುಂಬಯಿಗೆ ಹೋದಾಗ ಹೊಸಹೊಸ ನಾಟಕಗಳನ್ನು ನೋಡಿ, ಚಿತ್ರಪಟಗಳಲ್ಲಿಯ ಹಾಡುಗಳನ್ನು ಕೇಳಿ ಇರಾಣೀ ಚಹದಂಗಡಿಗಳಲ್ಲಿಯ ಪದಾರ್ಥಗಳನ್ನು ಮನಸೋಕ್ತ ತಿಂದು ಹೊಸ ಹೊಸ ಫ್ಯಾಶನ್ನಿನ ಅರಿವೆಗಳನ್ನು ಹೊಲಿಸಿಕೊಂಡು ತಿರುಗಿ ಬರುವದು ಈ ಸವಾರಿ ! ಊರಲ್ಲಿಯಂತೂ ಏನೂ ಕೇಳುವಂತಿಲ್ಲ ! ತೆಗೆದ ಸಾಲ ತೀರಿಸುವದಂತೂ ಗೊತ್ತೇ ಇಲ್ಲ ! ಸಿಂಪಿಗನನ್ನು



ಮೊದಲು ಮಾಡಿಕೊಂಡು ನಾವಲಿಗನವರೆಗೂ ಉದ್ದರಿ ಸಾಲ !

ಹೀಗಿದ್ದರೂ ಆತನ ದಿನದ ಕಾರ್ಯಕ್ರಮವೇನು ? ಕೈದಿಗಳಂತೆ ಸ್ಟೋವ್ಹಿನ ಗಾನವು ಆರಂಭವಾದ ಅನಂತರ ಹಾಸಿಗೆಯಿಂದೇಳುವದು ; ಚಹ ಕುಡಿದು, ಜೇಬಿನಲ್ಲಿ ಸಿಗರೇಟು ಇದ್ದರೆ ಅವನ್ನಷ್ಟು ಸೇದಿಕೊಂಡು ಆಮೇಲೆ ಪ್ರಾತರ್ವಿಧಿ ಮುಗಿಸಿದೊಡನೆ, ಪೇಟೆಯನ್ನು ಬಂದು ಸೇರುವದು ! ಪೇಟೆಯಲ್ಲಿ ಒಂದಿಲ್ಲೊಂದು ಅಂಗಡಿಯಲ್ಲಿ ಕುಳಿತು ಎರಡು ಮೂರು ತಾಸು ಹಾಳು ಹರಟೆ ಕುಚೇಷ್ಟೆಗಳನ್ನು ತೀರಿಸಿಕೊಂಡು, ಒಂದೆರಡು ಡೋಜು ಪುಕ್ಕಟೆ ಸಿಕ್ಕಲ್ಲಿ ಚಹವನ್ನು ಸುರಿದು ಆಮೇಲೆ ಮೀನ ತೆಗೆದುಕೊಂಡು ಮನೆಯ ಕಡೆಗೆ ಹೊರಡುವದು. ಊಟ, ವಾಮಕುಕ್ಷಿ, ಮಧ್ಯಾಹ್ನದ ಚಹವಾದ ಅನಂತರ ಬರುವದು ಮತ್ತೆ ಪೇಟೆಗೆ ! ಅಲ್ಲಿಂದ ಎಂಟೊಂಬತ್ತು ಗಂಟೆಯವರಿಗೆ ಇಸ್ಪೀಟು !

ಈ ಚಿತ್ರ ಮತ್ತು ವತ್ಸಲೆಯು ಹೂವು ಮಾರುವ ಮುಂದೆ ಕಾಣುವ ಸುತ್ತಲಿನ ಚಿತ್ರಗಳಲ್ಲಿ ಭೂಮ್ಯಾಕಾಶದಷ್ಟು ಅಂತರವಿತ್ತು. ಹೂವು, ಪಲ್ಲೆ, ತೆಂಗಿನಕಾಯಿ, ಏನಿದ್ದುದನ್ನು ಮಾರುವುದರ ಸಲುವಾಗಿ ಎಂಟು ಗಂಟೆಗೆ ಪೇಟೆಗೆ ಬರುವದು, ಮಧ್ಯಾಹ್ನದ ಹನ್ನೆರಡು ಗಂಟೆಯವರೆಗೂ ತಳಮಳಿಸುತ್ತ ಕೂಡುವದು, ಬಂದ ದರಕ್ಕೆ ತನ್ನ ಸರಕು ಮಾರಿಕೊಂಡು ಒಂದಾಣೆಯ ಅಕ್ಕಿ, ಒಂದು ಬಿಲ್ಲಿಗೆ ಬಂದಷ್ಟು ಬೆಲ್ಲ, ಮತ್ತು ಅದ್ದೇಲಿಯ ಈರುಳ್ಳಿ ತೆಗೆದುಕೊಂಡು ಮನೆಗೆ ಹೋಗುವದು. ಮಾರಾಟದ ವೇಳೆಯಲ್ಲಿಯೂ ನ್ಯಾಯವಿಲ್ಲ. ಏನೂ ಕೆಲಸವಿಲ್ಲದೆ ಬೊಜ್ಜುಹೊಟ್ಟೆ ಮಾಡಿಕೊಂಡು ಬಂದು, ಭರಭರನೆ ಸಾಮಾನು ಒಯ್ದು ಅಂಗಡಿಯಲ್ಲಿ ಇಟ್ಟುಕೊಳ್ಳುವದು, ಹಿಂದುಗಡೆ ದುಡ್ಡು ತೆಗೆದುಕೊಂಡು ಹೋಗಲಿಕ್ಕೆ ಅಪ್ಪಣೆ ಆಗುವದು. ಈ ಪ್ರತಿಷ್ಠಿತ ಜನರು ಮನಸು ಮಾಡಿದರೆ ಧಾರಣಿ ! ಇಲ್ಲವಾದರೆ ದೇವರೇ ಗತಿ!"

ವತ್ಸಲೆಯ ಹತ್ತಿರವೇ ಒಂದು ಒಂಬತ್ತು ವರುಷದ ಹುಡುಗಿಯು ಮೂಲಂಗಿಯ ಪೆಂಡಿಗಳನ್ನು ಒಟ್ಟಿಕೊಂಡು ಕುಳಿತಿದ್ದಳು. ಒಂದು ಗಂಟೆಯಾದರೂ ಒಂದು ಪೆಂಡಿಯಾದರೂ ಮಾರಲಿಲ್ಲ. ಅವಳು ಮುಳುಮುಳು ಅಳಹತ್ತಿದಳು.

ವತ್ಸಲೆಯು ಕೇಳಿದಳು "ಯಾಕವ್ವ ಅಳುವಿ ?"

ಏನು ಉತ್ತರ ಕೊಡಬೇಕು ಆ ಪ್ರಾಣಿ ? ವತ್ಸಲೆಯು ಪ್ರೇಮದ ದನಿಯಲ್ಲಿ ಅದೇ ಪ್ರಶ್ನೆ ಕೇಳಿದಳು. ಆಗ ಅವಳು : "ನನ್ನದು ಒಂದು ಪೆಂಡಿ ಸುದ್ದಾ ಮಾರವಲ್ಲದು" ಎಂದು ಹೇಳಿದಳು.

"ನಿನ್ನ ತಾಯಿ ಯಾರ ಬರಲಿಲ್ಲ ?"

"ಅವಳಿಗೆ ಜಡ್ಡ ಆಗೇತಿ."

"ಪಲ್ಲೆ ಯಾರು ಕಿತ್ತಿ ತಂದರು?"

"ನಾನs." ಅವಳ ಅಳುಮೋರೆಯ ಮೇಲಿನ ಅಭಿಮಾನವು ವತ್ಸಲೆಗೆ ಬಹಳ ಮೋಹಕವಾಗಿ ಕಂಡಿತು.

ಅವಳು ಅಳುವ ನಿಜವಾದ ಕಾರಣವು ವತ್ಸಲೆಗೆ ಈಗ ತಿಳಿಯಿತು. ಬಿಳಿಯಂಗಿಯ ಜನರ ೮–೯ ವರ್ಷದ ಹುಡುಗಿಯರ ಚಿತ್ರಗಳು ಅವಳ ಕಣ್ಣ ಮುಂದೆ ನಿಂತವು. ದಾಯಿಗಳಾಗಲಿ, ಸೇವಕರಾಗಲಿ ಇರುವ ಹೊರತು ಒಂದು ಹೆಜ್ಜೆಯನ್ನಾದರೂ ಮುಂದಕ್ಕೆ ಇಡುವದಿಲ್ಲ. ಎಲ್ಲಿ ತಿರುಗಾಡಲಿಕ್ಕೆ ಹೋದರೂ ಜೊತೆಯಲ್ಲಿ ಸೇವಕನು ಬೇಕೇಬೇಕು. ಈ ಹುಡುಗಿಯಷ್ಟು ಕೆಲಸ ಅವರಿಂದ ಮಾಡಲಾದೀತೆ? ಅವರೊಳಗಿನ ನಿರ್ಬುದ್ಧ ಹುಡುಗಿಯರು ಕೂಡ ಉತ್ತಮ ವಸ್ತ್ರವನ್ನು ಧರಿಸಿ ಇಡೀ ದಿವಸವನ್ನೇ ಆಟದಲ್ಲಿ ಕಳೆಯುವರು. ಆದರೆ ಹರಕು ದಟ್ಟಿಯನ್ನುಟ್ಟು ಪೇಟೆಯಲ್ಲಿ ತಾನು ತಂದ ತರಕಾರಿ ಮಾರಲೊಲ್ಲದೆಂದು ಅಳುವ ಪ್ರಸಂಗ ಇಂಥವರಿಗೆ ! ತಾನು ಮಾರಿದ ಹೂವುಗಳ ಪೈಕಿ ಅವಳಿಗೆ ಒಂದು ಆಣೆ ಕೊಡಬೇಕೆಂದೆನಿಸಿತು ವತ್ಸಲೆಗೆ. ಆದರೆ ಲೆಕ್ಕವನ್ನು ಕೇಳುವ ಕಾಶಿಯ ಮೂರ್ತಿಯು ಅವಳ ಕಣ್ಣೆದುರಿಗೆ ನಿಂತಿತು. ಮೊದಲನೇ ದಿವಸ ತಾನು ತೋರಿಸಿದ ಕಾಶಿಯ ವಿಷಯದಲ್ಲಿಯ ಕೃತಜ್ಞತೆ ಈಗ ಅವಳಲ್ಲಿ ಎಷ್ಟೋ ಪಾಲು ಕಡಿಮೆಯಾಗಿತ್ತು. ಕಾಶಿಯು ಅವಳಿಗೆ ಊಟಕ್ಕೆ ಹಾಕುವದೇನೋ ನಿಜ. ಆದರೆ ಅವಳ ಕಡೆಯಿಂದ ಕೂಲಿಯ ಪ್ರತಿಯೊಂದು ಪೈಯನ್ನು ತೆಗೆದುಕೊಳ್ಳುತ್ತಿದ್ದಳು. ಕಾಶಿಯ ಈ ಲೋಭಿ ಸ್ವಭಾವವು ಅವಳಿಗೆ ಬೇಸರವನ್ನುಂಟುಮಾಡಿತ್ತು. ಆದರೆ ಅವಳಿಗೆ ಒಮ್ಮೆಲೇ ಅನಿಸುತ್ತಿತ್ತು. ಕಾಶಿಯ ಈ ಲೋಭದ ಮೂಲದಲ್ಲಿ ಬಡತನವೇ ಇರಲಿಕ್ಕಿಲ್ಲವೆ ? ಕೈಕಾಲು ಗಟ್ಟಿಯಾಗಿರುವಾಗಲೇ ಹೊಟ್ಟೆಗೆ ಅನ್ನ ಸಿಗುವದು ಕಷ್ಟವಾಗಿರುವಾಗ ಅವಳ ಶಕ್ತಿ ಕ್ಷೀಣವಾದ ಮೇಲೆ ಅವಳನ್ನು ಕೇಳುವವರು ಯಾರು? ಹುಡುಗರಿಲ್ಲ, ಹುಪ್ಪಡಿಯಿಲ್ಲ, ಸಮೀಪದ ಆಪ್ತರೂ ಯಾರೂ ಇಲ್ಲ. ಆಮೇಲೆ ಮುದುಕಿ ಧೂರ್ತತನದಿಂದ ಆದಷ್ಟು ಹಣವನ್ನು ಕೂಡಿಸುತ್ತಿದ್ದಲ್ಲಿ ತಪ್ಪೇನು ? ಸಿರಿವಂತರೂ ಕಲಿತವರಾದರೂ ಇಡೀ ಆಯುಷ್ಯದಲ್ಲಿ ಇದರ ಹೊರತು ಬೇರೆ ಏನುತಾನೆ ಮಾಡುವರು ?

ಗುಲಾಬಿ ಹೂವುಗಳನ್ನು ಮಾರಿಕೊಂಡು ವತ್ಸಲೆಯು ಮನೆಯ ಕಡೆಗೆ ತಿರುಗಿದಳು. ಬೀದಿಯ ಮೇಲೆ, ಅದೇ ಆವಾರದಲ್ಲಿಯ ಇನ್ನೊಬ್ಬಳು ಅವಳಿಗೆ ಭೆಟ್ಟಿಯಾದಳು. ಅವಳ ಹುಡುಗ ಜ್ವರದಿಂದ ಚಡಪಡಿಸುತ್ತಿದ್ದ. ಅವನನ್ನು ನೋಡುವದರ ಸಲುವಾಗಿ ವತ್ಸಲೆಯು ಅವರ ಮನೆಗೆ ಹೋದಳು ಹುಡುಗನ ಮೈ ಕಾಯ್ದು ಕೆಂಡವಾಗಿತ್ತು. ಅದನ್ನು ನೋಡಿ ವತ್ಸಲೆಗೆ ಬಹಳ ಸಂಕಟವಾಯಿತು. "ಡಾಕ್ಟರರಿಗಾದರೂ ತೋರಿಸಬಾರದೆ" ಎಂದಳು.

"ಇಂಥಾ ಜರದಾಗ ಒಯ್ಯುದಾರೆ ಹ್ಯಾಂಗವ್ವಾ ದಾಗದಾರ ಕಡಿ ?"

"ಡಾಕ್ಟರರನ್ನೆ ಮನೆಗೆ ಕರೆಸಬೇಕು ?"

"ಮೂರ ರೂಪಾಯಿ ಬೇಡತಾನಪ್ಪಾ. ಅದರ ಹೊರತು ಏಳೂದಿಲ್ಲಾ."

ಕಾರಖಾನೆಯು ನಿಂತುಹೋಗಿ ಮಾಡಲಿಕ್ಕೆ ಕೆಲಸವಿಲ್ಲ ! ಮನೆಯಲ್ಲಿ ಗಂಜಿಯ ಪೂರ್ತಿಯಾದರೂ ಅಕ್ಕಿ ಸಿಗುವದು ಕಷ್ಟ. ಇಂಥ ಸ್ಥಿತಿಯಲ್ಲಿ ಅವಳು ಡಾಕ್ಟರನಿಗೆ ಮೂರು ರೂಪಾಯಿ ಎಲ್ಲಿಂದ ಕೊಡಬೇಕು ? ಇದು ತನಗೆ ಮೊದಲೇ ಹೇಗೆ ತಿಳಿಯಲಿಲ್ಲವೆಂದು ವತ್ಸಲೆಗೆ ಆಶ್ಚರ್ಯವಾಯಿತು. ಆದರೆ ಅದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಕಳೆದ ಒಂದೆರಡು



ತಿಂಗಳು ಅವಳು ಕೆಳಗಿನ ತರಗತಿಯ ಜನರಲ್ಲಿ ಕೂಡಿಕೊಂಡು ಕೆಲಸಮಾಡುತ್ತಿದ್ದರೂ ಅವಳು ಮೂಲತಃ ಮೇಲಿನ ವರ್ಗದವಳೇ. ಅವಳಲ್ಲಿ ಹರಿದಾಡುವ ಬಿಳಿಯಂಗಿಯವರ ರಕ್ತಕ್ಕೆ ಮೂರು ರೂಪಾಯಿ ಎಂದರೆ ಯಾವ ಗಿಡದ ತೊಪ್ಪಲೋ ಅನಿಸಿತು. ಆದರೆ ಆ ಜ್ವರದಿಂದ ಬಳಲುವ ಹುಡುಗನ ತಾಯಿಗೆ ಆ ಮೂರು ರೂಪಾಯಿಗಳಿಲ್ಲದೆ ಮೂರು ಲೋಕಗಳ ನೆನಪಾಗುತ್ತಿದ್ದವು.

ವತ್ಸಲೆಯು ಹುಡುಗನ ಮುಖದ ಕಡೆಗೆ ಸೂಕ್ಷ್ಮವಾಗಿ ನೋಡಿದಳು. ಮೋರೆಯ ಮೇಲೆ ಮೂರು ನಾಲ್ಕು ಬೊಕ್ಕೆಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಅವಳ ಹೃದಯವು ಚರ್ರೆಂದಿತು. ಮುಂಬೈಯಲ್ಲಿ ಮೈಲಿ ಬೇನೆಯು ಸುರುವಾದದ್ದನ್ನು ಅವಳು ಕೇಳಿದ್ದಳು. ಹೊಟ್ಟೆ ಬಟ್ಟೆಗಳ ಸಲುವಾಗಿ ಜನರು ಕಾಮಾಪುರದಿಂದ ಮುಂಬಯಿಗೆ ಹೋಗುತ್ತಿದ್ದರು ಬರುತ್ತಿದ್ದರು. ಮುಂಬಯಿಯಿಂದ ಯಾರಾದರೂ ಈ ಬೀಜವನ್ನು ಇಲ್ಲಿಗೆ ತಂದುಬಿಟ್ಟಿರಲಿಕ್ಕಿಲ್ಲವೇ ಅನಿಸಿತು. ಅನುಮಾನಿಸುತ್ತಲೇ ಅವಳು ಕೊನೆಗೆ ಕೇಳಿದಳು: "ಮುಂಬಯಿಂದ ಯಾರಾದರೂ ಬಂದಿರುವರೇ ಇಲ್ಲಿ ?"

"ಆ–ಆಚೆ ಮನೀ ರಾಮ ಬಂದಾನ."

"ಅವನಿಗೇನಾದರೂ ಜಡ್ಡು–ಗಿಡ್ಡು ಆಗಿತ್ತೋ ?"

"ಮುಂಬಯಿದಾಗ ಅವಗ ಮೈಲಿ ಎದ್ದಿದ್ದು ಅವ್ವಾ. ಆದರ ಏನು ? ಕಮಳೇಶ್ವರೀ ಹೆಸರು ತಗೊಂಡು ಹಾಂಗ ಊರಿಗೆ ಹೊರಟಾ. ದೇವೀ ತೀರ್ಥಾನೂ ಕುಡದಾ. ನಾಕದಿವಸದಾಗ ಗುಣಾ ಆತ ಅವಗ."

ವತ್ಸಲೆಯು ಹುಡುಗನ ಕಡೆಗೆ ನೋಡುತ್ತ ಅಂಜಂಜುತ್ತಲೇ ಕೇಳಿದಳು:

"ಹುಡುಗನಿಗೆ ಮೈಲಿ ತಗಸಿದಿರೋ ಇಲ್ಲೋ ?"

ಅಂಜಿದ ಮುದ್ರೆಯಿಂದ ಅವಳು ಅಂದಳು : "ಅಂಥಾದ್ದೇನೂ ಮಾತಾಡಬ್ಯಾಡ್ರಿ ತಾಯಿ. ಅದೆಲ್ಲಾ ನಿಮ್ಮ ಶಾರದಾ ಊರಾಗ ಮಾಡತ ಬರ್ರಿ ! ಇಲ್ಲೆ ದೇವಿ ಅದಾಳ ಎಲ್ಲಾರ್‍ನೂ ಕಾಯಾಕಿ."

"ಮೈಲಿ ತಗಸಿದರ ಏನು ಆಗತದೆ ?"

"ದೇವೀಗೆ ಸಿಟ್ಟುಬರತೈತ ಮತ್ತ–"

ವತ್ಸಲೆಯು ಹುಡುಗನ ಮುಖದ ಕಡೆಗೆ ದಿಟ್ಟಿಸಿ ನೋಡಹತ್ತಿದ್ದು ಅವಳಿಗೆ ತಿಳಿದಕೂಡಲೆ ಅವಳು ಅವನ ಮುಖವನ್ನು ಹೊದಿಕೆಯಿಂದ ಮುಚ್ಚಿಬಿಟ್ಟಳು.

ವಿಷಣ್ಣ ಮನಃಸ್ಥಿತಿಯಲ್ಲಿ ವತ್ಸಲೆಯು ಮನೆಯ ಕಡೆಗೆ ಹೊರಟಳು. ಸೂರ್ಯನು ತಲೆಯ ಮೇಲಿದ್ದ. ಕಾಯ್ದ ನೆಲದಮೇಲೆ ಕಾಲು ಹುರಪಳಿಸುವಂತಾಗುತ್ತಿತ್ತು. ನಡುನಡುವೆ ಗಾಳಿಯೊಡನೆ ಧೂಳಿಯು ಮೇಲಕ್ಕೆದ್ದು ಕಣ್ಣಲ್ಲಿ ಸೇರುವದು. ಕಾಗೆಗಳ ಶಬ್ದದ ಹೊರತು ಯಾವ ಪಕ್ಷಿಯ ಶಬ್ದವೂ ಕೇಳಬರುತ್ತಿದ್ದಿಲ್ಲ. ಈಗ ನೋಡಿದ ಕೆಳಗಿನ ವರ್ಗದ ಜೀವನವನ್ನೇ ಸುತ್ತಲಿನ ಸೃಷ್ಟಿಯಲ್ಲಿ ನೋಡಿದಂತೆ ಅವಳಿಗೆ ಅನಿಸಿತು. ಏನೋ ಸಪ್ಪಳ ಕೇಳಿ ಹಿಂದಿರುಗಿ

ನೋಡಿದಳು. ಅವಳಿಗೆ ತನ್ನ ನೆರಳೇ ಕಾಣಲಿಲ್ಲ. ಮಧ್ಯಾಹ್ನದ ಉರಿಬಿಸಿಲು ಮತ್ತು ಜೀವನ! ಇದರಲ್ಲಿ ನೆರಳಿನ–ಕಲೆಯ–ಸುಳಿವು ಸಹ ಕಾಣಲಿಲ್ಲ.

ತನಗೆ ಕೇಳಿಸಿದ ಸಪ್ಪಳವು ಯಾತರದು ಅವಳಿಗೆ ಒಮ್ಮೆಲೆ ತಿಳಿಯಿತು. ಕಮಲೇಶ್ವರಿಗೆ ಬಲಿ ಕೊಡತಕ್ಕ ಕೋಣವು ಹಿಂದಿನಿಂದ ಬರುತ್ತಿತ್ತು. ಒಳ್ಳೇ ದಷ್ಟ ಪುಷ್ಟವಾಗಿತ್ತು ಕೋಣ. ಬೆಳೆದಿರುವ ಹೊಲದಲ್ಲಿ ಹೊಕ್ಕು ನಿಂತಿರುವ ಬೆಳೆಗಳನ್ನು ತಿಂದರೂ ಒಕ್ಕಲಿಗರು ಅದನ್ನು ಹೊಡೆದೋಡಿಸುತ್ತಿರಲಿಲ್ಲ. ಅದರ ಬಾಯಿ ತಾಗಿದರೆ ಎರಡರಷ್ಟು ಧಾನ್ಯ ಬೆಳೆಯುವುದೆಂದು ಅವರ ತಿಳುವಳಿಕೆ. ಎಲ್ಲಿ ಬೇಕಾದಲ್ಲಿ ಸೇರಿ ಬೇಕಾದ್ದರಲ್ಲಿ ಬಾಯಿಹಾಕುವ ಸ್ವಾತಂತ್ರ್ಯ ಅದಕ್ಕೆ ಸಿಕ್ಕಿಬಿಟ್ಟಮೇಲೆ, ಅಷ್ಟು ಸೊಕ್ಕದೇನು ಮಾಡೀತು ? ಅದರನೇನು ಆ ಕಪ್ರಗೆ ಮಿರಿ ಮಿರಿ ಮಿಂಚುವ ಸ್ಥೂಲ ದೇಹ, ಅದರ ಡೊಂಕು ಕೋಡುಗಳು, ಒಳ್ಳೇ ದುರದುರನೆ ನೋಡುವ ಕಣ್ಣುಗಳು–ಸಮಾಜದಲ್ಲಿಯ ಅಜ್ಞಾನದ ಸಜೀವ ಮೂರ್ತಿಯೇ ತೋರಿತು ಅವಳಿಗೆ. ಅವಳು ವಿಚಾರಮಾಡ ಹತ್ತಿದಳು. ಜನರು ಈ ಕೋಣವನ್ನು ಬಲಿ ಕೊಡುವರು. ಆದರೆ ಇಡೀ ಸಮಾಜವನ್ನೇ ನುಂಗಿಬಿಡುವ ಅಜ್ಞಾನ ! ಅದನ್ನೆಂದು ಜನರು ಬಲಿ ಕೊಡತಕ್ಕವರು ? ಕೋಣವು ತಲೆ ಹಾಕುತ್ತ ಸಮೀಪಕ್ಕೆ ಬಂದಿತು. ವತ್ಸಲೆಯು ಹೆದರಿಕೊಂಡು ಸ್ವಲ್ಪ ಬದಿಗೆ ಸರಿದು ನಿಂತಳು. ಕೋಣವು ಮುಂದಕ್ಕೆ ಹೋಗಿಬಿಟ್ಟಿತು. ವಿಚಾರವಂತರು ಸಮಾಜದಲ್ಲಿಯ ಅಜ್ಞಾನಕ್ಕೆ ಅಂಜಿ ಹೀಗೆ ದೂರ ದೂರ ಸರಿದು ನಿಂತರೆ, ಆ ಆಜ್ಞಾನವನ್ನು ಹೋಗಲಾಡಿಸುವುದೆಂತು ? ವತ್ಸಲೆಯು ತನ್ನಷ್ಟಕ್ಕೆ ತಾನೇ ವಿಚಾರ ಮಾಡಿಕೊಂಡಳು. ಆದರೆ ಮರುಕ್ಷಣವೇ ಅವಳಿಗೆ ಆ ಪ್ರಾಣಿಯ ಬಗ್ಗೆ ಕನಿಕರವೆನಿಸಿತು. ದೇವಿಯನ್ನು ಸಂತೈಸುವುದಕ್ಕಾಗಿ, ಜನರು ಆ ಮೂಕ ಪ್ರಾಣಿಯನ್ನು ಬಲಿ ಕೊಡಬೇಕೆ ! ಇದರಲ್ಲಿ ಹೆಚ್ಚಿನ ದುರ್ದೈವಿಗಳು ಯಾರು ? ಮನುಷ್ಯನೋ ಅಥವಾ ಆ ಮೂಕ ಪ್ರಾಣಿಯೋ ?

ಆ ದಿನ ರಾತ್ರಿ ವತ್ಸಲೆಗೆ ನಿದ್ರೆ ಸಹ ಬರಲಿಲ್ಲ. ಮಧ್ಯ ರಾತ್ರಿಯವರೆಗೂ ಅವಳು ತಳಮಳಿಸುತ್ತಿದ್ದಳು. ಎದ್ದು ಹೊರಗಡೆ ಬಂದಳು. ಅವಳಿಗೆ ತನ್ನ ಒಂಟಿಗತನ ಒಳ್ಳೇ ತೀವ್ರತೆಯಿಂದ ಮನಸ್ಸನ್ನು ಚುಚ್ಚಿತು. ಥಳಥಳಿಸುವ ಲೋಲಕಗಳಿಂದ ಅಲಂಕೃತವಾದ ದೇವಾಲಯದ ಸಭಾಮಂಟಪದಂತೆ ಕಂಡಿತು ಅವಳಿಗೆ ಆಕಾಶ. ಆದರೆ ಅವಳ ವಿಚಾರವು ಮತ್ತೆ ಸಾಗಿತು. ಈ ದೇವಾಲಯದಲ್ಲಿಯಾದರೂ ಜಾಗ್ರತ ದೇವನೆಲ್ಲಿದ್ದಾನೆ ? ಪ್ರತಿ ನಿತ್ಯವೂ ಸಾವಿರಾರು ಬಡಬಗ್ಗರ ಬಲಿದಾನವಾಗುತ್ತದೆ ಇದೇ ದೇವಾಲಯದಲ್ಲಿ. ಇದು ಎಲ್ಲವೂ ದೇವನಿಗೆ ಸರಿಬೀಳುವದೇ? ಇಷ್ಟರಲ್ಲಿ ಫಳ್ಳೆಂದು ತಾರೆಯೊಂದು ಭೂಮಿಗೆ ಬಿದ್ದಿತು. ಅವಳು ಮತ್ತೆ ಮೇಲಕ್ಕೆ ನೋಡಿದಳು. ಆಕಾಶದಲ್ಲಿಯ ಇತರ ತಾರೆಗಳು ಮೊದಲಿನಂತೆಯೇ ಹೊಳೆಯುತ್ತಿದ್ದವು. ತಾರೆಯಲ್ಲಿ ಸೌಂದರ್ಯವಿದೆ ; ಕಲೆಯಿದೆ. ಆದರೆ ಜೀವನ ? ಜೀವನದಲ್ಲಿ ನಿಜವಾಗಿಯೂ ಇಲ್ಲ. ಅವಳ ದೃಷ್ಟಿಯು ಮತ್ತೆ ಪೃಥ್ವಿಯ ಕಡೆಗೆ ತಿರುಗಿತು. ತಲೆಯ ಮೇಲೆ ಫಲಭಾರವನ್ನು ಹೊತ್ತುಕೊಂಡು, ತೆಂಗಿನ ಗಿಡವು ನಿಶ್ಚಲವಾಗಿ ನಿಂತಿತ್ತು. ತೋಪಿನಲ್ಲಿಯ ಒಂದು ಸಣ್ಣ ತೆಂಗಿನ ಮರವು ಅವಳಿಗೆ ಕಾರಂಜಿಯಂತೆ ಕಂಡಿತು. ಅವುಗಳಲ್ಲಿ ಜೀವನ



ಮತ್ತು ಕಲೆಯ ಸಂಗಮವನ್ನು ಕಂಡು ಅವಳ ಮನಸ್ಸು ಕ್ಷಣಮಾತ್ರ ಶಾಂತವಾಯಿತು.

ಸ್ವಸ್ಥ ಮನಸ್ಸಿನಿಂದ ಬುಸು ಬುಸು ಕಾಡಿಗೆ ಬಿಡುವ ಚಿಮಣಿಯ ಬೆಳಕಿನಲ್ಲಿ ವತ್ಸಲೆಯು ಬರೆಯತೊಡಗಿದಳು. ಬರೆಯುತ್ತಲೇ, ಅವಳಿಗೆ ಆ ಮಧ್ಯರಾತ್ರಿಯ ನೆನಹು ಬಂದಿತು. ಆ ರಾತ್ರಿಯಲ್ಲಿ ಅವಳು ಇದೇ ವಹಿಯನ್ನು ತೆಗೆದುಕೊಂಡು ಅಲ್ಲಿಂದ ತಾನು ಹೊರಬಿದ್ದವಳು, ಅದೇ ವಹಿಯಲ್ಲಿ ಈಗ ತಾನು ತನ್ನ ಅನುಭವಗಳನ್ನು ಟಿಪ್ಪಣಿ ಮಾಡುತ್ತಿರುವಳು. ರಮಾಕಾಂತನು ಆ ವಹಿಯಲ್ಲಿ ಕಾಗದದ ಒಂದು ಮೈಮೇಲೆ ತನ್ನ ಕಲಾತ್ಮಕ ಜೀವನದ ಸಮರ್ಥನೆಯನ್ನು ಬರೆದಿದ್ದು ಅದರ ಹಿಂದಿನ ಮೈಮೇಲೆ ವತ್ಸಲೆಯು ತನ್ನ ಜೀವನ ಕಲೆಯನ್ನು ಅರಳಿಸುತ್ತಿದ್ದಳು.

ಎಷ್ಟೋ ವೇಳೆ ಬರೆದ ಅನಂತರ ಅವಳಿಗೆ ಮನಸ್ಸಿನಲ್ಲಿ ಹಗುರೆನಿಸಿ ಗಾಢವಾಗಿ ನಿದ್ರೆ ಹತ್ತಿತು. ಮುಂಜಾವಿನಲ್ಲಿ ವಿದ್ಯಾಧರನು ಬಂದು ಹೊರಗಿನಿಂದ ಕರೆದು ಎಬ್ಬಿಸುವವರೆಗೂ ಅವಳಿಗೆ ಎಚ್ಚರವೇ ಎಲ್ಲ ! ಆಗ ಅವಳು ಒಮ್ಮೆಲೆ ಎಚ್ಚತ್ತು, ಬಾಗಿಲವನ್ನು ತೆರೆದು ಹೊರಕ್ಕೆ ಬಂದಾಗ ಅವಳಿಗೆ ಬಹಳ ನಾಚಿಕೆಯಾಯಿತು. ಹೀಗೆ ಮಲಗಲಿಕ್ಕೆ ನಾಳಿನಿಂದ ಸಿಗಲಾರದು ಎಂದು ವಿದ್ಯಾಧರನು ನಗುನಗುತ್ತ ಅಂದದ್ದಕ್ಕೆ ಅವಳು “ಅದು ಯಾಕೆ ? ಕೆಲಸವೂ ಇಲ್ಲ. ಏನೂ ಇಲ್ಲ ! ನಿದ್ರೆಯ ಹೊರತು ಬೇರೆ ಏನು ಮಾಡಬೇಕು ಬಡವರು ?” ಅಂದಳು.

“ಆದರೆ ನಾಳಿನಿಂದ ಕೆಲಸವಿದೆಯಲ್ಲಾ.”

“ಎಂಥದು ಅದು ?”

“ಕಾರಖಾನೆಯದು !”

“ಅಂದರೆ ?”

“ಬಾಪ್ಪಾ ಅವರು ಸುಲೋಚನಾಬಾಯಿಯವರನ್ನು ಕರೆದುಕೊಂಡು ಬಂದರು. ಮತ್ತು ಅವಳ ಹಟಕ್ಕಾಗಿ ದಾದಾ ಅವರು ಕಾರಖಾನೆಯನ್ನು ಮತ್ತೆ ಸುರುವು ಮಾಡಲಿಕ್ಕೆ ಒಪ್ಪಿದ್ದಾರೆ. ಪ್ರೇಮವೆಂದರೆ ಹೀಗೆ !”

“ಹೀಗೆ ಅಂದರೆ ಹೇಗೆ ?”

“ತೀರ ತನ್ನ ಪ್ರೀತಿಯದನ್ನಾದರೂ ಬಿಡಲಿಕ್ಕೆ ಸಿದ್ಧವಾಗುವದದು.”

“ಹಾಗಾದರೆ ಒಮ್ಮೆ ಭೆಟ್ಟಿಯಾಗಬೇಕು ಆ ಸುಲೋಚನಾಬಾಯಿಯವರನ್ನು !”

“ಈಗಲೇ ಭೆಟ್ಟಿಯಾಗಬಹುದಾಗಿತ್ತು ! ನನ್ನ ಕೂಡ ತಿರುಗಾಡಲಿಕ್ಕೆ ಬರತಕ್ಕವಳಿದ್ದಾಳೆ!’

“ಅಲ್ಲಿಂದ ?”

“ನಾನೇ ಬೇಡವೆಂದೆ !”

“ಯಾಕೆ ?” ಈ ಪ್ರಶ್ನೆ ಕೇಳುವ ಮುಂದೆ ವತ್ಸಲೆಯ ಹೃದಯವು ಬಡಿದುಕೊಳ್ಳುತ್ತಿತ್ತು.

“ಯಂತ್ರದ ವಿಷಯದಲ್ಲಿ ನಾನೊಬ್ಬನೇ ಒತ್ತಟ್ಟಿಗೆ ವಿಚಾರ ಮಾಡುತ್ತ ಕೂಡಬೇಕೆಂದಿದೇನೆ !”

“ಹೀಗೋ ? ಹಾಗಾದರೆ ಇಂದಿನ ದಿವಸ ದಿನ್ನೆಯ ಮೇಲೆ ಬರಲಿಕ್ಕೆ ನಮಗೂ ಪ್ರತಿಬಂಧವೇ ?”

"ನೀನು ಇಂದು ದಿನ್ನೆಯ ಕಡೆಗೆ ಬರುವದೇ ಇಲ್ಲ !"

"ಯಾಕೆ ?"

"ಇದು ನೋಡು" ಅನ್ನುತ್ತ ವಿದ್ಯಾಧರನು 'ಬಕುಲ'ದ ಸಂಚಿಕೆಯನ್ನು ಅವಳ ಕೈಯಲ್ಲಿ ಕೊಟ್ಟನು.

ಅದನ್ನು ಅವಳು ತೆರೆದು ನೋಡಿದಳು. ಅದರಲ್ಲಿ ರಮಾಕಾಂತನ ಕಥೆ– "ದೃಷ್ಟಿಲಾಭ."

"ಈ ರಮಾಕಾಂತನು ಭೆಟ್ಟಿಯಾಗಿದ್ದ ನಮಗೆ."

"ಎಲ್ಲಿ ?"

"ಅಂಬೋಲಿಯಲ್ಲಿ. ಬಹಳ ರಸಿಕ ಪ್ರಾಣಿ !" ವತ್ಸಲೆಯು ಸ್ತಬ್ಧವಾಗಿದ್ದಳು.

"ಸುಲೋಚನೆಯ ಕೂಡ ಮೊದಲು ಇಲ್ಲಿಗೆ ಬರತಕ್ಕವನಿದ್ದ. ದಾದಾ ಅವರ ಪುಸ್ತಕವನ್ನು ಬರೆಯುವದದೆಯಲ್ಲ ! ಆದರೇನು ? ಜೊತೆಯಲ್ಲಿದ್ದ ಆ ಹೆಂಗಸಿನ ಕೈಯಲ್ಲಿ ಸಿಕ್ಕವನು–"

"ಅವರ ಜೊತೆಯಲ್ಲಿ ಹೆಂಗಸಿದ್ದಳೇ?"

"ಹೌದು. ಸುರಂಗೆಯಿದ್ದಳು. ಅವಳೊಬ್ಬಳು ಹೆಸರಾದ ನಟಿಯಂತೆ !"

"ರಮಾಕಾಂತರು ತಿರುಗಿ ಯಾಕೆ ಹೋದರು ?"

"ಅದು ಸುರಂಗೆಗೆ ಗೊತ್ತು !" ವಿದ್ಯಾಧರನು ನಗುನಗುತ್ತ ಹೇಳಿದ. ಆದರೆ ಆ ನಗುವಿನಿಂದ ವತ್ಸಲೆಯ ಹೃದಯಕ್ಕೆ ವೇದನೆಯಾಗದೆ ಇರಲಿಲ್ಲ. ವಿದ್ಯಾಧರನ ಲಕ್ಷ್ಯವು ಅತ್ತಕಡೆಗಿರಲಿಲ್ಲ. ಅವನು ಮುಂದೆ ಅಂದ : "ಬಡಪ್ರಾಣಿ ಆತನ ಹೆಂಡತಿ, ಎಲ್ಲಿಯಾದರೂ ಆತನನ್ನು ನೆನಸುತ್ತಿದ್ದಾಳು–"

ವತ್ಸಲೆಯು ಮೋರೆ ತಿರುವಿದಳು. ವಿಷಯ ಬದಲಾಯಿಸುವುದಕ್ಕೆಂದೇ ಅವಳು ಕೇಳಿದಳು : "ಬಾಪ್ಪಾ ಅವರು ಎಲ್ಲಿದ್ದಾರೆ ?"

"ಇದೇ ಹೊರಟುಹೋದರು, ರತ್ನಾಗಿರಿಗೆ !"

"ಯಾತಕ್ಕೆ ?"

"ಕೋಣವನ್ನು ಬದುಕಿಸಲಿಕ್ಕೆ ?"

"ಯಾವ ಕೋಣವು ಅದು ಅವರು ಬದುಕಿಸುವದು ?"

"ಇಲ್ಲಿಯದೇ. ಎಂಟು ದಿವಸದ ಅನಂತರ ಜಾತ್ರೆಯಲ್ಲಿ ಅದನ್ನು ಬಲಿ ಕೊಡುವವರಿದ್ದಾರೆ. ದೇವಸ್ಥಾನವಂತೂ ಸರಕಾರದ ವಶದಲ್ಲಿದೆ. ಮೂರು ವರ್ಷದ ಕೆಳಗೆ ಊರವರು ಬಲಿ ಕೊಡುವುದಿಲ್ಲೆಂದು ಒಪ್ಪಿಕೊಂಡಿದ್ದರಂತೆ !"

"ಕೋಣವನ್ನು ಬಲಿ ಕೊಡದಿದ್ದರೆ ದೇವಿಯ ಸಿಟ್ಟಿಗೇಳುವಳೆಂದು ತಿಳಿದುಕೊಂಡು ಕುಳಿತಿದ್ದಾರೆ ಊರವರೆಲ್ಲರು !"

"ನೀನೂ ಹಾಗೆಯೇ ತಿಳಿದಿರುವೆಯಾ ?"

"ಇಲ್ಲ."



"ಅದು ಏಕೆ ?"

"ಯಾಕೆ ಯಾರು ಬಲ್ಲರು ? ಹಾಗೆ ತಿಳಿದಿಲ್ಲ ಮಾತ್ರ ನಿಜ !'

"ಏನೋ ಕೋಣದ ಭಾಗ್ಯ ತೆರೆದಂತೆ ತೋರುತ್ತದೆ. ಬಾಪ್ಪಾ ಅವರಂಥ ವಕೀಲ ಸಿಕ್ಕಿರುವರು ಅದಕ್ಕೆ." ವಿದ್ಯಾಧರನು ಹೋಗು ಹೋಗುವ ಮುಂದೆ ಅಂದನು.

* * * * *

ಸಾಯಂಕಾಲದಲ್ಲಿ ವತ್ಸಲೆಯು ಎಷ್ಟೋ ಹೊತ್ತಿನವರೆಗೂ ಕಾಶಿಯ ದಾರೀ ನೋಡಿದಳು. ಬಸ್ಸಿನ ವೇಳೆಯಾಗಿಹೋದರೂ ಅವಳು ಹಾಗೆಯೇ ಕುಳಿತಿದ್ದಳು. ಕಾಶಿಯು ಇನ್ನು ಮೇಲೆ ಬರುವುದಿಲ್ಲವೆಂದು ಗೊತ್ತಾದಮೇಲೆ ಅವಳು ಎದ್ದು ಒಳಗಡೆಗೆ ಹೋದಳು. ಆ ಕ್ಷಣದಲ್ಲಿ ಅವಳ ಮನಸ್ಸಿನಲ್ಲಿ ಕೇವಲ ನಿರಾಶೆಯಿರದೆ ಅದರಲ್ಲಿ ಆನಂದವೂ ಇತ್ತು. ಕಾಶಿಯ ಕೂಡ 'ಸೋನ್ಯಾ' ಬರುವನು– 'ಅಬಚೀ, ಅಬಚೀ' ಎಂದು ಮೈಮೇಲೆ ಅಡರುವನು. ಆಗ ತನ್ನ ಮನಸ್ಸು ಅನ್ನುವದು : "ಏನು ಹುಚ್ಚೀ, ಯಾರ ಹುಡುಗನನ್ನು ಮುದ್ದಿಡುವಿ ? ನಿನ್ನ ಸವತಿಯ– ನಿನ್ನ ಸಂಸಾರದಲ್ಲಿ ವಿಷ ಕಲೆಸಿದ–ಆ ಸುರಂಗೆಯ–"

ಮುಂಜಾವಿನಲ್ಲಿ ವಿದ್ಯಾಧರನು ಕೊಟ್ಟ ರಮಾಕಾಂತನ ಕಥೆಯನ್ನು ಓದಿದಳು. ಮತ್ತು ಅದೇ ಹೆಸರಿನ ಎರಡನೇ ಕಥೆಯೊಂದನ್ನು ಬರೆಯಲಿಕ್ಕೆ ಕುಳಿತಳು. ಎರಡು ಮೂರು ಹೊಡೆಯುವ ಹೊತ್ತಿಗೆ ಕಥೆಯು ಮುಗಿಯಲಿಕ್ಕೆ ಬಂದಿತು. ಕೊನೆಯ ಸ್ವಲ್ಪ ಭಾಗವು ಬರೆಯತಕ್ಕದ್ದು ಉಳಿದಿತ್ತು. ಇಷ್ಟರಲ್ಲಿ ಪೋಸ್ಟಿನವನು ಕಾಶಿಯನ್ನು ಕೇಳುತ್ತ ಬಂದ. ಅವಳ ಹೆಸರಿನಲ್ಲಿ ಒಂದು ಮನಿಆರ್ಡರು ಬಂದಿತ್ತು. ವತ್ಸಲೆಯು ಅದನ್ನು ಕೈಯಲ್ಲಿ ತೆಗೆದುಕೊಂಡು ನೋಡಿದ ಕೂಡಲೆ, ಅದನ್ನು ಮುಂಬಯಿಯಿಂದ ನಾಟಕ ಕಂಪನಿಯ ಮ್ಯಾನೇಜರನು ಕಳಿಸಿದ್ದೆಂದು ಗೊತ್ತಾಯಿತು ! ಕೂಪನ್ನಿನಲ್ಲಿ "ಸುರಂಗೆಯು ಬೆಳಗಾಂವಿಗೆ ಹೋಗಿದ್ದಾಳೆ. ಅವಳು ಪತ್ರ ಬರೆದರೂ ಕೂಡ ಹುಡುಗನನ್ನು ಅತ್ತ ಕಡೆಗೆ ಒಯ್ಯಬಾರದು. ಅವಳಿಗೆ ಮೈಯಲ್ಲಿ ಚೆನ್ನಾಗಿಲ್ಲ. ಹುಡುಗನ ವಿಷಯದಲ್ಲಿ ಸುಮ್ಮನೆ ಚಿಂತೆ ಮಾಡುತ್ತ ಕೂಡುವ ಅಭ್ಯಾಸವಿದೆ ಆಕೆಗೆ. ಆದ್ದರಿಂದ ಈ ವೇಳೆಯಲ್ಲಿ ಹುಡುಗನನ್ನು ದೂರವೇ ಇಡಬೇಕು" ಎಂದು ಬರೆದಿತ್ತು.

ಪೋಸ್ಟಿನವನು ಬಂದಂತೆಯೇ ತಿರುಗಿ ಹೋದ. ಆಗಿನಿಂದ ಸಂಜೆಯವರೆಗೆ ವತ್ಸಲೆಯು ವಿಚಾರ ಮಾಡುತ್ತಲೇ ಇದ್ದಳು. ಕಥೆಯನ್ನು ಮುಗಿಸಬೇಕೆಂದು ಎರಡು ಮೂರು ಸಾರೆ ನಿಶ್ಚಯ ಮಾಡಿದಳು. ಆದರೆ ದುಃಖದಿಂದ ಹೃದಯವು ತುಂಬಿ ಬಂದ ಮೇಲೆ ಮನುಷ್ಯನು ಬಡಿಸಿಟ್ಟ ಎಲೆಯ ಮೇಲಿಂದಲೂ ಏಳುವನು. ದೈವದ ಗತಿಯು ಹಾವಿನಂತೆ ವಕ್ರವಾಗಿರುತ್ತದೆಂದು ಅವಳು ಎಲ್ಲಿಯೋ ಓದಿದ್ದು ನೆನಪಿಗೆ ಬಂದಿತು. ಆದರೆ ಅದು ಹಾವಿನಂತೆಯೇ ಸಿಟ್ಟು ಹಿಡಿದು ಮನುಷ್ಯನ ಬೆನ್ನು ಹತ್ತಬಹುದೆಂಬುದು ಅವಳಿಗೆ ತಿಳಿದಿರಲಿಲ್ಲ. ಆದರೆ ಎಷ್ಟೋ ಸಾರೆ ಅನುಭವವು ಕಲ್ಪನೆಗಿಂತಲೂ ವಿಚಿತ್ರವಾಗಿರುತ್ತದೆ. ಅವಳು ಮತ್ತೆ ವಿಚಾರ ಮಾಡಹತ್ತಿದಳು :

ಸುರಂಗೆಯ ಹುಚ್ಚು ಹಿಡಿದ ರಮಾಕಾಂತನ ಕಣ್ಣೆದುರಿನಲ್ಲಿರಬಾರದೆಂದೇ ತಾನು ದೇಶ ಬಿಟ್ಟು, ಜಾತಿ ಬಿಟ್ಟು, ಸುಖದ ಎಲ್ಲ ಆಸೆಗಳನ್ನೂ ಬದಿಗಿರಿಸಿ ಇಲ್ಲಿಗೆ ಬಂದದ್ದು. ಆದರೆ ಹರಿಣಿಯು ಎಷ್ಟು ವೇಗವಾಗಿ ಓಡಿದರೂ ವಾಯುವೇಗದಿಂದ ಬೆನ್ನಟ್ಟುವ ವ್ಯಾಧನ ಬಾಣಕ್ಕೆ ಬಲಿ ಬಿದ್ದೇ ಬೀಳುವದು ! ಇತ್ತ ಕಡೆಗೆ ತಾನು ಸುರಂಗೆಯ ಹುಡುಗನನ್ನು ನೋಡಿಕೋಬೇಕು. ಅತ್ತ ಕಡೆಗೆ ಅವಳು ರಮಾಕಾಂತನ ಕೂಡ ವಿಲಾಸಮಗ್ನಳಾಗಿರಬೇಕು ! ನಾಳೆ ಸೋನ್ಯಾ ಬಂದು "ಅಬಚೀ, ಅಬಚೀ !" ಎಂದು ಮೈಗೆ ಅಡರಹತ್ತಿದರೆ, ಆತನಿಗೆ ದೂರ ಸರಿಸುವದು ನಿಶ್ಚಯ. ಆದರೆ ಈಗ ಒಂದೂವರೆ ತಿಂಗಳವರೆಗೆ ಹೊಟ್ಟೆಯ ಹುಡುಗನಂತೆ ಅವನನ್ನು ಸಾಕಿ, ಈಗ ಒಮ್ಮೆಲೆ ಬೆನ್ನು ತಿರುಗಿಸುವದು ಸಾಧ್ಯವೆ ? ಇದಕ್ಕಿಂತಲೂ ಈ ಮನೆಯನ್ನೇ ಬಿಟ್ಟುಹೋದರೆ? ಆದರೆ ಹೋಗುವದೆಲ್ಲಿ ? ಎಲ್ಲಿ ?

ಅವಳಿಗೆ ಒಮ್ಮೆಲೆ ವಿದ್ಯಾಧರನ ನೆನಪಾಯಿತು. ಅವಳಿಗೆ ರೋಮಾಂಚವೆದ್ದಿತು. ವಿದ್ಯಾಧರನಿಗೆ ತಾನು ಈಗ ಒಬ್ಬ ಬುದ್ಧಿವಂತ ಒಕ್ಕಲಗಿತ್ತಿಯೆಂದು ಬೇಕಾದವಳು. ಇದಕ್ಕೂ ಹೆಚ್ಚಾಗಿ ಅವನಿಂದ ಪ್ರೀತಿ ಸಂಪಾದಿಸಿ–ವತ್ಸಲೆಯು ಹೊರಗೆ ನೋಡಿದಳು. ಸಾಯಂಕಾಲದ ಕರಿನೆಳಲುಗಳು ಗಿಡದಿಂದ ಕೆಳಗಿಳಿಯುತ್ತಿದ್ದವು ತನ್ನ ಮನಸ್ಸಿನಲ್ಲಿಯಾದರೂ ಅದೇ ಬದಲಾವಣೆ ನಡೆದಂತೆ ಅವಳಿಗೆ ಭಾಸವಾಯಿತು. "ನಾನು ನನ್ನ ಕೈಗಳಿಂದಲೇ ನನ್ನ ಹೃದಯದ ಬಾಗಿಲವನ್ನು ಮುಚ್ಚುತ್ತಲಿದ್ದೇನೆ. ಇನ್ನು ಮೇಲೆ ಹೇಗೆ ಒಳಗೆ ಸೇರುವಿರಿ ನೋಡೋಣ" ಎನ್ನುವಂತೆ ಅವಳು ತನ್ನ ಎರಡೂ ಕೈಗಳಿಂದ ಹೃದಯವನ್ನು ಗಟ್ಟಿಯಾಗಿ ಹಿಡಿದುಕೊಂಡಳು. ನೀರೊಳಗಿಂದ ಹೊರಗೆ ತೆಗೆದ ಮೀನು ಮತ್ತೆ ನೀರನ್ನು ಸೇರಲಿಕ್ಕೆ ಚಡಪಡಿಸುವಂತೆ, ಅವಳ ಮನಸ್ಸು ಮತ್ತೆ ಅದೇ ವಿಚಾರದ ಕಡೆಗೆ ಧಾವಿಸುತ್ತಿತ್ತು. ಆದರೆ ಜಾಲಗಾರನ ಕ್ರೂರತನದಿಂದ ಪ್ರತಿ ಸಾರೆಯೂ ಅದನ್ನು ಅವಳು ಜಗ್ಗಿ ಹಿಡಿಯುತ್ತಿದ್ದಳು.

ದೀಪವನ್ನು ಮುಂದಕ್ಕೆ ಸರಿಸಿಕೊಂಡು ದೃಢನಿಶ್ಚಯದಿಂದ ಬರೆಯಲಿಕ್ಕೆ ಕುಳಿತಳು. ಕಲ್ಪನೆಯ ಆ ಹೊಸ ಸೃಷ್ಟಿಯಲ್ಲಿ ಸೇರಿದೊಡನೆ ಅವಳ ಮನಸ್ಸು ತುಸು ಶಾಂತವಾಯಿತು. ಸರಸರ ಬರೆದು ಕಥೆಯನ್ನು ಮುಗಿಸಿ ಮೇಲಕ್ಕೆ ನೋಡಿದಳು. ದೀಪಜ್ಯೋತಿಯ ತಲೆಯ ಮೇಲೆ ಕಾಡಿಗೆಯು ಥೈಥೈ ಕುಣಿಯುತ್ತಿತ್ತು. ಅದು ತನ್ನ ಪೂರ್ಣ ಮನಃಸ್ಥಿತಿಯ ಪ್ರತಿಬಿಂಬವೇ ಎಂದೆನಿಸಿತು ಅವಳಿಗೆ ! ಅವಳು ತನ್ನಷ್ಟಕ್ಕೆ ತಾನೇ ಸಮಾಧಾನ ಹೇಳಿಕೊಂಡಳು–ಮನುಷ್ಯ ಪ್ರಾಣಿಯೆಂದರೇನೇ ಹೀಗೇ ! ಈ ದೀಪವು ಕತ್ತಲೆಯನ್ನು ಬೆಳಗಿಸಿ ಬೆಳಕು ಕೊಟ್ಟಷ್ಟೇ ಕಾಡಿಗೆಯನ್ನೂ ತುಂಬುತ್ತಲಿದೆ. ಕೆಲವು ನಿಮಿಷ ಪೂರ್ವದಲ್ಲಿ ತನ್ನ ಮನಸ್ಸಿನಲ್ಲಿ ನಿಂತ ವಿದ್ಯಾಧರನ ಮೂರ್ತಿ.........

ಅಂಗಳದೊಳಗಿಂದ ಯಾರೋ ಕರೆದರು "ಕೃಷ್ಣಾ !"

ವಿದ್ಯಾಧರನ ಧ್ವನಿಯೇ ಅದು. ತಾನು ಮನೆಯಲ್ಲಿ ಒಬ್ಬಳೇ ಇದ್ದುದನ್ನು ನೋಡಿ ಈ ಕಾತರಸಮಯದಲ್ಲಿ ವಿದ್ಯಾಧರನು ಬೇಕೆಂತಲೇ ಬಂದಿರಬಹುದೇ, ಎಂದು ಅನಿಸಿತು ಅವಳಿಗೆ. ಆದರೆ ಅಷ್ಟರಲ್ಲಿಯೇ ಅವನ ವಿಷಯದಲ್ಲಿ ವಿಪರೀತ ಸಂಶಯವನ್ನು ತೆಗೆದುಕೊಂಡದ್ದಕ್ಕಾಗಿ



ಅವಳಿಗೆ ಖೇದವಾಯಿತು. ಹೊರಗೆ ಬರಬರುತ್ತ ಅವಳಂದಳು– "ಇದೇ ಈಗ ನಿಮ್ಮನ್ನು ನೆನಿಸಿದೆ ! ತುಂಬ ನೂರು ವರ್ಷವಿದೆ ನಿಮಗೆ ಆಯುಷ್ಯ !"

"ನೂರು ವರ್ಷವಿದೆಯೋ ಐದು ನಿಮಿಷವಿದೆಯೋ–" ಕಿಂಚಿತ್ ನಡುಗುವ ಸ್ವರದಲ್ಲಿ ವಿದ್ಯಾಧರನು ಉತ್ತರ ಕೊಟ್ಟನು.

ವತ್ಸಲೆಯ ಮೈಯೆಲ್ಲ ಒಮ್ಮೆಲೆ ಝುಲ್ಲೆಂದಿತು. ವಿದ್ಯಾಧರನು ಪಾವಟಿಗೆಗಳನ್ನೇರಿ ಬಂದವನು ನೆಟ್ಟಗೆ ದೀಪದ ಹತ್ತಿರ ಹೋದನು. ಕೆಳಗೆ ಕುಳಿತು ತನ್ನ ಬಲಗಾಲಿನ ಪಾದವನ್ನು ಮೇಲಕ್ಕೆತ್ತಿ ಹಿಡಿದ.

"ಏನು ? ಏನಾಯಿತು ?"

"ಕಡಿಯಿತು ಏನೋ–"

"ಎಲ್ಲಿ ?"

"ಇದೋ ಇಲ್ಲಿ."

ಎಡಗಡೆಯ ಬದಿಗೆ ವಿದ್ಯಾಧರನು ಬೊಟ್ಟು ತೋರಿಸಿದ ವತ್ಸಲೆಯು ನೋಡಿದಳು. ಒಂದು ದುಡ್ಡಿನಷ್ಟು ಸ್ಥಳ ನೀಲವರ್ಣದ್ದಾಗಿತ್ತು. ಅದನ್ನು ನೋಡಿದ ಕೂಡಲೆ ವತ್ಸಲೆಯು ಒಮ್ಮೆಲೆ "ಅವ್ವಯ್ಯಾ" ಎಂದಳು. ಮರುಕ್ಷಣವೇ ಅತ್ತಿತ್ತ ನೋಡಿ, ಒಮ್ಮೆಲೆ ಹೋಗಿ ತನ್ನ ಸೀರೆಯನ್ನೇ ಹರಿದು ಪಟ್ಟಿಗಳಿಂದ ವಿದ್ಯಾಧರನ ಕಾಲನ್ನು ಪಾದದಿಂದ ಮೇಲಕ್ಕೆ ಗಟ್ಟಿಯಾಗಿ ಬಿಗಿದಳು.

"ಕಾಲು ಜಡವೆನಿಸುತ್ತಿದೆಯೇ ?" ಅವಳು ಕೇಳಿದಳು.

"ಹೌದು."

ಅವಳು ಮುಖವನ್ನು ತಿರುವಿದಳು. ಅವಳ ಕಣ್ಣಲ್ಲಿ ನೀರು ನಿಂತದ್ದನ್ನು ವಿದ್ಯಾಧರನು ಗುರುತಿಸಿದನು. ಕೂಡಲೆ ಅವಳು :

"ನಾನು ಇದೇ ಬಂದೆ !"

"ಎಲ್ಲಿಗೆ ಹೋಗುವಿ ?"

"ಇಲ್ಲಿಯೇ ನೆರೆಯ ಮನೆಯ ಆವಾರದಲ್ಲಿ ! ಆ ನಾಗರಹಾವಿನ ಮಣಿಯನ್ನು ತರುತ್ತೇನೆ."

"ಕತ್ತಲೆಯಲ್ಲಿ ಒಬ್ಬಳೇ ಹೋಗುವಿಯಾ ?"

ಆದರೆ ವಿದ್ಯಾಧರನ ಪ್ರಶ್ನೆಯನ್ನು ಕೇಳಲಿಕ್ಕೆ ಅವಳು ಅಲ್ಲಿ ಇರಲೇ ಇಲ್ಲ. ನದಿಯ ಪೂರದಂತೆ ಯಾವಾಗಲೋ ಓಡುತ್ತ ಹೋಗಿದ್ದಳು.

ವಿದ್ಯಾಧರನಿಗೆ ಕೃಷ್ಣೆಯ ಆ ಧೈರ್ಯವನ್ನು ನೋಡಿ ಕೌತುಕವೆನಿಸಿತು. ಒಂದೇ ವಿಷಯದ ಮೇಲಿನ ಎರಡು ಗ್ರಂಥಗಳನ್ನು ಟೀಕಾಕಾರನು ಹೋಲಿಸಿ ನೋಡುವಂತೆ, ಅವನ ಮನಸ್ಸು ಸುಲೋಚನಾ ಕೃಷ್ಣೆಯರನ್ನು ಹೋಲಿಸಿತು. ರಮಾಕಾಂತನ ಮೇಲೆ ಸಿಟ್ಟಿಗೆದ್ದ ಮೂಲಕವಾಗಿರಲಿ, ಅಥವಾ ಇನ್ನಾವ ಕಾರಣದ ಮೂಲಕವೇ ಆಗಿರಲಿ, ಸುಲೋಚನೆಯು

ತನ್ನ ವಿಷಯದಲ್ಲಿ ಹೆಚ್ಚಾಗಿ ಆದರ ತೋರಿಸುತ್ತಿದ್ದದ್ದು, ಅಂಬೋಲಿಯನ್ನು ಬಿಟ್ಟಂದಿನಿಂದ ಅವನಿಗೆ ಒಡೆದು ಕಾಣುತ್ತಿತ್ತು. ಆದರೆ ಈ ಕ್ಷಣಕ್ಕೆ ಸುಲೋಚನೆಯಿದ್ದರೆ, ಮುಳು ಮುಳು ಅಳುತ್ತ ಕೂಡುತ್ತಿದ್ದಳು. ಸುಲೋಚನೆಯು ಕೃಷ್ಣೆಗಿಂತಲೂ ಚೆಲುವೆಯಾಗಿರಬಹುದು. ಆದರೆ ಸೌಂದರ್ಯ–ಕೇವಲ ನಿರ್ಜೀವ ಸೌಂದರ್ಯದಿಂದ ಮನುಷ್ಯರು ಬದುಕುವದು ಶಕ್ಯವಿದೆಯೇ?

ಈ ವಿಚಾರದೊಡನೆ ಮೊಳಕಾಲಿನವರೆಗೂ ಬಧಿರವಾದ ತನ್ನ ಕಾಲ ಕಡೆಗೆ ನೋಡಿದನು. ಕೂಡಲೆ ಕಾಡಿಗೆಯನ್ನು ಕಾರುತ್ತಿರುವ ಆ ದೀವಿಗೆಯ ಕಡೆಗೆ ಅವನ ದೃಷ್ಟಿ ಹೋಯಿತು. ಅವನಿಗೊಂದು ವಿಚಾರ ಹೊಳೆಯಿತು. ಒಂದು ಗಾಳಿಯ ಝುಳುಕು ಬಂದರೆ ದೀಪವೂ ಆರಿಹೋಗುತ್ತದೆ. ಮನುಷ್ಯನಾದರೂ ಈ ದೀಪಕ್ಕಿಂತ ಏನು ಹೆಚ್ಚಿನವನು ? ಯಂತ್ರದ ಸಂಪೂರ್ಣ ಕಲ್ಪನೆಯು ತಲೆದೋರಿದ ಐದು ನಿಮಿಷಗಳಲ್ಲಿಯೇ ದಿನ್ನೆಯಿಂದ ಇಳಿದುಬರುವ ತನಗೆ "ಜೀವಾಣು"ವು (ಒಂದು ಜಾತಿಯ ಚಿಕ್ಕ ಹಾವು) ಕಡಿಯಬೇಕೆಂದರೆ ? ಅದೇ ಐದು ನಿಮಿಷಗಳಲ್ಲಿ ಕೃಷ್ಣೆ ಸುಲೋಚನೆಯರ ಸಾಮ್ಯವೈಷಮ್ಯ ನೋಡಿದ್ದು. ಪ್ರೇಮವೆಂದರೆ ಜೀವನಸಾಗರದ ಭರತಿಯ ಸೀಮೆ ! ಆದರೆ ಆ ಸೀಮೆಯ ಮೇಲಿರುವಾಗಲೇ ತನ್ನ ಆಯುಷ್ಯವು ಕಳೆಗುಂದಹತ್ತಿತು.....ಮರಣ......

ಆ ದೀಪದ ಮಂದಪ್ರಕಾಶದಲ್ಲಿ ಮನೆಯೊಳಗಿನ ಎಷ್ಟೋ ವಸ್ತುಗಳು ಭಯಾನಕವಾಗಿ ಕಾಣುವಂತೆ ನೆರಳುಗಳು ಗೋಡೆಯ ಮೇಲೆ ಕಾಣುತ್ತಿದ್ದವು ಯಮದೂತರ ತಂಡವೇ ನಿಂತಂತೆ ಭಾಸವಾಯಿತು ವಿದ್ಯಾಧರನಿಗೆ. ಆತನ ತಲೆಯೊಳಗಿನ ಪ್ರತಿಯೊಂದು ವಿಚಾರ, ಶರೀರದೊಳಗಿನ ಪ್ರತಿಯೊಂದು ರಕ್ತದ ಬಿಂದುವು "ನನಗೆ ಬದುಕಬೇಕಾಗಿದೆ ! ನಾನು ಬದುಕಲೇಬೇಕು !" ಎಂದು ಆಕ್ರೋಶಮಾಡುತ್ತಿದ್ದವು. ವಿದ್ಯಾಧರನಿಗೆ ಚಿಕ್ಕಂದಿನಲ್ಲಿಯ ತನ್ನ ಪ್ರೀತಿಯ ಬೆಕ್ಕಿನ ಸಾವು ನೆನಪಾಯಿತು. ಅದನ್ನು ತಗ್ಗಿನಲ್ಲಿಟ್ಟು ಯಾರೋ ಅದರ ಮೇಲೆ ಮಣ್ಣನ್ನು ಉಗ್ಗಿದಾಗ ಅವನ ಮನಸ್ಸು ವಿಚಾರಿಸಿತ್ತು–ಬೆಕ್ಕು ನಿಜವಾಗಿಯೂ ಸತ್ತಿರಬೇಕಲ್ಲವೆ? ಇಲ್ಲವೆ.......

ಆ ಬೆಕ್ಕಿನ ಸಲುವಾಗಿ ಅವನು ಎಷ್ಟೋ ದೇವರಿಗೆ ಬೇಡಿಕೊಂಡಿದ್ದ. ಅದು ಸತ್ತುಹೋದನಂತರ ರಾತ್ರಿ ಎಲ್ಲಿಯಾದರೂ, 'ಮ್ಯಾಂವ ಮ್ಯಾಂವ' ಎಂದು ಕೇಳಬಂದರೆ ತನ್ನದೆ ಬೆಕ್ಕು ಒದರುತ್ತಿರಬೇಕೆಂದು ಆತನಿಗೆ ಎಷ್ಟೋ ಸಾರೆ ಭಾಸವಾಗುತ್ತಿತ್ತು. ಅದು ಎಚ್ಚರ ದಪ್ಪಿ ಬಾಲವನ್ನು ನೆಲಕ್ಕೆ ಅಪ್ಪಳಿಸುವಾಗ, ಅದನ್ನು ಬದುಕಿಸುವದು ತನ್ನಿಂದ ಆಗದಲ್ಲಾ ಎಂದು ಅತ್ತಿದ್ದ. ಇಂಥ ಎಲ್ಲ ನೆನಪು ಅವನ ಮನಸ್ಸಿನಲ್ಲಿ ತಿರುವು ಮುರುವು ಕುಣಿಯ ತೊಡಗಿದವು. ಇವೆಲ್ಲವುಗಳಿಂದ ವ್ಯಾಕುಲವಾದ ಅವನ ಹೃದಯವು ಒಳಗಿನಿಂದ "ನನಗೆ ಬದುಕಬೇಕಾಗಿದೆ ; ನಾನು ಬದುಕಲೇಬೇಕು" ಅನ್ನುವಂತೆ ಧಡಧಡ ಬಡಿದುಕೊಳ್ಳುತ್ತಿತ್ತು.

ಸಾವಿನ ಬಾಗಿಲನ್ನು ನೋಡದವರೆಗೆ ಅದರೊಳಗಿಂದ ದಾಟಿ ಹೋಗುವೆನೆಂದು ಮನುಷ್ಯನಿಗೆ ಅನಿಸುವದು. ಆದರೆ ಅದು ಕಾಣ ಹತ್ತಿದ ಕೂಡಲೆ ಒಮ್ಮೆಲೆ ಅದರ ಕಡೆಗೆ ಆತ ಬೆನ್ನು ತಿರುವುವನು. ಮನುಷ್ಯನ ಜೀವನವು ಗಿಡದ ಮೇಲಿನ ಎಲೆಯಂತೆ ಎಂದಿಲ್ಲೊಂದು



ದಿನ ಉದುರಿಹೋಗುವದೇ ಎಂಬುದನ್ನು ಪುಸ್ತಕದಲ್ಲಿ ಓದುತ್ತಿರುವಾಗ ಅದರಲ್ಲಿ ವಿಶೇಷವೇನೂ ಅನಿಸಿರಲಿಲ್ಲ. ಯಾರೊಬ್ಬರು ಮರಣಹೊಂದಿದರೆ, ಪ್ರತಿ ದಿನವೂ ಜಗತ್ತಿನಲ್ಲಿ ಒಂದು ಲಕ್ಷ ಜನರು ಸಾಯುತ್ತಿರುತ್ತಾರೆಂಬ ವಿಚಾರದಿಂದ, ಅವನಿಗೆ ವಿಶೇಷವೆನಿಸುತ್ತಿರಲಿಲ್ಲ. ಆದರೆ ಇಂದು ತನ್ನ ಮೇಲೇ ಪ್ರಸಂಗ ಬಂದಾಗ ಜೀವನದ ಬೆಲೆ ಎಷ್ಟೆಂಬುದರ ಕಲ್ಪನೆಯು ಅವನಿಗೆ ಪೂರ್ಣವಾಗಿ ಬಂದಿತು.

ಅವನು ಹೊರಗೆ ನೋಡಿದ. ಯಾರದೂ ಸುಳಿವು ಕಾಣಲಿಲ್ಲ. ಸಾವಿನ ಶಂಕೆಯಿಂದ ತನ್ನ ತಲೆಯು ಒಡೆಯುವಂತೆ ಅನಿಸಿತು. ಮತ್ತೇನಾದರೂ ವಿಚಾರ ಮಾಡಬೇಕೆಂದು ಅತ್ತಿತ್ತ ನೋಡಿದ. ದೀಪದ ಹತ್ತಿರವೇ ಒಂದು ಕಾಗದ ಬಿದ್ದಿತ್ತು. ಅದರ ಮೇಲೆ "ಸಿರಿವಂತರ ವಿಲಾಸವೆಂದರೆ ಬಡವರ ಸಾವು" ಎಂದು ಬರೆದಿತ್ತು.

ಬಡವರ ಸಾವು ! ಅವನ ಕಣ್ಣುಗಳ ಮುಂದಿನಿಂದ ಬಡಬಗ್ಗರಿಂದ ತುಂಬಿದ ಹೊಲಗಳು, ಕಾರಖಾನೆಗಳು, ಗಿರಣಿಗಳು ಸರಸರನೆ ಹಾಯ್ದು ಹೋದವು ! ಬದುಕಿನ ಸಲುವಾಗಿ ಸಾವು ! ಏನು ವಿಚಿತ್ರ !

ಅವನು ಮತ್ತೊಂದು ಕಾಗದವನ್ನೆತ್ತಿ ನೋಡಿದ ಕ್ಷಣಮಾತ್ರ ತನಗೆ ಎಚ್ಚರವಿದೆಯೋ ಇಲ್ಲವೋ ಅವನಿಗೆ ಸಂಶಯವಾಯ್ತು. ಮೊದಲನೆಯ ಕಾಗದದ ಮೇಲೆಯೇ ಬರೆದಿತ್ತು–

**ದೃಷ್ಟಿಲಾಭ**

ಲೇಖಿಕಾ–ಕೃಷ್ಣಾ

"ದೇವನಂತೆ ಭಾವ" ಮತ್ತು "ಸುಂದರ ಚಿತ್ರ" ಈ ಕಥೆಗಳನ್ನು ಬರೆದ 'ಕೃಷ್ಣಾ' ಒಬ್ಬಳೇ ! ಒಬ್ಬಳೇ ಅಲ್ಲವಾದರೆ ಈ ಹಸ್ತಲಿಖಿತವು ಇಲ್ಲಿ ಹೇಗೆ ಬರಬೇಕು ?

ಇಷ್ಟರಲ್ಲಿ ಅಂಕಣದಲ್ಲಿ ಯಾರದೋ ಹೆಜ್ಜೆಯ ಸಪ್ಪಳವು ಕೇಳಿ ಬಂದಿತು. ಕೃಷ್ಣೆಯು ಒಬ್ಬ ಮುದುಕನನ್ನು ಕರೆದುಕೊಂಡು ಬಂದಿದ್ದಳು. ಅವನು ಒಂದು ಕೂದಲೆಳೆಯನ್ನು ಕಾಲಿನ ಮೇಲಿನ ನೀಲಿಯಾದ ಸ್ಥಳದ ಸುತ್ತಲು ತಿರುಗಿಸಿದ. ಆಮೇಲೆ ಒಂದು ಕೊಯ್ದು ಈರುಳ್ಳಿಯಿಂದ ಆ ಭಾಗವನ್ನು ಒರಸಿ ತೆಗೆದು, ಒಂದು ಕಲ್ಲುಸಕ್ಕರೆಯ ಹರಳಿನಷ್ಟು ಕಾಜಿನ ತುಣುಕನ್ನೊಂದನ್ನು ಅಲ್ಲಿ ಹಚ್ಚಿದನು. ಅದು ಅಲ್ಲಿಯೇ ಹತ್ತಿಕೊಂಡು ನಿಂತಿತು.

ಸುಮಾರು ಎರಡು ತಾಸಿನ ಅನಂತರ ಸುಲೋಚನೆಯು ಆಳನ್ನು ಕರೆದುಕೊಂಡು ವಿದ್ಯಾಧರನನ್ನು ವಿಚಾರಿಸುತ್ತ ಬಂದಳು. ಆ ಕಾಜಿನ ತುಣುಕು ಇನ್ನೂ ಹಾಗೆಯೇ ಇತ್ತು. ಅವಳು ಗದ್ಗದಿತ ಕಂಠದಿಂದ "ಇದೆಷ್ಟು ಕಷ್ಟ ? ವೇಳೆಗೆ ಸರಿಯಾಗಿ ಮಣಿಯು ಸಿಕ್ಕಿತೆಂದು ಒಳ್ಳೇದಾಯಿತು !"

"ಆದರೆ ಆ ಮಣಿಯೇನೂ ಎಲ್ಲರಿಗೂ ಸಿಗುವದಿಲ್ಲ !"

"ಹಾಗಾದರೆ ಯಾರಿಗೆ ಸಿಗುವುದು ?"

"ರತ್ನದ ಕಡೆಗೆಯೆ ಹೋಗುವುದು, ರತ್ನ" ಕೃಷ್ಣೆಯ ಕಡೆಗೆ ನೋಡಿ ವಿದ್ಯಾಧರನು ನಸುನಗುತ್ತ ಅಂದನು.

## ೧೪
## ಅಮೃತವೆನಿಸಿದ ವಿಷ

ಕಾಮಾಪುರಕ್ಕೆ ಬಂದಾಗ ಮುಂಜಾನೆ ಎದ್ದಕೂಡಲೆ ಕೆರೆಯ ಸುತ್ತಲೂ ಅಡ್ಡಾಡಿ ಬರುವದು ಸುಲೋಚನೆಯ ಕಾರ್ಯಕ್ರಮವಾಗಿತ್ತು. ಮೊದಮೊದಲು ಊರಲ್ಲಿಯ ಜನರು ಚೇಷ್ಟೆ ಮಾಡಿದರು. ದಾದಾ ಅವರ ಕಾರಕೂನನು ಒಮ್ಮೆ ಇದು ಜನರಲ್ಲಿ ಒಳ್ಳೆಯದಾಗಿ ಕಾಣಿಸುವದಿಲ್ಲವೆಂದೂ ಸೂಚಿಸಿದ್ದನು. "ಹೆಂಗಸರು ಅಡ್ಡಾಡಲಿಕ್ಕೆ ಹೋಗುವುದು ಪುಣೆ ಮುಂಬಯಿಯಲ್ಲಿ. ಇಲ್ಲಿ ಹೋದರೆ–" ಎಂದು ಅವನೇನೋ ತನ್ನ ಅಭಿಪ್ರಾಯ ಕೊಟ್ಟಿದ್ದ.

"ಅಲ್ಲಿ ಹೆಂಗಸರು ತಿರುಗಾಡಲಿಕ್ಕೆ ಮಾತ್ರ ಹೋಗುತ್ತಾರೆ. ಇತ್ತ ಕಡೆಯವರು ಓಡಿಹೋಗುತ್ತಾರೆ" ಸುಲೋಚನೆಯು ಉತ್ತರ ಕೊಟ್ಟಳು.

ಅನಂತರ ಕಾರಕೂನನು ಮತ್ತೊಮ್ಮೆ ಉಪದೇಶ ಮಾಡುವ ಗೊಡವೆಗೆ ಹೋಗಲಿಲ್ಲ. ಇಂದು ತಿರುಗಾಡಲಿಕ್ಕೆ ಹೋಗುವ ಮುಂದೆ ಅವಳ ಮನಸ್ಸು ಸುತ್ತಲಿನ ಸೃಷ್ಟಿಯಂತೆಯೇ ಪ್ರಸನ್ನವಾಗಿತ್ತು. ಅವಳ ಹೇಳಿಕೆಯಂತೆ ದಾದಾ ಅವರು ಮತ್ತೆ ಕಾರಖಾನೆಯನ್ನು ಸುರುವು ಮಾಡಿದ್ದರು. ಸುರಂಗೆಯ ಸಹವಾಸದಲ್ಲಿದ್ದರೂ ತನ್ನ ವಿಷಯದಲ್ಲಿ ತನ್ನ ಮಗಳ ಆದರವು ಕಡಿಮೆಯಾಗಿಲ್ಲವೆಂದು ದಾದಾ ಅವರಿಗೆ ಆದ ಆನಂದದ ಫಲವೇ ಅದು. ಆದರೆ ಇದು ಸುಲೋಚನೆಗೆ ಎಲ್ಲಿ ಗೊತ್ತು ? ನಿನ್ನೆ ರಾತ್ರಿ ವಿದ್ಯಾಧರನನ್ನು ಒಯ್ಯಲಿಕ್ಕೆ ಬಂದ ಮೃತ್ಯುವಿಗೆ ಕೈ ಅಲ್ಲಾಡಿಸುತ್ತ ನಿರಾಶೆಯಿಂದ ತಿರುಗಿ ಹೋಗಬೇಕಾಗಿತ್ತು ! ಆನಂದ–ಎತ್ತ ನೋಡಿದರೂ ಆನಂದ. ಗಿಡದ ಮೇಲೆ ನಡೆದ ಪಾತರಗಿತ್ತಿಗಳ ಕಿಲಕಿಲಾಟ, ಮಲಗಿದ ಕೂಸಿನ ಮೈಮೇಲೆ ಸಾವಕಾಶವಾಗಿ ಕೈಯಾಡಿಸುವ ತಾಯಿಯ ಮೃದುಸ್ಪರ್ಶದಂತಿರುವ ವಾಯುಲಹರಿ, ಪೃಥ್ವಿಯಲ್ಲಿ ಎಲ್ಲ ಕಡೆಯಲ್ಲಿಯೂ ಹೂವುಗಳು ಪ್ರತಿಕ್ಷಣವೂ ಅರಳುತ್ತಿವೆ ಎಂದು ತೋರಿಸಿಕೊಡುತ್ತ ಹೆಚ್ಚುವ ಸೂರ್ಯಪ್ರಕಾಶ, ಪೂರ್ವದಿಕ್ಕಿನಲ್ಲಿ ಗುಲಾಬೀ ಬಣ್ಣದ ಮೋಡಗಳು, ತಾಯಿಯ ಮೈಯನ್ನು ನೆಕ್ಕಲಿಕ್ಕೆ ಓಡುವ ಚಿಕ್ಕ ಕರುಗಳು, ಬಹಳ ಹೇಳುವದೇನು ? ಬೀದಿಯ ಬದಿಯಲ್ಲಿಯ ಚಹದಂಗಡಿಯಲ್ಲಿ ನಡೆದ ಅಂಗಡಿಯವನ ಗಡಿಗಡಿ,–ಪ್ರತಿಯೊಂದು ದೃಶ್ಯದಲ್ಲಿಯೂ ಅವಳಿಗೆ ತನ್ನ ಅಂತಃಕರಣದಲ್ಲಿ ಬುಗ್ಗೆಯಂತೆ ಏಳುತ್ತಿದ್ದ ಆನಂದದ ಪ್ರತಿಬಿಂಬವೇ ಕಾಣುತ್ತಿತ್ತು. ಒಂದು ಮೂಲೆಯೊಳಗಿಂದ ಬೀಸುವ ಕಲ್ಲಿನ ಸಪ್ಪಳದ ಜೊತೆಯಲ್ಲಿ ಹಾಡಿನ ಮಧುರ ಸಂಗೀತವು ಕೇಳಬರುತ್ತಿತ್ತು. ಅಲ್ಲಿ ನಿಂತು ಕೇಳತೊಡಗಿದಳು. ಶಬ್ದಗಳು ಸ್ಪಷ್ಟವಾಗಿ ಕೇಳಬರುತ್ತಿದ್ದಿಲ್ಲ. ಆದರೆ ಆ ಸಪ್ಪಳ ಮತ್ತು ಸಂಗೀತ–ಅವಳಿಗೆ ಅದು ಜೀವನ ಮತ್ತು ಕಲೆಗಳ ಮೂರ್ತಿಮಂತ ಸಂಗಮವೇ ಅನಿಸಿತು.

ಇಷ್ಟರಲ್ಲಿ ಎದುರಿನಲ್ಲಿ ಕೃಷ್ಣೆಯು ಬಂದದ್ದನ್ನು ನೋಡಿದಳು. ಸಮೀಪಕ್ಕೆ ಬಂದಹಾಗೆ ಒಬ್ಬರೊಬ್ಬರನ್ನು ನೋಡಿ ಇಬ್ಬರೂ ಮುಗುಳುನಗೆ ನಕ್ಕರು. ಕೃಷ್ಣೆಯು ಸರಸರನೆ ನಡೆದು ಹೋದಳು. ಸುಲೋಚನೆಯು ಹಿಂದಿರುಗಿ ಅವಳ ಹಿಂಭಾಗದ ಆಕೃತಿಯನ್ನು ಕಂಡಳು. ನಿನ್ನೆ ರಾತ್ರಿಯ ವಿದ್ಯಾಧರನ ಶಬ್ದಗಳು ಅವಳಿಗೆ ನೆನಪಿಗೆ ಬಂದವು. "ರತ್ನವು ರತ್ನದ ಕಡೆಗೆಯೇ



ಹೋಗುವದು !" ವಿದ್ಯಾಧರನು ಇದನ್ನು ಚೇಷ್ಟೆಯಿಂದ ಅಂದಿದ್ದನೋ ? ಅಥವಾ–ಇವಳು ಅವನ ಕೆಲಸಗಳನ್ನು ಮಾಡ ಹತ್ತಿ ತಿಂಗಳ ಮೇಲಾಯಿತು. ರಮಾಕಾಂತ ಸುರಂಗೆಯರ ವಿಷಯದಲ್ಲಿ ತಾನು ಮೋಸಹೋಗಲಿಲ್ಲವೆ ? ಕಲೆಯ ಕಡೆಗೇ ಇರುವ ಕಲೆಯ ಓಘವುಳ್ಳ ಪ್ರವಾಹ ! ಆದರೆ ಈ ಪ್ರವಾಹವು ಯಾವ ನದಿಯನ್ನು ಸೇರಿತು ? ಸೃಷ್ಟಿಯ ಪೂರ್ವದಲ್ಲಿಯ ಸಾಗರದಲ್ಲಿ ಉಗಮ ಹೊಂದಿ, ಪ್ರಳಯಕಾಲದ ಸಾಗರಕ್ಕೆ ಕೂಡುವ ನದಿಗೆ ! ಕಳೆದ ಒಂದೆರಡು ತಿಂಗಳಲ್ಲಿಯ ತನ್ನ ಅನುಭವಗಳು ಅವಳ ಕಣ್ಣೆದುರು ಸರಿದವು.

ಕೆರೆಯ ಹತ್ತಿರದ ಒಂದು ದಿನ್ನೆಯ ಮೇಲೆ ಅವಳು ನೆರಳಲ್ಲಿ ಕುಳಿತುಕೊಂಡಳು. ಕಮಲಗಳು ಇನ್ನೂ ಅರಳಿದ್ದಿಲ್ಲವಾದ್ದರಿಂದ ದೂರಿನಿಂದ ಅಲ್ಲಿ ಬರೀ ಹಾವಸೆಯೇ ಇದ್ದಂತೆ ಕಾಣುತ್ತಿತ್ತು. ಎದುರಿನ ತೆಂಗಿನಗಿಡವು ಅಲುಗಾಡದೆ ನಿಂತಿತ್ತು. ಕೆರೆಯಲ್ಲಿಯ ನೀರು ಶಾಂತವಾಗಿತ್ತು. ಪೂರ್ವದ ಕಡೆಯಲ್ಲಿಯ ಆಕಾಶದಲ್ಲಿಯೂ ವಿಲಕ್ಷಣವಾದ ಶಾಂತತೆಯಿತ್ತು. ಅವಳು ಶಾಂತಚಿತ್ತದಿಂದ ತನ್ನ ಮನಸ್ಸಿನೆದುರು ಹಾಯ್ದು ಹೋಗುವ ಚಿತ್ರಗಳನ್ನು ನೋಡುವುದರಲ್ಲಿ ಮಗ್ನಳಾದಳು.

ಮೊನ್ನೆ ರಾತ್ರಿಯ ಮಾತುಗಳು ತನ್ನ ಮೇಲಿನ ದಾದಾ ಅವರ ನಿಜವಾದ ಪ್ರೇಮ, ಅವರು ತನ್ನ ಸಲುವಾಗಿ ಎರಡನೇ ಮದುವೆ ಮಾಡಿಕೊಳ್ಳದೆ, ವಯಸ್ಸಿದ್ದರೂ ಕೂಡ ಸಂಸಾರ ಸುಖದ ಮೇಲೆ ನೀರು ಬಿಟ್ಟರು. ಆದರೆ ಅವರ ಪ್ರೇಮದಿಂದಲೇ ತನಗೆ ತೃಪ್ತಿಯಾಗುವದು ಸಾಧ್ಯವಿದೆಯೆ? ಹಳೆಯ ಪೀಳಿಗೆಯ ಚಾಳೀಸು ಹೊಸ ಪೀಳಿಗೆಗೆ ಉಪಯೋಗವಾಗುವದಿಲ್ಲ. ಆದರೆ ಬಾಪ್ಪಾ ಅವರು ಹಳೆಯ ಪೀಳಿಗೆಯೊಳಗಿನವರಾದರೂ ತಮ್ಮೊಡನೆ ಸಮರಸವಾಗುತ್ತಿದ್ದರು. ಅವರ ಕೂಡ ತಮಗೂ ಸಮರಸವಾಗುವದು ಶಕ್ಯವಿದೆ. ಆದರೆ ದಾದಾ ಅವರ ವಿಷಯ ಹಾಗಲ್ಲ. ಬಾಪ್ಪಾ ಅವರು ಹೇಳಿದ "ಸ್ವಾಭಾವಿಕ, ಉಪಭೋಗಾತ್ಮಕ ಮತ್ತು ಉದಾತ್ತ" ಇವುಗಳ ಭೇದದಲ್ಲಿ ಇದಕ್ಕೇನಾದರೂ ಉತ್ತರ ಸಿಗಬಹುದೆ?"

ಬಾಪ್ಪಾ ದಾದಾ ಅವರನ್ನು ಕೇಳಿದರು : "ನೀವು ಕಾರಖಾನೆಯನ್ನು ನಿಲ್ಲಿಸಿದರೆ ಬಡಬಗ್ಗರು ಏನು ಮಾಡಬೇಕು?"

ದಾದಾ ಉತ್ತರ ಕೊಟ್ಟರು : "ಸಾಯಬೇಕು, ಅದಕ್ಕೆ ನಾನೇನು ಮಾಡಬೇಕು ? ನಾಳೆ ಸುಲೋಚನೆಯ ಲಗ್ನಕ್ಕೆ ೧೦–೨೦ ಸಾವಿರ ರೂಪಾಯಿ ಬೇಕು. ಆ ವೇಳೆಗೆ ಈ ಬಡಬಗ್ಗರು ಬಂದು, ಫಂಡು ಕೂಡಿಸಿ, ನನಗೆ ಹಣವನ್ನು ಕೊಡುವರೆ ?"

ಮೊದಲಿನಂತೆ "ನನಗೆ ಮದುವೆಯನ್ನೇ ಮಾಡಿಕೊಡಬೇಕಾಗಿಲ್ಲ"ವೆಂಬ ಶಬ್ದಗಳೂ ತನ್ನ ಬಾಯಿಂದ ಹೊರಬೀಳಲಿಲ್ಲ. ಲಗ್ನಮಾಡಿಕೊಳ್ಳದಿದ್ದರೆ ದಾದಾ ಅವರ ಕೂಡ ಇರಬೇಕು. ಲಕ್ಷ್ಮಿಯ ಚಿತ್ರದ ಸಲುವಾಗಿ ಬೆಳಗಾಂವಿಯಲ್ಲಿದ್ದುದೇ ಅವರ ಮನಸ್ಸಿಗೆ ಬಂದಿರಲಿಲ್ಲ. ಇನ್ನುಮುಂದೆ ತನ್ನದೂ ಅವರದೂ ಹೇಗೆ ಕೂಡಬೇಕು ? ಆದರೆ ಇಷ್ಟು ದಿವಸಗಳವರೆಗೆ ತನ್ನನ್ನು ಪ್ರೀತಿಯಿಂದ ಬೆಳಸಿದ್ದಕ್ಕೆ ಪ್ರತಿಯಾಗಿ–

ಎದುರಿನಲ್ಲಿದ್ದ ಒಂದು ಕಮಲದ ಬಳ್ಳಿಯ ಕಡೆಗೆ ನೋಡಿದಳು. ಅವಳಿಗೆ ಅನಿಸಿತು:

ಈ ಕಮಲವು ಬೆಳೆಯುವದು ನೀರಿನಲ್ಲಿ, ಕೆಸರಿನಲ್ಲಿ, ಆದರೆ ಅದನ್ನು ಅರಳಿಸುವವರಾರು ? ಆಕಾಶದಲ್ಲಿಯ ಸೂರ್ಯ ! ಕಮಲವನ್ನು ಕೆಸರು ಬೆಳಿಸಿತೆಂದು ಯಾರೂ ಅದನ್ನು ಕೊಯ್ದು ತಿರುಗಿ ಕೆಸರಿನಲ್ಲಿ ಚೆಲ್ಲುವದಿಲ್ಲವಷ್ಟೆ ! ತನ್ನ ಮನಸ್ಸು ದಾದಾ ಅವರ ಸ್ವಭಾವವನ್ನು ಕೆಸರಿನ ಕೂಡ ತುಲನೆಮಾಡಿದ್ದಕ್ಕಾಗಿ ಅವಳಿಗೆ ತನ್ನ ಮೇಲೆಯೇ ಸಿಟ್ಟು ಬಂದಿತು. ಆದರೆ ಅವಳು ಮತ್ತೆ ವಿಚಾರ ಮಾಡಹತ್ತಿದಳು. ತನ್ನ ಆಯುಷ್ಯದಲ್ಲಿಯ ಸೂರ್ಯನಾರು ? ಚಿತ್ರಕಲೆಯು ಧ್ಯೇಯ ದೇವತೆಯಾಯಿತು. ಕಮಲವು ಬೇಕಾದರೆ ಅದು ದೇವರ ಪೂಜೆಯ ಸಲುವಾಗಿ, ಆದರೆ ಅದು ಮೊದಲು ಅರಳಬೇಕಲ್ಲವೆ ? ಆಕಾಶದಲ್ಲಿ ಸೂರ್ಯನು ಉದಯಿಸದಿದ್ದರೆ ಮೊಗ್ಗೆಯು ಅರಳಲಿಕ್ಕೇ ಇಲ್ಲ. ತನ್ನ ಜೀವನ ಮೊಗ್ಗೆಯಾದರೂ–

ರಮಾಕಾಂತನದೂ ತನ್ನದೂ ಮೊದಲ ಭೆಟ್ಟಿಯಾದದ್ದು ಈ "ಬಕುಲ" ಸಾಪ್ತಾಹಿಕದ ಕಚೇರಿಯಲ್ಲಿ. ಆತನು ಆ ಪರಿಚಯವನ್ನು ಬೆಳೆಸಿದ. ತಾನಾದರೂ ಬೆಳಿಸಗೊಟ್ಟಳು. ಕೇವಲ ಕಥಾಲೇಖಕನೆಂದು ಅವನ ವಿಷಯದಲ್ಲಿ ಪ್ರೀತಿಯೆನಿಸಿ ಅವನ ಹತ್ತಿರ ತಾನು ಹೋಗಿ ಬರುವದು ಮಾಡುತ್ತಿದ್ದೆನೋ ? ಮೊನ್ನೆ ರಾತ್ರಿಯ ಬಾಪ್ಪಾ ಅವರ ಶಬ್ದಗಳು : "ಬಡಬಗ್ಗರಿಗೆ ಹಸಿವೆಯಾಗುವದು. ಅದಕ್ಕೆ ಅವರೇನು ಮಾಡಬೇಕು ? ಕೆಲಸ ಸಿಗುವದಿಲ್ಲವೆಂದು ಹಸಿವೆ ನಿಲ್ಲುವದೇ !" ಪ್ರತಿ ದಿವಸ ಮಧ್ಯಾಹ್ನದಲ್ಲಿ ಪ್ರತಿಯೊಬ್ಬನಿಗೂ ಹಸಿವೆಯಾಗುವಂತೆ ತನಗೆ ಆಯುಷ್ಯದ ಮಧ್ಯಾಹ್ನದಲ್ಲಿ ನೀರಡಿಕೆಯಾದರೆ, ಅದರಲ್ಲಿ ಆಶ್ಚರ್ಯವೇನು ? "ನನಗೇನೂ ಲಗ್ನ ಬೇಡ"ವೆಂದು ಬಾಯಿಂದ ಹೇಳುತ್ತಿದ್ದದ್ದೇನೊ ನಿಜ. ಆದರೆ ರಮಾಕಾಂತನು ತಾರುಣ್ಯದಲ್ಲಿಯ ತೃಷೆಯನ್ನು ಶಾಂತ ಮಾಡುವ ಅಮೃತವೆಂಬ ದೃಷ್ಟಿಯಿಂದ ಅವನ ಕಡೆಗೆ ತಾನು ನೋಡಿರಲಿಕ್ಕಿಲ್ಲವೆ?–ದೃಷ್ಟಿಯಿಂದಾಗಲಿ–ಮನಸ್ಸಿನಿಂದಾಗಲಿ–ಅಂತರ್ಮನಸ್ಸಿನಿಂದಾದರೂ ಆಗಲಿ ?

ಆದರೆ ಆ ಅಮೃತವು ವಿಷವಾಯ್ತು. ಸುರಂಗೆಯಲ್ಲಿಯ ಆತನ ಪ್ರೇಮವು ಕೇವಲ ಕಲಾಸಕ್ತಿಯದಿರಬೇಕೆಂದು ತನ್ನ ಕಲ್ಪನೆಯಿತ್ತು. ಆದರೆ ಅಂಬೋಲಿಯ ಆ ಅನುಭವ ! ನೀರಡಿಸಿದರೂ ಸೆರೆಯನ್ನು ಕುಡಿಯಬಹುದೆ ? ರಮಾಕಾಂತನ ಲೇಖನ ಕಲೆಯೆಂದರೆ ಮದಿರೆಯ ಮನೋಹರವಾದ ರಂಗು, ಅವನ ಸಹವಾಸವೆಂದರೆ, ಮದಿರೆಯ ಉತ್ತೇಜನ–ಆದರೆ ಮದಿರೆಯು, ಅಮೃತದಂತೆ ಇದ್ದರೂ–ನೀರಿನಂತೆ ಉಪಯೋಗವಾದೀತೆ ?

ರಮಾಕಾಂತನ ವಿಷಯದಲ್ಲಿ ತಾನು ಮೋಸಹೋದ ಮೂಲಕವೇ ಈಗ ತನ್ನ ಮನಸ್ಸು ವಿದ್ಯಾಧರನ ಕಡೆಗೆ ಎಳೆಯಹತ್ತಿತು. ಅಂಬೋಲಿಯ ಆ ಮಧುರ ಸಹವಾಸ, ಘಟ್ಟದಲ್ಲಿಯ ಪ್ರವಾಸ, ಮತ್ತು ನಿನ್ನೆ ರಾತ್ರಿಯ ಪ್ರಶ್ನೋತ್ತರಗಳು–

"ಕತ್ತಲೆಯಾದರೂ ಇನ್ನೂ ಕೂತಿರುವಿರಲ್ಲ ದಿನ್ನೆಯ ಮೇಲೆ?"

"ಕತ್ತಲೆ ಆದದ್ದನ್ನೇ ನಾನು ನೋಡಲಿಲ್ಲವಲ್ಲ !"

"ತೀರ ಕವಿಗಳಂತೆ ಮಾತಾಡುತ್ತೀರಲ್ಲಾ !"

"ಕವಿಯೇ ನಾನು. ಈ ಗೋಡಂಬೆಯ ಯಂತ್ರವೆಂದರೆ ನನ್ನದೊಂದು ಮಹಾಕಾವ್ಯ. ಉಳಿದ ಕಾವ್ಯದಿಂದ ಹೊಟ್ಟೆ ತುಂಬುವದಿಲ್ಲ. ಆದರೆ ನನ್ನ ಕಾವ್ಯದಿಂದ–"



ವಿದ್ಯಾಧರನ ಈ ಶೋಧಬುದ್ಧಿಯು, ರಮಾಕಾಂತನ ಲೇಖನ ಕಲೆಯಷ್ಟು, ಅದೇಕೆ? ಅದಕ್ಕಿಂತಲೂ ಹೆಚ್ಚಾಗಿ ಆಕರ್ಷಕವಾಗಿಲ್ಲವೆ ? ಯಂತ್ರದ ವಿಷಯದಲ್ಲಿ ವಿಚಾರ ಮಾಡಮಾಡುತ್ತ ತನ್ನನ್ನೇ ಮರೆಯುವದು ಮಹತ್ವಾಕಾಂಕ್ಷೆಯ ಲಕ್ಷಣವಲ್ಲವೆ ? ರಮಾಕಾಂತನಿಗಿಂತಲೂ ವಿದ್ಯಾಧರನು ಹೆಸರು ಗಳಿಸಬಹುದು. ತನ್ನ ಯಂತ್ರದಿಂದ ಇಡೀ ಕಾರಖಾನೆಗೆ ಹೊಸ ಸ್ವರೂಪವನ್ನೇ ತಂದು ಕೊಡುವಂಥವನಿಗೆ ತನ್ನ ಮಗಳನ್ನು ಕೊಡಲಿಕ್ಕೆ–

ಈ ಕಲ್ಪನಾಚಿತ್ರದಲ್ಲಿ ಮಗ್ನಳಾಗಿದ್ದವಳು ತನ್ನ ಮನಸ್ಸಿನಲ್ಲಿ ನಗುತ್ತಲೇ ಅಲ್ಲಿಂದ ಎದ್ದಳು. ಮೊದಲು ವಿದ್ಯಾಧರನ ಕೋಣೆಯ ಕಡೆಗೆ ಹೋಗಿ ಅವನ ದೇಹಸ್ಥಿತಿಯನ್ನು ವಿಚಾರಿಸಿ, ಕಾರಖಾನೆಯಲ್ಲಿಯ ಕೆಲಸ ನೋಡುವ ಸಲುವಾಗಿ ಅತ್ತಕಡೆಗೆ ಹೋಗಬೇಕೆಂದು ಮಾಡಿದಳು. ಇನ್ನೂ ಬಿಸಿಲು ಬಹಳ ಕಾಯುತ್ತಿರಲಿಲ್ಲ. ಪಲ್ಲೆಯಿಂದ ತುಂಬಿದ ಬುಟ್ಟಿಯೊಂದರ ಬಳಿಯಲ್ಲಿ ನಿಂತು ಒಬ್ಬ ಕ್ರಿಶ್ಚನ್ ಹೆಂಗಸು ಅತ್ತಿತ್ತ ನೋಡುತ್ತಿದ್ದಳು. ತಲೆಯ ಮೇಲೆ ಅದನ್ನು ಹೊರಿಸಲಿಕ್ಕೆ ಯಾರಾದರೂ ಅವಳಿಗೆ ಬೇಕಾದಂತೆ ತೋರಿತು ; ಮನಸ್ಸು ಪ್ರಸನ್ನವಾಗಿದ್ದ ಮೂಲಕವೇ ಏನೋ, ಸುಲೋಚನೆಯು ಅವಳಿಗೆ ಸಹಾಯ ಮಾಡಲಿಕ್ಕೆ ತಾನಾಗಿಯೆ ಮುಂದುವರಿದಳು. ಅದನ್ನು ಎತ್ತುವ ಮುಂದೆ ಅವಳ ಬಾಯಿಂದ ಸಹಜವಾಗಿಯೇ– "ಅವ್ವಯ್ಯಾ ; ಏನು ಜಡವಾಗಿದೆ ತಾಯೀ, ಈ ಬುಟ್ಟಿ !" ಎಂಬ ಶಬ್ದಗಳು ಹೊರಬಿದ್ದವು.

"ಮೀನದ ಬುಟ್ಟೀ ನೋಡಿಲ್ಲ ತಾಯೀ ನೀವು !" ಆ ಕ್ರಿಶ್ಚನ್ ಹೆಂಗಸು ನಗುನಗುತ್ತ ಹೇಳಿದಳು.

ನಾಲ್ಕು ಆರು ಮೈಲುಗಳ ಮೇಲಿಂದ ಇಷ್ಟು ಭಾರವನ್ನು ಜನರು ಹೊತ್ತುಕೊಂಡು ತಂದರೇನೇ ನಮಗೆ ಪಲ್ಲೆಯಾಗಲಿ, ಮೀನವಾಗಲಿ ಸಿಗವದು. ಬಾಪ್ಪಾ ಅವರು ಹೇಳುವದು ಅವಳಿಗೆ ನಿಜವೆನಿಸಿತು. "ಕಲೆ ಸುಖದ ಸಲುವಾಗಿ. ಆದರೆ ಮೊದಲು ಹೊಟ್ಟೆಯ ಪ್ರಶ್ನೆ, ಆಮೇಲೆ ಸುಖದ ಪ್ರಶ್ನೆ."

ಅವಳು ವಿದ್ಯಾಧರನ ಕೋಣೆಯ ಹತ್ತಿರ ಬಂದಳು. ಒಳಗೆ ಯಾರೋ ಮಾತಾಡುತ್ತಿರುವಂತೆ ಕೇಳಿಸಿತು. ಅವಳು ಅಲ್ಲಿಯೇ ತಟ್ಟನೆ ನಿಂತು ಕೇಳತೊಡಗಿದಳು.

"ನಿನ್ನೆ ರಾತ್ರಿ ನನ್ನದೊಂದು ವಡವೆ ಕಳೆದಿದೆ."

"ನನ್ನದೂ ಒಂದು ಕಳೆದಿದೆ."

"ಚೇಷ್ಟೆಯಲ್ಲ, ನಿಜವಾಗಿಯೂ ಕಳೆದಿದೆ."

"ನಾನೆಲ್ಲಿ ಚೇಷ್ಟೆ ಮಾಡಿದೆ ? ಕಳೆದ ನನ್ನ ವಸ್ತುವನ್ನು ನೀನು ಕೊಟ್ಟರೆ ನಾನು ನಿನ್ನದು ಕೊಡುತ್ತೇನೆ !"

ಮುಂದೆ ಏನೂ ಕೇಳಬರಲಿಲ್ಲ. ಕೆಲವು ವೇಳೆ ನಿಂತು, ಸುಲೋಚನೆಯು ಒಳಗೆ ಹೋಗಿ ಕೃಷ್ಣೆಯ ಕಡೆಗೆ ನೋಡಿದಳು. ಅವಳು ತನ್ನನ್ನು ಕಂಡು ನಾಚಿದಳೆಂದು ಅವಳಿಗೆ ಭಾಸವಾಯಿತು. ಅವಳು ಸ್ವತಃಕ್ಕೆ "ಇದು ಮದ್ಯವೋ ಅಥವಾ ಶುದ್ಧವಾದ ನೀರೋ ?"

ಎಂದು ಪ್ರಶ್ನೆ ಮಾಡಿಕೊಂಡಂತೆ, ಅವಳು ವಿದ್ಯಾಧರನ ಕಡೆಗೆ ವಿಚಿತ್ರ ದೃಷ್ಟಿಯಿಂದ ನೋಡಿದಳು.

ವಿದ್ಯಾಧರನು ಸಾವಕಾಶವಾಗಿ ಕಾಲು ಮೇಲಕ್ಕೆತ್ತಿದ. ಸುಲೋಚನೆಯು ಕೇಳಿದಳು : "ಕಾಲು ಬಾತುಕೊಂಡಿದೆಯೆ ?"

"ಎಲ್ಲಿಯೋ ಸ್ವಲ್ಪ ಹೋಗುಹೋಗುತ್ತ ತನ್ನ ಪ್ರಸಾದ ತೋರಿಸಿತು ಅಂತ ಕಾಣಿಸತದೆ."

"ಅದಕ್ಕೆ ಉಪಾಯ ?"

"ಕೃಷ್ಣೆಯು ಇದೇ ಈಗ ಬೇರನ್ನು ತಂದಿರುವಳು ! ಅದನ್ನು ತೆಯ್ದು ಹಚ್ಚಿರುವಳು ಕೂಡ. ಅವಳಿದ್ದಳೆಂದೇ ಬದುಕಿದೆ ನಾನು ನಿನ್ನಿನ ದಿವಸ. ಇಲ್ಲದಿದ್ದರೆ–ಇಷ್ಟೊತ್ತಿಗೆ ದಿನ್ನೆಯ ಮೇಲೆ ಒಂದು ಬುಟ್ಟಿಯಷ್ಟು ಬೂದಿಯಾಗಿ ಬಿದ್ದಿರುತಿದ್ದೆ !"

"ದಾದಾ ಅವರು ಬಂದಿದ್ದರೇ ಬೆಳಗ್ಗೆ ?"

"ಇಲ್ಲ. ಅವರಿಗೆ ನನ್ನ ಮೇಲೆ ಕೋಪ ಬಂದಂತೆ ಕಾಣುತ್ತದೆ."

"ಅದೇನು ?"

"ಆ ಫೋಟೋಗಳ ಕಾಜುಗಳೆಲ್ಲ ಒಡೆದಿವೆಯೆಂದು !"

"ಒಡೆದವಳು ಈ ಕೃಷ್ಣೆಯೇ ಅಲ್ಲವೆ ?"

"ಹೌದು."

"ಹಾಗಾದರೇ ಇವಳದೇ ಮತ್ತೆ ಫೋಟೋಗಳನ್ನು ತಕ್ಕೊಂಡಿಬಿಡಿರಿ !"

"ಕಾಲು ಸರಿಯಾದ ಮೇಲೆ ನೋಡೋಣವಂತೆ. ರಮಾಕಾಂತನಾದರೂ ಇಷ್ಟರಲ್ಲಿ ಎಲ್ಲಿ ಬರುವ ?"

"ಅವರು ಬರಲಿಲ್ಲವೆಂದು ದಾದಾ ಅವರು ನನ್ನ ಮೇಲೆ ಎಷ್ಟೊಂದು ಸಿಟ್ಟಿಗೆದ್ದಿದ್ದರು."

"ನನ್ನ ಮೇಲಿನ ಸಿಟ್ಟನ್ನು ಮಾತ್ರ ನಾನು ಕೂಡಲೆ ಇಳಿಸಿಬಿಡುವೆ."

"ಅದು ಹೇಗೆ ?"

"ಯಂತ್ರವನ್ನು ತಯಾರುಮಾಡಿ ತೋರಿಸಿ !"

"ಯಂತ್ರವು ಈಗಾಗಲೇ ಸಿದ್ಧವಾಯಿತೇ ?"

"ಹೌದು. ಕಾಗದವನ್ನೇ ತೋರಿಸುವೆ. ಆ ನನ್ನ ಕೋಟಿನ ಜೇಬಿನಲ್ಲಿ ಇವೆ ನೋಡು."

ಸುಲೋಚನೆಯು ಎದ್ದು ಆವನ ಹಿಂದಿನ ಭಾಗದಲ್ಲಿದ್ದ ಜೇಬಿನಲ್ಲಿ ಕೈಹಾಕಿ, ಅದರೊಳಗಿಂದ ಕಾಗದವನ್ನು ಹೊರಗೆ ತೆರೆದು ನೋಡಿದಳು. ಆದರೆ, ಎಲ್ಲಿಯ ಯಂತ್ರ, ಏನು ಕಥೆ ?

## ದೃಷ್ಟಿಲಾಭ

ಲೇಖಿಕಾ–ಕೃಷ್ಣಾ

ಆಶ್ಚರ್ಯ ಆನಂದ ಇವೆರಡದಿಂದಲೂ ಅವಳ ಮನಸ್ಸು ತುಂಬಿಹೋಯಿತು. ವಿದ್ಯಾಧರನ ಚೇಷ್ಟೆ ಮಾಡಬೇಕೆಂದು ಅವನ್ನು ಮಡಿಸಿ ತನ್ನ ಪೋಲಕದ ಜೇಬಿನಲ್ಲಿ ಇಟ್ಟುಕೊಂಡಳು.



"ಸಿಕ್ಕಿತೋ ಇಲ್ಲವೋ ? ಆ ಬಲಗಡೆಯ ಜೇಬಿನಲ್ಲಿ ಇರಬಹುದು ನೋಡು." ವಿದ್ಯಾಧರನು ಹಿಂದೆ ನೋಡುತ್ತ ನೋಡುತ್ತ ಹೇಳಿದ.

ಸುಲೋಚನೆಯು ಆತನ ಬಲ ಜೇಬಿನೊಳಗಿನ ಕಾಗದಗಳನ್ನು ತೆಗೆದುಕೊಂಡು ಬಂದಳು. ಕೆಲವು ಕಾಗದದ ಚೀಟಿಗಳ ಮೇಲೆ ಪೇನಸೀಲಿನಿಂದ ತೆಗೆದ ಆಕೃತಿಗಳು ಇದ್ದವು. ಅವುಗಳ ಕಡೆಗೆ ನೋಡುತ್ತ ಅವಳು ಕೇಳಿದಳು : "ಈ ಡೊಂಕು ಡೊಂಕು ಗೆರೆಗಳಲ್ಲಿ ನಮಗೇನು ತಿಳಿಯಬೇಕು ?"

"ನೀವಾದರೂ ಬೇರೆ ಏನು ಮಾಡುವಿರಿ ? ಡೊಂಕು ಡೊಂಕು ಗೆರೆಗಳನ್ನೇ ತೆಗೆಯುವಿರಿ !"

"ಆದರೆ ಅದರೊಳಗಿಂದ ಆನಂದವು ಬರುವದು."

"ಇವುಗಳೊಳಗಿಂದ ಬರುವುದಿಲ್ಲವೇನೋ ?" ಚಿತ್ರಕಲೆಯ ಸೌಂದರ್ಯ ಸೇವನೆಯಿಂದ ಮತ್ತವಾದ ತನ್ನ ದೃಷ್ಟಿಯನ್ನು ಸುಲೋಚನೆಯು ಕಾಗದದ ಮೇಲಿನ ಯಂತ್ರದ ಆಕೃತಿಯ ಕಡೆಗೆ ತಿರುಗಿಸಿದಳು. ಒಬ್ಬ ಸುಂದರ ಮನುಷ್ಯನಿಗೂ, ಒಂದು ಭಯಂಕರ ಭೂತಕ್ಕೂ ಇರುವ ಅಂತರವು ಅವಳಿಗೆ ಚಿತ್ರ ಯಂತ್ರಗಳ ಮಧ್ಯದಲ್ಲಿ ಕಂಡುಬಂದಿತು. ವಿದ್ಯಾಧರನು ಕೇಳಿದ :

"ಬಿಸಿಲಿನಲ್ಲಿ ಎಂಟುಹತ್ತು ಮೈಲು ನಡೆಯುವದಕ್ಕಿಂತ ಮೋಟಾರಿನಲ್ಲಿ ಹೋಗುವದು ಒಳ್ಳೆಯದಲ್ಲವೇ?"

"ಹೌದು."

"ಆ ಆನಂದವು ಇಂಥ ಡೊಂಕು ಡೊಂಕು ಗೆರೆಗಳಲ್ಲಿಯೇ ಉತ್ಪನ್ನವಾಗುವದಿಲ್ಲವೆ?"

ಸುಲೋಚನೆಯು ಆತನ ಕಡೆಗೆ ಕೌತುಕದಿಂದ ನೋಡಿದಳು. ಅವನಾದರೂ ಅವಳ ಕಡೆಗೆ ಅಭಿಮಾನದಿಂದ ನೋಡುತ್ತಿದ್ದ. ಅವನ ಮುಂದೆ ಚಹದ ಪಾತ್ರೆಯನ್ನು ತಂದು ಇಡುವಾಗ ವತ್ಸಲೆಯ ಮನಸ್ಸಿನಲ್ಲಿ ಮಾತ್ರ ಬೇರೆ ವಿಚಾರಗಳು ಬಂದುವು. ಸುಲೋಚನೆಯ ಚಿತ್ರದ್ದಾಗಲಿ, ಅಥವಾ ವಿದ್ಯಾಧರನ ಯಂತ್ರದ್ದಾಗಲಿ, ಆನಂದವು ಯಾರಿಗೆ ? ಅವರಂಥ ಜನರಿಗೇ ಅಲ್ಲವೆ ? ಬಡಬಗ್ಗರಿಗೆ ಏನು ಅವುಗಳ ಉಪಯೋಗ ? ಕಲೆಯೂ ಬುದ್ಧಿಯೂ, ನಕ್ಷತ್ರಗಳಂತೆ ಇದ್ದರೆ ಮಾತ್ರ ಅವುಗಳಿಂದ ಎಲ್ಲರಿಗೂ ಆನಂದ. ಆದರೆ ಅವು ಇಂದು ಅರಮನೆಯೊಳಗಿನ ಬೆಲೆ ಬಾಳುವ ರತ್ನಗಳಂತಿವೆ.

ಮನೆಗೆ ಹೋದ ಕೂಡಲೆ ಸುಲೋಚನೆ ಜೇಬಿನೊಳಗಿನ ಕಾಗದವನ್ನು ಹೊರಗೆ ಕಥೆಯನ್ನೋದಲಾರಂಭಿಸಿದಳು.

## ದೃಷ್ಟಿ ಲಾಭ

ಲೇಖಿಕಾ–ಕೃಷ್ಣಾ

ಕಥಾನಕವು ಹೀಗಿತ್ತು. ಒಬ್ಬ ಸುರೂಪಿಯಾದ ಗಂಡನು ತನ್ನ ಕುರೂಪಿಯಾದ ಹೆಂಡತಿಯ ಕೂಡ ಕಠೋರತನದಿಂದ ನಡೆದುಕೊಳ್ಳುತ್ತಾನೆ. ಮುಂದೆ ಮೈಲಿಯ ಬೇನೆಯಿಂದ

ಅವನ ಕಣ್ಣು ಹೋಗುವವು. ಕಣ್ಣು ಹೋದ ಮೇಲೆ ಅವನಲ್ಲಿ ಹೆಂಡತಿಯ ಪ್ರೇಮ ಕಡಿಮೆಯಾಗುವುದರ ಬದಲು ಇಮ್ಮಡಿಸುವದು. ಆದ್ದರಿಂದ ಅವನಿಗೆ ಅವಳ ವಿಷಯದಲ್ಲಿ ಆದರ ಹುಟ್ಟುತ್ತದೆ. ಅವ ಅನ್ನುವ : "ನನ್ನ ಚರ್ಮಚಕ್ಷುಗಳು ಹೋದರೂ, ನನಗೆ ಪ್ರೇಮಚಕ್ಷುಗಳು ಸಿಕ್ಕುವು !"

ಕಥೆಯನ್ನೋದುವುದಾದ ಕೂಡಲೆ ಸುಲೋಚನೆಯೆಂದಳು : "ಹೀಗೇನು ? ಒಳ್ಳೇ ಒಳಗಂಟಿನದು ಕಾಣುವದು ಈ ಸವಾರಿ ! ಈ ಗಂಟನ್ನು ಒಳ್ಳೇ ಯುಕ್ತಿಯಿಂದ ಬಿಡಿಸಿದರೇನೇ ನನ್ನ ಹೆಸರು ಸುಲೋಚನೆ !"

ತನ್ನಷ್ಟಕ್ಕೆ ನಗುತ್ತ ಅವಳು ಕಿಟಕಿಯ ಕಡೆಗೆ ಹೋದಳು. ಗೋಡಂಬೆಯ ಭಟ್ಟಿಯೊಳಗಿಂದ ಕಗ್ಗಿನ ಹೊಗೆಯ ಮೋಡಗಳು ಹೊರಬೀಳುತ್ತಿದ್ದವು. ಆಕಾಶದೊಳಗಿನ ಮೇಘಗಳಂತೆ ಅವು ಕೆಲ ಹೊತ್ತು ಕಂಡು ಅಲ್ಲಿಂದ ಗಾಳಿಯಲ್ಲಿ ಕರಗಿಹೋಗುತ್ತಿದ್ದವು. ರಮಾಕಾಂತನ ವಿಷಯದಲ್ಲಿ ತನಗೆನಿಸಿದ ಆಕರ್ಷಣವು ಆ ಹೊಗೆ ಮೋಡಗಳಂತೆಯೇ ಎಂದು ಅವಳಿಗೆ ಮನಸ್ಸಿನಲ್ಲಿ ವಿಚಾರ ಸುಳಿದುಹೋಯಿತು. ಅವಳು ಆಕಾಶದ ಕಡೆಗೆ ದೂರದಲ್ಲಿ ನೋಡಿದಳು. ಒಂದು ನೀಲಮೇಘವು ಕಂಡಿತು ಅವಳಿಗೆ. ಅವಳು ಅದನ್ನೆ ನೆಟ್ಟ ದೃಷ್ಟಿಯಿಂದ ನೋಡುತ್ತ ನಿಂತಳು. ಆ ಮೋಡದ ಹಿಂದಿನಿಂದ ವಿದ್ಯಾಧರನು ಇಣಿಕಿ ನೋಡಿದಂತೆ ಅವಳಿಗೆ ಭಾಸವಾಯಿತು.

## ೧೫
## ಬಿಸಿಲು–ಬೆಳದಿಂಗಳು

ಸಾಯಂಕಾಲದಲ್ಲಿ ಸುಲೋಚನೆಯು ಬಂದಾಗ್ಗೆ ಅವಳ ಕೈಯಲ್ಲಿ ಕ್ಯಾಲೆಂಡರಿನಂಥದು ಏನೋ ಇದ್ದುದನ್ನು ವಿದ್ಯಾಧರನು ನೋಡಿ ನಗುನಗುತ್ತ ಕೇಳಿದ–

"ಎಂಥ ಕ್ಯಾಲೆಂಡರು ಅದು ?"

"ಹೊಸ ವರ್ಷದ್ದು !"

"ಎಂದು ಆರಂಭವಾಗುವದು ಈ ಹೊಸ ವರ್ಷ ! ನಾಳೆ ಫಾಲ್ಗುಣ ಹುಣ್ಣಿಮೆಗೊ?"

"ಉ......ಹುಂ ! ಇಂದೆಯೇ !"

"ಹಾಗಾದರೆ ಇಂದಿನ ದಿವಸ ಸುಲೋಚನಾ ನಾಮ ಶಕೆ, ಚಿತ್ರನಾಮ ಸಂವತ್ಸರೆ"

"ಉ.....ಹುಂ, ಹಾಗಲ್ಲ ವಿದ್ಯಾಧರ ಶಕೆ–"

"ಶಕಕರ್ತನಾಗುವಂಥಾದ್ದು ನಾನೇನಪ್ಪಾ ಮಾಡಿದ್ದು ?"

"ಅರ್ಜುನನ ಹೊರತಾಗಿ ಎರಡನೆಯವರಿಗೆ ಯಾರಿಗೂ ಸಾಧ್ಯವಾಗಲಾರದ್ದು. ಇಂಥ ದೊಡ್ಡ ಶಿವಾಜಿ ಮಹಾರಾಜರು ! ಅವರಿಗೂ ಕೂಡ ಸಾಧ್ಯವಾಗಲಿಲ್ಲ ಆ ಕೆಲಸ."

ವಿದ್ಯಾಧರನ ಮನಸ್ಸು ಗೊಂದಲದಲ್ಲಿ ಬಿದ್ದಿತು. ಅವನು ಕೇಳಿದ : "ಈಗ ನೀನು ಹೇಳುವ ಪರಾಕ್ರಮ ಈ ಜನ್ಮದ್ದೋ ಅಥವಾ ಹೋದ ಜನ್ಮದ್ದೋ ?"



"ಇದೇ ಜನ್ಮದ್ದು ! ಇಲ್ಲಿ ಕಾಮಾಪುರದಲ್ಲಿ ಬಂದನಂತರ ಮಾಡಿದ್ದು !"

"ಗೋಡಂಬೆಯ ಯಂತ್ರವೇ ?"

"ಛೇ ! ಯಂತ್ರವೇನು ? ಸಾವಿರಾರು ಜನರು ಹುಡುಕಿ ತೆಗೆಯುವರು. ಎಡಿಸನ್, ಮಾರ್ಕೋನಿ–"

"ನನಗಂತೂ ತಿಳಿಯುವದಿಲ್ಲವಲ್ಲಾ !"

"ಚಿಕ್ಕವರಿರುವಾಗ ನಾಟಕದಲ್ಲಿ ಎಲ್ಲಿಯಾದರೂ ಪಾರ್ಟುಮಾಡಿದ್ದಿರೇನು?"

"ಇಲ್ಲ. ಮಾಡಬೇಕೆಂದು ಮನಸ್ಸಿದ್ದರೂ ಧೈರ್ಯವಿರಲಿಲ್ಲ !"

"ಅಂತೆಯೇ ಅದನ್ನು ಈಗ ಸಾಧಿಸಿಕೊಂಡಿರಾ ? ಸೋಗನ್ನೆ ಹಾಕುವುದಾದರೆ ಪುರುಷರದಾದರೂ ತಗೊಳ್ಳಬಾರದೇ ? ಅಥವಾ ನಿಮಗೆ ಮೊದಲಿನಿಂದಲೂ ಸ್ತ್ರೀ ಪಾರ್ಟು ಮಾಡುವ ಮನಸ್ಸಿದ್ದರೆ ಯಾರಿಗೆ ಗೊತ್ತು ?"

ವಿದ್ಯಾಧರನು ಏನೂ ಗೊತ್ತಿಲ್ಲದವನಂತೆ ನಟಿಸುತ್ತಿದ್ದಾನೆಂದು ಬಗೆದು ಸುಲೋಚನೆಯು ಕೈಯಲ್ಲಿ ತಂದ ಚಿತ್ರವನ್ನು ವಿದ್ಯಾಧರನ ಕೈಯಲ್ಲಿ ಕೊಟ್ಟಳು. ನೆಲ್ಲುಗದ್ದೆಯಲ್ಲಿಯ ಚಿತ್ರವದು ! ಒಂದು ಕಡೆ ಒಬ್ಬ ಒಕ್ಕಲಿಗನು ಬತ್ತದ ಹೊಲದ ಕಡೆಗೆ ನೋಡುತ್ತ ನಿಂತಿದ್ದ. ಅವನ ಹತ್ತಿರವೇ ಒಬ್ಬ ಸುಧಾರಿಸಿದ ಮನುಷ್ಯನು ಹಾರುತ್ತಿರುವ ಪಾರಿವಾಳಗಳ ಕಡೆಗೆ ನೋಡುತ್ತ ನಿಂತಂತೆ ಚಿತ್ರ ಬರೆದಿತ್ತು.

"ಸುಂದರ ಚಿತ್ರ !" ವಿದ್ಯಾಧರನು ಉದ್ಗರಿಸಿದ.

"ಯಾರದು ? ನನ್ನದೋ ನಿಮ್ಮದೋ ?"

"ನಿನ್ನದು !"

"ಕಳ್ಳನ ಹೆಜ್ಜೆಯನ್ನು ಕಳ್ಳನೇ ಬಲ್ಲ !"

"ಹಾಗಾದರೆ ನಾವಿಬ್ಬರು ಕಳ್ಳರಾದೆವಲ್ಲ !"

"ನಾನಂತೂ ಇದ್ದೇ ಇರುವೆ !"

"ಅದು ಹೇಗೆ ?"

ಸುಲೋಚನೆಯು 'ದೃಷ್ಟಿಲಾಭ'ದ ಕಾಗದವನ್ನು ತೆಗೆದು ಅವನ ಕೈಯಲ್ಲಿ ಕೊಡುತ್ತ ಹೇಳಿದಳು : "ಈ ಕಾಗದವನ್ನು ನಾನು ಮುಂಜಾವಿನಲ್ಲಿ ನಿಮ್ಮ ಜೇಬಿನೊಳಗಿಂದ ತೆಗೆದುಕೊಂಡು ಹೋಗಿದ್ದೆ !"

"ಮತ್ತು ನಾನು ಹೇಗೆ ಕಳ್ಳ ?"

"ತಮ್ಮ ಹೆಸರು 'ಕೃಷ್ಣಾ' ಎಂಬುವದನ್ನು ಬಚ್ಚಿಟ್ಟಿದ್ದಿರಿ !"

"ಆ ಕಥೆಯನ್ನು ಬರೆದವನು ನಾನಲ್ಲ !"

"ಹಾಗಾದರೆ ಯಾರು ? ಆ ನಿಮ್ಮ ಕೆಲಸಮಾಡುವ ಕೃಷ್ಣೆಯೊ ?" ಎಂದು ಸುಲೋಚನೆಯು ಖೋ ಖೋ ಎಂದು ನಗುತ್ತ ಪ್ರಶ್ನೆ ಮಾಡಿದಳು.

ಬರೆದವಳು ಅವಳೇ ಎಂದು ಹೇಳಬೇಕೆಂದು ಶಬ್ದಗಳು ವಿದ್ಯಾಧರನ ನಾಲಗೆಯ

ತುದಿಯ ಮೇಲೆ ಬಂದಿದ್ದವು. ಆದರೆ ಸುಲೋಚನೆಗೆ ಅದು ಸುಳ್ಳೆನಿಸಬಹುದೆಂದು ಅವನು ಸ್ತಬ್ಧವಾಗಿಯೇ ನಿಂತುಬಿಟ್ಟನು.

"ಹೇಗೆ ಸಿಕ್ಕಿರಿ ಕಡೆಗೆ !"

"ನೀವು ಹಿಡಿದದ್ದು ಕಳ್ಳನನ್ನಲ್ಲ, ಸಂನ್ಯಾಸಿಯನ್ನು !"

"ಸಂನ್ಯಾಸಿಗಳೇನು ಕದಿಯುವದೇ ಇಲ್ಲವೆನ್ನುತ್ತೀರಾ ?"

ವಿದ್ಯಾಧರನು ಉತ್ತರ ಕೊಡಬೇಕೆನ್ನುವಷ್ಟರಲ್ಲಿ ಕಾರಖಾನೆಯೊಳಗಿಂದ ತಿರುಗಿ ಬರುತ್ತಿದ್ದ ಕೃಷ್ಣೆಯು ಕಾಣಿಸಿದಳು. ಅವಳು ಕೋಣೆಯೊಳಗೆ ಬಂದಕೂಡಲೆ ಕೇಳಿದ : "ಕೃಷ್ಣಾ, ನೋಡಿದಿಯೋ ಈ ಚಿತ್ರವನ್ನು ?"

ಒಕ್ಕಲಗಿತ್ತಿಗೆ ಚಿತ್ರವನ್ನು ತೋರಿಸಿ ಅವಳ ಅಭಿಪ್ರಾಯವನ್ನು ಕೇಳುವ ವಿದ್ಯಾಧರನು ಸುಲೋಚನೆಗೆ ವಿಚಿತ್ರವಾಗಿಯೇ ತೋರಿದನು. ಆದರೆ ಕೃಷ್ಣೆಯು ಚಿತ್ರವನ್ನು ನೋಡುವದರಲ್ಲಿ ತಲ್ಲೀನಳಾದದ್ದನ್ನು ನೋಡಿಯಂತೂ ಅವಳ ಆಶ್ಚರ್ಯಕ್ಕೆ ಸೀಮೆಯೇ ಉಳಿಯಲಿಲ್ಲ.

ಕತ್ತಲೆಯಾಗುತ್ತಿದ್ದುದನ್ನು ನೋಡಿ ಸುಲೋಚನೆಯೆಂದಳು:

"ನಾನಿನ್ನು ಹೊರಡುವೆ, ಇಲ್ಲದಿದ್ದರೆ, ದಾದಾ ಅವರು ಯಾರನ್ನಾದರೂ ಹುಡುಕಲಿಕ್ಕೆ ಕಳಿಸುವರು. ನಾವು ಆ ದೀಪಮಾಲೆಯ ಮೇಲೆ ಹೋಗಿ ಕೂಡುವುದೆಂದರೆ ಅವರಿಗೆ ಎಷ್ಟು ಚಿಂತೆ ! ಇದಲ್ಲದೆ ನಿನ್ನಿನಿಂದ ಕತ್ತಲೆಯೆಂದರೆ ಎಷ್ಟು ಅಂಜಿಕೆಯಾಗಿಬಿಟ್ಟಿದೆ !" ಖುರ್ಚಿಯಿಂದ ಏಳುವ ಮುಂದೆ ಅವಳು ಮತ್ತೆ ಕೇಳಿದಳು : "ಯಾವನಾದರೊಬ್ಬನನ್ನು ಇಲ್ಲಿಗೆ ಕಳಿಸಿ ಕೊಡಲೇ ನಿಮ್ಮ ಜೊತೆಗೆ ?"

"ಬೇಡ ಏನೂ. ಕೃಷ್ಣೆಯು ಇರುವಳಲ್ಲ ! ಇಲ್ಲದಿದ್ದರೆ ಅವಳೂ ಮನೆಯಲ್ಲಿ ಒಬ್ಬಳೇ ಇರುವವಳು !"

ಸುಲೋಚನೆಯು ಹೋದ ಅನಂತರ, ದೃಷ್ಟಿಲಾಭದ ಕಾಗದವನ್ನು ಅವಳ ಕೈಯಲ್ಲಿ ಕೊಡುತ್ತ ವಿದ್ಯಾಧರನು ಅಂದನು : "ಇದು ತೆಗೆದುಕೊ ನಿನ್ನ ಕಾಗದವನ್ನು. ಮುಂಜಾವಿನಿಂದ ನಿನಗೆ ಸಮಾಧಾನವೆನಿಸಿರಲಿಕ್ಕಿಲ್ಲ !"

"ಸುಲೋಚನಾಬಾಯಿಯವರಿಗೆ ಹೇಳಿದಿರೇನು ಮತ್ತೆ ?"

"ನಾನು ಹೇಳಿದರೂ ಅವಳು ಕೇಳುವಳೆಲ್ಲಿ ?" ಅವಳು ನನ್ನನ್ನೇ 'ಕೃಷ್ಣೆ'ಯನ್ನಾಗಿ ಮಾಡಿಬಿಟ್ಟಿದ್ದಾಳೆ !"

ವತ್ಸಲೆಗೆ ನಕ್ಕುನಕ್ಕು ಸಾಕಾಯಿತು. ವಿದ್ಯಾಧರನು ಮುಂದೆ ಹೇಳಿದ : 'ನಾನಾದರೂ ಆನಂದದಿಂದ "ಕೃಷ್ಣೆ" ಯಾದೆ. ನಿಜವಾಗಿಯೂ ನನಗೆ ನಿನ್ನಿನಿಂದ ಯಾಕೋ ಅನಿಸತೊಡಗಿದೆ–ನನ್ನದೂ ನಿನ್ನದೂ ಏನಾದರೂ ಸಮೀಪದ ಸಂಬಂಧವಿರಬೇಕೆಂದು !"

ವತ್ಸಲೆಯು ದೀಪ ಹಚ್ಚುವ ಸಲುವಾಗಿ ಕಡ್ಡಿ ಕೊರೆಯುತ್ತಿದ್ದಳು. ಕಡ್ಡಿಯು ಸುಡುತ್ತ ಬಂದು ಬೆರಳಿಗೆ ಚರ್ರನೆ ಬಿಸಿ ಹತ್ತಿದರೂ ಅವಳ ಕೈಯು ಬತ್ತಿಯ ಕಡೆಗೆ ಹೊರಡವಲ್ಲದು. ಅವಳು ಮತ್ತೊಂದು ಕಡ್ಡಿಯನ್ನು ಕೊರೆದು ದೀಪ ಹಚ್ಚಿ ಕಂದೀಲನ್ನು ಟೇಬಲ್ಲಿನ ಮೇಲಿಟ್ಟು



ಕಿಟಕಿಯ ಬಳಿಯಲ್ಲಿ ನಿಂತಳು. ಮಕಮಕ ಮುಚ್ಚಂಜೆಯಾಗಿತ್ತು. ಇಂಥ ವೇಳೆಯಲ್ಲಿಯೇ ಲಕ್ಷ್ಮಿಯು ಮನೆ ಸೇರುವಳೆಂದು ಅವಳು ಚಿಕ್ಕಂದಿನಲ್ಲಿ ಕೇಳಿದ್ದಳು. ಅವಳು ತನ್ನ ಮನಸ್ಸಿನ ದ್ವಾರಗಳನ್ನಾದರೂ ಲಕ್ಷ್ಮಿ ಬರುವ ಸಲುವಾಗಿ ತೆರೆದಿಡುವ ಪ್ರಯತ್ನಮಾಡಹತ್ತಿದಳು.

"ಕೃಷ್ಣಾ, ನಿನ್ನಂಥ ಚುರುಕು ಹುಡುಗಿಯು ಸುಧಾರಿಸಿದವರಲ್ಲಿಯೂ ಕೂಡ ಸಿಗುವದು ಸಾಧ್ಯವಿಲ್ಲ !"

"ಚುರುಕುತನವನ್ನು ತೆಗೆದುಕೊಂಡು ಏನುಮಾಡುವದಿದೆ ? ನನಗೆ ರೂಪವಿಲ್ಲವಲ್ಲ!"

"ರೂಪ" ವಿದ್ಯಾಧರನು ಉದ್ಗಾರ ತೆಗೆದ– "ಬಣ್ಣವನ್ನು ನೋಡುವದು ಹಣ್ಣಿನದು, ಹೂವಿನದಲ್ಲ !"

ಸ್ವಲ್ಪ ಹೊತ್ತು ವಿದ್ಯಾಧರನು ಸ್ತಬ್ಧನಾಗಿದ್ದು ಅಂದನು : "ನನ್ನ ಪ್ರಶ್ನೆಗಳಿಗೆ, ನೀನು ನಾಚಿಕೊಳ್ಳದೆ ಉತ್ತರಗಳನ್ನು ಕೊಡುವಿಯಾ ?"

ವತ್ಸಲೆಯು ಸಮ್ಮತಿಯನ್ನು ತೋರುವಂತೆ ತಲೆಯನ್ನಲ್ಲಾಡಿಸಿದಳು.

"ನಿನ್ನ ಗಂಡನಿಗೆ ನೀನು ಬೇಕಾಗಿರಲಿಲ್ಲವೆ ?"

"ಬೇಕಾಗಿದ್ದರೆ ಇಲ್ಲಿಗೆ ಯಾತಕ್ಕೆ ಬರುತ್ತಿದ್ದೆ ?"

"ಸುಖದಿಂದ ಸಂಸಾರ ಮಾಡಬೇಕೆಂದು ನಿನಗೆ ಅನ್ನಿಸುತ್ತಿದೆಯಲ್ಲವೇ ?"

"ನಾನೂ ಮನುಷ್ಯ ಪ್ರಾಣಿಯೇ ಇದ್ದ ಮೇಲೆ–"

"ಹಾಗಾದರೆ"

ವಿದ್ಯಾಧರನು ಮುಂದೆ ಮಾತು ಆಡಲಿಲ್ಲ. ಆದರೆ ಆತನ ಸ್ವರದ ಮೇಲಿಂದ ಮತ್ತು ದೃಷ್ಟಿಯ ಮೇಲಿಂದ ಅವನ ಭಾವಾರ್ಥವು ವತ್ಸಲೆಗೆ ತಿಳಿಯಿತು. ಅವಳು ಎದುರಿನಲ್ಲಿ ನೋಡಿದಳು ಆಕಾಶದ ಸ್ವಲ್ಪ ಭಾಗವು ಕಾಣುತ್ತಿತ್ತು. ಆ ಭಾಗದಲ್ಲಿಯ ಎರಡು ಚಿಕ್ಕೆಗಳು ಕಣ್ಣು ಮಿಳುಕಿಸಿ ಅವಳಿಗೆ ಅನ್ನುತ್ತಿದ್ದವು. "ಅಮೃತದಿಂದ ತುಂಬಿದ ಪಾತ್ರೆಯನ್ನು ವಿದ್ಯಾಧರನು ನಿನ್ನ ಕೈಯಲ್ಲಿ ಕೊಡಹತ್ತಿದ್ದಾನೆ. ಅದನ್ನು ನೀನು ಎಸೆದು ಒಗೆಯಬೇಡ."

ಆ ಬೆಳದಿಂಗಳಂತೆ ಅವಳ ಅಂತಃಕರಣದಲ್ಲಿ ಆಶೆಗಳು ಕುಣಿಯತೊಡಗಿದವು. ವಿದ್ಯಾಧರನ ಪ್ರೇಮಸ್ಪರ್ಶ, ಅವನ ಬಾಹುಪಾಶದಲ್ಲಿ ಬರುವ ಆನಂದಮಯ ನಿದ್ರೆ–ವಿದ್ಯಾಧರನ ಕಡೆಗೆ ನೋಡುವ ಧೈರ್ಯವೇ ಆಗಲೊಲ್ಲದು ಅವಳಿಗೆ. ಕಿಟಕಿಯೊಳಗಿಂದ ಕಾಣುವ ಒಂದು ದೊಡ್ಡ ಗಿಡದ ಕಡೆಗೆ ಅವಳ ದೃಷ್ಟಿ ಹೋಯಿತು. ಅದರಲ್ಲಿಯ ಪಕ್ಷಿಗಳ ಕಿಲಕಿಲಾಟವು ಈಗ ನಿಂತಿತ್ತು. ಚುಂಚಿನಲ್ಲಿ ಚುಂಚು ಇಟ್ಟು ತಮ್ಮ ಗೂಡಿನಲ್ಲಿ ಮಲಗಿರುವ ಪಕ್ಷಿಗಳ ಜೋಡು ಅವಳ ಕಣ್ಣೆದುರಿಗೆ ನಿಂತಿತು. ಹೆಣ್ಣು ಹಕ್ಕಿಯ ಮಗ್ಗುಲದ ಊಬಿನಲ್ಲಿ ಮಲಗಿದ ಎರಡು ಗುಬ್ಬಿಯ ಚಿಕ್ಕ ಮರಿಗಳು–ಕಣ್ಣು ಮುಚ್ಚಿ ಅವಳು ಈ ಚಿತ್ರಗಳನ್ನು ಮರೆಯಲಿಕ್ಕೆ ಯತ್ನ ಮಾಡಹತ್ತಿದಳು. ಇಷ್ಟರಲ್ಲಿ ಎಲ್ಲಿಂದಲೋ ದೂರಿನಿಂದ 'ಅಂಬಾ' ಎಂದು ಒಂದು ಕರುವು ಕರೆದದ್ದು ಕೇಳಿಸಿತು. ಅವಳ ಮುಚ್ಚಿದ ಕಣ್ಣುಗಳ ಮುಂದೆ, ತಾಯಿಯ ಮೈ ನೆಕ್ಕಲಿಕ್ಕೆ ಧಾವಿಸುವ ಸಣ್ಣ ಕರುವಿನ ಮೂರ್ತಿಯು ನಿಂತಿತು. ಅವಳಿಗೆ ಅನಿಸಿತು–ನಿಜವಾಗಿಯೂ ಜೀವನಕ್ಕೆ

ಆಧಾರ ಬೇಕು. ಆಕಾಶದ ಶೂನ್ಯದಲ್ಲಿ ತಿರುಗುವ ಈ ಗ್ರಹಗಳು. ಅವುಗಳಿಗಾದರೂ ಒಂದಕ್ಕೊಂದರ ಆಕರ್ಷಣವಿದೆ ! ಎದುರಿನ ಭವ್ಯವೃಕ್ಷ, ಭೂಮಿಯು ಅದರ ಬಡ್ಡೆ ಬೇರುಗಳನ್ನು ಗಟ್ಟಿಯಾಗಿ ಹಿಡಿದಿದ್ದರಿಂದಲೇ ಅದು ಇಷ್ಟೊಂದು ಸಡಗರದಿಂದ ನಿಲ್ಲುವದು. ಭೂಮಿಯ ಹೃದಯದ ಆಧಾರವಿರದಿದ್ದರೆ–ಈಗಲೆ ಅಂಬಾ ಎಂದು ಕೂಗುವ ಕರುವಿನ ತಾಯಿ ! ಕರುವಿನ ಸಲುವಾಗಿಯೇ ಅದು ತೊರೆಬಿಡುವದು. ಕರುವಿಲ್ಲದಿದ್ದರೇ ಅದು ತೊರೆ ಬಿಡುವದೇ? ಗ್ರಹಗಳ ತೇಜ, ಗಿಡಗಳ ನೆಳಲು, ಆಕಳುಗಳ ಹಾಲು, ಇವೆಲ್ಲವೂ ವಿಶ್ವದಲ್ಲಿಯ ಜೀವನ, ಆದರೆ ವಿಶ್ವವು ಈ ಜೀವನದ ಆಧಾರವಾಗಿದೆಯೇ ? ಛೇ !

ಅವಳು ಹಿಂತಿರುಗಿ ನೋಡಿದಳು. ವಿದ್ಯಾಧರನು ಅವಳ ಕಡೆಗೆ ಬಿಟ್ಟುಬಿಡದೆ ನೋಡುತ್ತಿದ್ದ. ಅವಳಿಗೆ ಒಂದು ಕ್ಷಣಮಾತ್ರವೇ ಅನಿಸಿತು–ಸರ್ರನೆ ಓಡಿಹೋಗಿ ಅವನ ಹೃದಯದ ಮೇಲೆ ತನ್ನ ಮಸ್ತಕವನ್ನಿಟ್ಟು, ತನ್ನ ಅಶ್ರುಗಳನ್ನು ಸುರಿಸಿ–ಹೃದಯವನ್ನು ಹಗುರಾಗಿ ಮಾಡಬೇಕೆಂದು. ಆದರೆ ಒಮ್ಮೆಲೆ ಅವಳಿಗೆ ವಿಚಾರ ಬಂದಿತು. ಜಗತ್ತಿನಲ್ಲಿ ತಾನೂ ವಿದ್ಯಾಧರನೂ ಇದ್ದವರು ಇಬ್ಬರೇ ಏನು ? ವಿದ್ಯಾಧರ ಮತ್ತು ತನ್ನ ನಡುವೆ ರಮಾಕಾಂತನಿದ್ದ. ಆದರೆ ರಮಾಕಾಂತ ಮತ್ತು ಸುರಂಗೆಯರ ನಡುವೆ ತಾನೂ ಇದ್ದಿಲ್ಲವೆ ? ತನ್ನನ್ನು ಧಿಕ್ಕರಿಸಿಯೇ ರಮಾಕಾಂತನು ಸುರಂಗೆಯ ಕಡೆಗೆ ಧಾವಿಸಲಿಲ್ಲವೆ ? ಹಾಗಾದ ಮೇಲೆ ತಾನು ವಿದ್ಯಾಧರನಮೇಲೆ ಪ್ರೇಮ ಮಾಡಿದರೆ, ಅದರಲ್ಲಿ ಪಾಪವೇನು ?

ಪಾಪವು ಇರಬಹುದು, ಇರಲಿಕ್ಕೂ ಇಲ್ಲ. ಆದರೆ–ಒಮ್ಮೆಲೆ ಬಾಪ್ಪಾ ಅವರ ನೆನಪಾಯಿತು. ದಿನ್ನೆಯ ಮೇಲಿನ, ಅವರ ಮತ್ತು ವಿದ್ಯಾಧರನ ಮಾತುಗಳು ಅವಳ ಕಿವಿಯಲ್ಲಿ ತುಂಬಿದಂತಾದವು. ಕಾಮಾಪುರದಲ್ಲಿ ನೋಡಿದ, ಕೇಳಿದ ಮತ್ತು ಅನುಭವಿಸಿದ ಎಲ್ಲ ಸಂಗತಿಗಳು ಅವಳ ಕಣ್ಣುಗಳ ಮುಂದೆ ಕುಣಿಯತೊಡಗಿದವು. ಮತ್ತೆ ಹೋಗಿ ಆ ಬಿಳಿಯಂಗಿಯವರ ವರ್ಗದವರಲ್ಲಿ ಬೀಳುವದೇ ? ಗಂಡನನ್ನು ಅವಲಂಬಿಸಿ ಇಡೀ ಆಯುಷ್ಯ ಸುಖಪಡುವದೇ ? "ಕೃಷ್ಣಾ" ಎಂಬುವದು ತನ್ನದು ಒಂದು ನಾಟಕದಲ್ಲಿಯ ಭೂಮಿಕೆ ಮಾತ್ರವೆ ? ಹೊರಗೆ ಬೆಳದಿಂಗಳು ಹಬ್ಬಿತ್ತು. ಆದರೆ ಅವಳಿಗೆ ಮಾತ್ರ ತನ್ನ ಹೃದಯದಲ್ಲಿ ಎತ್ತ ನೋಡಿದತ್ತ ಕತ್ತಲೆಯೇ ಕಾಣಹತ್ತಿತ್ತು.

"ಬಾಪ್ಪಾ ಅವರು ಎಂದು ಬರುವವರು ?" ಹೊರಗೆ ನೋಡುತ್ತಲೇ ವಿದ್ಯಾಧರನಿಗೆ ಪ್ರಶ್ನೆ ಮಾಡಿದಳು.

"ನಿಶ್ಚಿತವಾಗಿ ಯಾವುದೂ ಗೊತ್ತಿಲ್ಲ. ಆದರೆ, ಕೋಣವನ್ನು ಕೊಲ್ಲುವದನ್ನು ತಡೆಯುವ ಅಪ್ಪಣೆಯನ್ನು ತೆಗೆದುಕೊಂಡು ಬರಬಹುದು !"

"ಈ ಕೋಣವು ಕಾರಖಾನೆಯವರಿಗೆ ಒಳ್ಳೇ ಉಪಯೋಗವಾಯಿತು !"

"ಅದು ಹೇಗೆ ?"

"ಅದರ ನಿಮಿತ್ತವೇ ಬಾಪ್ಪಾ ಅವರನ್ನು ದಾದಾಸಾಹೇಬರು ಹೊರಗೆ ಕಳಿಸಿದರು."

"ಅದೇಕೆ ?"



"ಕೂಲಿಯ ದರವನ್ನು ಇಳಿಸಬೇಕಾಗಿತ್ತು ! ಬಾಪ್ಪಾ ಅವರು ಸುಲೋಚನಾಬಾಯಿಯವರನ್ನು ಮುಂದಕ್ಕೆ ಮಾಡಿದರೆ, ದಾದಾ ಅವರು ಕೋಣವನ್ನು–"

"ಸುಲೋಚನೆಯು ಈ ತುಲನೆಯನ್ನು ಕೇಳಿದರೆ–"

"ತುಲನೆ ಎಂತಹದು ಇದರಲ್ಲಿ ? ಹುಡುಗಿಯ ಹಟದ ಮುಂದೆ ದಾದಾ ಅವರು ತಮ್ಮದೇ ನಡೆಸಲಿಕ್ಕಿಲ್ಲವೆಂದು ಬಾಪ್ಪಾ ಅವರದು ನಂಬಿಗೆಯಿತ್ತು. ಮತ್ತು ಕೋಣವನ್ನು ಉಳಿಸುವ ಗಡಿಬಿಡಿಯಲ್ಲಿ ಬಾಪ್ಪಾ ಅವರು ಎಲ್ಲವನ್ನೂ ಮರೆತುಹೋಗುವರೆಂಬುದು ದಾದಾ ಅವರಿಗೆ–"

"ನಾಲ್ಕುದಿವಸ ಬಾಪ್ಪಾ ಅವರು ದೂರ ಹೋದರೇನಾಯಿತು? ಅವರು ಮತ್ತೆ ಬಂದ ಮೇಲೆ–"

"ಕೂಲಿಕಾರರ ಮನಸ್ಸಿನಲ್ಲಿ ಅವರ ವಿಷಯದಲ್ಲಿ ಏನಾದರೂ ತುಂಬಿಬಿಡಬೇಕೆಂದೇ ಈ ಯುಕ್ತಿ !"

"ಅಂದರೆ ?"

"ಕೋಣವನ್ನು ಬಲಿ ಕೊಡದಿದ್ದರೆ ದೇವಿಯು ತಮ್ಮ ಮೇಲೆ ಕೋಪಿಸುವಳೆಂದು ಈ ಜನರು ತಿಳಿದುಕೊಂಡಿದ್ದಾರೆ. ಬಾಪ್ಪಾ ಅವರು ತಡೆಯುವ ಅಪ್ಪಣೆಯನ್ನು ತೆಗೆದುಕೊಂಡು ಬಂದ ಕೂಡಲೆ, ಇವರೆಲ್ಲರು ಅವರ ಮೇಲೆ ತಿರುಗಿಬೀಳುವವರೆ !"

"ಆದರೆ ದೇವಿಯ ಕೋಪವು ಯಾತರಲ್ಲಿಯಾದರೂ ಕಾಣಬೇಕಲ್ಲವೆ ?"

"ಅದಂತೂ ಈಗಲೇ ಕಾಣಹತ್ತಿದೆ."

"ಅದು ಹೇಗೆ ?"

"ನಮ್ಮ ಆವಾರದಲ್ಲಿ ಈಗಲೇ ಎರಡು ಮೂರು ಹುಡುಗರು ಮೈಲಿ ಬೇನೆಯಿಂದ ಹೋದವು !"

"ದಾದಾ ಅವರು ನನ್ನ ಮುಂದೆ ಒಂದು ಅಕ್ಷರವನ್ನಾದರೂ ಮಾತಾಡಲಿಲ್ಲ."

"ಅವರು ಯಾತಕ್ಕೆ ಮಾತಾಡುವರು ? ಕಾರಖಾನೆಯಲ್ಲಿಯ ಕೂಲಿಯನ್ನು ಹೇಗೆ ಕಡಿಮೆ ಮಾಡಲಿಕ್ಕೆ ಬಂದೀತು. ಇದನ್ನೇ ಅವರು ವಿಚಾರಮಾಡತಕ್ಕವರು. ಊರಲ್ಲಿಯ ಜನರು ಸಾಯವಲ್ಲರೇಕೆ ಮೈಲಿಯಿಂದ. ಅವರಿಗೇನು ಅದರದು ? ವೆಂಗುರ್ಲೆಯಿಂದ ನಾಲ್ಕು ಗಳಿಗೆಯಲ್ಲಿ ಬಂದು ನಿಲ್ಲುವ ಡಾಕ್ಟರನು ಅವರ ಬಾಗಿಲಲ್ಲಿ !"

"ಆದರೆ ಎಲ್ಲರಿಗೂ ಮೈಲೀ ಚುಚ್ಚಿಸಿಬಿಟ್ಟರೆ ?"

"ನೀವೆಲ್ಲ ಚುಚ್ಚಿಸೀರಿ. ಆದರೆ ಚುಚ್ಚಿಸಿಕೊಳ್ಳುವವರಾರು ?"

"ಅದು ಯಾಕೆ ?"

"ಚುಚ್ಚಿಸಿಕೊಂಡರೆ ದೇವಿಯು ಕೋಪಿಸಿಕೊಳ್ಳುವಳೆಂದು–"

"ಇದು ಒಳ್ಳೇದು. ನನಗೆ ಇದರ ಕಲ್ಪನೆ ಕೂಡ ಇರಲಿಲ್ಲ."

"ನಿಮಗೆ ಹೇಗೆ ಇರಬೇಕು ಕಲ್ಪನೆ ?"

"ಅದೇಕೆ ? ನಾನು ಇದೇ ಊರಲ್ಲಿರುವವನಲ್ಲ !"

"ಊರಲ್ಲಿ ಇದ್ದರೇನು ಇಂಥ ಸಂಗತಿಗಳು ತಿಳಿಯುವವೇ ? ಈ ಜನರಲ್ಲಿ ಅವರಂತೆಯೇ ಆಗಿ ಇದ್ದರೆ–"

"ಬಾಪ್ಪಾ ಅವರು ಅವರಂತೆಯೇ ಆಗಿರುವರಲ್ಲ. ಅವರಿಗಾದರೂ ಎಲ್ಲಿದೆ ಈ ಕಲ್ಪನೆ?"

"ಬಾಪ್ಪಾ ಅವರಾದರೇನು ? ಗಾಂಧೀಜಿಯ ಭಕ್ತರು ! ಅವರ ದೃಷ್ಟಿಯಿಂದ ನಮ್ಮ ಆವಾರದಲ್ಲಿ ಕೇವಲ ದೇವತೆಗಳ ದಟ್ಟಣೆಯಾಗಿದೆ."

"ದೇವತೆಗಳ ದಟ್ಟಣೆಯೇ ?"

"ಹೌದು, ದರಿದ್ರನಾರಾಯಣರ ಮತ್ತು ಅವರ ಲಕ್ಷ್ಮಿಯ ದಟ್ಟಣೆ !"

"ಹಾಗಾದರೆ ಇದು ಸುಳ್ಳೇ ?"

"ಅರ್ಧವೇ ನಿಜವಾಗಿದೆ. ಬಡತನವೇನೋ ನಿಜ. ಆದರೆ ನಾರಾಯಣನೆಲ್ಲಿ ?"

ವಿದ್ಯಾಧರನು ವತ್ಸಲೆಯ ಕಡೆಗೆ ವಿಸ್ಮಯದಿಂದ ನೋಡಹತ್ತಿದನು. ದಾದಾ ಅವರ ಬಾಯಿಂದ ಅವನು ಈ ಕೂಲಿಕಾರ ವರ್ಗದವರ ನಿಂದೆಯನ್ನು ಕೇಳಿದ್ದ. ತನ್ನೆದುರಿಗೇ ಅವರನ್ನು, ಆಲಸಿಗಳು, ಕೆಲಸ ತಪ್ಪಿಸುವವರು, ಕೂತು ತಿನ್ನುವವರು, ತುಡುಗರು ಇತ್ಯಾದಿ ವಿಶೇಷಣಗಳಿಂದ ಅಲಂಕರಿಸಿದ್ದು ಅವನಿಗೆ ಗೊತ್ತಿತ್ತು. ಬಾಪ್ಪಾ ಅವರ ಕೂಡ ಮಾತಾಡುವ ಮುಂದೆ, ತೀರ ವಿರುದ್ಧ ಸಂಗತಿಗಳು ಅವನ ಕಿವಿಗೆ ಬಂದಿದ್ದವು. ದಾದಾ ಅವರ ಕಣ್ಣುಗಳಿಗೆ ರಾಕ್ಷಸರಾಗಿ ಕಂಡು ಬರುವ ಜನರು ಬಾಪ್ಪಾ ಅವರಿಗೆ ದೇವತೆಗಳಾಗಿ ಕಾಣುತ್ತಿದ್ದರು. ಬಾಪ್ಪಾ ಅವರು ಕೂಲಿಕಾರರನ್ನು, ಉದ್ಯೋಗಿಗಳು, ಪ್ರಾಮಾಣಿಕರು, ದಯಾಳುಗಳು ಎಂದು ಮನ್ನಿಸುತ್ತಿದ್ದರು. ಬಾಪ್ಪಾ ಮತ್ತು ದಾದಾ ಇವರಿಬ್ಬರ ಮತಭೇದವೆಂದರೆ ಡಾಕ್ಟರ ಮತ್ತು ವೈದ್ಯ ಇವರಿಬ್ಬರ ಜಗಳದಂತೆ ಎಂದು ತಿಳಿದುಕೊಂಡು ವಿದ್ಯಾಧರನು ಅವರ ಭಾಷಣದ ವಿಷಯದಲ್ಲಿ ವಿಶೇಷವಾಗಿ ವಿಚಾರ ಮಾಡಿದ್ದಿಲ್ಲ.

ವತ್ಸಲೆಯ ಮಾತಿನ ವಿಷಯದಲ್ಲಿ ಆಶ್ಚರ್ಯವೆನಿಸುವಾಗಲೇ ಅವನಿಗೆ ವಿಚಾರ ಹೊಳೆಯಿತು. ಅವಳಾದರೂ ಬೇನೆ ಹಬ್ಬಿದ ಭಾಗದಲ್ಲಿಯೇ ಇರುತ್ತಿದ್ದಳು. ಅವನಿಗೆ ಕೆಡಕೆನಿಸಿದ್ದರಿಂದ ಒಮ್ಮೆಲೇ ಕೇಳಿದ : "ನೀನು ಯಾಕೆ ಚುಚ್ಚಿಸಿಕೊಳ್ಳುವದಿಲ್ಲ ?"

"ನೀರಿನಲ್ಲಿದ್ದು ಮೀನುಗಳ ಕೂಡ ವೈರ ಕಟ್ಟಲಿಕ್ಕಾಗುವದೆ ?"

"ಹಾಗಾದರೆ ನೀರ ಹೊರಗೆ ಬರಬೇಕು !"

"ಅದು ಯಾತಕ್ಕೆ ? ಚಡಪಡಿಸಿ ಸಾಯಲಿಕ್ಕೆ ?"

ಅವಳ ಮಾರ್ಮಿಕ ಉತ್ತರದಿಂದ ವಿದ್ಯಾಧರನಿಗೆ ಕೌತುಕವೆನಿಸಿತು. ಆದರೆ ಒಮ್ಮೆಲೆ ಗಂಭೀರಮುದ್ರೆಯಿಂದ ಅವನು ಕೇಳಿದ : "ಸವಳು ನೀರಿನಲ್ಲಿಯ ಮೀನಗಳು ಸೀನೀರಿನಲ್ಲಿ ಬದುಕುವದಿಲ್ಲವೇ ?"

ವತ್ಸಲೆಯು ಸ್ತಬ್ಧವಾಗಿ ನಿಂತಳು. ವಿದ್ಯಾಧರನ ಈ ಪ್ರಶ್ನೆಯಿಂದ ಅವಳಿಗೆ, ಇಡೀ ಪೃಥ್ವಿಪ್ರದಕ್ಷಿಣೆಯನ್ನು ಮಾಡಿ ಮತ್ತೆ ಮೊದಲಿನ ಸ್ಥಳಕ್ಕೇ ಬಂದಂತೆ ಅನಿಸಿತು. ಅವಳು



ಕಿಟಿಕಿಯ ಹೊರಗೆ ನೋಡಿದಾಗ ಬೆಳದಿಂಗಳು ಕತ್ತಲೆಯನ್ನು ಬೆಳಗಿತ್ತು. ಅವಳಿಗೆ ಅನಿಸಿತು: ಆಯುಷ್ಯದಲ್ಲಿಯ ಒಂಟಿಗತನವೂ ಈ ಕತ್ತಲೆಯಂತೆಯೆ ಅಲ್ಲವೆ ? ದೂರದಲ್ಲಿ ಎಲ್ಲಿಯೋ ಗ್ರಾಮಫೋನು ಹಾಡು ಅರ್ಧಮರ್ಧ ಕೇಳಬರುತ್ತಿತ್ತು–

"ಪ್ರೇಮಭಾವೇ ಜೀವ ಜಗಿಯಾ
ಏಕಚಿ ರಸ ಪ್ಯಾಲಾ....."

ಆ ಏಕರಸದ ಲಹರಿಗಳು ವತ್ಸಲೆಯ ಹೃದಯದಲ್ಲಿ ದುಡುಕಹತ್ತಿದವು. ತನ್ನ ಸೋದರಮಾವ, ಸೋದರತ್ತೆ, ಅವರ ಮಕ್ಕಳು, ರಮಾಕಾಂತ, ಕಾಶಿ, ತನ್ನ ಕೂಡ ನಿಕಟಸಂಬಂಧ ಬಂದ ಎಲ್ಲರೂ ಜನರು ತನ್ನ ಹೃದಯದಿಂದ ದೂರ–ಅತಿ ದೂರವಿದ್ದಂತೆ ಅವಳಿಗೆ ತೀವ್ರವಾಗಿ ತೋರಿತು. ಹೃದಯ ಪತಂಗವು ವಿಶ್ವದ ಅಪಾರ ಅಂತರಾಳದಲ್ಲಿ ಕುಣಿಯುವದಾದರೆ, ಅದನ್ನು ಹಿಂದಕ್ಕೆ ಜಗ್ಗಿ ಹಿಡಿಯುವವರು ಯಾರಾರೂ ಬೇಡವೆ ? ಅವಳು ಸ್ನೇಹಪೂರ್ಣದೃಷ್ಟಿಯಿಂದ ವಿದ್ಯಾಧರನನ್ನು ನೋಡಿದಳು. ಅವಳ ದೃಷ್ಟಿಯಲ್ಲಿಯ ಸ್ನಿಗ್ಧತೆಯು, ವಾಯು ಲಹರಿಯ ಮೇಲಿನ ಸಂಪಿಗೆಯ ಸುವಾಸನೆಯಂತೆ ಅವನ ಮನಮುಟ್ಟಿತು. ಅವನು ಮೃದುವಾದ ಸ್ವರದಲ್ಲಿ ಉತ್ತರ ಕೊಟ್ಟ "ನಾಳೆಯೆ ನಿನಗೆ ಚುಚ್ಚಿಸಲಿಕ್ಕೆ ವ್ಯವಸ್ಥೆ ಮಾಡಲಿಕ್ಕೆ ಬೇಕು, ಕೃಷ್ಣಾ !"

"ಇಲ್ಲದಿದ್ದರೆ?"

"ಇಲ್ಲದಿದ್ದರೆ–" ವಿದ್ಯಾಧರನ ಸ್ವರದೊಳಗಿನ ಕಂಪದಿಂದ ಅವಳ ಹೃದಯ ತಂತುಗಳನ್ನು ಮೀಟಿದಂತಾಯ್ತು.

"ಇಲ್ಲದಿದ್ದರೆ ಏನು ? ನನಗೆ ಮೈಲಿ ಏಳುವವು !"

"ಹೀಗೆ ಅಶುಭ ನುಡಿಯಬಾರದು !"

"ಬಹಳವಾದರೆ ನಾನು ಸಾಯಬಹುದು, ಅದರಲ್ಲೇನು ? ಒಳ್ಳೆಯದೇ ಆಯಿತಲ್ಲ."

"ಕೃಷ್ಣಾ, ಕೃಷ್ಣಾ–"

"ನಾನು ಸತ್ತರೇನು, ಜಗತ್ತು ಮುಳುಗುವದೆ ?"

"ನನ್ನ ಜಗತ್ತಾದರೂ ನಿಶ್ಚಿತವಾಗಿ ಮುಳುಗುವದು !"

"ನಾನು ಸತ್ತುಹೋದರೆ, ನಿಮಗೆ ನನ್ನ ನೆನಪಾಗುವದೇ ?"

ವಿದ್ಯಾಧರನ ಕಣ್ಣಲ್ಲಿ ನೀರು ನಿಂತಿತು. ಹಾವು ಕಡಿದರೂ ತನ್ನ ಮುಖಮುದ್ರೆಯ ಮೇಲೆ ಭೀತಿಯ ಲವಲೇಶವಾದರೂ ಕಾಣಗೊಡದ ಪುರುಷನಂಥ ಪುರುಷ! ಆದರೆ ಸ್ವತಃ ಮರಣಕ್ಕಿಂತಲೂ ಅವಳ ಮರಣದ ದುಃಖವು ಅವನಿಗೆ ಹೆಚ್ಚೆನಿಸಿತು. ಇದು ಹೀಗೆ ಏಕೆ ? ವತ್ಸಲೆಯು ರಮಾಕಾಂತನ ಹತ್ತಿರ ಬೇಡುತ್ತಿದ್ದ ಪ್ರೇಮವು ಅವಳಿಗೆ ಸಿಕ್ಕದ್ದು ವಿಶ್ವಾಸವಾಯಿತು. ವಿದ್ಯಾಧರನ ಹತ್ತಿರ ಹೋಗಿ, ತನ್ನ ಸೆರಗಿನಿಂದ ಅವನ ಕಣ್ಣೀರುಗಳನ್ನು ಒರಸಬೇಕೆಂದು ಅವಳ ಕಾಲುಗಳು ಸರಿದವು ಕೂಡ. ಸುಲೋಚನೆಯು ಆಗಲೆ ತಂದ ಚಿತ್ರವು ಅವಳಿಗೆ ಒಮ್ಮೆಲೆ ಕಂಡಿತು.

ಒಕ್ಕಲಿಗ ಮತ್ತು ಚಿತ್ರಕಾರ !

ಬಿತ್ತಿದ ಧಾನ್ಯಗಳನ್ನು ತಿನ್ನುವ ಪಾರಿವಾಳಗಳು ಮತ್ತು ಹಾರಿ ಹೋಗುವ ಪಾರಿವಾಳಗಳು !

ಅವನ ಕಣ್ಣಲ್ಲಿಯ ನೀರು ಅವಳ ಹೃದಯದಲ್ಲಿಯ ದಾಹವನ್ನು ಶಾಂತಮಾಡುತ್ತಿತ್ತು. ಈ ಪ್ರೇಮದ ಋಣವನ್ನು ಹೇಗೆ ತೀರಿಸುವದು ?

ಯಾರೋ ಬಾಗಿಲನ್ನು ಬಲವಾಗಿ ತಟ್ಟಿದರು. ವತ್ಸಲೆಯು ಲಗುಬಗೆಯಿಂದ ಬಾಗಿಲವನ್ನು ತೆರೆದು ನೋಡುವಷ್ಟರಲ್ಲಿ ಎದುರಿನಲ್ಲಿ ಕಾಶಿ ನಿಂತಿದ್ದಳು. ಅವಳು ಕರ್ಕಶಸ್ವರದಲ್ಲಿ "ತೀರ ತಾಳಗೆಟ್ಟೇಯವ್ವಾ ನೀನೂ ! ಕತ್ತಲ ಆದರೂ ನಿನ್ನ ದೇನ ದಾದ ಇಲ್ಲಾ ಫಿರ್ಯಾದಿ ಇಲ್ಲಾ. ನಾ ಸುಮ್ಮನs ಬಾಗಲದಾಗ ಕೂತಕೂತ ಹಾದೀ ನೋಡೇ ನೋಡಿದ್ನಿ ಬ್ಯಾಸತ್ತ ಹೋತ್ಯು ಕೂಸು ಸೋನ್ಯಾ. ಅದನ್ನ ನೆರೆಮನೆಯಲ್ಲಿ ಮಲಗಿಸಿ ಬಂದೀನಿ–"

"ನೆರೆಮನೆಯಲ್ಲಿಯೇ ?"

"ಹೌದು. ಎಂಟಾಣೆದ ಕೀಲಿ ಮುರಿ ಅಂದ್ಯಾ ಇಲ್ಲದಿದ್ದರs ? ಇಷ್ಟೊತ್ತಾರ ಯಾಕ ನಿಂತಿದೀ ನೀ ಇಲ್ಲಿ ?"

"ಇವರ ಕಾಲು ಬಾತದ ಸ್ವಲ್ಪ" ವತ್ಸಲೆಯು ಸಾವಕಾಶವಾಗಿ ಉತ್ತರ ಕೊಟ್ಟಳು.

"ಕಾರಖಾನೆದಾಗಿನ ಆಳುಮನಸ್ಯಾರೇನು ಎಲ್ಲಾರೂ ಸತ್ತರೇನು ?"

ಕಾಶಿಯ ಬಾಯ–ತೋಫಿನ ಮುಂದೆ ಸಕಾರಣ ಸಮರ್ಥನೆಯ ಕೋಟೆಯು ಬಹಳ ಹೊತ್ತು ನಿಲ್ಲುವುದಿಲ್ಲೆಂದು ವತ್ಸಲೆಯು ತಿಳಿದುಕೊಂಡಳು. ದಾದಾ ಅವರ ಮನೆಗೆ ಹೋಗಿ ವಿದ್ಯಾಧರನ ಜೊತೆಯಲ್ಲಿರಲಿಕ್ಕೆ ಒಬ್ಬ ಮನುಷ್ಯನ ವ್ಯವಸ್ಥೆಯನ್ನು ಮಾಡಿ ಕಾಶಿಯ ಕೂಡ ಮನೆಗೆ ಹೊರಟಳು. ಹಿಟ್ಟು ಚೆಲ್ಲಿದಹಾಗೆ ಬೆಳದಿಂಗಳು ಬಿದ್ದಿತ್ತು. ಹಗಲು ಹಾಳು ಸುರಿಯುವ ಮಣ್ಣಿನ ಮನೆಗಳು ಕೂಡ ಬೆಳದಿಂಗಳ ಮಾಯೆಯಲ್ಲಿ ಮೋಹಕವಾಗಿ ತೋರುತ್ತಿದ್ದವು. ಇದೀಗ ನಡೆದ ತನ್ನ ಮತ್ತು ವಿದ್ಯಾಧರನ ನಡುವಿನ ಸಂಭಾಷಣೆ ಅವಳಿಗೆ ಆ ಬೆಳದಿಂಗಳಿನಂತೆಯೆ ತೋರಿತು. ಕಾಶಿಯ–ಅವಳ ಆ ಮನೆ–ಮಕ್ಕಳಿಗೆ ಮೈಲಿ ಬೇನೆ ಬಂದು ಚಡಪಡಿಸಿ ಮರಣಕ್ಕೆ ಗುರಿಮಾಡುವ ಕೂಲಿಕಾರ ಒಕ್ಕಲಿಗರ ಹೆಂಗಸರು–ಇವೆಲ್ಲವೂ ಅವಳಿಗೆ ಬಿಸಿಲಿನಂತೆ ಕಂಡವು. ಸೃಷ್ಟಿಯಂತೆ ಮಾನವ ಜೀವನಕ್ಕಾದರೂ ಬಿಸಿಲು ಬೆಳದಿಂಗಳೂ ಬೇಕಾದುವೇ. ಅವಳಿಗೆ ರಮಾಕಾಂತನ ನೆನಪಾಯಿತು. ಈ ಬೆಳದಿಂಗಳಿನ ಮಾಯೆಯಲ್ಲಿಯೆ ಅವನು ಸುರಂಗೆಗೆ ಮನಸೋಲಲಿಲ್ಲವೇ ? ತಾನು ಬಿಸಿಲಿನಂಥವಳು. ಜನ್ಮತಃ ಅವನ ಕಣ್ಣುಗಳಿಗೆ ಬಿಸಿಲು ಆಗುತ್ತಿರಲಿಲ್ಲ. ಅಂದಮೇಲೆ ಬಿಸಿಲನ್ನು ಕಂಡ ಕೂಡಲೆ ಆತ ಕಣ್ಣುಗಳನ್ನು ಮುಚ್ಚಿಕೊಂಡರೆ ಆಶ್ಚರ್ಯವೇನು ? ಬಿಸಿಲು ಬೆಳದಿಂಗಳುಗಳ ಸಂಗಮ–ಆದರೆ ಸೃಷ್ಟಿಯಲ್ಲಿಯಾದರೂ ಇಂಥ ಸಂಗಮವಿದೆಯೆ ? ಅವಳು ಆಕಾಶದಲ್ಲಿಯ ಚಂದ್ರನ ಕಡೆಗೆ ನೋಡಿದಳು–ರಮಾಕಾಂತನಿಗೆ ಹೇಳತಕ್ಕ ಸಂದೇಶವನ್ನು ಅವಳು ಚಂದ್ರನಿಗೆ ಹೇಳುತ್ತಿದ್ದಳೋ ಎನ್ನುವಂತೆ.



* * * * *

ಇದೇ ವೇಳೆಗೆ ರಮಾಕಾಂತನು ವತ್ಸಲೆಯ ನೆನಪಾಗಿ ಬುಧಗಾಂವ ಸ್ಟೇಷನ್ನಿನ ಮೇಲೆ ಚಂದ್ರನ ಕಡೆಗೆಯೇ ನೋಡುತ್ತ ನಿಂತಿದ್ದ. ಸುರಂಗೆಯೂ ಅವನೂ ಕೂಡಿಕೊಂಡು ಬೆಳಗಾಂವಿಗೆ ತಿರುಗಿ ಬಂದಾಗ, ಮುಂಬಯಿಗೆ ಹೋಗಿ ತಿರುಗಿ ಬಂದ ಒಂದು ಸಾಂಗ್ಲಿಯ ಪತ್ರವು ಅವನ ದಾರೀ ನೋಡುತ್ತಿತ್ತು. ಅವನು ಪತ್ರ ತೆರೆದು ನೋಡಿದ. ವತ್ಸಲೆಯ ಸೋದರಮಾವನದು ! ಯಾವದೋ ಒಂದು ವರ್ತಮಾನಪತ್ರದಲ್ಲಿ ಆತನ ಹೆಸರಿನಲ್ಲಿ ಬಂದ ವತ್ಸಲೆಯ "ಗೃಹ್ಯಸಂಸ್ಕಾರ"ವನ್ನು ಅವರಿಗೆ ಯಾರೋ ತೋರಿಸಿಕೊಟ್ಟಿದ್ದರು. ಅದನ್ನು ಓದಿಕೊಂಡು ಅವರು ಚಕಿತರಾದರು. ವತ್ಸಲೆಯು ತಮ್ಮ ಕಡೆಗೆ ಬಂದೇ ಇಲ್ಲವೆಂದು ಅವರು ಪತ್ರದಲ್ಲಿ ಸ್ಪಷ್ಟವಾಗಿಯೇ ತಿಳಿಸಿದ್ದರು. ಸಂಗತಿಗಳ ನಿಜಸ್ವರೂಪವನ್ನು ತಿಳಿದುಕೊಳ್ಳಲಿಕ್ಕೆಂದು ರಮಾಕಾಂತನು ಸಾಂಗ್ಲಿಗೆ ಬಂದು ಈಗ ಮೇಲಿನಿಂದ ಮುಂಬಯಿಗೆ ಹೊರಟಿದ್ದ. ತಮ್ಮ ಕಡೆಗೆ ವತ್ಸಲೆಯಂತೂ ಬಂದಿರಲಿಲ್ಲ. ಆಮೇಲೆ ಅವರಾದರೂ ಅವಳ ಮರಣದ ವಿಷಯದಲ್ಲಿ ಆತನಿಗೆ ಏನು ಹೇಳಬೇಕು ? ಗೊತ್ತಿಲ್ಲವೆಂದು ಹೇಳಿ ಅವರು ರಮಾಕಾಂತನನ್ನು ತಿರುಗಿ ಕಳಿಸಿಬಿಟ್ಟರು.

ಸುರಂಗೆಯು ಬೆಳಗಾಂವಿಯಲ್ಲಿರುವಾಗ ಮುಂಬಯಿಯ ಕಡೆಗೆ ಹೋಗುವ ರೈಲುಗಾಡಿಯು ರಮಾಕಾಂತನಿಗೆ–ನಿಜವಾಗಿ ನೋಡಿದರೆ–ಶತ್ರುವಿನಂತೆ ಅನಿಸಬೇಕು ! ಆದರೆ ಇಂದು ಬುಧಗಾಂವ ಸ್ಟೇಷನ್ನಿನಲ್ಲಿ ರಮಾಕಾಂತನು ದಾರಿ ಕಾಯುತ್ತ ನಿಂತದ್ದು ಆ ರೈಲಿನದೇ. ಆತನಿಗೆ ಸುರಂಗೆಯು ಬೇಕಾಗಿದ್ದಳು. ಆದರೆ ಯಾರಿಂದಲೋ ಅವಳಿಗೆ ಹುಟ್ಟಿದ ಆ ಹುಡುಗ ಬೇಡವಾಗಿದ್ದ ! ಆತನಿಗೆ ಕೋಗಿಲೆಯ ಜೀವನ ಬೇಕಾಗಿತ್ತು ; ಆದರೆ ಅದರ ಮೂರ್ಖತನದ ಹೊರತು ! ಕೋಗಿಲೆಯ ತತ್ತಿಯನ್ನು ಕಾಗೆ ರಕ್ಷಿಸುತ್ತದೆ. ಸುರಂಗೆಯಾದರೂ ಅದರಂತೆಯೇ ಆ ಹುಡುಗನನ್ನು ತನ್ನ ಕೊರಳಲ್ಲಿ ಕಟ್ಟುತ್ತಿರುವಂತೆ ಅನಿಸಿತು.

ಪ್ಲಾಟಫಾರ್ಮಿನ ಮೇಲೆ ಅತ್ತಿತ್ತ ತಿರುಗಾಡುತ್ತಿರುವಾಗ ಬೆಳಗಾಂವಿಯ ಸಾಯಂಕಾಲದ ಆ ಸನ್ನಿವೇಶವು ಆತನ ನೆನಪಿಗೆ ಬಂದಿತು. ಸುರಂಗೆಯು ಕೇಳಿದಳು :

"ನನ್ನ ಮೇಲೆ ನಿಮ್ಮದು ನಿಜವಾಗಿಯೂ ಪ್ರೇಮವಿದೆಯೆ ?"

"ಪ್ರೇಮದ ಕಾಗದ ಮೇಲೆ ಸರಕಾರೀ ಮುದ್ರೆ ಬಿದ್ದಮೇಲೂ–"

ಸುರಂಗೆಯು ಕಣ್ಣು ತೆರೆದಳು. ಅರಳಿದ ಚಂಡುಮಲ್ಲಿಗೆಯಂತೆ ಅವು ಅಂದವಾಗಿ ಕಾಣುತ್ತಿದ್ದವು !

"ಪ್ರೇಮದ ಸಲುವಾಗಿ ಮನುಷ್ಯನು ಏನು ಬೇಕಾದ್ದನ್ನು ಮಾಡುತ್ತಾನಲ್ಲವೆ ?" ತಾನು ಗಡಕರಿಯವರ ಕೆಲವು ಕವಿತೆಯೊಳಗಿನ ಪದ್ಯಗಳನ್ನು ಒಳ್ಳೇ ಗಂಭೀರವಾಗಿ ಅಂದು ತೋರಿಸಿದ.

ಸುರಂಗೆಯು ನಗುನಗುತ್ತ ಅಂದಳು : "ಸಮುದ್ರದ ಮೇಲೆ ಪರ್ವತವನ್ನು

ಕುಣಿಸುವಷ್ಟೇನೂ ಕಷ್ಟವಲ್ಲ ನನ್ನ ಕೆಲಸ !"

"ಸ್ವಲ್ಪವಾದರೂ ಕಷ್ಟವಾಗಿದೆಯಲ್ಲ."

ಅವಳು ಹೌದೆಂದು ಗೋಣುಹಾಕಿದಳು.

"ಅಂದರೆ ಮುತ್ತಿನ ವಸ್ತುಗಳು ಬೇಡ ! ವಜ್ರದವು ಬೇಕು !"

"ಹಾಗಲ್ಲ ! ನಾನು ಕೊಡುವ ವಜ್ರವನ್ನೇ ನೀವು ಜೋಪಾನ ಮಾಡಬೇಕು !"

ಅವಳು ಒಂದು ಫೋಟೋವನ್ನು ತೆಗೆದು ಅವನ ಕೈಯಲ್ಲಿ ಕೊಟ್ಟಳು. ಕೂಡಲೆ ಅವಳು ಆ ಹುಡುಗನನ್ನು ಒಳಗೆ ಕರೆತಂದಳು. ಒಳ್ಳೇ ಸುಂದರ ರೂಪ. ಆದರೆ ಅವನನ್ನು ನೋಡಿದೊಡನೆಯೆ ಮತ್ಸರದ ಬಾಣವು ಅವನ ಹೃದಯವನ್ನು ಸೇರಿತು. ಸುರಂಗೆಯ ಪೂರ್ವದ ಪ್ರಿಯಕರನ ಈ ಸಣ್ಣ ಪ್ರತಿಮೆಯ ಪೂಜೆಯನ್ನು ತಾನು ಮಾಡುವುದೆ ? ಅದೇಕೆ ಅವಳು ತನಗೆ ವಶಳಾದುದು, ತನ್ನ ಮೇಲಿನ ಪ್ರೇಮದಿಂದಂತೂ ಅಲ್ಲ–ಆ ಹುಡುಗನ ಸಂರಕ್ಷಣೆಯನ್ನು ಚೆನ್ನಾಗಿ ಮಾಡುವ ಯಾವನೊಬ್ಬನನ್ನು ಹುಡುಕುವುದರ ಸಲುವಾಗಿಯೇ. ಹೀಗೆ ಮನಸ್ಸನ್ನು ಬೇಕಾದವರಲ್ಲಿ ಅನುರಕ್ತ ಮಾಡಬಹುದೆ ?

ಹಾಗೆ ಮಾಡಲಿಕ್ಕೆ ಬರುತ್ತಿದ್ದರೆ ?

ಹಾಗಾದರೆ ವತ್ಸಲೆಯನ್ನು ಪ್ರೀತಿಸುವದಾಗುತ್ತಿರಲಿಲ್ಲವೆ ?

ವತ್ಸಲೆ ! ಅವಳೆಲ್ಲಿ ಇರಬಹುದು ಈಗ ?

ಅವನು ಚಂದ್ರನ ಕಡೆಗೆ ನೋಡಿದ.

ವತ್ಸಲೆಯಾದರೂ ಇದೇ ವೇಳೆಗೆ ಚಂದ್ರನ ಕಡೆಗೆ ನೋಡುತ್ತಿದ್ದಳು.

## ೧೬
## ಬೇಸಿಗೆಯ ನೆರೆ

ಎರಡು–ಮೂರು ದಿವಸಗಳಲ್ಲಿ ವಿದ್ಯಾಧರನ ಕಾಲಿನ ಬಾವು ಕಡಿಮೆಯಾಗಿ ಅವನಿಗೆ ಸುಮಾರಾಗಿ ನಡೆಯಲಿಕ್ಕೆ ಬರಹತ್ತಿತ್ತು. ಕಳೆದ ಎರಡು–ಮೂರು ದಿವಸದಲ್ಲಿ ಕೃಷ್ಣೆಯು ಅವನ ಕೋಣೆಯ ಕಡೆಗೆ ಬಂದಿರಲಿಲ್ಲ. ಅವನಿಗೆ ಇದರದೇ ಎಲ್ಲಕ್ಕೂ ಆಶ್ಚರ್ಯವೆನಿಸುತ್ತಿತ್ತು. ತಾನು ಅವಳ ವಿಷಯದಲ್ಲಿ ಸ್ನೇಹಭಾವವನ್ನು ವ್ಯಕ್ತಪಡಿಸುವಾಗ ಮೇರೆ ಮೀರಿದೆನೆಂದು ಅವಳು ಸಿಟ್ಟಿಗೆದ್ದಿರಬಹುದೆ ಎಂದು ಅವನಿಗೆ ಸಂಶಯವೂ ಬಂದಿತು. ಅವನು ಕಾರಖಾನೆಯ ವರೆಗೆ ಮೆಲ್ಲನೆ ನಡೆಯುತ್ತ ಹೋದನು. ಅಲ್ಲಿಯೂ ಕೃಷ್ಣೆಯು ಕೆಲಸಕ್ಕೆ ಬಂದುದು ಕಾಣಲಿಲ್ಲ. ದಾದಾ ಅವರು ಮಾತ್ರ ಪ್ರಸನ್ನಮುದ್ರೆಯಿಂದ ಅಂದರು : "ಒಂದೆರಡು ದಿವಸ ಆ ಕಾಲ ಮೇಲೆ ಭಾರ ಹಾಕಬೇಡಿರಿ. ಸುಮ್ಮನೆ ಜಡವಾಗಬಹುದು ಮತ್ತೆ !"

ಆ ಫೋಟೋ ಪ್ರಕರಣದ ಸಲುವಾಗಿ ದಾದಾ ಅವರು ತನ್ನ ಮೇಲೆ ಕೋಪಿಸಿಕೊಂಡೇ ಇದ್ದುದರಿಂದ ಅವರ ವೃತ್ತಿಯಲ್ಲಿಯ ಬದಲಾವಣೆಯು ಆತನಿಗೆ ಆಶ್ಚರ್ಯಕರವೆನಿಸಿತು. ಆದರೆ ಮುಂಜಾನೆ ಸಂಜೆ ಕೂಡಿಯೇ ತನ್ನ ಬಳಿಯಲ್ಲಿ ನಗುತ್ತ ನಲಿಯುತ್ತ ಕೂಡುವ ಸುಲೋಚನೆಯೇ ಈ ಬದಲಾವಣೆಗೆ ಮೂಲ ಕಾರಣವೆಂದು ಅವನ ಲಕ್ಷ್ಯದಲ್ಲಿ ಬಂದಿತು.



ಇಲ್ಲವಾದರೆ, ಬಹುತರವಾಗಿ ದಾದಾ ಅವರ ಕಾರಂಜಿಯೊಳಗಿನಿಂದ ಹಾಸ್ಯ ತುಷಾರಗಳು ಹೊರಬೀಳುವದು ಸಾಧ್ಯವೇ ಇರಲಿಲ್ಲ.

ದಾದಾ ಅವರಿಗೆ ಕೂಡ ತೋರಿಸದ ಲಕ್ಷ್ಮಿಯ ಚಿತ್ರವನ್ನು ಅವಳು ತನ್ನ ಚಿತ್ರದ ಕೋಣೆಯಲ್ಲಿ ಕರೆದುಕೊಂಡು ಹೋಗಿ ವಿದ್ಯಾಧರನಿಗೆ ತೋರಿಸಿದ್ದಳು. ಅದು ಇನ್ನೂ ಪೂರ್ಣವಾಗಿದ್ದಿಲ್ಲ. ಅವನ ಮುಂದಿನ ಕಥೆಯೊಳಗಿನ ಸನ್ನಿವೇಶವನ್ನಾದರೂ ಚಿತ್ರಿಸುವ ಇಚ್ಛೆಯನ್ನು ಅವಳು ವ್ಯಕ್ತಪಡಿಸಿದಾಗ ಮಾತ್ರ ವಿದ್ಯಾಧರನಿಗೆ ಏನು ಮಾಡಿದರೂ ನಗು ತಡೆಯುವುದಕ್ಕಾಗಲಿಲ್ಲ. ಅವಳು ಕೇಳಿದಳು : "ನಗುವುದು ಯಾತಕ್ಕೆ ? ಅಷ್ಟೊಂದು ಕೆಟ್ಟ ಚಿತ್ರಗಳನ್ನು ನಾನು ತೆಗೆಯುವೆನೇ ?"

"ಚಿತ್ರಗಳು ಚಂದವಾಗಿರುವವು ನಿಮ್ಮವು. ಆದರೆ ಕಥೆಮಾತ್ರ–"

"ಕಥೇನು ? ಹಾಹಾ ಅನ್ನುವದರಲ್ಲಿ ಬರೆಯಬಹುದು ನೀವು. ಇನ್ನೂ ಎರಡು ಮೂರು ದಿವಸ ಮನೆಯಲ್ಲಿಯೇ ಇರಬೇಕಾಗುವದು ನಿಮಗೆ. ಒಂದು ಉತ್ತಮವಾದ ಕಥೆಯನ್ನಾದರೂ ಬರೆಯಬಾರದೇ ?"

"ಸ್ಫೂರ್ತಿಯಿಲ್ಲದೆ ನನಗೆ ಬರೆಯಲಿಕಲ್ಲಾಗುವುದಿಲ್ಲ !" ಅವನು ನಸು ನಕ್ಕು ಹೇಳಿದ.

"ಎಲ್ಲಿದೆ ಈ ಸ್ಫೂರ್ತಿ ?"

"ಈಗ ಎರಡು ಮೂರು ದಿವಸಗಳಲ್ಲಿ ನನಗೆ ದರ್ಶನ ಕೊಟ್ಟಿಲ್ಲ ನನ್ನ ಸ್ಫೂರ್ತಿ !"

"ತಿರುಗಿ ಬರುವುದಾದರೂ ಎಂದು ?"

"ಯಾರು ಹೇಳಬೇಕು ? ಒಂದು ವೇಳೆ ಎಂದೂ ಬರಲಿಕ್ಕೂ ಇಲ್ಲ."

ಸುಲೋಚನೆಯು "ಏನಾದರೊಂದು ಮಾತಾಡುವಿರಿ ಆಯಿತು" ಅನ್ನುವಂತೆ ಗೋಣು ಅಲ್ಲಾಡಿಸಿಯೇ ಹೇಳಿದಳು.

ಆ ಎರಡು ಮೂರು ದಿವಸ ಊರಲ್ಲಿ ನಡೆದ ಮೋಜಿನ ಘಟನೆಗಳ ಸವಿಸ್ತರ ವೃತ್ತಾಂತವನ್ನು ಸುಲೋಚನೆಯು ಅವನಿಗೆ ತಿಳಿಸಿದಳು. ಕೋಣವನ್ನು ಕೊಲ್ಲುವಹಾಗಿಲ್ಲವೆಂಬ ಅಪ್ಪಣೆಯನ್ನು ಬಾಪ್ಪಾ ಅವರು ಕಳಿಸಿಕೊಟ್ಟರು. ಊರವರು ಮಂತ್ರಿಕರನ್ನು ಕೇಳಿ ನೋಡಿದರು. "ಕೋಣವನ್ನು ಬಲಿಕೊಡದಿದ್ದರೆ ಇಡೀ ಊರನ್ನು ಸುಟ್ಟುಹೋಗುವದು" ಎಂಬದಾಗಿ ಉತ್ತರ ಬಂದಿತು. ಭಯಭೀತವಾದ ಭಕ್ತಗಣವು ಏನಾದರೂ ಮಾಡಿ ಕೋಣವನ್ನು ಬಲಿಕೊಡುವ ವಿಚಾರವನ್ನು ನಡಿಸಿತು. ಕೊನೆಗೆ ಬಾಪ್ಪಾ ಅವರಿಗೆ ಅಡ್ಡಿಯಾಗಿ, ಮರುದಿವಸ ಮುಂಜಾನೆ ಪೊಲೀಸ ಪಾರ್ಟಿ ಅಲ್ಲಿಗೆ ಬರುವ ವ್ಯವಸ್ಥೆಯನ್ನು ದಾದಾ ಅವರು ಮಾಡಬೇಕಾಯಿತು. ಇಂದು ಹುಣ್ಣಿಮೆ ! ನಾಳೆ ಕೋಣವನ್ನು ಬಲಿ ಕೊಡುವದು ! ಆದರೆ ಪೊಲೀಸರು ಬಂದರೆ, ದೇವಿಗೆ ಪ್ರಶ್ನೆ ಕೇಳಿದ್ದೆಲ್ಲವೂ ವ್ಯರ್ಥವಾಗುವದು.

ಇವೆಲ್ಲ ಸಂಗತಿಗಳನ್ನು ಕೇಳುತ್ತಿರುವಾಗ ನಡುನಡುವೆ ವಿದ್ಯಾಧರನಿಗೆ ಹೆದರಿಕೆಯಾಗುತ್ತಿತ್ತು, ಕೃಷ್ಣೆಗೆ ಮೈಲಿಬೇನೆಯಾದರೂ ಬಂದಿರಲಿಕ್ಕಿಲ್ಲವಲ್ಲ ಎಂದು. ಒಮ್ಮೆಯಂತೂ ಸುಲೋಚನೆಗೆ ಅವಳ ವಿಷಯವಾಗಿ ವಿಚಾರಿಸಲಿಕ್ಕೆ ಹೇಳಬೇಕೆಂದ. ಆದರೆ

ಹಾಗೆ ಹೇಳುವದು ಅವಳಿಗೂ ತನಗೂ ಇಬ್ಬರಿಗೂ ಒಳ್ಳೆಯದಲ್ಲವೆಂದು ಬಗೆದು ಸುಮ್ಮನಿದ್ದನು.

ರಾತ್ರಿ ಅವನ ಜೊತೆಯಲ್ಲಿರುವ ಮನುಷ್ಯನಾದರೂ ಪಲ್ಲಕ್ಕಿಯ ಮೆರವಣಿಗೆಯನ್ನು, ಮದ್ದು ಸುಡುವದನ್ನು ನೋಡಲಿಕ್ಕೆ ಹೋಗಿಬಿಟ್ಟ. ವಿದ್ಯಾಧರನ ಮನಸ್ಸು ಬಹಳೇ ಅಸ್ವಸ್ಥವಾಯಿತು. ಕೃಷ್ಣೆಯು ಆ ದಿವಸದ ತನ್ನ ಮಾತಿನ ಅರ್ಥವನ್ನು ವಿಪರೀತವಾಗಿ ಮಾಡಿಕೊಂಡಿದ್ದರೆ ? ಹೇಗಿದ್ದರೂ ಅವಳನ್ನು ಕಾಣಲೇಬೇಕು. ಇನ್ನೂ ಅವನಿಗೆ ಸರಸರ ನಡಿಯಲಿಕ್ಕೆ ಬರುತ್ತಿದ್ದಿಲ್ಲವಾದರೂ ಕೈಯಲ್ಲಿ ಬಡಿಗೆಯನ್ನು ತೆಗೆದುಕೊಂಡು ಹೊರಬಿದ್ದ. ಹುಣ್ಣಿಮೆಯ ಆ ಪ್ರಶಾಂತ ಬೆಳದಿಂಗಳಿನಲ್ಲಿ ನಡೆದು ಹೋಗುವದರಲ್ಲಿ ಅವನಿಗೆ ವಿಲಕ್ಷಣ ಆನಂದವೆನಿಸಿತು. ಅರ್ಧಕ್ಕಿಂತ ಹೆಚ್ಚು ದಾರಿ ನಡೆದು ಹೋದ ಮೇಲೆ ಅವನಿಗೆನಿಸಿತು– ಕೃಷ್ಣೆಯು ಬಹುತರವಾಗಿ ಇಂದು ಜಾತ್ರೆ ನೋಡಲಿಕ್ಕೆ ಹೋಗಿರಬೇಕು. ಆ ಹುಡುಗ ಸೋನ್ಯಾ ಊರಿಂದ ಬಂದಿದ್ದ. ಅಂದಮೇಲೆ ಜಾತ್ರೆಯಿದ್ದಲ್ಲಿ ಹುಡುಗರು ಸುಮ್ಮನೆ ಕೂಡುವದುಂಟೆ?

ನಿರಾಶೆಯಿಂದಲೇ ಅವನು ಕಾಶಿಯ ಮನೆಯ ಹತ್ತಿರಕ್ಕೆ ಬಂದ. ಬಾಗಿಲು ತೆರೆದದ್ದೇ ಇತ್ತು. "ಕೃಷ್ಣಾ–"

ವತ್ಸಲೆಯು ಬಾಗಿಲ ಹಿಂದಿನಿಂದ ಇಣಿಕಿ ನೋಡಿದಳು. ಕೂಡಲೇ ಅವಳು ಒಳಕ್ಕೆ ಹೋಗಿ ಕೈಯಲ್ಲಿ ಒಂದು ವಹಿಯನ್ನೂ ಒಂದು ಪತ್ರವನ್ನೂ ತಕ್ಕೊಂಡು ಬಂದಳು.

ವಿದ್ಯಾಧರನು ಕೇಳಿದ: "ಕಾಶಿಯೆಲ್ಲಿ?"

"ಹೋಗಿದ್ದಾಳೆ ಜಾತ್ರೆಗೆ."

"ಸೋನ್ಯಾನನ್ನು ಕರೆದುಕೊಂಡೇ ಹೋಗಿರುವಳೇ ?"

"ಸೋನ್ಯಾ ಏನು ಹೋಗುತ್ತಾನೆ ಜಾತ್ರೆಗೆ ?"

"ಅದೇಕೆ ?"

"ಜ್ವರದಿಂದ ಬಿದ್ದಿರುವ ಚಡಪಡಿಸುತ್ತ !"

"ಜ್ವರವೇ ?"

"ಹೌದು, ಮೈಲಿಯದೇ ಬೇನೆ, ಮೋರೆಯ ಮೇಲೆ ನಾಲ್ಕಾರು ಬೊಕ್ಕೆಗಳು ಕೂಡ ಕಾಣಿಸುತ್ತಿವೆ."

"ನನಗಂತೂ ನೀನು ನನ್ನನ್ನು ಮರೆತಿಯಂತೇ ಅನಿಸಿತು !"

"ಮರೆಯುವವರು ಯಾರು ?"

"ಪ್ರೇಮವಿಲ್ಲದ ಮನುಷ್ಯ !"

"ನಾನಂತೂ ಅಂಥವಳಲ್ಲವಲ್ಲ !"

"ಇದು ನಿಜವೇ ?"

"ನಿಜ. ನಿಮ್ಮ ಮೇಲೆ ನನ್ನ ಪ್ರೇಮವಿದೆ !"

"ಕೃಷ್ಣಾ–" ವಿದ್ಯಾಧರನು ಅವಳ ಹತ್ತಿರವೇ ಹೋಗಿ ಅವಳನ್ನು ಕರೆದ.

"ಮರೆಯುವದಿಲ್ಲವಲ್ಲ ನೀನು ನನ್ನನ್ನು ?"



"ಹತ್ತಿರವೇ ಇದ್ದ ಮನುಷ್ಯನನ್ನು ಯಾರಾದರೂ ಮರೆಯಬಹುದೇ ?"

"ಆದರೆ ನಾನು ನಿಮ್ಮ ಹತ್ತಿರ ಇರುವದು ಹೇಗೆ ?"

"ಅಂದರೆ ?"

"ನೀವು ಉತ್ತರ ಧ್ರುವದ ಮೇಲೆ ! ನಾನು ದಕ್ಷಿಣ ಧ್ರುವದ ಮೇಲೆ ! ಆದರೆ ಇಷ್ಟು ದೂರ ಇದ್ದರೂ ವರ್ಷದಲ್ಲಿ ಒಂದು ದಿವಸವಾದರೂ ನಿಮ್ಮ ನೆನಪು ನನಗೆ ಆಗಿಯೇ ಆಗುವದು."

"ಯಾವ ದಿವಸವೊ ಅದು ?"

"ಭಾವಬಿದಿಗೆ !"

"ಕೃಷ್ಣಾ–ಕೃಷ್ಣಾ–"

ಅವನ ಕೈಯಲ್ಲಿ ಆ ಪತ್ರವನ್ನೂ ಆ ವಹಿಯನ್ನೂ ಕೊಡುತ್ತ ವತ್ಸಲೆಯು ಹೇಳಿದಳು:

"ಮನೆಗೆ ಹೋಗಿ ಇದೆಲ್ಲವನ್ನು ಓದಿಕೊಳ್ಳಿರಿ. ಬಾಯಿಂದ ಹೇಳಲಿಕ್ಕೆ ಬರಲಾರದ್ದು ಇದರಲ್ಲಿದೆ !" ಕೂಡಲೆ ಅವನ ಕಾಲಿನ ಕಡೆಗೆ ದೃಷ್ಟಿ ಹೋಗಿ ಅಂದಳು : "ಎಂಥ ನಿರ್ದಯ ತಂಗಿ ನಾನು ! ನಿಮ್ಮ ಕಾಲಿನ ವಿಷಯ ಕೇಳಲಿಲ್ಲ ಕೂಡ !"

ಒಳಗಿನಿಂದ ಸೋನ್ಯಾ ನರಳುತ್ತ ನರಳುತ್ತ ಕರೆದ : "ಅ–ಬ–ಚಿ !"

ವತ್ಸಲೆಯು ಒಳಗೆ ಹೋಗಬೇಕೆಂದು ತಿರುಗಿದಳು.

"ಸೋನ್ಯಾನಿಗೆ ಔಷಧ ಯಾರು ಕೊಡುವರು ?"

"ಔಷಧ ಕೊಡಿಸಲಿಕ್ಕೆ ಕಾಶಿಯು ಸಿದ್ಧಳಿಲ್ಲ !"

"ಯಾಕೆ ?"

"ದೇವಿಯು ಕೋಪವಾಗಬಹುದೆಂದು !"

"ಅವನ ಶುಶ್ರೂಷೆಯನ್ನಾದರೂ ಮಾಡುವವರು ಯಾರು ?"

"ನಾನಲ್ಲದೆ ಮತ್ತೆ ಯಾರು ಮಾಡುವವರು ? ತಾಯಿಯನ್ನು ನೆನಿಸೇ ನೆನಸುವದು ಹುಡುಗ. ಆದರೆ–"

"ಅವನ ಸಂಸರ್ಗದಿಂದ ನಿನಗೆ ಮೈಲಿ ಎದ್ದರೆ ?"

"ನೀವು ಮಾಡುವಿರಲ್ಲಾ ನನ್ನ ಸೇವೆಯನ್ನು ?"

"ಕೃಷ್ಣಾ ! ಇದು ಚೇಷ್ಟೆಯ ವಿಷಯವಲ್ಲ ! ಭಯಂಕರವಾದ ಸಾಂಸರ್ಗಿಕ ರೋಗ! ನಿನ್ನಂಥ ಪ್ರೀತಿಯ ತಂಗಿಯನ್ನು ನಾನು ನೋಡಿ ನೋಡಿಯೂ ಬಲಿ ಕೊಡಲೇ ?"

"ನಾನೇ ಬಲಿ ಬಿದ್ದು ಹೋದರೂ ಭಾವಬಿದಿಗೆಯ ಆರತಿ ತಪ್ಪಲಾರದು ! ಮೃತ್ಯುಪತ್ರದಲ್ಲಿ ಬರೆದು ಇಡುವೆ !"

ಮತ್ತೆ "ಅಬಚೀ" ಎಂದು ಒಳಗಿನಿಂದ ಕ್ಷೀಣವಾಗಿ ಕರೆದದ್ದು ಕೇಳಬಂದಿತು.

ವತ್ಸಲೆಯು ಒಳಗೆ ಹೋದಳು.

ವಿದ್ಯಾಧರನು ಪಾವಟಿಗೆಗಳನ್ನು ಇಳಿಯುವಷ್ಟರಲ್ಲಿ ಅವುಗಳನ್ನು ಒಬ್ಬನು ಏರಹತ್ತಿದನು.

ಸಿಂದಿಯ ಹೊಲಸು ವಾಸನೆ ಬಂದ ಕೂಡಲೆ ವಿದ್ಯಾಧರನು ಮೋರೆ ತಿರುವಿದನು.

"ಯಾರಲೇ ನೀನು ?" ಆ ಕುಡುಕನು ಕೇಳಿದ.

ವಿದ್ಯಾಧರನು ಸ್ತಬ್ಧವಾಗಿ ನಿಂತನು. ಕಾಶಿಯ ಮನೆಯಲ್ಲಿ ಗಂಡಸರು ಯಾರೂ ಇಲ್ಲದ್ದು ಅವನಿಗೆ ಗೊತ್ತಿತ್ತು. ಇವನು ಯಾವನಾದರೊಬ್ಬ ಹಾದಿಯಿಂದ ಹೋಗುವ ಕುಡುಕನಿರಬಹುದೆಂದು ಅವನಿಗೆ ಅನಿಸಿತು.

"ನೀ....ನೀ...ತುಳಸೀ ಕಡೆ ಬಂದಿದೀ ಹೌಂದ?! ನಿಂದರ ನೀ. ನಿನ್ನ ತಲೀನsಒಡಿತೀನಿ–"

ಇಷ್ಟರಲ್ಲಿ ವತ್ಸಲೆಯು ಹೊರಗೆ ಬಂದು, ಬೆದರಿಸುವ ಸ್ವರದಲ್ಲಿ ಅವನನ್ನು ಕರೆದಳು:

"ಸಾವಳೂ–"

ಕುಡುಕನು ನಿಂತ ಸ್ಥಳದಲ್ಲಿಯೆ ತೆಪ್ಪಗಾದನು. ವಿದ್ಯಾಧರನ ಕಡೆಗೆ ಬೊಟ್ಟು ತೋರಿಸಿ ಅವನು ಕೇಳಿದ :

"ಯಾ....ವ....ಇ...ವ....?"

"ನನ್ನ ಅಣ್ಣ ಅವರು !"

"ಅಣ್ಣ....ಅಣ್ಣಂತ....ಅಣ್ಣ ! ಹಾ....ಹಾ....ಹಾ.... ! ಅಣ್ಣ ತಂಗಿಗೆ ಭೆಟ್ಟಿಯಾಗಲಾಕ ರಾತ್ರಿ ಯಾಳೆದಾಗ ತುಡಗಿಲೇ ಬರತಾನ ಹೌಂದ ? ಹಾ....ಹಾ....ಹಾ....!"

ವತ್ಸಲೆಯು ವಿದ್ಯಾಧರನಿಗೆ ಸೂಚನೆ ಕೊಟ್ಟಳು : "ಹೋಗಿರಿ ನೀವು–"

ವಿದ್ಯಾಧರನು ಸಾವಳನ ಕಡೆಗೆ ತಿರಸ್ಕಾರದಿಂದ ನೋಡುತ್ತ ಹೊರಟುಹೋದನು.

ತನ್ನ ಕೋಣೆಯನ್ನು ಮುಟ್ಟುವದರೊಳಗಾಗಿ ವಿದ್ಯಾಧರನ ಕಾಲು ನೋಯಹತ್ತಿತ್ತು. ಆದರೆ ಅವನಿಗೆ ಅದರ ಎಚ್ಚರವೇ ಇರಲಿಲ್ಲ. ಒಳಗೆ ಬಂದ ಕೂಡಲೆ ಸಣ್ಣದಾಗಿ ಮಾಡಿಟ್ಟ ದೀಪವನ್ನು ಮೇಲಕ್ಕೇರಿಸಿ ಮೊದಲಿಗೆ ಪತ್ರವನ್ನು ಓದಿದ :

**ಪ್ರಿಯ ಬಂಧು ವಿದ್ಯಾಧರ,**

ನಿಮ್ಮಷ್ಟು ಪ್ರೀತಿಮಾಡುವ ಮನುಷ್ಯನು ನನಗೆ ನನ್ನ ಇಡೀ ಆಯುಷ್ಯದಲ್ಲಿ ಸಿಕ್ಕಿಲ್ಲ. ಅಂತೆಯೇ ನಾನು ಇಂದು ನನ್ನ ಮನಸ್ಸನ್ನು ನಿಮ್ಮ ಮುಂದೆ ಬಿಚ್ಚುತ್ತಿದ್ದೇನೆ. ಇಷ್ಟು ದಿವಸ ಎಷ್ಟೋ ಸಂಗತಿಗಳನ್ನು ನಿಮ್ಮಿಂದ ಬಚ್ಚಿಟ್ಟದ್ದಕ್ಕಾಗಿ ಕ್ಷಮೆಯಿರಲಿ.

ಪ್ರಖ್ಯಾತ ಕಥಾಲೇಖಕನಾದ ರಮಾಕಾಂತನು ನನ್ನ ಪತಿಯು. ನಾನು ಬಂದದ್ದೇಕೆ, ಇಲ್ಲಿ ಕೂಲಿಕಾರಳಂತೆ ಹೊಟ್ಟೆಹೊರೆಯುತ್ತಿದ್ದುದೇಕೆ ಎಂಬುದೆಲ್ಲವನ್ನೂ ಈ ವಹಿಯು ತಿಳಿಸಿಕೊಡುವದು. ಅದರ ಒಂದು ಬೆನ್ನಿನ ಮೇಲೆ ರಮಾಕಾಂತನ ಅನುಭವಗಳಿವೆ. ಎರಡನೆಯದರ ಮೇಲೆ ನಾನು ನನ್ನ ಅನುಭವಗಳನ್ನು ಬರೆದಿರುವೆ, ಸತ್ಯವು ಯಾವದು, ಸುಳ್ಳು ಯಾವದು! ನಾನೋ, ಅವರೋ, ಈಶ್ವರನಿಗೆ ಗೊತ್ತು ! ಆದರೆ ಜಗತ್ತಿನಲ್ಲಿ ಈಶ್ವರನಿದ್ದಾನೆಯೇ ?

ಆ ದಿವಸ ರಾತ್ರಿ ನಾನು ಕಾಶಿಯ ಜೊತೆಯಲ್ಲಿ ತಿರುಗಿ ಬಂದೆ. ಅದು ನನ್ನ ಭಾಗ್ಯ !



ಇಲ್ಲವಾಗಿದ್ದರೆ–

ಆ ದೋಷವು ನಿಮ್ಮದೂ ಅಲ್ಲ–ನನ್ನದೂ ಅಲ್ಲ ! ಆದರೆ ಆ ರಾತ್ರಿಯ ಉನ್ಮಾದದ ಬಟ್ಟಲಲ್ಲಿ ನನ್ನ ಉದಾತ್ತ ಧ್ಯೇಯಗಳೆಲ್ಲವೂ ಮುಳುಗಿಹೋಗುತ್ತಿದ್ದವು. ಮರುದಿವಸ ಮುಂಜಾನೆ ಸೋನ್ಯಾ ಮನೆಗೆ ಬಂದಾಗಲೇ ಅವನಿಗೆ ಮೈಯಲ್ಲಿ ಚಳಚಳಿಯಾಗಿತ್ತು. ನನ್ನ ಪತಿಯ ಮೇಲೆ ಮೋಹಿನೀ ಜಾಲವನ್ನು ಎಸೆದ ಸುರಂಗೆಯ ಮಗ ಆತ ! ಹೀಗಿದ್ದರೂ ಆತನ ಸಂಕಟವನ್ನು ನನ್ನಿಂದ ನೋಡಲಿಕ್ಕಾಗಲಿಲ್ಲ. ಆತನ ಶುಶ್ರೂಷೆ ಮಾಡಮಾಡುತ್ತ ನನಗೂ ಬೇನೆ ಅಂಟಿಕೊಳ್ಳಬಹುದೆಂಬ ಭೀತಿ ನನ್ನಲ್ಲಿ ಹುಟ್ಟದಿರಲಿಲ್ಲ. ಆದರೆ, ವಿದ್ಯಾಧರ, ಒಮ್ಮೆಲೆ ನನಗೆ ವಿಚಾರ ಹೊಳೆಯಿತು. ಅವನು ನನ್ನ ಮಗನೇ ಆಗಿದ್ದರೆ....

ನಾನೇ ನಿಮ್ಮ ಪತ್ನಿಯಾಗಿರಬಹುದಾಗಿತ್ತು. ನನಗೆ ಒಂದೆರಡು ಮಕ್ಕಳಾಗಿದ್ದರೆ ಸೋನ್ಯಾನ ಶುಶ್ರೂಷೆ ಮಾಡುವ ಧೈರ್ಯವು ನನಗೆ ಬರುತ್ತಿತ್ತೇ ? ಧೈರ್ಯವಿರುತ್ತಿತ್ತೇನು, ನೀವೇ ಹೇಳಿರಿ !

ಒಬ್ಬ ಸೋನ್ಯಾನ ಸಂಕಟವನ್ನು ನೋಡಿ ನನ್ನ ಮನಸ್ಸು ಇಷ್ಟು ಕಳವಳಗೊಂಡಿತು. ಆದರೆ ಇಡೀ ಕೂಲಿಕಾರ ವರ್ಗವು ಸೋನ್ಯಾನಂತೆಯೇ ಇರುವದು. ಆ ಹುಡುಗನಿಗೆ ಜನ್ಮತಃ ತಂದೆ ಗೊತ್ತಿಲ್ಲ. ಆತನಿಗೆ ಜನ್ಮ ಕೊಟ್ಟ ನರಪಶುವು ಒಂದು ವೇಳೆ ಇದೇ ಊರಲ್ಲಿ ವಿಲಾಸದಲ್ಲಿ ಕಾಲ ಕಳೆಯುತ್ತಿರಬಹುದು. ಕೂಲಿಕಾರ ವರ್ಗವಾದರೂ ಈ ಬಿಳಿಯಂಗಿಯವರ ಬಿಂಕದಿಂದಲೇ ಉತ್ಪನ್ನವಾಗಿಲ್ಲವೇ ? ಆದರೆ ಅದು ಹೊಟ್ಟೆಗಿಲ್ಲದೆ ಸಾಯುತ್ತಿದ್ದರೂ ಕೂಡ, ಅದರ ವಿಷಯದಲ್ಲಿ ಕೇವಲ ಬಾಯಿಮಾತಿನಿಂದ ಕೂಡ ಯಾರೂ ವಿಚಾರಿಸುವದಿಲ್ಲ. ಸೋನ್ಯಾನ ತಾಯಿಯು ಒಳ್ಳೇ ಸೊಗಸಾಗಿ ಹಾಡುವಳಂತೆ. ಆದರೆ ಆ ಮಧುರ ಕಂಠದೊಳಗಿಂದ ಹೊರಬಿದ್ದ ಒಂದಾದರೂ ಪ್ರೀತಿಯ ಶಬ್ದವನ್ನು ಈ ದುರ್ದೈವಿಯಾದ ಹುಡುಗ ಒಮ್ಮೆಯಾದರೂ ಕೇಳಿರುವನೇ ? ಅನ್ನ, ವಸ್ತ್ರ ಮತ್ತು ಉಳಿದ ಯಾವತ್ತೂ ವಸ್ತುಗಳನ್ನು ನಿರ್ಮಾಣಮಾಡುವದು ಕೂಲಿಕಾರನ ವರ್ಗವೇ. ಆದರೆ ಅದರ ಉಪಭೋಗ ಮಾಡುವವರು ಯಾರು ? ಕಲೆಯ ಹೆಸರಿನಿಂದ ವಿಲಾಸದಲ್ಲಿ ಕಾಲ ಕಳೆಯುವ ಬಿಳಿಯಂಗಿಯವರು.

ಜ್ವರದಿಂದ ತಳಮಳಿಸುವ ಸೋನ್ಯಾನನ್ನು ನೋಡಿ ನನ್ನ ತಲೆಯಲ್ಲಿ ಇಂಥ ವಿಚಾರಗಳು ಕಲ್ಲೋಲವೆಬ್ಬಿಸಿದವು. ಇರುವುದಾದರೆ ಈ ಕೂಲಿಕಾರ ವರ್ಗದಲ್ಲಿಯೇ ಇದ್ದು, ಅವರ ಸಲುವಾಗಿಯೇ ಸಾಯುವುದೆಂದು ನಾನು ನಿಶ್ಚಯಮಾಡಿದೆ ; ಅಂತೆಯೇ ನಾನು ಹೆಚ್ಚಿಗೆ ಏನೂ ಬರೆಯುವದಿಲ್ಲ. ಸುಲೋಚನೆಯಂಥ ಚೆಲುವೆಯಾದ ಹೆಂಡತಿಯು ನಿಮಗೆ ನಾಳೆ ಸಿಗಬಹುದು. ನನ್ನನ್ನು ನೀವು ಮರೆತೂಬಿಡಬಹುದು. ಆದರೆ–

ನಿಮ್ಮನ್ನು ಎಂದಿಗೂ ಮರೆಯಲಾಗದ ನಿಮ್ಮ ತಂಗಿ,

**ವತ್ಸಲೆ (ಕೃಷ್ಣಾ)**

ಪತ್ರ ಮುಗಿದ ಕೂಡಲೆ ವಿದ್ಯಾಧರನು ವಹಿಯನ್ನೋದಲಾರಂಭಿಸಿದ. ವತ್ಸಲೆಯ

ಬರಹವು ಅವನಿಗೆ ಪರಿಚಿತವಿದ್ದ ಮೂಲಕ ಸರಸರನೆ ಪುಟಗಳನ್ನು ಮಗುಚುತ್ತಿದ್ದ. ಆಕಾಶದೊಳಗಿನ ತಾರೆಗಳು ಪಳಪಳನೆ ಉದುರಿಬಿದ್ದರೆ ಉಂಟಾಗುವ ಶೋಭೆಯು ಅವನಿಗೆ ಅವಳ ಪ್ರತಿಯೊಂದು ವಾಕ್ಯದಲ್ಲಿ ಅನುಭವಿಸಿದಂತೆ ಅನಿಸಿತು.

"ಕಲೆಯ ಸಲುವಾಗಿ ಕಲೆ !" "ಇದು ಧರ್ಮದ ಸಲುವಾಗಿ ಧರ್ಮ" ದಂಥ ತತ್ತ್ವದ ಒಡಹುಟ್ಟಿದ ತಂಗಿಯೇ. ಆದರೆ ಕಲೆ, ಧರ್ಮ, ನೀತಿ, ಸಂಸ್ಕೃತಿ ಇವೆಲ್ಲವೂ ಜೀವನದ ಸಲುವಾಗಿಯೇ ಇವೆ.

ಜೀವನ–ಬದುಕುವದು–ಕೇವಲ ಬದುಕಿರುವುದರಲ್ಲಿ ಎಷ್ಟೊಂದು ಆನಂದವಿದೆ ! ಹಚ್ಚನೆ ಹಸಿರು ಮುರಿಯುವ ಹುಲ್ಲಿನ ಕಡೆಗೆ ನೋಡವುದರಲ್ಲಿ, ಪಕ್ಷಿಗಳ ಕಿಲಕಿಲಾಟವನ್ನು ಕೇಳುವುದರಲ್ಲಿ, ವಸಂತದಲ್ಲಿ ಹೂ ಬಿಟ್ಟ ಮಾಮರದ ಸುಗಂಧವನ್ನು ಸೇವಿಸುವದರಲ್ಲಿ ಆನಂದವಿದೆ. ಮನುಷ್ಯನೇ ಜೀವನದ ಸಾರಸರ್ವಸ್ವ ! ಜೀವನದ ಧ್ಯೇಯ, ಆನಂದ ! ಅಖಂಡವಾದ, ಅವಿನಾಶಿಯಾದ ಆನಂದ ! ಇಂಥ ಆನಂದವನ್ನು ಕಲೆಯೂ ಧರ್ಮವೂ ಮನುಷ್ಯನಿಗೆ ದೊರಕಿಸಿ ಕೊಡಬೇಕು.

ನದಿಯು ಪರ್ವತಕ್ಕೆ ಹೇಳಿತು : "ಮಂಜುಳ ಗಾನವನ್ನು ಮಾಡುತ್ತ, ಮೃದುವಾದ ಹೆಜ್ಜೆಗಳಿಂದ ಕುಣಿಯುತ್ತ ಕುಣಿಯುತ್ತ ಜನ್ಮ ಕಳೆಯುವವ ನಾನು. ಭೋರೆಂದು ಗರ್ಜಿಸುವ ಆ ಸಮುದ್ರದ ಕಡೆಗೆ ನಾನು ಹೋಗಲಾರೆ. ನನ್ನ ನೀರು ಸಿಹಿ, ಅದರ ನೀರು ಉಪ್ಪು. ನನ್ನ ನೀರನ್ನೊಯ್ದು ಅದರ ನೀರಿನಲ್ಲಿ ಸುರುವುದು ಹುಚ್ಚುತನವಲ್ಲವೆ ?"

ಪರ್ವತವು ಏನೂ ಉತ್ತರವನ್ನೇ ಕೊಡಲಿಲ್ಲ.

ನದಿಯು ತಿರುಗೇ ತಿರುಗಿತು. ಡೊಂಕುಡೊಂಕಾಗಿ ಪ್ರವಾಹವನ್ನು ಸಾಗಿಸಿ, ಇನ್ನು ತಾನು ಸಮುದ್ರವನ್ನು ತಪ್ಪಿಸಿದೆನೆಂದು ಅಂದುಕೊಂಡಿತು. ಆದರೆ ಕಡೆಗೆ ಅದಕ್ಕೆ ಅನುಭವವು ಬಂದೇಬಂದಿತು. ಎಲ್ಲಿಯಾದರೂ ಹೋಗಿ ನದಿಯು ಸಮುದ್ರಕ್ಕೆ ಕೂಡಲೇಬೇಕಲ್ಲವೆ ?

"ಕಲೆ ಮತ್ತು ಜೀವನ ಇವುಗಳ ಸಂಬಂಧವಾದರೂ ಹೀಗೆಯೆ. ಬಿಳಿಯಂಗಿಯವರ ವರ್ಗ ಮತ್ತು ಕೂಲಿಕಾರರ ಋಣಾನುಸಂಬಂಧವಾದರೂ ಇದರಿಂದ ಬೇರೆಯಾಗಿವೆಯೆ? ನದಿಯು ಸಮುದ್ರಕ್ಕೆ ಕೂಡದಿದ್ದರೂ ಸಮುದ್ರ ಬತ್ತಿಹೋಗುವದಿಲ್ಲ. ಆದರೆ ಸಮುದ್ರವು ಮಾತ್ರ ತನ್ನ ನೀರನ್ನು ಉಗಿಯಾಗಗೊಡದಿದ್ದರೆ, ವರ್ಷಾರ್ಧದಲ್ಲಿ ಜಗತ್ತಿನಲ್ಲಿಯ ಎಲ್ಲ ನದಿಗಳೂ ಬತ್ತಿ ಉಸುಕಿನ ಬಯಲುಗಳಾಗಬಹುದು ?"

"ಒಂದು ದಿವಸ ಕಾರಖಾನೆಯಲ್ಲಿ ಮೊಳೆಗಳನ್ನು ತಂದಿದ್ದರು. ಒಬ್ಬ ಕೂಲಿ ಹೆಂಗಸು ಅದರೊಳಗಿಂದ ಎರಡು ಮೂರು ಮೊಳೆಗಳನ್ನು ಕದ್ದು ತನ್ನ ಕೂದಲಲ್ಲಿ ಬಚ್ಚಿಟ್ಟುಕೊಂಡಳು. ಅವಳು ಹೀಗೆ ಕದ್ದದ್ದನ್ನು ನಾನೆಂದಿಗೂ ಮರೆಯಲಾರೆ. ಬಡವರು ಕದಿಯುವದು ಈ ರೀತಿಯೇ. ಅವರಿಗೆ ಆ ವಸ್ತುಗಳು ಬೇಕಾಗಿರುತ್ತವೆಂತಲ್ಲ. ಆದರೆ ಜನ್ಮದಾರಭ್ಯ ಪ್ರತಿಯೊಂದು ವಿಷಯದಲ್ಲಿ ಅವರ ಕಿವಿಯಲ್ಲಿ 'ಇಲ್ಲ, ಇಲ್ಲ'ವೆಂಬ ಘಂಟಾಘೋಷವು ಧುಮಕುತ್ತಿರುವುದರಿಂದ ಅವರು ಹೀಗೆ ಕೈಗೆ ಸಿಕ್ಕಿದ್ದನ್ನು ಕದಿಯುವರು. ಸಿರಿವಂತರು ಕೂಡ



ಕದಿಯುತ್ತಿರಬಹುದು. ಆದರೆ ಅವರ ಕಳವು ಬೇರೆ ! ತಮ್ಮಕಿಂತಲೂ ಹೆಚ್ಚಾಗಿ ಶ್ರಮ ಪಡುವ ಜನರು ಅರೆಹೊಟ್ಟೆಯಿಂದ ಜೀವಿಸುತ್ತಿರುವಾಗ, ವಿಲಾಸದಲ್ಲಿ ವೇಳೆ ಕಳೆಯುವವರು ಕೂಡ, ಒಂದು ದೃಷ್ಟಿಯಿಂದ ಕಳ್ಳರೇ ಅಲ್ಲವೆ ?"

"ತಾಯಿಯ ಹೊಟ್ಟೆಯೊಳಗಿನಿಂದ ಹೊರಗೆ ಬಂದ ಕೂಡಲೆ ಮಗುವು ಅಳುವದು. ಅದನ್ನು ಅಳಲಿಕ್ಕೆ ಹಚ್ಚುವುದು ಯಾವುದು ? ಹಸಿವು !"

ತರುಣ ತರುಣಿಯರ ಹೃದುಯಗಳು ಮೂಕರೋದನ ಮಾಡುವವು, ಅವುಗಳನ್ನು ಅಳಿಸುವದು ಯಾವುದು ? ಹಸಿವು !

ವೃದ್ಧರ ಕಣ್ಣೊಳಗಿಂದ ಕೂಡ ಅಶ್ರುಧಾರೆ ಹರಿಯುವದು. ಅವರನ್ನು ಅಳಿಸುವದು ಯಾವುದು ? ಹಸಿವು !

ಜೀವನವೆಂದರೇನು ? ಈ ಮೂರು ಹಸಿವುಗಳ ಸಲುವಾಗಿ ನಡೆದ ಗೊಂದಲ ! ಈ ಹಸಿವುಗಳ ತೃಪ್ತಿಯೇ ಸುಖ ! "ಈ ಮೂರು ಹಸಿವುಗಳ ತ್ರಿವೇಣೀಸಂಗಮವೇ ಆನಂದಮಯ ಜೀವನ ! ಆದರೆ ಈ ಮೂರೂ ಹಸಿವುಗಳ ಪ್ರಮಾಣ ದೊಡ್ಡ ದೊಡ್ಡ ವ್ಯಕ್ತಿಗಳಿಗೂ ಕೂಡ ತಿಳಿಯುವುದಿಲ್ಲ. ಬಾಪ್ಪಾ ಅವರಂಥ ಗಾಂಧಿಯ ಭಕ್ತರಿಗೆ ಎರಡನೇ ಹಸಿವಿನ ಮಹತ್ವ ತಿಳಿಯುವುದಿಲ್ಲವಾದರೆ, ಇಂದಿನ ರಶಿಯದಂಥ ದೇಶದಲ್ಲಿ ಮೂರನೇ ಹಸಿವಿಗೆ ಅವಸರವಿಲ್ಲ. ಬಿಳಿಯಂಗಿಯವರ ಶಕ್ತಿಯೆಲ್ಲವೂ ಎರಡನೇ ಹಸಿವನ್ನು ತೃಪ್ತಿಗೊಳಿಸುವುದರಲ್ಲಿಯೇ ವೆಚ್ಚವಾಗುತ್ತಲಿದ್ದರೆ, ಮೊದಲನೇ ಹಸಿವನ್ನು ಸಾಗಿಸಿಕೊಳ್ಳಬೇಕಾದರೆ ಕೂಲಿಕಾರರಿಗೆ ಸಾಕುಬೇಕಾಗಿ ಹೋಗುತ್ತದೆ. ಪ್ರತಿಯೊಂದು ವ್ಯಕ್ತಿಗೂ ಈ ಮೂರು ಹಸಿವುಗಳನ್ನು ಸಮಾಧಾನಪಡಿಸಿಕೊಳ್ಳಲಿಕ್ಕೆ ಸಂಧಿಯನ್ನು ಒದಗಿಸಿ ಕೊಡುವ ಹೊರತು ಯಾವ ಸಮಾಜವೂ ಸುಖಿಯಾಗಲಾರದು."

"ರಮಾಕಾಂತನ ಕಲೆ, ಕಲೆಗೆ ಎರಡನೇ ಹಸಿವಿನಷ್ಟೇ–ಹೃದಯದ ಹಾರೈಕೆಯಷ್ಟೇ–ಗೊತ್ತು. ಆದರೆ ಈ ಮೂರೂ ಹಸಿವುಗಳ ಒಂದೊಂದರ ಮೇಲೆ ಎಷ್ಟು ಪರಿಣಾಮವಾಗುವದು ಇದರ ಕಲ್ಪನೆಯೇ ಇಲ್ಲ. ಮಧ್ಯಾಹ್ನದ ಚಿಂತೆಯಿಲ್ಲದವರ ಕಲೆಯು ಸುಂದರ ತರುಣಿಯರ ಸುತ್ತಲೂ ಸುಳಿದಾಡುವುದೆಂಬುದರಲ್ಲಿ ಆಶ್ಚರ್ಯವೇನು ? ಆದರೆ ಶರೀರ ಸೌಂದರ್ಯವಾಗಲಿ, ಪ್ರಣಯವಾಗಲಿ, ಯಾವ ಕಲೆಯ ಜೀವಾಳವಾಗಬಹುದು ? ಪ್ರಣಯದ ಉಪಭೋಗದಿಂದ ತುಂಬಿತುಳುಕುವ ವಾತಾವರಣವು ಯಾವಾಗಲೂ ಅಚ್ಚಳಿಯದೆ ಉಳಿಯುವದುಂಟೇ ? ಪ್ರಣಯದ ಪರ್ಯವಸಾನವನ್ನು ವಾತ್ಸಲ್ಯದಲ್ಲಿ ಮಾಡಿ ತೋರಿಸಿ ನಿಸರ್ಗವು ಯಾರಿಗೂ ಗೊತ್ತಿಲ್ಲದಂತೆ ಒಂದು ದೊಡ್ಡ ಪಾಠವನ್ನೇ ಕಲಿಸುತ್ತದೆ. ಉಪಭೋಗದ ಹೊರತಾಗಿ ಮನುಷ್ಯನು ಬದುಕಲಾರ. ಆದರೆ ಕೇವಲ ಉಪಭೋಗ ಮಾನವ ಜೀವನದ ಧ್ಯೇಯವಾಗಲಾರದು ! ಈ ವ್ಯಾಪಕವಾದ ಜೀವನದೊಡನೆ ಸಮರಸವಾಗುವುದೇ ಕಲೆ !"

"ಸಾಯುವ ಹೊರತು ಸ್ವರ್ಗ ಕಾಣುವದಿಲ್ಲವೆನ್ನುವದು ನಿಜ ! ಬಿಳಿಯಂಗಿಯವರ ವಿಶ್ವವನ್ನು ನಾನು (ಅವರ ಪಾಲಿಗೆ ಸತ್ತಂತೆಯೇ) ಬಿಟ್ಟು ಬಂದುದರಿಂದಲೇ ಕೂಲಿಕಾರರ

ಈ ಸ್ವರ್ಗ (ಸ್ವರ್ಗ ನರಕಗಳಲ್ಲಿ ಏನೂ ಅಂತರವಿಲ್ಲವೆಂಬುದೇ ನಿಜ !) ನನ್ನ ದೃಷ್ಟಿಗೆ ಕಂಡಿತು. ಈ ಸ್ವರ್ಗದಲ್ಲಿಯ ದೇವತೆಗಳು ಸೆರೆ–ಸಿಂದಿ ಕುಡಿಯುವರು ; ಬಾಯಿಗೆ ಬಂದಂತೆ ಬೈದಾಡುವರು ; ಸಣ್ಣಪುಟ್ಟ ದೇವತೆಗಳು ಮೈಮೇಲೆ ವಸ್ತ್ರಗಳಿಲ್ಲದೆ ಧೂಳಿಯಲ್ಲಿ ಹೊರಳಾಡುವವು. ಮೆತ್ತಗೆ ಕಂಡಲ್ಲಿ ಮೊಳ ಕೈಯಿಂದ ಅಗೆಯುವದೊಂದೇ ಅವರಿಗೆ ಗೊತ್ತು. ಬಡವರಿಗೆ ಸರಳ, ಕೃತಜ್ಞ, ಪ್ರಾಮಾಣಿಕ ಮುಂತಾದ ವಿಶೇಷಣಗಳನ್ನು ನಿಃಶಂಕವಾಗಿ ಕೊಡಬೇಕು. ಆದರೆ ವ್ಯವಹಾರದಲ್ಲಿ ನಾವು ನೋಡುವುದೇನು ? ನನ್ನ ಅನುಭವವಂತೂ ವಿಪರೀತವಾಗಿದೆ. ದೂರದ ಉದಾಹರಣೆಯೇತಕ್ಕೆ ? ಇಲ್ಲಿಯ ಈ ಕಾಶೀ ದುಡ್ಡಿಗಾಗಿ ಏನು ಬೇಕಾದ್ದನ್ನೂ ಮಾಡುವವಳು ! ಬಡವರೂ ಶ್ರೀಮಂತರೂ ಇಬ್ಬರೂ ಪಾಪ ಮಾಡುವವರೆ ! ಒಬ್ಬರು ದುಡ್ಡಿಲ್ಲವೆಂದು ಮಾಡಿದರೆ, ಮತ್ತೊಬ್ಬರು ದುಡ್ಡು ಹೆಚ್ಚಾಗಿದ್ದ ಮೂಲಕ ಮಾಡುವವರು! ಬಾಪ್ಪಾ ಆವರ ತತ್ತ್ವಜ್ಞಾನದ ಉಪಯೋಗ ಇಲ್ಲಿ ಏನೂ ಆಗುವಂತಿಲ್ಲ ! ಜಗತ್ತಿನಲ್ಲಿಯ ಧನದ ಹಂಚುವಿಕೆಯೇ ಯೋಗ್ಯ ರೀತಿಯಿಂದಾಗಬೇಕು !"

"ಕೂಲಿಕಾರ ವರ್ಗದಲ್ಲಿಯ ದೇವತೆಗಳು ಸೆರೆ–ಸಿಂದಿಗಳನ್ನು ಕುಡಿಯುತ್ತವೆಂದು ನಾನು ಆ ದಿವಸ ಸ್ವಲ್ಪ ಬೇಜಾರಾಗಿಯೇ ಬರೆದೆ. ಆದರೆ ಬಿಳಿಯಂಗಿಯವರಾದರೇನು ? ಒಂದು ಕರಿಯ ಕಲ್ಲಾದರೆ ಮತ್ತೊಂದು ಬಿಳಿಯದು ! ಕರಿಯ ಕಲ್ಲಿನ ಮೇಲಿನ ಗೆರೆಯು ಎದ್ದು ಕಾಣಿಸುವದು ಅಷ್ಟೇ ! ಈ ಬಿಳಿಯಂಗಿಯ ವರ್ಗದ ಕೆಲಸವಿಲ್ಲದ ಹೆಂಗಸರು ಏನು ಮಾಡುತ್ತಾರೆ ನೋಡುತ್ತಿರಬೇಕು : ಯಥೇಚ್ಛವಾಗಿ ಊಟ ಮಾಡಿಕೊಂಡು ಎರಡನೆಯವರ ನಿಂದೆ ಮಾಡುವದರಲ್ಲಿ ಇಲ್ಲವೆ ಜಗಳಾಡುವುದರಲ್ಲಿಯೇ ಇವರ ಕಾಲವ್ಯಯ. ಇಬ್ಬರಲ್ಲಿ ಜಗಳವನ್ನು ಹೂಡುವರು ; ಸುಳ್ಳು ಮಾತಾಡುವರು ; ನಾಚಿಕೆಯಿಲ್ಲದೆ ಬಾಯಿಗೆ ಬಂದುದನ್ನೆಲ್ಲ ಬೊಗಳುವರು. ಮೊನ್ನಿನ ದಿವಸ ಆ ಬ್ರಾಹ್ಮಣ ಹೆಂಗಸು ತನ್ನ ನೆರೆಮನೆಯವಳ ಕೂಡ ಜಗಳವಾಡುತ್ತಿದ್ದಾಗ್ಗೆ ಕೇಳಬೇಕಾಗಿತ್ತು ಅವಳ ಬಾಯಿಂದ ಹೊರಬೀಳುತ್ತಿರುವ ಮುಕ್ತಾಫಲಗಳನ್ನು ! "ಬಾ ಇತ್ತ ಕಡೆಗೆ ಬಾ, ಕತ್ತಿ ಇಲ್ಲದೆ ಬೋಳಿಸುವೆ ನಿನ್ನ ತಲೆಯನ್ನು." ಹಿಂದೂ ಧರ್ಮ, ಉಚ್ಚಜಾತಿ, ಉಚ್ಚ ಸಂಸ್ಕೃತಿಗಳ ವಿಜಯಪತಾಕೆಯೇ ಅಲ್ಲವೆ ಇದು ? ಭಾಷೆ ಬದಲಾಯಿಸಿದರೆ ಅರ್ಥವೆಲ್ಲಿ ಹೋದೀತು ? ಧನ ಸಂಚಯವಿದ್ದ ಮೂಲಕ ಉಡಿಗೆತೊಡಿಗೆಗಳೂ ತಿಂಡಿತಿನಸುಗಳೂ ಬದಲಾಯಿಸಿದರೂ ಕೂಡ ಬಹುತರವಾಗಿ ಇಡೀ ಬಿಳಿಯಂಗಿಯ ವರ್ಗಕ್ಕೆ ಸೇರಿದವರು, ಒಳಗಿನಿಂದ, ಒಕ್ಕಲಿಗರಗಿಂತ ಒಕ್ಕಲಿಗರಾಗಿರುವರು. ಯಥೇಚ್ಛವಾಗಿ ಸುಗ್ರಾಸಭೋಜನಗಳನ್ನು ತಿಂದು, ಹೆಂಡಿರುಮಕ್ಕಳುಗಳೊಡನೆ ಮೋಜಿನಲ್ಲಿ ಕಾಲ ಕಳೆಯುವರು ! ಮೊದಲನೇ ಎರಡು ಹಸಿವುಗಳು ಮಾತ್ರ ಗೊತ್ತು ! ಮೂರನೆಯದು ಕನಸುಮನಸಿನಲ್ಲಿ ಕೂಡ ಇಲ್ಲ !"

"ಬಾಪ್ಪಾ ಅವರು ಏನು ಹೇಳಿದರೂ, ಮೊದಲನೆಯ ಎರಡು ಹಸಿವುಗಳ ಸಲುವಾಗಿಯೇ ಜನರು ಧಡಪಡಿಸುವರು. ಆ ದಿವಸ ರಾತ್ರಿ ಮುಂಬಯಿಯಲ್ಲಿ, ಮನೆ ಬಿಟ್ಟು ಹೊರಬೀಳುವವರೆಗೆ ನನಗಾದರೂ ಎಲ್ಲಿ ಇತ್ತು ಮೂರನೆಯ ಹಸಿವು ? ರಮಾಕಾಂತನು ಇಷ್ಟೊಂದು ಬುದ್ಧಿವಂತ. ಚಿಕ್ಕಂದಿನಿಂದ ಅವನಿಗೆ ಸುಖದ ಸಾಧನಗಳು ಅನುಕೂಲವಾಗಿದ್ದವು. ಹೀಗಿದ್ದರೂ ಎರಡನೆಯ ಹಸಿವಿನ ಆಚೆಗೆ ಆತನಿಗೆ ಏನೂ ಕಾಣಲಿಲ್ಲ. ಕಾರಖಾನೆಯ ಮಾಲಿಕರಾದ ದಾದಾ ಅವರು ಎರಡನೆಯ ಹಸಿವನ್ನು ಕಿತ್ತೊಗೆದೆನೆಂದು ಹೇಳುವರು. ಆದರೆ ಅವರು ತಿರುಗಿದ್ದ ಮತ್ತೆ ಮೊದಲನೆಯದರ ಕಡೆಗೆ ! ಮನುಷ್ಯ ಸ್ವಭಾವವೇ ಇದು ! ಮೂರನೆಯ ಹಸಿವಿನ ಜ್ಞಾನ ಎಲ್ಲರಿಗೂ ಆಗುವಂತಿಲ್ಲ. ಬಾಪ್ಪಾ ಅವರಲ್ಲಿ ಅದು ಸ್ಪಷ್ಟವಾಗಿ ಇದೆ. ವಿದ್ಯಾಧರನಲ್ಲಿ ಅದು ಅಸ್ಪಷ್ಟವಾಗಿ ಇದೆ."



ವಿದ್ಯಾಧರನು ಮುಖವನ್ನು ಮೇಲಕ್ಕೆತ್ತಿ ಹೊರಗೆ ನೋಡಿದ. ಹೊರಗಿನ, ಹುಣ್ಣಿಮೆಯ ಮಧ್ಯರಾತ್ರಿಯ ಬೆಳದಿಂಗಳು ಅವನಿಗೆ ಮಸುಕಾಗಿ ಕಂಡಿತು. ಅವನು ಕೊನೆಯ ಪುಟವನ್ನು ತೆರೆದು ಓದಲಾರಂಭಿಸಿದ.

"ಮೂರು ಹಸಿವುಗಳು ಮನುಷ್ಯನಲ್ಲಿ ಹುಟ್ಟಬೇಕೆನ್ನುವುದು ಅವನ ದೇಹಧರ್ಮವಾಗಿದೆ. ಆದರೆ ಒಬ್ಬನಿಗೆ ಆದ ಯಾವುದೇ ಹಸಿವನ್ನು ಎರಡನೆಯವನ ರಕ್ತಮಾಂಸಗಳಿಂದ ಶಾಂತಪಡಿಸುವುದರಲ್ಲಿ ಮಾನವತೆಯಿಲ್ಲ. ಇಂದು ಜಗತ್ತಿನಲ್ಲಿ ನಿಜವಾದ ಮಾನವರು ತೀರ ವಿರಳ. ನಾಲ್ಕೆಂಟು ಜನ ಮಾನವ ದೇಹಧಾರಿಗಳಾದ ರಾಕ್ಷಸರು, ಈ ರಾಕ್ಷಸರ ಸಲುವಾಗಿ ಶ್ರಮಪಡುವ ಕೋಟ್ಯಾವಧಿ ಮನುಷ್ಯ ದೇಹವನ್ನು ಧರಿಸಿದ ಪಶುಗಳು, ಇವರಿಂದಲೇ ಜಗ ತುಂಬಿಹೋಗಿದೆ. ಬಾಪ್ಪಾ ಅವರಂಥವರು ಈ ರಾಕ್ಷಸರನ್ನು ದೇವತೆಗಳನ್ನಾಗಿ ಮಾಡಲೆಳೆಸುವರು. ರಾಕ್ಷಸರು ದೇವತೆಗಳಾಗುವದು ಶಕ್ಯವಿದ್ದರೆ, ಪ್ರಹ್ಲಾದನ ಕಾಲದಲ್ಲಿ ನರಸಿಂಗನಿಗೆ ಅವತಾರವನ್ನೇತಕ್ಕೆ ಧರಿಸಬೇಕಾಗುತ್ತಿತ್ತು ?"

ಈ ಪಶುಕೋಟಿಯನ್ನು ತಳಮಳಿಸುತ್ತ ಹಾಗೆಯೇ ಇಟ್ಟು ರಾಕ್ಷಸರು ಅವರ ಬದುಕಿನಮೇಲೆ ತಮ್ಮ ವಿಲಾಸವನ್ನು ಸಾಗಿಸಿರುವರು !

**ಮೊದಲನೆಯ ಹಸಿವು**–ಮಧ್ಯಾಹ್ನ ಕಾಲದ್ದು ! ಭೂಮಿಯೊಳಗಿಂದ ಅನ್ನವನ್ನ ಬೆಳೆಯಿಸುವವರಿಗೆ ಹೊಟ್ಟೆ ತುಂಬ ತಿನ್ನಲಿಕ್ಕೆ ಸಿಗುವುದಿಲ್ಲವಾದರೆ, ಮೆತ್ತಗಿನ ಗಾದಿಗಳ ಮೇಲೆ ಹೊರಳಾಡುವವರಿಗೆ, ಸುಗ್ರಾಸಭೋಜನವನ್ನು ಸೇವಿಸಿದ್ದನ್ನು ಪಚನಮಾಡಿಕೊಳ್ಳಲಿಕ್ಕೆ ಔಷಧ ತೆಗೆದುಕೊಳ್ಳಬೇಕಾಗಹತ್ತಿದೆ.

**ಎರಡನೆಯ ಹಸಿವು**–ಸಂಪತ್ತಿನ ಬಲದಮೇಲಿಂದ ಸುರೂಪ ಗಂಡಹೆಂಡಿರನ್ನು ಸಂಪಾದಿಸುವುದು ಶಕ್ಯವಿದೆ. ಬೇಕಾದಂಥ ವ್ಯಭಿಚಾರದ ಮೇಲೆ ಹೊದಿಕೆಯನ್ನು ಹಾಕಲಿಕ್ಕೂ ಬರುವದು.

**ಮೂರನೆಯ ಹಸಿವು**–ಶುದ್ಧ ಸ್ವರೂಪದಲ್ಲಿ ಇದು ಎಲ್ಲಿ ಸಿಗುವದುಂಟು? ದೇವಿಯನ್ನು ಸಂತೈಸುವುದರ ಸಲುವಾಗಿ ಅವಳಿಗೆ ಕೋಣವನ್ನು ಬಲಿ ಕೊಡುವದು! ಧರ್ಮವೆಂದರೇನು? ಹೃದಯದ ವಿಕಾಸವಲ್ಲ, ಹಣವನ್ನು ಕೊಟ್ಟು ಕೊಂಡುಕೊಳ್ಳಬಹುದಾದ ಪುಣ್ಯ !

ಕೋಟ್ಯಾವಧಿ ಜನರು ಇಂದಿಗೆ, ಮೊದಲನೆಯ ಹಸಿವಿನಿಂದಲೇ ವ್ಯಾಕುಲರಾಗಿ, ಮೂಕರಾಗಿ ತಳಮಳಿಸುತ್ತಿರುವಾಗ, ಯಾರಿಗೆ ಬೇಕು ರಮಾಕಾಂತನ ಎರಡನೇ ಹಸಿವು ?

ಬಾಪ್ಪಾ ಅವರ ಮೂರನೆಯ ಹಸಿವಾದರೂ ಯಾರಿಗೆ ಬೇಕಾಗಿದೆ ?

“ದೇವರೇ, ಬಡಬಗ್ಗರ ಮೊದಲನೆಯ ಹಸಿವನ್ನು ತೃಪ್ತಿಪಡಿಸುವುದರಲ್ಲಿಯೇ ನನಗೆ ಮರಣ ಬಂದರೂ ನಾನು ಅದನ್ನು ಆನಂದದಿಂದ ಎದುರಿಸುವೆ ! ಜೀವನ ! ಕೋಟ್ಯಾವಧಿ ಜೀವನಗಳ ಸಲುವಾಗಿ ಒಬ್ಬರ ಮರಣ ! ಮರಣವೆಂತಹುದು ? ಚಿರಂಜೀವನವೇ ಅದು!”

ಬೆಳಗು ಮುಂಜಾನೆಯವರೆಗೂ ವಿದ್ಯಾಧರನಿಗೆ ನಿದ್ರೆ ಬರಲಿಲ್ಲ. ವತ್ಸಲೆಯ ಅನುಭವಾಗ್ನಿಯ ಆ ಕಿಡಿಗಳು ಪ್ರತಿಕ್ಷಣಕ್ಕೂ ಅವನ ಮನಸ್ಸಿಗೆ ಚರ್ರನೆ ಹತ್ತುತ್ತಿದ್ದವು. ಕೇವಲ ಇಪ್ಪತ್ತು ವರ್ಷದ ಬಾಲೆ ! ಇಂಥ ತೇಜಸ್ವಿಯಾದ ಬಾಲೆಯು ಪತ್ನಿಯಾಗಿರುವುದಕ್ಕಿಂತ ತಂಗಿಯಾಗಿರುವದೇ ಒಳಿತೆಂಬ ವಿಚಾರವು ಆತನ ಮನಸ್ಸಿನಲ್ಲಿ ಬಾರದೇ ಇರಲಿಲ್ಲ.

“ವಿದ್ಯಾಧರ, ವಿದ್ಯಾಧರ” ಎಂದು ಯಾರೋ ಕರೆದದ್ದಕ್ಕೆ ಅವನು ಒಮ್ಮೆಲೆ ಎಚ್ಚತ್ತನು. ಕಿಟಕಿಯೊಳಗಿಂದ ಒಳಗೆ ಬಿಸಿಲು ಬಂದದ್ದು ಆತನಿಗೆ ಕಣ್ಣು ತೆರೆಯುವ ಮೊದಲೇ ಗೊತ್ತಾಯಿತು.

“ಯಾರವರು–ಕೃಷ್ಣಾ ?” ಅವನು ಕೇಳಿದ.

“ಕೃಷ್ಣೆಯ ಹೊರತಾಗಿ ಎರಡನೆಯದೇನೂ ವಿಚಾರವೇ ಇಲ್ಲವೆ ?” ಶಬ್ದಗಳ ಹಿಂದಿನಿಂದ ಕಿಡಿಗೇಡಿ ನಗೆಯೂ ಹೊರಬಿದ್ದಿತು.

ವಿದ್ಯಾಧರನು ಬಾಗಿಲ ತೆರೆದು ನೋಡಿದ. ಸುಲೋಚನೆ ! ಇಷ್ಟೊಂದು ಮುಂಜಾವಿನಲ್ಲಿ ಇವಳು ಬಂದದ್ದಾದರೂ ಏಕೆ ? ಆತನಿಗೆ ರಾತ್ರಿಯ ವಿಚಾರ ಮತ್ತೆ ಮನಸ್ಸಿನಲ್ಲಿ ಬಂದಿತು : ಕೃಷ್ಣೆಯು ತಂಗಿಯಾಗಿರುವದೇ ಒಳ್ಳೆಯದು. ಹಾಗಾದರೆ–?

“ಹೋದಳೋ ಒಮ್ಮೆ ಕೃಷ್ಣೆಯು ತಲೆಯೊಳಗಿನಿಂದ ?” ಸುಲೋಚನೆ ಕೇಳಿದಳು.

“ಉಂ ಹುಂ.”

“ಹಾಗಾದರೆ ನಾನು ಬಂದಂತೆಯೇ ತಿರುಗಿ ಹೊರಟೆ !”

“ನಿನಗೆ ನನ್ನ ತಲೆಯನ್ನು ತೆಗೆದುಕೊಂಡು ಮಾಡುವದೇನು ?”

“ನನಗೆ ಕೂಡಲಿಕ್ಕೆ ಸ್ಥಳ ಬೇಡವೆ ?”

“ಎಂದರೆ, ನೀನು ನನ್ನ ತಲೆಯ ಮೇಲೆ ಕೂಡುವವಳೇ ?”

“ಇದೊಳ್ಳೆಯದು. ತಲೆಯ ಒಳಕ್ಕೆ ಕೃಷ್ಣೆ ಮತ್ತೆ ನಾನು ಅದರ ಮೇಲೆ–!”

“ಹಾಗಾದ ಮೇಲೆ ತಲೆಯೇನೂ ತನ್ನ ಜಾಗದಲ್ಲಿ ಉಳಿಯುವಂತಿಲ್ಲ !”

“ಅಂದರೆ ನನಗೆ ಎಲ್ಲಿ ಕೊಡುವಿರಿ ಸ್ಥಳವನ್ನು ?”

“ಎರಡನೇ ಸ್ಥಳವಿದೆ. ಕೆಳಗಿನ ಮಜಲು !”

“ಅದಾದರೂ ತೆರವು ಇದೆಯೋ ಅಥವಾ ಇನ್ನೊಬ್ಬರು ಯಾರಾದರೂ ?–”

“ಛೇ ! ತೀರ ತೆರವಿದೆ ! ಅದರ ಮೇಲೆ ಹಲಗೆ ಕೂಡ ಬರೆದಿದೆ : ‘ಬಾಡಿಗೆಯಿಂದ ಕೊಡತಕ್ಕದ್ದು’ ಎಂದು.”

“ಬಾಡಿಗೆಯಿಂದೋ !–”



“ಅಲ್ಲ ಅಲ್ಲ, ಇಷ್ಟರಲ್ಲಿಯೇ ತಪ್ಪಿದೆ ! ಯಾವ ಕಟ್ಟೂ ಇಲ್ಲದೆ ಯಾವತ್ ಚಂದ್ರದಿವಾಕರೆ, ಪುಕ್ಕಟೆಯಾಗಿ ಕೊಡತಕ್ಕದ್ದು !”

## ೧೭
## ಇಬ್ಬರು ಮಾಂತ್ರಿಕರು

ಜಾತ್ರೆಗೆ ಹೋಗಿ ಜಾಗರಣೆಯಾಗಿದ್ದರೂ ಸುಲೋಚನೆಯು ಮುಂಜಾನೆ ಬೇಗನೆ ಎದ್ದು ಬಂದದ್ದು ವಿದ್ಯಾಧರನ ಕಾಲಿನ ಸಲುವಾಗಿ. ಜಾತ್ರೆಯಲ್ಲಿ ಕೂಡಿದ ಹೆಂಗಸರ ಹರಟೆಯಲ್ಲಿ ಹಾವಿನ ಕಡಿತದ ವಿಷಯವೂ ಬಂದುಹೋಯಿತು. ಹಾವು ಕಡಿದವರು ಕಾರವನ್ನು ತಿನ್ನಕೂಡದು, ದೀಪವನ್ನು ನೋಡಕೂಡದು, ಇಂಥ ಸಾಮಾನ್ಯ ನಿಯಮಗಳನ್ನು ಮೊದಲು ಮಾಡಿಕೊಂಡು–ಯಾವ ಯಾವ ಪ್ರಸಂಗದಲ್ಲಿ ಶರೀರದಲ್ಲಿ ಸೇರಿಕೊಂಡ ವಿಷವು ಹೆಚ್ಚಾಗಿ ಪರಿಣಾಮಕಾರಿಯಾಗುವದು, ಇತ್ಯಾದಿ ಸಿದ್ಧಾಂತಗಳವರೆಗೂ ಹೋಯಿತು. ಹಾವು ಕಡಿದು ಗುಣಹೊಂದಿ ತಿಂಗಳನಂತರ, ರಕ್ತವನ್ನು ಕಾರಿ ಸತ್ತ ಒಬ್ಬ ಮನುಷ್ಯನ ಕಥೆಯನ್ನು ಒಬ್ಬಳು ಹೇಳಿದಳು. ಭಯಾನಕ ರಸದ ಕಥೆಗಳೆಂದರೆ ಸಾಂಸರ್ಗಿಕ ರೋಗಗಳಿದ್ದಂತೆ. ಕೂಡಲೆ ಮತ್ತೊಬ್ಬಳು : ಹಾವು ಕಡಿದು ಕೂದಲುಗಳಿದ್ದಲ್ಲೆಲ್ಲ ರಕ್ತ ಹೊರಗೆ ಹೋಗಿ ಸತ್ತದ್ದನ್ನು ವರ್ಣಿಸಿದಳು. ಸ್ವಲ್ಪವಾದರೂ ವಿಷವು ಶರೀರದಲ್ಲಿ ಉಳಿಯುವ ಹೊರತು ಕಾಲು ಬಾಯಲಾರದೆಂದು ಒಬ್ಬ ಮುದುಕಿ ಅಭಿಪ್ರಾಯಪಟ್ಟಳು. ಇದನ್ನೆಲ್ಲ ಕೇಳಿ ಸುಲೋಚನೆಯು ಬಹಳವಾಗಿ ಅಂಜಿಕೊಂಡಳು. ವಿದ್ಯಾಧರನ ಮೈಯೊಳಗಿನ ವಿಷವು ಹೀಗೆಯೇ ತಿರುಗಿ ಬಂದರೆ ? ಇಂಥ ತೀವ್ರ ಬುದ್ಧಿಯ ತರುಣನು ಇಲ್ಲವಾಗುವುದೆಂದರೆ ದೇಶಕ್ಕೆ ಎಂಥ ಹಾನಿ ! ಇಷ್ಟರಲ್ಲಿ ಯಾರೋ ಅವಳ ಕಿವಿಯಲ್ಲಿ ಗುಣುಗುಟ್ಟಿದರು : ದೇಶದ ಚಿಂತೆಯ ಸೋಗು ಯಾತಕ್ಕೆ ? ಅದು ನಿನ್ನ ಸ್ವತಃದ ಹಾನಿಯೆಂದೇ ನೀನು ಅಸ್ವಸ್ಥಳಾಗಿರುವಿಯಲ್ಲವೆ? ಎಂದು.

ಸಂಭಾಷಣದ ಸಮುದ್ರಮಂಥನದೊಳಗಿಂದ ಇಷ್ಟೊತ್ತಿನವರೆಗೆ ಹಾಲಾಹಲ ಮತ್ತು ಬಾರಕೋಲಿನಂಥ ರತ್ನಗಳೇ ಹೊರಬಿದ್ದವು. ಆದರೆ ಯೋಗಾಯೋಗದಿಂದ ಅಮೃತವೂ ಹೊರಬಿದ್ದು ಸುಲೋಚನೆಯ ಮನಸ್ಸು ಶಾಂತವಾಯಿತು. ಕಾಮಾಪುರದಿಂದ ಹದಿನೈದು ಮೈಲಿಗಳ ಮೇಲೆ ದೊಡ್ಡ ದೊಡ್ಡ ನಾಗರಹಾವುಗಳ ಮೇಲೆಯೂ ಮಂತ್ರ ನಡೆಸುವ ಮಾಂತ್ರಿಕನಿರುವನೆಂದು ತಿಳಿದುಬಂದಿತ್ತು. ಕೂಡಲೆ ಅವನ ಮಂತ್ರ ಪ್ರಭಾವದಿಂದ ವಿಷವಿಳಿದಿದ್ದ ಜನರ ಕಥೆಗಳು ಮೊದಲಾದವು. ಸುಲೋಚನೆಯು ವಿದ್ಯಾಧರರನ್ನು ಅತ್ತಕಡೆಗೆ ಕರೆದುಕೊಂಡು ಹೋಗುವ ನಿಶ್ಚಯ ಮಾಡಿದಳು. ದಾದಾ ಅವರೂ ಅನುಮತಿಯನ್ನಿತ್ತರು. ಆ ಮಾಂತ್ರಿಕನ ಊರಿನವರೆಗೆ ಬಸ್ಸು ಹೋಗುತ್ತಿದ್ದಿಲ್ಲ. ಆ ಊರಿನಿಂದ ೨–೩ ಮೈಲುಗಳ ಅಂತರದಲ್ಲಿಯ ಒಂದು ಸವಳು ನೀರಿನ ನದಿಯ ಹತ್ತರ ಬಸ್ಸು ನಿಲ್ಲುವದು. ಅಲ್ಲಿಂದ ನಾವಿನಲ್ಲಿ ಕುಳಿತು ನದಿಯೊಳಗಿನಿಂದಲೇ ಆ ಊರಿಗೆ ಹೋಗುವದು ಶಕ್ಯವಿದ್ದುದರಿಂದ ವಿದ್ಯಾಧರನ ನೋವಾದ

ಕಾಲಿಗೆ ಯಾವ ತೊಂದರೆಯೂ ಆಗುವ ಸಂಭವವಿರಲಿಲ್ಲ.

ಮಂತ್ರದ ಮೇಲೆ ವಿದ್ಯಾಧರನದು ಎಳ್ಳಷ್ಟೂ ವಿಶ್ವಾಸವಿರಲಿಲ್ಲ. ಆದರೆ ಮಂತ್ರಕ್ಕಿಂತಲೂ ಸುಲೋಚನೆಯ ಮಧುರ ಶಬ್ದಗಳೇ ಅವನ ಮನವೊಲಿಸಿದವು. ಆ ಮಾಂತ್ರಿಕನ ಮೋರೆಯನ್ನು ನೋಡುವ ಉತ್ಸುಕತೆಯು ಅವನಲ್ಲಿರಲಿಲ್ಲ. ಆದರೆ ಸುಲೋಚನೆಯ ಸಹವಾಸದಲ್ಲಿ ನಾವಿನಲ್ಲಿ ಕುಳಿತು ಪ್ರವಾಸ ಮಾಡುವ ಕಲ್ಪನೆಯು ಮಾತ್ರ ಅವನ ಮನಸ್ಸಿಗೆ ಮೋಹಿನೀ ಮಂತ್ರವನ್ನು ಹಾಕಿತು. ಹೆಚ್ಚಾಗಿ ಬೇಕು ಬೇಡವೆನ್ನದೆ, ವಿದ್ಯಾಧರನು ಸುಲೋಚನೆಯ ಕೂಡ ಸಾಯಂಕಾಲ ಹೊರಡುವುದಕ್ಕೆ ಒಪ್ಪಿದ.

ವಿದ್ಯಾಧರನೂ ಸುಲೋಚನೆಯೂ ನಾವಿನಲ್ಲಿ ಕುಳಿತಾಗ ಸುಮಾರು ಆರು ಗಂಟೆಯಾಗಿರಬಹುದು. ಮಧ್ಯಾಹ್ನದ ಬಿಸಿಲಿನಲ್ಲಿ ತಂದೆಯಂತೆ ಭಾಸವಾಗುವ ಹಗಲು, ಸಂಜೆಯ ಸೌಮ್ಯತೆಯಲ್ಲಿ ಮುತ್ತಜ್ಜನಂತೆ ಭಾಸವಾಗುತ್ತಿತ್ತು. ನಾವೆ ಮುಂದಕ್ಕೆ ಸಾಗಿತು. ಅದರ ಮುಂದೋಟವು ಒಬ್ಬ ನರ್ತಕಿಯಂತೆ ಸುಂದರವಾಗಿತ್ತು. ಹುಟ್ಟುಗಳ ತಾಳದಲ್ಲಿ, ಖಳ ಖಳಿಸುವ ಜಲತರಂಗಗಳ ಗೆಜ್ಜೆಗಳನ್ನು ಕಾಲದಲ್ಲಿ ಕಟ್ಟಿಕೊಂಡು ಕುಣಿಯುವಂತಿತ್ತು. ಎಡಕ್ಕಾಗಲಿ ಬಲಕ್ಕಾಗಲಿ ಸರಕ್ಕನೆ ಹೊರಳಿದಾಗ, ನರ್ತಕಿಯ ಮೋಹಕವಾದ ಒಲವಿಗಿಂತಲೂ ಆಕರ್ಷಕವಾಗಿ ಭಾಸವಾಗುತ್ತಿತ್ತು. ಕನ್ನಡಿಯೊಳಗಿನ ತನ್ನ ಪ್ರತಿಬಿಂಬದೊಡನೆಯೆ ಆಟವಾಡುವ ಬೆಕ್ಕಿನ ಮರಿಯಂತೆ, ನದಿಯ ಎರಡೂ ದಡದಲ್ಲಿಯ ಗಿಡಗಂಟಿಯ ಗುಂಪುಗಳು, ನೀರಿನಲ್ಲಿಯ ತಮ್ಮ ಪ್ರತಿಬಿಂಬಗಳೊಡನೆ ಆಡುತ್ತಿರುವಂತೆ ತೋರುತ್ತಿತ್ತು. ಮೀನುಗಳ ಸಲುವಾಗಿ ಕಾಯ್ದು ಕೂತಿದ್ದ ಬಕಪಕ್ಷಿಗಳು, ಇನ್ನೆಷ್ಟೋ ತೆರದ ಪಕ್ಷಿಗಳು ಹುಟ್ಟುಗಳ ಸಪ್ಪಳ ಕೇಳಿದೊಡನೆಯೆ ದೂರ ದೂರ ಹಾರಿಹೋಗುತ್ತಿದ್ದವು. ಅವುಗಳನ್ನು ಹಾರುತ್ತಿರುವಾಗಾಗಲಿ, ಸುಮ್ಮನೆ ಧ್ಯಾನಸ್ಥರಂತೆ ಕೂತಾಗಲಾಗಲಿ ನೋಡುವುದರಲ್ಲಿ ಏನೋ ಒಂದು ಆನಂದವಿತ್ತು. ತಾಯಿಯ ಸೆರಗನ್ನು ಹಿಡಿದುಕೊಂಡು ಚಿಕ್ಕ ಮಕ್ಕಳು ಚಿನ್ನಾಟವಾಡುತ್ತಿರುವಂತೆ, ತೆರೆಗಳು ದಂಡೆಯ ಮೇಲೆ ನರ್ತಿಸುತ್ತಿದ್ದವು. ಆಗಲೇ ಆಕಾಶದಲ್ಲಿ ಬಣ್ಣವೇರುತ್ತಿದ್ದ ಮೇಘಗಳಲ್ಲಿಯ ಯಾವುದರದೊಂದಾದರೂ ಅಲ್ಲಿ ಇಲ್ಲಿ ಮಸಕುಮಸುಕಾದ ಪ್ರತಿಬಿಂಬವು ನೀರಲ್ಲಿ ಕಾಣುವದು. ಹೋಗುವ ಮುಂದೆ ನಾವೆಯು ನದಿಯ ಮಧ್ಯದಲ್ಲಿಯ ಒಂದು ದೊಡ್ಡ ಮರವನ್ನು ಸುತ್ತಿಕೊಂಡು ಹೋಯಿತು. ಆ ಗಿಡದ ಕಡೆಗೆ ವಿದ್ಯಾಧರ ಸುಲೋಚನೆಯರ ದೃಷ್ಟಿ ಒಮ್ಮೆಲೆ ಬಿದ್ದಿತು. ಗಿಡದ ಪ್ರತಿಬಿಂಬವು ನೀರಿನಲ್ಲಿ, ನಿಜವಾದ ಗಿಡ ಯಾವುದು, ಮೇಲಿನದೋ ಕೆಳಗಿನದೋ, ಎಂಬ ಶಂಕೆಯನ್ನುಂಟುಮಾಡುವಷ್ಟು ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ವಿದ್ಯಾಧರ ಸುಲೋಚನೆಯರಿಬ್ಬರೂ ಆ ದೃಶ್ಯವನ್ನು ನೋಡಿ ನಸುನಕ್ಕರು.

ಮಾಂತ್ರಿಕನು ಮಂತ್ರವಿಧಿಯನ್ನು ಯಥಾಸಾಂಗವಾಗಿ ನಡೆಸಿದ. ಯಾವುದೋ ಒಂದು ತೊಪ್ಪಲು ತಂದೂ, ಮಂತ್ರವನ್ನು ಪುಟುಪುಟಿಸುತ್ತ ವಿದ್ಯಾಧರನ ಮೈಮೇಲೆ ಅದನ್ನು ಕೆಳಗೆ ಮೇಲೆ ಎರಡು ಮೂರು ಸಾರೆ ಹಾಯಿಸಿದ. ಆಮೇಲೆ ಒಂದು ಬೇರನ್ನು ಕೊಟ್ಟು ಅದನ್ನು ನೀರಿನಲ್ಲಿ ತೇದು ಕುಡಿಯ ಹೇಳಿದ. ಹೀಗೆ ಏಳು ದಿವಸ ಮಾಡಿದರೆ ಯಾವ ವಿಷವೂ



ಏರಲಾರದೆಂಬ ಆಶ್ವಾಸವನ್ನೂ ಕೊಟ್ಟ. ಆ ದಿವಸ ರಾತ್ರಿ ವಿದ್ಯಾಧರ ಮತ್ತು ಸುಲೋಚನೆ, ಅಲ್ಲಿಯೇ ದಾದಾ ಅವರ ಗುರುತಿನ ಒಬ್ಬ ವ್ಯಾಪಾರಸ್ಥನ ಮನೆಯಲ್ಲಿ ಉಳಿದುಕೊಂಡರು. ೧೨ ಹೊಡೆದು ಹೋದರೂ ವಿದ್ಯಾಧರನಿಗೆ ನಿದ್ರೆ ಹತ್ತಲೊಲ್ಲದು ! ನಿನ್ನಿನ ರಾತ್ರಿ ಮತ್ತು ಇವತ್ತಿನ ರಾತ್ರಿ ! ಇವೆರಡರೊಳಗಿನ ವಿಲಕ್ಷಣ ವಿರೋಧವು ಅವನ ಮನಸ್ಸಿನೆದುರಿನಲ್ಲಿ ನಿಂತು ಆಶ್ಚರ್ಯವನ್ನುಂಟುಮಾಡುತ್ತಿತ್ತು.

ಸುಲೋಚನೆ–ಮೊದಲನೆ ಹಸಿವಿಗೂ ಅವಳಿಗೂ ಸಂಬಂಧವೇನು ! ಆ ಎರಡನೆಯ ಹಸಿವು ! ಮತ್ತು ಮತ್ತು–ಮತ್ತು–ಮೂರನೆಯದು ? ಮೂರನೆ ಹಸಿವು ತನ್ನಲ್ಲಿ ಹುಟ್ಟದಷ್ಟು ತಾನು ಕಲ್ಲೆದೆಯವನೇ ? ತಾನು ಅಂಥವನಾಗಿದ್ದರೆ ೩೦೦ ರೂಪಾಯಿಯ ಕೆಲಸವನ್ನು ಬಿಟ್ಟು ಬರುತ್ತಿದ್ದೆನೆಲ್ಲಿ ? ಜಗತ್ತಿನಲ್ಲಿ ಮೊದಲನೇ ಹಸಿವಿನಿಂದ ಬಳಲುತ್ತಿರುವವರಿಗೆ ಸಹಾಯ ಮಾಡುವದೇ ತನ್ನ ಮೂರನೆಯ ಹಸಿವು. ಸುಲೋಚನೆಯಂಥ ಹೆಂಡತಿ ಸಿಕ್ಕರೆ–ಸಿಕ್ಕರೆ ಮಾತ್ರ–ವತ್ಸಲೆಯು ಜಗತ್ತಿನಲ್ಲಿ ಆಗಲಾರದೆನ್ನುವ ಸಂಗಮವು ತನ್ನಲ್ಲಿ ಆಗಬಹುದು.

ಆತನು ಹೊರಗೆ ಬೆಳದಿಂಗಳ ಕಡೆಗೆ ನೋಡಿದ. ಜಾಜಿಮಲ್ಲಿಗೆಗಳ ಮಧುರ ಸುವಾಸವೇ ವಾತಾವರಣದಲ್ಲಿ ಮೂರ್ತಿಮತ್ತಾಗಿ ನಿಂತಂತೆ ಕಂಡಿತು ಅವನಿಗೆ.

ಮರುದಿವಸ ಮುಂಜಾನೆ ಎದ್ದಾಗ ವಿದ್ಯಾಧರನು ಅತ್ಯಂತ ಉಲ್ಲಸಿತ ವೃತ್ತಿಯಲ್ಲಿದ್ದನು. ಮೊದಲನೆಯ ದಿವಸಕಿಂತಲೂ ಆತನಿಗೆ ಕಾಲು ಹಗುರಾಗಿದ್ದಂತೆ ಅನಿಸಿತು. ನಾವನ್ನು ನಡಿಸುವವನಿಗೂ ಕೂಡ ಅದು ತಿಳಿಯಿತೋ ಏನೋ ? ಅವನು ಅಂದ : "ನೋಡಿದಿರಲ್ಲ ರಾಯರೆs ? ಮಂತ್ರದ ಗುಣಾ ಅಂದರ ಹೀಂಗ ಇರತ್ತೈತಿ !"

ಸುಲೋಚನೆಯ ಕಡೆಗೆ ನೋಡಿ ವಿದ್ಯಾಧರನು "ಹೌದಪ್ಪ ! ನನ್ನೆದುರಿನಲ್ಲಿ ಕೂತ ಈ ಮಾಂತ್ರಿಕನ ಗುಣವಿದೆ ಇದೆಲ್ಲ !" ಎನ್ನುವಂತೆ ನಕ್ಕ.

ಹುಟ್ಟುಗಳನ್ನು ನೀರಿನಲ್ಲಿ ಹಾಕುತ್ತ ಹಾಕುತ್ತ ನಾವಿಕನು ಒಂದು ನಿಶ್ವಾಸ ಬಿಟ್ಟು ಉದ್ಗಾರ ತೆಗೆದ : "ಏನ ಕಲಿಯುಗಾ ಬಂತರಿ ಅಪ್ಪಾ–"

ಎಲ್ಲ ಸನಾತನಿಗಳ ಆತ್ಮಗಳು ಆ ನಾವಿಗನಲ್ಲಿ ಸೇರಿಕೊಂಡಂತೆ ಅವನು ಮಾತನಾಡುವುದನ್ನು ಕಂಡು ವಿದ್ಯಾಧರ ಕೇಳಿದ : "ಏನಾಯಿತಪ್ಪಾ ನಿನಗೆ ?"

"ಮಂತ್ರದ್ದೂ ಮತ್ತ ದೇವರದೂ ಹೀಂಗ ಅನುಭವ ಬರತೈತಿ ನೋಡಿರಿ ! ಆದರೂ ಮಂದಿ–"

"ಮಂದಿ ಏನುಮಾಡಿದರಪ್ಪಾ ?"

"ನಿನ್ನಿನ ದಿವಸ ಕಾಮಾಪುರದಾಗ ನೋಡಲಿಲ್ಲs ಆ ಕ್ವಾಣಾನs ಕಡಿಲಿಲ್ಲಾ !"

"ದೇವರು ಹುಟ್ಟಿಸಿದ ಜೀವ ಉಳೀತು ಬಿಡಪ್ಪಾ !"

"ಆದರೆ ಏನ ರಾಯರs ! ಜನಾ ಪಟಾಪಟಾ ಸಾಯತಾರರೀ ದೇವಿ ಸಿಟ್ಟಾ–"

"ಸಿಟ್ಟಿಗೆದ್ದು ಏನುಮಾಡತಾಳೆ ದೇವಿ ?"

"ಏನ ಮಾಡತಾಳಂತೀರಾ ? ಕಾಮಾಪುರದಾಗ, ರಾಯರs, ಆ ಕೆರೀ ದಂಡ್ಯಾಗಿನ

ಮನಿ ಒಳಾಕ, ಅಳ್ಳ ಹುರದ್ಹಾಂಗ ಏಳಿಕ್ಕ ಹತ್ಯಾವರಿ ಮೈಲಿ. ದೇವೀ ಸಿಟ್ಟಂತಂದ್ರ–"

ಆತನ ಅಂಧಶ್ರದ್ಧೆಯ ಉದ್ಗಾರಗಳನ್ನು ಕೇಳಿ ವಿದ್ಯಾಧರನ ಮನಸ್ಸು ಕ್ಷಣಮಾತ್ರ ವಿಷಣ್ಣವಾಯಿತು. ಆದರೆ ಅಲ್ಲಿಯ ಆ ನೋಟದ ರಮ್ಯತೆ, ಮೂರ್ತಿಮಂತ ಉದಾಸೀನತೆಯನ್ನೇ ಉಲ್ಲಾಸದ ಕೈಯಲ್ಲಿ ಕೈಹಾಕಿಸಿ ಕುಣಿಸುವಂತಹದಾಗಿತ್ತು. ಹೊಂಬಣ್ಣದ ಬತ್ತದ ಗದ್ದೆಗಳ ಮೇಲೆ ವಾಯುಲಹರಿಯು ಹಾಯ್ದಾಗಿನ ಶೋಭೆಯಿಂದ ನೀರಿನ ಮೇಲೆ ತೆರೆಗಳು ಎದ್ದು ಮತ್ತೆ ಲೀನವಾಗುವವು. ಆಕಾಶದಲ್ಲಿಯ ವಿವಿಧ ಬಣ್ಣಗಳ ಪ್ರತಿಬಿಂಬದಿಂದ ನದಿಯ ಪಾತ್ರವು ಒಂದು ರತ್ನಗಂಬಳಿಯಂತೆ ತೋರುತ್ತಿತ್ತು. ಒಂದು ಕಡೆಗೆ ೭–೮ ವರ್ಷದ ದನಕಾಯುವ ಹುಡುಗ "ಜಾಕೇಮಥುರಾ" ಹಾಡನ್ನು ಹಾಡುತ್ತಿದ್ದ. ಮತ್ತೊಂದು ಕಡೆಗೆ, ಸರ್ಕಸಿನಲ್ಲಿಯ ನಿಪುಣ ಆಟಗಾರನಂತೆ ಒಬ್ಬ ಕ್ರಿಶ್ಚನ್ನನು ತೆಂಗಿನಮರವನ್ನು ಎಳೆನೀರಿನ ಸಲುವಾಗಿ ಏರುತ್ತಿದ್ದ. ಮತ್ತೊಂದು ಕಡೆಗೆ ಹೊಲದಲ್ಲಿ ಮಣ್ಣು ಹೆಂಟೆಗಳನ್ನು ಒಡೆಯುತ್ತ ಕುತೂಹಲದಿಂದ ನಾವಿನ ಕಡೆಗೆ ಒಬ್ಬ ಒಕ್ಕಲಿಗ ಹೆಂಗಸು ನೋಡುತ್ತಿದ್ದಳು. ಇಂಥ ದೃಶ್ಯಗಳೇ ನದಿಯ ದಡದ ಮೇಲೆ ಕಾಣುತ್ತಿದ್ದವು. ಎದುರಿನಲ್ಲಿ ಕುಳಿತ ಸುಲೋಚನೆಯ ಕಡೆಗೆ ನೋಡಿದಾಗ, ಅವಳು ಸುತ್ತಲಿನ ಸೃಷ್ಟಿ ಸೌಂದರ್ಯದ ಇನ್ನೊಂದು ಮೂರ್ತಿಯಂತೆಯೇ ಕಾಣುವಳೆಂಬ ವಿಚಾರವು ವಿದ್ಯಾಧರನ ಮನಸ್ಸಿನಲ್ಲಿ ಬಾರದಿರಲಿಲ್ಲ. ನೀರಿನಲ್ಲಿಯ ತೆರೆಗಳು–ಅವಳ ಕೂದಲುಗಳು–ಅವುಗಳ ಕುಣಿದಾಟವು ಅವರ್ಣನೀಯವೇ ಇತ್ತು. ಎರಡೂ ಮಗ್ಗಲಿನ ಸೃಷ್ಟಿ ಸೌಂದರ್ಯವನ್ನು ನೋಡುವುದಕ್ಕಾಗಿ ಅವಳ ಚಲನವಲನಗಳು ನಾವಿನ ಗತಿಯಂತೆಯೇ ಆಹ್ಲಾದಕರವಾಗಿದ್ದವು. ವಿದ್ಯಾಧರನ ಮನಸ್ಸಿನಲ್ಲಿ ವಿಚಾರ ಬಂದಿತು–ಈ ಕ್ಷಣಕ್ಕೆ ನಾವಿಗನು ಇಲ್ಲಿ ಇರದಿದ್ದರೆ ?–

"ನಿನಗೆ ಹುಟ್ಟು ಕಡಿಯಲಿಕ್ಕೆ ಕಲಿಸಲೆ ?" ಎಂದು ತಾನು ಕೇಳುತ್ತಿದ್ದ.

ಅವಳು ತನ್ನ ಮೌನದಿಂದಲೇ ಸಮ್ಮತಿಯನ್ನು ಕೊಡುತ್ತಿದ್ದಳು.

ಆದರೆ ಅವಳ ಕೈಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡ ಅನಂತರ, ಆ ಕಟ್ಟಿಗೆಯ ಹುಟ್ಟುಗಳ ಸ್ಪರ್ಶ ಎಷ್ಟು ಕಠಿಣವಾಗಿ ಅನಿಸುತ್ತಿತ್ತು–

ಅವಳು ಅನ್ನುತ್ತಿದ್ದಳು : "ನಾವನ್ನು ಮುಳುಗಿಸುವ ವಿಚಾರವಿದೆಯೇ ?" ಎಂದು.

ನಾವು ದಡವನ್ನು ಮುಟ್ಟಿತು. ಅದು ದಡದಲ್ಲಿ ಹೋಗಿ ನಿಲ್ಲುವ ಮುಂದೆ ಅದಕ್ಕೆ ತಾಕಿದ ಡಿಕ್ಕಿಯಿಂದಲೇ ವಿದ್ಯಾಧರನು ತನ್ನ ಹಗಲು ಕನಸಿನೊಳಗಿಂದ ಎಚ್ಚತ್ತ. ಕಾರು ಮೊದಲೇ ದಾರೀ ಕಾಯುತ್ತ ನಿಂತಿತ್ತು. ಡ್ರಾಯವ್ಹರನು ಹೊರಗೆ ನಿಂತಿದ್ದ. ಆದರೆ ಮುಂದಿನ ಸೀಟಿನಲ್ಲಿ ಯಾರೋ ಕುಳಿತುಕೊಂಡಂತೆ ಕಾಣಿಸಿತು. ತಮ್ಮನ್ನು ಕಾಣಲಿಕ್ಕೆ ದಾದಾ ಅವರೇ ಬೇಕೆಂತಲೆ ಬಂದಿರಬಹುದೆಂದು ಸುಲೋಚನೆಯು ಕಾರಿನ ಕಡೆಗೆ ಧಾವಿಸಿ ಹೋದಳು.

"ಒಳ್ಳೇ ಚೆನ್ನಾಗಿದ್ದೀರಲ್ಲಾ–"

ಮುಂದಿನ ಶಬ್ದಗಳು ಅವಳ ಬಾಯಿಂದ ಹೊರಬೀಳಲಿಲ್ಲ. ಅವಳ ಹುಬ್ಬುಗಳು ಮಾತ್ರ ಗಂಟಿಕ್ಕಿದವು. ಕಾರಿನಲ್ಲಿ ರಮಾಕಾಂತನು ಧೂಮ್ರಪಾನ ಮಾಡುತ್ತ ಕುಳಿತುಕೊಂಡಿದ್ದನು.



* * * * *

ವಿದ್ಯಾಧರ ಸುಲೋಚನೆಯರು ಕಾರಿನಲ್ಲಿ ಹಿಂದಿನ ಮಗ್ಗಲು ಕುಳಿತುಕೊಂಡರು. ರಮಾಕಾಂತನು ಜುಹೂದಲ್ಲಿ ಮಾಡಿದ ಕಾರುಗಳ ಅದಲುಬದಲು, ವಿದ್ಯಾಧರನಿಗೆ ನೆನಪಾಗಿ ಅವನಿಗೆ ನಗು ಬಂದಿತು. ಸುಲೋಚನೆಯ ಹತ್ತಿರ ಬಂದು ಕೂಡಬೇಕೆಂದು ನಡೆದಿದ್ದ ಅವನ ಧಡಪಡಿಕೆಯನ್ನು ನೋಡಿಯಂತೂ ವಿದ್ಯಾಧರನಿಗೆ ನಗು ತಡೆಯಲೊಲ್ಲದು ! "ಕಾಲಚಕ್ರ ತಿರುಗುವುದೆಂದರೆ ಹೀಗೆ" ಎಂದು ವಿದ್ಯಾಧರನ ಮನಸ್ಸಿನಲ್ಲಿ ವಿಚಾರ ಬಂದುಹೋಯಿತು. ಕಾರು ನಡೆಯಿತು. ಸುಲೋಚನೆ ರುಕ್ಷಸ್ವರದಲ್ಲಿ ರಮಾಕಾಂತನನ್ನು ವಿಚಾರಿಸಿದಳು :

"ಯಾವಾಗ್ಗೆ ಬಂದಿರಿ ನೀವು ?"

"ಈಹೊತ್ತೇ ಮುಂಜಾನೆ ! ಬೋಟಿನಿಂದ ಬಂದೆ."

"ಬೆಳಗಾಂವಿಯಿಂದ ಬೋಟುಗಳು ಎಂದಿನಿಂದ ಹೊರಡಹತ್ತಿದವು ಮತ್ತೆ ?"

"ನಾನು ಮುಂಬಯಿಗೆ ಹೋಗಿದ್ದೆ !"

"ಓಹೋ, ಹಾಗಾದರೆ ಸುರಂಗೆಯೆಲ್ಲಿ ?"

"ಅವಳು ಬೆಳಗಾಂವಿಯಲ್ಲಿಯೇ ಇರುವಳು. ಬೋಟಿನ ಪ್ರವಾಸ ಎಷ್ಟೊಂದು ಮೋಜಾಗಿತ್ತು ನೋಡಿರಿ, ವಿದ್ಯಾಧರ. ಕೆಳಗಡೆಗೆ ಬುರುಗಾಗಿ ನರ್ತಿಸುವ ಸಮುದ್ರವಾದರೆ, ಮೇಲೆ ಶಾಂತವಾದ ಬೆಳದಿಂಗಳ ಸಾಗರ, ಮತ್ತು ಇವೆರಡುಗಳ ನಡುವೆ ಸಾಗುವ ಬೋಟು. ಅದೆಂಥ ಬೋಟು ? ಸೃಷ್ಟಿದೇವತೆಯ ಸುಂದರವಾದ ತೊಟ್ಟಿಲವೇ ಅದು. ನನ್ನ ಮುಂದಿನ ಕಥೆಯ ಕಥಾನಕವನ್ನು ನೌಕೆಯಲ್ಲಿಯೇ ಇಡುವೆ." ಈವರೆಗೆ ರಮಾಕಾಂತನು ಹೊಸದೊಂದು ಕಥೆಯ ವಿಷಯವನ್ನೆತ್ತಿದ ಕೂಡಲೆ, ಸುಲೋಚನೆಯು ಅದರಲ್ಲಿಯ ಚಿತ್ರವನ್ನು ತೆಗೆಯಲಿಕ್ಕೆ ಒಳ್ಳೇ ಉತ್ಸಾಹದಿಂದ ಒಪ್ಪುತ್ತಿದ್ದಳು. ಈಗ ಮಾತ್ರ ಸುಲೋಚನೆಯು ಸುಮ್ಮನಿದ್ದುದನ್ನು ನೋಡಿ ರಮಾಕಾಂತನಿಗೆ ಹೇಗೋ ಅನಿಸಿತು. ಅವನಿಗೆ "ಇದು ಬಿರುಗಾಳಿಯ ಪೂರ್ವದಲ್ಲಿಯ ಶಾಂತತೆಯಾದರೂ ಇರಲಿಕ್ಕಿಲ್ಲವೆ ?" ಎಂಬ ಸಂಶಯವು ಅವನ ಮನಸ್ಸಿನಲ್ಲಿ ಇಣಿಕಿಹೋಯಿತು.

ಕೂಡಲೆ ಅವನು ಸಮಾಧಾನ ಹೇಳಿಕೊಂಡ. "ಬಿರುಗಾಳಿ ಎದ್ದರೂ ಅದೇನೂ ಅಂಥ ಭಯಂಕರವಾದದ್ದೇನುವುದಿಲ್ಲ. ಈ ಹೆಂಗಸರೆಂದರೆ ವಿಲಕ್ಷಣ ಮತ್ಸರ ಸ್ವಭಾವದವರು! ಯಾಲಕ್ಕಿಯಿಂದ ಆದ ಶೀತಕ್ಕೆ ಲವಂಗವೇ ಔಷಧ. ಹೆಂಗಸರಿಗೆ ಸಂಶಯ ಬರುವದೂ ಬೇಗ ; ಅದರ ನಿರಸನವಾಗುವುದೂ ಅಷ್ಟೇ ಬೇಗ !"

ಹೀಗೆ ವಿಚಾರಮಾಡುತ್ತಾ ಅವನು ಹಿಂದೆ ತಿರುಗಿ ನೋಡಿದ. ಸುಲೋಚನೆ ಮತ್ತು ವಿದ್ಯಾಧರ ಇವರು ಒಬ್ಬರೊಬ್ಬರ ಕಡೆಗೆ ನೋಡುತ್ತಿದ್ದರು. ನಾಟಕದಲ್ಲಿಯ ಶೃಂಗಾರದ ಭಾಷಣಕ್ಕಿಂತಲೂ ಆ ನೋಟದಲ್ಲಿ ಏನೋ ಅಧಿಕವಾಗಿತ್ತು. ಆ ಭಾಷಣಗಳೆಂದರೆ ಕೃತ್ರಿಮವಾದ ಮಿಂಚು ! ಆದರೆ ಅವರ ದೃಷ್ಟಿ ಮಿಲನದಲ್ಲಿ ರಮಾಕಾಂತನು ಕಂಡ ಮಿಂಚು

ಆಕಾಶದಲ್ಲಿಯದಿತ್ತು. ಅದು ಅವನಿಗೆ ಕಾಣಿಸಿತಷ್ಟೇ ಅಲ್ಲದೆ ಅದರಿಂದ ಉತ್ಪನ್ನವಾದ ಸಿಡಿಲು ಆತನ ಮನಸ್ಸಿನಲ್ಲಿಯ ಆಶಾವೃಕ್ಷದ ಮೇಲೆ "ಕಡಲ್ಲ್"ಂದು ಬಿದ್ದಿತು. ಸುಲೋಚನೆಯ ಮನಸ್ಸು ಆ ಯಾಂತ್ರಿಕ ವಿದ್ಯಾಧರನ ಕಡೆಗೆ ಆಕರ್ಷಿಸಲ್ಪಡಬಹುದೆಂದು ಅವನಿಗೆ ಕನಸಿನಲ್ಲಿಯೂ ಕೂಡ ಅನಿಸಿರಲಿಲ್ಲ. ಅಂಬೋಲಿಯಿಂದ ತಾನೂ ಸುರಂಗೆಯ ಕೂಡ ಬೆಳಗಾಂವಿಗೆ ತಿರುಗಿ ಬಂದಿದ್ದರಿಂದ ಸುಲೋಚನೆಯು ತನ್ನ ಮೇಲೆ ಕೋಪಿಸಿಕೊಂಡಿರಬಹುದೆಂದು ಆತ ಭಾವಿಸಿದ. ಆದರೆ ಸೌಂದರ್ಯಲೋಲುಪಳಾದ ಒಬ್ಬ ರಮಣಿಯ ಕೋಪವೆಂದರೆ ಡಾಂಬರದ ಕಲೆಯಂತೆ ಸಹಜವಾಗಿ ಅಳಿಸಿ ತೆಗೆಯಬಹುದಾದ್ದಲ್ಲ. ಆ ಕೋಪವೆಂದರೆ, ಸೌಂದರ್ಯಕ್ಕೆ ದೃಷ್ಟಿಯಾಗಬಾರದೆಂದು ಗಲ್ಲದ ಮೇಲಿಟ್ಟ ಕಾಡಿಗೆಯ ಬೊಟ್ಟು ಎಂದು ಅವನ ಕಲ್ಪನೆಯಾಗಿತ್ತು. ಅದರಲ್ಲಿಯೂ ಈ ಸೌಂದರ್ಯದೇವಿಯ ಕೋಪವನ್ನು ಹೋಗಲಾಡಿಸುವುದಕ್ಕೆ ಅವನು ಮುಂಬಯಿಯಿಂದ ಧಾವಿಸಿ ಬಂದಿರಲಿಲ್ಲವೆ?

ವಿದ್ಯಾಧರ ಸುಲೋಚನೆಯರ ಕಣ್ಸನ್ನೆಗಳು ಅವನಿಗೆ ಅಸಹ್ಯವಾದವು. ಅವುಗಳನ್ನು ನಿಲ್ಲಿಸುವದಕ್ಕಾಗಿಯೇ ಅವನಂದ :

"ಪುನರ್ಜನ್ಮವೇ ಆಯಿತೆನ್ನಬೇಕು. ನಿಮ್ಮದು, ವಿದ್ಯಾಧರ !"

"ಹೌದು ! ಕೇವಲ ಶರೀರದ್ದೇ ಅಲ್ಲದೆ ಮನಸ್ಸಿನದೂ ಆಯಿತು !"

"ಅಂದರೆ ?"

"ಆ ಹಾವು ಕಡಿದು ಸಾವಿನ ಬಾಗಿಲಲ್ಲಿ ನಿಂತಾಗಿ ಮನುಷ್ಯನಿಗೆ ಹೇಗಾಗುತ್ತೆಂಬುದರ ಕಲ್ಪನೆಯು ನನಗೆ ಚನ್ನಾಗಿ ಬಂದಿತು."

"ಕಾವ್ಯ ಬರೆಯುವಿರೇನು ಅದರಮೇಲೆ ? ಕರಾಳವಾದ ಕಾಲ ಪುರುಷನ ಕಗ್ಗತ್ತಲೆಯಲ್ಲಿ......"

"ಕಾವ್ಯವನ್ನೇನೂ ಬರೆಯುವದಿಲ್ಲ ನಾನು ! ಆದರೆ ಮೊದಲಿನಕಿಂತಲೂ ಹೆಚ್ಚಾಗಿ ಕಾವ್ಯವು ನನಗೆ ಸೇರಹತ್ತಿದೆ !"

"ಈ ನಿಮ್ಮ ಖಾಯಿಲೆಯಲ್ಲಿ ಯಾವ ಕಾವ್ಯ ಓದಿದಿರಿ ?"

"ನಿಮ್ಮ 'ಖಾಸಗಿ' ವಹಿ" ಎಂದು ವಿದ್ಯಾಧರ ಹೇಳಬೇಕೆಂದಿದ್ದ. ಆದರೆ ಹಾಗೆ ಹೇಳದೆ ಅವನಂದ : "ಒಂದೇ ಒಂದು ಪುಸ್ತಕ ಓದಿದೆ !"

"ಯಾವುದು ?"

"ಜೀವನದ ಪುಸ್ತಕ."

ರಮಾಕಾಂತನು ಕ್ಷಣಹೊತ್ತು ತಡೆದು ಕೇಳಿದ: "ಅದು ಸರಿಹೋಯಿತೇ ನಿಮಗೆ?"

"ಎಷ್ಟೋ ಸರಿಹೋಯಿತು ! ಆ ಪುಸ್ತಕದ ಅಭ್ಯಾಸವನ್ನೇ ಮಾಡುವವನಿದ್ದೇನೆ ನಾನು ಇನ್ನು ಇಡೀ ಜನ್ಮ !"

"ಒಂದು ಸುಂದರವಾದ ವಾಕ್ಯವನ್ನಾದರೂ ಹೇಳಿರಿ ನೋಡೋಣ ಆ ಪುಸ್ತಕದೊಳಗಿನದು."



"ಜೀವನವು ಒಂದು ಮಹಾನದಿಯಾಗಿದೆ !"

"ವಾಃ ! ಚೆನ್ನಾಗಿದೆಯಲ್ಲ ನಿಮ್ಮ ಕಾವ್ಯ !"

"ಮತ್ತು ಕಲೆಯು ಆ ನದಿಯ ಮೇಲೆ ನಿಂತಿರುವ ಒಂದು ಭವ್ಯವಾದ ಪೂಲು !"

ರಮಾಕಾಂತನು ನಗುನಗುತ್ತ ನುಡಿದ : "ಕಡೆಗೆ ಯಂತ್ರವು ಸೇರಿಕೊಂಡೇಬಿಟ್ಟಿತಲ್ಲ ಕಾವ್ಯದಲ್ಲಿ !"

ಅವನ ಈ ಮಾತಿನಿಂದ ಸುಲೋಚನೆಗೂ ನಗು ಬಂದಿತು. ಅವಳನ್ನು ಹಾಗೆಯೇ ನಗಿಸಬೇಕೆಂದು ಅವನು ಅಂದ:

"ನಿಮ್ಮನ್ನು ಅಭಿನಂದಿಸುವ ಮೊದಲನೆಯ ಮಾನವನ್ನು ನಾನೆ ತೆಗೆದುಕೊಳ್ಳುವವನಿದ್ದೇನೆ."

"ಅಭಿನಂದನೆಯೆ ? ಯಾತಕ್ಕಾಗಿ ?"

"ನಿಮ್ಮ ಯಂತ್ರದ ಕಲ್ಪನೆಯ ಸಲುವಾಗಿ !"

"ನಿಮಗೆ ಯಾರು ಹೇಳಿದರು ಇದನ್ನು ?"

"ದಾದಾಸಾಹೇಬರು. ಅವರಂದರು ಆ ಫೋಟೋಗಳ ಕಾಜುಗಳೇನು ? ಒಡೆದರೆ ಒಡೆಯಲಿ ! ನಿಮ್ಮ ಪುಸ್ತಕದಲ್ಲಿ ಸೇರಿಸಲಿಕ್ಕೆ ವಿದ್ಯಾಧರನ ಯಂತ್ರದ ಫೋಟೋವನ್ನೇ ತೆಗೆದುಕೊಳ್ಳೋಣ !"

"ನಾನೇನೂ ಅವರಿಗೆ ಹಾಗೆ ಹೇಳಿಲ್ಲ."

"ಅವರಿಗೆ ಹೇಳದಿದ್ದರೂ ಸ್ವತಃದಲ್ಲಿಯಾದರೂ ಹಾಗೆ ವಿಚಾರ ಮಾಡಿರಬಹುದಲ್ಲವೆ?"

"ಹೌದು."

"ಹಾಗಾದರೆ ಆಗಿಯೇಹೋಯಿತಲ್ಲ. ನಿಮ್ಮ ಅವರ ನಡುವೆ ತಾರಾಯಂತ್ರವಂತೂ ಇದ್ದೇ ಇದೆ" ಸುಲೋಚನೆಯ ಕಡೆಗೆ ನೋಡುತ್ತ ರಮಾಕಾಂತನು ನುಡಿದ.

"ತಂತಿಯಿಲ್ಲದ ತಾರಾಯಂತ್ರ ಇರಬಹುದು ಅದು !"

"ಉಂ ಹುಂ ! ಎರಡು ತಂತಿಗಳಿದ್ದದ್ದು !" ಸುಲೋಚನೆಯ ಕಣ್ಣುಗಳ ಮೇಲೆ ತನ್ನ ದೃಷ್ಟಿಯನ್ನಿಟ್ಟು ರಮಾಕಾಂತ ಉದ್ಗಾರ ತೆಗೆದ.

"ತಾರಾಯಂತ್ರದ ವಿಷಯ ಲೇಖಕನಿಗಿಂತಲೂ ಯಂತ್ರಶಾಸ್ತ್ರಜ್ಞನಿಗೇ ಹೆಚ್ಚಾಗಿ ಗೊತ್ತು" ಎಂದು ಸುಲೋಚನೆಯು ಸ್ವಲ್ಪ ತೀವ್ರ ಸ್ವರದಿಂದಲೇ ಉತ್ತರ ಕೊಟ್ಟಳು.

## ೧೮

## ಕೊನೆಗಳು ಕೂಡಿದರೆ–

ರಮಾಕಾಂತನು ಕಾರಖಾನೆಯ ಪುಸ್ತಕವನ್ನು ಬರೆಯುವುದರ ಸಲುವಾಗಿ ಬಂದದ್ದರಿಂದ ದಾದಾ ಅವರು ಅವನ ಬಿಡಾರದ ವ್ಯವಸ್ಥೆಯನ್ನು ಚೆನ್ನಾಗಿ ಮಾಡಿದ್ದರು. ಆದರೆ ಅದೆಲ್ಲ ಅವನಿಗೆ ಬಣ್ಣದ ಹಣ್ಣಿನಂತೆ ವಿರಸವೆನಿಸಿತು. ಸುಲೋಚನೆಯು ಅವನಿಂದ ದೂರದೂರವಾಗಿಯೇ ಅಲೆದಾಡುತ್ತಿದ್ದಳು. ಲಕ್ಷ್ಮಿಯ ಚಿತ್ರವನ್ನು ಬೇಗನೆ ಮುಗಿಸಬೇಕೆಂದು

ಅವಳು ಚಿತ್ರ ತೆಗೆಯುವದರ ಸಲುವಾಗಿ ಕಾದಿಟ್ಟ ತನ್ನ ಕೋಣೆಯಲ್ಲಿ ತಾಸುತಾಸುಗಳ ವರೆಗೆ ಕೂತುಬಿಡುತ್ತಿದ್ದಳಲ್ಲದೆ, ಯಾವಾಗಾದರೂ ವೇಳೆ ದೊರೆತಾಗ ಒಮ್ಮೆಲೆ ವಿದ್ಯಾಧರನ ಕಡೆಗೆ ಹೋಗಿ ಗಂಟೆ ಎರಡು ಗಂಟೆ ಅಲ್ಲಿಯೇ ಹರಟೆ ಹೊಡೆಯುತ್ತ ಕುಳಿತುಬಿಡುತ್ತಿದ್ದಳು. ಅವಳ ಜೊತೆಯಲ್ಲಿ ರಮಾಕಾಂತನೂ ಹೊರಟರೆ, ಅವಳು ವಿದ್ಯಾಧರನಿಗೆ : "ನಿಮ್ಮ ಕಾಲು ಈಗೇನೂ ನೋಯುವದಿಲ್ಲವಲ್ಲ !" ಅಥವಾ "ಯಂತ್ರದ ಎಲ್ಲ ಕಲ್ಪನೆಗಳೂ ಕೂಡಿ ಬಂದವೇನು ?" ಇಂಥವೇನಾದರು ಮಾಮೂಲಿನ ಪ್ರಶ್ನೆಗಳನ್ನು ಕೇಳಿ ಬೇಗನೆ ಅಲ್ಲಿಂದ ಜಾರಿಬಿಡುತ್ತಿದ್ದಳು. ಆದ್ದರಿಂದ ಸುಲೋಚನೆಯ ಸಹವಾಸದಲ್ಲಿ ಮೊದಲು ಗಡಿಯಾರದಲ್ಲಿನ ಸೇಕಂದು–ಮುಳ್ಳಿನಂತೆ ಧೃತಗತಿಯಿಂದ ಹೋಗುವ ಕಾಲವು ಈಗ ಮಿನಿಟು–ಮುಳ್ಳಿನಂತೆ ನಿಧಾನವಾಗಿ ಹೋಗುವುದೆಂದು ರಮಾಕಾಂತನಿಗೆ ಅನಿಸಿತು. ವಿದ್ಯಾಧರನ ವಿಷಯಕ್ಕೆ ಸುಲೋಚನೆಯ ಮನಸ್ಸಿನಲ್ಲಿ ಆದರ ಹುಟ್ಟೀತೆಂದು ರಮಾಕಾಂತನು ಎಂದೂ ಬಗೆದಿರಲಿಲ್ಲ. ಅರಸಿಕನಾಗಿ 'ಗುಮ್ಮ'ಂದು ಕೂಡುವ ಮನುಷ್ಯ ಅವ ! ಆದರೆ ಯಂತ್ರದ ವಿಷಯದಲ್ಲಿ ಯಶಸ್ಸು ಸಂಪಾದಿಸಿದ್ದರಿಂದಲೇ ಅವನ ವಿಷಯಕ್ಕೆ ಅವಳಲ್ಲಿ ಆದರ ಉಂಟಾಗಿರಬೇಕೆಂದು ಅವನು ಊಹಿಸಿದ. ಸ್ತ್ರೀಯರ ಮನಸ್ಸೆಂದರೆ ವಿಲಕ್ಷಣವಾದ ಕಸುವಿನ ಭೂಮಿ ! ಆದರವು ಅದರಲ್ಲಿ ಒಮ್ಮೆ ಬೇರುಬಿಟ್ಟಿತೆಂದರೆ, ಅಲ್ಪಾವಧಿಯಲ್ಲಿಯೆ ಅದಕ್ಕೆ ಪ್ರೇಮದ ಹಣ್ಣುಗಳೂ ಬಿಡುವವು !

ಸುರಂಗೆಗಾಗಿ ತಾನು ವತ್ಸಲೆಯನ್ನು ನಿರಾಕರಿಸಿದ್ದು. ಅವಳ ಹುಡುಗನನ್ನು ಸಾಕುವ ಪ್ರಶ್ನೆ ಬಂದ ಕೂಡಲೆ ಅವನಿಗೆನಿಸಿತು : "ಮನೆಯನ್ನು ನಂದನವನ ಮಾಡಬೇಕಾಗಿದೆ ನನಗೆ. ಅದನ್ನು ಅನಾಥಾಶ್ರಮ ಮಾಡಬೇಕಾಗಿದ್ದರೆ, ವತ್ಸಲೆಯೇನು ಮಾಡುತ್ತಿರಲಿಲ್ಲವೇ ಆ ಕೆಲಸವನ್ನು ?" ಸುರಂಗೆಯ ರೂಪ, ಅವಳ ಒಯ್ಯಾರ, ಅವಳ ಮಧುರ ಕಂಠ ಇವೆಲ್ಲವೂ ಅವನಿಗೆ ಬೇಕಾಗಿದ್ದುವು. ಆದರೆ ಆ ತಂದೆಯಿಲ್ಲದ ಹುಡುಗನನ್ನು ನೋಡಿದ ಕೂಡಲೆ ಆತನ ವಿಲಾಸಿಯಾದ ಮನಸ್ಸು ಬೆಚ್ಚಿತು. ಅವನ ಎಣಿಕೆಯಲ್ಲಿ ಕಲೆಯೆಂದರೆ ಸ್ವಚ್ಛಂದವಾಗಿ ತಿರುಗಾಡುವ ಹರಿಣಿ ! ಹರಿಣಿಯ ಕೊರಳಲ್ಲಿ ಗುದ್ದಿಯನ್ನು ಕಟ್ಟಲಿಕ್ಕೆ ಅವನ ಮನವು ಒಪ್ಪಲೊಲ್ಲದು. ಸುರಂಗೆಗಿಂತ ಸುಲೋಚನೆಯು ತನ್ನನ್ನು ಹೆಚ್ಚಿಗೆ ಸುಖಿಯಾಗಿ ಮಾಡಬಲ್ಲಳು ಎಂಬ ಕಲ್ಪನೆಯಿಂದಲೇ ಅವನು ಬೆಳಗಾಂವಿಯಿಂದ ಹೊರಟ. ಮುಂಬಯಿಯಲ್ಲಿ ೧೦–೧೨ ದಿವಸ ಇದ್ದು ಅಲ್ಲಿಂದ ಕಾಮಾಪುರಕ್ಕೆ ಹೋಗಬೇಕೆಂದು ಅವನು ಯೋಚಿಸಿದ್ದ, ಆದರೆ ಅಲ್ಲಿ ಮೈಲಿ ಬೇನೆ ಇತ್ತು. ಮತ್ತು ಅವನಿಗೆ ಪ್ರತಿಕ್ಷಣಕ್ಕೂ ಸುರಂಗೆಯ ಸಹವಾಸದ–ಸುರಂಗೆಯ ಸಹವಾಸವೆನ್ನುವುದಕ್ಕಿಂತ ತರುಣಿಯರ ಸಹವಾಸದ–ನೆನಪು ಆಗುತ್ತಿತ್ತು. ಆತನ ಸೌಂದರ್ಯಾಸಕ್ತ ಮನಸ್ಸು ಮುಖ್ಯವಾಗಿ ಸ್ತ್ರೀ ಸೌಂದರ್ಯವನ್ನೇ ನೆನೆಯುತ್ತಿತ್ತು. ತನ್ನ ಈ ಸೌಂದರ್ಯ ತೃಷೆಯ ಕಾವ್ಯಾತ್ಮಕವಿದೆ ಎಂದು ಅವನಿಗೆ ಸುರಂಗೆಯ ಕೂಡ ಸಂಬಂಧ ಬರುವವರೆಗೆ ಅನಿಸುತ್ತಿತ್ತು. ಆದರೆ ಬೆಳಗಾಂವಿಯಲ್ಲಿ ಹಗಲು ರಾತ್ರಿ ಅವಳ ಸಹವಾಸದಲ್ಲಿ ಕಳೆದ ಮೇಲೆ ಅವನಿಗೆ ತನ್ನ ಕಾವ್ಯದ ನಿಜಸ್ವರೂಪವು ಕಂಡಿತು. ಈ



ಸತ್ಯದರ್ಶನದಿಂದ ಅವನು ಗಾಬರಿಯಾಗಲಿಲ್ಲ. ಆದರೆ ಮೊದಲನೆಯ ಒಂದೆರಡು ತುತ್ತುಗಳನ್ನು ತಿನ್ನುವದರಲ್ಲಿಯೇ ಎಲೆಯ ಮೇಲಿಂದ ಎಬ್ಬಿಸಲ್ಪಟ್ಟ ಹಸಿದ ಮನುಷ್ಯನಂತೆ ಆಯಿತು ಅವನ ಸ್ಥಿತಿ. ಹುಡುಗನನ್ನು ಸಂರಕ್ಷಿಸುವದಕ್ಕೆ ಒಡಂಬಡುವ ಹೊರತು ಸುರಂಗೆಯ ಕೂಡ ಸ್ನೇಹ ಬೆಳೆಸುವದು ಅಶಕ್ಯ ! ಸುಲೋಚನೆಯಂಥ ದುಂಡುಮಲ್ಲಿಗೆಯ ಮೊಗ್ಗೆ ಸಿಗುತ್ತಿರುವಾಗ, ಈ ಮುಳ್ಳಿನ ಗುಲಾಬಿಯನ್ನು ಸ್ವೀಕರಿಸುವುದರಲ್ಲಿ ಅರ್ಥವಿಲ್ಲೆಂದು ಅವನು ಮುಂಬಯಿಗೆ ಹೋದ.

ಇಂದಿನವರೆಗೆ ಅವನು ಪ್ರೇಮದ ಮದ್ಯವನ್ನು ಕಲ್ಪನೆಯ ಸೀಸೆಗಳಲ್ಲಿ ತುಂಬಿ, ಮಾಸಿಕಪತ್ರಗಳ ಬಟ್ಟಲೊಳಗಿಂದ ವಾಚಕರಿಗೆ ಕುಡಿಸಿದ್ದ. ಅದರ ಸುಂದರವಾದ ಬಣ್ಣವನ್ನು ಅವನು ನೋಡಿದ್ದ. ಅದರ ಉನ್ಮಾದಕವಾದ ಗಂಧವನ್ನಾದರೂ ಮೂಸಿದ್ದ. ಆದರೆ ಅಂಬೋಲಿಯಲ್ಲಿ ಅವನು ಸುರಂಗೆಯನ್ನು ಚುಂಬಿಸುವತನಕ, ಆ ಬಟ್ಟಲವನ್ನು ಅವನು ತುಟಿಯವರೆಗೆ ಒಯ್ದಿರಲಿಲ್ಲ. ಅವನು ಆ ಮದ್ಯದ ನಾಲ್ಕಾರು ಗುಟುಕು ಕುಡಿಯುವ ಮೊದಲೆ–ಮತ್ತು ಅದನ್ನೇ ಮನಸೋಕ್ತವಾಗಿ ಸೇವಿಸಬೇಕು ಎಂದು ಅವನಿಗೆ ಅನಿಸಹತ್ತಿರುವಾಗಲೇ ದೈವವು ಆ ಬಟ್ಟಲನ್ನು ಅವನ ಕೈಯೊಳಗಿಂದ ಕಸಿದುಕೊಂಡಿತು. ಆ ಮದ್ಯವಿರುವ ಹೊರತು ಯಾವ ಕೆಲಸವನ್ನೂ ಮಾಡುವುದು ಸಾಧ್ಯವಿಲ್ಲೆಂದು ಅವನು ಮುಂಬಯಿಗೆ ಬಂದ ನಾಲ್ಕಾರು ದಿವಸಗಳಲ್ಲಿಯೇ ಕಂಡುಹಿಡಿದು. ಯಾವುದರ ಮೇಲೂ ಅವನ ಮನಸ್ಸು ಕೂಡಲೊಲ್ಲದು.

ಮತ್ತೆ ಸುರಂಗೆಗೆ ಶರಣುಹೋಗಬೇಕೆ ? ಛೇ ! ಅವನಿಗೆ ಚಂದ್ರನು ಬೇಕಾಗಿದ್ದ ; ಆದರೆ ಆ ಚಂದ್ರನ ಉಪಗ್ರಹ ಬೇಡವಾಗಿತ್ತು.

ಅವನಿಗೆ ತನ್ನ ವಿಷಯದಲ್ಲಿಯೇ ಆಶ್ಚರ್ಯವೆನಿಸಿತು. ಸುಲೋಚನೆಯ ಬಗ್ಗೆ ವಿಚಾರ ಮಾಡುತ್ತ ಅವನು ನಿದ್ರೆ ಹೋಗುವ. ಆದರೆ ಆತನ ಸ್ವಪ್ನದಲ್ಲಿ ಸುರಂಗೆ ಸುಲೋಚನೆಯರಷ್ಟೇ ಅಲ್ಲದೆ, ವತ್ಸಲೆ, ತನ್ನ ಶಿಷ್ಯೆಯಾದ ಉಷೆ, ತನ್ನ ಮನೆಯಲ್ಲಿಯ ಚಿಕ್ಕಂದಿನ ಒಕ್ಕಲಗಿತ್ತಿ ಚಂದ್ರಿ ಇವರು ಕೂಡ ಕಾಣುತ್ತಿದ್ದರು. ಅವರಲ್ಲಿ ಯಾರಾದರೂ ಒಬ್ಬರು ಬಟ್ಟಲಲ್ಲಿ ಮದ್ಯವನ್ನು ತುಂಬಿ ಅವನ ಬಾಯ ಕಡೆಗೆ ಒಯ್ಯುತ್ತಿದ್ದರು. ನಡುವೆಯೇ ಅಲ್ಪಸ್ವಲ್ಪ ಎಚ್ಚರಾದರೆ ಅವನು ತನ್ನ ಮೇಲೆಯೇ ಕೋಪಿಸುವ. ಕುರೂಪದ ಮೂಲಕ–ಮೊದಲನೆಯ ಭೆಟ್ಟಿಯ ಸಮಯದಲ್ಲಿಯೂ ತಾನು ಮುಟ್ಟದ ವತ್ಸಲೆಯು ಕೂಡ ಸ್ವಪ್ನದಲ್ಲಿ ಬಂದು ತನ್ನ ಹೃದಯದ ದೇವತೆಯಾಗಿ ಮೆರೆಯಬೇಕೆ ? ತನ್ನ ಮನಸ್ಸು ಇಷ್ಟೊಂದು ಚಂಚಲ ಹೇಗಾಯಿತು ? ಕೂಡಲೆ ಅವನು ಸ್ವತಃಕ್ಕೆ ಸಮಾಧಾನ ಹೇಳಿಕೊಳ್ಳುತ್ತಿದ್ದ. "ವತ್ಸಲೆಯು ಬದುಕಿರುವಳೆಂಬುದು ತನಗೆ ಈಗಲೇ ತಿಳಿಯಿತು. ಆದ್ದರಿಂದಲೇ ತಾನು ಅವಳ ವಿಷಯವಾಗಿ ವಿಚಾರ ಮಾಡುವನು. ಅವಳಾದರೂ ತನ್ನ ಸ್ವಪ್ನದಲ್ಲಿ ಬರುವಳು. ಇಲ್ಲವಾದರೆ ಅವಳನ್ನು ತಾನು ತನ್ನ ಸಮೀಪದಲ್ಲಿ ಕೂಡ ಬರಗೊಡುತ್ತಿರಲಿಲ್ಲ."

ಅವನು ಕಾಮಾಪುರಕ್ಕೆ ಬಂದಾಗ ಸುಲೋಚನೆಯು ತನಗೆ ಕೊಟ್ಟ ಪ್ರೇಮದ

ಮದ್ಯವನ್ನು ಅವಳ ಕಡೆಗೆ ಉನ್ಮಾದದ ದೃಷ್ಟಿಯಿಂದ ನೋಡುತ್ತ ಕುಡಿಯುತ್ತಿರುವೆನೆಂಬ ಚಿತ್ರಗಳನ್ನು ರಮಾಕಾಂತನು ಚಿತ್ರಿಸಿದ್ದ. ಆದರೆ ವಸ್ತುಸ್ಥಿತಿಯು ಕ್ಷಣಾರ್ಧದಲ್ಲಿ ಕಲ್ಪನೆಯ ಮೋರೆಗೆ ಕರಿಯ ಬಣ್ಣ ಎಸೆದುಬಿಟ್ಟಿತು. ಚಿಕ್ಕದಾರಿಯಿಂದ ದೀಪಮಾಲೆಯ ಮೇಲೆ ಏರುವಾಗ ಅವಳ ಮೈ ತನ್ನ ಮೈಗೆ ಹತ್ತುವುದು, ದಿನ್ನೆಯ ಮೇಲಿಂದ ಇಳಿದು ಬರುವಾಗ ಅವಳು ಕಾಲು ಜಾರಿಬಿದ್ದಳೆಂದರೆ ತಾನು ತಟ್ಟನೆ ಅವಳನ್ನೆಬ್ಬಿಸುವದಕ್ಕಾಗಿ ಧಾವಿಸಿ ಅವಳ ಕೈ ಹಿಡಿಯುವದು– ಆದರೆ, ಇವೆಲ್ಲವುಗಳ ಮುಂದೆ, 'ಆದರೆ' ಎಂಬುದು ಬಂದು ನಿಂತಿತು. ತಿರುಗಾಡಲಿಕ್ಕೆ ಹೋಗುವ ಮಾತನ್ನು ಸುಲೋಚನೆಯು ಒಮ್ಮೆ ಕೂಡ ಎತ್ತಲಿಲ್ಲ. ತನ್ನ ಕಥೆಗಳಲ್ಲಿ ಇಷ್ಟೊಂದು ಪ್ರೀತಿ ಇದ್ದವಳು. 'ಬಕುಲ'ದ ಕಚೇರಿಯಲ್ಲಿ ಬಂದು ಬೇಕೆಂತಲೇ ತನ್ನ ಪರಿಚಯ ಮಾಡಿಕೊಂಡವಳೂ ಆದ ಸಿರಿವಂತೆ, ಚೆಲುವೆ, ಸುಲೋಚನೆ ತನ್ನ ಕೈಯೊಳಗಿನವಳೆಂದು ತಿಳಿದ ರಮಾಕಾಂತನಿಗೆ ಮತ್ತಿಷ್ಟು ಹುರುಪು ಬಂದಿತು. ಕಸ್ತೂರಿಯು ಹರಿಣಿಯ ಹೊಟ್ಟೆಯಲ್ಲಿರಲಿಕ್ಕೆ ಬೇಕು. ಹುಲಿಯು ಎಷ್ಟು ಶೂರವಿದ್ದರೇನು ? ಅದಕ್ಕೆ ಕಸ್ತೂರಿ ಸಿಗುವದೆ ಇಲ್ಲ. ಕೂಡಲೆ ಅವನು ವಿಚಾರ ಮಾಡಹತ್ತಿದ : ಈ ವಿದ್ಯಾಧರನೇನು ನಿಜವಾಗಿಯೂ ಹುಲಿಯೋ, ಅಥವಾ ಹುಲಿಯ ಚರ್ಮ ಹೊದ್ದವನೋ ?– ಬಹುತರವಾಗಿ ಚರ್ಮ ಹೊದ್ದವನೇ ಇರಬೇಕು. ದ್ರವ್ಯಲೋಭಿಯಾದ ದಾದಾನಮೇಲೆ 'ಛಾಪು' ಕೂಡಿಸಲಿಕ್ಕೆ ಯಂತ್ರದ ಯುಕ್ತಿಯು ಒಳ್ಳೆಯದಾಗಿದೆ ಎಂಬುದು ತಿಳಿಯದಷ್ಟೇನೂ ಮೂರ್ಖನಾಗಿಲ್ಲ ಆತ. ಯಂತ್ರ ಸಾಧಿಸಿತೆಂದು ಹೇಳಿ, ಈ ಹುಡುಗೆಯ ಪ್ರೇಮ ಸಂಪಾದಿಸುವುದೇ ಆತನ ಯುಕ್ತಿಯಿರಬೇಕು! ಮುಂದೆ ಯಂತ್ರ ಮಾಡಲಿಕ್ಕೆ ಬರುವದಿಲ್ಲವೆಂದರೆ, ಪ್ರೇಮವನ್ನೇನು ತಿರುಗಿ ತೆಗೆದುಕೊಳ್ಳಲಿಕ್ಕೆ ಬರುವದೇ ? ಅಥವಾ ಆದ ಲಗ್ನವನ್ನು ಮುರಿಯುವುದಾದರೂ ಶಕ್ಯವೇ ? ಇಂಥ ಕಪಟವೇ ಇರಲಿಕ್ಕೆ ಬೇಕು ವಿದ್ಯಾಧರನಲ್ಲಿ. ಇದನ್ನೆಲ್ಲ ಹೇಗೆ ಬೈಲಿಗೆಳೆಯಬೇಕು ?

ರಮಾಕಾಂತನ ಹೃದಯವು ಸುಲೋಚನೆಯು ತನ್ನವಳಾಗುವಳೆಂಬ ಆಸೆಯಿಂದ ಕುಣಿಯಹತ್ತಿತು. ಪುಸ್ತಕದಲ್ಲಿ ಯಂತ್ರದ ಫೋಟೋಗಳಂತೆ, ಅವುಗಳ ವರ್ಣನೆಯಾದರೂ ಬೇಕು. ಆ ವರ್ಣನೆಯನ್ನು ಬರೆಯಬೇಕಾದರೆ ವಿದ್ಯಾಧರನು ತನಗೆ ಎಲ್ಲವನ್ನೂ ತಿಳಿಸಿಕೊಡಬೇಕೆಂದು ದಾದಾ ಅವರಿಗೆ ಹೇಳಿಬಿಟ್ಟರಾಯಿತು. ದಾದಾ ಮತ್ತು ಸುಲೋಚನೆ ಇವರಿಬ್ಬರ ಎದುರಿನಲ್ಲಿ ಅವನಿಗೆ ತಿಳಿಸಿಕೊಡಲಿಕ್ಕೆ ಹೇಳಿ, ಇಲ್ಲದ ಸಲ್ಲದ ಶಂಕೆ ಕುಶಂಕೆಗಳನ್ನು ತೆಗೆದು, ದಾದಾ ಅವರ ಮನಸ್ಸಿನಲ್ಲಿ ಯಂತ್ರವು ಯಶಸ್ವಿಯಾಗುವದೋ ಇಲ್ಲವೋ ಎಂಬುದರ ಬಗ್ಗೆ ಸಂಶಯವನ್ನುಂಟುಮಾಡಿದರೆ ಕೆಲಸ ತೀರಿತು. ನಿಜವಾಗಿಯೂ ವಿದ್ಯಾಧರನಲ್ಲಿ ಏನಾದರೂ ಅರ್ಥವಿದೆಯೋ ಇಲ್ಲವೋ ಯಾರು ಹೇಳಬೇಕು ? ಹೀಗೆ ತಾನಾಗಿಯೇ ಎಲ್ಲವೂ ಹೊರಬೀಳುವುದು. ಯುಗಾದಿಯೂ ಸಮೀಪಿಸಿತು. ಆ ದಿವಸ ಕೆಲಸದ ಆರಂಭವಾಗಲೇಬೇಕೆಂದು ಹೇಳಿದರೆ ದಾದಾ ಅವರು ಅದಕ್ಕೂ ಸಮ್ಮತಿಸುವರು. ಯಂತ್ರವು ತಯಾರಾಗುವುದಿಲ್ಲವೆಂದು ತಿಳಿದ ಕೂಡಲೆ ದಾದಾ ಈ ವಿದ್ಯಾಧರನನ್ನು ಬಾಗಿಲಲ್ಲಿಯೂ ನಿಲ್ಲಿಸಿಕೊಳ್ಳುವವರಲ್ಲ. ಅಲ್ಲಿಂದೇನು ? ತಾನು ಮತ್ತು ಸುಲೋಚನೆ ! ಕಲೆಯು



ನಿಃಸಂಶಯವಾಗಿಯೂ ಜೀವನದ ಮೇಲೆ ವಿಜಯ ಸಂಪಾದಿಸುವದು. ಸಾಯಂಕಾಲದ ಸಮಯದಲ್ಲಿ ಸೂರ್ಯನ ಹತ್ತಿರವೇ ಇದ್ದು, ಅವನಿಂದ ಬಣ್ಣಗೊಳ್ಳದ ಮೇಘಮಾಲೆ ಎಲ್ಲಿಯಾದರೂ ಸಿಗಬಹುದೆ ?

* * * * *

ವಿದ್ಯಾಧರ ಕರೆದ: "ಕೃಷ್ಣಾ–"

ಇಷ್ಟರಲ್ಲಿಯೇ ಅಂಗಣದಲ್ಲಿಯ ಮಲ್ಲಿಗೆಯ ಬಳ್ಳಿಯ ಕಡೆಗೆ ಅವನ ದೃಷ್ಟಿ ಹೋಯಿತು. ಅದೇ ಬಳ್ಳಿಯ ಮೊದಲಿನ ಎರಡು ಮೊಗ್ಗೆಗಳನ್ನು ಕೃಷ್ಣೆಯು ತನಗೆ ಕೊಟ್ಟಿದ್ದಳು. ಅವನಿಗೆನಿಸಿತು : ಇಂದು ಈ ಬಳ್ಳಿಯು ಭರದಿಂದ ಹೂ ಬಿಟ್ಟಿದೆ–ಆದರೆ ಇನ್ನು ತಿಂಗಳೆರಡು ತಿಂಗಳನಂತರ ಈ ಹೂಗಳೆಲ್ಲವೂ ಹೋಗುವವು ಮತ್ತೆ–

ಅಂಗಳದಲ್ಲಿಯ ಪಾವಟಿಗೆಗಳ ಮೇಲೆ ಬಂದು ನಿಂತಿದ್ದ ವತ್ಸಲೆಯ ಕಡೆಗೆ ನೋಡಿದ. ಜಾಗರಣೆಯಿಂದ ಅವಳ ಮೊಗವೆಲ್ಲ ಬಾಡಿಹೋಗಿತ್ತು. ಕಣ್ಣ ಕೆಳಗಡೆ ಕರಿಯ ಗೆರೆಗಳು ಸ್ಪಷ್ಟವಾಗಿ ಕಾಣುತ್ತಿದ್ದವು. 'ಮೂರನೆಯ ಹಸಿವೆ !' ವಿದ್ಯಾಧರನು ಮನಸ್ಸಿನಲ್ಲಿಯೇ ಅಂದುಕೊಂಡನು :

"ಹೇಗಿದೆ ಸೋನ್ಯಾನಿಗೆ ?"

"ಮೈತುಂಬ ಮೈಲಿ ಎದ್ದಿವೆ."

"ಔಷಧ?"

"ಕಮಲೇಶ್ವರಿಯ ತೀರ್ಥ !"

"ಕಾಶಿ ಎಲ್ಲಿ ಹೋಗಿದ್ದಾಳೆ?"

"ಮೋಟಾರಿನಿಂದ ಹೋದಳು ಎಲ್ಲಿಯೊ. ಸೋನ್ಯಾನ ತಾಯಿಯನ್ನು ಭೆಟ್ಟಿಯಾಗಲಿಕ್ಕೆ!"

"ಸೋನ್ಯಾನ ತಾಯಿಯೆ ? ಸುರಂಗೆಯೇನು?"

"ಹೌದು ಸುರಂಗೆ !"

ವತ್ಸಲೆಯು ಆಕಾಶದ ಕಡೆಗೆ ನೋಡಿದಳು. ಅವಳ ದೃಷ್ಟಿಯಲ್ಲಿಯೂ, ಅವಳ ಸ್ವರದಲ್ಲಿಯೂ ಅವಳ ಅಂತಃಕರಣದ ವೇದನೆಗಳು ಸ್ಪಷ್ಟವಾಗಿ ಮೂಡಿದ್ದವು. ತನ್ನ ಆಯುಷ್ಯದ ಸುಖವನ್ನು ಮಣ್ಣುಗೂಡಿಸಿದ ಆ ಸುರಂಗೆಯ ಹುಡುಗನ ಸಲುವಾಗಿ ತನ್ನ ಜೀವವನ್ನೇ ಸಂಕಟದಲ್ಲಿ ಹಾಕಿರುವೆ ಎಂದೇ ಹೇಳುವಂತಿತ್ತು ಅವಳ ದೃಷ್ಟಿ.

ಕೆಲವು ವೇಳೆ ತಡೆದು ವಿದ್ಯಾಧರನಿಗೆ ಕೇಳಿದಳು :

"ಬಾಪ್ಪಾ ಅವರು ಎಲ್ಲಿರುವರು ?"

"ಅತ್ತ ಸಾವಂತವಾಡಿಯ ಕಡೆಗೆ !"

"ಏನು ಮಾಡುತ್ತಿರುವರು ?"

"ಖಾದೀ ಮಾರಾಟ ! ಬಾಪ್ಪಾ ಅವರೇನು ಗಾಳಿ ಇದ್ದಂತೆ ಇರುವರು ! ಅಹಿಂಸೆ

ಮುಗಿಯಿತು. ಖಾದಿಗೆ ಆರಂಭವಾಯಿತು !"

"ಅಹಿಂಸೆ ಮುಗಿಯಿತು. ನಿಜ! ಆದರೆ ಹಿಂಸೆಯೂ ಸುರುವಾಯಿತು ! ಆ ಕೋಣವಂತೂ ಬೇಕಾದಹಾಗೆ ತಿರುಗುತ್ತಿದೆ ! ಇದೇ ಈಗ ಆಚೆಯ ಆವಾರದಲ್ಲಿಯ ಮುದುಕಿಯನ್ನು ಇರಿದು ಕೆಡವಿತು !"

"ಜನರೇನು ಎಲ್ಲರೂ ನಿದ್ರೆಮಾಡುತ್ತಿದ್ದರೆ ?"

"ಅದನ್ನು ಹೊಡೆಯುವವರು ಯಾರು ? ದೇವಿಯದಲ್ಲವೆ ಕೋಣ ಅದು ? ಅದರ ಮೇಲೆ ಕೈಯೆತ್ತಿದರೆ ಕೋಪವಾಗುವದು ದೇವಿಯದು ?"

"ಕೊಡಲಿಯಿಂದ ಕಡಿದರೂ ಅಡ್ಡಿಯಿಲ್ಲ. ಆದರೆ ಬಡಿಗೆಯಿಂದ ಮಾತ್ರ–"

"ಬಾಪ್ಪಾ ಅವರು ಬಂದರೆ ಅವರಿಗೆ ಎಚ್ಚರದಿಂದ ಇರಲಿಕ್ಕೆ ಹೇಳಬೇಕು !"

"ಯಾಕೆ ?"

"ಊರೆಲ್ಲವೂ ರೇಗಿಗೆದ್ದಿದೆ ಅವರ ಮೇಲೆ. ದೇವಿಗೆ ಕೋಣವನ್ನು ಬಲಿಕೊಡಲಿಲ್ಲವೆಂದೇ ಊರಲ್ಲಿ ಮೈಲಿಬೇನೆ ಹಬ್ಬಿದೆ ಎಂದು ತಿಳಿದುಕೊಂಡುಬಿಟ್ಟಿದ್ದಾರೆ ! ಬಾಪ್ಪಾ ಅವರನ್ನು ಹೊಡೆಯಬೇಕೆಂದು–"

"ಹೊಡೆಯಬೇಕೆಂದೆ ?"

"ಹೌದು. ಅವರನ್ನು ಹೊಡೆಯಬೇಕೆಂದು ನಡೆದಿದೆ ಅವರ ಯೋಚನೆ."

"ನಿನಗೆ ಹೇಗೆ ಗೊತ್ತಾಯಿತು ಇದು ?"

ಅತ್ತಿತ್ತ ನೋಡಿ ವತ್ಸಲೆಯು ತುಸು ಮುಂದಕ್ಕೆ ಬಂದು ಹೇಳಿದಳು :

"ಆ ಸಾವಳನು ಇರುವನಲ್ಲ ಇಲ್ಲಿ ?"

"ಸಾವಳ......?"

"ಜಾತ್ರೆಯ ದಿವಸ ರಾತ್ರಿ ಇಲ್ಲಿ ಒಬ್ಬ ಕುಡುಕ ಇದ್ದನಲ್ಲ !"

"ಕಾಶಿಗೆ ಏನಾಗಬೇಕು ಅವ ?"

"ಏನೂ ಇಲ್ಲ. ಸುರಂಗೆಯ ಗಂಡ ಅವ. ಏಳು ವರ್ಷ ಜೇಲಿನಲ್ಲಿದ್ದ. ನಿನ್ನೆ ಸೆರೆಯ ಅಮಲಿನಲ್ಲಿ ಹೇಳುತ್ತಿದ್ದ ಎಲ್ಲವನ್ನೂ. ಬಾಪ್ಪಾ ಅವರ ಹಿತ ಬಯಸತಕ್ಕವ ಅವ. ಆದರೆ ಉಳಿದವರದೇ ನಿಯಮ ?"

"ಕೃಷ್ಣಾ–" ವಿದ್ಯಾಧರನ ಸ್ವರವು ಗದ್ಗದಿತವಾಗಿತ್ತು.

"ಏನು ವಿದ್ಯಾಧರ–ವಿದ್ಯಾಧರ ಅಣ್ಣಾ ?"

"ನೀನು ಇಲ್ಲಿರಬೇಡ–ಹೊರಡು ಇಲ್ಲಿಂದ."

"ಎಲ್ಲಿಂದ?"

"ಇಲ್ಲಿಂದ–ಈ ರೌರವ ನರಕದೊಳಗಿಂದ, ಅಜ್ಞಾನ, ದಾರಿದ್ರ್ಯ, ಅಂಧಶ್ರದ್ಧೆ, ವ್ಯಸನ, ದುಷ್ಟತನ–ಕೃಷ್ಣಾ, ನಿನ್ನಂಥ ದೇವಿಯು ಇಲ್ಲಿ ಇರಬೇಕೆ ?"

"ದೇವಿಯು ಇರುವಳೆಂದ ಮೇಲೆ ಇದು ಸ್ವರ್ಗವೋ ನರಕವೋ?"



"ನನ್ನ ಕೊರಳ ಆಣೆಯಾಗಿದೆ ನಿನಗೆ. ನಡೆ ನೀನು ಇಲ್ಲಿಂದ."

"ಹೋಗುವುದು ಎಲ್ಲಿ ?"

"ನನ್ನ ಮನೆಗೆ–ನಿನ್ನ ಅಣ್ಣನ ಮನೆಗೆ."

"ಅಲ್ಲಿ ನನಗೆ ಒಬ್ಬಳಿಗೆ ಸ್ವರ್ಗಸುಖ ಸಿಗಬಹುದು. ಆದರೆ ಇವರು–"

ಸುತ್ತಲಿನ ಆವಾರಗಳ ಕಡೆಗೆ ನೋಡಿ ವತ್ಸಲೆ ಹೇಳಿದಳು.

"ಇವರೆಲ್ಲರೂ ಈ ನರಕದಲ್ಲಿ ಕೊಳೆಯುತ್ತ ಬೀಳುವವರೇ ! ನೀನು ನಡೆ ನನ್ನ ಕೂಡ. ಕೃಷ್ಣೆ ! ನಾನು ನಿನ್ನ ಸಂಸಾರ ಹೂಡಿಕೊಡುವೆ !"

"ಸಂಸಾರ ?"

"ರಮಾಕಾಂತ ಇಲ್ಲಿ ಬಂದಿರುವರು. ನಾನು, ಸುಲೋಚನೆ ಇಬ್ಬರೂ ಕೂಡಿ ಅವರಿಗೆ ಹೇಳಿದರೆ ಅವರೇನು ನಮ್ಮ ಮಾತು ಮೀರಲಿಕ್ಕಿಲ್ಲ !"

ವತ್ಸಲೆಯು ವಿಮನಸ್ಕಳಾಗಿ ನಕ್ಕಳು. ಅವಳೇನೋ ಮಾತಾಡಬೇಕೆನ್ನುವಷ್ಟರಲ್ಲಿ ಅಂಗಣದಲ್ಲಿ ಕಾಶಿ, ಅವಳ ಹಿಂದಿನಿಂದಲೇ ಸುರಂಗೆ ಬಂದರು. ವತ್ಸಲೆಯು ಅಂಗಣದಲ್ಲಿ ವಿದ್ಯಾಧರನ ಕೂಡ ಮಾತಾಡುತ್ತ ನಿಂತಿರುವದನ್ನು ನೋಡಿ ಕಾಶಿ ಕಣ್ಣುಪಿಳುಕಿಸಿದಳು. ವತ್ಸಲೆ ಮತ್ತು ಸುರಂಗೆಯರದು ಇದೇ ಮೊದಲನೆಯ ಭೆಟ್ಟಿ. ಪಾವಟಿಗೆಗಳ ಮೇಲೆ ಹತಾಶಳಾಗಿ ಸುರಂಗೆ ಕೂಡುತ್ತ ಕೇಳಿದಳು:

"ಹೇಗಿದ್ದಾನೆ ಸೋನ್ಯಾ ಕೃಷ್ಣಾತಾಯಿ ?"

"ನಿಮ್ಮನ್ನು ಧೇನಿಸುತ್ತಿದ್ದಾನೆ ಯಾವಾಗಲೂ. ಇದೇ ಈಗ ನಿದ್ದೆಯ ಝುಳುಕು ಹತ್ತಿರಬೇಕು."

"ನನ್ನ ಸೋನ್ಯಾ ಗುಣವಾಗುವನಲ್ಲವೆ ?"

ಸುರಂಗೆಯ ಕಣ್ಣುಗಳಿಂದ ನೀರು ಹರಿಯಲಾರಂಭಿಸಿತು. ಒಂದು ಚಿಕ್ಕ ಮಗುವನ್ನು ಹಿಡಿದಂತೆ ಅವಳನ್ನು ಎದೆಗವಚಿಕೊಂಡು ವತ್ಸಲೆಯು ಸಮಾಧಾನ ಹೇಳಿದಳು : "ಸುಮ್ಮನೆ ಕಣ್ಣೀರು ಸುರಿಸಬಾರದು ಹಾಗೆ, ಸೋನ್ಯಾನಿಗೆ ಒಳಿತಾಗುವದು."

ವತ್ಸಲೆಯ ಈ ಪ್ರೇಮದ ಶಬ್ದಗಳನ್ನು ಕೇಳಿ ವಿದ್ಯಾಧರನಿಗೆ ಆಶ್ಚರ್ಯವಾಯಿತು. ಸುರಂಗೆಗೆ ವತ್ಸಲೆ ಯಾರೆಂಬುದು ಗೊತ್ತಿರಲಿಲ್ಲ. ಆದರೆ ವತ್ಸಲೆಗೆ ಎಲ್ಲವೂ ಗೊತ್ತಿದ್ದರೂ ಅವಳು ಕಣ್ಣೀರು ಸುರಿಸುವ ಸುರಂಗೆಯನ್ನು ಎದೆಗವಚಿಕೊಂಡಳು.

"ಒಬ್ಬರಿಗೆ ಮೈಲಿ ಬಂದರೆ ಅವರ ಹತ್ತಿರದವರಿಗೂ ಅವು ಬರುವದಿಲ್ಲವೆ ?"

"ಹೌದು !"

"ಹಾಗಾದರೆ ನೀವು ಹೇಗೆ ಕೂಡುವಿರಿ, ಸೋನ್ಯಾನ ಹತ್ತಿರ !"

"ಸೋನ್ಯಾ ನನ್ನವನೆಂದು."

"ನಿಮಗೆ ಹೆದರಿಕೆಯಾಗುವದಿಲ್ಲವೆ ?"

"ರೂಪ ಹಾಳಾಗುವ ಹೆದರಿಕೆಯೇ ಇಲ್ಲ ನನಗೆ."

ವತ್ಸಲೆ ಚಮತ್ಕಾರಿಕವಾದ ನಗೆಯೊಂದನ್ನು ನಕ್ಕು ಹೇಳಿದಳು. ಬಿರಬಿರನೆ ಮೋರೆಯ ಎದುರಿನಲ್ಲಿ ಬೀಸುವ ಗಾಳಿಯ ಸ್ಪರ್ಶವು ಸುಖಕರವೆನಿಸುವುದಿಲ್ಲ. ಅದರಂತೆಯೇ ಅವಳ ವಿಲಕ್ಷಣವಾದ ಈ ನಗೆಯು ವಿದ್ಯಾಧರನಿಗಾಗಲಿ ಸುರಂಗೆಗಾಗಲಿ ಸುಖಕರವೆನಿಸಲಿಲ್ಲ. ವತ್ಸಲೆ ಮುಂದೆ ಮತ್ತೆ ಹೇಳಿದಳು : "ಎರಡನೇ ಹೆದರಿಕೆಯಂದರೆ ಸಾವಿನದು ! ಆದರೆ ಸಾವಿನಲ್ಲಿ ಹೆದರಬೇಕಾದದ್ದೇನಿದೆ ?"

ಸುರಂಗೆಯು ಆಶ್ಚರ್ಯದಿಂದ ಅವಳ ಕಡೆಗೆ ನೋಡಹತ್ತಿದಳು. ವತ್ಸಲೆಯು ಮಾತಾಡುತ್ತಲೇ ಇದ್ದಳು. "ಅಲ್ಲಿ ಆ ಮಲ್ಲಿಗೆಯ ಮೊಗ್ಗುಗಳಿವೆಯಲ್ಲ. ಬೇಕೆಂತಲೇ ಅವುಗಳನ್ನು ಯಾರಾದರೂ ಹರಿದು ಎಸೆಯಬಾರದು ಇಷ್ಟೆ. ಆದರೆ ಅವು ಹೂವಾಗಿ ಬಾಡಿಹೋದ ಮೇಲೆ ಅವನ್ನು ಹೊರಗೆ ಚೆಲ್ಲಲೇಬೇಕಲ್ಲವೆ ?"

ಸುರಂಗೆಗೆ ಅವಳ ಮಾತು ವಿಲಕ್ಷಣವೆನಿಸಿದವು. ಒಳಗಿನಿಂದ ಕರುಣಸ್ವರವು ಕೇಳಬಂದಿತು. "ಅ....ವ್ವ......ಅವ್ವ......!"

ಧ್ವನಿಯು ಸೋನ್ಯಾನದೇ ಇತ್ತು. ಸುರಂಗೆಯು ಎದ್ದಳು. ಆದರೆ ಹಿಂದಕ್ಕೆ ತಿರುಗಿನೋಡಿ ತಟ್ಟನೆ ನೆಲಕ್ಕೆ ಕುಳಿತುಬಿಟ್ಟಿತು.

"ಯಾಕೆ ಮೋಟಾರಿನಿಂದ ತಲೆ ತಿರುಗುವದೇನು ?" ವತ್ಸಲೆ ಕೇಳಿದಳು.

ಸುರಂಗೆಯು ಶೂನ್ಯದೃಷ್ಟಿಯಿಂದ ಎದುರಿನಲ್ಲಿ ನೋಡುತ್ತಿದ್ದಳು. ಆ ಶೂನ್ಯದಲ್ಲಿ ಅವಳಿಗೆ ಇಡೀ ಬ್ರಹ್ಮಾಂಡವೇ ಕಾಣಿಸಿರಬೇಕೆಂದು ವತ್ಸಲೆಗೆ ತಟ್ಟನೆ ಹೊಳೆಯಿತು. ಮೈಲಿಯ ಬೇನೆ ಸಾಂಸರ್ಗಿಕ ! ಸೋನ್ಯಾನ ಹತ್ತಿರ ಕುಳಿತು ತನಗೆ ಮೈಲಿ ಬೇನೆ ಬಂದರೆ ? ಆ ಕಲ್ಪನೆಯಿಂದ ಸುರಂಗೆಯ ಮನಸ್ಸು ವ್ಯಾಕುಲವಾಗಿ ಹೋಗಿತ್ತು.

ವತ್ಸಲೆಗೆ ಅವಳ ಭೀತಿಯು ಚನ್ನಾಗಿ ತಿಳಿಯಿತು. ಆದರೆ ಆ ಭೀತಿಯ ಜೊತೆಯಲ್ಲಿ ಸುರಂಗೆಯ ಮನಸ್ಸಿನಲ್ಲಿ ಕುಣಿದಾಡುವ ಆಸೆಗಳು ಅವಳಿಗೆ ಕಾಣಲಿಲ್ಲ. ಸುರಂಗೆಯು ತನ್ನ ಸೌಂದರ್ಯದಿಂದ ಸಾವಿರಾರು ಪ್ರೇಕ್ಷಕರನ್ನು ಸಂತೈಸಿದ್ದಳು. ಚಪ್ಪಾಳೆಯ ಕಡಕಡಾಟದಲ್ಲಿ ಅವಳು ರಂಗವನ್ನು ಪ್ರವೇಶಿಸಿದಳೆಂದರೆ, ದುಂದುಗಾರರಾದ ಸಿರಿವಂತರು ನಾಯಿಗಳಂತೆ ತನ್ನ ಪಾದಗಳಲ್ಲಿಯೂ ಹೊರಳಾಡುತ್ತಿದ್ದರು. ಆ ಉಪಭೋಗದ ಉನ್ಮಾದವು ಅವಳಿಗೆ ಎರಡೂ ಕಿವಿಗಳಲ್ಲಿ ಗಟ್ಟಿಯಾಗಿ ಹೇಳುತ್ತಿತ್ತು : "ನಾಳೆ ನಿನಗೆ ಮೈಲಿ ಬೇನೆ ಬಂದು ಮುಖವೆಲ್ಲ ಒಂದು ದೋಸೆಯಾದರೆ, ಇದು ಒಂದು ಹಳ್ಳಿಯಲ್ಲಿ, ನಿನ್ನ ಸೋನ್ಯಾ ಜೊತೆಯಲ್ಲಿ ! ನಿನಗೆ, ಸುಖ, ಆನಂದ, ವಿಲಾಸಗಳು ಬೇಕಾಗಿದ್ದರೆ–ಬೇಕಾಗಿದ್ದರೆ ಬಂದ ಹಾದಿಯಿಂದ ಒಮ್ಮೆಲೆ ತಿರುಗು."

ಒಳಗಿನಿಂದ ಮತ್ತೆ ಕರೆದದ್ದು ಕೇಳಬಂತು "ಅ...ವ್ವ...ಅ....ವ್ವ !"

ಸುರಂಗೆಯು ಮೈ ಮೇಲೆ ಮುಳ್ಳು ಬಂದವರಂತೆ ಮಾಡಿದಳು. ಒಳಗಿನಿಂದ ಮತ್ತೆ ಕರುಣಸ್ವರ ಕೇಳಬಂದಿತು. "ಅ....ವ್ವ.....ಅಬಚೀ !" ವತ್ಸಲೆಯು ಕ್ಷಣಾರ್ಧದಲ್ಲಿ ಒಳಗೆ ಹೋದಳು.

ಒಂದು ಕೋಣೆಯಲ್ಲಿ ಒಬ್ಬ ಸುಂದರ ತರುಣಿಯನ್ನೂ ಮತ್ತೊಂದರಲ್ಲಿ ಒಂದು ಹುಲಿಯನ್ನೂ ಇರಿಸಿ, ಆ ತರುಣಿಯನ್ನು ಪ್ರೀತಿಸುವ ತರುಣನಿಗೆ ಬೇಕಾದ್ದೊಂದು ಕೋಣೆಯನ್ನು ತೆರೆಯಲಿಕ್ಕೆ ಹೇಳಿದ ಅರಸನದೊಂದು ಕಥೀ ಇದೆ. ಆ ಕಥೆಯೊಳಗಿನ ನಾಯಕನಂತೆ ಸುರಂಗೆಯ ಮನಸ್ಸು ತೀರ ಇಬ್ಬಗೆಯಾಗಿ ಹೋಯಿತು. ಎಲ್ಲಿಯಾದರೂ ದೂರ–ಅತಿ ದೂರ–ಸೋನ್ಯಾನ ನರಳುವಿಕೆ ಕೇಳಬಾರದಷ್ಟು ದೂರ ಹೋಗಿಬಿಡಬೇಕೆನಿಸಿತು. ಅಲ್ಲಿಯ ಆ ಮಲ್ಲಿಗೆಯ ಬಳ್ಳಿಯ ಹತ್ತಿರ ಹೋಗಿ ನಿಂತಳು. ಬಳ್ಳಿಯ ಮೇಲೆ ಮೊಗ್ಗುಗಳಿದ್ದವು. ಅವಳಿಗೆ ಸೋನ್ಯಾನ ನೆನಪಾಯಿತು. ಛೇ ! ಇದಕ್ಕಿಂತಲೂ ದೂರ ಹೋಗಲೇಬೇಕೆಂದು ಅವಳಿಗೆ ಅನಿಸಿತು. ಅವಳು ಅಲ್ಲಿಂದ ಹೆಜ್ಜೆಯನ್ನೆತ್ತಬೇಕೆನ್ನುವಷ್ಟರಲ್ಲಿ ಒಳಗಿನಿಂದ ಚೀರಿದ್ದು ಕೇಳಿಬಂತು "ಅಬಚಿ...ಅ...ವ್ವಾ...ಅ...ವ್ವಾ...." ಸುರಂಗೆಯು ಧಾವಿಸುತ್ತಲೇ ಒಳಗೆ ಹೋದಳು.

ವಿದ್ಯಾಧರನು ಸೋನ್ಯಾನನ್ನು ನೋಡುವುದಕ್ಕಾಗಿ ಸಾವಕಾಶವಾಗಿ ಮುಂದಕ್ಕೆ ಬಂದ. "ಸೋನ್ಯಾ...ನನ್ನ....ಸೋನ್ಯಾ" ಎಂದು ಕಣ್ಣೀರು ಸುರಿಸುವ ಸುರಂಗೆಯು ಅವನಿಗೆ ಸೋನ್ಯಾನ ಹತ್ತಿರ ಕಾಣಿಸಿದಳು.

* * * * *

ಕಾವಾಪುರದ ಹೋಳಿಹುಣ್ಣಿಮೆಯ ಉತ್ಸವ ವದ್ಯ ಏಕಾದಶಿಯಿಂದ ಅಮಾವಾಸ್ಯೆಯವರೆಗೆ ನಡೆಯುವದು. ಕೆಳಗಿನ ವರ್ಗದ ಜನರಿಗೆ ಅದೊಂದು ಎರಡನೇ ದೀಪಾವಳಿಯೇ. ಹುಡುಗರು ತಮ್ಮ ಮೋರೆಗೆ ಕರಿ ಇಲ್ಲವೆ ಹಳದೀ ಬಣ್ಣ ಬಳಿದುಕೊಂಡು, "ಗಿಲ್ ಗಿಲ್" ಎಂದು ಗೆಜ್ಜೆಗಳೊಡನೆ ಭಿಕ್ಷೆ ಬೇಡುತ್ತಾ ತಿರುಗಾಡುವರು. ಅವರಲ್ಲಿಯೇ ದೊಡ್ಡವರು ಒಬ್ಬ ಒಳ್ಳೇ ರೂಪವುಳ್ಳ ಹುಡುಗನನ್ನು ರಾಧೆಯನ್ನಾಗಿ ಮಾಡಿ, ರಾಧಾ ಕೃಷ್ಣರ ಸೋಗು ಹಾಕುತ್ತಿದ್ದರು. ಆ ಸೋಗು ನೋಡಿದ ಕೂಡಲೆ ಪೂರ್ವ ಕಾಲದಲ್ಲಿ ಕೃಷ್ಣನು ರಾಧೆ ಮತ್ತು ಪೂತನೆ ಇವರಿಬ್ಬರಲ್ಲಿಯ ಅಂತರವನ್ನು ಹೇಗೆ ಹುಡುಕಿ ತೆಗೆದ ಎಂಬುದರ ವಿಷಯದಲ್ಲಿ ಆಶ್ಚರ್ಯವೆನಿಸುತ್ತಿತ್ತು. ಮೊದಮೊದಲು ಬೇರೆ ಸೋಗುಗಳು ಬರುತ್ತಿದ್ದವು. ರೂಪದಿಂದ ಕುರೂಪಿಯಾದ, ಗೊಗ್ಗರದನಿಯ, ನಾಮಧಾರಿ ವೇಶ್ಯೆಯ ಕುಣಿತ ದೇವಿಯ ಎದುರು ನಡೆಯುತ್ತಿತ್ತು. ಆದರೆ ಇತ್ತೀಚೆಗೆ ಈ ಪದ್ಧತಿಯು ನಿಂತುಹೋಗಿತ್ತು. ಇಲ್ಲವಾದರೆ ಬಾಯಲ್ಲಿ ದೀವಟಿಗೆ ಹಚ್ಚಿ ಹುಡುಕಿದರೂ ಒಂದೂ ಹಲ್ಲಿಲ್ಲದ ಮೇಲಿನ ವರ್ಗದ ಮುದುಕನೊಬ್ಬನು ಮೇಲೆ ಹೇಳಿದ ವೇಶ್ಯೆಯರಲ್ಲಿ ಒಬ್ಬಳನ್ನು ತನ್ನ ತೊಡೆಯಲ್ಲಿರಿಸಿಕೊಂಡು ಅವಳ ಬಾಯಲ್ಲಿ ಸಕ್ಕರೆ ಹಾಕುತ್ತಿದ್ದ. ಈ ಒಂದು 'ಚಿಮಟಿ' ಸಕ್ಕರೆಯ ಬೆಲೆ ಸ್ವಾಭಾವಿಕವಾಗಿಯೇ ಹೆಚ್ಚಾಗಿರುತ್ತಿತ್ತು. ಒಂದು 'ಚಿಮಟಿ' ಗೆ ಎರಡು ರೂಪಾಯಿಯಾದರೂ ಆದೀತು. ಆದರೆ ಈ ಎರಡು ರೂಪಾಯಿಗಳು ಆ ಸೋಗಿನಲ್ಲಿಯ ಮುದುಕ ಮುತ್ತಜ್ಜನಿಗೆ ಕಾಣುತ್ತಿರಲಿಲ್ಲ. ಅದಕ್ಕೆ ಕಾರಣವೆಂದರೆ, ವೃದ್ಧಾವಸ್ಥೆಯಲ್ಲಿ ಕಣ್ಣು ಕಾಣುವದಿಲ್ಲ. ಎರಡನೆಯದೆಂದರೆ, ಪ್ರೇಮವು ಅಂಧವಾಗಿರುತ್ತದೆಯಲ್ಲವೆ ?

ಈ ಸೋಗುಗಳ ಬೆನ್ನು ಹತ್ತಿ ತಿರುಗಾಡುವ ಬಿಳಿಯಂಗಿಯವರ ಸಮಾಜದಲ್ಲಿಯ ಜನರಿಗೆ ಕೂಡ ಕಡಿಮೆತನವೂ ಅನಿಸುತ್ತಿರಲಿಲ್ಲ. ಎಷ್ಟೋ ರಸಿಕರಾದ ಸಾಮಾಜಿಕರು ಈ

ವಾನರ ಸೇನೆಯನ್ನು ಬೆನ್ನು ಹಚ್ಚಿಕೊಂಡು ಆ ಸೋಗಿನ ವೇಶ್ಯೆಯ ಕೂಡ ಮನೆಮನೆಗೆ, ಬಿಸಿಲಿನಲ್ಲಿ ಹಸಿವೆ ನೀರಡಿಕೆಗಳ ಪರಿವೆಯಿಲ್ಲದೆ ಹೋಗುತ್ತಿದ್ದರು. ಇಂಥ ಮದಿರಾಕ್ಷಿಯರ ಕೂಡ, ಮದಿರೆಯಾದರೂ ಈ ಹಬ್ಬದ ವೇಳೆಯಲ್ಲಿ ನೃತ್ಯ ಗಾಯನ ಮಾಡುತ್ತಿದ್ದಳು. ಕಾಮಾಪುರದಲ್ಲಿಯ ಸಿಂದಿಯ ಅಂಗಡಿಯವನ ಮತವನ್ನು ಸರಕಾರದವರು ಸ್ವೀಕರಿಸುವಂತಿದ್ದರೆ, ಪ್ರತಿ ವರ್ಷವೂ ಇಂಥ ಮೂರು ಹಬ್ಬಗಳನ್ನು ಮಾಡಬೇಕೆಂದು ಕಾನೂನು ಪಾಸು ಮಾಡುವದರ ಸಲುವಾಗಿ ಅವನು ಹೇಳಿಕೊಳ್ಳುತ್ತಿದ್ದ. ಕೈಗೆ ಸಿಕ್ಕಷ್ಟು ದುಡ್ಡೆರಡು ದುಡ್ಡು ತಂದು ಆ ಸಿಂದಿಯಂಗಡಿಯ ಮಹಾತ್ಮನಿಗೆ ಅರ್ಪಣ ಮಾಡುವದೇ ಈ ಹಬ್ಬದ ಸಮಯದಲ್ಲಿ ಇಡೀ ಕೂಲಿಕಾರ ವರ್ಗದ ಧ್ಯೇಯ ಎನ್ನುವಂತಿರುತ್ತಿತ್ತು !

ಈ ಸಾರೆಯಂತೂ ವೇಶ್ಯೆಯರ ಕೂಡ ದೇವಿಯ ಕೋಣವಾದರೂ ಮನೆಮನೆಗೆ ನೃತ್ಯಗಾಯನ ಮಾಡಲಿಕ್ಕೆ ಹೊರಟಿತು. ದೇವಿಯ ಕೋಣವಾಗಿದ್ದರಿಂದ ಬೇಕಾದಷ್ಟು ದಷ್ಟಪುಷ್ಟವಾಗಿತ್ತು. ಬೇಕಾದ್ದರಲ್ಲಿ ಬಾಯಿಹಾಕಿ ಬೇಕಾದ್ದನ್ನು ತಿನ್ನುವದು ! ಅದರಲ್ಲಿ ಪುನರ್ಜನ್ಮ ಬೇರೆ ಈಸಲ ಅದಕ್ಕೆ ! ದೇವಿಯ ಕೋಣವೆಂದು ಯಾರೂ ಅದರ ಮೇಲೆ ಕಟ್ಟಿಗೆ ಎತ್ತುತ್ತಿರಲಿಲ್ಲ. ಹೀಗಾಗಿ ಅದರ ಮೈಸೊಕ್ಕು ಇಷ್ಟೇ ಎಂದು ಹೇಳುವಂತಿಲ್ಲ. ಕೋಣವು ಯಾವಾಗಲೂ ಗುಡಿ, ಕೆರೆ, ಮತ್ತು ಅದರ ಸುತ್ತಲಿನ ಭಾಗಗಳಲ್ಲಿ ಅಷ್ಟೇ ಅಡ್ಡಾಡುತ್ತಿದ್ದುದರಿಂದ, ವಿದ್ಯಾಧರ ಸುಲೋಚನೆಯರಿಗೆ ಇದರ ವಿಷಯವಾಗಿ ವಿಶೇಷವೇನೂ ಗೊತ್ತಿರಲಿಲ್ಲ. ಅಲ್ಲದೆ ವರ್ಷ ಪ್ರತಿಪದೆಯ ದಿವಸ ಮುಂಜಾನೆ ದಾದಾಸಾಹೇಬರು, ಸುಲೋಚನೆಯ ಲಕ್ಷ್ಮಿಯ ಚಿತ್ರ, ರಮಾಕಾಂತನ ಪುಸ್ತಕ, ವಿದ್ಯಾಧರನ ಯಂತ್ರ ಇವೆಲ್ಲವುಗಳನ್ನೂ ಸುಮುಹೂರ್ತದ ಮೇಲೆ ನೋಡತಕ್ಕವರಿದ್ದರು. ಆದ್ದರಿಂದ ಈ ಮೂವರೂ ತಮ್ಮ ತಮ್ಮ ಕೆಲಸಗಳಲ್ಲಿ ಆಸಕ್ತರಾಗಿದ್ದರು. ಊರಿನ ಒಂದು ಭಾಗದಲ್ಲಿ ಮೈಲಿಬೇನೆಯಿಂದ ಜನರು ಪಟಪಟ ಸಾಯುತ್ತಿದ್ದರು. ದೇವಿಗೆ ಬಿಟ್ಟ ಕೋಣವು ಬೇಕಾದವರಿಗೆ ತನ್ನ ಕೋಡಿನ ಪ್ರಸಾದ ಕೊಡುತ್ತಿತ್ತು. ಹಬ್ಬದಲ್ಲಿಯ ಸೆರೆಯು ಪ್ರತಿಯೊಬ್ಬರ ಮನೆಯನ್ನು ತನ್ನ ತಲೆಯಮೇಲಿಟ್ಟುಕೊಂಡು ಕುಣಿಯುತ್ತಿತ್ತು. ಆದರೆ ದಾದಾ ಅವರ ಬಂಗಲೆಯ ಸುತ್ತಲೂ ಯಾವುದರ ಸುಳಿವೂ ಇರಲಿಲ್ಲ ! ಸುಳಿವು ಇರಬೇಕಾದರೂ ಹೇಗೆ ? ದಕ್ಷಿಣಧ್ರುವದ ಮೇಲೆ ಚಳಿಯಿಂದ ಸೆಟೆದು ಸಾಯುವ ಜನರ ದುರ್ಗತಿಯು ಉತ್ತರ ಧ್ರುವದ ಮೇಲೆ ಬೆಚ್ಚಗೆ ಹೊದ್ದುಕೊಂಡು ಕುಳಿತಿರುವವರಿಗೆ ಹೇಗೆ ತಿಳಿಯಬೇಕು ?

## ೧೯
## ಅಮಾವಾಸ್ಯೆಯ ದಿನ ಭಾವಬಿದಿಗೆ

ಅಮಾವಾಸ್ಯೆಯ ಮಧ್ಯರಾತ್ರಿ ಕಿರ್ರೆನ್ನುತ್ತಿತ್ತು. ಆ ಸಪ್ಪಳವು ಮೃತ್ಯುಶಯ್ಯೆಯ ಮೇಲೆ ಬಿದ್ದುಕೊಂಡು ಸಂವತ್ಸರದ ಮಂದವಾದರೂ ಅಖಂಡವಾದ ಜಗ್ಗಾಟದಂತೆಯೇ ಕೇಳುವಂತಿತ್ತು. ಜ್ವರದಿಂದ ಕಾಯ್ದು ಕೆಂಡವಾದ ಸುರಂಗೆಯ ಕೈಯನ್ನು ತನ್ನ ಕೈಯಲ್ಲಿರಿಸಿಕೊಂಡು ಕುಳಿತ ವತ್ಸಲೆಗೆ ಹೊರಗಿನ ಆ ಕಗ್ಗತ್ತಲೆಯು ಮೃತ್ಯುವಿನ ವಿಶ್ವವೇ ಎಂದೆನಿಸಿತು. ಹೊರಗಿನಿಂದ ತಣ್ಣಗಾಗಿ ಬರುವ ಗಾಳಿ–ಕಾಲಪುರುಷನ ಸ್ಪರ್ಶದಂತಿತ್ತು. ಆ



ಕಿಟಕಿಯೊಳಗಿಂದ ಕಾಣಿಸುವ ಎರಡು ಚಿಕ್ಕೆಗಳು ಭಕ್ಷ್ಯ ಸಿಕ್ಕಿತೆಂಬ ಆನಂದದಲ್ಲಿ ಕಣ್ಣು ಮುಚ್ಚಿ ತೆರೆದಂತೆ ಭಾಸವಾಗುತ್ತಿತ್ತು ! ಹಗಲಿನಲ್ಲಿ ನಗುಮೋರೆಯಂತೆ ಕಾಣುವ ಹಚ್ಚಗಿನ ಬಯಲು ಈಗ ಕರ್ರಗಿನ ತೆರೆಯನ್ನು ಮೋರೆಯ ಮೇಲೆಳೆದುಕೊಂಡು ಸ್ತಬ್ಧವಾಗಿದ್ದಂತೆ ಕಾಣುತ್ತಿತ್ತು. ಎದುರಿನಲ್ಲಿ ಕಾಣುವ ಗಿಡಗಳೆಲ್ಲವೂ ಕತ್ತಲೆಯಲ್ಲಿ, ಕ್ರಿಶ್ಚನರ ಪ್ರೇತಯಾತ್ರೆಯ ಹಿಂದಿನಿಂದ ಸಾಗುವ ಕರಿಯ ಪೋಷಾಕಿನ ಜನರಂತೆ ವತ್ಸಲೆಗೆ ಕಾಣಿಸಿದವು. ನಡುನಡುವೆ ನಾಯಿಗಳು ಕೆಟ್ಟ ಧ್ವನಿಯಿಂದ ಬೊಗಳುವವು. ಗಿಡದ ಮೇಲಿಂದ ಮೈಯಲ್ಲಿ ಅಂಜಿಕೆ ತುಂಬುವಂತೆ ಮಾಡುವ ಗೂಬೆಯ ಶಬ್ದವೂ ಆಗಾಗ್ಗೆ ಕೇಳಬರುತ್ತಿತ್ತು. ಗಾಳಿಯ ಹೊಡೆತಕ್ಕೆ ದೀಪವೂ ಅದರೊಡನೆ ವತ್ಸಲೆಯ ಹೃದಯವೂ ಕಂಪಿಸುತ್ತಿದ್ದವು. ಸೋನ್ಯಾನಿಗೆ ಖಾಯಿಲೆ ಕಡಿಮೆಯಾಗಿತ್ತು. ಆತನ ಮೈಮೇಲಿನ ಮೈಲಿಯ ನೋವಾದರೂ ಕಡಿಮೆಯಾಗಿತ್ತು. ಕಂಪನಿಯ ಮ್ಯಾನೇಜರನಿಗೆ–ನಿಜವಾದ ಸುದ್ದಿ ತಿಳಿದರೆ ತನಗೆ ಸೋನ್ಯಾನ ಹತ್ತಿರ ಇರಗೊಡಲಿಕ್ಕಿಲ್ಲವೆಂದು ಸುರಂಗೆ ತನ್ನ ಜೊತೆಯಲ್ಲಿ ಯಾರನ್ನೂ ಬರಗೊಟ್ಟಿರಲಿಲ್ಲ. ಅಲ್ಲದೆ, ಸೋನ್ಯಾನ ಮೈಲೀ ಬೇನೆಯ ವಿಷಯವನ್ನು ಯಾರಿಗೂ ತಿಳಿಸಿರಲಿಲ್ಲ. ಆದರೆ ಸೋನ್ಯಾನು ಹಾಸಿಗೆ ಬಿಟ್ಟು ಏಳುವಷ್ಟರಲ್ಲಿಯೇ ಸುರಂಗೆಗೆ ಜ್ವರ ಬಂದವು. ಇಂಥ ಬೇನೆಯ ಊರಿನಲ್ಲಿ ಬೇರೆ ಜ್ವರ ಬರುವದಾದರೂ ಎಂಥದು ? ವತ್ಸಲೆಯು ದೀಪವನ್ನು ಮೇಲಕ್ಕೆತ್ತಿ ಸುರಂಗೆಯ ಮುಖದ ಹತ್ತಿರ ಒಯ್ದು ನೋಡಿದಳು. ನಾಲ್ಕೆಂಟು ಬೊಕ್ಕೆಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಸುರಂಗೆಗೆ ಮೈಲಿ ಏಳುವದು ಅವಳಿಗೆ ಮನದಟ್ಟಾಗಲು ಒಂದು ನಿಟ್ಟುಸಿರು ಬಿಟ್ಟು, ದೀಪವನ್ನು ಕೆಳಗೆ ಇರಿಸಿದಳು. ಇಷ್ಟರಲ್ಲಿ ಸುರಂಗೆಯ ಕಣ್ಣು ತೆರೆದು ಅಂದಳು:

"ಕೃಷ್ಣಾ–"

"ಏನು?" ಅವಳ ಹಣೆಯ ಮೇಲಿನ ನೀರಿನ ಪಟ್ಟಿಯನ್ನು ಬದಲಾಯಿಸುತ್ತ ವತ್ಸಲೆಯು ವಿಚಾರಿಸಿದಳು.

"ಇದರಲ್ಲಿ ನಾನೇನೂ ಬದಕುವದಿಲ್ಲ !"

"ಏನಾದರೊಂದು ಮಾತಾಡಬೇಡ ನೀನು!"

ಸೋನ್ಯಾನ ಶುಶ್ರೂಷೆಯ ಎಂಟುಹತ್ತು ದಿವಸಗಳ ಅವಧಿಯಲ್ಲಿ ಇಬ್ಬರೂ ಏಕಜೀವವಾಗಿದ್ದರಿಂದ, 'ಹೋಗಿರಿ ಬನ್ನಿರಿ' ಅನ್ನುವ ಬಹುವಚನದ ಭಾಷೆಯು ಅವರಿಬ್ಬರ ಬಾಯಿಗೆ ಬರುತ್ತಿರಲೇ ಇಲ್ಲ.

"ಏನಾದರೊಂದೇನೂ ಮಾತಾಡುವದಿಲ್ಲ. ಹೆಚ್ಚು ಕಡಿಮೆಯಾದರೆ ನೀನು ಸೋನ್ಯಾನನ್ನ ನೋಡಿಕೊಳ್ಳುವಿ. ಆದರೆ–"

"ಆದರೆ ಏನು ?"

"ನನ್ನನ್ನು ಕೊಲ್ಲುವ ಅವ !"

"ಯಾರು ?"

"ಸಾವಳ–!"

"ಸುಮ್ಮನೆ ಮಲಗಿಕೊಳ್ಳಬಾರದೇ ನೀನು !"

"ಕಾಶಿ ಎಲ್ಲಿದ್ದಾಳೆ ?"

"ಮಲಗಿಕೊಂಡಾಳೇ ಅವಳು."

"ಸಾವಳ ?"

"ಅವ ಇನ್ನೂ ಬಂದಿಲ್ಲ ಹೊರಗಿನಿಂದ. ಇಂದಂತೂ ಜಾತ್ರಿಯ ಕೊನೆಯ ದಿವಸ ಅಲ್ಲವೇ !"

"ಅವ ಇಂದು ಸೆರೆ ಕುಡಿದು ಬಂದು ದೇವಿಯ ಕೋಣದಂತೆ ನನ್ನನ್ನೂ–"

ಸುರಂಗೆಯ ಕಂಠದೊಳಗಿಂದ ಬಂದ ಆ ಗದ್ಗದಿತ ಸ್ವರವು ವತ್ಸಲೆಯ ಹೃದಯವನ್ನು ನೀರುನೀರಾಗಿ ಮಾಡಿಬಿಟ್ಟಿತು. ಅವಳ ಕೂದಲುಗಳ ಮೇಲೆ ಪ್ರೀತಿಯಿಂದ ಕೈಯಾಡಿಸುತ್ತ ಅವಳೂ ಹೇಳಿದಳು : "ನಾನಿರುವೆನಲ್ಲ ನಿನ್ನ ಹತ್ತಿರವೆ ?–"

ಮೃತ್ಯುಮುಖದಲ್ಲಿ ಬಿದ್ದ ಶರೀರದಲ್ಲಿ ಪ್ರಾಣವಾಯುವನ್ನು ಚುಚ್ಚಿ ಹಾಕಿದಂತಾಯಿತು ಸುರಂಗೆಯ ಸ್ಥಿತಿ. ಅವಳು ಸ್ವಲ್ಪ ಎಚ್ಚರವಾಗಿ ಅಂದಳು :

"ನಾನು ಈ ಬೇನೆಯಿಂದ ಎದ್ದೆನೆಂದರೆ, ನಾವೆಲ್ಲರೂ ಕೂಡಿ ಒಂದೇ ಕಡೆಗೆ ಇರೋಣವಂತೆ, ಏನು, ಇರೋಣವಲ್ಲವೆ ?"

"ನಾವು ಎಲ್ಲರೂ ಅಂದರೆ ?"

"ನೀನು, ಸೋನ್ಯಾ, ನಾನು ಮತ್ತೂ–"

"ಮತ್ತೂ ಯಾರೂ ?"

"ರಮಾಕಾಂತ ! ಅವರಿಗೆ ಸೋನ್ಯಾನ ಮೇಲೆ ಪ್ರೀತಿಯಿಲ್ಲ. ಆದರೆ ನೀನು ನೋಡಿಕೊಳ್ಳಬಲ್ಲಿ ಆತನನ್ನು !"

ಸುರಂಗೆಯ ಶಬ್ದಗಳು ವತ್ಸಲೆಯ ಹೃದಯಕ್ಕೆ ಕಾಯ್ದ ಕಬ್ಬಿಣದಿಂದ ಬರೆಕೊಡುತ್ತಿದ್ದವು. ಆದರೆ ಅವಳು ಪಿಟ್ಟೆಂದು ಒಂದು ಶಬ್ದವನ್ನೂ ಮಾತಾಡಲಿಲ್ಲ.

ಸುರಂಗೆಯು ಮುಂದೆ ಹೇಳಿದಳು : "ಕೃಷ್ಣಾ, ರಮಾಕಾಂತರು ಸ್ವಭಾವದಿಂದ ಒಳ್ಳೆಯವರು. ಆದರೆ ಅವರಿಗೆ ಹುಡುಗ ಬೇಡವಾಗಿದೆ ! ಬೇನೆ–ಬೇಸರಿಕೆ, ಸೇವೆ–ಸಂಕಟ ಇವೆಲ್ಲ ಅವರಿಗೆ ಆಗುವದಿಲ್ಲ. ಸೋನ್ಯಾನಿಗೆ ನೀನು ಮಾಡಿದ ಶುಶ್ರೂಷೆಯನ್ನು ಅವರು ನೋಡಿದ್ದರೆ, ನನ್ನಕ್ಕಿಂತಲೂ ನಿನ್ನನ್ನೇ ಹೆಚ್ಚಾಗಿ ಅವರು ಪ್ರೀತಿಸುತ್ತಿದ್ದರು. ಗುಣದಿಂದ ಹಾಗೆ ಇದ್ದಾಳೆ ನನ್ನ ಕೃಷ್ಣೆ."

ಸುರಂಗೆಯು ಜ್ವರದಿಂದ ಕಾಯ್ದು ಕೆಂಡವಾದ ಕೈಯಿಂದ ವತ್ಸಲೆಯ ಮುಂಗುರುಳು ತೀಡಿದಳು. ವತ್ಸಲೆಗೆ ಎಷ್ಟೋ ಸಮಾಧಾನವಾಯಿತು.

ಹೊರಗೆ ಏನೋ ಸಪ್ಪಳವಾಯಿತು. ವತ್ಸಲೆಯು ಹೊರಗೆ ಬಂದು ನೋಡಿದಳು. ಸಾವಳನು ಬಂದು ಕಂಬಳಿಯನ್ನು ಹಾಸುತ್ತಿದ್ದ.

"ಇಷ್ಟು ಹೊತ್ತು ಎಲ್ಲಿ ಹೋಗಿದ್ದಿ?" ವತ್ಸಲೆ ಕೇಳಿದಳು.



"ಎಲ್ಲಿ? ಹಾಃ ಹಾಃ ಹಾಃ !"

ಅವನ ಆ ಹಾಃ ಹಾಃಕಾರದೊಡನೆಯೆ ಸಿಂದಿಯ ದುರ್ಗಂಧವು ಬಂದಿತು. ವತ್ಸಲೆಯು ಮೋರೆ ತಿರುವಿದಳು.

"ಏ ಕೃಷ್ಣಾ, ಇದು ನೋಡು, ಇಂದs ಬಾಪ್ಪಾ ಅವರು ಬಂದಿದ್ರು. ಅವರ ಭೆಟ್ಟಿಗೆ ಹೋಗಿದ್ನಿ."

"ಏನು ಹೇಳಿದಿ ಅವರಿಗೆ ?"

"ಹೊರಗ ಮಲಕೋಬ್ಯಾಡ್ರಿ ಅಂತ. ಯಾರರೆ ಹೌರಗ ಬಂದು ತಲಿಮ್ಯಾಗ ಒಂದು ಕಲ್ಲು ಒಗದರ ?"

"ನೀನು ಹೇಳಿದ್ದು ಕೇಳಿದರೋ ಇಲ್ಲೊ ಅವರು ?"

"ಅವರೇನ ಕೇಳತಾರ ? ಆದರ ಆ ಇದ್ಯಾದರಪ್ಪ ಇದ್ದಾ–"

"ಅಲ್ಲಿ ಯಾಕೆ ಬಂದಿದ್ದರು ಅವರು ?"

"ನಾಳೆ ಮುಂಜಾನೆ ಅವರು ಆ ದಾದಾಗ ಯಂತ್ರಾನೋ ಗಿಂತ್ರಾನೋ ತೋರಸಾವರ ಅದಾರ ಅಂತ."

"ದಾದಾ ಅವರಿಗೇನೋ?"

ಕಣ್ಣು ಪಿಳುಕಿಸುತ್ತ ಸಾವಳನು "ಎಲಾ ಈಗ ತಿಳೀತು ನೋಡು ನನಗೂ ! ನಾಳೆ ಮುಂಜಾನೆ ಅವ ಯಂತ್ರಾ ತೋರಿಸಿದಾ ಅಂದರ, ಅವಗ ಸಿಗತಾವ ಐದು ಸಾವಿರ ರೂಪಾಯಿ! ಅಲ್ಲಿಂದ ನಿನಗೇನು ಕಡಿಮೆ ? ಈ ಬಿಕಾರಿ ಕಾಶೀ ಮನ್ಯಾಗ–" ಎಂದ.

ವತ್ಸಲೆಯು ಒಮ್ಮೆಲೆ ಒಳಗೆ ಹೋದಳು. ಸುರಂಗೆಯ ಮೈ–ಮೇಲಿನ ಚಾದರವನ್ನು ಸರಿಪಡಿಸಿ ಹಣೆಯ ಮೇಲಿನ ನೀರಿನ ಪಟ್ಟಿಯನ್ನು ಮತ್ತೆ ತೊಯಿಸಿ ಇಟ್ಟಳು. ಸುರಂಗೆಯು ಸ್ವಸ್ಥವಾಗಿ ಬಿದ್ದುಕೊಂಡಿದ್ದಳು. ಅವಳು ಜ್ವರದ ಗುಂಗಿನಲ್ಲಿರಬಹುದೆಂದು ಸದ್ದಿಲ್ಲದೆ ಹೊರಗೆ ಬಂದಳು. ಹೊರಗೆ ಕಟ್ಟೆಯ ಮೇಲೆ ಸಾವಳನು ಕಂಬಳಿಯನ್ನು ಹಾಸಿ ಮಲಗಿಕೊಳ್ಳುವ ವಿಚಾರದಲ್ಲಿ ಇದ್ದಂತೆ ಕಾಣುತ್ತಿದ್ದ. "ಎಲ್ಲಿ ಹೊಂಟಿ ?" ಸಾವಳ ಕೇಳಿದ.

ವತ್ಸಲೆಯು ಏನೂ ಉತ್ತರ ಕೊಡಲಿಲ್ಲ.

ಹಾದಿಗುಂಟ ಹೋಗುತ್ತಿರುವಾಗ ಅವಳಿಗೆ ಆ ಹುಣ್ಣಿಮೆಯ ರಾತ್ರಿಯೇ ಪ್ರತಿ ಕ್ಷಣಕ್ಕು ನೆನಪಾಗುತ್ತಿತ್ತು. ಅಂದಿನ ಆ ಹುಣ್ಣಿಮೆ ! ಇಂದಿನ ಈ ಅಮಾವಾಸ್ಯೆ ! ಅದು ಎರಡನೆಯ ಹಸಿವು ! ಇದು ಮೂರನೆಯದು ! ಸಾವಳ ಏನು ತಿಳಿದುಕೊಂಡಿರಬಹುದು ? ಕಾಶಿಗೆ ಎಚ್ಚರವಾದರೆ ಅವಳೇನೆನ್ನುವಳೋ ? ಆದರೆ ಅವಳಿಗೆ ಯಾವುದರ ಪರಿವೆಯೂ ಇರಲಿಲ್ಲ. ದಾರಿಯ ಮೇಲಿನ ಹುಲ್ಲಿನಲ್ಲಿ ಏನಾದರೂ ಸರಸರ ಸಪ್ಪಳವಾದರೆ ಅವಳ ಮೈ ಮೇಲೆ ಮುಳ್ಳು ನಿಲ್ಲುವದು. ಕ್ಷಣಮಾತ್ರ ನಿಂತು ಮುಂದಕ್ಕೆ ಸಾಗುವಳು. ನೂರಾರು ಸಾರೆ ಆ ದಾರಿಯಿಂದ ಅವಳು ಹಗಲು ಹಾಯ್ದು ಹೋಗಿರಬಹುದು. ಆದರೆ ಆ ಭಯಂಕರ ಕತ್ತಲೆಯಲ್ಲಿ ಆ ಗೊತ್ತಿದ್ದ ದಾರಿ ಕೂಡ ಅವಳಿಗೆ ಭಯಂಕರವೆನಿಸಿತು. ಅವಳ ಮನಸ್ಸಿನಲ್ಲಿ

ವಿಚಾರ ಬಂದಿತು–ಕಲೆ ಮತ್ತು ಜೀವನ ! ಎರಡರ ದಾರಿಯೊಂದೇ ಆದರೂ ಕಲೆ ಹೋಗುವದು ಹಗಲಿನಲ್ಲಿ. ಜೀವನಕ್ಕೆ ಮಾತ್ರ ಅದೇ ದಾರಿಯನ್ನು ರಾತ್ರಿಯಲ್ಲಿ ನಡೆಯಬೇಕಾಗುತ್ತದೆ. ಭೂತಗಳಂತೆ ಕಾಣಿಸುವ ಆ ಗಿಡಗಳು, ಸ್ಮಶಾನದಂತೆ ಕಾಣುವ ಆ ಮನೆಗಳು, ಮೃತ್ಯುವಿನ ಕೋಹಲದಂತೆಯೇ ಭಾಸವಾಗುವ ಆ ರಾತ್ರಿಯ ಕಿರ್ರೆಂಬ ಸಪ್ಪಳ– ಇವೆಲ್ಲವುಗಳನ್ನು ವತ್ಸಲೆಯು ಕ್ಷಣಾರ್ಧದಲ್ಲಿ ಮರೆತಳು. ಆ ದಿವಸ ದಿನ್ನೆಯ ಮೇಲಿನ ವಿದ್ಯಾಧರ–ಬಾಪ್ಪಾ ಅವರ ನಡುವಿನ ಸಂಭಾಷಣವು ಅವಳ ನೆನಪಿಗೆ ಬಂದಿತು. ದಾರಿಯಲ್ಲಿ ಒಂದೆರಡು ಸಾರೆ ಅವಳ ಕಾಲು ನೊಂದರೂ, ಅದು ಅವಳಿಗೆ ವಿಚಾರದ ಭರದಲ್ಲಿ ತಿಳಿಯಲಿಲ್ಲ.

ವಿದ್ಯಾಧರನ ಕೋಣೆಯ ಹತ್ತಿರಕ್ಕೆ ಬಂದಹಾಗೆ ಅವಳಿಗೆ ಹೆದರಿಕೆಯಾಗಹತ್ತಿತು. ಅಮಾವಾಸ್ಯೆಯ ನಟ್ಟ ನಡುರಾತ್ರಿಯಲ್ಲಿ ತಾನೀಗ ಹೋಗುವದು ಒಬ್ಬ ಪರಪುರುಷನ ಕೋಣೆಗೆ ! ಅಲ್ಲಿ ಮತ್ತೊಬ್ಬರು ಯಾರಾದರೂ ಇದ್ದರೆ ? ಒಂದುವೇಳೆ ರಮಾಕಾಂತನಾದರೂ ಇರಬಹುದು. ತನ್ನನ್ನು ಕಂಡು ಅವನು : "ಹುಣ್ಣಿಮೆಯ ದಿನ ನಾನು ಸುರಂಗೆಯ ಕೂಡ ಜುಹೂಕ್ಕೆ ಹೋದೆನೆಂದು ನೀನು ಮನೆಯನ್ನು ಬಿಟ್ಟು ಹೊರಬಿದ್ದು, ನೀನಾದರೂ ಏನು ಬೆಳಕು ಹರವಿದೆ ? ಅಮಾವಾಸ್ಯೆಯ ಮಧ್ಯರಾತ್ರಿಯಲ್ಲಿ ವಿದ್ಯಾಧರನಂಥ ತರುಣ ಪುರುಷನ ಕೋಣೆಯಲ್ಲಿ–"

ಭೀತವಾದ ಮನಸ್ಸಿಗೆ ನಿಶ್ಚಯದ ಜೋಡು ಕೊಟ್ಟು ಅವಳು ಕಿಟಕಿಯ ಮೇಲೆ ಟಕಟಕ ಸಪ್ಪಳ ಮಾಡಿದಳು. ಆ ವೇಳೆಯಲ್ಲಿ ವಿದ್ಯಾಧರನು ಮರುದಿವಸ ಮುಂಜಾನೆಯ ಸುಖಸ್ವಪ್ನದಲ್ಲಿ ತೇಲಾಡುತ್ತಿದ್ದ. ಸಂಜೆಯ ಮುಂದೆ ಸುಲೋಚನೆಯು ಅವನ ಕೋಣೆಯೊಳಗೆ ಬಂದು ಯಂತ್ರದ ಕಾಗದಗಳನ್ನು ನೋಡಿ "ನನ್ನ ಚಿತ್ರವೇನೂ ನನ್ನ ಮನಸಿನಂತೆ ಆಗಲೇ ಇಲ್ಲ. ಕಡೆಗೆ ಇನಾಮು ಸಿಗುವದು ನಿಮ್ಮ ಯಂತ್ರಕ್ಕೇನೆ" ಎಂದು ಅಂದಿದ್ದಳು. ಅವಳ ಜೊತೆಯಲ್ಲಿ ಬಂದಿದ್ದ ಬಾಪ್ಪಾ ಅವರು ನಸುನಗುತ್ತ ಕೇಳಿದ್ದರು.

"ಇನಾಮು ಎಷ್ಟರದು ಗೊತ್ತಿದೆಯೋ ಇಲ್ಲವೋ ವಿದ್ಯಾಧರ ?"

"ಐದು ಸಾವಿರ !"

"ಉಹುಂ. ಅಲ್ಲ ! ಅಮೌಲ್ಯವಾದದ್ದು !"

ಬಾಪ್ಪಾ ಅವರು ಸುಲೋಚನೆಯ ಕಡೆಗೆ ಬೀರಿದ ನೋಟವು ಆತನ ಆಶ್ಚರ್ಯವನ್ನು ಆನಂದವನ್ನಾಗಿ ರೂಪಾಂತರ ಮಾಡಿತ್ತು.

"ಅಮೌಲ್ಯವೆಂದರೆ ?"

"ಅಮೌಲ್ಯವೆಂದರೆ ಅಮೌಲ್ಯ ! ನಮ್ಮ ಸುಲೋಚನೆಯ ಬೆಲೆಯನ್ನು ಹೇಳುವದು ಶಕ್ಯವಿದೆಯೇ ನಿಮಗೆ ?"

"ಅನಂತಕ್ಕೆ ಶೂನ್ಯದಿಂದ ಭಾಗಿಸಿದರೆ ಬಂದಷ್ಟು ಬೆಲೆ" ಎಂದು ಹೇಳಬೇಕೆಂದಿದ್ದ ವಿದ್ಯಾಧರ ; ಆದರೆ ಸುಮ್ಮನೆಯೇ ನಿಂತುಕೊಂಡ.



"ಬಾಪ್ಪಾ, ನಿಮ್ಮ ಚೇಷ್ಟೆಗೆ ಹೊತ್ತು ವೇಳೆ ಏನೂ–" ಸುಲೋಚನೆ ಅಂದಳು.

"ಚೇಷ್ಟೆಯ ಹೊತ್ತು ಬಂದಿದೆ, ಆದರೆ ವೇಳೆ ಇನ್ನೂ ಬಂದಿಲ್ಲ !"

"ಅದು ಬರುವುದೆಂದು ?"

"ಮುಹೂರ್ತ, ಘಟಿಕಾ, ಪಳ ಹೇಳಲಿಕ್ಕೆ ನಾನೇನು ಜೋಯಿಸ ಅಂತ ತಿಳಿದಿಯಾ, ಹುಡುಗೀ ? ಅದಲ್ಲದೆ ಒಂದಂತೂ ನೀನು ಮರತೇಬಿಟ್ಟೆಯಲ್ಲ ? ವಿದ್ಯಾಧರನ ಕೂಡ ನಿನಗೂ ಇನಾಮು ಸಿಗುವದಿದೆ."

"ನನಗೆ ಏನೆಂದು ?"

"ಲಕ್ಷ್ಮಿಯ ಚಿತ್ರಕ್ಕಾಗಿ."

"ಸಿಗುವದಾದರೂ ಏನು ಇನಾಮು ?"

"ಯಂತ್ರ !"

"ಛೀ !"

"ಯಂತ್ರ ಮತ್ತು ಚಿತ್ರ ಇವುಗಳ ಜೋಡಿ ಚೆನ್ನಾಗಿ ಶೋಭಿಸತ್ತದೆ–"

ಬಾಪ್ಪಾ ಅವರ ಆ ಹುಡುಗಾಟಿಕೆಯಿಂದ ವಿದ್ಯಾಧರನಿಗೆ ಆನಂದವಾಯಿತಲ್ಲದೆ, ಅವರ ವಿಷಯದಲ್ಲಿ ಆದರವೂ ಅನಿಸಿತು. ಎರಡನೆಯವರ ಜೀವನದಲ್ಲಿ ಕೂಡಲೆ ಸಮರಸವಾಗುವ ಕಲೆಯು ಸಾಧ್ಯವಾಗುವ ಹೊರತು ಹಿರಿಯರಲ್ಲಿ ಇಂಥ ಹುಡುಗಾಟಿಕೆಯು ಶಕ್ಯವಿದೆಯೇ ಎಂದು ವಿದ್ಯಾಧರನು ತನ್ನನ್ನೆ ವಿಚಾರಿಸಿದ.

ವಿದ್ಯಾಧರನ ಸ್ವಪ್ನದಲ್ಲಿ, "ಯಂತ್ರ ಮತ್ತು ಚಿತ್ರಗಳ ಜೋಡು ಚೆನ್ನಾಗಿ ಶೋಭಿಸುತ್ತದೆ" ಎಂಬುವ ಬಾಪ್ಪಾ ಅವರ ಪಂಕ್ತಿಯನ್ನು ಯಾರೋ ಗುಣಗುಣಿಸಿದಂತೆ ಇತ್ತು. ಆದರೆ ಫೋನೋಗ್ರಾಫಿನ ಮೊಳೆಯ ಖಿರ್ರೆಂಬ ಸಪ್ಪಳದಿಂದ ಹಾಡು ಮುಗಿದದ್ದನ್ನು ಸೂಚಿಸುವಂತೆ, ವತ್ಸಲೆಯು ಬಾಗಿಲಿನ ಮೇಲೆ ಕಟಕಟ ಎಂದು ಮಾಡಿದ ಸಪ್ಪಳವು ಅವನನ್ನು ಸ್ವಪ್ನದಿಂದ ಎಬ್ಬಿಸಿತು. ಅವನು ಒಂದು ಮಗ್ಗುಲಿನಿಂದ ಮತ್ತೊಂದು ಮಗ್ಗುಲಾದ. ಮತ್ತೆ ಟಕ, ಟಕ ಸಪ್ಪಳ ! ಅವನು ಕಣ್ಣು ತೆರೆದು ನೋಡಿದ. ಮತ್ತೆ ಸಪ್ಪಳ. ಎದ್ದು ಬಾಗಿಲವನ್ನು ತೆರೆದ. ಆ ಭಯಾನಕವಾದ ಕತ್ತಲೆಯಲ್ಲಿ ನಿಂತವಳು ವತ್ಸಲೆಯೆಂದು ಗುರುತಿಸಿದ ಕೂಡಲೆಯಂತೂ ಅವನ ಹೃದಯವು ಥರಥರನೆ ನಡುಗಿತು. ಸೋನ್ಯಾನಿಗೆ ಏನು ಹೆಚ್ಚು ಕಡಿಮೆಯಾಯಿತೋ–

"ಇಂದು ಅಮವಾಸ್ಯೆಯಾದರೂ ನಾನೇನೂ ಭೂತವಲ್ಲ ಮತ್ತೆ." ವತ್ಸಲೆಯು ಒಳಗೆ ಬಂದು ಬಾಗಿಲವನ್ನು ಹಾಕುತ್ತ ಅಂದಳು:

"ಈಗ ಒಬ್ಬಳೇ ಬಂದೆಯಾ ?

"ಹೌದು ! ಅದರಲ್ಲೇನಿದೆ ? ನಾನು ಜಗತ್ತಿನಲ್ಲಿ ಬಂದವಳು ಒಬ್ಬಳೇ ಅಲ್ಲವೇ ?"

"ಆದರೆ ದೀಪಗೀಪ ಏನಾದರೂ–"

"ದೇವರ ದೀಪಾವಳಿಯೇ ನಡೆದಿದೆ ಆಕಾಶದಲ್ಲಿ–"

"ಅದು ನಡೆದದ್ದು ಆಕಾಶದಲ್ಲಿ ! ಆದರೆ ಭೂಮಿಯ ಮೇಲೆ ?"

"ಹೌದು ! ಭೂಮಿಯ ಮೇಲೆ ? ಭೂಮಿಯ ಮೇಲೆ ಏನು ? ಕತ್ತಲೆ !" ಅವನ ಕಡೆಗೆ ಖಿನ್ನ ದೃಷ್ಟಿಯಿಂದ ನೋಡುತ್ತ ವತ್ಸಲೆಯು ಉದ್ಗಾರ ತೆಗದಳು.

"ಇಂಥ ಅಪರಾತ್ರಿಯಲ್ಲಿ ಏತಕ್ಕೆ ಬಂದೆ ?"

"ಆರತಿಯಲ್ಲಿ ಏನು ಹಾಕುವಿರೋ ನೋಡಲಿಕ್ಕೆ" ಮೇಜಿನ ಆಧಾರದಿಂದ ಸ್ಥಿರವಾಗಿ ನಿಲ್ಲುತ್ತ ವತ್ಸಲೆಯು ಹೇಳಿದಳು.

"ಆರತಿಯಲ್ಲಿ ಹಾಕುವುದೆ ?"

"ಹೌದು. ಭಾವಬಿದಿಗೆಯ ಆರತಿಯಲ್ಲಿ ಏನು ಹಾಕುವಿರೆಂಬುದು."

"ಏನು ? ಅಮವಾಸ್ಯೆಯ ದಿನ ಭಾವಬಿದಿಗೆಯೆ ?"

"ವಿದ್ಯಾಧರ–ವಿದ್ಯಾಧರ ಅಣ್ಣಾ–ನನ್ನ ಆಯುಷ್ಯವೇ ಹೀಗೆ ವಿಚಿತ್ರವಾಗಿದೆ ! ಅಮಾವಾಸ್ಯೆಯ ದಿನವೇ ನನಗೆ ಭಾವಬಿದಿಗೆ ಆಗಬೇಕೆಂದೇ ನನ್ನ ಯೋಗಾ ಯೋಗವಿದೆ !"

ಅವಳ ಸ್ವರದೊಳಗಿನ ಕಾರುಣ್ಯದಿಂದ ವಿದ್ಯಾಧರನ ಹೃದಯಕ್ಕೆ ಬರೆ ಕೊಟ್ಟಂತಾಯಿತು. ಸ್ನೇಹಪೂರ್ಣವಾಗಿ ಅವಳನ್ನು ದೃಷ್ಟಿಸುತ್ತ ಕೇಳಿದ :

"ಏನು ಹಾಕಲಿ ಆರತಿಯಲ್ಲಿ ?"

"ನಾನು ಬೇಡಿದ್ದನ್ನು ಹಾಕುವಿರಾ ?"

"ಪ್ರಾಣ ಬೇಡಿದರೂ ಹಾಕುವೆ ?"

"ಐಶ್ವರ್ಯವಂತ, ಭಾಗ್ಯವಂತನಾಗು."

"ಏನು ಕೊಡಲಿ, ಹೇಳು, ನಿನಗೆ ?"

"ಯಂತ್ರದ ಕಾಗದ !"

ಪ್ರಸೂತಿವೇದನೆಯ ಅನಂತರ ಬಾಲಕನ ಮುಖವನ್ನು ನೋಡಲುತ್ಸುಕಳಾದ ಮಾತೆಯ ಕೈಯೊಳಗಿಂದ ಶಿಶುವನ್ನು ಕಾಲವು ಕಸಿದೊಯ್ದದಂತೆ ವಿದ್ಯಾಧರನ ಮನಃಸ್ಥಿತಿಯಾಯಿತು.

"ತಂಗೀ, ಮತ್ತೆ ಏನು ಬೇಕಾದ್ದನ್ನು ಬೇಡು, ಕೊಡುವೆ" ವಿದ್ಯಾಧರನ ಸ್ವರವು ಕರುಣಪೂರ್ಣವಾಗಿತ್ತು.

"ಮತ್ತೆ ಬೇರೆ ಏನಾದರೂ ಬೇಡಲೆ ?"

"ಬೇಡು. ಏನು ಬೇಕಾದ್ದನ್ನು ಬೇಡು" ವಿದ್ಯಾಧರನ ಆನಂದಕ್ಕೆ ಸೀಮೆಯಿರಲಿಲ್ಲ.

"ಮರಣ ಕೊಡಿರಿ ನನಗೆ."

"ಮರಣವೆ ?"

"ಹೌದು, ಮರಣ. ಮೊದಲು ಜೀವನ ಬೇಡಿದೆ. ಅದು ಇಲ್ಲವಾದ ಮೇಲೆ ಮರಣ !"

"ಆ ಯಂತ್ರದ ಕಾಗದದಲ್ಲಿ ನಿನ್ನ ಜೀವನವಿದೆ ಏನು ?"

"ನನ್ನದಷ್ಟೇ ಏಕೆ ; ನೂರು ಜನರದಿದೆ, ಸಾವಿರಾರು ಜನರದಿದೆ !"



ವಿದ್ಯಾಧರನಿಗೆ ತಟ್ಟನೆ ಹೊಳೆಯಿತು. ಮರುದಿವಸ ಮುಂಜಾನೆ ತಾನು ಯಂತ್ರದ ಕಾಗದವನ್ನು ದಾದಾಸಾಹೇಬರ ಕಡೆಗೆ ಕೊಟ್ಟ ಕೂಡಲೆ ಯಂತ್ರವು ರಚಿಸಲ್ಪಟ್ಟು ಕಾರಖಾನೆಯೊಳಗಿನ ಕೂಲಿಕಾರರೆಲ್ಲರಿಗೂ ಕೆಲಸವಿಲ್ಲವಾಗುವದೆಂತಲೇ ವತ್ಸಲೆಯು ಮಧ್ಯರಾತ್ರಿಯಲ್ಲಿ ತನ್ನೆಡೆಗೆ ಬಂದದ್ದು ಆತನಿಗೆ ಆಶ್ಚರ್ಯವೆನಿಸಿತು. ಮರುದಿವಸ ಮುಂಜಾನೆ ಯಂತ್ರದ ವಿಷಯವು ಹೊರಡುವದು ಅವಳಿಗೆ ತಿಳಿದದ್ದಾದರೂ ಹೇಗೆ ?

"ನಾಳೆ ಮುಂಜಾನೆ ನಾನು ಯಂತ್ರದ ಕಾಗದಗಳನ್ನು ದಾದಾ ಸಾಹೇಬರಿಗೆ ಕೊಡುತ್ತೇನೆಂಬುದನ್ನ ನಿನಗೆ ಯಾರು ಹೇಳಿದರು ?"

"ದೇವರು !"

"ಏನಾದರೊಂದು ಹೇಳಬೇಡ !"

"ಒಳ್ಳೆಯದು. ದೆವ್ವಗಳು ಹೇಳಿದವು. ಈಗಾದರೂ ಆಯಿತೆ ?"

"ದೇವರೂ ದೆವ್ವಗಳೂ ಒಂದೇ ಏನು ?"

"ಹೌದು !"

"ಅದು ಹೇಗೆ ?"

"ದೇವರು ಇದು ಒಂದು ಕಲ್ಪನೆ, ದೆವ್ವ ಅದೂ ಒಂದು ಕಲ್ಪನೆಯೆ !"

"ದೇವರು ಕಲ್ಪನೆಯಾದರೆ ಸತ್ಯ ಯಾವುದು ? ನಿಸರ್ಗ ಸತ್ಯವೆ ?"

"ನಿಸರ್ಗವು ಸತ್ಯ. ಆದರೆ ಅದು ಪಶುಗಳ ದೃಷ್ಟಿಯಿಂದ ಮಾತ್ರ !"

"ಹಾಗಾದರೆ ಮನುಷ್ಯನ ದೃಷ್ಟಿಯಿಂದ ?"

"ಮನುಷ್ಯನ ದೃಷ್ಟಿಯಿಂದ ನಿಸರ್ಗವು ಅರ್ಧ ಸತ್ಯ !"

"ಈ ಅರ್ಧ ಸತ್ಯವನ್ನು ಪೂರ್ಣಪಡಿಸುವುದು ಹೇಗೆ ?"

"ನಿಸರ್ಗಕ್ಕೆ ಜೋಡು ಕೊಟ್ಟು."

"ಯಾತರದು ಜೋಡು ?"

"ಮಾನವನದು ! ಮಾನವತೆಯದು !"

ವತ್ಸಲೆಯ ಉತ್ತರಗಳು ವಿದ್ಯಾಧರನಿಗೆ ಆಕಾಶದಲ್ಲಿ ಒಂದೇಸವನೆ ಮಿಂಚು ಹೊಡೆದಂತೆ ಅನಿಸಿದವು. ಆದರೆ ತನ್ನ ಭಾವೀ ಸಂಸಾರದ ತಳಹದಿ–ಆ ಯಂತ್ರದ ಕಾಗದಗಳನ್ನು ಅವಳ ಕೈಯಲ್ಲಿ ಕೊಟ್ಟುಬಿಡುವದು ಅವನ ಜೀವನದ ಸುತ್ತು ಬಂದಿತು !

ಅವನು ಹೇಳಿದ : "ಬಾಪ್ಪಾ ಅವರು ಕೂಡ ನೋಡಿದರು ಈ ಕಾಗದಗಳನ್ನು. ಆದರೆ ನಿನ್ನ ಹಾಗೆ ಇಂಥ ಹಟವನ್ನು ಅವರೇನೂ ಹಿಡಿಯಲಿಲ್ಲ !"

"ಅವರು ಹಟ ಹಿಡಿಯಲಿಲ್ಲ. ಇದೇ ನನ್ನ ಮತ್ತು ಅವರಲ್ಲಿಯ ಭೇದ !"

"ನಿನ್ನಲ್ಲಿರುವ ಈ ಮೂರನೆಯ ಹಸಿವು ಬಾಪ್ಪಾ ಅವರಲ್ಲಿ ಇಲ್ಲವೇ ?"

"ಇರದೆ ಏನು ? ಈಗ ಇಪ್ಪತ್ತೈದು ವರುಷಗಳಿಂದ ಇದೆ !"

"ಅಲ್ಲಿಂದ ?"

"ಹಸಿವೆಯಾಗುವುದು ಬೇರೆ ಮತ್ತು ಆ ಹಸಿವೆಯನ್ನು ಇಂಗಿಸುವ ಯೋಗ್ಯಮಾರ್ಗವನ್ನು ಹುಡುಕಿ ತೆಗೆಯುವುದು ಬೇರೆ !"

"ಹಾಗಾದರೆ ಬಾಪ್ಪಾ ಅವರು ಹಾದಿ ತಪ್ಪಿರುವರೆನ್ನುವಿ ಏನು ನೀನು ?"

"ಹೌದು !"

"ಅವರಲ್ಲಿ ತ್ಯಾಗವಿದೆ, ಉದ್ಯೋಗವಿದೆ–"

"ಆದರೆ ಒಂದೇ ಇಲ್ಲ."

"ಏನು ?"

"ಜೀವನದ ಜ್ಞಾನ ! ಬಾಪ್ಪಾ ಅವರ ಅಜ್ಞಾನವು ಇಂದು ಊರಲ್ಲಿ ಆ ದೇವಿಯ ಕೋಣದ ರೂಪದಲ್ಲಿ ಮೂರ್ತಿಮತ್ತಾಗಿ ಅಲೆದಾಡುತ್ತಿದೆ !"

"ಅವರು ತಪ್ಪುವುದಾದರೂ ಎಲ್ಲಿ !"

"ಅವರು ಸುಳಿದಾಡುವರು ಸುಮ್ಮನೆ ! ಉತ್ತರ ಧ್ರುವದಮೇಲಿಂದ ದಕ್ಷಿಣ ಧ್ರುವ, ದಕ್ಷಿಣ ಧ್ರುವದ ಮೇಲಿಂದ ಉತ್ತರ ಧ್ರುವ !"

"ಅವರು ಮಾಡಬೇಕಾದದ್ದಾದರೂ ಏನು ?"

"ಎರಡೂ ಧ್ರುವಗಳನ್ನು ವಿಷುವೃತ್ತದ ಮೇಲೆ ತರಬೇಕು !"

ವಿದ್ಯಾಧರನು ಕಟ್ಟಕಡೆಯ ಪ್ರಶ್ನೆ ಮಾಡಿದ : "ನನ್ನದೊಂದು ಯಂತ್ರವು ತಯಾರಾಗದಿದ್ದರೆ ಜಗತ್ತಿನಲ್ಲಿಯ ಯಂತ್ರಗಳೇನು ನಿಲ್ಲುವವೇ ?"

"ಯಂತ್ರಗಳು ನಿಂತುಹೋಗುವುದು ಬೇಕಾಗಿಲ್ಲ !"

"ಹಾಗಾದರೆ–" ವಿದ್ಯಾಧರನಲ್ಲಿ ಮತ್ತೆ ಆಸೆ ಹುಟ್ಟಿತು.

"ಯಂತ್ರಗಳು ಸಿರಿವಂತರ ಕೈಸೇರಿ ಬಡಬಗ್ಗರನ್ನು ಉಪವಾಸ ಕೊಲ್ಲುವವು. ಅದು ನಿಲ್ಲಲಿಕ್ಕೇ ಬೇಕು."

"ಅದು ಆಗುವದು ಹೇಗೆ ?"

"ಇಲ್ಲಿಯಷ್ಟರ ಪೂರ್ತಿಯೇ ಹೇಳಲೆ ?"

"ಹುಂ."

"ನಾಳಿಗೆ ಯಂತ್ರ ತಯಾರಾದರೂ ಕೂಡ ಇಂದಿನಷ್ಟೇ ಕೂಲಿಕಾರರನ್ನು ದಾದಾಸಾಹೇಬರು ಕಾರಖಾನೆಯಲ್ಲಿ ಇಟ್ಟುಕೊಳ್ಳಬೇಕು !"

"ಜೀವ ಹೋದರೂ ಕೂಡ ಒಪ್ಪಲಿಕ್ಕಿಲ್ಲ ಅವರು ಇದಕ್ಕೆ !"

"ಅಂತೆಯೇ ನಾನು ಹೇಳುವದು. ವಿದ್ಯಾಧರ, ಕಾಲಿಗೆ ಹಾವು ಕಡಿದಾಗ ಮರಣವೆಂದರೇನೆಂಬುದು ನಿಮಗೆ ಪೂರ್ಣವಾಗಿ ಗೊತ್ತಾಗಿದೆ. ಆ ಕ್ಷಣದ ಮನಸ್ಸಿನ ವೇದನೆಗಳನ್ನು, ನಿಮ್ಮ ಯಂತ್ರವು ತಯಾರಾದ ಕೂಡಲೆ, ಇಲ್ಲಿಯ ನೂರಾರು ಬಡಬಗ್ಗರಿಗೆ, ಕೂಲಿಕಾರರಿಗೆ, ದಿನಾಲು ಅನುಭವಿಸಬೇಕಾಗುವದು–"

ವಿದ್ಯಾಧರನು ಮೇಜಿನ ಮೇಲೆ ವ್ಯವಸ್ಥೆಯಿಂದ ಇಟ್ಟ ಕಾಗದಗಳನ್ನು ಅವಳ ಕೈಯಲ್ಲಿ



ಕೊಡುತ್ತ ಅಂದ : "ಇದು ತೆಗೆದುಕೋ. ಆರತಿಯಲ್ಲಿ ಬೇಡಿದ್ದನ್ನು ಹಾಕಿದ್ದೇನೆ !"

ಕಾಗದಗಳನ್ನು ಕೈಯಲ್ಲಿ ತೆಗೆದುಕೊಳ್ಳುವಾಗ್ಗೆ ವತ್ಸಲೆಗೆ ಹೃದಯವನ್ನು ಹಿಂಡಿದಂತಾಯಿತು. ಟಪಟಪನೆ ಅವಳ ಕಣ್ಣುಗಳಿಂದ ನೀರು ಉದುರಿದುವು. ಆ ಅಶ್ರುಬಿಂದುಗಳ ದೀಪಜ್ಯೋತಿಯಿಂದಲೇ ಅವನಿಗೆ ಅವಳು ಆರತಿ ಬೆಳಗುತ್ತಿದ್ದಳೋ ಏನೋ.

"ಈ ಕಾಗದಗಳನ್ನು ನನ್ನ ಜೀವದಕಿಂತ ಹೆಚ್ಚಾಗಿ, ಜಪ್ಪಿಸಿ ಇಡುತ್ತೇನೆ ಹಂ !" ವತ್ಸಲೆಯು ಹೋಗುಹೋಗುತ್ತ ಹೇಳಿದಳು.

"ಅಲ್ಲಿಯತನಕ ಜೊತೆಯಲ್ಲಿ ಬರುತ್ತೇನೆ ನಡೆ !"

"ಉಂ ಹುಂ !"

"ಯಾಕೆ ?"

"ಯಾರಾದರೂ ನೋಡಿದರೆ ! ಆ ಕಾಶಿಯಂತೂ–"

"ಈ ವೇಳೆಯೇ ? ಇದೇ ಈ ವೇಳೆಗೆ ಇದೇ ಕಾಮಾಪುರದಲ್ಲಿ ಏನು ಏನು ನಡೆದಿದೆ ಯಾರಿಗೆ ಗೊತ್ತು ?"

"ಆದರೆ, ಜೊತೆಯಲ್ಲಿ–"

"ಯಾರು ಯಾತಕ್ಕೆ ಬೇಕು ಜೊತೆಯಲ್ಲಿ ? ಜಗತ್ತಿನಲ್ಲಿ ಮನುಷ್ಯ ಬರುವದು ಒಬ್ಬನೇ, ಹೋಗುವದೂ ಒಬ್ಬನೇ !"

ಕ್ಷಣಾರ್ಧದಲ್ಲಿ ವತ್ಸಲೆಯು ಕಾಣಿಸದಂತಾದಳು–ಅಜ್ಞಾತದಲ್ಲಿ ಅದೃಶ್ಯವಾಗುವ ಪ್ರಾಣಜ್ಯೋತಿಯೇನೋ ಅನ್ನುವಂತೆ.

## ೨೦
## ಕುಮುಹೂರ್ತ

ಮರುದಿವಸ ಮುಂಜಾನೆ ಸುಲೋಚನೆಯು ಒಳ್ಳೇ ಉಲ್ಲಾಸದಲ್ಲಿದ್ದಳು. ತನ್ನ ಅಂತಃಕರಣದಲ್ಲಿ ಆಸೆಯು ಎಷ್ಟೊಂದು ಎತ್ತರವಾದ ಧ್ವಜವನ್ನು ನಿಲ್ಲಿಸಿರುವದಲ್ಲ ಎಂದು ಅವಳಿಗೆ ಅನಿಸಿತು. ಆ ಧ್ವಜದ ಕೋಲೆಂದರೆ ವಿದ್ಯಾಧರನ ಬುದ್ಧಿವಂತಿಕೆ, ಅದರ ಜರತಾರೀ ವಸ್ತ್ರವೆಂದರೆ ಆತನ ಪ್ರೇಮ, ಅದರ ಮೇಲೆ ಬಂಗಾರದ ಪಾತ್ರೆಯೆಂದರೆ ಆತನ ಇತ್ತೀಚೆಯ ಯಂತ್ರದ ಶೋಧ ! ಅವಳ ಲಕ್ಷ್ಮಿಯ ಚಿತ್ರವು ನಿನ್ನೆ ಸಂಜೆಗೇ ಮುಗಿದಿತ್ತು. ಅದನ್ನು ನೋಡಲಿಕ್ಕೆ ದಾದಾ ಅವರು ರಾತ್ರಿ ಬಂದಾಗ ಅವಳು ಅಂದಿದ್ದಳು. "ಕನ್ಯೆಯನ್ನೂ ಚಿತ್ರವನ್ನೂ ರಾತ್ರಿ ನೋಡಬಾರದು, ಮೋಸಹೋಗುವ ಸಂಭವ ಬಹಳ" ಎಂದು. ಈ ಮಾತಿಗೆ ದಾದಾ ಅವರು ಏನೂ ನಗಲಿಲ್ಲವೆಂಬುದನ್ನು ನೋಡಿ ಅವಳಿಗೆ ಆಶ್ಚರ್ಯವಾಯಿತು. ಅವರು ಹುಬ್ಬು ಗಂಟಿಕ್ಕಿದ್ದರು. ಸುಲೋಚನೆಯು ಮನಸ್ಸಿನಲ್ಲಿಯೇ ಅಂದುಕೊಂಡಳು : "ಇದು ನಡೆಯುವದು ಹೀಗೆಯೇ. ಮನಸ್ಸು ಯಾವಾಗಲೂ ದುಡ್ಡಿನಲ್ಲಿಯೇ ಇತ್ತೆಂದರೆ, ಹಣೆಗೆ ಗಂಟು ಇರತಕ್ಕದ್ದೆ !"

ದಿವಸದ ಮುಂಬೆಳಕಿನಲ್ಲಿ ತನ್ನ ಚಿತ್ರವನ್ನು ನೋಡಬೇಕೆಂದು ಸುಲೋಚನೆಯು

ತನ್ನ ಕೋಣೆಯ ಕಡೆಗೆ ತಿರುಗಿದಳು. ಕೋಣೆಯ ಕಡೆಗೆ ನೋಡಿದ ಕೂಡಲೆ ಅವಳಿಗೆ ತನ್ನ ಮರೆವಿನ ಸ್ವಭಾವದ ಬಗ್ಗೆ ನಗು ಬಂದಿತು. "ತೀರ ಗೋಕುಲದಂತಿರುವಿ ನೀನು" ಎಂದು ಒಂದು ಮನಸ್ಸು ಅವಳಿಗೆ ಹೇಳಿತು. ಎರಡನೆಯದು ಅವಳಿಗೆ ಕಟಗುಳಿಕೆ ಆಡಿಸುತ್ತ ಉತ್ತರ ಕೊಟ್ಟಿತು : "ಮನವು ಗೋಕುಲದಂತೆ ಆದದ್ದೇನೋ ನಿಜ ! ಈ ಗೋಕುಲದಲ್ಲಿಯ ಕೃಷ್ಣನೆಂದರೆ–ವಿದ್ಯಾಧರ–" ಎಂದು.

ಬಾಪ್ಪಾ ಅವರು ಹೊರಗಡೆ ಮಲಗಿಕೊಂಡರೆ, ದೇವಿಯ ಕೋಣದ ಪ್ರಕರಣದ ಮೂಲಕ ಸಿಟ್ಟಿಗೆದ್ದ ಊರಲ್ಲಿಯ ಹೆಡ್ಡರು ಅವರನ್ನು ಹೊಡೆಯಬಹುದೆಂಬ ಸಂಶಯವು ಮೊದಲನೆಯ ದಿವಸವೇ ಉತ್ಪನ್ನವಾಗಿತ್ತು. ಅವರಿಗೆ ಹೊಡೆಯುವುದನ್ನು ಕೆಲವರು ನಿಶ್ಚಯಮಾಡಿರುವರೆಂದು, ಸಾವಳನು ವಿದ್ಯಾಧರನ ಎದುರಿನಲ್ಲಿ ಬಾಪ್ಪಾ ಅವರಿಗೆ ಸ್ಪಷ್ಟವಾಗಿ ತಿಳಿಸಿದ್ದನು. ಅವರು ಹೊರಗೆಯೇ ಮಲಗಿಕೊಳ್ಳುವ ಹಟಹಿಡಿದಿದ್ದರೂ ಕೊನೆಗೆ ವಿದ್ಯಾಧರ ಅವರ ಮನವೊಲಿಸಿದ. ಏಳೆಂಟು ವರ್ಷದ ಪೂರ್ವದಂತೆ ಕನ್ನ ಕೊರೆಯುವ ಕುಚೋದ್ಯ ಮತ್ತೆ ಬಾಪ್ಪಾ ಅವರ ಸಲುವಾಗಿ ಎಲ್ಲಿ ಏಳುವದೋ ಎಂದು ದಾದಾ ಅವರ ಮನಸ್ಸಿನಲ್ಲಿ ಭೀತಿಯ ಇಣಿಕಿಹೋಗುತ್ತಿತ್ತು. ಮೇಲೆ ಹೋಳೀಹಬ್ಬದ ಅಮಾವಾಸ್ಯೆ ಬೇರೆ ! ಇಡೀ ಊರಿಗೆ ಊರೇ ಕುಡಿದು ದುಂದಿನಲ್ಲಿರುವದು ! ಏನು ಮಾಡಬೇಕೆಂದು ಎಲ್ಲರೂ ಯೋಚನೆಯಲ್ಲಿದ್ದರು. ವಿದ್ಯಾಧರನು ಕೊನೆಗೆ ಒಂದು ಯುಕ್ತಿ ಸೂಚಿಸಿದ. ಸುಲೋಚನೆಯ ಚಿತ್ರ ತೆಗೆಯುವ ಕೋಣೆಯು ಅವಳು ಕೆಲಸಮಾಡದಾಗ ಯಾವಾಗಲೂ ಕೀಲಿಹಾಕಿದ್ದೇ ಇರುತ್ತಿತ್ತು. ಆ ಕೋಣೆಯಲ್ಲಿ ಬಾಪ್ಪಾ ಅವರು ಮಲಗಿಕೊಳ್ಳಬೇಕೆಂದು ಗೊತ್ತಾಯಿತು. ಯಾರಾದರೂ ಅವರನ್ನು ಹುಡುಕಲಿಕ್ಕೆ ಬಂದರೂ ಕೂಡ ಅವರು ಅಲ್ಲಿ ಇದ್ದದ್ದು ಗೊತ್ತಾಗುವ ಸಂಭವ ಇರಲಿಲ್ಲ. ಈ ಸೂಚನೆಯು ಎಲ್ಲರಿಗೂ ಮಾನ್ಯವಾದ ಕೂಡಲೆ ವಿದ್ಯಾಧರನು ಅಂದಿದ್ದ :

"ಬಾಪ್ಪಾ ಅವರಿಗೆ ಒಳ್ಳೆ ಚೆನ್ನಾಗಿ ನಿದ್ರೆ ಹತ್ತುವದು ಇಂದು !"

"ಯಾಕೆ ?" ಸುಲೋಚನೆ ಪ್ರಶ್ನೆಮಾಡಿದಳು.

"ಜೇಲಿನಲ್ಲಿ ಇದ್ದು ಇದು ಅವರಿಗೆ ರೂಢಿಯಾಗಿದೆ. ಹೊರಗೆ ಬೀಗದ ಸಪ್ಪಳ ಆಯಿತೆಂದರೆ–"

ನಗುನಗುತ್ತ ಬಾಪ್ಪಾ ಅವರು ಉತ್ತರ ಕೊಟ್ಟರು: "ಆದರೆ ಜೇಲಿನಲ್ಲಿ ಲಕ್ಷ್ಮಿಯ ಚಿತ್ರ ಇರುವದಲ್ಲ !"

ಬೀಗ ತೆಗೆಯುವ ಮೊದಲು ಸುಲೋಚನೆಯು ಬಾಗಿಲ ಹತ್ತಿರ ನಿಂತಳು : ಒಳಗಡೆ ಬಾಪ್ಪಾ ಅವರು ಒಳ್ಳೇ ರಂಗಿನಲ್ಲಿ ಪ್ರಾತಃಸ್ಮರಣವನ್ನು ನಡೆಸಿದ್ದರು :

"ರಘುವರ ತುಮಕೋ ಮೇರೀ ಲಾಜ ।
ಸದಾಸದಾ ಮೈ ಶರಣ ತಿಗಾರೋ, ತುಮ ಬಡೇ ಗರೀಬ ನಿವಾಜ ॥
ಪತಿತ ಉಧಾರನ ಬಿರುದತಿ ಹಾರೋ ।



ಸ್ತವನ ನಸುನೀ ಆವಾಜ ॥"

ಬಾಪ್ಪಾ ಅವರ ಧ್ವನಿಯು ಮಧುರವಾಗಿರದಿದ್ದರೂ, ಭಜನೆಯನ್ನು ಅವರು ಅತ್ಯಂತ ಭಾವಪೂರ್ಣವಾಗಿ ಅನ್ನುತ್ತಿದ್ದರು. "ತುಮ ಬಡೇ ಗರೀಬ ನಿವಾಜ" ಈ ಚರಣವನ್ನು ಅನ್ನುವ ಮುಂದೆಯಂತೂ, ಬಡ ಬಗ್ಗರ ವಿಷಯದಲ್ಲಿಯ ಅವರ ಕಳವಳವು ಸಂಪೂರ್ಣವಾಗಿ ವ್ಯಕ್ತವಾಗುತ್ತಿತ್ತು. "ಪತಿತೋದ್ಧಾರವೇ ನಿನ್ನ ಮುಖ್ಯ ಕೆಲಸ" ಎಂದು ದೇವ ದೇವನ ಮುಂದೆ ಭಜಿಸುತ್ತಿರುವಾಗ ಅವರ ಕಣ್ಣುಗಳ ಮುಂದೆ ಯಾವ ಚಿತ್ರ ನಿಲ್ಲುತ್ತಿರಬಹುದು ? ಸುಲೋಚನೆಯು ವಿಚಾರ ಮಾಡಹತ್ತಿದಳು. ಅವಳ ಕಣ್ಣುಗಳ ಮುಂದಿನಿಂದ ಒಂದು ಭವ್ಯವಾದ ಚಿತ್ರಮಾಲಿಕೆಯೇ ಹಾಯ್ದುಹೋಯಿತು. ಸಾಗರದ ಮೇಲೆ ತೆರೆಗಳು ಏಳುತ್ತಿವೆ. ಕ್ಷುಬ್ಧವಾದ ಆ ತೆರೆಗಳ ಮೇಲಿನ ಬುರುಗು ರಾಕ್ಷಸರ ದಂತಪಂಕ್ತಿಗಳಂತೆ ಭಯಂಕರವಾಗಿ ಭಾಸವಾಗುತ್ತದೆ; ನೀರಿನಲ್ಲಿ ಸಾವಿರಾರು ಜನರು ಕಾಣುತ್ತಾರೆ ! ಎಲ್ಲರೂ ಪತಿತರು ! ಕೆಲವರಿಗೆ ಮುರುಕು ಕಟ್ಟಿಗೆಗಳ ತುಂಡುಗಳ ಆಧಾರವಾದರೆ ಕೆಲವರಿಗೆ ಅದೂ ಕೂಡ ಇಲ್ಲ ! ಈಜುತ್ತ ಈಜುತ್ತ, ನೀರು ಕುಡಿಯುತ್ತ, ಬಡಪ್ರಾಣಿಗಳು ಮುಳುಗುತ್ತಿವೆ ; ಕೆಲವು ಅಲ್ಲಿಯೇ ನಾವಿನಲ್ಲಿ ಕುಳಿತು ತೆರೆಗಳ ಶೋಭೆಯನ್ನು ನೋಡುತ್ತಿರುವವರಿಗೆ ಅವರು "ನಮ್ಮನ್ನು ಉಳಿಸಿಕೊಳ್ಳಿರಿ, ಬದುಕಿಸಿಕೊಳ್ಳಿರಿ" ಎಂದು ಆರ್ತ ಸ್ವರದಲ್ಲಿ ಬೇಡಿಕೊಳ್ಳುತ್ತವೆ. ನಾವಿನಲ್ಲಿ ಜನರು ಅವರ ಆಕ್ರಂದನವನ್ನು ಕೇಳಿ ನಿರ್ದಯವಾಗಿ ನಗುತ್ತಾರೆ. ಅಷ್ಟರಲ್ಲಿ ಸರಸರನೆ–ಸಮುದ್ರದೊಳಗಿನಿಂದ ದೇವಮೀನುಗಳು ಮೇಲಕ್ಕೇಳುವವು. ಅವುಗಳ ಬಾಲಗಳ ಹೊಡೆತದಿಂದ ನಾವೆಗಳೆಲ್ಲವು ಮುಳುಗಹತ್ತುವವು. ಮುಳುಗುತ್ತಿರುವಾಗ ನಾವಿನಲ್ಲಿಯ ಜನರು ಆ ಮೀನುಗಳ ಕಡೆಗೆ ನೋಡುತ್ತಾರೆ. ಆ ದೇವಮೀನುಗಳ ಮುಖಗಳೂ ಅದೇ ನೀರಿನಲ್ಲಿ ಮುಳುಗುತ್ತಿರುವ ಜನರ ಮುಖಗಳೂ ಒಂದೇ ಆಗಿ ಕಾಣುತ್ತವೆ.

ಲಕ್ಷ್ಮಿಯ ಚಿತ್ರದ ಹತ್ತಿರವೆ ಕುಳಿತುಕೊಂಡು 'ಗರೀಬ ನಿವಾಜ'ನ ಭಜನೆ ಮಾಡುತ್ತಿರುವ ಬಾಪ್ಪಾ ಅವರ ವಿಷಯದಲ್ಲಿ ಸುಲೋಚನೆಗೆ ಕೌತುಕವೆನಿಸಿತು. ಅವಳು ಬೀಗ ತೆಗೆದಳು. ಕೋಣೆಯಲ್ಲಿ ಅದೇ ಸಂಧಿ ಪ್ರಕಾಶವು ಪ್ರವೇಶಿಸುತ್ತಿತ್ತು. ಸುಲೋಚನೆ ಕೇಳಿದಳು :

"ಯಾಕೆ ಬಾಪ್ಪಾ ಅವರೆ, ನಿದ್ರೆ ಚೆನ್ನಾಗಿ ಆಯಿತಲ್ಲವೇ ?"

"ಚೆನ್ನಾಗಿಯೇ? ರಾತ್ರಿ ನೀನು ಬಂದವಳು ಯಾವಾಗ್ಗೆ ತಿರುಗಿ ಹೋದೆ ಇದು ಕೂಡ ನನಗೆ ಗೊತ್ತಾಗಲಿಲ್ಲ !"

"ನಾನು ಬಂದಿದ್ದೆನೆ ರಾತ್ರಿ ಇಲ್ಲಿ ?" ಸುಲೋಚನೆಯು ಆಶ್ಚರ್ಯದಿಂದ ಪ್ರಶ್ನೆಮಾಡಿದಳು.

"ಗುಪ್ತವಾಗಿಡಬೇಕಾಗಿದ್ದರೆ, ನಾನೇನೂ ಯಾರ ಮುಂದೆ ಹೇಳುವುದಿಲ್ಲ ! ಇಲ್ಲವಾದರೆ ವಿದ್ಯಾಧರರು ಸುಮ್ಮನೆ ಚೇಷ್ಟೆಮಾಡುವರು !"

"ನಾನೇನೂ ನಿದ್ರೆಯಲ್ಲಿ ಎದ್ದು ನಡೆದುಬರುವದಿಲ್ಲ ಎಂದೂ !"

"ನಿದ್ರೆಯಲ್ಲಿ ಏಕೆ ? ಒಳ್ಳೇ ಎಚ್ಚರದಲ್ಲಿಯೇ ಬಂದಿದ್ದೆ ನೀನು. ಕಲಾವಂತ ಕೆಲಸವಂದರೇನೆ ಹೀಗೆ, ರಾತ್ರಿ ಅಪರಾತ್ರಿಯಲ್ಲಾದರೂ ಎದ್ದು ಕೆಲಸ ಮಾಡುವರು. ಬಾಗಿಲ

ಸಪ್ಪಳವಾದ ಕೂಡಲೆ ನಾನು ಎಚ್ಚರಾದೆ. ಆದರೆ ನಾನು ಎಚ್ಚರಾದದ್ದು ನಿನಗೆ ತಿಳಿದರೆ ನಿನಗೆ ವಿರಸವಾಗಬಹುದೆಂದು ನಾನು ಒಮ್ಮೆಲೆ ಬಾಗಿಲ ಕಡೆಗೆ ಬೆನ್ನುಮಾಡಿ ಮಲಗಿಕೊಂಡೆ."

"ನಾನು ಇಲ್ಲಿ ಎಷ್ಟು ವೇಳೆ ಇದ್ದೆ ?"

"ಯಾರಿಗೆ ಗೊತ್ತು ! ನಾನು ಇತ್ತಕಡೆ ಮಗ್ಗುಲಾದ ಕೂಡಲೆ ನನಗೆ ನಿದ್ರೆ ಹತ್ತಿಬಿಟ್ಟಿತು !"

"ಇಲ್ಲಿ ಏನೋ ದೆವ್ವಿನ ಆಟ ಇರಬೇಕು ಹಾಗಾದರೆ !"

"ಸುಲೋಚನೆ ಕಲಾದೇವಿಗೆ ದೆವ್ವ ಅನ್ನಬೇಡ ; ಅವಳು ಕೋಪಿಸಿಕೊಂಡಳು !"

ಸುಲೋಚನೆಯು ಯೋಚಿಸತೊಡಗಿದಳು. ಈ ಕೋಣೆಗೆ ಇರುವ ಬೀಗದಕೈಗಳು ಒಟ್ಟಿನಲ್ಲಿ ಎರಡು, ಒಂದು ತನ್ನ ಹತ್ತಿರ ಇನ್ನೊಂದು ದಾದಾಸಾಹೇಬರ ಹತ್ತಿರ ! ಅಪರಾತ್ರಿಯಲ್ಲಿ ಎದ್ದು ದಾದಾಸಾಹೇಬರು ಯಾತಕ್ಕೆ ಬರುವರು ? ಬಾಪ್ಪಾ ಅವರಿಗೆ ಏನಾದರೂ ಭಾಸವಾಗಿರಬಹುದು.

ಕೋಣೆಯಲ್ಲಿ ಈಗ ಸ್ವಚ್ಛವಾಗಿ ಬೆಳಕು ಬಿದ್ದಿತ್ತು. "ದೆವ್ವಗಳು ಏನೇನು ಸುಧಾರಣೆ ಮಾಡಿವೆ ನೋಡೋಣ" ಎನ್ನುತ್ತ ಸುಲೋಚನೆಯು ತನ್ನ ಚಿತ್ರದ ಕಡೆಗೆ ಹೊರಟಳು. ಚಿತ್ರವನ್ನು ನೋಡುತ್ತಲೇ ಸುಲೋಚನೆಯು ಚಿಟ್ಟನೆ ಚೀರಿದಳು. ನಿದ್ರೆಯಲ್ಲಿಯೂ ಕೂಡ ಚಂದ್ರಮನ ಕೂಡ ಗುಟ್ಟುಮಾತುಗಳನ್ನಾಡುವ ಮುದ್ದುಮಗುವನ್ನು ನೋಡುವುದಕ್ಕೆ ತಾಯಿಯು ತೊಟ್ಟಿಲದಲ್ಲಿ ಇಣಿಕಿದಾಗ ಮಗುವನ್ನು ರಕ್ತಮಯವಾಗಿ ಕಂಡಂತೆ ಆಯಿತು ಸುಲೋಚನೆಯ ಸ್ಥಿತಿ. ಆ ಸುಂದರವಾದ ಚಿತ್ರದ ಮೇಲೆ ಬೇರೆಬೇರೆ ಬಣ್ಣಗಳಿಂದ ಡೊಂಕುಡೊಂಕಾಗಿ ಯಾರೋ ಪಟ್ಟಿಗಳನ್ನು ಎಳೆದುಬಿಟ್ಟಿದ್ದರು !

ಸುಲೋಚನೆಯು ಚೀರಿದ್ದನ್ನು ಕೇಳಿ ಬಾಪ್ಪಾ ಅವರು ಅತ್ತಕಡೆಗೆ ಬಂದರು. ಚಿತ್ರದ ದುರ್ದೆಸೆಯನ್ನು ನೋಡಿ ಅವರಿಗೂ ಆಶ್ಚರ್ಯವಾಯಿತು. "ಏನು ಹುಚ್ಚೀ, ರಾತ್ರಿಯಲ್ಲಿ ಎದ್ದು ಬಂದು ಇದೇನು ಮಾಡಿದೆ ?" ಎಂದು ಉದ್ಗಾರ ತೆಗೆದರು.

"ಮಾಡಿದವರು ಯಾರು ? ನಾನೇ ?" ಸುಲೋಚನೆಯು ಹುಚ್ಚಿಯಂತೆ ಬಾಪ್ಪಾ ಅವರ ಕಡೆಗೆ ನೋಡುತ್ತ ಪ್ರಶ್ನೆಮಾಡಿದಳು.

"ನೀನಲ್ಲದಿದ್ದರೆ ನಾನು ಮಾಡಿದೆನೆ ?"

"ಹೌದು, ಮಾಡಿದವರು ನೀವೇ ?" ಸುಲೋಚನೆಗೆ ಸಿಟ್ಟಿನಿಂದ ಎಚ್ಚರತಪ್ಪಿ ಆಡಿದಳು.

ಹೊರಗಿನಿಂದ ಬೀಗ ಹಾಕಿದಂತೆಯೇ ಇದ್ದಿತು. ಬೀಗದಕೈ ತನ್ನಲ್ಲಿಯೊಂದು, ದಾದಾಸಾಹೇಬರ ಹತ್ತಿರ ಒಂದು ; ತಾನಂತೂ ರಾತ್ರಿ ಕೋಣೆಯಲ್ಲಿ ಬಂದಿರಲಿಲ್ಲ : ದಾದಾಸಾಹೇಬರಂತೂ ಎಂದೂ ಬರತಕ್ಕವರಲ್ಲ. ಒಂದು ವೇಳೆ ಬಂದರೂ ತಮ್ಮ ಪ್ರೀತಿಯ ಮಗಳ ಚಿತ್ರವನ್ನು ಯಾತಕ್ಕೆ ಕೆಡಿಸುವರು ? ಅಂದಮೇಲೆ ಇದೆಲ್ಲವೂ ಬಾಪ್ಪಾ ಅವರಿಂದಲೇ ಆಗಿರಬೇಕೆಂದು ಸುಲೋಚನೆಯ ಮನವರಿಕೆಯಾಯಿತು. ಬಾಪ್ಪಾ ಅಂದರೆ ಅವಳಿಗೆ ಪ್ರಾಣವಾದರೂ, ಅವಳಿಗೆ ಅವರು ಆಕ್ಷಣ ವೈರಿಯಂತೆ ಭಾಸವಾದರು.



ಕೆಲಹೊತ್ತು ಶಾಂತವಾಗಿದ್ದು, ಬಾಪ್ಪಾ ಅವರು ಕೇಳಿದರು : "ನನ್ನ ಸುಲೋಚನೆಯ ಚಿತ್ರ ಕೆಡಿಸಿ ನನಗೇನು ಸಿಗಬೇಕಾಗಿದೆ ?"

"ನೀವು ಬಡಬಗ್ಗರ ಕೈವಾರಿಗಳು. ಲಕ್ಷ್ಮಿಯ ಮೇಲೆ ಸೇಡು ತೀರಿಸಿದ್ದರಾದೀತು."

"ಸುಲು, ಚಿತ್ರದಲ್ಲಿಯ ಲಕ್ಷ್ಮಿಯ ಮೇಲೆ ಸೇಡು ತೀರಿಸಿಕೊಳ್ಳಲಿಕ್ಕೆ ನಾನೇನು ಮಗುವೆ?"

"ಕಲೆಯ ಬೆಲೆ ನಿಮಗೆಲ್ಲಿ ತಿಳಿಯುವದು ? ನಿಮಗೆ ಬೇಕಾದದ್ದು ಯಾವಾಗಲೂ ಜೀವನ–ಜೀವನವೊಂದೇ–ಜೀವನದ ಸಲುವಾಗಿ ಕಲೆ ಅನ್ನುವವರು ನೀವು !"

"ಜೀವನದ ಸಲುವಾಗಿ ಕಲೆ ಎಂದು ಅನ್ನುವವನು ನಾನೆಂತಲೇ ನಿನ್ನ ಚಿತ್ರವನ್ನು ಕೆಡಿಸುವದು ಶಕ್ಯವಿಲ್ಲ."

"ಚಿತ್ರವೆಂದರೆ ಚಿತ್ರವೆಂದು ಭಾವಿಸುವವರು ನೀವು. ನಿಮಗೆ ಅದು ಕೇವಲ ಕಲೆಯಾಗಿ ಅನಿಸಿರಬಹುದು !"

"ಸುಲೋಚನೆ, ನಿನ್ನ ಚಿತ್ರವು ನನಗೆ ಕೇವಲ ಕಲೆಯಾಗಿಲ್ಲ. ಅದು ಜೀವನವೂ ಆಗಿದೆ !"

"ಜೀವನ ? ಈ ಚಿತ್ರವು ನಿಮ್ಮ ಜೀವನವೇ ?"

"ಚಿತ್ರವು ನಿನ್ನ ಜೀವನವಾಗಿದ್ದರೆ, ನೀನು ನನ್ನ ಜೀವನ !"

"ಹೌದು, ಕೇವಲ ಜೀವನ ಅಷ್ಟೇ ಏಕೆ ? ಜೀವನದ ಜೀವನ !"

ಹೀಗೆ ಮಾತಾಡುತ್ತಿರುವಾಗ ಬಾಪ್ಪಾ ಅವರು ಸುಲೋಚನೆಯ ಬೆನ್ನ ಮೇಲೆ ಅತ್ಯಂತ ವಾತ್ಸಲದಿಂದ ಕೈಯಾಡಿಸಿದರು. ಅದರಿಂದ ಸುಲೋಚನೆಗೆ ಅವರ ವಿಷಯದಲ್ಲಿ ಸುಮ್ಮನೆ ಕುಶಂಕೆಗಳನ್ನು ಕಲ್ಪಿಸಿಕೊಂಡದ್ದಕ್ಕಾಗಿ ಪಶ್ಚಾತ್ತಾಪವಾಗಿ, ಅವಳ ಕಣ್ಣೊಳಗಿನಿಂದ ಅಶ್ರುಗಳು ಧಾರೆಯಾಗಿ ಹರಿಯಹತ್ತಿದವು.

* * * * *

ಚಿತ್ರವು ಕೆಟ್ಟುಹೋಯಿತೆಂದು ದಾದಾ ಸಾಹೇಬರು ಬಹಳ ಕೋಪಿಸಿಕೊಳ್ಳುವರೆಂದು ಸುಲೋಚನೆಯು ತಿಳಿದಿದ್ದಳು. ಆದರೆ ಅವರು ಕಾರಖಾನೆಯ ಪುಸ್ತಕದ ವಿಷಯದಲ್ಲಿ ರಮಾಕಾಂತನ ಕೂಡ ಮಾತಿನಲ್ಲಿ ತೊಡಗಿದ್ದರು. ನಿಯಮಿತ ವೇಳೆಯಾಗಿ ಹೋದರೂ ವಿದ್ಯಾಧರ ಬರಲಿಲ್ಲ. ರಮಾಕಾಂತನ ಮೋರೆಯ ಮೇಲೆ ವಿಜಯದ ಹಾಸ್ಯವು ಮಿನುಗ ಹತ್ತಿತು. ಕಡೆಗೆ ದಾದಾಸಾಹೇಬರು ಆಳನ್ನು ಕಳಿಸಿಕೊಟ್ಟರು. ವಿದ್ಯಾಧರನು "ಬರಲಿಕ್ಕಾಗುವದಿಲ್ಲ ಕ್ಷಮಿಸಬೇಕು" ಎಂದು ಚೀಟಿ ಬರೆದು ಆಳನ್ನು ತಿರುಗಿ ಕಳಿಸಿದ. ದಾದಾಸಾಹೇಬರು ಸಂತಾಪದಿಂದ ಗದ್ದರಿಸಿದರು "ಏನು ಇದರ ಅರ್ಥ ?"

"ಅಷ್ಟೇನೂ ಕಠಿನವಿಲ್ಲ ಈ ಗ್ರಂಥ !" ರಮಾಕಾಂತನು ಕುತ್ಸಿತತನದಿಂದ ಮಾತಿನ ಕೋಟಿ ಹೊಡೆದನು.

ಸುಲೋಚನೆಯು ಕೆಳಗೆ ನೋಡುತ್ತ ಕುಳಿತುಕೊಂಡಿದ್ದಳು. ಅವಳಿಗೆ ಮಾತಾಡಲಿಕ್ಕೆ

ಮೋರೆಯೇ ಇರಲಿಲ್ಲ.

“ಯಂತ್ರದ ಕಾಗದಗಳನ್ನಾದರೂ ಕಳಿಸಿಕೊಡಲಿಕ್ಕೆ ಹೇಳಿಕಳಿಸಿ ನೋಡಿರಿ” ಎಂದು ರಮಾಕಾಂತನು ಸೂಚಿಸಿದ.

ಆಳು ಹೋಗಿ ಮತ್ತೆ ಇಲ್ಲವೆಂದು ತಿರುಗಿ ಬಂದ. ದಾದಾಸಾಹೇಬರು ಕೋಪಿಸಿ ಕೆಂಡವಾಗಿದ್ದರು. ಅವರ ಕೋಪಾಗ್ನಿಯಲ್ಲಿ ಆಗಾಗ ರಮಾಕಾಂತ ಎಣ್ಣೆಯನ್ನು ಸುರುವುತ್ತಿದ್ದ. ಅದರಲ್ಲಿ ವಿದ್ಯಾಧರನ ವಿದ್ವತ್ತು, ಅಂತಃಕರಣ, ಶೀಲ ಇವೆಲ್ಲವೂ ಭಸ್ಮವಾಗುವಂತೆ ತೋರಿದವು. ವಿದ್ಯಾಧರನು ಶುದ್ಧ ಲಫಂಗನಿದ್ದು, ಅವನು ಯಂತ್ರ ಮಾಡುತ್ತೇನೆಂದು ಸುಲೋಚನೆಯ ಮುಂದೆ ಹೇಳಿದ್ದೆಲ್ಲ ಸುಮ್ಮನೆ ಅವಳ ಮನಸ್ಸಿನ ಮೇಲೆ ಏನಾದರೂ ಒಂದು ಪರಿಣಾಮವನ್ನುಂಟುಮಾಡಬೇಕೆಂತಲೇ ಇರಬೇಕು; ಅವನನ್ನು ಆದಷ್ಟು ತೀವ್ರ ಹೊರಗಟ್ಟಲಿಕ್ಕೇ ಬೇಕು ಎಂದು ದಾದಾಸಾಹೇಬರೂ ಮತ್ತು ರಮಾಕಾಂತನೂ ಯೋಚಿಸ ಹತ್ತಿದಾಗ ಮಾತ್ರ ಸುಲೋಚನೆಗೆ ಸುಮ್ಮನಿರಲಿಕ್ಕಾಗಲಿಲ್ಲ. ಅವಳು ಅಲ್ಲಿಂದ ಎದ್ದು “ನಾನು ಇದೇ ಈಗ ಬಂದೆ” ಎಂದು ಹೇಳಿ ಹೊರಟಳು.

“ಎಲ್ಲಿಗೆ ?”

“ವಿದ್ಯಾಧರನ ಕಡೆಗೆ, ಕಾಗದಗಳನ್ನು ತೆಗೆದುಕೊಂಡು ಬರುವೆ !”

“ಅವನ ಹತ್ತಿರ ಕಾಗದ ಇದ್ದರಲ್ಲವೆ ತರುವದು ?” ರಮಾಕಾಂತನು ಅರ್ಧ ಅಣಕಿಸಿದಂತೆಯೇ ಅಂದನು.

“ನಾನು ನನ್ನ ಕಣ್ಣುಗಳಿಂದ ನೋಡಿದ್ದೇನೆ ಆ ಕಾಗದಗಳನ್ನು”

“ಕಣ್ಣುಗಳು ಮೋಸಮಾಡುತ್ತವೆ ಒಮ್ಮೊಮ್ಮೆ !”

ವಿದ್ಯಾಧರನ ಕೋಣೆಯ ಕಡೆಗೆ ಹೋಗುತ್ತಿರುವಾಗ ಸುಲೋಚನೆಯನ್ನು ಒಂದೇ ಪ್ರಶ್ನೆ ಕಾಡುತ್ತಿತ್ತು. “ಕಣ್ಣುಗಳು ಮನುಷ್ಯನಿಗೆ ಮೋಸ ಮಾಡುವದುಂಟೆ ?” ವಿದ್ಯಾಧರನ ನಿರ್ಮಲವಾದ ಕಣ್ಣುಗಳು ಅವಳಿಗೆ ನೆನಪಾದ ಕೂಡಲೆ ಅವಳು “ಛೇ, ಶಕ್ಯವಿಲ್ಲ, ವಿದ್ಯಾಧರರು ಎಂದಿಗೂ ಮೋಸಮಾಡುವವರಲ್ಲ !”

ಅವಳು ಕೋಣೆಯಲ್ಲಿ ಕಾಲಿಟ್ಟ ಕೂಡಲೆ ವಿದ್ಯಾಧರನು ಮೋರೆ ತಿರುವಿ ಗೋಡೆಯ ಕಡೆಗೆ ನೋಡಹತ್ತಿದ. ಕೆಲಹೊತ್ತು ಅವಳಿಗೆ ಅವನ ವಿಚಿತ್ರ ನಡೆಯ ಅರ್ಥವೇ ಆಗಲಿಲ್ಲ. ಆದರೆ ಅವಳು ಮೃದುವಾಗಿ ಕೇಳಿದಳು : “ನಿಮಗೆ ಏನಾಗಿದೆ ಇಂದು ?”

“ಏನೂ ಇಲ್ಲ.”

“ಬರಲಿಕ್ಕೆ ಒಪ್ಪಿಕೊಂಡು ಯಾಕೆ ಬರಲಿಲ್ಲ ನೀವು ?”

“ಯಾವ ಮೋರೆಯಿಂದ ಬರಲಿ ?”

“ಬರಲಿಕ್ಕೆ ಮೋರೆಯಾತಕ್ಕೆ ಬೇಕು ? ಒಳ್ಳೇ ಎರಡು ಕಾಲುಗಳಿವೆಯಲ್ಲ !”

ವಿದ್ಯಾಧರನು ನಗಲಿಲ್ಲ. ನಿಶ್ಚಯದ ಮುದ್ರೆಯಿಂದ ಅವನು ಹೇಳಿದ: “ನಿನ್ನಿನ ರಾತ್ರಿ ಆ ಕಾಗದಗಳು ಇಲ್ಲದಂತಾದವು !”



“ದೆವ್ವ ಗಿವ್ವ ಕಾಗದಗಳನ್ನು ಒಯ್ದವೇನೊ ? ಅದರಲ್ಲಿ ನಿನ್ನೆ ಅಮಾವಾಸ್ಯೆ ಬೇರೆ !”

“ದೆವ್ವ ಇಲ್ಲ ಗಿವ್ವ ಇಲ್ಲ.”

“ದೆವ್ವ ಇಲ್ಲದಿದ್ದರೆ, ದೇವಿ ಒಯ್ದಳೇ ? ಅವಳ ಕೋಪವೂ ಆಯಿತೋ ನಿಮ್ಮ ಮೇಲೆ ?”

“ಕೋಪವಾಯಿತೋ ಕೃಪೆಯಾಯಿತೋ ತಿಳಿಯದಂತಾಗಿದೆ !”

ವಿದ್ಯಾಧರನು ಮನಸ್ಸಿಲ್ಲದೆ ಮಾತಾಡುವದನ್ನು, ತನ್ನ ದೃಷ್ಟಿಗೆ ಅವನ ದೃಷ್ಟಿಯನ್ನು ಎದುರಿಸುವದಕ್ಕೆ ಧೈರ್ಯವಿಲ್ಲದ್ದನ್ನು ನೋಡಿ ಸುಲೋಚನೆಗೆ ಹೇಗೋ ಅನಿಸಿತು. ನಿನ್ನೆ ಸಾಯಂಕಾಲ ತಯಾರಾದ ಎಲ್ಲ ಕಾಗದಗಳನ್ನು ತನಗೆ ತೋರಿಸಿದನೇನು. ಈಗ ಮುಂಜಾವಿನಲ್ಲಿ ಅವು ಕಳೆದುಹೋದವೆಂದು ಹೇಳುವನೇನು ! ಸುಲೋಚನೆಯ ಮನಸ್ಸಿನಲ್ಲಿ ಒಮ್ಮೆಲೆ ಒಂದು ವಿಚಾರ ಬಂದಿತು. ವಿದ್ಯಾಧರನ ಮನಸ್ಸಿನಲ್ಲಿ ದಾದಾಸಾಹೇಬರಿಗೆ ಆ ಯಂತ್ರವನ್ನು ಮಾರಬೇಕೆಂದಿರಲಿಕ್ಕಿಲ್ಲ ! ಆದರೆ ಹೀಗೆ ಮಾಡಲಿಕ್ಕೆ ದಾದಾಸಾಹೇಬರಾದರೂ ಅವನಿಗೇನು ಅನ್ಯಾಯ ಮಾಡಿರುವರು ? ಇದಲ್ಲದೆ ದಾದಾಸಾಹೇಬರ ವಿಷಯದಲ್ಲಿ ಅವನ ಅಭಿಪ್ರಾಯವು ಏನಿದ್ದರೂ ತನ್ನ ಸಲುವಾಗಿಯಾದರೂ–

ಕ್ಷಣಹೊತ್ತು ಶೂನ್ಯದೃಷ್ಟಿಯಿಂದ ಹೊರಗೆ ನೋಡಿ ಅವಳು ಕೇಳಿದಳು: “ನಿಮ್ಮ ಬೀಗದ ಕೈಗಳನ್ನು ನನಗೆ ಕೊಡುವಿರಾ ಸ್ವಲ್ಪ ?”

“ನನ್ನದೇನು ‘ಝಡತಿ’ ತಗೊಳ್ಳುವಿರಾ ? ಆದರೆ ವಾರಂಟು ಎಲ್ಲಿದೆ ?”

“ಸಾದಾ ವಾರಂಟು ಇಲ್ಲ ; ಒಳ್ಳೇ ಆರ್ಡಿನನ್ಸ್ ಇದೆ !”

ಶೂನ್ಯವಾದ ಮನಸ್ಸಿನಿಂದ ವಿದ್ಯಾಧರನು ಅವಳ ಕೈಯಲ್ಲಿ ಬೀಗದ ಕೈಗಳನ್ನು ಕೊಟ್ಟ. ಅವಳು ಮೇಜಿನ ಮೇಲಿನ ಎಲ್ಲ ಕಾಗದಗಳನ್ನು ತಿರುವಿ ಹಾಕಿ ನೋಡಿದಳು. ಟೇಬಲ್ಲಿನ ಡ್ರಾಅರುಗಳೆಲ್ಲವನ್ನೂ ನೋಡಿದಳು. ಆದರೆ ಎಲ್ಲಿಯೂ ಸಿಗಲಿಲ್ಲ. ಬಟ್ಟೆಯ ಸಣ್ಣ ಕಪಾಟಿನೊಂದನ್ನೂ ತೆರೆದು ಹುಡುಕಿ ನೋಡಿದಳು. ಕಾಗದಗಳೇನು ಅಲ್ಲಿಯೂ ಇರಲಿಲ್ಲ. ಇನ್ನು ಉಳಿದದ್ದು ಎರಡು ಟ್ರಂಕು. ದೊಡ್ಡ ಟ್ರಂಕು ತೆರೆದೂ ನೋಡಿದ್ದಾಯಿತು : ಸಣ್ಣ ಟ್ರಂಕಿನ ಬೀಗದ ಕೈಯ ಸಲುವಾಗಿ ಅವಳು ನೋಡಲಾರಂಭಿಸಿದಾಗ ವಿದ್ಯಾಧರ ಹೇಳಿದ : “ಇರಲಿ, ಆ ಟ್ರಂಕು ಮಾತ್ರ ನೋಡಬೇಡ–”

“ಹಾ ಹೇಗೆ ಹೊರಬಿದ್ದಿತು ಕಳವು ?” ಅವಳು ಬೀಗದ ಕೈ ತಿರುವುತ್ತ ವಿದ್ಯಾಧರನ ಕಡೆಗೆ ನೋಡಿದಳು. ಅವನ ಮುಖಚರ್ಯೆಯು ಇಳಿದುಹೋಗಿತ್ತು. ಮನದಲ್ಲಿ ಆಶ್ಚರ್ಯಪಡುತ್ತ ಅವಳು ಟ್ರಂಕಿನೊಳಗಿನ ಸಾಮಾನುಗಳನ್ನೆಲ್ಲ ನೋಡಹತ್ತಿದಳು.

ಒಂದು ವಹಿ ಅವಳು ಸಹಜವಾಗಿ ತೆರೆದಳು. ರಮಾಕಾಂತನ ಅಕ್ಷರ !

ಆದರೆ ಅವಳಿಗೆ ವಿಚಾರ ಮಾಡಲಿಕ್ಕೆ ಹೊತ್ತೇ ಇದ್ದಿಲ್ಲ. ಆ ವಹಿಯ ಬುಡದಲ್ಲಿಯೇ ಒಂದು ಒಡೆದ ಪತ್ರವಿತ್ತು ! ಸುರಂಗೆಯ ಅಕ್ಷರ !

ಅವಳು ಆ ಪತ್ರವನ್ನು ತೆಗೆದುಕೊಂಡಳು ; ಅದರ ಕೆಳಗೆ–ತೆಳ್ಳಗಿನ ಕೆಂಪು ಕಾಗದದಲ್ಲಿ

ಸುತ್ತಿಟ್ಟ ಕೆಲವು ಫೋಟೋಗಳಿದ್ದವು. ಅವಳು ಹೊರಗೆ ತೆಗೆದು ನೋಡಿದಳು. ಅವೆಲ್ಲವೂ ಕೃಷ್ಣೆಯ ಫೋಟೋ ! ಗೋಡಂಬೆಯ ಕಾರಖಾನೆಯಲ್ಲಿ ತೆಗೆದುಕೊಂಡವುಗಳು ! ಈ ಫೋಟೋಗಳ ಕಾಜು ಒಡೆದುಹೋದವೆಂದು ಹೇಳಿದ್ದ ವಿದ್ಯಾಧರ.

ವಿದ್ಯಾಧರ ಮತ್ತು ಕೃಷ್ಣೆ–ಅವಳಿಗೆ ಆ ಹುಣ್ಣಿಮೆಯ ರಾತ್ರಿಯು ನೆನಪಾಯಿತು. ವಿದ್ಯಾಧರನು ಅವಳನ್ನು ತನ್ನ ಜೊತೆಯಲ್ಲಿ ಇರಿಸಿಕೊಂಡಿದ್ದ. ಅವಳನ್ನು ತನ್ನ ಸರಿಯಾಗಿ ಎಣಿಸುವದು, ಅವಳಿಗೆ ಚಿತ್ರತೋರಿಸುವದು ಅವಳ ಸ್ತುತಿಮಾಡುವದು–ವಿದ್ಯಾಧರನ ಪ್ರೇಮ ಸ್ವಭಾವದ ಹಸಿರು ಹುಲ್ಲಿನಲ್ಲಿ ಇಂಥ ಹಾವು ಅಡಗಿಕೊಂಡಿರಬಹುದೆಂದು ಅವಳಿಗೆ ಎಂದಿಗೂ ಸಂಶಯ ಬಂದಿರಲಿಲ್ಲ. ಆದರೆ ಆ ಕೃಷ್ಣೆಯ ಆ ಫೋಟೋಗಳನ್ನು ನೋಡಿದ ಕೂಡಲೆ ಅವಳ ಮನಸ್ಸಿನಲ್ಲಿಯೆ ಮತ್ಸರವು ತಲೆಯೆತ್ತಿತು.

ವಿದ್ಯಾಧರನ ಕಡೆಗೆ ಒಂದು ತಿರಸ್ಕಾರಯುಕ್ತವಾದ ಕಟಾಕ್ಷವನ್ನು ಎಸೆದು ಸುಲೋಚನೆಯು ಒಮ್ಮೆಲೆ ಕೋಣೆಯ ಹೊರಗೆ ಬಂದಳು. ಬಾಗಿಲದಲ್ಲಿಯೇ ರಮಾಕಾಂತನು ಕಾಶಿಯ ಕೂಡ ಮಾತಾಡುತ ನಿಂತಿದ್ದ. ಅವ ಕೇಳಿದ : "ಸಿಕ್ಕವೇನು ಕಾಗದ ?"

"ನಿನ್ನೆ ರಾತ್ರಿ ಇಲ್ಲವಾದವಂತೆ ಅವು ?"

"ನಿನ್ನೆ ರಾತ್ರಿಯೇ ?" ಕಾಶಿಯ ಕಡೆಗೆ ನೋಡುತ್ತ ರಮಾಕಾಂತ ಕೇಳಿದ.

"ಬಂದಿರಬೇಕು ಯಾವುದಾದರೊಂದು ಭೂತ ಇಲ್ಲವೆ ಪಿಶಾಚಿ ಅವುಗಳನ್ನು ಒಯ್ಯಲಿಕ್ಕೆ !"

"ಭೂತ ಅಲ್ಲ ಪಿಶಾಚಿಯೇ ಬಂದಿರಬೇಕು ?"

"ಅಂದರೆ ?"

"ಕೇಳು ಈ ಕಾಶಿಯನ್ನು ! ಆ ಕೃಷ್ಣೆ ಹೋಗಿದ್ದಳು ಅವನ ಕಡೆಗೆ ನಿನ್ನೆ ಮಧ್ಯರಾತ್ರಿಯಲ್ಲಿ ಎದ್ದು !"

## ೨೧

## ದೀಪಮಾಲೆಯ ಮೇಲೆ

ಸುರಂಗೆಯ ಮನವಿಯೊಡನೆ ಕಾಶಿಯು ರಮಾಕಾಂತನ ಕಡೆಗೆ ಬಂದಿದ್ದಳು. ಇತ್ತೀಚೆಗೆ ಅವನ ವಿಷಯದಲ್ಲಿಯ ಸುಲೋಚನೆಯ ಔದಾಸೀನ್ಯವು ವಿಪರೀತವಾಗಿತ್ತು. ಸುರಂಗೆಯು ಊರಲ್ಲಿದ್ದದ್ದು ತಿಳಿದ ಕೂಡಲೇ ಅವಳ ಕಡೆಗೆ ರಮಾಕಾಂತನು ಭೆಟ್ಟಿಗೆಂದು ಹೋಗಬಹುದಾಗಿತ್ತು. ಆದರೆ ಉಳಿದ ಸಮಾಚಾರದೊಡನೆ ಕಾಶಿಯು ಸುರಂಗೆಗೆ ಮೈಲಿ ಬೇನೆ ಬಂದ ಸಂಗತಿಯನ್ನಾದರೂ ಹೇಳಿದಳು. ಸುರಂಗೆಯ ಸಂಗೀತವಿದ್ದರೆ ಮಾತು ಬೇರೆ. ಆದರೆ ಅವಳ ನರಳುವಿಕೆಯನ್ನು ಕೇಳಲಿಕ್ಕೆ ಯಾರು ಹೋಗುವರು ? ಅವಳು ವಹಿಸುವ ನಾಟಕದಲ್ಲಿಯ ಯಾವದಾದರೊಂದು ಭೂಮಿಕೆಯನ್ನು ನೋಡಲಿಕ್ಕೆ ರಮಾಕಾಂತನು ಆತುರನಾಗುತ್ತಿದ್ದ. ಆದರೆ ಮೈಲೀ ಬೇನೆಯಿಂದ, ಹಾಸಿಗೆಯಲ್ಲಿ ಬಿದ್ದುಕೊಂಡಿರುವ ಸುರಂಗೆಯನ್ನು ನೋಡುವದು ಅವನಿಗೆ ಕಷ್ಟವಾಯಿತು. ಬೇನೆ ಬೇಸರಿಕೆ,



ಸೇವೆ ಶುಶ್ರೂಷೆ, ಔಷಧ, ಮರಣ, ಇವೆಲ್ಲವುಗಳೆಂದರೆ ರಮಾಕಾಂತನಿಗೆ ತೀರ ಬೇಸರ. ತಿಂಗಳೆರಡು, ತಿಂಗಳಿಗೊಮ್ಮೆ ಪಾಂಚಗಣಿಯಲ್ಲಿದ್ದ ತನ್ನ ತಂದೆಯ ದೇಹಾಲಸ್ಯದ ಬಗ್ಗೆ ವಿಚಾರಿಸುವುದಕ್ಕೆ ಹೋಗುತ್ತಿದ್ದುದೇನೋ ನಿಜ. ಆದರೆ ಅವರನ್ನು ತಂದೆಯಕಿಂತ ಕ್ಷಯರೋಗಿಯೆಂಬ ದೃಷ್ಟಿಯಿಂದಲೇ ಅವನು ನೋಡುತ್ತಿದ್ದ. ಸಾಧ್ಯವಿದ್ದಷ್ಟು ಅವರಿಂದ ದೂರವಾಗಿರುತ್ತಿದ್ದ. ಸುರಂಗೆಯು ಮೈಲಿಬೇನೆಯಿಂದ ಹಾಸಿಗೆ ಹಿಡಿದಿರುವಳೆಂದ ಮೇಲೆ, ತಾನು ಅವಳನ್ನು ಕಾಣಲಿಕ್ಕೆಂದು ಹೋದರೆ, ಅವಳು ಆ ಹುಡುಗನನ್ನು ತನ್ನ ಕೊರಳಲ್ಲಿ ಕಟ್ಟಲಿಕ್ಕೆ ಹವಣಿಸುವಳು. ಮೈಲಿ ಬೇನೆಯವರ ಹತ್ತಿರಕ್ಕೆ ಕುಳಿತುಕೊಳ್ಳುವ ಮನುಷ್ಯನಿಗೆ ಮೈಲಿ ಬೇನೆ ಬರುವ ಸಂಭವವಿರುತ್ತದೆ. ಇತ್ಯಾದಿ ವಿಚಾರಗಳು ರಮಾಕಾಂತನ ಮನಸ್ಸಿನಲ್ಲಿ ಕ್ಷಣಾರ್ಧದಲ್ಲಿ ಹೊಳೆದುಹೋದವು.

ಮಾತುಮಾತಿನಲ್ಲಿ ಸುರಂಗೆಯ ಶುಶ್ರೂಷೆಯನ್ನು ಯಾರು ಮಾಡುವರೆಂದು ರಮಾಕಾಂತ ಕೇಳಿದ. ಮುದುಕರಿಗೆ ಮಾತು ಕಥೆಗೆ ಯಾರಾದರೂ ಸಿಕ್ಕರೆ ಸಾಕು. ಅದರಲ್ಲಿ ಮಧ್ಯರಾತ್ರಿಯಲ್ಲಿ ಕೃಷ್ಣೆಯು ಎದ್ದು ವಿದ್ಯಾಧರನ ಕೋಣೆಗೆ ಹೋದದ್ದನ್ನು ನೊಡಿಯಂತೂ ಕಾಶಿಯು ಕೋಪದಿಂದ ಕೆಂಡದಂತಾಗಿದ್ದಳು. ಅವಳು ಮುಂಜಾನೆ ಅವಳನ್ನು ಮನೆಯಿಂದ ಹೊರಗೆ ಹಾಕತಕ್ಕವಳು. ಆದರೆ ದುಡ್ಡಿದ್ದ ಸುರಂಗೆಯ ಮಾತು ಮೀರಲಾರದೆ ಅವಳು ಸುಮ್ಮನಾಗಿದ್ದಳು. ಮಧ್ಯರಾತ್ರಿಯಲ್ಲಿ ಎದ್ದು ಕೃಷ್ಣೆಯು ಒಬ್ಬ ಪುರುಷನ ಕೋಣೆಗೆ ಯಾಕೆ ಹೋಗಿರಬಹುದೆಂಬುದು ಸುರಂಗೆಗೂ ಗೂಢವೇ ಉಳಿಯಿತು. ಆದರೆ ಅವಳ ಉತ್ಕಟ ಪ್ರೇಮದ ಅನುಭವವು ಅವಳಿಗೆ ಸಂಪೂರ್ಣವಾಗಿ ಆಗಿದ್ದರಿಂದ, ಅವಳು ಕಾಶಿಗೆ ಹಾಗೆ ಬಿನ್ನವಿಸಿಕೊಂಡಳು.

ಹೀಗಾಗಿ ಕಾಶಿಗೆ ಮನೆಯಲ್ಲಿ ನಾಲಗೆಗೆ ಲಗಾಮು ಹಾಕಿದಂತಾಗಿತ್ತು. ಕೃಷ್ಣೆಯ ಹೆಸರು ತೆಗೆದ ಕೂಡಲೆ, ಅವಳ ಎಲ್ಲ ಇತಿಹಾಸವನ್ನೂ ರಮಾಕಾಂತನ ಮುಂದೆ ಹೇಳಹತ್ತಿದಳು. ಈ ಪುರಾಣದಲ್ಲಿ ವಿದ್ಯಾಧರನ ಹೆಸರೂ ಮೊದಲಿಗೆ ಬಂದುದರಿಂದ ರಮಾಕಾಂತನೂ ಅದನ್ನು ಒಳ್ಳೇ ಆತುರದಿಂದ ಕೇಳುತ್ತಿದ್ದು ನಡುನಡುವೆ ಅವಳಿಗೆ ಪ್ರಶ್ನೆ ಕೇಳುತ್ತಿದ್ದ. ಕಾಶಿಯಾದರೂ ತಾನು ನೋಡಿದ, ಕೇಳಿದ ಎಲ್ಲ ಸಂಗತಿಗಳನ್ನು ಹೆಚ್ಚಾಗಿ ಉಪ್ಪುಕಾರ ಹಚ್ಚಿ ಹೇಳಿದಳು. ಕಳೆದ ನಾಲ್ಕು ತಿಂಗಳಿಂದ ವಿದ್ಯಾಧರ ಕೃಷ್ಣೆಯರದು ಅನಿಷ್ಟ ಸಂಬಂಧ ಇರಲೇಬೇಕೆಂದು ರಮಾಕಾಂತನಿಗೆ ಮನದಟ್ಟಾಯಿತು. ಇದನ್ನೆಲ್ಲವನ್ನು ಸುಲೋಚನೆಗೂ ಮನವರಿಕೆ ಮಾಡಿಕೊಡುವದಕ್ಕಾಗಿ ಕಾಶಿಯನ್ನು ಮತ್ತೆ ಯಾವಾಗ ಕರೆಸಿಕೊಳ್ಳಬೇಕೆಂಬ ವಿಚಾರದಲ್ಲಿಯೆ ಅವನು ಬಾಗಿಲ ಹತ್ತಿರಕ್ಕೆ ಬಂದನು. ಇಷ್ಟರಲ್ಲಿ ವಿದ್ಯಾಧರನ ಮೇಲೆ ಸಂತಪ್ತಳಾದ ಸುಲೋಚನೆಯು ಬರುವುದನ್ನು ಕಂಡ. ನೆಲವಂತೂ ತಾನಾಗಿಯೇ ಕಾಯ್ದದ್ದು ಇತ್ತು. ಇನ್ನೇನು ಮಳೆ ಬೀಳುವದೊಂದೇ ಉಳಿದಿತ್ತು.

ಸುಲೋಚನೆಯು ಕಾಶಿಯನ್ನು ತನ್ನ ಚಿತ್ರದ ಕೋಣೆಯಲ್ಲಿ ಕರೆದುಕೊಂಡು ಹೋದಳು. ಕಾಶಿಯು ವಿದ್ಯಾಧರ– ಕೃಷ್ಣೆಯರ ವಿಷಯದಲ್ಲಿ ಎಲ್ಲವನ್ನು ಸವಿಸ್ತಾರವಾಗಿ

ಹೇಳಿದಳು. ಕ್ಷಣಾರ್ಧದಲ್ಲಿಯೇ ಸಂಶಯದ ವಿಷಬೀಜವು ವೃಕ್ಷವಾಗಿಯೇ ಬೆಳೆಯಿತು. ಕಾಶಿಯು ಎದ್ದು ಹೋದನಂತರ ಸುಲೋಚನೆಯು ಖಿನ್ನದೃಷ್ಟಿಯಿಂದ ಲಕ್ಷ್ಮಿಯ ಚಿತ್ರದ ಕಡೆಗೆ ನೋಡಿದಳು. ತನ್ನ ಮನಃಪಟಲದ ಮೇಲಿನ ವಿದ್ಯಾಧರನ ಮೂರ್ತಿಯಾದರೂ ಅದರಂತೆಯೇ ವಿದ್ರೂಪವಾದದ್ದನ್ನು ಅವಳು ಕಂಡಳು. ರಮಾಕಾಂತನ ಕಡೆಗೆ ನೋಡಿ, ನಸುನಗುತ್ತ ಅವಳು ಆ ಲಕ್ಷ್ಮಿಯ ಚಿತ್ರವನ್ನು ಚೂರುಚೂರಾಗಿ ಹರಿದುಹಾಕಿದಳು.

ಊರಲ್ಲಿಯ ಜನರ ಮನಸ್ಸಿನಲ್ಲಿ ತಮ್ಮ ವಿಷಯದಲ್ಲಿ ಕಲ್ಮಷ ಉಂಟಾಗಿದೆ ಎಂಬುದು ಬಾಪ್ಪಾ ಅವರಿಗೆ ಊರವರ ಭೇಟ್ಟಿಯಾದಾಗ ತಿಳಿಯಿತು. ಆದರೆ ಅವರ ಸ್ವಭಾವ ಅತ್ಯಂತ ಮಧುರವಾದದ್ದು.

ಒಂದು ಶಬ್ದದಿಂದ ಕೂಡ ಯಾರದೂ ಮನ ನೋಯಿಸದೆ ಎಲ್ಲರಿಗೂ ತಿಳಿಸಿ ಹೇಳುವ ಪ್ರಯತ್ನ ಮಾಡಿದರು. ಬಾಪ್ಪಾ ಅವರಿಗೆ ಅವರ ಮೋರೆಯ ಮೇಲೆ ಯಾರೂ ಕೆಟ್ಟಮಾತುಗಳನ್ನಾಡಲಿಲ್ಲ. ಆದರೆ, ದೇವಿಗೆ ಕೋಣವನ್ನು ಬಲಿಕೊಡಲಿಲ್ಲವೆಂದೇ ಊರಲ್ಲಿ ಮೈಲಿಬೇನೆ ಹಬ್ಬಿಕೊಂಡಿತೆಂಬ ಭಾವನೆಯನ್ನು ಮಾತ್ರ ಊರವರ ಮನಸ್ಸಿನೊಳಗಿಂದ ತೆಗೆದು ಹಾಕುವದು ಕಠಿಣವಾದ ಮಾತೆಂಬುದು ಮಾತ್ರ ಬಾಪ್ಪಾ ಅವರಿಗೆ ಸಂಪೂರ್ಣವಾಗಿ ತಿಳಿದುಬಂದಿತು. ಕಡೆಗೆ ಏನೋ ಒಂದು ವಿಚಾರ ಹೊಳೆದು ಅವರು ಹೇಳಿದರು "ರಾಮನವಮಿಯ ದಿವಸ ನಾನು ತಿರುಗಿ ಬರುವೆ. ರಾಮಜನ್ಮದ ಪೂರ್ವದಲ್ಲಿ ಪುರಾಣವನ್ನು ಓದಿ ಹೇಳುವೆ. ಪುರಾಣದಲ್ಲಿಯೂ ಕೂಡ, ದೇವರಿಗೆ ಯಾತರದೂ ಬಲಿ ಕೊಡಬಾರದೆಂದು ಬರೆದಿದೆ" ಎಂದು ಹೇಳಿದರು.

ಅಲ್ಲಿಂದ ಅವರು ಕಾಶಿಯ ಮನೆಯ ಕಡೆಗೆ ಹೋದರು. ವತ್ಸಲೆಯು ಬಾಗಿಲಲ್ಲೇ ನಿಂತಿದ್ದಳು. ಕಾಶಿಯು ಮನೆಯಲ್ಲಿಲ್ಲವೆಂದು ತಿಳಿದ ಕೂಡಲೆ ಅವರು ತಿರುಗಿ ಹೊರಡುವಷ್ಟರಲ್ಲಿ ವತ್ಸಲೆಯು ವಿಚಿತ್ರ ಸ್ವರದಲ್ಲಿ ಅವರನ್ನು ಕರೆದಳು.

"ಬಾಪ್ಪಾ ಅವರೇ–"

ಆಶ್ಚರ್ಯದಿಂದ ಬಾಪ್ಪಾ ಅವರು ಹಿಂತಿರುಗಿ ಕೇಳಿದರು "ಯಾಕೆ ಕೃಷ್ಣಾ !"

"ನನಗೊಂದು ಬಂದೂಕು ಬೇಕಾಗಿದೆ !"

"ಬಂದೂಕು ?" ಈ ಹುಡುಗೆಗೆ ಹುಚ್ಚಾದರೂ ಹಿಡಿದಿರಲಿಕ್ಕಿಲ್ಲವೆ ಎಂದೆನಿಸಿ ಬಾಪ್ಪಾ ಅವರು ಉದ್ಗಾರ ತೆಗೆದರು.

"ಹೌದು, ಬಂದೂಕು !"

"ಯಾತಕ್ಕೆ ಅದು ?"

"ಹೊಡೆಯಲಿಕ್ಕೆ."

ಬಡತನದ ಮೂಲಕ ಅವಳು ತನ್ನ ಜೀವನ ವಿಷಯದಲ್ಲಿಯೇ ಉದಾರಳಾಗಿರಬಹುದೆಂದು ಭಾವಿಸಿಕೊಂಡಳು. ಅವರು ಶಾಂತವಾಗಿ ಹೇಳಿದರು :

"ಏನು ಆದರೂ ಜೀವ ಕೊಡಬಾರದು ತಂಗೀ."



"ನಾನು ಜೀವ ಕೊಡುವವಳಲ್ಲ, ತೆಗೆದುಕೊಳ್ಳುವವಳು !"

"ಯಾರದು ?"

"ಆ ಕೋಣದ್ದು !"

"ಅದು ಯಾಕೆ ? ದೇವಿ ಕೋಪಿಸಿದಳೆಂದೋ ?" ಬಾಪ್ಪಾ ಅವರ ಸ್ವರದಲ್ಲಿ ಸ್ವಲ್ಪ ಉಪಹಾಸವೂ ಕೂಡಿತ್ತು.

"ನಾನು ಕೊಲ್ಲಬೇಕೆನ್ನುವದು ದೇವಿಯ ಸಲುವಾಗಿ ಅಲ್ಲ, ಮನುಷ್ಯರ ಸಲುವಾಗಿ."

"ಅಂದರೆ ?"

"ದಿನಾಲು ಅದು ಯಾರಿಗಾದರೂ ಪೀಡೆ ಕೊಟ್ಟೇ ಕೊಡುತ್ತದೆ. ಇನ್ನೂ ಯಾರನ್ನೂ ಕೊಂದಿಲ್ಲ ಮಾತ್ರ. ಆದರೆ....."

ಇಷ್ಟೊಂದು ಕಷ್ಟದಿಂದ ಉಳಿಸಿದ್ದು ಆ ಕೋಣ ! ಬಾಪ್ಪಾ ಅವರ ರೋಮರೋಮಗಳಲ್ಲಿಯ ಅಹಿಂಸಾವಾದವು ಜಾಗೃತವಾಯಿತು. ಅವರು ಹೇಳಿದರು :

"ಪಾಪದ ಮೂಕಪ್ರಾಣಿ. ಬದುಕವಲ್ಲದೇಕೆ?"

"ಪಾಪವಾಗಲಿಕ್ಕೆ ಅದಕ್ಕೇನು ? ಒಳ್ಳೇ ಸೊಕ್ಕಿಗೇರಿದೆ."

ಬಾಪ್ಪಾ ಅವರು ಸುಮ್ಮನೆ ನಕ್ಕುಬಿಟ್ಟರು. ಅವರು ರಾಮನವಮಿಯ ವಿಷಯ ವಿಚಾರ ಮಾಡುತ್ತಿದ್ದರು. ಈಶ್ವರನಿಗೆ ಹಿಂಸೆ ಸೇರುವದಿಲ್ಲವೆಂಬ ಮಾತನ್ನು ಊರವರ ಮನಸ್ಸಿನ ಮೇಲೆ ಪರಿಣಾಮಕಾರಿಯಾಗಿ ಬಿಂಬಿಸಬೇಕೆನ್ನುವ ಬಾಪ್ಪಾ ಅವರಿಗೆ ವತ್ಸಲೆಯು ಬೇಡುವ ಬಂದೂಕು ಹೇಗೆ ಸರಿಹೋಗಬೇಕು ?

* * * * *

ವಿದ್ಯಾಧರನಿಗೆ ಒಂದು ವಾರವೆಂದರೆ ಒಂದು ಯುಗದಂತೆ ಕಳೆಯಿತು. ಸುಲೋಚನೆಯಂತೂ ಅವನೆಡೆಗೆ ಇಣಿಕಿಕೂಡ ನೋಡಿದ್ದಿಲ್ಲ. ಒಂದೆರಡು ಸಾರೆ ರಮಾಕಾಂತನು ಬಂದರೂ ಅವನು ಹೆದರಹೆದರುತ್ತ ಆಡಿದ ಮಾತುಗಳ ಮೇಲಿಂದ, ತಾನು, ದಾದಾಸಾಹೇಬ ಮತ್ತು ಸುಲೋಚನೆ ಇವರಿಬ್ಬರ ಮನಸ್ಸಿನಲ್ಲಿಯೂ ಇಳಿದು ಹೋಗಿದ್ದೇನೆಂಬುದು ವಿದ್ಯಾಧರನಿಗೆ ತಿಳಿದುಬಂದಿತು. ತನ್ನ ಹತ್ತಿರ ಇರುವ ಸುರಂಗೆಯ ಪತ್ರವನ್ನು ಸುಲೋಚನೆಗೆ ತೋರಿಸಬೇಕೆಂದ. ಆದರೆ ಅದರಿಂದ ದಾದಾ ಸಾಹೇಬರು ಮತ್ತು ರಮಾಕಾಂತರು ಸುಲೋಚನೆಯ ಮನಸ್ಸಿನಲ್ಲಿ ಇಳಿದು ಹೋಗುವರಲ್ಲದೆ ತನ್ನ ವಿಷಯ ಬಲ್ಲ ಅವಳ ತಪ್ಪು ತಿಳುವಳಿಕೆಯೇನು ಹೋಗುವದಿಲ್ಲವೆಂದು ಅವನು ಸುಮ್ಮಗೆ ಇದ್ದನು. ಕೃಷ್ಣೆಯ ಕಡೆಗೆ ಹೋಗಿ ಕೂಡಬೇಕೆಂದರೆ, ಕಾಶಿಯು ಬೆಳೆಸಿದ ಸಂಶಯ ವೃಕ್ಷವು ಮತ್ತಿಷ್ಟು ಮೇಲಕ್ಕೇರುವದು. ಕಾಮಾಪುರವನ್ನು ಒಮ್ಮೆಲೆ ಬಿಟ್ಟುಬಿಟ್ಟು, ಮುಂಬಯಿಗೆ ಹೋಗಿಬಿಡಬೇಕೆಂದರೆ, ಅವನಿಗೆ ತನ್ನ ಹೃದಯ ತಂತುಗಳೆಲ್ಲವೂ ಕಾಮಾಪುರದಲ್ಲಿ ಸಿಕ್ಕಿಕೊಂಡಂತೆ ಭಾಸವಾಗಿ, ಅವನು ಆ ತನ್ನ ವಿಚಾರವನ್ನು ಬದಿಗಿರಿಸುತ್ತಿದ್ದನು.

ಆದರೆ ಕಾಮಾಪುರದಲ್ಲಿ ಇದ್ದಾದರೂ ಮಾಡುವುದೇನು ? ಸುಲೋಚನೆಯೇ ತನ್ನ

ಹೃದಯದ ಒಂದು ತಂತುವು ! ಅವಳಂತೂ ಕಡೆತನಕವೂ ದೂರವಾದಳು ! ಅವಳನ್ನು ತಿರುಗಿ ಸಾಧಿಸುವುದಾದರೂ ಹೇಗೆ ? ಎರಡನೆಯ ತಂತುವೆಂದರೆ ವತ್ಸಲೆ ! ಆದರೆ ಅವಳು ಈ ಅಂಧಶ್ರದ್ಧೆಯ ಹಳ್ಳಿಗಾಡು ಜನರಲ್ಲಿ ಇಡೀ ಆಯುಷ್ಯ ಇರತಕ್ಕವಳು !

ಇಂಥ ವಿಚಾರಗಳ ತಿರುಗಣಿಯಲ್ಲಿ ತಳಮಳಿಸುತ್ತಿರುವಾಗ ರಮಾಕಾಂತ ಸುಲೋಚನೆಯರು ಮಾತ್ರ ಒಂದೇ ನಾವಿನಲ್ಲಿ ಕುಳಿತುಕೊಂಡು ಪ್ರವಾಹದಗುಂಟ ಸಾಗುತ್ತಿದ್ದರು. ಸುಲೋಚನೆಯು ಮನಸ್ಸಿನಲ್ಲಿಯೇ ವಿಚಾರ ಮಾಡುತ್ತಿದ್ದಳು. "ರಮಾಕಾಂತನು ಒಂದು ವೇಳೆ ಸುರಂಗೆಯನ್ನು ಪ್ರೀತಿಸಿರಬಹುದು. ರೂಪದಿಂದ ಮೋಹಿತನಾಗಿ ಹೋಗುವದು ಮನುಷ್ಯ ಸ್ವಭಾವದ ಧರ್ಮವೇ ಅಲ್ಲವೇ ? ಆದರೆ ಆ ವಿದ್ಯಾಧರ ಕೃಷ್ಣೆಯರ ಸಂಬಂಧ ! ಛೀ ! ಕಲ್ಪನೆ ಕೂಡ ಮಾಡಲಿಕ್ಕಾಗುವದಿಲ್ಲ ಆ ಅಮಂಗಲತನದ್ದು ! ಇದಲ್ಲದೆ ತನ್ನ ಪಾಪದ ಮೇಲೆ ಹೊದಿಕೆಯಿರಿಸಲಿಕ್ಕೆ ಎಷ್ಟೊಂದು ಸುಳ್ಳು ಹೇಳಿದ ಆತ. ಫೋಟೋಗಳನ್ನೆಲ್ಲ ತನ್ನ ಹತ್ತಿರವೇ ಇಟ್ಟುಕೊಂಡು ಕಾಜುಗಳೆಲ್ಲ ಒಡೆದುಹೋದವೆಂದು ಹೇಳಿದ !"

ಆದರೆ ನಡುನಡುವೆ ಅವಳ ಮನಸ್ಸಿನಲ್ಲಿ ಸಂಶಯವೂ ಬರುತ್ತಿತ್ತು. ಆ ಯಂತ್ರದ ಕಾಗದಗಳಾದರೂ ಹೋದವೆಲ್ಲಿ ? ಕೃಷ್ಣೆಯೆ ಆ ದಿವಸ ರಾತ್ರಿ ಅವನ ಕಡೆಗೆ ಬಂದಿರಬೇಕು. ಕೂಲಿಕಾರರ ದೃಷ್ಟಿಯಿಂದ ನೋಡಿದರೆ ಅವಳು ಎಷ್ಟೋ ಬುದ್ಧಿವಂತೆ ! ಮೇಲಿನ ಸಮಾಜದವರಂತೆಯೇ ಮಾತಾಡುವಳು. ಆದರೆ ಇದರದೆಲ್ಲವೂ ಆ ಕಾಗದಗಳ ಕೂಡ ಏನು ಸಂಬಂಧ ? ಕೃಷ್ಣೆಯಂತೂ ಆ ಕಾಗದಗಳನ್ನು ಒಯ್ದಿಲ್ಲ. ಅವುಗಳನ್ನು ತೆಗೆದುಕೊಂಡಾದರೂ ಅವಳಿಗೇನು ಪ್ರಯೋಜನ ? ವಿದ್ಯಾಧರನೇ ಲೋಭಿಯಾಗಿದ್ದರೆ, ಐದು ಸಾವಿರದ ಬದಲಾಗಿ ಹತ್ತು ಸಾವಿರ ಬೇಡಬಹುದಾಗಿತ್ತು. ಅಂದ ಮೇಲೆ–

ವಿಚಾರ ಮಾಡಿ ಮಾಡಿ ಬೇಸತ್ತ ಮೇಲೆ ಅವಳು ಅನ್ನುವಳು– ಬೇಕಾದರೆ ಅವನೇ ಬಂದು ಹೇಳುವ ಇವೆಲ್ಲದರ ವಿಷಯದಲ್ಲಿ. ರಮಾಕಾಂತನು ಕೂಡ ಸರಳವಾಗಿ ಹೇಳಲಿಲ್ಲವೆ, ಸುರಂಗೆಯ ಮೋಹ ತನಗೆ ಕ್ಷಣಮಾತ್ರವಾಗಿತ್ತೆಂದು.

ವಿದ್ಯಾಧರನ ಕಡೆಗೆ ತಿರುಗಿದ ಅವಳ ಮನಸ್ಸು ಮತ್ತೆ ರಮಾಕಾಂತನ ಕಡೆಗೆ ತಿರುಗಿತು. ನಗುವದು, ನಲಿಯುವದು, ಆಡುವದು ತಿರುಗಾಡಲಿಕ್ಕೆ ಹೋಗುವದು, ಸಾಯಂಕಾಲದಲ್ಲಿ ದೀಪಮಾಲೆಯ ಮೇಲೆ ಹೋಗಿ ಕೂಡುವದು, ಇವೆಲ್ಲವು ಅವರ ದಿನದ ಕಾರ್ಯಕ್ರಮದಲ್ಲಿ ಬರತೊಡಗಿದವು.

* * * * *

"ನಾಳೆ ರಾಮನವಮಿ ಅಲ್ಲೇನು, ಅವ್ವ" ಕೈಯಲ್ಲಿಯ ಕಲ್ಲಂಗಡಿಯ ಹಣ್ಣು ತಿನ್ನುತ್ತ ತಿನ್ನುತ್ತ ಸೋನ್ಯಾ ಕೇಳಿದ. ಸುರಂಗೆಯು ಬಹಳೇ ಹಟ ಹಿಡಿದು ವತ್ಸಲೆಯ ಆಧಾರದಿಂದ ಹೊರಗಡೆ ಬಂದು ಕುಳಿತಿದ್ದಳು. ಅವಳು ಸೋನ್ಯಾನಿಗೆ ಅಂದಳು : "ಬಿಸಿಲಲ್ಲಿ ತಿರುಗಬೇಡ–"



ಆದರೆ ಇಷ್ಟು ದಿವಸದ ಬೇನೆಯಲ್ಲಿ ಆಡದೆ ಉಳಿದದ್ದನ್ನೆಲ್ಲ ಸೋನ್ಯಾ ಬಡ್ಡಿಸಹಿತ ಮುಟ್ಟಿಸುತ್ತಿದ್ದ. ತಾಯಿ ಹೇಳುವದನ್ನು ಕೇಳುವನೇ ?

ವತ್ಸಲೆಯು ಏನೋ ಬೀಸುತ್ತಿದ್ದಳು. ಕಾಶಿಯು ಮಲಗಿದ್ದಳು. ಬಿಸಿಲು ರಣರಣ ಉರಿಯುತ್ತಿತ್ತು. ನಡುವೆಯೆ ಕೋಳಿಯು ಎತ್ತರವಾದ ದನಿಯಲ್ಲಿ ಕೂಗುವದು ಕೇಳಬರುತ್ತಿತ್ತು. ಬೀಸುವ ಕಲ್ಲಿನ ಘರ ಘರ ಸಪ್ಪಳದೊಡನೆ ವಿಚಾರಮಾಡುತ್ತ ಸುರಂಗೆಯು ಕಣ್ಣು ಮುಚ್ಚಿದಳು. ಅವಳ ಬೇನೆಯು ನಾಲ್ಕಾರು ಬೊಕ್ಕೆಗಳಿಂದ ಮಾತ್ರ ಮುಗಿದುಹೋಗಿತ್ತು. ಪಾಡ್ಯಮಿಯ ದಿನ–ಮ್ಯಾನೇಜರನಿಗೆ ತಾರು ಮಾಡುವ ಕುರಿತು ಅವಳು ರಮಾಕಾಂತನನ್ನು ಕರಿಸಿದ್ದರೂ ಅವನು ಬಂದಿರಲಿಲ್ಲ. ಜ್ವರವು ಬೇಗನೆ ಕಡಿಮೆಯಾಗಿದ್ದರಿಂದ ತಾರು ಕಳಿಸದೆ ಇದ್ದದ್ದೆ ಒಳಿತಾಯಿತು ಎಂದು ಅವಳಿಗೆ ಹಿಂದುಗಡೆ ಅನಿಸಿತು.

"ಏ–ಅವ್ವಾ" ಸೋನ್ಯಾ ಒಮ್ಮೆಲೆ ಚೀರಿದ. ಸುರಂಗೆಯು ಒಮ್ಮೆಲೆ ಕಣ್ಣು ತೆರೆದಳು. ದೇವಿಗೆ ಬಿಟ್ಟ ಕೋಣವು ಅಂಗಣದ ಪಾವಟಿಗೆಗಳನ್ನು ಏರುತ್ತಿತ್ತು. ಅವಳೂ ಭೀತಿಯಿಂದ ಚೀರಿದಳು. ವತ್ಸಲೆಯು ಒಳಗಿನಿಂದ ಓಡಿಬಂದು ಒದರಿ ಹೇಳಿದಳು. "ಸೋನ್ಯಾ, ಆ ಗಿಡದ ಮೇಲೆ ಏರು !"

ಆದರೆ ಅಂಗಣದಲ್ಲಿ ಸಮೀಪದಲ್ಲಿಯೇ ಎತ್ತರವಾದ ಗಿಡವಾದರೂ ಎಲ್ಲಿ ಇತ್ತು ? ಇದ್ದರೂ ಕೂಡ ಅದನ್ನು ಏರುವಷ್ಟು ಧೈರ್ಯ ಸೋನ್ಯಾನಲ್ಲಿಯಾದರೂ ಎಲ್ಲಿ ಉಳಿದಿತ್ತು? ಸುರಂಗೆಯು ಭ್ರಮಿಷ್ಟಳಂತೆ ವತ್ಸಲೆಯ ಕಡೆಗೆ ನೋಡಿದಳು. ವತ್ಸಲೆಯು ಕೈಗೆ ಸಿಕ್ಕದ್ದೊಂದು ಕೋಲನ್ನು ತೆಗೆದುಕೊಂಡು, ಓಡುತ್ತ ಹೋಗಿ, ಸೋನ್ಯಾನ ಕಡೆಗೆ ಸಾಗುವ ಕೋಣದ ಬೆನ್ನಿನ ಮೇಲೆ ಒಂದು ಬಲವಾದ ಏಟು ಕೊಟ್ಟಳು. ಕೋಣವು ತಿರುಗಿತು. ಒಂದು, ಎರಡು, ಮೂರು, ಅವಳು ಕೋಲಿನಿಂದ ಒಂದೇ ಸವನೆ ಕೋಣವನ್ನು ಹಣಿಯುತ್ತಿದ್ದಳು. ಅವಳನ್ನು ಇರಿಯಬೇಕೆಂದು ಕೋಣವೂ ಕೋಡುಗಳನ್ನಲ್ಲಾಡಿಸಿತು. ಆದರೆ ಕೋಲಿನ ಹೊಡೆತಗಳು ಬಲವಾಗಿ ಬೀಳುತ್ತಿದ್ದುದರಿಂದ ಕೋಣವು ಹಿಂದಕ್ಕೆ ಸರಿಯಿತು. ಕೋಲಿನಿಂದ ಬೀಳುವ ಬಡಿತದ ಸಪ್ಪಳಕ್ಕೆ ಎಚ್ಚತ್ತು ಕಾಶಿಯು ಹೊರಗೆ ಬಂದು ನೋಡುತ್ತಾಳೆ–ಕೃಷ್ಣೆಯು ದೇವಿಯ ಕೋಣಕ್ಕೆ ಮೈಮುರಿ ಹೊಡೆಯುತ್ತಿದ್ದಾಳೆ. ಅವಳು ಅಲ್ಲಿಂದಲೇ ಒದರಿದಳು–

"ಎಲsss ಏ ನಿಲ್ಲು. ನಿಲ್ಲs"

ಕೋಣವು ಅಂಗಣದೊಳಗಿಂದ ಓಡಿಹೋದಾಗ್ಗೆಯೇ ವತ್ಸಲೆಯು ಕೋಲಿನೇಟುಗಳನ್ನು ನಿಲ್ಲಿಸಿದಳು.

ಕಾಶಿಯು ಭಯಭೀತ ಮುದ್ರೆಯಿಂದ ಅಂದಳು : "ಹಾಳು ಮಾಡಿದಿಯವ್ವಾ, ಹುಡಿಗಿ."

ದಣಿದ ವತ್ಸಲೆಯು ಧಾವಿಸುತ್ತ ಸುರಂಗೆಯು ಇದ್ದೆಡೆಗೆ ಬಂದು ಕುಳಿತುಕೊಂಡಳು. ಸುರಂಗೆಯು ಕೃತಜ್ಞತೆಯಿಂದ ಅವಳನ್ನು ಅಪ್ಪಿಕೊಂಡು, ಅವಳ ಬೆನ್ನ ಮೇಲೆ ಕೈ ಆಡಿಸಿದಳು.

"ಕೃಷ್ಣೆ, ಕೃಷ್ಣೇ" ಕಾಶಿಯು ಚೀರಿದಳು.

"ಏನು?" ವತ್ಸಲೆ ಕೇಳಿದಳು.

"ದೇವೀ ಮುಂದಹೋಗಿ ಮೂಗು ತಿಕ್ಕಿಬಾ, ಹೋಗ ತಪ್ಪ ಆತ ಅನ್ನು–"

"ನಾನೇನು ತಪ್ಪು ಆಯಿತೆನ್ನುವದಿಲ್ಲ. ಏನು ಮಾಡುವದೆಲ್ಲ ಮಾಡಲಿ ದೇವಿ ನನಗೆ."

"ದೇವಿ ಸಿಟ್ಟಿಗೆದ್ದಳಂದರ–"

"ಸಿಟ್ಟಿಗೆದ್ದರೇನು ಆಗುತ್ತದ ?"

"ನಾಳಿಂದ ನಾಳೇ ನೀನು ಇಲ್ಲಿ ಇಲ್ಲದಂಗ ಆದೀ."

"ಇಲ್ಲದಂತೆ ಆದರೆ ಒಳ್ಳೇದೇ ಆಯಿತು."

ವತ್ಸಲೆಯ ಬಾಯ ಮೇಲೆ ಕೈಯಿಟ್ಟು ಸುರಂಗೆಯ ಕಾಶಿಗೆ ಹೇಳಿದಳು: "ಒಳಗ ಹೋಗಿ ಸುಮ್ಮನೇ ಒಂದು ಸ್ವಲ್ಪ ಮಲಗಬಾರದೆ?"

ಕಾಶಿಯು ಒಳಗೆ ಹೋದನಂತರ ಸುರಂಗೆ ಮತ್ತು ವತ್ಸಲೆಯರು ಸಾವಕಾಶವಾಗಿ ಮಾತಾಡಹತ್ತಿದರು. ಸೋನ್ಯಾನ ಸಲುವಾಗಿ ತನ್ನ ಪ್ರಾಣವನ್ನು ಕೂಡ ಗಂಡಾಂತರದಲ್ಲಿ ನೂಕಿದ್ದರ ಸಲುವಾಗಿ ಸುರಂಗೆಯಲ್ಲಿ ವತ್ಸಲೆಯ ವಿಷಯವಾಗಿ ಮತ್ತಿಷ್ಟು ಪ್ರೇಮವುಕ್ಕಿತು.

"ಸೋನ್ಯಾ ನಿನಗೆ ಸುಮ್ಮಸುಮ್ಮನೆ ಕರೆಯುವದಿಲ್ಲ, ಅಬಚೀ ಅಬಚೀ ಎಂದು !" ಸುರಂಗೆಯು ಅಂದಳು.

ವತ್ಸಲೆಯು ಏನೋ ವಿಚಾರ ಮಾಡುತ್ತಿದ್ದಳು. ಅವಳು ಸ್ವಲ್ಪ ನಕ್ಕಳು ಮಾತ್ರ.

"ನಾವಿಬ್ಬರೂ ಅಕ್ಕತಂಗಿಯರೇ ಅಲ್ಲವೇ?" ಸುರಂಗೆಯು ವತ್ಸಲೆಯ ಕೈಯನ್ನು ತನ್ನ ಕೈಯಲ್ಲಿ ತಕ್ಕೊಳ್ಳುತ್ತ ಕೇಳಿದಳು.

"ಹೌದು. ಆದರೆ, ಒಬ್ಬಳು ಕೆಂಪು ಮತ್ತೊಬ್ಬಳು ಕರ್‍ರಗೆ ?"

"ಅದೇನೋ ಇರಬಹುದು. ಕರ್‍ರಗಿದ್ದವಳಿಗೆ ಉಟ್ಟುಕೊಳ್ಳಲಿಕ್ಕೆ ಒಳ್ಳೇ ಸೀರೆಯನ್ನು ಕೊಡೋಣವಂತೆ !"

ವತ್ಸಲೆಯು ಮತ್ತೆ ನಕ್ಕಳು. ಆದರೆ ಸುರಂಗೆಗೆ ಆ ಮಾತನ್ನು ನಗೆಯ ಮೇಲೆಯೇ ಮುಗಿಸಬೇಕಾಗಿರಲಿಲ್ಲ. ಸುರಂಗೆಯು ಹಟವನ್ನೇ ಹಿಡಿದಳು. ವತ್ಸಲೆ ಎಷ್ಟೋ ನೆಪ ಹೇಳಿದಳು. ಆದರೆ, ಇದೇ ಬೇನೆಯೊಳಗಿಂದ ಎದ್ದ ಸುರಂಗೆಯ ಮಾತು ಮುರಿಯಲಾರದ್ದಕ್ಕೆ ಅವಳ ಮಾತಿಗೆ ವತ್ಸಲೆಯು ಒಪ್ಪಬೇಕಾಯಿತು. ಸುರಂಗೆಯ ಟ್ರಂಕಿನೊಳಗಿನ ಆಕಾಶನೀಲ ವರ್ಣದ ಪತ್ತಲವನ್ನೊಂದನ್ನು ಅವಳು ಉಟ್ಟಳು. ಪತ್ತಲವನ್ನುಟ್ಟುಕೊಂಡು ಅವಳು ಹೊರಗೆ ಬಂದ ಕೂಡಲೆ, ಸುರಂಗೆಯು ಚೇಷ್ಟೆಯಿಂದ ಅಂದಳು. "ನಮಸ್ಕಾರ ಮಾಡುವದಿಲ್ಲವೇ? ನಾನು ನಿನಗಿಂತಲೂ ಹಿರಿಯಳು !"

"ಚಿಕ್ಕ ತಂಗಿಗೆ ಆಶೀರ್ವಾದ ಏನೆಂದು ಕೊಡುವಿ ?"

"ರಾಜನ ಮನಸ್ಸು ಬೇಗನೆ ಬದಲಾಗಲಿ, ರಾಣಿಯನ್ನು ತಿರುಗಿ ಕರೆದುಕೊಂಡು ಹೋಗಲಿ ಎಂದು."

ಈ ಸಾರೆ ಮಾತ್ರ ವತ್ಸಲೆಗೆ ನಗಲಿಕ್ಕಾಗಲಿಲ್ಲ. ಮತ್ತೆ ಆ ಕೋಣದ ವಿಷಯಕ್ಕೆ ಮಾತುಗಳು



ಆರಂಭವಾದವು. ಮಸಣವೆಂದರೆ ತನ್ನ ಮೈ ಮೇಲೆ ಹೇಗೆ ಮುಳ್ಳುಗಳು ಏಳುವವೆಂಬುದನ್ನು ಸುರಂಗೆಯು ಹೇಳಿದಳು. ಮರಣದ ವಿಷಯ ಹೊರಟ ಕೂಡಲೆ ಅವಳು ಸಾವಕಾಶವಾಗಿ ಕೇಳಿದಳು.

"ಸಾವಳ ಎಲ್ಲಿರುವ ?"

"ಅವ ಇದೇ ಹೋದ ಮನೆಯಿಂದ ಹೊರಗೆ !"

"ನಿನ್ನಿನಿಂದ ಅವನ ಮನಸ್ಸು ಸರಿಯಾಗಿ ಇದ್ದಂತೆ ಕಾಣಿಸುವದಿಲ್ಲ. ಆ ಸುಲೋಚನೆ ಮತ್ತು ರಮಾಕಾಂತರು ಆ ದೀಪ ಮಾಲೆಯ ಮೇಲೆ ಹೋಗಿ ಕೂಡುತ್ತಾರಂತೆ ಸಂಜೆಯ ಮುಂದೆ !"

"ರಮಾಕಾಂತ ಇರಲಿಕ್ಕಿಲ್ಲ ವಿದ್ಯಾಧರ ಇರಬಹುದು !"

"ಉಂ. ಹುಂ ರಮಾಕಾಂತನೇ."

"ಯಾರಾದರೂ ಇರವಲ್ಲರೇಕೆ. ಸಾವಳನಿಗೆ ಅದರ ವಿಷಯ ಏನು ಮಾಡಬೇಕಾಗಿದೆ ?"

"ಬಾಪ್ಪಾ ಅವರ ಮೇಲಿನ ಸಿಟ್ಟನ್ನು ಅವಳ ಮೇಲೆ ತೀರಿಸಬೇಕೆನ್ನುವ ಅವ. ಸುಲೋಚನೆಯು ಆ ದೀಪಮಾಲೆಯ ಕಟ್ಟೆಯ ಮೇಲೆ ಕೂಡುವಳಂತೆ ! ಹಿಂದಿನಿಂದ ಹೋಗಿ ಒಮ್ಮೆಲೆ ನೂಕಿಬಿಡಬೇಕೆಂದು ವಿಚಾರ ಆತನದು !"

"ದೀಪಮಾಲೆಯ ಮೇಲಿಂದ ನೂಕಿಬಿಡುವದೆ ? ಎಲುವು ಚೂರ ಚೂರ ಆಗುವುದಕ್ಕೆ ಹಾದಿ !"

ವತ್ಸಲೆಯು ಸುಲೋಚನೆಯನ್ನು ಹೇಗೆ ಉಳಿಸಬೇಕೆಂಬುದರ ವಿಷಯದಲ್ಲಿ ವಿಚಾರಮಾಡ ಹತ್ತಿದಳು. ವಿದ್ಯಾಧರನ ಕಡೆಗೆ ಹೋಗಬೇಕೆ ?

ಆದರೆ ರಮಾಕಾಂತನೂ ಸುಲೋಚನೆಯೂ ಕೂಡಿ ತಿರುಗಾಡಲಿಕ್ಕೆ ಹೋಗುವರು. ಅದಲ್ಲದೆ, ವಿದ್ಯಾಧರ ಸುಲೋಚನೆಯರದು ಒಬ್ಬರೊಬ್ಬರ ವಿಷಯದಲ್ಲಿ ಮನಸ್ಸು ಕಲುಷಿತವಾದಂತೆ ತೋರುತ್ತದೆ. ಇದೆಲ್ಲದರ ಕಾರಣವು ತಾನು ತಂದಿದ್ದ ಯಂತ್ರದ ಕಾಗದಗಳು ಇರಲಿಕ್ಕಿಲ್ಲವೆ ?

ಕೃಷ್ಣೆಯು ವಿಚಾರದಲ್ಲಿದ್ದುದನ್ನು ಕಂಡು ಸುರಂಗೆಯು ಅಂದಳು:

"ಏನೇನು ಆಗುವದಿದೆಯೋ ದೇವರಿಗೇ ಗೊತ್ತು !"

ವತ್ಸಲೆಯು ಮಂದವಾಗಿ ನಕ್ಕಳು ಮಾತ್ರ.

"ಯಾಕೆ ನಗುವಿ ?"

"ನಿನ್ನ ದೇವರ ಮೇಲಿನ ಭರವಸೆಯನ್ನು ನೋಡಿ ನಕ್ಕೆನಷ್ಟೆ. ಸುರಂಗೆ, ಇಡೀ ಆಯುಷ್ಯದಲ್ಲಿ ನೀನು ಎಂದಾದರೂ, ದೇವರನ್ನು ನೋಡಿರುವಿಯಾ ?"

ಸುರಂಗೆಯು ಗಂಭೀರಳಾದಳು.

ಎಂಟು ವರ್ಷದ ಪೂರ್ವದಲ್ಲಿ ಸಾವಳನು ಚೆನ್ನಾಗಿ ವರ್ತಿಸಬೇಕೆಂದು ದೇವರಿಗೆ

ತಾನು ಮಾಡಿದ ಸೇವೆ, ದಾದಾಸಾಹೇಬರ ಕೂಡ ಸಂಬಂಧ ಬಂದ ಮೇಲೆ ಮಕ್ಕಳು ಹುಟ್ಟಬಾರದೆಂದು ತಾನು ದೇವರಿಗೆ ಬೇಡಿಕೊಂಡದ್ದು ಅವಳಿಗೆ ಇನ್ನೂ ಅದೆಷ್ಟೋ ಸಂಗತಿಗಳು ನೆನಪಾದವು. ಆದರೆ ಅವುಗಳಲ್ಲಿ ದಯಾಳುವಾದ ದೇವರ ಸಂಬಂಧವಿದ್ದಂತೆಯೇ ತೋರಲಿಲ್ಲ.

"ಸಿಕ್ಕನೇನು ದೇವರು ?" ವತ್ಸಲೆಯು ಪ್ರಶ್ನೆ ಮಾಡಿದಳು.

"ಹೂಂ."

"ಎಲ್ಲಿರುವ?"

"ಇಲ್ಲಿಯೇ. ನನ್ನೆದುರಿಗೇನೇ ಕೂತಿರುವನಲ್ಲ !"

ಅವಳ ಕಡೆಗೆ ಪ್ರೀತಿಯಿಂದ ನೋಡುತ್ತ ಸುರಂಗೆಯು ಉತ್ತರ ಕೊಟ್ಟಳು.

* * * * *

ಪಾಡ್ಯಮಿಯಿಂದ ಮುಂದಿನ ೪–೮ ದಿನ ಸುಲೋಚನೆಯಾದರೂ ಮನಸ್ಸಿನಲ್ಲಿ ತಳಮಳಪಡುತ್ತಿದ್ದಳು. ಅತ್ಯಂತ ಸುಂದರವಾಗಿ ಸಿಂಗರಿಸಿದ್ದರೂ, ಒಳಗೆ, ಹವೆಯಿಲ್ಲದ ಮಹಲಿನಲ್ಲಿ ಅವಳನ್ನು ಕೂಡಿಸಿದಂತೆ ಅವಳ ಸ್ಥಿತಿಯಾಗಿತ್ತು ! ವಿದ್ಯಾಧರನ ನಡೆಯ ಮೂಲಕ ದಾದಾಸಾಹೇಬರು ಅವನ ಮೇಲೆ ಕೋಪಿಸಿಕೊಂಡೇ ಇದ್ದರು. ಲಕ್ಷ್ಮಿಯ ಚಿತ್ರವನ್ನು ಯಾರು ಕೆಡಿಸಿರಬಹುದೆಂಬುದರ ವಿಷಯದಲ್ಲಿ ಅವಳು ಮಾತೆತ್ತಿದಾಗ ದಾದಾಸಾಹೇಬರು ಅಂದರು. "ಒಳ್ಳೆಯದಾಯಿತು, ಚಿತ್ರ ಕೆಟ್ಟುಹೋದದ್ದು !"

"ಯಾಕೆ ?"

"ಎಲ್ಲಿಯಾದರೂ ಒನಪು ಒಯ್ಯಾರದ ಸೂಳೆಯರನ್ನು ನೋಡಿ, ಅವರ ಚಿತ್ರಗಳನ್ನು ತೆಗೆಯುವದು, ಮೇಲೆ ಕಲೆ, ಕಲೆ, ಎಂದು ಸುಮ್ಮನೆ ಕುಣಿಯುವದು–ಇದಿಷ್ಟೇ ಗೊತ್ತಿದೆ, ಈಗಿನ ತರುಣ ತರುಣಿಯರಿಗೆ, ಮತ್ತೇನೂ ಕೇಳಬೇಡಿರಿ–"

"ಆದರೆ ದಾದಾ–"

"ಆದರೆ ಇಲ್ಲ ಏನೂ ಇಲ್ಲ. ಬಾಪ್ಪಾ ಅವರ ಮಾತು ಕೇಳಿ ನಿನ್ನನ್ನು ಇಷ್ಟು ದಿವಸ ಬೆಳಿಸಿದ್ದೇ ನನ್ನ ತಪ್ಪಾಗಿದೆ. ಎಲ್ಲಿಯಾದರೂ ಒಬ್ಬ ಮನೆತನದ ಅಳಿಯನನ್ನು ಹುಡುಕಿಕೊಂಡು ಲಗ್ನಮಾಡಿಬಿಟ್ಟಿದ್ದರೆ ನನ್ನ ತಲೆಯ ಮೇಲಿನ ಭಾರವಾದರೂ ಕಡಿಮೆಯಾಗುತ್ತಿತ್ತು."

"ತಲೆಯ ಮೇಲಿನ ಭಾರ ಕಡಿಮೆಯಾಗಬಹುದಾದರೂ, ತೊಡೆಯ ಮೇಲೆ ಬೆಳೆಯುತ್ತಿತ್ತು ಭಾರ ! ಮೊಮ್ಮಕ್ಕಳಿಂದ !"

ಸುಲೋಚನೆಯು ಉತ್ತರದಿಂದ ಮೊದಲಿನಂತೆ ದಾದಾಸಾಹೇಬರಿಗೆ ಕೌತುಕವೆನಿಸಿರಲಿಲ್ಲ.

ದಾದಾಸಾಹೇಬರ ಉದಾಸೀನತೆಯು ಸುಲೋಚನೆಗೆ ಹೊಸ ದೃಷ್ಟಿಯನ್ನು ಕೊಟ್ಟಿತು. ತರುಣರೆಂದರೆ ವೃದ್ಧರಿಗೆ ಆಟಿಗೆಗಳಿದ್ದಂತೆ ಎಂಬ ಮಾತಿನ ಅನುಭವವು ಅವಳಿಗೆ–ತನ್ನನ್ನು ಅತ್ಯಂತವಾಗಿ ಪ್ರೀತಿಸುವ ದಾದಾಸಾಹೇಬರ ವಿಷಯದಲ್ಲಿಯೂ ಬಂದಿತ್ತು. ಅವಳಿಗೆ ಮಲ ತಾಯಿಯಿಂದ ಕಷ್ಟವಾಗಬಾರದೆಂದು ಅವರು ಎರಡನೇ ಸಂಬಂಧವನ್ನು ಬೆಳಸದೇ ಇದ್ದರು.



ಇಂದಿಲ್ಲ, ನಾಳೆಯಾದರೂ ಕಾರಖಾನೆಯ ಎಲ್ಲ ಪ್ರಾಪ್ತಿಯು ಅವಳಿಗೇ ಸಿಗುವದೇನೋ ನಿಜ. ಆದರೆ ಅವಳ ಚಿತ್ರಕಲೆ, ಅವಳ ಮಾತುಗಳು, ಅವಳ ಹೃದಯದ ಹಾರೈಕೆಗಳು, ಇವೆಲ್ಲವೂ ಅವರಿಗೆ ಸರಿದೋರುತ್ತಿರಲಿಲ್ಲ.

ನೀರು ಹರಿಯುವದು ಇಳುವು ಇದ್ದ ಕಡೆಗೆ. ಬಾಪ್ಪಾ ಅವರು ಊರಲ್ಲಿರಲಿಲ್ಲ. ದಾದಾಸಾಹೇಬರು ಉದಾಸೀನರು, ವಿದ್ಯಾಧರನು ಮೋಸಗಾರನೆಂದು ತಿಳಿಯಲ್ಪಟ್ಟವನು ಇಂಥ ಸ್ಥಿತಿಯಲ್ಲಿ ಸುಲೋಚನೆಗೆ ಮನಸೋಕ್ತವಾಗಿ ಮಾತಾಡಬೇಕೆಂದರೆ, ರಮಾಕಾಂತನ ಹೊರತಾಗಿ ಯಾರೂ ಇರಲಿಲ್ಲ. ನಾಲ್ಕಾರು ದಿವಸಗಳಲ್ಲಿಯೇ ಅವಳ ಮನಸ್ಸಿನಲ್ಲಿಯ ಅವನ ವಿಷಯದ ಕಲ್ಮಷವು ತೊಳೆದುಹೋಯಿತು. ಇಬ್ಬರೂ ತಿರುಗಾಡಲಿಕ್ಕೆ ಹೋಗಹತ್ತಿದರು. ಶುಕ್ಲಪಕ್ಷವಿದ್ದ ಮೂಲಕ ಇಬ್ಬರೂ ದೀಪ ಮಾಲೆಯ ಮೇಲೆ ಕುಳಿತು ಬೆಳದಿಂಗಳು ಬಿದ್ದ ಮೇಲೆ ಮನೆಗೆ ಮರಳಿ ಬರುವರು. ರಮಾಕಾಂತನ ನಡೆನುಡಿಗಳು ಮನಸೆಳೆಯುವಂಥವೇ ಆಗಿದ್ದರಿಂದ, ಸುಲೋಚನೆಯಾದರೂ ಅವನ ಸಹವಾಸದಲ್ಲಿ ಸಹಜವಾಗಿಯೇ ಉಲ್ಲಸಿತಳಾಗಹತ್ತಿದಳು. ಚಿಕ್ಕ ಮಕ್ಕಳನ್ನು ಯಾರಾದರೂ ಆಡಿಸಲಿಕ್ಕೆ ಬೇಕಾಗುವಂತೆ, ಪ್ರಣಯೋನ್ಮುಖ ತರುಣಹೃದಯವಾದರೂ ಯಾರನ್ನಾದರೂ ಜೊತೆಯಲ್ಲಿ ಆಡಲಿಕ್ಕೆ ಹುಡುಕುತ್ತಿರುತ್ತದೆ.

ಅಷ್ಟಮಿಯ ದಿನ ಸಾಯಂಕಾಲದಲ್ಲಿ ದೀಪಮಾಲೆಯ ಮೇಲೆ ಹೋದ ಕೂಡಲೆ, ಸುಲೋಚನೆಯು ಅಂದಳು : "ನಾಳೆ ರಾಮನವಮಿ !"

"ಇಷ್ಟೊಂದು ಸುಂದರವಾದ ಸಾಯಂಕಾಲವನ್ನು ಬಿಟ್ಟು, ನಡು ಮಧ್ಯಾಹ್ನದಲ್ಲಿ ಜನ್ಮತಾಳಿದ ಪ್ರಾಣಿ !" ರಮಾಕಾಂತನು ನಗುತ್ತ ಅಂದ.

"ವೇಳೆಗೆ ಸರಿಯಾಗಿ ಹುಟ್ಟುವದು ಯಾರ ಕೈಯ್ಯೊಳಗಿನ ಮಾತೇನು ?"

"ಕೈಯ್ಯೊಳಗಿಲ್ಲವೆಂದು ಯಾರು ಹೇಳುವರು ?"

"ಹಾಗಾದರೆ ನೀವೇನು ಮುಂದಿನದೆಲ್ಲವನ್ನು ವಿಚಾರ ಮಾಡಿಕೊಂಡೇ ಜಗತ್ತಿನಲ್ಲಿ ಬಂದಿರೇನು ?"

"ಓಹೋ ನಿಜವಾಗಿಯೂ ಹೌದು ! ಒಬ್ಬ ಚಿತ್ರ ಲೇಖಿಕೆಯ ಕೂಡ ನನ್ನ ಗುರುತು ಆಗಬೇಕಾಗಿದ್ದರಿಂದಲೇ ನಾನು ಬ್ರಹ್ಮ ದೇವರಿಗೆ, ಆ ಚಿತ್ರ ಲೇಖಿಕೆಗೆ ಸೇರುವಂಥ ಕಥೆ ಬರೆಯುವವನನ್ನಾಗಿ ನನ್ನನ್ನು ಮಾಡೆಂದು ಬೇಡಿಕೊಂಡೇ ಬಂದೆ !"

"ಇಲ್ಲದಿದ್ದರೆ, ಬ್ರಹ್ಮ ದೇವರೇನು ನಿಮ್ಮನ್ನು ಅರಸನನ್ನಾಗಿ ಮಾಡಬೇಕೆಂದಿದ್ದನೇ ?"

ಸುಲೋಚನೆಯು ಈ ಪ್ರಶ್ನೆಯನ್ನು ವಿನೋದದಿಂದ ಮಾಡಿದ್ದರೂ, ಅವಳಿಗೆ, ಆತನು ಮಾಡಿದ ಸ್ತುತಿಯು ಸೇರಿತ್ತೆಂಬುದು ಅವಳ ಮುಖಚರ್ಯೆಯ ಮೇಲಿಂದ ಸ್ಪಷ್ಟವಾಗಿ ಕಂಡುಬರುತ್ತಿತ್ತು.

ದೀಪಮಾಲೆಯ ಮೇಲಿಂದ ಸೂರ್ಯನು ಇನ್ನೂ ಕಾಣುತ್ತಿದ್ದ. ಹಸರುಮುರಿಯುವ ಗಿಡದ ತುದಿಗಳ ಮೇಲೆ ಕುಣಿಯುವ ಸೌಮ್ಯವಾದ ಸೂರ್ಯನ ಹೊನ್ನು ಕಿರಣಗಳ ಶೋಭೆಯು ಮೋಹಕವಾಗಿತ್ತು. ತಿರುಗಿ ಮನೆಗಳ ಕಡೆಗೆ ಹಾರಿಹೋಗುವ ಪಕ್ಷಿಗಳ

ಗುಂಪುಗಳು–ರಾತ್ರಿಯ ಬರವಿನ ಕೂಡ ಬರುವ ಪ್ರಣಯ ವಿಚಾರಗಳಂತೆ ಭಾಸವಾದವು ರಮಾಕಾಂತನಿಗೆ !

ಸ್ವಲ್ಪ ವೇಳೆಯ ಮೇಲೆ ಅವನಂದ : "ನಾನು ಮುಂಬಯಿಗೆ ಹೋಗಬೇಕೆನ್ನುವೆ. ಆದರೆ–"

"ಹೌದು ! ನಮ್ಮ ಕಾಮಾಪುರದಲ್ಲಿ ನೋಡತಕ್ಕದ್ದಾದರೂ ಏನು !"

"ಒಂದಿದೆ."

"ಏನದು ?"

"ನೀನು."

ಸುಲೋಚನೆಯು ಆಕಾಶದ ಕಡೆಗೆ ನೋಡಿದಳು. ಪಶ್ಚಿಮದ ಕಡೆಯ ಬಣ್ಣಗಳ ಮಸುಕು ಪ್ರತಿಬಿಂದವು ಅವಳಿಗೆ ಪೂರ್ವದಿಕ್ಕಿನಲ್ಲಿ ಕಂಡಿತು. ರಮಾಕಾಂತನ ಹೃದಯದಲ್ಲಿಯ ಪ್ರಣಯ ಭಾವನೆಗಳು ತನ್ನ ಹೃದಯದಲ್ಲಿಯೂ–

ಸುರಂಗೆಯು ನೆನಪಾಗಿ ಅವಳು ಒಮ್ಮೆಲೆ ಅಂದಳು : "ಮುಂಬಯಿಯಲ್ಲಿ ನನ್ನಕ್ಕಿಂತಲೂ ಸುಂದರ ಹುಡಿಗೆಯರು ಎಷ್ಟೋ ಇರುವರಲ್ಲ !"

"ಇರಬಹುದು. ಆದರೆ ಅವರೆಲ್ಲ ನನಗೆ ಹೇಗೆ ಕಾಣಿಸಬೇಕು ?"

"ನೋಡಿದರೆ ಎಲ್ಲವೂ ಕಾಣುತ್ತದೆ !"

"ಅಂದರೆ–ಕುರುಡನಿಗೆ ಕೂಡ ಕಾಣಿಸುತ್ತದೆಯೆ ?"

"ಕುರುಡರಾಗಲಿಕ್ಕೆ ಏನಾಗಿದೆ ?"

"ಕಣ್ಣಲ್ಲಿ ಹೂವು ?"

"ಅದನ್ನು ಕೊಯಿಸಿ ತೆಗೆಸಬೇಕು !"

"ಅದನ್ನು ಕೊಯ್ಯಲಿಕ್ಕೆ ಬರುವಂತಿಲ್ಲ !"

"ಇನ್ನೂ ಬಹಳೇ ಚಿಕ್ಕದಾಗಿದೆಯೇ ?"

"ನಿನ್ನಷ್ಟೆಯೇ ಇದೆ !"

ರಮಾಕಾಂತನು ನಗುತ್ತಿರುವ ಸುಲೋಚನೆಯ ಹತ್ತಿರ ಹೋಗಿ ನಿಂತನು. ತನ್ನ ಕೈಯನ್ನು ಕೈಯಲ್ಲಿ ತೆಗೆದುಕೊಳ್ಳುವನೆಂದು ಸುಲೋಚನೆಗೆ ತೋರಿತು. ವಿದ್ಯಾಧರನ ನೆನಪಾಗಿ ಅವಳಿಗೆ ಮನಸ್ಸಿನಲ್ಲಿ....

ಇಷ್ಟರಲ್ಲಿ ದೀಪಮಾಲೆಯ ಪಾವಟಿಗೆಗಳ ಮೇಲೆ ಯಾರವೋ ಕಾಲು ಹೆಜ್ಜೆ ಕೇಳಿದಂತಾದುವು. ರಮಾಕಾಂತನು ಸ್ವಲ್ಪ ದೂರ ಸರಿದ. ಸಂಧಿಪ್ರಕಾಶದ ಮತ್ತು ಬೆಳದಿಂಗಳ ಮಿಶ್ರ ಪ್ರಕಾಶದಲ್ಲಿ ರಮಾಕಾಂತನು ನೋಡಿದ. ಎದುರಿನಲ್ಲಿ ಸುಂದರವಾದ ಪತ್ತಲವನ್ನುಟ್ಟ ವತ್ಸಲೆಯು ನಿಂತಿದ್ದಳು. ಅವನು ಹುಚ್ಚನಂತೆ ಅವಳ ಕಡೆಗೆ ನೆಟ್ಟದೃಷ್ಟಿಯಿಂದ ನೋಡಹತ್ತಿದ.

ವತ್ಸಲೆಯೂ ಸುಲೋಚನೆಯ ಹತ್ತಿರ ಬಂದು ಅವಳ ಕಿವಿಯಲ್ಲಿ ಏನೇನೋ ಹೇಳಿದಳು. ಅದನ್ನು ಕೇಳಿ ಸುಲೋಚನೆಯು ಒಮ್ಮೆಲೆ ರಮಾಕಾಂತನ ಕಡೆಗೆ ತಿರುಗಿ ತೀವ್ರಸ್ವರದಲ್ಲಿ ಕೇಳಿದಳು. "ರಮಾಕಾಂತರೇ, ಸುರಂಗೆಯು ಇಲ್ಲಿಯೇ ಇರುವಳಂತಲ್ಲ ?"



"ಹೌದು, ನನಗೆ ಗೊತ್ತಿದೆ !"

"ನೀವು ಇನ್ನೂ ಅವಳಿಗೆ ಭೆಟ್ಟಿಯಾಗಲಿಕ್ಕೆ ಹೋಗಿಲ್ಲವೇನು ?"

"ಮೈಲಿ ಬೇನೆ ಬಂದಿರುವದು ಅವಳಿಗೆ !"

"ನಾನು ಬೇನೆ ಬಿದ್ದಿದ್ದರೆ ? ಅಲ್ಲಿಂದ ನೀವು ಸರಳವಾಗಿ ಮೋತಿ ಬಿಂದುವನ್ನು ಕೊಯಿಸಿಬಿಡುತ್ತಿದ್ದಿರಿ ! ಹೌದಲ್ಲವೆ ? ನಡೆ ಕೃಷ್ಣ ನಡೆ."

"ಆದರೆ–"

ರಮಾಕಾಂತನ ಮುಂದಿನ ಶಬ್ದಗಳನ್ನು ಕೇಳಲಿಕ್ಕೆ ಸುಲೋಚನೆಯು ದೀಪಮಾಲೆಯ ಮೇಲೆ ನಿಲ್ಲಲೇ ಇಲ್ಲ. ಅವಳು ಸರಸರ ಪಾವಟಿಗೆಗಳನ್ನು ಇಳಿಯತೊಡಗಿದಳು. ವತ್ಸಲೆಯೂ ಅವಳ ಹಿಂದಿನಿಂದಲೇ ನಡೆದಳು. ಅವಳು ಪಾವಟಿಗೆಗಳ ಮೇಲೆ ಕಾಲಿಡುವಷ್ಟರಲ್ಲಿ ರಮಾಕಾಂತ ಕರೆದ :

"ವತ್ಸಲೆ–"

ವತ್ಸಲೆಯು ನಿಂತ ಸ್ಥಳದಲ್ಲಿ ನಿಂತುಬಿಟ್ಟಳು.

ರಮಾಕಾಂತನು ಮುಂದಕ್ಕೆ ಹೋಗಿ ಒಮ್ಮೆಲೆ ಅವಳ ಹೆಗಲ ಮೇಲೆ ಕೈ ಇಟ್ಟನು. ಒಂದೇ ಕ್ಷಣ ! ವತ್ಸಲೆಯ ಹೃದಯದ ಕಾರಂಜಿಯ ಮೇಲೆ ಆಸೆ ; ಆನಂದ, ಉತ್ಕಂಠೆಗಳು ರಂಗುರಂಗಾಗಿ ಕುಣಿಯ ಹತ್ತಿದವು. ಅವಳು ಸ್ವಲ್ಪ ಬೆದರಿದಳು. ರಮಾಕಾಂತನು ಹೀಗೇನಾದರೂ ಮಾಡಬಹುದೆಂದು ಅವಳಿಗೆ ಕಲ್ಪನೆಯೇ ಇರಲಿಲ್ಲ.

ಕೆಳಗಿನಿಂದ ಸುಲೋಚನೆಯು ಕರೆದದ್ದು ಕೇಳಬಂತು: "ಕೃಷ್ಣಾ–" ಎದುರಿನಲ್ಲಿ ಸಂಗೀತದ ಮಧುರ ಧ್ವನಿಯಾದರೆ, ಹಿಂದೆ ಕರುಣಮಯವಾದ ಕರೆ ! ಇಂಥ ವೇಳೆಯಲ್ಲಿ ಹರಿಣಿಯು ಏನು ಮಾಡಬೇಕು ? ವತ್ಸಲೆಯು ನಿಂತ ಸ್ಥಳದಲ್ಲಿಯೇ ನಿಂತುಬಿಟ್ಟಳು.

"ಕೃಷ್ಣಾ–" ಸುಲೋಚನೆಯು ಮತ್ತೆ ಕರೆದಳು.

ವತ್ಸಲೆಯು ಹೊರಟಳು.

"ನಾಳೆ ಸಂಜೆಗೆ ಇಲ್ಲಿಗೆ ಬರುವಿಯಾ ?" ರಮಾಕಾಂತ ಕೇಳಿದ.

ವತ್ಸಲೆಯು ಗೋಣಿನಿಂದಲೇ ಸಮ್ಮತಿಸಿ ಕೆಳಗೆ ಇಳಿದು ಹೋದಳು. ಮನಸ್ಸು ಕಾತರವಾಗಿದ್ದರಿಂದ ಕೈಯಲ್ಲಿಯ ಕಾಗದವು ಕೆಳಗೆ ಬಿದಿತೆಂಬುದರ ಅರಿವು ಅವಳಿಗಾಗಲಿಲ್ಲ.

ಆ ಕಾಗದವೆಂದರೆ ಸುಲೋಚನೆಗೆ ಕೊಡಲಿಕ್ಕೆಂದು ಸುರಂಗೆಯು ಬರೆದ ಪತ್ರವಿರಬಹುದೆಂದು ರಮಾಕಾಂತನು ಬಗೆದಿದ್ದ. ಅದನ್ನು ತೆರೆದು ನೋಡಿದ. ಅದರಲ್ಲಿ ವತ್ಸಲೆಯ ಕೈ ಬರಹ. ಮೊದಲಿನ ಶಬ್ದಗಳನ್ನು ಬೆಳದಿಂಗಳಿನಲ್ಲಿಯೇ ಓದಿದ.

**ಪರಮೇಶ್ವರ**

ಲೇಖಿಕಾ :– ಕೃಷ್ಣಾ

ಅವನ ತಲೆಯಲ್ಲಿ ಒಮ್ಮೆಲೆ ಬೆಳಕು ಬಿದ್ದಿತು. ಕೃಷ್ಣೆ ಎಂಬ ಹೆಸರಿನಿಂದ ಬರೆದ

ಕಥೆಗಳೆಲ್ಲವನ್ನೂ ವತ್ಸಲೆಯು ಬರೆದಿದ್ದರೆ ?

ಅವನು ಲಗುಬಗೆಯಿಂದ ಕೆಳಗೆ ಬಂದ. ಇಂದಿನವರೆಗೆ ಅವನು ಕಮಳೇಶ್ವರೀ ದೇವಾಲಯದಲ್ಲಿ ಎಂದೂ ಹೋಗಿರಲಿಲ್ಲ. ನಂದಾದೀಪದ ಮಂದ ಪ್ರಕಾಶದಲ್ಲಿ ಅದನ್ನು ಓದಿದ.

"ಹೊರಗೆ ಕತ್ತಲೆ ಮುಸುಕಿತ್ತು. ಜಿಟ್ಟಿಗೆ ಅಲ್ಲಿ ಬೇಸರವೆನಿಸಹತ್ತಿತು. ಅದು ಕಿಟಿಕಿಯೊಳಗಿಂದ ಕೋಣೆಯ ಒಳಗೆ ಬಂದಿತು. ದೀಪದ ಕಿರಣಗಳು ಮೈ ಮೇಲೆ ಬಿದ್ದಕೂಡಲೆ ಅದರ ಹಸಿರು ಬಣ್ಣವು ಮತ್ತಿಷ್ಟು ಹೊಳೆಯಹತ್ತಿತು. ಸೂರ್ಯಾಸ್ತ ಸಮಯದಲ್ಲಿ ಥಳಥಳ ಹೊಳೆಯುವ ಸಾಗರದ ನೀರಿನ ಬಣ್ಣವೇ ಆಗಿತ್ತು !"

ಜಿಟ್ಟಿಯು ಅಭಿಮಾನದಿಂದ ತನ್ನ ಬಣ್ಣದ ಕಡೆಗೆ ನೋಡಿಕೊಳ್ಳುತ್ತಿತ್ತು.

"ಘುರ್, ಘುರ್ ಎಂಬ ಸಪ್ಪಳ ಕೇಳಬಂದ ಕೂಡಲೆ ಜಿಟ್ಟಿಗೆ ಹೆದರಿಕೆಯಾಯಿತು. ದೀಪದ ಬುಡದಲ್ಲಿ ಒಂದು ಬೆಕ್ಕು ಕೂತಿತ್ತು. ತೀರ ಕಪ್ಪು ಬಣ್ಣದ ಬೆಕ್ಕು ಅದು ; ದೀಪದ ಬುಡದಲ್ಲಿ ಕತ್ತಲೆ ಅನ್ನುವರು, ಅದೇನು ಸುಳ್ಳಲ್ಲ !"

ಜಿಟ್ಟಿಯ ಮನಸ್ಸಿನಲ್ಲಿ ಅಭಿಮಾನದ ತೆರೆಗಳು ಮತ್ತಿಷ್ಟು ವೇಗವಾಗಿ ಬರತೊಡಗಿದವು. "ಇದು ನೋಡು, ನನ್ನ ಬಣ್ಣ ಹೇಗೆ ಹಸಿರು ಮುರಿಯುತ್ತದೆ ! ಅದೇ ಇದು ನೋಡಿರಿ ದೀಪದ ಬುಡದಲ್ಲಿಯ ಇದ್ದಲಿಯನ್ನು !"

ಅದು ಆನಂದದಿಂದ ಕುಣಿದಾಡಹತ್ತಿತು.

ಹಕ್ಕಿಗಳು ಗಿಡದ ಟೊಂಗೆಗಳ ಕೂಡ ಕಿಲಕಿಲಿಸುತ್ತ ಚಿನ್ನಾಟವಾಡುವಂತೆ ಜಿಟ್ಟಿಯಾದರೂ ಅತ್ತಿಂದಿತ್ತ ಹಾರಾಡತೊಡಗಿತು. ಒಮ್ಮೆಲೆ ಚಪ್ಪರದವರೆಗೆ ಭರ್‍ರೆಂದು ಹಾರುವದು, ಕ್ಷಣಾರ್ಧದಲ್ಲಿ ಮತ್ತೆ ಕೆಳಗಿಳಿಯುವದು.

ಕೆಳಗೆ ಇಳಿಯುತ್ತಿರುವಾಗ ಅದಕ್ಕೆನಿಸಿತು. "ಎಷ್ಟು ಸುಂದರವಾಗಿದೆ ನನ್ನ ದೇಹ ! ನಾನೊಂದು ವಿಮಾನವೇ ಸರಿ ! ಇಲ್ಲವಾದರೆ ನೋಡಿರಿ ಆ ದೀಪದ ಬುಡದಲ್ಲಿ ಕುಳಿತ ಕಾಳಭೈರವನನ್ನು ! ಕೆಲಸಕ್ಕೆ ಬಾರದ್ದಾಗಿ ಕೂತಿದೆ ಸುಮ್ಮನೆ !"

ದೀಪದ ಬುಡದಲ್ಲಿ ಬೆಕ್ಕು ಖಿನ್ನ ಮುದ್ರೆಯಿಂದ ಕುಳಿತಿತ್ತು. ಈಗ ನಾಲ್ಕು ದಿವಸ ಅದಕ್ಕೆ ಇಲಿ ಸಿಕ್ಕಿರಲಿಲ್ಲ ! ಒಂದು ಹಲ್ಲಿ, ಹೊಗಲಿ ಒಂದು ಜಿಟ್ಟಿ ಅದು ಕೂಡ ಸಿಕ್ಕಿರಲಿಲ್ಲ. ಘುರ್ ಘುರ್ ಮಾಡುತ್ತ ಅದು ಗಟ್ಟಿಯಾಗಿ ಅಂದಿತು: "ಎಷ್ಟು ನಿರ್ದಯನಾಗಿರುವ ದೇವ ! ಇಂದಿಗೆ ನಾಲ್ಕು ದಿವಸಗಳಾದವು–"

ಬೆಕ್ಕಿನ ಈ ಶಬ್ದಗಳನ್ನು ಕೇಳಿ ಜಿಟ್ಟಿಗೆ ಆಶ್ಚರ್ಯವಾಯಿತು. ದೇವ, ನಿರ್ದಯ ? ತನಗೆ ಸುಂದರವಾದ ಹಸಿರು ಬಣ್ಣವನ್ನೂ ವಿಮಾನದಂಥ ಚಪಲ ಶರೀರವನ್ನೂ ಕೊಟ್ಟಂಥ ದೇವರು ನಿರ್ದಯನೇ ? ದೀಪದ ಹತ್ತಿರವೇ ಜಿಗಿದು ಅದು ಅಂದಿತು: "ಎಲೈ ಬಾವುಗವೇ, ಮಹಾ ಮೂರ್ಖನಿರುವಿ ನೀನು ! ದೇವರು ದಯಾಳುವು ! ಇದು ನೋಡು ದೇವನು ಕೊಟ್ಟ ಈ ನನ್ನ ಬಣ್ಣ ! ಇದು ನೋಡು ವಿಮಾನದಂಥ ನನ್ನ ದೇಹ–"



ಆದರೆ ಆ ವಿಮಾನವು ಹಾರುವ ಮೊದಲೇ ನೆಲಕ್ಕೆ ಕಡಿದುಕೊಂಡು ಬಿದ್ದಿತು. ಬೆಕ್ಕು ಅದರ ಮೇಲೆ ಹೊಂಚು ಹಾಕಿ ತಪ್ಪದಂತೆ ಹಿಡಿದುಬಿಟ್ಟಿತ್ತು.

ಜಿಟ್ಟಿಯು ಆಕ್ರೋಶ ಮಾಡಿತು. "ದೇವ ನಿರ್ದಯನಾಗಿರುವ ; ದು . .ಷ್ಟ....."

ಬೆಕ್ಕು ನಾಲಗೆಯಿಂದ ತುಟಿ ನೆಕ್ಕುತ್ತ ಅಂದಿತು: "ದೇವರು ದಯಾಳುವು. ಬಹಳ ದಯಾಳುವು. ಬಹಳ ದಯಾಳುವು ದೇವರು."

ಕಥೆಯನ್ನೋದುವುದಾದ ಕೂಡಲೆ ರಮಾಕಾಂತನಿಗೆನಿಸಿತು–ಕಥೆಯಲ್ಲಿಯ ಜಿಟ್ಟಿಯೆಂದರೆ ಕಲೆ ಎಂಬುದು ವತ್ಸಲೆಯ ಕಲ್ಪನೆಯಿರಬೇಕು ! ಕೃಷ್ಣೆಯ ಹೆಸರಿನಲ್ಲಿ ಬರೆದ ಕಥೆಗಳೆಲ್ಲವೂ ಅವನಿಗೆ ನೆನಪಾದವು. ಕೇವಲ ಕಲೆಯು ನಿರ್ಜೀವ, ಕೇವಲ ನಿಸರ್ಗವು ನಿರ್ದಯ, ಪರಮೇಶ್ವರನೆಂದರೆ, ಕೇವಲ ಮಾನವ ಕಲ್ಪನೆಯ ಮಂಜು ! ಹೀಗಾದರೆ ಇವಳ ವಿಶ್ವಾಸವಾದರೂ ಯಾತರ ಮೇಲೆ ? ನಾಳೆ ಸಂಜೆಗೆ ಅವಳು ಬಂದು ತನಗೆ ಭೆಟ್ಟಿಯಾಗುವಳು. ಅವಳನ್ನು ಪ್ರೇಮದಿಂದ ತನ್ನೆಡೆಗೆ ಎಳೆದು ಮುಂಬಯಿಗೆ ಹೋಗೋಣವೆಂದರೆ ಅವಳೇನೆನ್ನ ಬಹುದು ? ಅವಳ ವಿಷಯದಲ್ಲಿ ವಿದ್ಯಾಧರನೂ ಬಾಪ್ಪಾ ಅವರೂ ಮಾಡಿದ ಸ್ತುತಿಯು ಅವನ ನೆನಪಿಗೆ ಬಂದಿತು. ಅವಳು ಇಲ್ಲಿಯೇ ಇರುವಳೆ ?

ಛೆ ! ಕಠಿಣವಾದ ನಿಗ್ರಹದಿಂದ ಈಗ ನಾಲ್ಕು ತಿಂಗಳವರೆಗೆ ಅವಳು ಇಲ್ಲಿಯ ಕಷ್ಟನಿಷ್ಠುರಗಳೆಲ್ಲವನ್ನೂ ಸಹಿಸಿ ಹೊಟ್ಟೆತುಂಬಿಕೊಂಡಿರಲಿಕ್ಕೆ ಬೇಕು. ಇಡೀ ಜನ್ಮವನ್ನೇ ಈ ರೀತಿಯಾಗಿ ಕಳೆಯುವದು ಅವಳಿಗೆ ಸುಖಕರವಾಗುವದೆ ? ಮುಂಬಯಿಗೆ ಬಂದರೆ ಸುಖವಸ್ತುವಿನಂತೆ ಇರಲಿಕ್ಕೆ ಸಿಗುವದು, ಕಥೆ ಬರೆದು ಕೀರ್ತಿಯನ್ನಾದರೂ ಸಂಪಾದಿಸಲಿಕ್ಕಾದೀತು. ಅವಳು ತನ್ನೊಡನೆ ಬರಲಿಕ್ಕೆ ಸಹಜವಾಗಿಯೇ ಒಪ್ಪುವಳು. ಸುಖವಸ್ತುವಾಗಿರುವುದರ ಆಸೆಗಿಂತಲೂ ಅವಳಿಗೆ ತನ್ನ ಪ್ರೇಮದ ಎಳೆತವಾದರೂ ಹೆಚ್ಚಾಗಿ ಅನಿಸಲಿಕ್ಕಿಲ್ಲವೇ? ಆ ದಿವಸ ಹುಣ್ಣಿಮೆಯ ರಾತ್ರಿ ವತ್ಸಲೆಯು ಸೆರಗೊಡ್ಡಿ ತನ್ನಲ್ಲಿ ಪ್ರೇಮದ ಭಿಕ್ಷೆ ಬೇಡಿದಳು. ಭಿಕ್ಷುಕನನ್ನು ಕರೆದು ದಾನ ಕೊಟ್ಟರೆ, ಅವನು ಅದನ್ನು ಒದೆದು ಹೋಗುವನೆ? ಆದರೆ ಅವಳದು ಆ ವಿದ್ಯಾಧರನ ಕೂಡ ಯಾವ ಪ್ರಕಾರದ ಸಂಬಂಧವಿದೆ ?

ಒಂದು ಕಣ್ಣು ಕಪ್ಪಡೆಯು ಫಡಫಡನೆ ಇತ್ತಿಂದ ಅತ್ತಕಡೆಗೆ ಹಾರಿ ಹೋಯಿತು. ಆ ಸಪ್ಪಳದೊಳಗಿನಿಂದ ಪ್ರಶ್ನೆ ಬಂದಿತು: "ನಿನ್ನದೂ ಸುರಂಗೆಯದೂ ಯಾವ ಪ್ರಕಾರದ ಸಂಬಂಧವಿತ್ತು?"

## ೨೨
## ಧ್ರುವ ಒಂದೇ

ಸುರಂಗೆಯು ಬಹಳೇ ಬೇನೆ ಬಿದ್ದಿದ್ದು ಅವಳು ನಿಮಗೆ ಬಂದು ನೋಡಿಕೊಂಡು ಹೋಗಬೇಕೆಂದು ಹೇಳಿರುವಳೆಂದು ವತ್ಸಲೆಯು ಸುಲೋಚನೆಗೆ ತಿಳಿಸಿದ್ದಳು. ಆದ್ದರಿಂದ ಬಾಗಿಲ ಮುಂದೆ ಸ್ವಸ್ಥವಾಗಿ ಕುಳಿತ ಸುರಂಗೆಯನ್ನು ನೋಡಿದ ಕೂಡಲೆ ಸುಲೋಚನೆಗೆ ಸಿಟ್ಟು ಬಂದಿತು. ಆದರೆ ಸುರಂಗೆಯು ಎಲ್ಲ ವೃತ್ತಾಂತವನ್ನು ಸವಿಸ್ತರವಾಗಿ ಹೇಳಿದ ಕೂಡಲೆ

ಅವಳ ಸಿಟ್ಟು ಕೃತಜ್ಞತೆಯಲ್ಲಿ ಪರಿಣಮಿಸಿತು. ಆ ಎಲ್ಲ ಸಮಾಚಾರ ಕೇಳಿ ಸುಲೋಚನೆಯ ಮನಸ್ಸು ಭಿನ್ನ ಭಿನ್ನ ವಿಕಾರಗಳಿಂದ ತುಂಬಿಹೋಯಿತು. ತನ್ನ ತಂದೆಯು ಸಾವಳನ ಹೆಂಡತಿಯನ್ನು ದುರ್ಮಾರ್ಗಕ್ಕೆ ಹಚ್ಚಬೇಕು ಮತ್ತು ಆ ಸೆರೆಕುಡುಕ ಸಾವಳನು ಸೇಡು ತೀರಿಸಿಕೊಳ್ಳುವದಕ್ಕಾಗಿ ತನ್ನನ್ನು ದೀಪಮಾಲೆಯ ಮೇಲಿಂದ ನುಗಿಸಿಬಿಡಬೇಕು ಎಂಬುದನ್ನೆಲ್ಲ ನೋಡಿ ಅವಳ ಆಶ್ಚರ್ಯಕ್ಕೆ ಮೇರೆಯೇ ಉಳಿಯಲಿಲ್ಲ. ನಾಟಕ ಕಂಪನಿಯಲ್ಲಿ ದಾದಾ ಅವರಿಗೆ ಸುರಂಗೆಯು ಚಹದ ಕಪ್ಪು ಕೊಡುವಾಗ, ಅವಳು ಒಮ್ಮೆಲೆ ಗಾಬರಿಯಾಗಿ ಅವಳ ಕೈಯೊಳಗಿಂದ ಚಹದ ಪೇಲೆಯು ನೆಲಕ್ಕೆ ಬಿದ್ದುದರ ನಿಜವಾದ ಕಲ್ಪನೆಯು ಅವಳಿಗೆ ಈಗ ಬಂದಿತು. ಇಷ್ಟು ದಿವಸ ತಾನು ಪವಿತ್ರನೆಂದು ತಿಳಿದುಕೊಂಡಿರುವ ತನ್ನ ತಂದೆಯ ಪಾಪವು ಇಂದು ಹೊರಬಿದ್ದಿತು. ವಿದ್ಯಾಧರನ ಕಲ್ಪನೆ ಇದರ ವಿರುದ್ಧವಾಗಲಾರದೆಂದು ಹೇಗೆ ಹೇಳಬೇಕು? ಎಂಬ ಪ್ರಶ್ನೆಯು ಅವಳ ಮನಸ್ಸಿನೆದುರಿನಲ್ಲಿ ನಿಂತಿತು. ಏನಾದದ್ದು ಆದರೂ ಒಮ್ಮೆ ಎಲ್ಲವನ್ನೂ ತಿಳಿದುಕೊಂಡೇ ಬಿಡಬೇಕೆಂದು ಅವಳು ಕೃಷ್ಣೆಯ ಕಡೆಗೆ ನೋಡಿದಳು. ಅವಳು ಏನನ್ನೊ ಹುಡುಕುವಂತಿದ್ದಳು.

"ಏನು ಕಳೆದುಕೊಂಡಿರುವಿ ?"

"ಕಾಗದ !"

"ಯಾತರದು ? ಆಗಲಿನ ಕಥೆಯದೇನು ?"

ದೀಪಮಾಲೆಯ ಕಡೆಗೆ ಹೋಗುವ ಪೂರ್ವದಲ್ಲಿ ವತ್ಸಲೆಯು ಬರೆಯುತ್ತ ಕೂತಿರುವದು ಸುರಂಗೆಗೆ ಗೊತ್ತಿತ್ತು.

ವತ್ಸಲೆಯು ಸುರಂಗೆಗೆ ಕಣ್ಣ ಸನ್ನೆ ಮಾಡಿದಳು. ಆದರೆ ಇದಕ್ಕಿಂತ ಮೊದಲೇ ಸುಲೋಚನೆಯು ಕೇಳಿದ್ದಳು.

"ಕಥೆಗಳನ್ನು ಬರೆಯುವಿಯೇನು ನೀನು ಕೃಷ್ಣಾ ?"

"ಹೌದು."

"ಯಾವು ಯಾವವು ?"

"ನೀವು ಚಿತ್ರ ತೆಗೆದಿದ್ದಿರಲ್ಲ ಅವು !"

ಸುಲೋಚನೆಯು ಸುಮ್ಮನೆ ಕೂಡಬಹುದಾಗಿತ್ತು; ಆದರೆ ಅವಳಿಗೆ ವಿದ್ಯಾಧರನ ವಿಷಯದಲ್ಲಿ ಸಂಶಯದ ನಿರಸನ ಮಾಡಿಕೊಳ್ಳಬೇಕಾಗಿತ್ತು. ಅವಳು ಒಮ್ಮೆಲೆ ಕೇಳಿದಳು:

"ವಿದ್ಯಾಧರನ ಯಂತ್ರದ ಕಾಗದಗಳನ್ನು ನೀನೇ ತಂದಿರುವಿ ಏನು ?"

"ಹೌದು."

"ಯಾಕೆ ?"

ವತ್ಸಲೆಯು ಸ್ತಬ್ಧಳಾಗಿ ನಿಂತಳು.

"ನೀನು ಹೇಳಿದ್ದು ಇಷ್ಟೊಂದು ಹೇಗೆ ಕೇಳುವರು ಅವರು ?"

"ತಂಗಿ ಹೇಳಿದ್ದು ಅಣ್ಣ ಕೇಳುವದಿಲ್ಲವೆ ?"



"ಆ ಕಾಗದಗಳನ್ನು ನೀನೇಕೆ ತೆಗೆದುಕೊಂಡು ಬಂದೆ ?"

"ಅಣ್ಣನ ಕೈಯಿಂದ ಪಾಪವಾಗಬಾರದೆಂದು."

"ಪಾಪವೆಂತಹುದು ?"

"ಬಡವರ ಬಾಯೊಳಗಿನ ತುತ್ತು ಕಸಿದುಕೊಳ್ಳುವದು !"

"ಅಂದರೆ ?"

"ನಡೆಯಿರಿ. ನಿಮಗೆ ಮನೆಗೆ ಕಳಿಸುತ್ತಲೇ ದಾರಿಯಲ್ಲಿ ಎಲ್ಲವನ್ನೂ ಹೇಳುವೆ."

ಆ ಕಾಗದಗಳನ್ನು ತೆಗೆದುಕೊಂಡು ವತ್ಸಲೆಯು ಸುಲೋಚನೆಯ ಕೂಡ ನಡೆದಳು. ಫೋಟೋಗಳ ವಿಷಯದಲ್ಲಿ ಮತ್ತು ಯಂತ್ರದ ಕಾಗದಗಳ ವಿಷಯದಲ್ಲಿ ವಿದ್ಯಾಧರನು ಸುಳ್ಳು ಯಾಕೆ ಹೇಳಿದನೆಂಬುದು ತಿಳಿದ ಕೂಡಲೆ ಸುಲೋಚನೆಗೆ ಅವನ ವಿಷಯದಲ್ಲಿ ಹೆಚ್ಚು ಆದರವೆನಿಸಹತ್ತಿತು. ಅವಳು ಮನೆಗೆ ಹೋಗದೆ ನೇರವಾಗಿ ವಿದ್ಯಾಧರನ ಕಡೆಗೆ ಹೋಗಿ ಅವನ ಕ್ಷಮೆ ಬೇಡಬೇಕೆಂದು ನಿಶ್ಚಯಿಸಿದಳು. ಒಳಗಿನಿಂದ ಬಾಗಲಿಗೆ ಚಿಲಕ ಹಾಕಿಕೊಂಡು ವಿದ್ಯಾಧರನು ಉದಾಸೀನತೆಯಲ್ಲಿ ಬಿದ್ದುಕೊಂಡಿದ್ದ. ಅವನು ಬೇಸರದಿಂದ ಕೇಳಿದ :

"ಯಾರವರು ?"

"ಎರಡು ದೆವ್ವಗಳು !"

ವಿದ್ಯಾಧರನಿಗೆ ಧ್ವನಿಯು ಸುಲೋಚನೆಯಂತೆ ಅನಿಸಿತು. ಆದರೆ ತನ್ನ ತರ್ಕವು ಆಶೆಯಿಂದ ಹಂಬಲಿಸುವ ಮನಸ್ಸಿನ ಆಭಾಸವೇ ಇರಲಿಕ್ಕಿಲ್ಲವೇ ಎಂದುಕೊಂಡ.

"ದೆವ್ವಗಳು ಕಾಗದಗಳನ್ನು ತಿರುಗಿ ತಂದಿರುತ್ತವೆ !"

ಈಗ ಮಾತ್ರ ವಿದ್ಯಾಧರನಿಗೆ ಮನವರಿಕೆಯಾಯಿತು. ಅವನು ಬಾಗಿಲು ತೆರೆದು ನೋಡಿದ. ಬಾಗಿಲಲ್ಲಿ ವತ್ಸಲೆ ಮತ್ತು ಸುಲೋಚನೆ !

"ಇಂಥ ಅಪರಾತ್ರಿಯಲ್ಲಿ ಏತಕ್ಕೆ ಬಂದೆ ?" ಅವನು ವತ್ಸಲೆಯನ್ನು ವಿಚಾರಿಸಿದ.

"ಮುಹೂರ್ತವು ಈಗಲೇ ಇದ್ದಿತೆಂದು !"

"ಯಾರು ತೆಗೆದರು ಮುಹೂರ್ತ ?"

"ಮದುಮಗಳು !"

"ನಾನು ಬಂದಿರುವೆ ಗುರುಶಿಷ್ಯರ ಭೆಟ್ಟಿಯನ್ನು ನೋಡುವ ಸಲುವಾಗಿ !"

ಸುಲೋಚನೆ ಮತ್ತು ವತ್ಸಲೆ ಇವರ ನಡುವೆ ಬಿಚ್ಚುಮನಸ್ಸಿನ ಮಾತು ನಡೆದಿರಬೇಕೆಂದು ಮನವರಿಕೆಯಾಗಿ ವಿದ್ಯಾಧರ ಅಂದ :

"ಗುರುಚರಿತ್ರ ಕೊಡಲೇನು ಓದಲಿಕ್ಕೆ ?"

"ಹುಂ. ಪುಣ್ಯವಾದರೂ ಬಂದೀತು !"

ವತ್ಸಲೆಯು ಮಾಡಿದ ಸನ್ನೆಗಳನ್ನು ಲೆಕ್ಕಿಸದೆ ವಿದ್ಯಾಧರನು ತನ್ನ ಟ್ರಂಕು ತೆರೆದು ರಮಾಕಾಂತನ ವಹಿಯನ್ನು ಸುಲೋಚನೆಯ ಕೈಯಲ್ಲಿ ಕೊಟ್ಟನು. ವಹಿಯಲ್ಲಿಟ್ಟ ಸುರಂಗೆಯ

ಪತ್ರವನ್ನು ಸುಲೋಚನೆಯೂ ವತ್ಸಲೆಯೂ ಇಬ್ಬರೂ ಓದಿದರು. ಆ ಪತ್ರವು ತನ್ನ ಕೈಯಲ್ಲಿ ಹೇಗೆ ಸಿಕ್ಕಿತೆಂಬುದನ್ನು ವಿದ್ಯಾಧರನು ಹೇಳಿದ: "ಆ ಕಾಗದದ ಬದಲಾಗಿ ಇದನ್ನು ಒಯ್ಯುವೆ" ಎಂದು ಹೇಳಿ ಆ ಪತ್ರವನ್ನು ತೆಗೆದುಕೊಂಡು ವತ್ಸಲೆಯು ಹೊರಟಳು.

"ಜೊತೆಯಲ್ಲಿ ಬರಲೇ ?" ವಿದ್ಯಾಧರ ಕೇಳಿದ.

"ನನ್ನ ಜೊತೆಯಲ್ಲಿ ಬಂದರೆ ಸುಲೋಚನೆಯ ಕೂಡ ಯಾರು ?"

"ಇಂದು ಬೆಳದಿಂಗಳಾದರೂ ಎಷ್ಟು ಸುಂದರವಾಗಿ ಬಿದ್ದಿದೆ ?" ಸುಲೋಚನೆ ಅಂದಳು.

"ಹೊರಗಿನಕ್ಕಿಂತಲೂ ಒಳಗೆಯೇ ಚನ್ನಾಗಿದೆ !" ಕೋಣೆಯೊಳಗಿನಿಂದ ಬರಬರುತ್ತ ವತ್ಸಲೆಯು ನುಡಿದಳು.

"ಅದು ಹೇಗೆ ?"

"ಇಬ್ಬರು ಕಳ್ಳರ ಮನಸ್ಸುಗಳು ಇವೆಯಲ್ಲ ಒಳಗೆ !"

* * * * *

ವಿದ್ಯಾಧರನಿಂದ ವತ್ಸಲೆಯ ವೃತ್ತಾಂತವನ್ನು ಕೇಳುತ್ತಿರುವಾಗ ಸುಲೋಚನೆಯ ಕಣ್ಣುಗಳಲ್ಲಿ ನೀರು ನಿಂತವು. ಬಾಪ್ಪಾ ಅವರ ಸೋದರ ಸೊಸೆ ಎನಿಸಿಕೊಳ್ಳುವದರಲ್ಲಿ ಅವಳಿಗೆ ಯಾವಾಗಲೂ ಅಭಿಮಾನವೆನಿಸುತ್ತಿತ್ತು. ವತ್ಸಲೆಯ ತ್ಯಾಗದ ಸ್ವಚ್ಛ ಪ್ರಕಾಶದಲ್ಲಿ ಅವಳು ತನ್ನ ಗತ ಆಯುಷ್ಯವನ್ನೆಲ್ಲ ನಿರೀಕ್ಷಿಸಿದಳು. ತನ್ನ ದಾರಿ ತಪ್ಪುತ್ತಿತ್ತೆಂದು ಅವಳಿಗೆ ಮನವರಿಕೆಯಾಯಿತು. ಲಕ್ಷ್ಮಿಯ ಚಿತ್ರವನ್ನು ತೆಗೆಯುವುದರಲ್ಲಿ ಕಲೆಯಿದ್ದರೆ, ದೇವಿಯ ಸಲುವಾಗಿ ಬಿಟ್ಟ ಕೋಣದ ಚಿತ್ರವನ್ನು ತೆಗೆಯುವದರಲ್ಲಿ ಕಲೆ ಇಲ್ಲವೆ ? ಅಜ್ಞಾನ ಮತ್ತು ಅಂಧ ಶ್ರದ್ಧೆ ಇಷ್ಟು ಭಯಂಕರವಾಗಿವೆ ಎಂಬುದನ್ನು, ಮೈಸೊಕ್ಕಿದ ಕೋಣವು ಹೆಂಗಸರನ್ನು ಹುಡುಗರನ್ನು ಇರಿದು ಹೋದರೂ ಜನರು ತಮ್ಮ ಕೈಯಲ್ಲಿಯ ಕೋಲುಗಳಿಂದ ಅದನ್ನು ಹೊಡೆಯದೆ ಸುಮ್ಮನೆ ನೋಡುತ್ತ ನಿಲ್ಲುವ ಜನರ ಚಿತ್ರದಿಂದ ತೋರಿಸಲಿಕ್ಕೆ ಬರುವದಿಲ್ಲವೆ? ವಿದ್ಯಾಧರನ ಯಂತ್ರದ ವಿಷಯದಲ್ಲಿ ವತ್ಸಲೆಯು ಹಾಕಿದ ಕಟ್ಟು ಅಷ್ಟೇನೂ ಕಠಿಣವಾದದ್ದಲ್ಲವೆಂದು ಅವಳಿಗೆ ಅನಿಸಿತು. ಅವಳು ತನ್ನೊಳಗೆಯೇ ಅಂದುಕೊಂಡಳು : ದಾದಾ ಅವರಿಗೆ ದುಡ್ಡಿನ ಆಶೆ ಇರಬಹುದು. ಒಂದು ವೇಳೆ. ಆದರೆ ಅದನ್ನು ಕಲೆಹಾಕಿ, ಅವರು ಕೊಡುವದು ಯಾರಿಗೆ. ನನಗೆಯೆ ಅಲ್ಲವೆ ? ನನಗೇನು ಮಾಡುವದು ಇಷ್ಟು ದುಡ್ಡನ್ನು ತೆಗೆದುಕೊಂಡು?

ವಿದ್ಯಾಧರನನ್ನು ಜೊತೆಯಲ್ಲಿ ಕರೆದುಕೊಂಡು ಸುಲೋಚನೆಯ ಮನೆಯ ಕಡೆಗೆ ಹೊರಟಾಗ ವೇಳೆ ಒಂಬತ್ತಕ್ಕೆ ಸಮೀಪಿಸಿತ್ತು. ಪಡಸಾಲೆಯಲ್ಲಿಯೇ ಅತ್ತಿತ್ತ ಅಡ್ಡಾಡುತ್ತಿರುವ ದಾದಾ ಅವರು ಅವಳ ಕಡೆಗೆ ತಿರಸ್ಕಾರದಿಂದ ನೋಡುತ್ತ ಕರುಣಸ್ವರದಲ್ಲಿ ಅಂದರು:

"ಸುಲೂ–"

"ಯಾಕೆ ?"



"ತೀರ ತಾಳತಂತಿ ಬಿಟ್ಟುಬಿಟ್ಟೆಯಲ್ಲ ನೀನು. ಇಷ್ಟು ರಾತ್ರಿಯಾದರೂ ಪರಪುರುಷರ ಕೂಡ–"

"ವಿದ್ಯಾಧರ ನನಗೆ ಪರಕೀಯರಲ್ಲ !"

"ಪರಕೀಯರಲ್ಲವೇ ?" ಅಣಕಿಸುವ ದನಿಯಲ್ಲಿ ದಾದಾ ಅವರು ಉದ್ಗಾರ ತೆಗೆದರು: "ಅವರ ಕೂಡ ಲಗ್ನವಾಗಿದೆಯೇನು ನಿನ್ನದು ?"

"ಈಗ ಆಗಿರದಿದ್ದರೂ, ಆಗಬಹುದು ನಾಳೆ !"

"ಈ ಠಕ್ಕ ನೀಚನ ಕೂಡ ನಿನ್ನ ಲಗ್ನ–"

"ದಾದಾ, ಜೋಕೆಯಿಂದ ಮಾತಾಡಿರಿ." ಸುಲೋಚನೆಯು ಸಂತಾಪದಿಂದ ಅಂದಳು.

"ಎಷ್ಟು ಸೊಕ್ಕು ನಿನ್ನದು ? ನಾಲಗೆ ಬಿಗಿಹಿಡಿಯಲಿಕ್ಕೆ ನನಗೆ– ನಿನ್ನ ತಂದೆಗೆ– ಹೇಳುವಿಯಾ ?"

"ದಾದಾ–"

"ಬಾಯಿ ಮುಚ್ಚು. ಇಪ್ಪತ್ತೈದು ವರ್ಷದ ಕುದುರೆಯಂತೆ ಬೆಳೆಸಿದರೆ ಹೀಗೇ ಆಗುವದು. ಇವರ ಕೊರಳೊಳಗೆ ಕೊರಳು ಚೆಲ್ಲು. ಮತ್ತೊಬ್ಬರನ್ನು ಅಪ್ಪಿಕೋ–"

ಥರಥರ ನಡುಗುತ್ತ ಸುಲೋಚನೆಯು ಒದರಿದಳು : "ದಾದಾ–"

ಅವಳ ಆ ಕಠೋರವಾದ ಸ್ವರದಿಂದ ದಾದಾ ಅವರು ಮನಸ್ಸಿನಲ್ಲಿಯೇ ಬೆಚ್ಚಿದರು. ಆದರೆ ಅವರ ರಕ್ತದಲ್ಲಿಯ 'ತಂದೆ' ಮತ್ತು 'ವ್ಯಾಪಾರಿ' ಇವುಗಳ ಸಮ್ಮಿಶ್ರಣವು ಅವರಿಗೆ ಸುಮ್ಮಗೆ ಕೂಡಗೊಡವಲ್ಲದು. ಬಾಗಿಲಲ್ಲಿಯೂ ಕೂಡ ನಿಲ್ಲಿಸಿಕೊಳ್ಳಲಿಕ್ಕೆ ಯೋಗ್ಯತೆಯಿಲ್ಲದ ವಿದ್ಯಾಧರನ ಕೂಡ ಲಗ್ನ ಮಾಡಿಕೊಳ್ಳುತ್ತೇನೆಂದು ಸ್ಪಷ್ಟವಾಗಿ ತಮ್ಮ ಮೋರೆಯ ಮೇಲೆ ಅವಳು ಕೇಳಿದ್ದಕ್ಕೆ ಅವರಿಗೆ ವಿಲಕ್ಷಣವಾದ ಸಿಟ್ಟು ಏರಿತ್ತು.

"ತಂದೆಯ ದುಡ್ಡಿನಿಂದ ಆಟ ಮಾಡುವದು. ಮತ್ತು ಕೊನೆಗೆ ತಂದೆಯ ಮೇಲೆಯೆ ತಿರುಗಿ ಬೀಳುವದು ! ಇದೇ ಈಗಿನ ಶಿಕ್ಷಣ ! ದೇವರು ಬೇಡ ! ರಾತ್ರಿ ಒಂಬತ್ತು ಹೊಡೆಯುವತನಕ ಎಲ್ಲಿ ಬೇಕಾದಲ್ಲಿ ತಿರುಗಾಡಲಿಕ್ಕೆ ನಾಚಿಕೆ ಬರುವದಿಲ್ಲವೆ ? ನಾಳೆ ಏನಾದರೂ ಆಯಿತೆಂದರೆ ಪಾರುಮಾಡಲಿಕ್ಕೆ–"

"ಸ್ವತಃದ್ದೇ ಪಾರುಗಾಣಿಸಿಕೊಳ್ಳಲಿಕ್ಕೆ ಬಂದಿದ್ದರೆ–"

"ನಾನು ಹೀಗೆಂದೂ ರಾತ್ರಿ ಅಪರಾತ್ರಿ ತಿರುಗಾಡುತ್ತಿಲ್ಲ–"

"ರಾತ್ರಿ ಯಾತಕ್ಕೆ ಬೇಕು ? ನಡು ಹಗಲಿನಲ್ಲಿಯೇ–" ಸುಲೋಚನೆಯು ಅರಿವಿಲ್ಲದೆ ಮಾತಾಡುತ್ತಿದ್ದಳು.

"ಬಾಯಿ ಮುಚ್ಚುವಿಯೋ, ಏನು–" ದಾದಾ ಅವರು ರೇಗಿಗೆದ್ದು ಚೀರಿದರು.

"ಆಗಲೆ ನೀವೆಲ್ಲಿ ಬಾಯಿ ಮುಚ್ಚಿದಿರಿ. ಏಳು ವರ್ಷದ ಪೂರ್ವದಲ್ಲಿ ನಡು ಹಗಲಿನಲ್ಲಿಯೇ ಆ ತುಳಸಿಯನ್ನು–"

"ತುಳಸಿ ?" ದಾದಾ ಅವರ ಮುಖವು ಒಮ್ಮೆಲೆ ಬಾಡಿಹೋಯಿತು.

"ಹೌದು ತುಳಸಿ ಆ ಹೆಸರು ಮರೆತಿದ್ದರೆ ಸುರಂಗೆ–"

ದಾದಾ ಅವರು ಸುಲೋಚನೆಯ ಮೈಮೇಲೆ ಹೋದರು. ನಡುವೆ ವಿದ್ಯಾಧರನು ಬಂದನೆಂದು ಒಳ್ಳೆಯದಾಯಿತು. ಇಲ್ಲದಿದ್ದರೆ ಅವರೇನು ಅವಳನ್ನು ಹೊಡೆಯಲಿಕ್ಕೆ ಹಿಂಜರಿಯುತ್ತಿದ್ದಿಲ್ಲ.

"ಲಕ್ಷ್ಮಿಯ ಚಿತ್ರವನ್ನು ಯಾರು ಕೆಡಿಸಿದರು ಹೇಳಲೇ ? ನೀವು ಕೆಡಿಸಿದಿರಿ. ನೀವು...."

"ನಾನೇ ?"

"ಹೌದು ನೀವು. ಆ ಲಕ್ಷ್ಮಿಯು ಸುರಂಗೆಯಂತೆ ಕಾಣುತ್ತಿದ್ದಳು. ನಿಮ್ಮ ಪಾಪ ಪ್ರತಿ ದಿವಸ ಮುಂಜಾನೆ ಕಣ್ಣೆದುರಿಗೆ ಬೇಡವೆಂದೇ–"

"ಸುಲೂ, ಹೊರಬೀಳು ಈ ಮನೆಯೊಳಗಿಂದ."

"ಹೋಹೋ, ಹೋಗುವೆ" ಎಂದು ಸುಲೋಚನೆಯು ಬಾಗಿಲ ಕಡೆಗೆ ಹೊರಟಳು.

"ಒಂದು ಕಾಸೂ ಸಿಗಲಿಕ್ಕಿಲ್ಲ ನನ್ನ ಕಡೆಯಿಂದ ನಿನಗೆ."

"ಹಾಗಾದರೆ ಇಷ್ಟು ದುಡ್ಡು ಏನು ಮಾಡುವಿರಿ ?"

"ಬಡಬಗ್ಗರಿಗೆ ಕೊಟ್ಟುಬಿಡುವೆ."

"ಇದು ನಿಜವೆ ?" ಸುಲೋಚನೆಯು ಒಮ್ಮೆಲೆ ತಿರುಗಿ ಕೇಳಿದಳು.

"ನಿಜವೆಂದರೆ ? ನಿನ್ನಂಥ ಹುಡಿಗೆಗಿಂತ ಬಡಬಗ್ಗರೇನು ಕೆಟ್ಟು ?"

"ಹಾಗೆ ಅನ್ನುವರು ಯಾರು ? ಬಡಬಗ್ಗರಿಗೆ ಕೊಡುವದು ನಿಶ್ಚಿತವಾದ ಕೂಡಲೆ ನನಗೆ ತಿಳಿಸಿಬಿಡಿರಿ ಮಾತ್ರ !"

"ಯಾತಕ್ಕೆ ? ಫಿರ್ಯಾದು ಮಾಡಿ ತಿರುಗಿ ಪಡೆಯಲಿಕ್ಕೇನು ?"

"ಅಲ್ಲ ಅಲ್ಲ ! ಯಂತ್ರದ ಕಾಗದಗಳನ್ನ ತಿರುಗಿ ದೊರಕಿಸಲಿಕ್ಕೆ ! ನೀವು ನಿಮ್ಮ ಕಾರಖಾನೆಯನ್ನು ಬಡಬಗ್ಗರ ಹೆಸರಿನಿಂದ ಮಾಡಿದ ಕೂಡಲೆ ವಿದ್ಯಾಧರ ಅವರು ನಿಮಗೆ ಯಂತ್ರದ ಕಾಗದಗಳನ್ನು ಪುಕ್ಕಟೆಯಾಗಿ ಕೊಟ್ಟುಬಿಡುವರು !"

ಕೋಣೆಯ ಕಡೆಗೆ ತಿರುಗಿ ಹೋಗುವಾಗ ವಿದ್ಯಾಧರ ಕೇಳಿದ :

"ಸುಲೂ, ಏನು ಮಾಡಿದೆ ಇದೆಲ್ಲ ಇಂದು ?"

"ನಾಳೆ ರಾಮನವಮಿ ಅಲ್ಲವೇ ?"

"ಆದರೆ............"

"ರಾಮನು ರಾಜ್ಯವನ್ನು ಬಿಟ್ಟು ಹದಿನಾಲ್ಕು ವರ್ಷ ವನವಾಸಕ್ಕೆ ಹೋದ..........."

"ಅಂತೆಯೇ ಇಂದು ಈ ಸೀತೆಯು ಹೊರಟಳೆಂದು ಕಾಣಿಸುತ್ತದೆ ?"

"ಈ ಸೀತೆಯ ಕೂಡ ರಾಮನಾದರೂ ಬಂದೇ ಬರುವ ಅಲ್ಲವೆ !" ಅವನ ಕಡೆಗೆ ಸ್ನಿಗ್ಧದೃಷ್ಟಿಯಿಂದ ನೋಡುತ್ತ ಸುಲೋಚನೆಯು ಉತ್ತರ ಕೊಟ್ಟಳು.

* * * * *

ರಾಮನವಮಿಯ ದಿವಸ ೧೦ ಗಂಟೆಗೆ ಬಾಪ್ಪಾ ಅವರು ಮೋಟಾರಿನಿಂದ ಬಂದರು.



ಕಾಮಾಪುರದ ಹುಂಬ ಜನರಿಗೆ ಅಹಿಂಸಾವಾದವನ್ನು ಕಲಿಸಲಿಕ್ಕೆ ಅವರು ಸಿದ್ಧತೆಯಿಂದ ಬಂದಿದ್ದರು. ಶಿಬಿರಾಜನಂಥ ಪುರಾಣದಲ್ಲಿಯ ಉದಾಹರಣೆಗಳಿಂದಲೂ, ಸಾಧುಸಂತರ ಕಥೆಗಳಿಂದಲೂ ಧರ್ಮದಲ್ಲಿ ಅಂಥ ಶ್ರದ್ಧೆಯುಳ್ಳ ಜನರ ಮೇಲೆ ಒಳ್ಳೇ ಉತ್ತಮವಾದ ಪರಿಣಾಮವನ್ನುಂಟುಮಾಡಲಿಕ್ಕೆ ಬರುವದೆಂದು ಬಾಪ್ಪಾ ಅವರು ಭಾವಿಸಿಕೊಂಡಿದ್ದರು. ಆದರೆ ಬಾಪ್ಪಾ ಅವರ ಎಲ್ಲ ಸಿದ್ಧತೆಯು ಅವರ ಮನಸ್ಸಿನಲ್ಲಿಯೇ ಉಳಿಯಿತು. ದೇವಾಲಯದ ಕಡೆಗೆ ಹೋಗಬೇಕೆಂದು ಅವರು ಒಂದು ಸಮೀಪದ ಸಂದಿಯೊಳಗಿಂದ ಹಾಯ್ದು ಹೋಗುತ್ತಿರುವಾಗ, ಎದುರಿನಿಂದ ಕೋಣವು ಓಡುತ್ತ ಬಂದು ಅವರ ಮೈಮೇಲೆ ಸಾಗಿತು. ಬಾಪ್ಪಾ ಅವರು ಅತ್ತಿತ್ತ ನೋಡಿದರು. ಸಮೀಪದಲ್ಲಿ ಎಲ್ಲಿಯೂ ಗಿಡವಿರಲಿಲ್ಲ. ಓಡಿಹೋಗುವದಾರೂ ಅಶಕ್ಯವಾಯಿತು. ಆ ಸೊಕ್ಕಿದ ಕೋಣಕ್ಕೆ ಅವರ ಸಾಧುತ್ವದ ಕಲ್ಪನೆ ಹೇಗೆ ಬರಬೇಕು ? ಅದು ಅವರನ್ನು ಜೋರಿನಿಂದ ಇರಿಯಿತು. ಬಾಪ್ಪಾ ಅವರು ನೆಲಕ್ಕೆ ಬಿದ್ದರು. ಅವರ ಹಣೆಗೆ ಒಳ್ಳೇ ಪೆಟ್ಟು ತಗಲಿತು. ಮೈಯಾದರೂ ಅಲ್ಲಲ್ಲಿ ಕೆತ್ತಿತು. ಅಷ್ಟರಲ್ಲಿಯೇ ದೇವಾಲಯದ ಕಡೆಗೆ ಹೋಗುವ ಒಂದು ಜನರ ಗುಂಪೇ ಬಂದಿತೆಂದು ಒಳ್ಳೆಯದಾಯಿತು. ಇಲ್ಲವಾದರೆ ಬಾಪ್ಪಾ ಅವರ ಅಹಿಂಸಾವಾದವು ಆ ಕೋಣದ ಹಿಂಸಾವಾದದಲ್ಲಿ ರೂಪಾಂತರವಾಗಿ ಹೋಗುತ್ತಿತ್ತು.

ಈ ಅಪಘಾತದ ಮೂಲಕ ಬಾಪ್ಪಾ ಅವರ ಪುರಾಣವು ನಿಂತುಹೋಯಿತಲ್ಲದೆ, ಕೋಣದ ಈ ಇರಿತದಿಂದ ಬಾಪ್ಪಾ ಅವರ ಶರೀರಕ್ಕಿಂತಲೂ ಮನಸ್ಸಿಗೇ ಬಹಳ ಪೆಟ್ಟು ತಗಲಿತು. ಅವರಿಗೆನಿಸಿತು–ಅಹಿಂಸೆಯ ತತ್ತ್ವದ ಸಲುವಾಗಿ ತಾವು ಕೋಣವನ್ನು ಉಳಿಸಿದ್ದು. ಆದರೆ ಆಯಿತೇನು ? ದೇವಿಗೆ ಬಿಟ್ಟ ಕೋಣವೆಂದು ಯಾರೂ ಅದನ್ನು ಕೆಲಸಕ್ಕೆ ಹಚ್ಚಲಿಲ್ಲ. ಅಲ್ಲದೆ ಅದಕ್ಕೆ ಯಥೇಷ್ಟವಾಗಿ ಮೇಯಲಿಕ್ಕೆ ಸಿಕ್ಕಿದ್ದರಿಂದ ಅದು ಸೊಕ್ಕಿತು ಮಾತ್ರ. ಇಂದಿನವರೆಗೆ ಅದು ನೂರಾರು ಜನರಿಗಾದರೂ ಗಾಯಪಡಿಸಿರಬೇಕು. ಈಗಂತೂ ಜನರನ್ನು ಕೊಲ್ಲುವಷ್ಟು ಸೊಕ್ಕಿಗೇರಿದೆ. ತತ್ತ್ವಗಳಿಗೆ ವ್ಯವಹಾರದ ಮರ್ಯಾದೆಯನ್ನು ಹಾಕಲಿಕ್ಕೆ ಬೇಡವೆ ? ತಾವು ಹಾಗೆ ಮರ್ಯಾದೆ ಹಾಕಲಿಲ್ಲೆಂಬುದು ತಮ್ಮಿಂದ ತಪ್ಪಾಯಿತು. ವಿದ್ಯಾಧರನು ಅವರ ಸಮಾಚಾರ ತಕ್ಕೊಳ್ಳಲಿಕ್ಕೆಂದು ಬಂದಾಗ ಅವರು ಇದನ್ನು ಮಾತಾಡಿ ತೋರಿಸಿದರು ಕೂಡ. ಸಾವಳನು ಬಂದಾಗ್ಗೆ ವತ್ಸಲೆಯು ಬೇಡಿದ ಬಂದೂಕು ನೆನಪಾಗಿ ಅವರು ಕೇಳಿದರು : "ಆ ಕೃಷ್ಣೆ ಇರುವಳೇನೋ, ಆ ಕಾಶಿಯ ಮನೆಯಲ್ಲಿ ?"

"ಇದ್ದಾಳಲ್ಲ !"

"ಅವಳನ್ನು ನಾನು ಕರೆದಿರುವೆನೆಂದು ಹೇಳು. ಬಹಳ ಹುಷಾರ ಇರುವಳು ಆ ಹುಡುಗಿ. ನನ್ನಂಥವನಿಗೆ ಕೂಡ ಗುರುವಾಗಿ ಶೋಭಿಸುವಳು."

ಕೃಷ್ಣೆಯ ಬಗ್ಗೆ ಬಾಪ್ಪಾ ಅವರು ಮಾಡಿದ ಸ್ತುತಿಯು ಸಾವಳನ ಮನಸ್ಸಿನ ಮೇಲೆ ಪರಿಣಾಮ ಮಾಡದೆ ಇರಲಿಲ್ಲ.

* * * * *

ದೀಪಮಾಲೆಯ ಬುಡದಲ್ಲಿ ವತ್ಸಲೆಯು ಕೆಲಹೊತ್ತು ನಿಂತಳು. ಅವಳ ಒಂದು

ಮನಸ್ಸು ಹೇಳುತ್ತಿತ್ತು– “ನಿನ್ನೆ ಬರಲಿಕ್ಕೆ ಒಪ್ಪಿದ್ದಾದರೂ ಏಕೆ ?” ಎರಡನೇ ಮನವು ಆನಂದದಿಂದ ಹಾಡುತ್ತ ಕುಣಿಯುತ್ತಿತ್ತು. “ಹುಚ್ಚೀ, ಇದಂತೂ ನಿನ್ನ ವಿಜಯದ ದಿವಸ ನಡೆ ಬೇಗನೆ ಮೇಲಕ್ಕೆ. ರಮಾಕಾಂತನು ನಿನ್ನ ದಾರೀ ಕಾಯುತ್ತಿರುವ.”

“ವತ್ಸಲೆ......” ಮೇಲಿನಿಂದ ಕರೆದದ್ದು ಕೇಳಬಂತು.

ಅವಳಿಗೇ ತಿಳಿಯದೇ ಅವಳ ಕಾಲುಗಳ ಪಾವಟಿಗೆಗಳನ್ನು ಏರತೊಡಗಿದವು. ರಮಾಕಾಂತನು ಅವಳ ಸ್ವಾಗತ ಮಾಡುವದಕ್ಕಾಗಿ ಬಾಗಿಲದಲ್ಲಿಯೇ ನಿಂತಿದ್ದ. ಅವಳ ಕೈಯಲ್ಲಿ ಒಂದು ವಹಿಯನ್ನು ನೋಡಿ ರಮಾಕಾಂತ ಕೇಳಿದ– “ಇದು ನಿನ್ನ ಕಥಾಸಂಗ್ರಹ ಕಾಣುತ್ತದೆ?”

ವತ್ಸಲೆಯು ಸ್ವಲ್ಪ ನಾಚಿದಳು. ನಿನ್ನೆ ಬರೆದ ಕಥೆಯ ಕಾಗದವು ತನ್ನ ಕೈಯಲ್ಲಿಯೇ ಉಳಿದು ಇಲ್ಲಿಯೇ ಎಲ್ಲಿಯಾದರೂ ಬಿದ್ದಿರಬಹುದೆಂದು ಅವಳು ಊಹಿಸಿದಳು.

“ಈ ಕಥಾಸಂಗ್ರಹಕ್ಕೆ ಪ್ರಸ್ತಾವನೆ ಬೇಕಾಗಿದೆ ನನಗೆ !” ಕಟ್ಟೆಯ ಮೇಲೆ ಕೂಡುತ್ತ ಕೂಡುತ್ತ ವತ್ಸಲೆಯು ಅಂದಳು.

“ಆನಂದದಿಂದ ಬರೆಯುವೆ !”

“ಆದರೆ ಕಥೆಗಳಲ್ಲಿ ಏನಾದರೂ ಗುಣವಿದೆಯೇ ?”

“ಎಷ್ಟೊಂದು ಹೇಳಲಿ !”

“ಓದಲಾರದೇನೇ ಹೇಳುವಿರಲ್ಲ !”

“ಒಳ್ಳೇದು, ಹಾಗಾದರೆ ಮುಂಬಯಿಗೆ ಹೋದಮೇಲೆ ಓದಿ ಹೇಳುವೆ.”

“ಎಂದು ಹೋಗುವಿರಿ ಮುಂಬಯಿಗೆ ?”

“ನೀನು ಹೇಳಿದಂದು !”

“ನನ್ನದೇನು ಸಂಬಂಧ ?”

“ನಾನು ಎರಡು ತಿಕೀಟು ತೆಗೆದು ಹೋಗುವವ ಮುಂಬಯಿಗೆ !”

“ಯಾರದಾರೂ ಸಿಗಬಹುದು ಮಾಲಕರು ಎರಡನೆ ತಿಕೀಟಿಗೆ.”

“ನನಗೆ ಯಾರಾದರೂ ಬೇಡ, ನೀನು ಬೇಕು.”

ವತ್ಸಲೆಯ ಹೃದಯದಲ್ಲಿ ಮಧುರ ಕೋಲಾಹಲವೆದ್ದಿತು. ಸಾವಕಾಶವಾಗಿ ಪೃಥ್ವಿಯ ಮೇಲೆ ಹರಡುವ ನಯನಮನೋಹರವಾದ ಚಂದ್ರಿಕಾ ಪ್ರಕಾಶದಲ್ಲಿ ಸಾವಕಾಶವಾಗಿ ತೂಗಾಡುವ ಉಯ್ಯಾಲೆಯ ಮೇಲೆ ಕುಳಿತು ತಾನು ತೂಗಾಡುತ್ತಿರುವಂತೆ ಅವಳಿಗೆನಿಸಿತು. ಆದರೆ ಅದು ಕ್ಷಣಮಾತ್ರವೇ. ಕೂಡಲೆ ಅವಳೆಂದಳು–

“ನನ್ನ ಮುಂಬಯಿ ಇಲ್ಲಿಯೇ ಅದೆ.”

“ಎಲ್ಲದೆ?”

ಅವಳು ಬೊಟ್ಟು ಮಾಡಿ ದಿನ್ನೆಯ ಬದಿಯಲ್ಲಿ ಹುದುಗಿಕೊಂಡಿರುವ ಬಡಬಗ್ಗರ ಗುಡಿಸಲುಗಳನ್ನು ತೋರಿಸಿದಳು.

“ಏನಿದೆ ನಿನ್ನ ಈ ಮುಂಬಯಿಯಲ್ಲಿ ? ಅದು ನೋಡು ಅಲ್ಲಿ ಆ ಸೊಕ್ಕಿದ



ಕೋಣ......ಮುಂಜಾನೆ ಬಾಪ್ಪಾ ಅವರಿಗೆ ಒಳ್ಳೇ ಪ್ರಸಾದ ಕೊಟ್ಟಿತು.”

ವತ್ಸಲೆಯು ನೋಡಿದಳು. ಕೋಣವು ತೂಗಾಡುತ್ತ ದಿನ್ನೆಯ ಬದಿಯಲ್ಲಿ ನಡೆದಿತ್ತು.

“ವತ್ಸಲೆ, ಈ ನಿನ್ನ ಜಗತ್ತಿನಲ್ಲಿರುವದೆಂದರೆ ಎಂದಾದರೊಂದು ದಿನ ಈ ಕೋಣಕ್ಕೆ ಬಲಿಬೀಳುವದೆ ! ಅಜ್ಞಾನ, ಧರ್ಮದಲ್ಲಿ ಅಂಧ ಶ್ರದ್ಧೆ, ದಾರಿದ್ರ್ಯ.....ಎಲ್ಲವೂ ಸೊಕ್ಕಿದ ಕೋಣಗಳೇ. ಎಲ್ಲವೂ ದೇವರ ಹೆಸರಿನಿಂದ ಬಿಟ್ಟವುಗಳೇ !”

ವತ್ಸಲೆಯು ಸ್ತಬ್ಧಳಾಗಿದ್ದಳು.

ರಮಾಕಾಂತ ಮುಂದೆ ಸಾಗಿದ. “ಇದು ನೋಡು ನಿನ್ನ ಮುಂಬಯಿ. ಆ ಸೆರೆಕುಡುಕ ಹೇಗೆ ತೂಕತಪ್ಪಿ ಹೊರಟಿರುವ.”

ವತ್ಸಲೆಯು ಒಂದು ಮನುಷ್ಯಾಕೃತಿಯನ್ನು ಕಂಡಳು. ಆ ಕುಡುಕನಾದರೂ ಮೇಲೆಯೇ ನೋಡುತ್ತಿರಬೇಕು. ಅವನೂ ದೀಪಮಾಲೆಯ ಕಡೆಗೇ ಬಂದ ಕ್ಷಣದಲ್ಲಿಯೇ ಯಾರೋ ಪಾವಟಿಗೆಗಳನ್ನು ಏರಿದಂತೆ ಭಾಸವಾಯಿತು. ಏರಿ ಬಂದ ವ್ಯಕ್ತಿಯು ಸರಳವಾಗಿ ವತ್ಸಲೆಯ ಹತ್ತಿರ ಹೋಯಿತು.

“ಏನು ಸಾವಳ, ನುಗಿಸಿಕೊಡುವದಿದ್ದರೆ ನುಗಿಸಿಬಿಡು.” ಅವಳು ನಗುನಗುತ್ತಲೇ ಹೇಳಿದಳು.

ಸಾವಳನು ಧ್ವನಿ ಗುರುತಿಸಿ ಹಿಂದಕ್ಕೆ ಹೊರಳಿದ. “ನನಗನಿಸಿತೂ......ನನಗನಿಸಿತೂ....ಬಾಪ್ಪಾ ಅವರು....ಅಂದರು......” ಹೀಗೇನೇನೋ ಬಡಬಡಿಸುತ್ತ ಅವ ತಿರುಗಿ ಪಾವಟಿಗೆಗಳನ್ನು ಇಳಿದು ಹೋದ.

“ವತ್ಸಲೆ, ಇದು ನರಕ. ಇದೇನೂ ನಾನು ನೀನು ಇರುವ ಜಗತ್ತು ಅಲ್ಲ.” ರಮಾಕಾಂತನು ಅವಳ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಅಂದ.

“ಎಲ್ಲ ಜಗವೂ ಒಂದೇ ಆಗಿದೆ.”

“ಇದು ವೇದಾಂತವಲ್ಲ, ಕಾವ್ಯ !”

“ಕಾವ್ಯವೇ ?””

“ಹೌದು, ಕಾವ್ಯ ಸುರಂಗೆಯು ನಿಮಗೆ ಸೇರುತ್ತಿದ್ದಳಲ್ಲವೆ ? ಅವಳು ಇಲ್ಲಿಯವಳೆ.”

“ಈ ಜಗತ್ತಿನಲ್ಲಿಯವಳಾಗಿದ್ದರೂ ನನ್ನ ನಿನ್ನ ಜಗತ್ತಿನಲ್ಲಿ ಬಂದವಳು !”

“ಅದರಂತೆಯೇ ಎಲ್ಲರೂ ಬರಬಹುದು.”

“ನಮ್ಮ ಜಗತ್ತಿನಲ್ಲಿ ಅಷ್ಟು ಸ್ಥಳವೆಲ್ಲಿದೆ ?”

“ಇಲ್ಲದಿದ್ದರೆ ನಾವೇ ಅವರಲ್ಲಿ ಸೇರೋಣ, ಅಲ್ಲಿ ಬೇಕಾದಷ್ಟು ಸ್ಥಳವಿದೆ.”

“ಅದು ಶಕ್ಯವಿಲ್ಲ.”

“ಯಾಕೆ ?”

“ನಾವು ಉತ್ತರ ಧ್ರುವದ ಮೇಲೆ ; ಇವರು ದಕ್ಷಿಣ ಧ್ರುವದ ಮೇಲೆ.”

“ಮನುಷ್ಯರು ಯಾವ ಧ್ರುವದ ಮೇಲೂ ಇರಬಾರದು. ಅಲ್ಲಿರುವ ಮನುಷ್ಯರು

ಕಾಡು.""

ಸ್ವಲ್ಪ ವೇಳೆ ಇಬ್ಬರೂ ಸ್ತಬ್ಧರಾಗಿ ಕುಳಿತಿದ್ದರು.

"ವತ್ಸಲೆ, ನೀನು ಬೇಡಿದ ವಸ್ತುವನ್ನು ನಾನು ತೆಗೆದುಕೊಂಡು ಬಂದಿರುವೆ."

"ಯಾವದದು ?"

"ಪ್ರೇಮ."

"ಈಗೆಯೆ ಎಲ್ಲಿಂದ ಬಂದಿತದು ?"

"ನಿನ್ನ ಗುಣಗಳನ್ನು ನೋಡಿ."

"ಇಲ್ಲಿಯೇ ಇದ್ದುಕೊಂಡರೆ ಈ ಬಡಬಗ್ಗರ ಗುಣಗಳಾದರೂ ಕಾಣುವವು !"

"ಇಲ್ಲಿ ಇದ್ದು ನೀನು ಏನು ಮಾಡುವವಳು ?"

"ಈಗ ನಾಲ್ಕು ತಿಂಗಳು ಇಲ್ಲಿ ಇದ್ದು ಏನು ಮಾಡಿದೆ ಅದನ್ನೇ "

"ವತ್ಸಲೆ, ಹುಚ್ಚಿ ನೀನು !"

"ಹುಚ್ಚಿಯ ಬೆನ್ನು ಹತ್ತಬೇಡಿರಿ ನೀವು ಮಾತ್ರ" ಎಂದು ವತ್ಸಲೆಯು ತನ್ನ ಕೈಯನ್ನು ಕಸಿದುಕೊಳ್ಳುವ ಪ್ರಯತ್ನ ಮಾಡುತ್ತ ಅಂದಳು. ರಮಾಕಾಂತನ ಆ ಸ್ಪರ್ಶದಲ್ಲಿ ವಿಷವಿತ್ತೊ ಅಮೃತವಿತ್ತೊ ಎಂಬುದು ಅವಳಿಗೆ ತಿಳಿಯಲಿಲ್ಲ. ಆ ಸ್ಪರ್ಶದಿಂದ ಬರುವ ಗುಂಗು ಮಧುರಸ್ವಪ್ನವಾಗುವದೋ ಅಥವಾ ಪ್ರಾಣಾಂತಿಕ ಕಾಳನಿದ್ರೆಯದಾಗುವದೋ ಎಂಬುದು ಅವಳ ವ್ಯಾಕುಲವಾದ ಮನಸ್ಸಿಗೆ ಒಂದು ದೊಡ್ಡ ಪ್ರಶ್ನೆಯಾಗಿಬಿಟ್ಟಿತು.

"ವತ್ಸಲೆ, ನೀನು ನನ್ನವಳಲ್ಲವೆ ?"

ವತ್ಸಲೆಗೆ ತನ್ನ ಮನಸ್ಸಿನ ಮೇಲಿನ ಪ್ರಭುತ್ವ ಉಳಿಯಲಿಲ್ಲ. ಅವಳು ಒಂದು ಯಂತ್ರದ ಗೊಂಬೆಯಂತೆ ಅವನ ಎದೆಯ ಮೇಲೆ ತನ್ನ ತಲೆಯನ್ನಿಟ್ಟಳು. ತಾವು ದೀಪಮಾಲೆಯ ಮೇಲೆ ಇರದೆ, ಒಂದು ನಾವಿನಲ್ಲಿ ಕುಳಿತು ಬೆಳುದಿಂಗಳ ಸಾಗರದಲ್ಲಿ ತೇಲುತ್ತಿರುವಂತೆ ಅವಳಿಗೆ ಭಾಸವಾಯಿತು. ಸುರಂಗೆ, ಸೋನ್ಯಾ, ಬಾಪ್ಪಾ, ಸುಲೋಚನೆ, ವಿದ್ಯಾಧರ ಇವರೆಲ್ಲರೂ ತನ್ನಿಂದ ದೂರದೂರವಾಗಿ ಹೋಗುತ್ತಿರುವಂತೆ ಅವಳಿಗೆ ಅನಿಸಹತ್ತಿತು. ಪ್ರಣಯದ ಮಾಧುರ್ಯದ ಈ ಆನಂದವು ದುಃಸಹವಾಗಿಯೇ ಏನೋ ಅವಳು ತನ್ನ ಕಣ್ಣುಗಳನ್ನು ಮುಚ್ಚಿಕೊಂಡಳು.

ರಮಾಕಾಂತನಿಗೆ ತಾನು ವತ್ಸಲೆಯ ಮೇಲೆ ವಿಜಯ ಸಂಪಾದಿಸಿದೆನೆಂದೆನಿಸಿತು. ಅವಳನ್ನು ಚುಂಬಿಸುವಕ್ಕೆಂದು ಕೆಳಗೆ ಬಾಗುವವನಿದ್ದ. ಬಂದೂಕು ಹಾರಿಸಿದ ಸಪ್ಪಳವು ಕೇಳಬಂದಿತು. ಒಂದು, ಎರಡು, ಮೂರು. ವತ್ಸಲೆಯು ಮೋಹನಿದ್ರೆಯೊಳಗಿನಿಂದ ಎಚ್ಚತ್ತಳು.

"ಏನು ಸಪ್ಪಳ ಇದು ?" ರಮಾಕಾಂತ ಕೇಳಿದ.

"ವಿದ್ಯಾಧರನು ಕೋಣವನ್ನು ಹೊಡೆದಿರಬೇಕು !" ಅವಳು ಹೋಗುವದಕ್ಕಾಗಿ ಏಳುತ್ತೇಳುತ್ತ ಉತ್ತರ ಕೊಟ್ಟಳು.

"ಎಲ್ಲಿ ನಡೆದೆ ನೀನು ?"



"ನನ್ನ ಜಗತ್ತಿನಲ್ಲಿ."

"ನಿನ್ನ ಇಡೀ ಜಗತ್ತು ಇಲ್ಲಿಯೇ ಅದೆ."

"ಒಂದು ಕ್ಷಣದ ಪೂರ್ತಿ ಅನಿಸಿತು ಮಾತ್ರ ಹಾಗೆ ! ಆದರೆ....ಆದರೆ.....ಆದರೆ.....ಆ ಬಂದೂಕಿನ ಸಪ್ಪಳ......ಈ ವಹಿಯನ್ನು ಓದಿರಿ....ಅದರಲ್ಲಿರುವ ಸುರಂಗೆಯ ಪತ್ರ ನೋಡಿರಿ...."

ವಹಿಯನ್ನು ಕೈಯಲ್ಲಿ ತೆಗೆದುಕೊಂಡು ತೆರೆದು ನೋಡುವದರಲ್ಲಿ ವತ್ಸಲೆಯು ಪಾವಟಿಗೆಗಳನ್ನು ಇಳಿದು ಹೋಗಿಬಿಟ್ಟಳು. ಬೆಳದಿಂಗಳಿನಲ್ಲಿ ಸರಸರನೆ ನಡೆಯುವ ಅವಳ ಮೂರ್ತಿಯು ಕಾಣಿಸದಂತಾಗುವವರೆಗೂ ರಮಾಕಾಂತನು ಅವಳ ಕಡೆಗೆ ನೋಡುತ್ತಿದ್ದ.

ಅವನು ವಹಿಯನ್ನು ತೆರೆದು ನೋಡಿದ. ಅದು ಅವನದೇ ಆಗಿತ್ತು. ಪ್ರತಿಯೊಂದು ಪುಟದ ಎರಡನೆಯ ಮೈಮೇಲೆ ವತ್ಸಲೆಯು ಏನೇನೋ ಬರೆದಿದ್ದಳು. ವಹಿಯಲ್ಲಿ ಬರೆದದ್ದನ್ನು ಓದುವ ಮೊದಲು, ಸುರಂಗೆಯ ಪತ್ರವನ್ನು ಅವನು ಉತ್ಕಂಠೆಯಿಂದ ತೆರೆದ. ಜೊತೆಯಲ್ಲಿ ತಂದ ಇಲೆಕ್ಟ್ರಿಕ್ ದೀಪದ ಬೆಳಕಿನಲ್ಲಿ ಓದತೊಡಗಿದ. ಪತ್ರವು ಮೂರು ತಿಂಗಳ ಹಿಂದಿನದಿತ್ತು. ತಾನು ಸುರಂಗೆಯನ್ನು ಕರೆದುಕೊಂಡು ಜುಹೂಕ್ಕೆ ಹೋದ ತಾರೀಖಿನದೇ ಆಗಿತ್ತು ಆ ಪತ್ರ.

**"ಪ್ರಿಯ ರಮಾಕಾಂತ,**

ಇಂದಿನ ದಿವಸ ನಾನು ಪೂರ್ಣವಾಗಿ ಮನಸ್ಸು ತೆರೆದು ಈ ಪತ್ರವನ್ನು ಬರೆಯುತ್ತಿದ್ದೇನೆ. ಬರೆಯಬೇಕೋ ಬರೆಯಬಾರದೋ ಈ ವಿಚಾರದಲ್ಲಿಯೇ ಎಷ್ಟೋ ದಿವಸಗಳು ಹೋದವು–ಆದರೆ ಈಗ ಮನಸ್ಸು ಗಟ್ಟಿಮಾಡಿ ಬರೆಯುತ್ತಿದ್ದೇನೆ.

ನಿಮ್ಮದು ನನ್ನ ಮೇಲೆ ಪ್ರೇಮವಿದೆ. ನಿಮಗೆ ಒಂದು ವೇಳೆ ಅದು ತಿಳಿಯುತ್ತಿರಲಿಕ್ಕಿಲ್ಲ. ಆದರೆ ನಿಮ್ಮ ಕಣ್ಣುಗಳಲ್ಲಿ ನಾನದನ್ನು ಕಾಣಬಲ್ಲೆ. ನಾಟಕದ ವ್ಯವಸಾಯದ ಮೂಲಕ ಸಾವಿರಾರು ಜನರ ಕೂಡ ನನ್ನ ಸಂಬಂಧ ಬಂದಿತು. ಆದ್ದರಿಂದ ಕೇವಲ ದೃಷ್ಟಿಯ ಮೇಲಿಂದ ಮನುಷ್ಯರನ್ನು ತಿಳಿಯಬಲ್ಲೆ. ನಿಮ್ಮ ಪ್ರೇಮವು ನಿಮಗೆ ಪವಿತ್ರವಾಗಿದೆ ಎಂದು ಅನಿಸಬಹುದು. ಹೀಗೆ ಹೇಳುವವರು ನನಗೆ ಎಷ್ಟೋ ಜನರು ಸಿಕ್ಕಿದ್ದಾರೆ. ಆದರೆ, ರಮಾಕಾಂತ, ಕೋಪಿಸಿಕೊಳ್ಳಬೇಡಿರಿ ಮಾತ್ರ. ನಿರ್ಮಲ ಪ್ರೇಮವು ಎಷ್ಟೋ ಸಾರೆ ಕೇವಲ ಸೋಗು ಇರುತ್ತದೆ. ಎಲ್ಲಿ ಹೋದರೂ ಮನುಷ್ಯಪ್ರಾಣಿಯು ಒಂದೇ. ನೀವು ನನ್ನನ್ನು ಪ್ರೀತಿಸುವಿರಿ, ಇದರಲ್ಲಿ ನಿಮ್ಮದೇನೂ ದೋಷವಿಲ್ಲ. ಹಾಗೆ ನೋಡಿದರೆ ನಾನೇ ಭಾಗ್ಯವಂತೆ.

ಆದರೆ ನಿಜವಾಗಿಯೂ ನಾನು ಭಾಗ್ಯವಂತಳೇ ? ರಮಾಕಾಂತ, ನನ್ನ ಆಯುಷ್ಯ ಒಂದು ಕಾದಂಬರಿಯಷ್ಟು ವಿಚಿತ್ರವಾಗಿದೆ.–ಮುಸುರೆ ತಿಕ್ಕುವವಳು ನಟಿಯಾದೆ ನಾನು. ದುಂದುಗಾರಿಕೆಯಲ್ಲಿ ನನ್ನ ಗಂಡ ಜೇಲಿಗೆ ಹೋದ. ನನಗೆ ಅನ್ನಕ್ಕೆ ಗತಿಯಿಲ್ಲದಾಯಿತು. ವಸೂಲಿಯ ಸಲುವಾಗಿ ಕಾಮಾಪುರದ ಕಾರಖಾನೆಯ ಮಾಲಕನು ಬರುತ್ತಿದ್ದ. ಹೆಂಗಸರನ್ನು ಕಡೆಗಣ್ಣಿನಿಂದಲೂ ನೋಡತಕ್ಕವನಲ್ಲವೆಂದು ಜನರು ಹೇಳುತಿದ್ದರು. ಅವನ ಮನೆಯ ಕೆಲಸ

ನಾನು ಮಾಡಹತ್ತಿದೆ. ಅಲ್ಲಿಂದ ಒಂದು ದಿವಸ ನಡು ಮಧ್ಯಾಹ್ನದಲ್ಲಿ .....ಏನು ಬರೆಯಲಿ ರಮಾಕಾಂತ, ನಾನು ಅಪಕೃತಿಗೆ ಬಲಿಯಾದೆ. ಹಸಿವು ನನ್ನನ್ನು ಪಾಪದಲ್ಲಿ ನೂಕಿತು. ಆ ದಾದಾ ನಾಲ್ಕೆಂಟು ದಿವಸ ನಾಲ್ಕೆಂಟು ದುಡ್ಡು ನನ್ನ ಮೋರೆಯ ಮೇಲೆ ಎಸೆದ. ಆದರೆ ಮುಂದೆ ನನಗೆ ಗರ್ಭ ನಿಂತಿತು, ಅವನ ಹೆಸರನ್ನು ನಾನು ಹೇಳುವೆನೆಂದು ಗಾಬರಿಯಾದ. ಅಲ್ಲಿಂದ ದುಡ್ಡು ಕೊಟ್ಟು ನನ್ನನ್ನು ಬೆಳಗಾವಿಗೆ ಕಳಿಸಿದ. ಆಗ ನನಗೆ ಹೊಟ್ಟೆಯಲ್ಲಿಯ ಕೂಸಿನ ಮೇಲೆ ಎಷ್ಟು ಸಿಟ್ಟು......ಅಂಥಾದ್ದೇನೂ ಔಷಧವು ನನ್ನ ಕೈಗೆ ಸಿಗಲಿಲ್ಲ. ಇಲ್ಲವಾದರೆ ಸೋನ್ಯಾ ಈ ಜಗತ್ತಿನಲ್ಲಿ ಕಾಲೇ ಇಡುತ್ತಿರಲಿಲ್ಲ.

ಮನುಷ್ಯನ ಮನಸ್ಸೆಂದರೆ ಹೇಗಿರುತ್ತದೆ ನೋಡಿರಿ. ಹುಡುಗ ಹುಟ್ಟಿದ ಅನಂತರ ಅವನದೇ ನನಗೆ ಎಳೆತ. ಆದರೆ ನನ್ನ ದೈವವೇ  ಹರಕು. ನಾಟಕ ಕಂಪನಿಯಲ್ಲಿ ಬಂದ ಅನಂತರ ನನಗೆ ಬೇಕಾದಷ್ಟು ದುಡ್ಡು ಸಿಗಹತ್ತಿತು. ಆದರೆ ಹುಡುಗನನ್ನು ದೂರವಾಗಿ ಇಡಬೇಕಾಯಿತು.

ಸಿರಿವಂತರಿಂದ ನನಗೆ ತೊಂದರೆಯಾಗಬಾರದೆಂದು ಮ್ಯಾನೇಜರರು ನನಗೆ ಹುಡುಗನಿದ್ದ ಸಮಾಚಾರವನ್ನು ಬಚ್ಚಿಟ್ಟಿರುವರೆಂಬುದನ್ನು ನಾನು ಬಲ್ಲೆ. ಆದರೆ....ಆದರೆ ಅವನ ನೆನಪಾದ ಕೂಡಲೆ ಹೊಟ್ಟೆಯಲ್ಲಿ ಕಸಿವಿಸಿಯಾಗುವದು ತೀರ ವೇಳೆ ಹೋಗದಾಯಿತೆಂದರೆ ಆತನ ಫೋಟೋ ನೋಡುತ್ತ ಕೂಡುವೆ.

ಆದರೆ ಹೋಗಲಿ, ಇದೆಲ್ಲ ಕರ್ಮಕಥೆ ! ರಮಾಕಾಂತ, ನಿಮ್ಮದು ನನ್ನ ಮೇಲೆ ಪ್ರೇಮವಿದೆ ಎಂದು ಅನಿಸುತ್ತದೆಂತಲೇ ನಾನು ಇದನ್ನೆಲ್ಲ ಬರೆಯುವದು. ನನ್ನ ಗಂಡನು ಇನ್ನು ಮೇಲೆ ಜೇಲಿನಿಂದ ಬಿಟ್ಟು ಬರುವ. ಅವ ಇನ್ನು ಮೇಲೆ ನನಗೂ ನನ್ನ ಹುಡುಗನಿಗೂ ಪೀಡಿಸುವ. ಅವನಿಂದ ನನಗೆ ತುಂಬ ಹೆದರಿಕೆಯಾಗುತ್ತಿದೆ. ನಮ್ಮಿಬ್ಬರಿಗೂ ಒಳ್ಳೆಯದಾದ ಆಶ್ರಯ ಬೇಕು. ಅದನ್ನು ನೀವು ಕೊಡುವಿರಾ? ನನ್ನ ಹುಡುಗ ಬಿಳಿಯಂಗಿಯವರ ಸಮಾಜದಲ್ಲಿಯವರಂತೆ ಆಗಬೇಕು. ಕಲಿತು ದೊಡ್ಡ ಸಂಬಳ ಗಳಿಸಬೇಕು. ಒಕ್ಕಲಿಗರಂತೆ ಸಾಯುವವರೆಗೂ ಕೆಲಸ ಮಾಡುವದು ಅವನ ಪಾಲಿಗೆ ಬರಬಾರದು ಎಂಬುದು ನನ್ನ ಇಚ್ಛೆ. ನಿಮ್ಮಂಥವರು ಅವನನ್ನು ನಮ್ಮವನೆಂದು ತಿಳಿದುಕೊಂಡರೆ....ಅದೇನು ಅಷ್ಟು ಕಷ್ಟವೆಂದು ತಿಳಿಯುವ ಕಾರಣವಿಲ್ಲ........ನನ್ನನ್ನು ನೀವು ಪ್ರೀತಿಸುತ್ತಿದ್ದೀರಿ. ನನ್ನ ಹುಡುಗನನ್ನಾದರೂ ಅದರಂತೆಯೇ ಪ್ರೀತಿಸಬಹುದಲ್ಲವೆ ?

ಪತ್ರ ಬರೆಯುವದರಲ್ಲಿ ಎಷ್ಟೋ ತಪ್ಪುಗಳಿರಬಹುದು. ಅವುಗಳ ಬಗ್ಗೆ ಸಿಟ್ಟಿಗೇಳಬೇಡಿರಿ ಮತ್ತೆ.

ನಿಮ್ಮ ಪ್ರೀತಿಯ ಗೆಳತಿ,

**ಸುರಂಗೆ.”**

ಮಂದಮಾರುತನು ಹಾಡುತ್ತಿದ್ದ, ತಾರಾಬಾಲಿಕೆಯರು ನರ್ತಿಸುತ್ತಿದ್ದರು. ರಜನೀಕಾಂತನು ಆನಂದದಿಂದ ನಲಿಯುತ್ತಿದ್ದ.

ಆದರೆ ರಮಾಕಾಂತನಿಗೆ ಈ ಸೌಂದರ್ಯವು ಭಯಾನಕವೆನಿಸಿತು. ಜಗತ್ತಿನಲ್ಲಿ ತಾನು



ತೀರ ಒಬ್ಬನೇ. ಒಬ್ಬೊಂಟಿಯಾಗಿರುವೆನೆಂಬ ಅರಿವು ಅವನಿಗೆ ತೀವ್ರವಾಯಿತು.

ಅವನು ಒಮ್ಮೆಲೆ ಕರುಣಸ್ವರದಿಂದ ಕೂಗಿದ–“ವತ್ಸಲೆ.....”

ದೇವಾಲಯದಲ್ಲಿಯ ಪೂಜಾರಿಗೆನಿಸಿತು, ಹಾದಿಯಲ್ಲಿ ಹೋಗುವ ಯಾವನೋ ಒಬ್ಬ ಹುಚ್ಚನು ಕಿರುಚುತ್ತಿರಬಹುದೆಂದು.

ರಮಾಕಾಂತನು ಮತ್ತೆ ಕರೆದ “ವತ್ಸಲೆ....”

ಮರುಕ್ಷಣದಲ್ಲಿಯೇ ಅತ್ತ ಕಡೆಯ ದಿನ್ನೆಯಿಂದ ಆ ಕರೆಯ ಅಸ್ಪಷ್ಟ ಪ್ರತಿಧ್ವನಿಯು ಮಾತ್ರ ಬಂದಿತು.

“ರಮಾಕಾಂತ” ಎಂದು ಯಾರೂ ಅವನಿಗೆ ತಿರುಗಿ ಕರೆಯಲಿಲ್ಲ.